ಕರ್ನಾಟಕ ಸರ್ಕಾರ

ಸಮಗ್ರ
ಕನ್ನಡ ಜನಪದ ಮತ್ತು ಯಕ್ಷಗಾನ
ಸಾಹಿತ್ಯ ಮಾಲೆ

ಪದ್ಯ ಸಾಹಿತ್ಯ

೧೪

ಬೀಬಿ ಇಂಗಳಗಿ ಪರಿಸರದ

ಗೀಗೀ ಪದಗಳು

(ಸಂಪುಟ – ೧)

ಸಂ. ಡಾ. ಎಂ. ಜಿ. ಬಿರಾದಾರ
ಡಾ. ಬಿ. ಎಸ್. ಕೋಟ್ಯಾಳ

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ – ೪೩

ಪದ್ಯ ಸಾಹಿತ್ಯ ಪ್ರಕಾರ – ೨೪

ಬೀಬೀ ಇಂಗಳಗಿ ಪರಿಸರದ

ಗೀಗೀ ಪದಗಳು ಸಂಪುಟ ೨

(ಹಸನ ಸಾಹೇಬನ ೧೫೧ನೆಯ ವರ್ಷದ ಸ್ಮರಣೆ)

ಸಂಪಾದಕರು

ಡಾ. ಎಂ.ಜಿ. ಬಿರಾದಾರ

ಡಾ. ಬಿ.ಎಸ್. ಕೋಟ್ಯಾಳ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು – ೫೬೦ ೦೦೨

Be Be Ingalagi Parisarada 'Gee Gee Padagalu' Volume-2 Edited by **Dr. M.G. Biradara & Dr. B.S. Kotyala** Published by K.A. Dayananda, Director, Dept. of Kannada and Culture, Kannada Bhavana, J.C.Road, Bangalore-560002.

© ಕಾಯ್ದಿರಿಸಿದೆ

ಆವೃತ್ತಿಯ ಹಕ್ಕು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಪ್ರಥಮ ಮುದ್ರಣ : ೨೦೧೪
ಪುಟಗಳು : lxii + ೩೫೪ = ೪೧೬
ಪ್ರತಿಗಳು : ೧೦೦೦
ಬಿಡಿ ಪ್ರತಿ ಬೆಲೆ : ರೂ. ೫೦/–
Print : 2014
Pages : lxii + 354 = 416
Copies : 1000
Price : Rs. 50/-

ಪ್ರಕಾಶಕರು :
ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ
ಶ್ರೀ ಕೆ.ಎ. ದಯಾನಂದ, ಕ.ಆ.ಸೇ. ಅವರಿಂದ ಪ್ರಕಟಿತ
ಸಹಕಾರ : ಶ್ರೀ ಬಿ.ಎನ್. ಪರಡ್ಡಿ, ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ಸಂಯೋಜಕರು : **ಡಾ. ಚಕ್ಕೆರೆ ಶಿವಶಂಕರ್**

ಮುಖಪುಟ ವಿನ್ಯಾಸ : **ಪ. ಸ. ಕುಮಾರ್**

ಮುದ್ರಕರು :
ಗೀತಾಂಜಲಿ ಗ್ರಾಫಿಕ್ಸ್
ನಂ. ಬಿ–71, ನ್ಯೂ ನಂ. 84, ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್, 6ನೇ ಬಡಾವಣೆ, ರಾಜಾಜಿನಗರ, ಬೆಂಗಳೂರು – 560 010.
ದೂರವಾಣಿ : 23404232

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಸಮಿತಿ

ಅಧ್ಯಕ್ಷರು

ಪ್ರೊ. ಹಿ.ಶಿ. ರಾಮಚಂದ್ರೇಗೌಡ

ಸದಸ್ಯರು

ಡಾ. ಸೋಮಶೇಖರ ಇಮ್ರಾಪುರ

ಡಾ. ಎಚ್.ಜೆ. ಲಕ್ಕಪ್ಪಗೌಡ

ಡಾ. ಎಂ. ಪ್ರಭಾಕರ ಜೋಶಿ

ಡಾ. ತೀ.ನಂ. ಶಂಕರನಾರಾಯಣ

ಶ್ರೀಮತಿ ಶಾಂತಿನಾಯಕ

ಡಾ. ಅರವಿಂದ ಮಾಲಗತ್ತಿ

ಡಾ. ಮ.ಗು. ಬಿರಾದಾರ

ಪ್ರೊ. ಎ.ವಿ. ನಾವಡ

ಡಾ. ವೆಂಕಟೇಶ ಇಂದ್ವಾಡಿ

ಸದಸ್ಯ ಕಾರ್ಯದರ್ಶಿ

ಶ್ರೀ ಕೆ.ಎ. ದಯಾನಂದ, ಕ.ಆ.ಸೇ.,

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪದನಿಮಿತ್ತ ಸದಸ್ಯರು

ಶ್ರೀ ಪಿಚ್ಚಳ್ಳಿ ಶ್ರೀನಿವಾಸ

ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ನಾಡೋಜ ಬೆಳಗಲ್ಲು ವೀರಣ್ಣ

ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಟಿ. ತಿಮ್ಮೇಗೌಡ

ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

ಮೇಲ್ವಿಚಾರಣಾ ಸಮಿತಿ

ಅಧ್ಯಕ್ಷರು
ಶ್ರೀ ಪಿ.ಎನ್. ಶ್ರೀನಿವಾಸಚಾರಿ, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸದಸ್ಯರು
ಶ್ರೀ ಕೆ.ಎ. ದಯಾನಂದ, ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಪಿಚ್ಚಳ್ಳಿ ಶ್ರೀನಿವಾಸ
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ

ಸಂಚಾಲಕರು
ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ
ಜಂಟಿ ನಿರ್ದೇಶಕರು (ಆಡಳಿತ)

ಶ್ರೀ ಬಲವಂತರಾವ್ ಪಾಟೀಲ್
ಜಂಟಿ ನಿರ್ದೇಶಕರು (ಸು.ಕ.)

ಶ್ರೀ ಬಿ.ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ

ಶ್ರೀ ಎನ್. ಹರಿಕುಮಾರ್
ಲೆಕ್ಕಪತ್ರಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸಿದ್ಧರಾಮಯ್ಯ
ಮುಖ್ಯಮಂತ್ರಿಗಳು

ವಿಧಾನ ಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೨೮/೨೦೧೪ ದಿನಾಂಕ : ೦೪-೦೨-೨೦೧೪

ಸಂದೇಶ

ಸಮಾಜ ನಿಂತ ನೀರಲ್ಲ. ಎಲ್ಲ ಕಾಲಘಟ್ಟಗಳಲ್ಲಿ ಚಾರಿತ್ರಿಕ ಭೌಗೋಳಿಕ ಒತ್ತಡಗಳಿಂದ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಇದು ಎದ್ದು ಕಾಣಿಸುವ ವೇಗದಲ್ಲಿ ಆಗುವಂಥದ್ದೇನಲ್ಲ. ಮಂದಗತಿಯಲ್ಲಿಯೇ ಚಲನಶೀಲತೆಯನ್ನು ಮೈಗೂಡಿಸಿಕೊಳ್ಳುತ್ತಾ ಹೋಗುತ್ತಿರುತ್ತದೆ.

ಮನುಷ್ಯನ ಅಂತರಂಗದ ವಿಕಾಸಕ್ಕೆ ಸಂಬಂಧಿಸಿದ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರವೂ ಇಂತಹ ಬದಲಾವಣೆಗಳಿಗೆ ಮುಕ್ತ ಮನಸ್ಸಿನಿಂದ ಸ್ಪಂದಿಸುತ್ತಿರುತ್ತದೆ. **ಬದಲಾವಣೆ ಜಗದ ನಿಯಮ** ಎಂಬ ಮಾತಿಗನುಗುಣವಾಗಿ ಎಲ್ಲ ಸೃಜನಶೀಲ ಕಲೆಗಳೂ ಆಯಾ ಕಾಲದೊಂದಿಗೆ ಹೆಜ್ಜೆ ಹಾಕುತ್ತಿರುತ್ತವೆ.

ಸಮುದಾಯ ಹಿತವನ್ನೇ ತನ್ನೊಡಲಲ್ಲಿ ತುಂಬಿಕೊಂಡಿರುವ ಜನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳಲ್ಲೂ ಇಂತಹ ಚಲನಶೀಲತೆ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುತ್ತದೆ. ಆಯಾಕಾಲದ ಸಮಾಜಕ್ಕೆ ಪ್ರಸ್ತುತವಲ್ಲದ್ದು ಮರೆಯಾಗಿ ಅದರ ಜಾಗದಲ್ಲಿ ಹೊಸದು ಸೃಷ್ಟಿಯಾಗುತ್ತಿದ್ದರೂ ಚಾರಿತ್ರಿಕ ದೃಷ್ಟಿಯಿಂದ, ಮೌಲಿಕ ದೃಷ್ಟಿಯಿಂದ ಅದನ್ನು ಸಂಗ್ರಹಿಸಿಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜ್ಞಾನದ ಕಣಜವಾಗಿರುವ ಜನಪದ ಸಾಹಿತ್ಯ ಹಾಗೂ ಕಲಾಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಆಕಾಡೆಮಿಯು ಹೊರತರುತ್ತಿರುವುದು ಸ್ತುತ್ಯಾರ್ಹ ಸಂಗತಿಯಾಗಿದೆ.

ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್ ಎಂಬ ವ್ಯಾಖ್ಯಾನ ನಮ್ಮ ಜನಪದ ಸಾಹಿತ್ಯ ಮತ್ತಿತರ ಸಂಗತಿಗಳ ಸಾರವಾಗಿದೆ. ಕನ್ನಡ ನೆಲ, ಜಲ, ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು

ನಿಜಕ್ಕೂ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿವೆ. **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ** ಯೋಜನೆಯ ಈ ಪುಸ್ತಕಗಳನ್ನು ನಾಡಿನ ಜನ ಸಮುದಾಯ ಆದರದಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನ್ನದು.

ಸುವರ್ಣ ಕರ್ನಾಟಕ ಮಾಲಿಕೆಯಲ್ಲಿ ಈ ಸಂಪುಟಗಳನ್ನು ಹೊರತರಲು ಕರ್ನಾಟಕ ಸರ್ಕಾರದ ಜೊತೆ ಜೊತೆಗೆ ಯೋಜನೆಯ ಯಶಸ್ಸಿಗಾಗಿ ಶ್ರಮಿಸುತ್ತಿರುವ ಯೋಜನೆಯ ಅಧ್ಯಕ್ಷರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡ ಹಾಗೂ ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರನ್ನು ಅಭಿನಂದಿಸಲು ಇಚ್ಛಿಸುತ್ತೇನೆ.

ನೂರು ಸಂಪುಟಗಳ ಈ ಯೋಜನೆಯಲ್ಲಿ ಈಗಾಗಲೇ ೩೬ ಸಂಪುಟಗಳು ಹೊರಬಂದಿವೆ. ಇನ್ನೂ ೬೪ ಸಂಪುಟಗಳು ಸದ್ಯದಲ್ಲಿಯೇ ಪ್ರಕಟಗೊಳ್ಳಲಿವೆ. ಈ ಮಹತ್ವದ ಯೋಜನೆಗೆ ಸಹಕರಿಸಿದ ಎಲ್ಲಾ ಮಹನೀಯರಿಗೂ ನನ್ನ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.



ಸಿದ್ಧರಾಮಯ್ಯ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ : ಕಛೇರಿ :
೨೨೨೫೫೨೮೨, ೨೨೦೩೩೪೯೯

ಕೊಠಡಿ ಸಂಖ್ಯೆ : ೨೫೨, ೨ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂ. ಮಮಕಸಂಸ/೨೮೨/೨೦೧೪

ದಿನಾಂಕ: ೨೮-೦೧-೨೦೧೪

ಸಂದೇಶ

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಂಸ್ಕೃತಿ, ಭಾಷೆ, ಸಾಹಿತ್ಯಗಳನ್ನು ಸಂರಕ್ಷಿಸುವ, ಉದ್ದೀಪನಗೊಳಿಸುವ ಮಹತ್ವಾಕಾಂಕ್ಷೆಯಿಂದ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ಥಾಪಿಸಿದೆ. ಕನ್ನಡ ಭಾಷೆ ಸಾಹಿತ್ಯ ಮತ್ತು ಇತರ ಎಲ್ಲಾ ಕಲೆಗಳ ಅಭಿವೃದ್ಧಿಗೆ ಅಂದಿನಿಂದ ಇಂದಿನವರೆಗೂ ಕ್ರಿಯಾಯೋಜನೆಗಳನ್ನು ರೂಪಿಸಿಕೊಂಡು ಇಲಾಖೆ ಕಾರ್ಯಪ್ರವೃತ್ತವಾಗಿದೆ. ಈಗ **"ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ"** ಎಂಬ ಬೃಹತ್ತಾದ ಯೋಜನೆ ರೂಪಿಸಿ ಜಾನಪದವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಜಾನಪದ ಮೌಖಿಕ ಪರಂಪರೆಯ ಮೂಲಕ ಮುಂದಿನ ತಲೆಮಾರಿಗೆ ವರ್ಗಾವಣೆಗೊಳ್ಳುವುದಾದರೂ ಕೆಲವು ಅಪರೂಪದ ಮಾಹಿತಿಗಳು, ಸಾಹಿತ್ಯಕ ಮಾದರಿಗಳು ಅದೇ ಪ್ರಮಾಣದಲ್ಲಿ ವರ್ಗಾವಣೆಯಾಗುವುದಿಲ್ಲ. ಒಬ್ಬ ಅಭಿಜಾತ ಕಲಾವಿದ ಹಾಡಿದಂಥ ರೂಪ ಮತ್ತು ಶೈಲಿಯನ್ನು ಆತನ ಸಂತತಿಯೇ ಅನುಸರಿಸಲಾಗಿರುವುದಿಲ್ಲ. ಆ ಒಂದು ಅನನ್ಯತೆ ಅವರಿಗೇ ಮೀಸಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಅಂಥ ಅಪರೂಪದ ಸಂಗತಿಯನ್ನು ಉಳಿಸಲು ಮತ್ತು ತೌಲನಿಕವಾಗಿ ಅಧ್ಯಯನ ಮಾಡಲು ದಾಖಲೀಕರಣಗೊಳಿಸುವುದು ಅನಿವಾರ್ಯವಾಗುತ್ತದೆ.

ಜಾನಪದ ಬದುಕಿನ ಅನಂತ ಮುಖಗಳನ್ನು ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ನಂಬಿಕೆ, ನಡವಳಿಕೆ, ಆಚರಣೆ, ಸಂಪ್ರದಾಯಗಳು, ಎಲ್ಲಕ್ಕಿಂತ ಹೆಚ್ಚಾಗಿ ಜೀವನ ಮೌಲ್ಯಗಳು ತುಂಬಿರುವ ಕ್ಷೇತ್ರ. ಅಪ್ರಸ್ತುತವಾಗಿರುವುದನ್ನು

ಇಂದಿನ ದಿನಮಾನಗಳಲ್ಲಿ ಅನುಸರಿಸಬೇಕಾಗಿರುವುದಿಲ್ಲ. ಅದು ಅಪ್ರಸ್ತುತವಾದುದು ಎಂದು ತಿಳಿದುಕೊಳ್ಳುವುದಕ್ಕಾದರೂ ಅದು ದಾಖಲೀಕರಣಗೊಳ್ಳಬೇಕು. ಯಾವುದೇ ಒಂದು ಮೌಲ್ಯ ಕೇವಲ ಒಬ್ಬರಿಂದ ಹೇರಲ್ಪಟ್ಟಿರುವುದಿಲ್ಲ. ಹಲವು ಜನ ಚಿಂತಕರು ಹಲವಾರು ವರ್ಷಗಳ ಕಾಲ ಅದನ್ನು ಜೀವನದಲ್ಲಿ ಅಳವಡಿಸಿ ಸಾಣೆ ಹಿಡಿದಿರುತ್ತಾರೆ. ಈ ಹಿನ್ನೆಲೆಯಲ್ಲಿಯೇ **"ವೇದ ಸುಳ್ಳಾದರೂ ಗಾದೆ ಸುಳ್ಳಾಗದು"** ಎಂಬ ಮಾತು ಬಂದಿರುವುದು.

ಇಂತಹ ಅಪರೂಪದ ಮಾಹಿತಿಯ ಜಾನಪದವನ್ನು ಅಕ್ಷರರೂಪದಲ್ಲಿ ಹಿಡಿದಿಡುವ ಕೆಲಸಕ್ಕೆ ಕೈಹಚ್ಚಿರುವ ಎಲ್ಲ ವಿದ್ವಾಂಸರಿಗೆ, ಎಲ್ಲ ಅಧಿಕಾರಿವರ್ಗದವರಿಗೆ ಅಭಿನಂದಿಸುತ್ತಾ ವಿದ್ವತ್‌ವಲಯ ಈ ಯೋಜನೆಯ ಸಂಪುಟಗಳನ್ನು ಸದುಪಯೋಗಪಡಿಸಿಕೊಳ್ಳಲೆಂದು ಆಶಿಸುತ್ತೇನೆ.

ಉಮಾಶ್ರೀ

ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಿಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ-ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೋಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ.ಹಿ.ಶಿ.ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ.ಎಚ್.ಜೆ. ಲಕ್ಕಪ್ಪಗೌಡ, ಡಾ. ತೀ.ನಂ. ಶಂಕರನಾರಾಯಣ, ಶ್ರೀಮತಿ ಶಾಂತಿನಾಯಕ, ಡಾ.ಎಂ.ಪ್ರಭಾಕರ ಜೋಶಿ, ಶ್ರೀ ಅರವಿಂದ ಮಾಲಗತ್ತಿ, ಡಾ. ಮ.ಗು.ಬಿರಾದಾರ, ಪ್ರೊ. ಎ.ವಿ. ನಾವಡ, ಡಾ. ವೆಂಕಟೇಶ ಇಂದ್ವಾಡಿ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷರು ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ' ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳು ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಸಲಹೆ–ಸಹಕಾರ ಅಮೂಲ್ಯವಾದುವು. ಹಾಗೆಯೇ ಈ ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಮತ್ತು ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ'**ಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

ಕೆ.ಎ. ದಯಾನಂದ, ಕ.ಆ.ಸೇ.,
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದವೇ ಜಗತ್ತಿನ ಆದಿಮ ಉಸಿರು ಮತ್ತು ಸಂಸ್ಕೃತಿ. ಇಡೀ ಜಗತ್ತಿನ ಮೊಟ್ಟ ಮೊದಲ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಮತ್ತು ಧರ್ಮವು ಕೂಡ ಜಾನಪದ ಮೂಲದ್ದೇ. ಜಗತ್ತಿನಾದ್ಯಂತ ಇಂದಿನ ಮುಖ್ಯ ಪ್ರವಾಹದ ಎಲ್ಲ ವೈವಿಧ್ಯಮಯ ಕಲೆ–ಧರ್ಮಗಳು ಕುಡಿಯೊಡೆದಿದ್ದು ಸಹ ಅಲ್ಲಲ್ಲಿನ ಜಾನಪದ ವೈಶಿಷ್ಟ್ಯಗಳಿಂದಲೇ ಎಂಬುದು ಎಲ್ಲ ಇತಿಹಾಸಕಾರರ ಮತ್ತು ಸಂಸ್ಕೃತಿ ಚಿಂತಕರ ಒಮ್ಮತಾಭಿಪ್ರಾಯವಾಗಿದೆ. ದುರಂತವೇನೆಂದರೆ ಜಾನಪದ ಪರಂಪರೆಯಲ್ಲಿನ ಅಲಿಪಿ ಮತ್ತು ಥೋಂಡಿ ಲಕ್ಷಣದ ಕಾರಣದಿಂದಾಗಿ ಜಾನಪದದ ಅನೇಕ ಸಾಂಸ್ಕೃತಿಕ ಮೂಲದ ಮಹತ್ವದ ಅಂಶಗಳು, ಆಚರಣಾತ್ಮಕ ಅಭಿವ್ಯಕ್ತಿಗಳು ಇಂದಿನವರೆಗೂ ಯಾವ ರೂಪದಲ್ಲೂ ದಾಖಲಾಗದೇ ಹೋದದ್ದು ಕೇವಲ ಜಾನಪದ ಜಗತ್ತು ಮತ್ತು ವಿದ್ವಾಂಸರಿಗಷ್ಟೇ ಅಲ್ಲದೆ ಸಾಂಸ್ಕೃತಿಕ ಅಧ್ಯಯನಕಾರರಿಗೂ ಆಗಿರುವ, ಎಂದೆಂದಿಗೂ ತುಂಬಲಾರದಂತಹ ಬಹುದೊಡ್ಡ ನಷ್ಟವಾಗಿದೆ. ಈ ಅಪಾಯ ಈ ಕ್ಷಣಕ್ಕೂ ಮುಂದುವರೆದಿದೆಯಲ್ಲದೇ ಇಂದಿನ ಅತ್ಯಾಧುನಿಕತೆಯ ವೇಗ ಮತ್ತು ಧಾವಂತದ ಸಂದರ್ಭದಲ್ಲಿ ಅಳಿದುಳಿದ ಮತ್ತೆಷ್ಟೋ ಸಾಹಿತ್ಯ, ಕಲೆ ಮತ್ತು ಆಚರಣೆಗಳು ಆಧುನಿಕತೆಯ ವೇಗ ಸಂಸ್ಕೃತಿಗೆ ಅನುಗುಣವಾದ ವೇಗದಲ್ಲೇ ನಮ್ಮಿಂದ ಶಾಶ್ವತವಾಗಿ ಕಣ್ಮರೆಯಾಗುತ್ತಿವೆ. ಇದು ಇಡೀ ಜಗತ್ತಿನ ಜಾನಪದ ವಲಯದ ಎದುರಿರುವ ಬಹು ದೊಡ್ಡ ಸಂದಿಗ್ಧ ಮತ್ತು ಸವಾಲಾಗಿದೆ. ಹಾಗಾಗಿ ಹಿಂದೆಂದಿಗಿಂತಲೂ ವರ್ತಮಾನದ ಈ ಕ್ಷಣದಲ್ಲಿ ಜಾನಪದೀಯ ಅಭಿವ್ಯಕ್ತಿಗಳನ್ನೆಲ್ಲಾ ದಾಖಲಿಸಿಡುವುದರ ಮೂಲಕವೇ ನಾವು ರಕ್ಷಿಸಿ, ಮುಂದಿನ ತಲೆಮಾರುಗಳಿಗೆ ದಾಟಿಸಬೇಕಾದ ತುರ್ತು ಇದೆ.

ಜನಪದ ಸಾಹಿತ್ಯವೆಂಬುದು ಅಲಿಪಿ ಸಾಹಿತ್ಯ. ಅದನ್ನು ಸಂಗ್ರಹಿಸಿ ಲಿಪಿಬದ್ಧಗೊಳಿಸುವುದರ ಮೂಲಕ ಕಾಪಿಡಬಹುದಾಗಿದೆ. ಆದರೆ ಜಾನಪದದ ಬಹುತೇಕ ಕಲೆ ಮತ್ತು ಆಚರಣೆಗಳು ಲಿಪಿಬದ್ಧಗೊಳಿಸಲಾಗದಂತಹವು. ಅವು ಬಹುತೇಕ ಧಾರ್ಮಿಕ ನೆಲೆಯ ಶ್ರದ್ಧಾವಂತಿಕೆಯ ಅಭಿವ್ಯಕ್ತಿಗಳು. ಅಂತಹ

ಆಚರಣೆಗಳನ್ನು ಜಾನಪದ ವಿದ್ವಾಂಸನೊಬ್ಬ ಪ್ರತ್ಯಕ್ಷವಾಗಿ ಕಂಡು ವಿವರಿಸಬಹುದು; ಇಲ್ಲವೇ ಅದನ್ನು ತನ್ನ ಗ್ರಹಿಕೆಯ ಅನುಸಾರವಾಗಿ ಸಾಂಸ್ಕೃತಿಕ ವಿಶ್ಲೇಷಣೆಗೆ ಒಳಪಡಿಸಬಹುದು. ಆದರೆ ಅಂತಹ ನಿರ್ದಿಷ್ಟ ವಿದ್ವಾಂಸನೊಬ್ಬನ ಗ್ರಹಿಕೆ, ವಿಶ್ಲೇಷಣೆಗಳು ಅಂತಿಮವಾಗಿ ಆತನ ತಿಳಿವಳಿಕೆಯ ಮಿತಿಯೊಳಗಿನವೇ ಆಗಿರಬಲ್ಲದೇ ಹೊರತು ಅಂತಿಮ ಸತ್ಯವಲ್ಲದಿರಬಹುದು. ಜಾನಪದ ಆಚರಣೆಯೊಂದನ್ನು ಗಮನಿಸುವ ಕ್ರಮದಲ್ಲಿನ ಅನೇಕ ಸೂಕ್ಷ್ಮಗಳು ವಿದ್ವಾಂಸರಿಂದ ವಿದ್ವಾಂಸರಿಗೆ ಭಿನ್ನವೂ ಆಗಿರಬಲ್ಲವು. ಹಾಗಾಗಿ ಆಯಾಯಾ ಕಾಲದ ಪ್ರತಿಯೊಬ್ಬ ಆಸಕ್ತ ಜಾನಪದ ವಿದ್ವಾಂಸನೂ ತನಗೆ ಸಾಂಸ್ಕೃತಿಕವಾಗಿ ಮುಖ್ಯ ಎನಿಸುವ ಆಚರಣೆ, ಕಲೆಯಂತಹ ವಿವಿಧ ಪ್ರಕಾರಗಳ ವೈಶಿಷ್ಟ್ಯವನ್ನು ಪ್ರತ್ಯಕ್ಷವಾಗಿಯೇ ಕಂಡು ಅನುಭವಿಸಿ ಬರೆದಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇದ್ದೇ ಇದೆ.

ಆದರೆ ಈಗಾಗಲೇ ನಾವು ಗಮನಿಸಿರುವಂತೆ ಅನೇಕ ಅನನ್ಯವೆಂಬಂತಹ ಜಾನಪದೀಯ ಆಚರಣೆಗಳು ಆಧುನಿಕತೆಯ ಅನ್ಯಾಕ್ರಮಣಶೀಲತೆಯಿಂದಾಗಿ ನೆನಪುಗಳಿಂದಲೂ ಮಾಸಿ ಹೋಗುವಷ್ಟು ವಿನಾಶದ ಹಾಗೂ ಅಳಿವಿನ ಅಂಚಿನಲ್ಲಿವೆ. ಕೆಲವು ಜನಪ್ರಿಯವಾದ ಕಲೆಗಳನ್ನು ಕಲಿಕಾ ಶಿಬಿರಗಳ ಮೂಲಕ ಆಸಕ್ತ ಯುವಕ/ಯುವತಿಯರಿಗೆ ಕಲಿಸುವುದರ ಮೂಲಕವಾದರೂ ಮುಂದುವರೆಯುವಂತೆ ಮಾಡಬಹುದಾಗಿದೆ. ಆದರೆ ನಿರ್ದಿಷ್ಟ ಪಂಗಡದ ನಿರ್ದಿಷ್ಟ ವ್ಯಕ್ತಿಗಳೇ ಪಾತ್ರವಹಿಸುವುದರ ಮೂಲಕವಷ್ಟೇ ಮಂದುವರೆಯಬೇಕಾದ ಅನಿವಾರ್ಯತೆಯ ಆಚರಣೆಗಳನ್ನು ನಾವು ಉಳಿಸಿಕೊಳ್ಳುವ ಬಗೆಯಾದರೂ ಯಾವುದು? ಉದಾಹರಣೆಗೆ; ಈ ನೆಲದ ಆದಿಮ ಧರ್ಮದ ಬಗ್ಗೆ ಅನೇಕ ರಹಸ್ಯಗಳನ್ನು ಉಸುರುವ ಜೇನುಕುರುಬರ ಕೊಂಟು ಪೂಜೆಯ ಆಚರಣೆ, ದಕ್ಕಲರು, ಮಾಸ್ತೀಕರು ಮತ್ತು ಸಿಂಧ್‌ಮಾದಿಗರ ತಂಗಡಿ ದ್ಯಾವ್ರದ ಆಚರಣೆ, ಮೋಡಿ ಹಾಕುವವರ ತಂತ್ರಗಳು, ಮೇರರ ಕಾಡ್ಯಾನಾಟ ಇತ್ಯಾದಿಗಳು ಅಪರೂಪವಾಗುತ್ತಿದೆಯಷ್ಟೇ ಅಲ್ಲದೆ ಕೊಂಟು ಪೂಜೆ, ತಂಗಡಿ ದ್ಯಾವ್ರದಂತಹ ವಿಶಿಷ್ಟವೂ, ಮಹತ್ವದವೂ ಆದ ಆಚರಣೆಗಳು ಈಗಾಗಲೇ ಕಣ್ಮರೆಯಾಗುತ್ತಿವೆ. ಇಂತಹುದೇ ಮತ್ತೆಷ್ಟೋ ಸಾಂಸ್ಕೃತಿಕ ಮಹತ್ವದ ಆಚರಣೆಗಳ ಬಗೆಗಂತೂ ಮಾಹಿತಿ ಕೂಡ ಸಿಗದಂತಾಗಿದೆ. ಬಾಲ್ಯದಲ್ಲಿ ಸ್ವತಃ ನಾವೇ ಪ್ರತ್ಯಕ್ಷವಾಗಿ ಕಂಡುಂಡ ಅನೇಕ ಕಲಾತ್ಮಕ ಜಾನಪದೀಯ ಆಚರಣೆಗಳು ಇಂದು ನಮ್ಮ ನಂತರದ ಪೀಳಿಗೆಯವರ ಪಾಲಿಗೆ ಇಲ್ಲದಂತಾಗಿರುವುದನ್ನು ನಾವೇ ಕಾಣುತ್ತಿದ್ದೇವಲ್ಲ? ಈ ಹಿನ್ನೆಲೆಯಲ್ಲಿ ಈಗಾಗಲೇ ಅಳಿವಿನ ಅಂಚಲ್ಲಿರುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಮೂಲದ ಕೆಲವಾದರೂ ಅತಿ ಮುಖ್ಯ ಆಚರಣೆಗಳನ್ನು ನಾವು

ಈ ಡಿಜಿಟಲ್ ಯುಗದಲ್ಲಿ, ಯಾವ ತಂತ್ರಜ್ಞಾನ ಜಾನಪದದ ಅಳಿವಿಗೆ ಕಾರಣವಾಗುತ್ತಿದೆಯೋ ಅದೇ ತಂತ್ರಜ್ಞಾನದ ನೆರವಿನಿಂದಲೇ ದೃಶ್ಯೀಕರಿಸಿ ಮುಂದಿನ ತಲೆಮಾರಿನ ಅಧ್ಯಯನಕಾರರ ಪಾಲಿಗೆ ರಕ್ಷಿಸಿಡಬೇಕಾದ ತುರ್ತು ಮತ್ತು ಒತ್ತಡವೇರ್ಪಟ್ಟಿದೆಯೆಂಬುದೇ ನನ್ನ ಸ್ಪಷ್ಟ ತಿಳಿವಳಿಕೆ. ಜನಪದ ಸಾಹಿತ್ಯ ಪ್ರಕಟಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೋರಿರುವ ಕಾಳಜಿಯನ್ನೇ ವಿಸ್ತರಿಸಿ, ಜಾನಪದ ಆಚರಣೆಗಳ ದೃಶ್ಯ ದಾಖಲಾತಿಯ ವಿಚಾರದಲ್ಲೂ ಮುಂದುವರೆಸಬೇಕೆಂಬುದು ನನ್ನ ವಿನಮ್ರ ಮನವಿ.

ಈ ಹಿನ್ನೆಲೆಯಲ್ಲಿ ಮೌಖಿಕ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಜಾನಪದ ಪರಂಪರೆಯನ್ನು ಜೀವಂತವಾಗಿಡುವ ಒಂದು ಪಾರ್ಶ್ವ ಪ್ರಯತ್ನ ಮಾತ್ರ. ಆದರೆ ಈ ಪ್ರಯತ್ನವು ಕೂಡ ತನ್ನದೇ ಆದ ಮಹತ್ವವನ್ನು ಒಳಗೊಂಡಿದೆಯಲ್ಲದೇ ಅದರ ಕೊಡುಗೆಯನ್ನು ಯಾವ ರೀತಿಯಲ್ಲೂ ನಗಣ್ಯವಾಗಿಸಲು ಸಾಧ್ಯವಿಲ್ಲ. ಆದರೆ ಬದಲಾಗುತ್ತಿರುವ ಅತ್ಯಾಧುನಿಕ ತಾಂತ್ರಿಕಾವಿಷ್ಕಾರಗಳಿಗೆ ಅನುಗುಣವಾಗಿಯೇ ಸ್ಪಂದಿಸಿ ನಾವು ಇನ್ನು ಮುಂದಿನ ಜಾನಪದೀಯ ಯೋಜನೆಗಳಲ್ಲಿ ಕಲೆ, ಕಲಾವಿದರು ಮತ್ತು ಆಚರಣೆಗಳನ್ನು ದೃಶ್ಯ ರೂಪದಲ್ಲಿಯೂ ದಾಖಲಿಸಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇರುವುದನ್ನು ಮನಗಾಣಬೇಕಾಗಿದೆ. ಈ ಬಗ್ಗೆ ತಜ್ಞ ವಿದ್ವಾಂಸರು ಇನ್ನಾದರೂ ಗಮನ ಹರಿಸಬೇಕಿದೆ.

ಈ ಬಗೆಯ ಗ್ರಹಿಕೆಯ ಹಿನ್ನೆಲೆಯಲ್ಲಿಯೇ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಎಂಬ ಮಹತ್ವಾಕಾಂಕ್ಷೆಯ ಬೃಹತ್ ಯೋಜನೆ ಅಡಿಯಲ್ಲಿ ೧೦೦ ಸಂಪುಟಗಳನ್ನು ಸಂಪಾದಿಸಿ, ಪ್ರಕಟಿಸಲು ತೀರ್ಮಾನಿಸಿತು.

ಕರ್ನಾಟಕ ಜಾನಪದ ಅಕಾಡೆಮಿಯು ಸಹಜವಾಗಿಯೇ ಈ ಬೃಹತ್ ಯೋಜನೆಯ ಗುರುತರ ಜವಾಬ್ದಾರಿಯನ್ನು ಹೊತ್ತು ಅದನ್ನು ಕಾಲಾನುಕ್ರಮದಲ್ಲಿ ಅನುಷ್ಠಾನಗೊಳಿಸಿ, ಸಂಪುಟಗಳನ್ನು ಸಂಪಾದಿಸಿ ಕೊಡುವ ಕಾರ್ಯವನ್ನು ಯಶಸ್ವಿಯಾಗಿಯೇ ನಿರ್ವಹಿಸಿದೆ. ಜನಪದ ಸಾಹಿತ್ಯ ಪರಂಪರೆಯಲ್ಲಿನ ಪ್ರಕಾರ ವಿಶಿಷ್ಟತೆ, ಭೌಗೋಳಿಕ ವ್ಯಾಪ್ತಿ ಮತ್ತು ಇತಿಹಾಸವನ್ನು ಗಮನದಲ್ಲಿರಿಸಿಕೊಂಡೇ ನಿರ್ದಿಷ್ಟ ಸಂಪುಟಗಳ ವಿನ್ಯಾಸವನ್ನು ರೂಪುಗೊಳಿಸಲಾಗಿದೆ. ನಾಡಿನ ಹೆಸರಾಂತ ಜಾನಪದ ತಜ್ಞರು ಅಮೂಲ್ಯವಾದ ತಮ್ಮ ಸಮಯ ಮತ್ತು ಶ್ರಮಗಳೊಂದಿಗೆ ಈ ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಅವರೆಲ್ಲರ ಶ್ರಮ ಸಾರ್ಥಕವಷ್ಟೇ ಅಲ್ಲದೆ, ಸೃಜನಶೀಲ ಜಾನಪದ ಕ್ಷೇತ್ರಕ್ಕೆ

ಸಂದ ಅನನ್ಯ ಹಾಗೂ ಅಪರೂಪದ ಕೊಡುಗೆಗಳೆಂದೇ ನಾನು ಭಾವಿಸಿದ್ದೇನೆ. ಈ ಬೃಹತ್ ಯೋಜನೆಯನ್ನು ಆಗುಮಾಡಿಸುವಲ್ಲಿ ಹೀಗೆ ಹೆಗಲಿಗೆ ಹೆಗಲಾಗಿ ನಿಂತು ಸಹಕರಿಸಿದ ಎಲ್ಲ ಮಹನೀಯರಿಗೂ ಅಕಾಡೆಮಿ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

ಈ ಯೋಜನೆಯ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇಗೌಡ ಅವರಿಗೂ ಹಾಗೂ ಸಂಪಾದಕ ಮಂಡಳಿಯ ಸದಸ್ಯರಿಗೂ ವಿಶೇಷ ಅಭಿನಂದನೆಗಳು ಸಲ್ಲಲೇಬೇಕು.

ತಮ್ಮ ಉಚಿತವೂ, ವಿದ್ವತ್ಪೂರ್ಣವೂ ಆದ ನುಡಿಗಳೊಂದಿಗೆ ಸಂಪುಟಗಳ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ್, ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ, ಸಂಚಾಲಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಈ ಯೋಜನೆಯ ನಿರ್ವಹಣೆಯಲ್ಲಿ ತೋರಿದ ಅಪಾರ ಆಸಕ್ತಿ ಮತ್ತು ಶ್ರದ್ಧೆಗಳಿಗೆ ಇಡೀ ಕನ್ನಡ ನಾಡಿನ ಜಾನಪದ ಜಗತ್ತು ಋಣಿಯಾಗಿದೆ.

ಈ ಬೃಹತ್ ಯೋಜನೆಯ ಅನುಷ್ಠಾನದ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಂಡು ತತ್ಪರತೆಯಿಂದ ಕಾರ್ಯ ನಿರ್ವಹಿಸಿದ ನಮ್ಮ ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ನೆನಕೆಗಳು.

ಮುಂದಿನ ತಲೆಮಾರಿನ ಸಂಸ್ಕೃತಿ ಚಿಂತಕರು, ಜಾನಪದ ಅಧ್ಯಯನ ಕಾರರ ಪಾಲಿಗೆ ಸಮೃದ್ಧ ಆಕರ ಗ್ರಂಥಗಳಾಗಬಲ್ಲ ಈ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಅಕ್ಷರ ಮಟ್ಟಿಗೆ ಜಾನಪದ ಅಕಾಡೆಮಿಯ ಆಶಯವನ್ನು ಈಡೇರಿಸಿದೆಯೆಂಬುದೇ ನನ್ನ ನಂಬಿಕೆ ಮತ್ತು ಅದೇ ನನ್ನ ನಿಜವಾದ ಸಂತೋಷಕ್ಕೆ ಕಾರಣವಾಗಿದೆ.

ಪಿಚ್ಚಳ್ಳಿ ಶ್ರೀನಿವಾಸ
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

ಅಧ್ಯಕ್ಷರ ಮಾತು

ಪೂರ್ವಾಪರ

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ

ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು,

ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ–ಚಿಂತಕರಿಗೆ ಒಂದು ಹೆದ್ದಾರಿಯಾಯಿತು. ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ

ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು. ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯು ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

– ೨ –

ಮಾತಿನ ಸರಣಿ : ಮುತ್ತಿನ ಬೆಲೆ

ಬಿ. ಎಂ. ಶ್ರೀಕಂಠಯ್ಯ

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ–ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ

ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

ದ. ರಾ. ಬೇಂದ್ರೆ

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

ಮಾಸ್ತಿ ವೆಂಕಟೇಶ ಅಯ್ಯಂಗಾರ್

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೫೬)**

ಬೆಟಗೇರಿ ಕೃಷ್ಣಶರ್ಮ

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

ಬಿ. ಎಸ್. ಗದ್ಗೀಮಠ

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು ೧೯೬೩)**

ದೇ. ಜವರೇಗೌಡ

'ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ'. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

ಎಚ್. ಎಲ್. ನಾಗೇಗೌಡ

'ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು'. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

ಜೀ.ಶಂ. ಪರಮಶಿವಯ್ಯ

'ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು'. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

– ೩ –

ಕಟ್ಟುವ ಕನಸು ; ನೆಟ್ಟ ಸಸಿ

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ, ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ

ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯುನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯುದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯ ಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ–ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಬಿ. ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವನ್ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ– ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ – ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ

ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ – ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ , ಧವಳಶ್ರೀ, ಸಿ. ವೀರಣ್ಣ, ಬಿ.ಎಸ್. ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ. ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೬೬ರಲ್ಲಿ ತರೀಕೆರೆಯಲ್ಲಿ, ೧೯೬೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೭೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ

ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿದ್ದಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇ ಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ

ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕ ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'

– ರಾಘವಾಂಕ

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ–ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ

ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿ ಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೊಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ–ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು. ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು

ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು

ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ– ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ

ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ
ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ–ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ

ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಆರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ

'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು–ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು

ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ಯಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ

ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು; ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ.

ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು ಹಾಗೂ ಸಾಹಿತಿಗಳಾದ ಶ್ರೀ ಕಾ.ತ.ಚಿಕ್ಕಣ್ಣರವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ.

ಈ ಸಂಪುಟಗಳು ಅಚ್ಚುಕಟ್ಟಾಗಿ ಹೊರಬರಲು ಜಾನಪದ ತಜ್ಞರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಅವಿರತ ಶ್ರಮ ನೆರವಾಗಿದೆ. ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಬಿ.ಎನ್. ಪರಡ್ಡಿ ಮತ್ತು ಅಕಾಡೆಮಿ ಸಿಬ್ಬಂದಿ ವರ್ಗ ಶ್ರದ್ಧೆವಹಿಸಿ ಬೆಂಬಲಿಸಿದ್ದಾರೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

ಪ್ರೊ. ಹಿ. ಶಿ. ರಾಮಚಂದ್ರೇಗೌಡ
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

ಪ್ರಸ್ತಾವನೆ

ಪ್ರಾಸ್ತಾವಿಕ

ಜನರಿದ್ದಲ್ಲೆಲ್ಲ ಜಾನಪದವಿದೆ. ಅದು ಆಯಾ ಪ್ರದೇಶಗಳ ಜನಾನುಭವದ ಜ್ಞಾನಾಭಿವ್ಯಕ್ತಿ, ಸಮೂಹಾನುಭವದ ನಿರಂತರ ಜೀವಪ್ರವಾಹ ಅದು ಸಾಯುವುದಿಲ್ಲ. ಬೆಳೆಯುತ್ತಲೇ ಇರುತ್ತದೆ; ಬದಲಾಗುತ್ತಲೇ ಇರುತ್ತದೆ. ಅದು ಬಹುರೂಪಿ. ಅದಕ್ಕೆ ಪ್ರಾದೇಶಿಕ ಸೊಗಸು, ಸೊಗಡು ಇದ್ದೇ ಇರುತ್ತದೆ. ನಮ್ಮ ಜಾನಪದವೇ ಹೆಚ್ಚು ಶ್ರೀಮಂತ, ಸಂಪದ್ಭರಿತ, ಮೌಲಿಕ ಎನ್ನುವ ಮಾತುಗಳಿಗೆ ಅರ್ಥವಿಲ್ಲ. ಆಯಾ ಪ್ರದೇಶದ ಸಸ್ಯಾಹಾರಾಭಿರುಚಿ ಅವರವರಿಗೆ ಇಷ್ಟವಾಗುವಂತೆ, ಆಯಾ ಜಿಲ್ಲೆ, ಪ್ರದೇಶದ ಜಾನಪದ ಅವರವರಿಗೆ ಸ್ವಾದಿಷ್ಟ, ಶ್ರೇಷ್ಠ ಮೌಲಿಕ, ತಾಯಿಯ ಪ್ರೀತಿಗೆ ಸ್ಪರ್ಧೆ ಇದೆಯೇ? ನನ್ನ ತಾಯಿ ಮಾತ್ರ 'ಪ್ರೀತಿ–ಶ್ರೇಷ್ಠಳು' ಎನ್ನಲಾಗದು.

ಯಕ್ಷಗಾನ ಕರಾವಳಿಯವರಿಗೆ ರುಚಿಸಿದಷ್ಟು ಬಯಲು ಸೀಮೆಯವರಿಗೆ ಆಸ್ವಾದವಾಗದು. ಬಯಲು ಸೀಮೆಯ ಬಯಲಾಟ, ಲಾವಣಿ, ಗೀಗೀ ಅನ್ಯ ಪ್ರದೇಶದವರಿಗೆ ಹಿಡಿಸಲಾರವು. ಇದು ಮೇಲು ಕೀಳಿನ ಪ್ರಶ್ನೆಯಲ್ಲ; ಆಯಾ ಜನತೆಯ ಬದುಕಿನ ಪ್ರೀತಿಯ ಪ್ರತೀಕ. ನಮ್ಮ ಬದುಕಿನಿಂದಲೇ ರೂಪುಗೊಂಡ ಕಲೆಯಲ್ಲಿ ನಮ್ಮ ಬದುಕಿನ ಶ್ರೇಷ್ಠತೆಯನ್ನೇ ಹುಡುಕುವ ನಮ್ಮ ಸ್ವಾಭಿಮಾನ, ಒಳಗೊಳಗೇ ಕಾರ್ಯಮಾಡುತ್ತಿರುವುದೇ ಇದಕ್ಕೆ ಕಾರಣ, ಆಯಾ ಪ್ರದೇಶ, ಜಿಲ್ಲೆಯವರು ತಮ್ಮ ಜಾನಪದದ ಶ್ರೇಷ್ಠತೆಯನ್ನು ಸಾರುವಲ್ಲಿ ತಪ್ಪೇನೂ ಇಲ್ಲ. ಅದು ಮಾನವ ಸಹಜ ಶ್ರೇಷ್ಠತೆಯನ್ನು ಸಾರುವಲ್ಲಿ ತಪ್ಪೇನೂ ಇಲ್ಲ. ಅದು ಮಾನವ ಸಹಜ ಧರ್ಮ. ಆದರೆ ಒಂದು ಪ್ರದೇಶದ ಭಾಷೆ, ಬದುಕಿನ ವೈವಿಧ್ಯತೆಯಲ್ಲಿ ಏಕತೆಯ ಸೂಕ್ತವೊಂದಿದೆ. ಅದೇ ಸಂಸ್ಕೃತಿ, ಕಲೆ ಎಂದು ಪರಿಗಣಿತವಾಗುತ್ತದೆ. ಅದೇ ಮನುಕುಲದ ಏಕತೆಯ ಮೂಲ.

ಇನ್ನೂ ಒಂದು ಮಾತು. ಆಡಳಿತ ಸೌಲಭ್ಯಕ್ಕಾಗಿ ನಾವಿಂದು ಮಾಡಿಕೊಂಡ ಜಿಲ್ಲೆ, ತಾಲ್ಲೂಕು ಮೊದಲಾದ ಪ್ರಾದೇಶಿಕ ಚೌಕಟ್ಟಿನಲ್ಲಿ ಜಾನಪದವನ್ನು

ಅಳೆದು ನೋಡಲಾಗದು. ಅದನ್ನು ನಿಸರ್ಗ ಸಹಜ ಪ್ರದೇಶದ ಹಿನ್ನೆಲೆಯಲ್ಲಿ, ಜನಾಂಗಗಳ ಬದುಕಿನ ವಿಧಾನದಲ್ಲಿ ವಿಂಗಡಿಸಿ ನೋಡುವುದು ಹೆಚ್ಚು ಸೂಕ್ತ. ಒಂದು ಜಿಲ್ಲೆಯ ಜಾನಪದ, ಇನ್ನೊಂದು ಜಿಲ್ಲೆಯ ಜಾನಪದದೊಂದಿಗೆ, ಗಡಿನಾಡು ಭಾಷಾ ಸ್ಥಿತಿಯಂತೆ, ಕಲಸು ಮೇಲೋಗರವಾಗಿರುತ್ತದೆ. ಒಂದು ಜನಾಂಗಕ್ಕೆ ಇನ್ನೊಂದು ಜನಾಂಗದ ಸಂಪರ್ಕ ದಟ್ಟವಾದಾಗಲೂ ಈ ಕಲಸು ಕ್ರಿಯೆ ನಡೆಯುವುದು ಸಹಜ. ಇಂಥ ಪರಿಸ್ಥಿತಿಯಲ್ಲಿ ಒಂದೊಂದು ಜಿಲ್ಲೆಯ ವೈಶಿಷ್ಟ್ಯಗಳನ್ನು ಮಾತ್ರ ಹೇಳಬಹುದಾಗಿದೆ.

ಜಿಲ್ಲೆಯ ವೈಶಿಷ್ಟ್ಯ

ಸಂಪಾದಿತ (ಇದು ಎರಡನೆಯ ಸಂಪುಟ) ವಿಜಾಪುರ ಜಿಲ್ಲೆಯ ಗೀ ಗೀ ಸಾಹಿತ್ಯದ ಹಿನ್ನಲೆಯಲ್ಲಿ, ಆ ಜಿಲ್ಲೆಯ ಜಾನಪದ ವೈಶಿಷ್ಟ್ಯಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

೧) ಯಕ್ಷಗಾನವೊಂದನ್ನುಳಿದು ಕರ್ನಾಟಕದ ಬಹುತೇಕ ಜನಪದ ಕಲೆಗಳು ವಿಜಾಪುರ ಜಿಲ್ಲೆಯಲ್ಲಿವೆ.

೨) ಲಾವಣಿ, ಗೀಗೀ, ದೊಡ್ಡಾಟ ಮತ್ತು ಸಣ್ಣಾಟಗಳು ಈ ಜಿಲ್ಲೆಯ ಜನಜನಿತ ಕಲಾ ಪ್ರಕಾರಗಳು.

೩) ಜಾನಪದದ ಪ್ರಾಮುಖ್ಯತೆಯನ್ನು ಮೊದಲು ಗುರುತಿಸಿದವರು ಆಂಗ್ಲ ವಿದ್ವಾಂಸರಾದರೂ, ಈ ನಿಟ್ಟಿನಲ್ಲಿ ಪ್ರಥಮರಾಗಿ ಸಂಗ್ರಹಕಾರರಾಗಿ ಜನಪದ ಸಾಹಿತ್ಯದ ರಾಸಿ ಮಾಡಿದವರು ವಿಜಾಪುರ ಜಿಲ್ಲೆಯವರು. ಗುಳೇದಗುಡ್ಡದ ಬಾಳಿ ಇಂಟಿ, ಬಾದಾಮಿಯ ಪರಯ್ಯ ಗಣಾಚಾರಿ ಮತ್ತು ಹೆಡ್ ಮಾಸ್ಟರ ನಾರಾಯಣ ಅಪ್ಪಾಜಿ ಅವರು ಸಂಗ್ರಹಿಸಿದ ಕೆಲವು ಲಾವಣಿಗಳನ್ನು ೧೮೭೪ ಜನವರಿ ೨೯ರಂದು ಜಾನ್‌ಫ್ಲೀಟರಿಗೆ ರವಾನೆ ಮಾಡಿದ್ದಾರೆ. ಹೀಗೆ ಸಂಗ್ರಹಿಸಿದ ಲಾವಣಿಗಳನ್ನು ಜಾನ್‌ಫ್ಲೀಟರು ೧೯೧೭ ಅಕ್ಟೋಬರ್ ೧೩ರಂದು ಲಂಡನ್ ಬ್ರಿಟಿಷ್ ಮ್ಯೂಜಿಯಂಗೆ ಕೊಟ್ಟಿದ್ದಾರೆ.[೧] ಜನಪದ ಸಾಹಿತ್ಯ ಸಂಗ್ರಹ ಕಾರ್ಯಕ್ಕೆ ಈ ಮೂವರು ತಮ್ಮನ್ನು ತೊಡಗಿಸಿಕೊಂಡ ಗೌರವಕ್ಕೆ ಪಾತ್ರರು. ಈ ಊರುಗಳು ಇಂದು ಬಾಗಲಕೋಟೆ ಜಿಲ್ಲೆಗೆ ಸೇರಿವೆ.

---

[೧] **ಬೆಳೆ, ೧ ಪುಟ ೯೯ – ಡಾ. ಎಂ.ಜಿ. ಬಿರಾದಾರ.**

೪) ಹಲಸಂಗಿ ಗೆಳೆಯರ ಬಳಗ ಜನಪದ ಸಾಹಿತ್ಯ ಪ್ರಕಟನೆಯ ಕಾರ್ಯ ಕೈಕೊಂಡು, 'ಗರತಿಯ ಹಾಡು' (ತ್ರಿಪದಿಗಳು) 'ಮಲ್ಲಿಗೆಯ ದಂಡೆ' (ಸಂಪ್ರದಾಯದ ಹಾಡು), ಮತ್ತು 'ಜೀವನ ಸಂಗೀತ' (ಲಾವಣಿ, ಗೀಗೀ) ಕೃತಿಗಳನ್ನು ಪ್ರಕಟಿಸಿ, (೧೯೩೦) ಕನ್ನಡಿಗರ ಕಣ್ಣು ಜನಪದ ಸಾಹಿತ್ಯದೆಡೆಗೆ ಹೊರಳುವಂತೆ ಮಾಡಿದರು.

೫) ಜನಪದ ವಸ್ತು, ಭಾಷೆ, ಧ್ವನಿ, ಧಾಟಿಗಳನ್ನು ಶಿಷ್ಟ ಸಾಹಿತ್ಯಕ್ಕೆ ಬಳಸಿಕೊಂಡು, ಆಧುನಿಕ ಕನ್ನಡ ಸಾಹಿತ್ಯದ ಸೊಗಸು ಸೌಂದರ್ಯ ಹೆಚ್ಚುವಂತೆ ಮಾಡಿದವರು, ಹಲಸಂಗಿ ಚೆನ್ನಮಲ್ಲಪ್ಪ, ದ.ರಾ. ಬೇಂದ್ರೆ, ಸಿಂಪಿ ಲಿಂಗಣ್ಣ, ಅನಂತರ ಚೆನ್ನವೀರ ಕಣವಿ, ಡಾ. ಚಂದ್ರಶೇಖರ ಕಂಬಾರ. ಹೀಗೆ ಉತ್ತರ ಕರ್ನಾಟಕದ ಜನಪದ ಭಾಷೆಗೆ ಗ್ರಾಂಥಿಕ ಮುದ್ರೆಯೊತ್ತುವ ಕಾರ್ಯ ಆರಂಭವಾಯ್ತು.

೬) ನಿರ್ಲಕ್ಷಿತ ಜಾನಪದ, ವಿಶ್ವವಿದ್ಯಾಲಯ ಮಟ್ಟದಲ್ಲಿ ಅಧ್ಯಯನ ಯೋಗ್ಯವೆಂದು ಮೊಟ್ಟ ಮೊದಲು ತೋರಿಸಿಕೊಟ್ಟವರು ವಿಜಾಪುರದವರು, ಬಾದಾಮಿಯ ಬಿ.ಎಸ್. ಗದ್ದಿಗಿಮಠ ಅವರು, ಪ್ರೊ. ಕೆ.ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಜನಪದಗೀತ ಸಾಹಿತ್ಯ ಕುರಿತು ೧೯೫೫ರಲ್ಲೇ ಪಿಎಚ್.ಡಿ ಪಡೆದರು. ಅನಂತರ ಜಾನಪದ ಬಳ್ಳಿ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಹರಿದು ಹಬ್ಬಿ ಹಂದರವೇರಿತು. ಅದರ ಫಲವಾಗಿ ಇಂದು ಜಗತ್ತಿನಲ್ಲಿ ಪ್ರಥಮ ಜಾನಪದ ವಿಶ್ವವಿದ್ಯಾಲಯ ಧಾರವಾಡ ಜಿಲ್ಲೆಯ ಶಿಗ್ಗಾಂವದಲ್ಲಿ ಸ್ಥಾಪನೆಯಾಗಿದೆ.

೭) 'ಗೀಗೀ' ಹಾಡುಗಾರರು ಬಹುಪಾಲು ಮುಸ್ಲಿಂರು. ಆದರೆ ಅವರ ಹಾಡಿನ ತತ್ವಸಿದ್ಧಾಂತಗಳು ಶರಣ ಸಂಸ್ಕೃತಿ ಪ್ರೇರಿತವಾಗಿ, ಸಮಗ್ರರ ಬದುಕು ಭಾಷೆಯ ಅಭಿವ್ಯಕ್ತಿಯಾಗಿವೆ.

ಕ್ಷೇತ್ರಕಾರ್ಯ

'ಲಾವಣಿ', 'ಗೀಗೀ' ಈ ಜಿಲ್ಲೆಯ ಪ್ರಮುಖ ಹಾಡಿನ ಪ್ರಕಾರಗಳೆಂಬುದಂತೂ ಸತ್ಯ. ಲಾವಣಿ ಮೊದಲು, ಎಲ್ಲೆಡೆಯಲ್ಲಿ ದಟ್ಟವಾಗಿ ಕೇಳಿಬರುವ ಪ್ರಕಾರವಾಗಿತ್ತಾದರೂ, ಕಳೆದ ಮೂರ್ನಾಲ್ಕು ದಶಕಗಳಿಂದ 'ಗೀಗೀ' ಮಾತ್ರ

ಅಧಿಕ ಪ್ರಚಾರದಲ್ಲಿದೆ. ಈ ಎರಡೂ ಪ್ರಕಾರದ ಹಾಡುಗಳ ಸಾಮ್ಯ, ವ್ಯತ್ಯಾಸ ಕುರಿತಂತೆ ಹಲವಾರು ಚರ್ಚೆಗಳು ನಡೆದಿವೆ.[೧]

೧೯೮೫ರಲ್ಲಿ ನನ್ನ ವಿದ್ಯಾರ್ಥಿಯೊಬ್ಬರಿಗೆ 'ಬೀಬೀ ಇಂಗಳಗಿ ಹಸನನ ಗೀಗೀ ಪದಗಳು' ವಿಷಯ ಕುರಿತಂತೆ ಡಾಕ್ಟರೇಟ್ ಮಾಡಲು ಹೇಳಿದೆ. ಆ ನೆಪದಲ್ಲಿ ವಿಜಾಪುರ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ಮಾಡಿದೆವು. ಹಳ್ಳಿ ಹಳ್ಳಿಗಿದ್ದ ಹಾಡುಗಾರರು, 'ಗೀಗೀ' ಮೇಳಗಳ ಮುಖಾಂತರ ಸಿಕ್ಕಷ್ಟೆಲ್ಲ ಹಾಡುಗಳನ್ನು ಸಂಗ್ರಹಿಸಿದೆವು. ಡಾ. ಬಿ.ಎಸ್. ಕೋಟ್ಯಾಳ ಅವರಿಗೆ ಪದವಿಯೂ ಪ್ರಾಪ್ತವಾಯ್ತು. ಇಪ್ಪತ್ತೈದು ವರ್ಷಗಳ ಹಿಂದೆ ಸಂಗ್ರಹಿಸಿದ ಈ 'ಗೀಗೀ' ಹಾಡುಗಳನ್ನು ಪ್ರಕಟಿಸಲು ಸಮರ್ಥ ಪ್ರಕಾಶಕರು ಸಿಕ್ಕಲಿಲ್ಲ. ಈ ಹಾಡುಗಳ ಸಾಹಿತ್ಯಿಕ ಮೌಲಿಕತೆಯನ್ನು ಕುರಿತು ಇಲ್ಲಿ ಮಾತನಾಡುವುದಕ್ಕಿಂತ ಕ್ಷೇತ್ರಕಾರ್ಯದ ಶ್ರಮ ಸಾಹಸ ಕುರಿತು ಕೆಲವು ವಿಚಾರಗಳನ್ನು ವ್ಯಕ್ತಪಡಿಸುವುದು ಸೂಕ್ತ ಅನಿಸುತ್ತದೆ.

ಇನ್ನೂ ಇಂಥ ಸಾಹಿತ್ಯ ಸಂಗ್ರಹಕ್ಕೆ ತಮ್ಮನ್ನು ತೊಡಗಿಸಿಕೊಳ್ಳುವ ತರುಣ ಜನಾಂಗವಿಲ್ಲ. ವಕ್ತೃಗಳಂತು ಇಲ್ಲವೇ ಇಲ್ಲ. ಇಂದು ಜೀವಂತವಾಗಿರುವ ಹಾಡಿನ ಮೇಳಗಳೂ ನಾಗರಿಕತೆಯ ಗಾಳಿಗೊ, ಜಾಗತೀಕರಣದ ದಾಳಿಗೊ ತುತ್ತಾಗಿ ವ್ಯಾಪಾರೀಕರಣಕ್ಕಿಳಿದು ಬದುಕಿನ ಸಾಂಸ್ಕೃತಿಕ ಮೌಲ್ಯಗಳಿಂದ ದೂರ ಸರಿದಿವೆ. ಹೀಗಿರುವಾಗ ಇಪ್ಪತ್ತನೆಯ ಶತಮಾನದ 'ಗೀಗೀ' ಪದಗಳು ಇನ್ನೂ ದೊರೆಯುವ ಸಾಧ್ಯತೆ ಇಲ್ಲವೇ ಇಲ್ಲ. ತಾಳ–ಮೇಳವಿಲ್ಲದ ಮೇಳಗಳು, ಹಿಂದಿನ ಹಾಡುಗಾರರ ಹರುಕು–ಮುರುಕು, ಚೂರು–ಪಾರು ಆಯ್ದುಕೊಂಡು, ಅವನ್ನೇ ಹಾಡಿಕೆ ಮಾಡಿಕೊಂಡು ಬದುಕುವ ಸಾಹಸ ಮಾಡುತ್ತಿವೆ. ಅವು ಜಾನಪದ ಸತ್ವ ಸ್ವರೂಪ ಎರಡನ್ನೂ ಕಳೆದುಕೊಂಡಿವೆ. ಜಾನಪದ ನಿಷ್ಠೆಯ ಸಮರ್ಥ ಹಾಡುಗಾರರು 'ಇಲ್ಲ' ಎನ್ನುವಷ್ಟು ಕಡಿಮೆ. ಅವರು ಹಾಡಿದ್ದೇ ಹಾಡು, ಅದೇ ಜಾನಪದ. ಹಣ–ಹೆಂಡದಾಸೆಯ ಅವರ ಭ್ರಷ್ಟ ಮನಸ್ಸು (ಕ್ಷೇತ್ರ ಕಾರ್ಯಾನುಭವವೇ ಒಂದು ಆಸಕ್ತಿ ಪೂರ್ಣ ಕೃತಿಯಾಗಬಹುದು) ನಗರೀಕರಣದ ವ್ಯಾವಹಾರಿಕ ಮನೋಭಾವದಿಂದಾಗಿ, ನಿಸರ್ಗ ಸಹಜ ಜಾನಪದದ ಕಲಾತ್ಮಕತೆಯೇ ಹಾಳಾಗಿ ಹೋಗಿದೆ. ಸಂಗ್ರಹ ಯೋಗ್ಯ ಜನಪದ ಸಾಹಿತ್ಯ ದೊರೆಯುವುದೇ ದುಸ್ತರ. ಅಲ್ಪ ಸ್ವಲ್ಪ ದೊರೆತೂ ಅದು

---

[೧] **ಲಾವಣಿ ಒಂದು ವಿವೇಚನೆ. ಸಾಧನೆ ಸಂ. ೩, ಜುಲೈ–ಸೆಪ್ಟೆಂಬರ್ ೧೯೮೨ – ಡಾ. ಎಂ.ಜಿ. ಬಿರಾದಾರ. ಬೆಳೆ–೧, ಡಾ– ಎಂ.ಜಿ. ಬಿರಾದಾರ.**

ಚರ್ವಿತಚರ್ವಣ; ಅಶುದ್ಧ. ಇನ್ನು ನಿಸರ್ಗ ಸಂಪತ್ತಿನ ಸಂಪರ್ಕವಿಲ್ಲದ, ವೃತ್ತಿ; ಕಾಯಕವಿಲ್ಲದ ಯಂತ್ರ ಅವಲಂಬಿತ ಬದುಕಿನಲ್ಲಿ, ಹಳೆ ಜಾನಪದಕ್ಕೆ ಜಾಗವಿಲ್ಲ. ಹೊಸದು ಹುಟ್ಟುವುದೇ ಇಲ್ಲ ಅನ್ನುವ ಸಂಧಿಗ್ದ ಸ್ಥಿತಿ. ಆದರೂ ಎಂಥ ಕೆಟ್ಟ ಪರಿಸ್ಥಿತಿಯಲ್ಲಿಯೂ ಹುಟ್ಟಿ ಬೆಳೆದ ಗಟ್ಟಿತನ ಅದಕ್ಕಿರುವುದಂತೂ ಸತ್ಯ.

ಶ್ರವ್ಯ 'ಗೀಗೀ' ಹಾಡು ದೃಶ್ಯರೂಪ ತಳೆದು, 'ಸಣ್ಣಾಟ'ದ ಪ್ರಕಾರವಾಗಿ ಪರಿವರ್ತನೆಗೊಂಡಿತಾದರೂ ಅದು ಬಹುಕಾಲ ನಿಂತು ವಿಶೇಷವಾಗಿ ಬೆಳೆಯಲೇ ಇಲ್ಲ.

ಲಾವಣಿ – 'ಗೀಗೀ'

ಜನಪದ ಸಾಹಿತ್ಯದಲ್ಲಿ 'ಗೀಗೀ' ಒಂದು ಪ್ರಮುಖ, ಪರಿಣಾಮಕಾರಿ ಹಾಡಿನ ಪ್ರಕಾರವೆಂಬುದನ್ನು ಯಾರೂ ಅಲ್ಲಗಳೆಯರು, 'ಲಾವಣಿ' ರೂಪಾಂತರಗೊಂಡು ಮತ್ತಷ್ಟು ಪರಿಣಾಮಕಾರಿ 'ಗೀಗೀ'ಯಾದುದನ್ನು ಒಪ್ಪಲೇಬೇಕು. ಈ 'ಲಾವಣಿ' ಉತ್ತರ ಭಾರತದ ಶಾಹೀರಿಯ ಇನ್ನೊಂದು ರೂಪವಾಗಿ, ಮರಾಠಿಯ 'ಪೊವಾಡ' ಮುಖಾಂತರ ಕನ್ನಡಕ್ಕೆ ಕಾಲಿಟ್ಟಿತೆಂಬುದು ಕೆಲವರ ವಾದವಾದರೆ, ಇದು ಇಂಗ್ಲೀಷದ ಬ್ಯಾಲೆಡ್ (Ballad) ದಿಂದ ಪ್ರೇರಿತ ಎನ್ನುವವರೂ ಇದ್ದಾರೆ. ಅದೇನೇ ಇರಲಿ ಲಾವಣಿಯಿಂದ ಗೀಗೀ ರೂಪಾಂತರ ಕ್ರಿಯೆ ತಟ್ಟನೇ ಆದುದಲ್ಲ. 'ಚಿಟಿಕೆ'ಯೊಂದಿಗೆ ಹಾಡುವ 'ಒಂಟಿ ಲಾವಣಿ' 'ಡಪ್ಪಿ'ನೊಂದಿಗೆ 'ಬಯಲು ಲಾವಣಿ'ಯಾಯ್ತು. ಸುದೀರ್ಘ ಸಮಯ, ಉಸಿರಾಣವಿಲ್ಲದೆ ಹಾಡುವ ಪ್ರಯಾಸವನ್ನನುಲಕ್ಷಿಸಿ, ಮತ್ತೆ ಒಬ್ಬಿಬ್ಬರನ್ನು ಜೊತೆಗೆ ಸೇರಿಸಿಕೊಂಡಾಗ ಅದು 'ಮೇಳ ಲಾವಣಿ' ಎನ್ನಿಸಿಕೊಂಡಿತು. ಡಪ್ಪುವಾದ್ಯದ ಬಳಕೆಯಿಂದಾಗಿ ಅದನ್ನು ಡಪ್ಪಿನ ಹಾಡೆಂದು ಜನ ಗುರುತಿಸಿದ್ದುಂಟು. ಆಗ ಮೇಳ ಸೇರಿದವರು ನಿಷ್ಕ್ರಿಯರಾಗಬಾರದೆಂದು, ಪ್ರಮುಖ ಹಾಡುಗಾರ 'ಹೇಳಿದ್ದೆಲ್ಲ ಸತ್ಯ' ಎಂದು 'ಹೂಃಗುಟ್ಟಲು, 'ಜೀ' ಅನ್ನುವ ರೀತಿಯಲ್ಲಿ 'ಜೀಯ ಜೀಯಜೀ' ಎಂದು ರಾಗಾಲಾಪ ಮಾಡಹತ್ತಿದರು. ಜೊತೆಗೆ ಪಲ್ಲವಿಯನ್ನು ಪುನರುಕ್ತಗೊಳಿಸುವುದನ್ನು ರೂಢಿಸಿಕೊಂಡರು. ಅವರ ಬರಿಗೈಗೆ 'ತಾಳ', 'ತುಂತುಣಿ'ಗಳು ಬಂದು ಇನ್ನೂ ಜೀವಕಳೆ ತುಂಬಿಕೊಂಡು, 'ಹೌದಪಾ, ಶಬ್ಬಾಶ್ !' ಎಂದು ಹುರುಪು ತುಂಬಿ ಸುತ್ತು, ಅಧಿಕ ಸ್ವಾತಂತ್ರ್ಯಪ್ರಾಪ್ತರಾಗಿ, ಹಿಮ್ಮೇಳದವರೆನ್ನುವ ಪಟ್ಟ ಗಿಟ್ಟಿಸಿಕೊಂಡರು. ಇದರಿಂದಾಗಿ ಪ್ರಮುಖ

ಹಾಡುಗಾರನಿಗೆ ವಿಶೇಷ ಉಸಿರು–ವಿಶ್ರಾಂತಿ ಪ್ರಾಪ್ತವಾಯ್ತು. ಈ ಹಿಮ್ಮೇಳದವರ ತಾಳ–ತುಂತುಣಿಯೊಂದಿಗೆ ನ ಈ 'ಜೀ' ಪ್ರಾರಂಭದಲ್ಲಿ, 'ಜಿಯ ಜಿಯಜೀ' ಎಂದಿದ್ದು, ರಾಗಾಲಾಪಕ್ಕೆ ಸರಳವೆನಿಸಿತೋ ಏನೋ ಅದು 'ಗಿಯಗಿಯಗೀ' ಎಂದಾಗಿ ಇವು 'ಗೀಗೀ' ಪದಗಳೆನಿಸಿಕೊಂಡವು. 'ಸೋ' ಎನ್ನುವುದರಿಂದ 'ಸೋಬಾನೆ' ಆದಂತೆ !

ವಿಜಾಪುರ ಜಿಲ್ಲೆಯ ಪಶ್ಚಿಮದ, ಕೃಷ್ಣಾ ತೀರದ ಪ್ರದೇಶದಲ್ಲಿ 'ಜೀ' ಪದದ ಬಳಕೆ ವಿಶೇಷವಾಗಿದ್ದು, ಅಲ್ಲಿ 'ಜೀ' ಪದವೆಂದೇ ಹೇಳುತ್ತಿದ್ದರು. ವಿಜಾಪುರ ಜಿಲ್ಲೆಯ ಪೂರ್ವಭಾಗದಲ್ಲಿ 'ಗೀ' ಪ್ರಾಧಾನ್ಯತೆ ಪಡೆದು, ಅವು, 'ಗೀಗೀ' ಪದಗಳೆಂದು ಪ್ರಖ್ಯಾತಿ ಪಡೆದವು.[೧] ಈಗ ಅವುಗಳನ್ನು ಜನಪದರಲ್ಲಿ 'ಗೀಗೀ' ಪದಗಳೆಂದೇ ದಟ್ಟವಾಗಿ ಗುರುತಿಸಲಾಗುತ್ತಿದೆ.

ಇಲ್ಲಿ ವಿಜಾಪುರವನ್ನು ಕೇಂದ್ರವಾಗಿ ಪರಿಗಣಿಸಿದ್ದುದರ ಕಾರಣವೆಂದರೆ, ಜಿಲ್ಲೆಯ ಪಶ್ಚಿಮ ಭಾಗ, (ಕೃಷ್ಣ ತೀರ) ಮತ್ತು ಬೆಳಗಾಂವ ಜಿಲ್ಲೆಯಲ್ಲಿ ಲಾವಣಿಕಾರರೇ ಅಧಿಕ ಸಂಖ್ಯೆಯಲ್ಲಿದ್ದರು. ಪೂರ್ವಭಾಗ ಮತ್ತು ಗುಲಬರ್ಗಾ ಬೀದರ ಜಿಲ್ಲೆಗಳಲ್ಲಿ ಗೀಗೀಯೆಂದೇ ಪಾರುಪತ್ಯ.

ಹರದೇಶಿ – ನಾಗೇಶಿ

ಈ ಗೀಗೀ ಪದಗಳು ಹರದೇಶಿ, ನಾಗೇಶಿ ಹೆಸರಿನ ಎರಡು ಪಂಥಗಳಾಗಿ ಬೆಳೆದುಬಂದುದು ಇನ್ನೊಂದು ವಿಶೇಷ. ಶಿವಶಕ್ತಿ, ಪ್ರಕೃತಿ–ಪುರುಷರ ಪ್ರತೀಕವಾದ ಹೆಣ್ಣು–ಗಂಡುಗಳಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎನ್ನುವ ಸಂಘರ್ಷ ಅನಾದಿ ಕಾಲದಿಂದಲೂ ಇದೆ. ಇಂದಂತೂ ಅದು ತೀರ ಪ್ರಬಲವಾಗಿ, ಸಂಸಾರದ ತಾಳ ತಪ್ಪಿ ನಾದ ಹಾಳಾಗಿ ಎಲ್ಲೆಲ್ಲೂ ಅಪಸ್ವರ. ಮಾತೃ ಪ್ರಧಾನ, ಪಿತೃಪ್ರಧಾನ ವ್ಯವಸ್ಥೆಗಳು, ಸೈದ್ಧಾಂತಿಕ ನೆಲೆಯಲ್ಲಿ ವ್ಯಕ್ತಿಶಕ್ತಿ ಪ್ರಾಧಾನ್ಯತೆ ಪಡೆದುಕೊಂಡೇ ಇದ್ದವು. ಸಮಾನತೆಯ ಸಾಮರಸ್ಯದ ಬದುಕು ಎಂದೂ ರೂಪಗೊಂಡುದೇ ಇಲ್ಲ. ಗಂಡಿಗೆ 'ಜೀ' ಎನ್ನದ ಅಹಂಕಾರ ಹೆಣ್ಣಿಗೆ; ಹೆಣ್ಣಿಗೆ ಜೀ ಎನ್ನದ ಪ್ರತಿಷ್ಠೆ ಗಂಡಿಗೆ. ಇದು ಜೀವ ಸಹಜ. ಸತ್ಫಲಕ್ಕೆ ಭೂಮಿ, ಬೀಜ ಎರಡೂ ಅಷ್ಟೇ ಪ್ರಮುಖ ಎನ್ನುವ ಸೈದ್ಧಾಂತಿಕ ನೆಲೆ ಈ ಹಾಡುಗಳದ್ದು.

---

೧ ಗುಲಬರ್ಗಾ ವಿಜಾಪೂರ ಮಾರ್ಗದ ನಡುವಿನ ಊರುಗಳ ಹೆಸರುಗಳು 'ಗೂ' ಕಾರಾಂತ್ಯದವಾಗಿದ್ದೊಂದು ವಿಶೇಷ. ಉದಾ : ಜೇವರಗಿ, ಮೋರಟಗಿ, ಹೊನ್ನುಟಗಿ, ಕೌಲಗಿ ಇತ್ಯಾದಿ.

ಗಂಡು ಹೆಚ್ಚು ಎಂದು ವಾದಿಸುವವರು 'ಹರದೇಶಿ'ಯಾದರೆ, ಹೆಣ್ಣು ಹೆಚ್ಚು ಎಂದು ವಾದಿಸುವವರು 'ನಾಗೇಶಿ'. 'ತುರಾಯಿ' 'ಕಲ್ಗಿ' ಎಂದೂ ಹೇಳುತ್ತಾರೆ. ಹಸನನ ಬಹುತೇಕ ಶಿಷ್ಯಂದಿರು 'ನಾಗೇಶಿ' ಪಂಥದವರು. ಒಂದೇ ವಿಚಾರದ ಏಕತಾನತೆಯನ್ನು ಕಳೆಯಲು, ಸ್ವತಃ ಹಸನನೇ ಹರದೇಶೀ ಮೇಳಗಳನ್ನು ಕಟ್ಟಿ ಪ್ರೋತ್ಸಾಹಿಸಿದನಂತೆ. ಇದರಿಂದಾಗಿ ಎರಡೂ ಮೇಳಗಳಲ್ಲಿ ನಾ ಮೇಲು ತಾ ಮೇಲು ಎನ್ನುವ ತುರುಸಿನ ಸ್ಪರ್ಧೆ ಏರ್ಪಟ್ಟು ಸವಾಲ್-ಜವಾಬದ ವಿಶೇಷ ಹಾಡುಗಳು ಹುಟ್ಟಿಕೊಂಡು ಗೀಗೀ ಇನ್ನೂ ಹುಲುಸಾಗಿ ಬೆಳೆದು ಜನರಂಜನೀಯವಾದವು. ಒಂದೇ ವೇದಿಕೆಯ ಮೇಲೆ ಎರಡೂ ಮೇಳಗಳು ಪಾಲ್ಗೊಳ್ಳುವಂತಾಯ್ತು. ಹಸನನ ಸ್ಪರ್ಧಾಳು ಇಂಡಿಯ ಖಾಜಾಸಾಬ, ಅನಂತರ ಕಡಣಿ ಕಲ್ಲಪ್ಪ ಮೊದಲಾದವರು ಪ್ರಖ್ಯಾತ ಹರದೇಶೀ ಹಾಡುಗಾರರು. 'ಬೀಬೀ ಇಂಗಳಗಿ ಪರಿಸರದ ಹಾಡುಗಾರ'ರಲ್ಲಿ ನಾಗೇಶಿ ಹಾಡುಗಾರರೇ ಹೆಚ್ಚಾಗಿದ್ದು, ಹರದೇಶಿಯವರು ಕೆಲವೇ ಕೆಲವರು.

ಈ 'ಸವಾಲ್-ಜವಾಬ' ಹಾಡುಗಳನ್ನು, ಒಂದು ಹಾಡಿನ ಪ್ರಕಾರವೆಂದು ಭಾವಿಸಿದವರೂ ಇದ್ದಾರೆ. ಅದು ಹಾಡುಗಾರಿಕೆಯ ಒಂದು ವಿಧಾನವಲ್ಲದೆ ಪ್ರಕಾರವಲ್ಲ. ಈ ಸವಾಲ್-ಜವಾಬ ಪ್ರಕ್ರಿಯೆ ಜನಪದದ 'ಹೋಳಿ' ಮತ್ತಿತರ ಪ್ರಕಾರದ ಹಾಡುಗಳಲ್ಲಿಯೂ ಇದೆ.

ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ 'ಬೀಬೀ ಇಂಗಳಗಿ ಗೀಗೀ' ಹಳ್ಳಿಯಲ್ಲೊಂದು 'ಗೀಗೀ' ಹಾಡುಗಾರರ ತರಬೇತಿ ಸಂಸ್ಥೆಯನ್ನೇ ಸಂಸ್ಥಾಪಿಸಿದ್ದ. ಹಸನ (೧೮೫೮-೧೯೧೬) ಪ್ರಖ್ಯಾತ ಹಾಡುಗಾರ, ಕವಿ. ಅವನು ಕಟ್ಟಿದ ಹಾಡಿನ ಮೇಳಗಳ ಸಂಖ್ಯೆಯೇ ಇಪ್ಪತ್ತಕ್ಕೂ ಅಧಿಕ. ಇಂದೂ ಗೀಗೀ ಮೇಳಗಳು ಅವನ ಹೆಸರು ಹೇಳಿಯೇ ಡಪ್ಪಿನ ಮೇಲೆ ಥಾಪು ಹಾಕುತ್ತವೆ. ಶಿಷ್ಯಂದಿರ ಸೈನ್ಯವನ್ನೇ ಸೃಷ್ಟಿಸಿದ ಹಸನನನ್ನು, ಅವರೇ 'ಸಾವಿರ ಹಾಡಿನ ಸರದಾರ' ಎಂದು ಹೊಗಳಿ ಹಾಡಿದ್ದಾರೆ.

'ಸಾವಿರ ಶಿಷ್ಯರ ಹಸನನ ಫೌಜು ।
ಅವನ ಕರುಣದಿಂದ ಮುಂದೆ ನಡೂದು ಸಮುದರ ಜಹಾಜು ॥'

'ವಸ್ತಾದ ಹಸನ ವಜ್ರದ ಕಿರಣ
ಸೂರ್ಯ ಚಂದ್ರರಿರುವ ತನಕಾ
ಅವಗ ಇಲ್ಲ ಮರಣ ॥'

ಹಸನನ ಪ್ರಖ್ಯಾತಿಯ ಪರಿಣಾಮ ಎಂಥದು ಎಂಬುದನ್ನು ಮುಂದಿನ 'ಗೀಗೀ'ಕಾರರ ಹಾಡಿನಿಂದ ತಿಳಿಯಬಹುದಾಗಿದೆ.

"..

ಹಾಡಕಿ ಸಲುವಾಗಿ ಹಾಳಾಗಿ

ಜಗಳ ಹತ್ತಿತು ಗಂಡ-ಹೆಂಡರಗಿ ।

ಇಂಗಳಗಿ ಹಸನಗ ಯಾರ ಹೇಳಬೇಕೀಗ

ಕೆಡಿಸಿಬಿಟ್ಟ ನಮ್ಮ ಗಂಡದ್ಯಾರಿಗಿ ।

ಬಿತ್ತಿ ಬಿಟ್ಟಾನವ್ವಾ ಊರೂರಿಗಿ

ಮಲಿಕುಡಿಯೂ ಕೂಸ ಮೊದಲಾಗಿ ।

ಬೀಸೂಕಲ್ಲಾಗ ಇವರ ಪದಾ ಹಾಡತಾರ

ಚಲೋ ಹೆಂಗಸರು ತಲೆದೂಗಿ ।

.."

ಹಸನನ ಹಾಡುಗಾರಿಕೆಗೆ ತಲೆದೂಗದವರೇ ಇರಲಿಲ್ಲ. ಅಂದು ನೈಜಾಮ ಇಲಾಖೆಯ ಗುಲಬರ್ಗಾ-ಬೀದರ ಜಿಲ್ಲೆಗಳಲ್ಲಿ ಹಲವಾರು ಗೀಗೀ ಮೇಳಗಳನ್ನು ಹುಟ್ಟು ಹಾಕಿದ್ದಲ್ಲದೆ, ಸ್ವತಃ ಹಳ್ಳಿ ಹಳ್ಳಿಗಳಲ್ಲಿ ಹಾಡಿ ಅಲ್ಲಿಯ ಜನಪದರಲ್ಲಿಯ ಕನ್ನಡತನವನ್ನು ಜಾಗೃತಗೊಳಿಸಿದ್ದು ಒಂದು ಮಹತ್ವದ ಸಾಧನೆಯೇ ಸರಿ. ಹಸನ ತನ್ನ ಮೇಳದೊಂದಿಗೆ ಸೋಲಾಪುರ ಪುಣೆ ಮುಂಬೈ ಮತ್ತು ಹೈದರಾಬಾದಗಳಲ್ಲಿ, ಕನ್ನಡದ ಗೀಗೀ, ಝೇಂಕರಿಸಿ ಬಂದುದು ಇತಿಹಾಸ, ಮಂಗಲಗಿ ನನ್ನಾಸಾಬ ಮೊದಲಾದ ಮುಸ್ಲಿಂ ಹಾಡುಗಾರರಿಗೆ ಹಸನನದೇ ಪ್ರೇರಣೆ ಪ್ರೋತ್ಸಾಹ. ಈ ದೃಷ್ಟಿಯಿಂದ ಹಸನನ ಶಿಷ್ಯರ ಫೌಜು ಮಾಡಿದ ಕನ್ನಡ ಸೇವೆ ಎಂದೂ ಸ್ಮರಿಸುವಂಥದು.

ಹಸನನ ತಂದೆ ಮಹಮ್ಮದಶಾ, ಬೇಗ ತೀರಿಕೊಂಡ. ತಾಯಿ ಇಮಾಂಬಿ ಮಗನ ಪೋಷಣೆಗೆ ಕಷ್ಟಪಡುತ್ತಿರುವಾಗ, ನೆರವಿಗೆ ಬಂದ ಸೋದರ ಮಾವ, ಒಡ್ಡೊಡಗಿಯ ಇಬ್ರಾಹಿಮಶಾ. ಇವನು ಒಳ್ಳೆಯ ಲಾವಣಿಕಾರ. ತಾಯಿ ಅವನನ್ನು ಓದಿಸಬೇಕೆಂದರೂ, ಹಾಡಿನ ನಾದಕ್ಕೆ ಬಿದ್ದ ಹಸನ ನಾಲ್ಕನೆಯ ಇತ್ತೆಯಲ್ಲಿದ್ದಾಗಲೇ ಶಾಲೆ ಬಿಟ್ಟ. ತಾಯಿಗೆ ಎಲ್ಲಿಲ್ಲದ ನಿರಾಶೆ. ಬಸವನ ಬಾಗೇವಾಡಿ ಮೊದಲಾಗಿ ಹಲವಾರು ಶರಣ ಸಂಸ್ಕೃತಿಯ ಊರುಗಳಿಂದ ಸುತ್ತುವರಿದ ಈ ಬೀಬೀ ಇಂಗಳಗಿ, ಬಹು ಸಂಖ್ಯಾತ ಮುಸ್ಲಿಂರಿಂದ ತುಂಬಿದ್ದರೂ, ಬದುಕೆಲ್ಲ ಶರಣರ ಪ್ರಭಾವದ್ದೇ. ಹಸನ ಮಠಮಾನ್ಯ ಸ್ವಾಮಿ

ಸಂಪರ್ಕದಲ್ಲೇ ಬೆಳೆದವ. ವೀರಶೈವರ ಸಂಸ್ಕಾರದಲ್ಲೇ ಉಳಿದವ. ಇಂಗಳಗಿ ಹೆಸರಿನ ಊರುಗಳು ನಾಲ್ಕೈದು. ಈ ಇಂಗಳಗಿ ಆದಿಲಶಹನ ಒಬ್ಬ ಹೆಂಡತಿಯ ಊರಾದ ಕಾರಣ, ಇದನ್ನು ಬೀಬೀ ಇಂಗಳಗಿ ಎಂದೇ ಜನ ಗುರುತಿಸುತ್ತಿರುವುದರಿಂದ ಇದು ಬೀಬೀ ಇಂಗಳಗಿ ಆಗಿತ್ತು. ಹಸನ ತನ್ನ ಹಾಡಿನ ಸಾಧನೆಯಿಂದ ಇದನ್ನು 'ಗೀಗೀ ಇಂಗಳಗಿ'ಯಾಗಿಸಿದ್ದು ಅವನ ಸಾರ್ಥಕ ಬದುಕಿಗೆ ಸಾಕ್ಷಿ.

ನಾನು, ನನ್ನ ವಿದ್ಯಾರ್ಥಿ ಡಾ. ಕೋಟ್ಯಾಳ ಅವರ ಜೊತೆಗೂಡಿ ಕಾಲು ಶತಮಾನದ ಹಿಂದೆ ಸಂಗ್ರಹಿಸಿದ ವಿಜಾಪುರ ಜಿಲ್ಲೆಯ ಗೀಗೀ ಪದಗಳ ಮೊದಲ ಸಂಪುಟ ಜಾನಪದ ಅಕಾಡಮಿಯಿಂದ ಹೊರಬರುವ ಹಂತದಲ್ಲಿದೆ. 'ಬೀಬೀ ಇಂಗಳಗಿ ಹಸನಸಾಬನ ಗೀಗೀ ಪದಗಳು' ಅಕಾಡಮಿಯಿಂದ ಪ್ರಕಟನೆಗೆ ಸ್ವೀಕೃತವಾಗಿ ವರ್ಷಗಳೇ ಆಗಿವೆ. ಈ ಎರಡನೆಯ ಸಂಪುಟ 'ಬೀಬೀ ಇಂಗಳಗಿ ಪರಿಸರದ ಗೀಗೀ ಪದಗಳು' ಅದೂ ಅಕಾಡಮಿಯಿಂದ ಸ್ವೀಕೃತವಾಗಿದೆ. ಈ ಮಧ್ಯೆ ಮೂರನೆಯ ಸಂಪುಟ 'ಗುಡುಲಾಲ ಮತ್ತು ಕಲ್ಲಪ್ಪನ ಗೀಗೀ ಪದಗಳು' ಮುಕ್ತ ವಿಶ್ವವಿದ್ಯಾಲಯ ಮೈಸೂರು ಪ್ರಸಾರಾಂಗದಿಂದ ಪ್ರಕಟವಾಗಿದೆ. ವಿಜಾಪುರದ ಪಶ್ಚಿಮಭಾಗ ಮತ್ತು ಬೆಳಗಾಂವ ಜಿಲ್ಲೆಯ ಗೀಗೀ ಪದಗಳು 'ಕೃಷ್ಣಾತೀರದ ಗೀಗೀ ಪದಗಳು' ನಾಲ್ಕನೆಯ ಸಂಪುಟ ಪ್ರಕಟನೆಯ ಸಿದ್ಧತೆಯಲ್ಲಿದೆ? ಹೀಗೆ ನಾಲ್ಕು ಸಂಪುಟಗಳಲ್ಲಿ ಸಿಕ್ಕಷ್ಟನ್ನೆಲ್ಲ ಹೊರತರುವ ಪ್ರಯತ್ನ ನಮ್ಮದು.

ಇಷ್ಟಾಗಿಯೂ ವಿಜಾಪುರ ಜಿಲ್ಲೆಯ ಸಮಗ್ರ ಗೀಗೀ ಪದಗಳನ್ನು ಒಂದೂ ಉಳಿಯದಂತೆ ಸಂಗ್ರಹಿಸಿದ್ದೇವೆ ಎಂಬು ಹಮ್ಮು ನಮ್ಮದಲ್ಲ. ಹಾಗೆ ಹೇಳುವ ಧೈರ್ಯ ಯಾವತ್ತೂ ಮಾಡಲಾಗದು. ಎಷ್ಟೋ ಹಾಡುಗಳು ಪದಕಾರರ ಜೊತೆಗೇ ಸತ್ತು ಹೋಗಿವೆ. ಅದೆಷ್ಟೋ ಹಾಡುಗಳು ನಮ್ಮ ಗಮನಕ್ಕೆ ಬರದೇ ಹೋಗಿರುವ ಸಾಧ್ಯತೆಯೂ ಇದೆ. ಒಟ್ಟಿನಲ್ಲಿ ನಮ್ಮ ಪ್ರಯತ್ನಕ್ಕೆ ಸಿಕ್ಕಷ್ಟನ್ನೆಲ್ಲ ಪ್ರಾಮಾಣಿಕವಾಗಿ ಸಂಗ್ರಹಿಸಿ ಈ ಮೂರೂ ಸಂಪುಟಗಳನ್ನು ಸಿದ್ಧಪಡಿಸಿದ್ದೇವೆ.

ಬೀಬೀ ಇಂಗಳಗಿ ಹಸನನ ಶಿಷ್ಯವರ್ಗ ದೊಡ್ಡದು. ಅವನ ಪರಿಸರದಲ್ಲಿ ನಮಗೀಗ ಉಪಲಬ್ಧವಾದುವು ಸುಮಾರು ಇಪ್ಪತ್ತೈದರಷ್ಟು ಹೆಸರುಗಳು ಮಾತ್ರ. ಅದರಲ್ಲಿ ಮುಕ್ಕಾಲುಭಾಗ ಮುಸ್ಲಿಂರು, ಮುಕ್ಕಾಲಕ್ಕೂ ಅಧಿಕ ಸಂಖ್ಯೆಯವರು ನಾಗೇಶಿ ಹಾಡುಗಾರರು, ಇವರಲ್ಲಿ ಕೇವಲ ಕೆಲವರು ಮಾತ್ರ ಪದ

ರಚನಾಕಾರರಾಗಿದ್ದು ಉಳಿದವರು ಹಸನ ಮತ್ತು ಶೇಖ ಮುಕ್ತಮಸಾನ ಹಾಡುಗಳನ್ನೇ ಹಾಡುತ್ತಿದ್ದರು. ಪ್ರತಿಯೊಬ್ಬರು ತಮ್ಮ ಹಾಡಿನ ಸಂಖ್ಯೆಯನ್ನು ನೂರಕ್ಕೂ ಮಿಗಿಲಾಗಿ ಹೇಳುತ್ತಿದ್ದರಾದರೂ, ನಮಗೆ ಉಪಲಬ್ಧವಾದುವು ಒಟ್ಟು ನೂರರ ಆಸುಪಾಸು. ಅವು ನಮಗೆ ಹಾಡುಗಾರರ ಮುಖಾಂತರ ಸಂಗ್ರಹಿತವಾದ ಕಾರಣ ರಚನಾಶುದ್ಧಿ ಇರುವ ಸಾಧ್ಯತೆ ತೀರ ಕಡಿಮೆ. ಇನ್ನು ಕೆಲವು ಎಂದೊ ಬರೆದಿಟ್ಟುಕೊಂಡ ಅಶುದ್ಧ ಬರಹದಲ್ಲಿ, ಬರೆದಿಡುವ ಸೌಲಭ್ಯ, ಓದುವ ಜನರಿರದಾಗ ಬಾಯಿಂದ ಬಾಯಿಗೆ ಬಂದು ಉಳಿದದ್ದು ತೀರ ಕಡಿಮೆ. ಮೂಲದ ಅಲ್ಪಸ್ವಲ್ಪ ಹಾಡಿನಲ್ಲಿ ತಮ್ಮ ಕೈಗಂಟು ಸೇರಿಸಿ ಹಾಡುತ್ತ ಬಂದವರೇ ಬಹಳಷ್ಟು ಹಾಡುಗಾರರು.

ರಚನಾರೂಪ

ಗೀಗೀ ಹಾಡಿಕೆ ಸ್ತುತಿಯಿಂದ ಪ್ರಾರಂಭವಾಗುತ್ತದೆ. ಅದು ಹಾಡುಗಾರನ ದೈವೀ ಪ್ರಾರ್ಥನೆ. ಪ್ರತಿ ಹಾಡುಗಾರ ತನ್ನ ಆರಾಧ್ಯದೈವವನ್ನು ಸ್ತುತಿಸುತ್ತಾನೆ. ಗಣೇಶ, ಸರಸ್ವತಿ ಪ್ರಮುಖರು. 'ಲಾವಣಿ ಗೀಗೀ' ಪದಗಳ ರಚನಾ ಕ್ರಿಯೆಯಲ್ಲಿ ಹೇಳಿಕೊಳ್ಳಬಹುದಾದಂಥ ವ್ಯತ್ಯಾಸಗಳೇನೂ ಇಲ್ಲ, 'ಪಲ್ಲ', 'ಕೂಡುಪಲ್ಲ' 'ಚೌಕು'ಗಳಲ್ಲಿ ಎರಡೂ ರೂಪದಾಳುತ್ತವೆ. ಹಾಡಿನ ವಿಷಯ ವ್ಯಾಪ್ತಿಗನುಗುಣವಾಗಿ ಚೌಕುಗಳ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಯಾಗುತ್ತದೆ. ಇನ್ನು ಹಾಡುಗಾರನ ಸೌಲಭ್ಯಕ್ಕಾಗಿ 'ಏರು' 'ಇಳುವು' 'ದುಮಾಲಿ' ಎಂಬ ಮಾರ್ಗ ನಿರ್ದೇಶನ ಹಾಡುಗಾರನಿಗೆ ಸೂಚನೆಗಳೆಂಬಂತೆ ಉಕ್ತವಾಗಿರುತ್ತವೆ. ಇನ್ನು ಛಂದಸ್ಸು ಹಾಡಿಕೆಯಲ್ಲಿದೆಯಲ್ಲದೆ, ಹಾಡಿನಲ್ಲಿಲ್ಲ. ಅಂತ್ಯ ಪ್ರಾಸದ ಸೊಗಸು ಬಹಳಷ್ಟು ಕಡೆ ಇರುವುದು ಹಾಡುಗಾರನ ನೈಪುಣ್ಯಕ್ಕೆ ಸಾಕ್ಷಿಯಾಗಿರುತ್ತದೆ.

ಪ್ರತಿ ಹಾಡಿನ ಆರಂಭದಲ್ಲೊಂದು 'ಸಖಿ'. ಒಂದೊ ಎರಡು ಪದ್ಯದ್ದು. ಹಾಡಿನ ಕೊನೆಗೆ 'ಖ್ಯಾಲಿ', ಮೂರ್ನಾಲ್ಕು ಪದ್ಯದ ಗಾತ್ರದ್ದು. 'ಸಖಿ' ಪದಾರಂಭವನ್ನು ಆಕರ್ಷಕಗೊಳಿಸುವ ಉದ್ದೇಶದಿಂದ ಕೂಡಿದ್ದರೆ, 'ಖ್ಯಾಲಿ' ವಿಡಂಬನೆ ಮಾಡುವಂತಿರುತ್ತದೆ. ಈ ಪದ್ಯಗಳು ಕಾವ್ಯಮಯವಾಗಿದ್ದು ಹಾಡಿಕೆಯ ಆರಂಭ-ಅಂತ್ಯವನ್ನು ಸೂಚಿಸುವಂತಿದೆ.

ಹಲವಾರು ಜನ ಸೇರಲನುಕೂಲವಾದ ಬಯಲಿನ ಒಂದು ಕೊನೆಯಲ್ಲಿ, ವಿಶೇಷವಾಗಿ ಪೂರ್ವಾಭಿಮುಖವಾಗಿ, ಹಲಗೆಗಳ ಪುಟ್ಟ ಅಟ್ಟ. ಅದೇ ವೇದಿಕೆ.

ಬೆಳಕಿಗಾಗಿ ಮೊದಮೊದಲು ಕೊಬ್ಬರಿ ಚುಚ್ಚಿದ ಕಕ್ಕಡ ಉರಿಸುತ್ತಿದ್ದರೆ, ಬರಬರುತ್ತ ಎಣ್ಣೆಯ ಹಿಲಾಲು. ಅನಂತರ 'ಗ್ಯಾಸ್' (ಪೆಟ್ರೋಮ್ಯಾಕ್ಸ್) ಉರಿಸುತ್ತಿದ್ದರು. ಮೇಳದಲ್ಲಿ ಮೂರೇ ಮೂರು ಜನ. ಡಪ್ಪು–ತಾಳ ತುಂತುಣಿ ವಾದ್ಯಗಳು ಅವರ ಕೈಯಲ್ಲಿ. ಡಪ್ಪು ಬಾರಿಸುವ ಪ್ರಮುಖ ಹಾಡುಗಾರನಿಗೆ ಹಾಡು ಪೂರ್ಣ ಬಾಯಿ ಪಾಠ. ಪ್ರಸಂಗಾವಧಾನ ಅಲ್ಲಲ್ಲಿ ಬದಲಾವಣೆ ಮಾಡಿಕೊಳ್ಳುವ ಸ್ವಾತಂತ್ರ್ಯ ಅವನಿಗೆ. ತಾಳ, ತುಂತುಣಿಯ ಹಿಮ್ಮೇಳದವರು ಪಲ್ಲವಿಯನ್ನು ಪುನರುಕ್ತಗೊಳಿಸುತ್ತ, 'ಗಿಯಗಿಯಗೀ' ಎಂದು ರಾಗಾಲಾಪ ಮಾಡುತ್ತ, ನಾಡುನಡುವೆ ಹಾಸ್ಯ, ವಿಡಂಬನೆಯ ಚಟಾಕಿ ಸಿಡಿಸುತ್ತ ಜನರನ್ನು ಎಚ್ಚರಿಸುತ್ತಿದ್ದರು. ಈ ಹಾಡುಗಳು ರಾತ್ರಿ ಹತ್ತು ಗಂಟೆಯಿಂದ ಬೆಳಗಿನ ಆರು ಗಂಟೆಯವರೆಗೆ ಸಾಮಾನ್ಯವಾಗಿ ನಡೆಯುತ್ತಿದ್ದರೂ ವಿಶೇಷ ಸಂದರ್ಭಗಳಲ್ಲಿ 'ಸವಾಲ್–ಜವಾಬ' ಸ್ಪರ್ಧೆ ಏರ್ಪಟ್ಟು, ಎರಡು ಮೂರು ರಾತ್ರಿ ಈ ಹಾಡಿಕೆ 'ನಡೆದುದೂ ಉಂಟು !

ಇನ್ನೊಂದು ವಿಶೇಷವೆಂದರೆ ಗೀಗೀ ಪದದ ಮೂಲದ ಸ್ವರೂಪ ಹಾಡುಗಾರನ ಜಾಣ್ಮೆ, ಲೋಕಾನುಭವಕ್ಕನುಗುಣವಾಗಿ ಪ್ರಸಂಗಾನುಸಾರ ಬದಲಾಗುತ್ತಲೇ ಹೋಗುತ್ತದೆ. ಪದವಿಟ್ಟಳಿಸದ ಅಗ್ಗಳಿಕೆ ಇವರದಲ್ಲ; ಅದರಲ್ಲಿ ಸಮಕಾಲೀನ ವಿಷಯ, ವಿಚಾರ ಸೇರಿಸಿ ಹಾಡನ್ನು ಹೆಚ್ಚು ರಂಜನೀಯವಾಗಿಸುವ ಹೆಗ್ಗಳಿಕೆ ಇವರದು. ಅದಕ್ಕೇ ಹೇಳುವುದು 'ಹರಿವ ತೊರೆಯಂತೆ ಬದಲಾಗುತ್ತ ಸದಾ ಚಲನಶೀಲವಾಗಿರುವುದೇ ಜಾನಪದದ ಜಾಯಮಾನ' ಎಂದು.

ಗೀಗೀ ಪದ ಮತ್ತು ವಸ್ತು

ವಿಜಾಪುರ ಜಿಲ್ಲೆಯ ಪಶ್ಚಿಮ ಭಾಗ ಮತ್ತು ಬೆಳಗಾಂವ ಜಿಲ್ಲೆಗಳಲ್ಲಿ ತೀರ ದಟ್ಟವಾಗಿ ಹರಡಿಕೊಂಡಿದ್ದ ಲಾವಣಿಯನ್ನು ಹಿಂದೆ ಹಾಕಿ ಈ ಗೀಗೀ ಪ್ರಖ್ಯಾತವಾಗಲು ಪ್ರಮುಖ ಕಾರಣ ಅದರ ವಸ್ತು. ಗೀಗೀ ಹಾಡಿನ ವಸ್ತು ಅತೀ ಸಾಮಾಜಿಕವೆನ್ನುವುದಕ್ಕಿಂತ ತೀರ ಸಾಂಸಾರಿಕವೆನ್ನುವುದೇ ಮೇಲು, ಹೆಣ್ಣು–ಗಂಡಿನ ಮೇಲು–ಕೀಳು ಭಾವ ಸಂಘರ್ಷದಿಂದಾಗಿ ಎಂದೂ ಸಂಸಾರ ಸಂಗ್ರಾಮವಾದುದೇ ಹೆಚ್ಚು. ಇದನ್ನು ಶಿವ–ಶಕ್ತಿ, ಪ್ರಕೃತಿ–ಪರಮೇಶ್ವರ, ಭೂಮಿ–ಆಕಾಶಗಳ ನಡುವಿನ ನಿರಂತರ ಪ್ರಕ್ರಿಯೆಯಂತೆ ಪರಿಭಾವಿಸಿದ್ದೊಂದು ವಿಶೇಷ. ಹರದೇಶಿ–ನಾಗೇಶಿ ಎರಡೂ ಪಂಗಡಗಳು ಸ್ಪರ್ಧಾತ್ಮಕವಾಗಿ ರೂಪುಗೊಂಡರೂ,

ಕೊನೆಗೆ ಸರಿಸಮಾನತೆಯ ಸಂಸಾರ ಸಾಮರಸ್ಯಕ್ಕೇ ಬಂದು ನಿಲ್ಲುತ್ತವೆ. 'ಗಂಡ-ಹೆಂಡಿರು ಒಂದಾದ ಬಳಿಕ ನಂದೇನೈತೋ ಮಲ್ಲಯ್ಯಾ' ಎನ್ನುವ ಸಿದ್ಧಾಂತವೇ ಅಲ್ಲಿ ಪ್ರಮುಖವಾಗುತ್ತದೆ. 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಂಗ' ಇದು ಜನಪದರದೇ ವಿಚಾರ. ವಿರಸದ ಕೊನೆ ಸರಸ.

ನಾಗೇಶಿ ಪಂಥದವರು ಜನರಂಜನೆಗಾಗಿ ಶೃಂಗಾರಾತಿಶಯದ ರಂಗು ತುಂಬಿ, ಸಮಾಜದಲ್ಲಿ ಲೈಂಗಿಕ ಅಧಃಪತನದಿಂದಾಗುವ ಅನಾಹುತಗಳನ್ನು ನಿಯಂತ್ರಿಸಲು, ರಾವಣ ದುರ್ಯೋಧನರ ಬದುಕನ್ನು ಉಲ್ಲೇಖಿಸಿ ನೀತಿಬೋಧೆ ಮಾಡಿದ್ದಾರೆ. ಅದರಂತೆ ಸ್ತ್ರೀಯರು ತಮ್ಮ ಪಾತಿವ್ರತ್ಯದ ಬಲದಿಂದ ಗಂಡಿನ ಕಣ್ಣು ತೆರೆಯಿಸಿದ ಪೌರಾಣಿಕ ಚರಿತ್ರೆಗಳನ್ನು ಗೀಗೀ ಹಾಡಾಗಿಸಿದ ಹಿರಿಮೆಯನ್ನು ಮೆರೆದಿದ್ದಾರೆ. 'ಸತಿ ಅನಸೂಯಾ', 'ಸತಿ ಸಾವಿತ್ರಿ', 'ನೀಲಾವತಿ' 'ಕಡ್ಲಿಮಟ್ಟಿ ಕಾಶೀಬಾಯಿ', 'ಕೋಳೂರು ಕೊಡಗೂಸು' ಮೊದಲಾದ ಪೌರಾಣಿಕ, ಸಾಮಾಜಿಕ ಗೀಗೀ ಹಾಡುಗಳು ಹೇರಳವಾಗಿವೆ.

ಹರದೇಶಿ ಹಾಡುಗಾರರೂ ಸಮಾಜದಲ್ಲಿ ಸತ್ಯ ನ್ಯಾಯ ಸಾತ್ವಿಕತೆ ಭಕ್ತಿಯನ್ನು ಪ್ರತಿಪಾದಿಸಿದ ಹಲವಾರು ಹಾಡುಗಳನ್ನು ಹಾಡಿ, ಸಾಮಾಜಿಕ ಸ್ವಾಸ್ಥ್ಯಗಾಗಿ ಮಹತ್ಸಾಧನೆ ಮಾಡಿದ್ದಾರೆ. ಸತ್ಯಹರಿಶ್ಚಂದ್ರ, ಬಸವೇಶ್ವರ, ಕಬೀರದಾಸ, ಬಂದೇನವಾಜರ ಚರಿತ್ರೆಗಳನ್ನು ಭಕ್ತಿ ತುಂಬಿ ಹಾಡಿದ್ದಾರೆ. ಅದಲ್ಲದೆ ಸಮಕಾಲೀನ ಸಮಾಜದಲ್ಲಿ ಮಾನವೀಯ ಗುಣಗಳನ್ನು ಮೆರೆದ ಸಾರ್ಥಕ ಬದುಕಿನ ತಾಳೀಕೋಟೆ ಪರಪ್ಪ, ಬಾಗಲಕೋಟೆಯ ಹುಂಡೇಕಾರ ಮೊದಲಾದವರನ್ನು ಚರಿತ್ರೆಯ ಗದ್ದುಗೆಗೇರಿಸಿ, ಗುಣಗೌರವ ಮೆರೆದಿದ್ದಾರೆ.

ಇಲ್ಲಿ ಒಂದು ಮಾತು ಗಮನಾರ್ಹ. ಹೆಣ್ಣನ್ನು ಸಮಾಜ ನಿರಂತರ ಶೋಷಣೆಗೆ ಒಳಪಡಿಸುತ್ತ ಬಂದುದನ್ನು ಇಂದು ಆಧುನಿಕ ಶಿಷ್ಟ ಸಾಹಿತ್ಯ ಬಲವಾಗಿ ವಿರೋಧಿಸುತ್ತದೆ. ಗಂಡರೈವರು ಒಬ್ಬ ಹೆಂಡತಿಯ ಮಾನ ಕಾಪಾಡಲಿಕ್ಕಾಗದ್ದನ್ನು ಕವಿ ಕುಮಾರವ್ಯಾಸನೂ ಖಂಡಿಸಿದ್ದಾನೆ. ಇಂದು ಸರಕಾರ ಮಹಿಳೆಯರ ಸಬಲೀಕರಣದ ಮಾತನ್ನಾಡುತ್ತಿದ್ದರೆ, ಹೆಣ್ಣಿನ ಶೋಷಣೆಯನ್ನು ವಿರೋಧಿಸುವ ಚಿಂತಕರು, ಒಂದೂವರೆ ಶತಮಾನದ ಹಿಂದಿನಿಂದ ಜನಪದ ಸಾಹಿತಿಗಳು ಹೆಣ್ಣಿನ ಮೇಲ್ಮೆಯನ್ನು ಸಾರಿ, ಗಂಡು-ಹೆಣ್ಣಿನ ಸಮಾನತೆಗಾಗಿ ವಾದಿಸಿದ್ದನ್ನು ಗುರುತಿಸದಿರುವುದು ವಿಚಿತ್ರ. ವಿಷಾದನೀಯ. 'ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂದು ಶರಣರು ಸಾರಿದ್ದನ್ನು ಸಾಮಾಜಿಕವಾಗಿ ಹೊಗಳಿ ಹಾಡಿದ 'ಗೀಗೀ' ಜನಪದ ಸಾಹಿತ್ಯದ ಶ್ರೇಷ್ಠತೆಗೊಂದು ಗರಿ.

ಗೀಗೀ ಪದಗಳು ಜನಪದ ರಂಜನೆಯ ಜೊತೆಗೆ, ಲೌಕಿಕ ನೀತಿ, ದೈವೀಭಕ್ತಿ, ಆಧ್ಯಾತ್ಮದ ಅರಿವು, ಸಾಮಾಜಿಕ ಸ್ವಾಸ್ಥ್ಯ ಕುರಿತಂತೆ ಅನಕ್ಷರಸ್ಥರಿಗೆ ಸಾಕಷ್ಟು ಸಭ್ಯತೆಯ ಸಂಸ್ಕಾರ ನೀಡುವಲ್ಲಿ ಯಶಸ್ವಿಯಾಗಿವೆ. ಜನಮನದ ಶುದ್ಧೀಕರಣಕ್ಕೆ ಅವುಗಳ ಕೊಡುಗೆ ಅಪಾರ. ಕೆಲವು ಹಾಡುಗಳು ಅನುಭಾವದೆತ್ತರಕ್ಕೇರಿ ಬ್ರಹ್ಮಾಂಡ–ಪಿಂಡಾಂಡಗಳ ರಚನೆಯ ವೈಚಾರಿಕ ನೆಲೆಯನ್ನೇ ನಿರ್ಮಿಸುವಂತಿವೆ. ಹೆಣ್ಣು–ಗಂಡನ್ನು ಮಣ್ಣು–ಮಳೆ, ಕತ್ತಲು–ಬೆಳಕು, ಭೂಮಿ–ಬೀಜಗಳ ಸಾಂಕೇತಿಕತೆಯ ಹಿನ್ನಲೆಯಲ್ಲಿ ಚರ್ಚಿಸಿದ ಜಾಣ್ಮೆ ಅವರದು. ಅಲ್ಲಲ್ಲಿ ಹಾಸ್ಯ, ವಿಡಂಬನೆ, ವ್ಯಂಗ್ಯದ ಸನ್ನಿವೇಶಗಳನ್ನು ಸೃಷ್ಟಿಸಿ ಈ ಹಾಡುಗಳು ಹೆಚ್ಚು ಆಕರ್ಷಕ, ಪರಿಣಾಮಕಾರಿ, ಪ್ರಯೋಜನ ಪೂರ್ಣವಾಗುವಂತೆ ನೋಡಿಕೊಂಡಿದ್ದಾರೆ. ಅಲ್ಲಲ್ಲಿ ಶೃಂಗಾರವಂತೂ ಸೋರಿ ಮಡುಗಟ್ಟಿದಂತಿದೆ.

"ಕಾಜಿನ ಗೊಂಬಿಯಂತಾಹುಡಗಿ ಹೊಂಟಿ ಮೋಜಮಾಡಿ ॥
ಬಿಟ್ಟಂಗಾತು ಮೇಲ್ಗಾಡಿ ।
ಭಾಳಮಂದಿ ನಿಂತ ನೋಡಿ ।
ಮಾತಾಡತಾರ ಇಕಿ ಜೋಡಿ ।
ಎಲ್ಲೆಲ್ಲಿಯೂ ಇಲ್ಲ ಬಂದೆ ಹುಡುಕಾಡಿ
ಸುಲಿಹಲ್ಗಿ ಹಚ್ಚಿ ಹಲ್ಪುಡಿ
ಲೋಕದಾಗ ಇಂಥಾ ರೂಪದಾಕಿ ಹುಟ್ಟಿಸಿದ ಬ್ರಹ್ಮ ಎಂಥಾ ಕಿಡಿಗೇಡಿ ॥

....

ಎಳಿಬಾಳಿದಿಂಡಿನಂಗ ಅಕಿ ತೋಳ ತೊಡಿ ।
ತುಟಿ ಸಣ್ಣ ದೀವಿಗಿ ಕುಡಿ ।
ನಲ್ಲ ಕಂಡಂಗ ಕಾಜಿನ ಬುರುಡಿ ।
ಸೊಕ್ಕಿನಿಂದ ಬೆಳೆದ ಸವತಿ ಮಿಡಿ ।
ಬಣ್ಣ ಲಿಂಬಿ ಹಣ್ಣಿನ ಪುಡಿ ।
ತಿಳಿ ಹೆಣ್ಣ ಅರಗಿಳಿ ನುಡಿ ।
ಸಂಗ ಮಾಡಬೇಕಂತ ದಿಂಗಬಡದ ನಿಂತೇನು ।
ಹ್ಯಾಂಗದ ಹೇಳ ನಿನ್ನ ನಡಿ ॥

ಹೀಗೇ ಹರಿಯುತ್ತದೆ ನಿರರ್ಗಳ ಶೃಂಗಾರ ಕಾವ್ಯ.

ಅಂತ್ಯಪ್ರಾಸದ ಈ ಪುಟ್ಟ ಪಾದಗಳ ಕಾವ್ಯದ ನಡೆ ಶಿಷ್ಟ ಕಾವ್ಯವನ್ನು ಮರೆಯಿಸುವಂತಿದೆ. ಅಳ್ಳು ಹುರಿದಂತೆ ಪುಟಿ ಪುಟಿದೇಳುವ ಶಬ್ದದ ಸೊಗಸು,

ಡಪ್ಪು ತಾಳ ತುಂತುನಿಗಳ ಸ್ವರ ಮೇಳದ ನಿನಾದ, ಕೇಳುಗರನ್ನು ಹುಚ್ಚೆದ್ದು ಭೂಮಿಗೆ ಬೀಳಿಸದಿರವು.

ಗೀಗೀಕಾರರು ವಿಶೇಷವಾಗಿ ಇಸ್ಲಾಂಧರ್ಮೀಯರಾದರೂ ಸ್ವಾಮಿಗಳ ಸಾನ್ನಿಧ್ಯದಲ್ಲಿ ಪುರಾಣ ಪ್ರವಚನಗಳ ಸಂಸ್ಕಾರ ಪಡೆದವರಾಗಿದ್ದರೆಂಬುದನ್ನು ಹೇಳಿಯಾಗಿದೆ. ಶರಣ ಸಂಸ್ಕೃತಿಯ ಸಂಪರ್ಕದಲ್ಲಿದ್ದು, ಬಹುಸಂಖ್ಯಾತ ಸಮಾಜದ ರೀತಿ–ನೀತಿ ತತ್ವಸಿದ್ಧಾಂತಗಳನ್ನು ಅನುಸರಿಸಿ, ಅನುಭವಿಸಿ ಅನುಭಾವದ ಚಿಂತನಶೀಲರಾಗಿದ್ದರೆಂಬುದಕ್ಕೆ ಅವರ ಹಾಡುಗಳೇ ಸಾಕ್ಷಿ, ಆ ದೇವ, ಈ ದೇವ ಮಾದೇವನೆನ್ನದೆ, ಎಲ್ಲ ದೇವರಿಗೂ ಭಕ್ತಿದುಂಬಿ ಬಾಗಿದವರು. ಮಂದಿರ–ಮಜಾರ ಎರಡಕ್ಕೂ ನಿಷ್ಠರಾಗಿ ಬಹುಜನ ಸಮಾಜದಲ್ಲಿ ಬೆರೆತು, ಸ್ವಯಂ ಸೂಫಿಗಳಂತೆ ಬದುಕಿದವರು. ಹಸನಸಾಬ ಬರೆದ 'ಲಿಂಗದ ಪದ' ಲಿಂಗವಂತರನ್ನು ನಾಚಿಸುವಂತಿದೆ.

"ನಿತ್ಯಲಿಂಗ ಪೂಜಾದಲ್ಲಿ ಚಿತ್ತ ಎರಡ ಆಗಬಾರದು ।
ಮತ್ಯಾಕ ಬೇಕವಗ ತೀರ್ಥಯಾತರಾ ॥"

ಲಿಂಗದಲ್ಲಿ ಚಿತ್ತಲೀನವಾಗುವ ಸ್ಥಿತಿಯೇ ಪೂಜೆ. ಸ್ಥಾವರಗಳ ತೀರ್ಥಯಾತ್ರೆ ನಿಷೇಧದ ವಿಚಾರ, ಹಸನನ ಅನುಭಾವದ ಎತ್ತರವನ್ನೇ ಸಾರುತ್ತವೆ. ಇಲ್ಲಿ ಔಪಚಾರಿಕವಾಗಿ ಪ್ರತಿಪಾದಿಸುವ ಧರ್ಮಸಾಮರಸ್ಯದ ಮಾತೇ ಇಲ್ಲ. ಯಾಕೆಂದರೆ ಮಾನವರ ಮನಸ್ಸಾಮರಸ್ಯವೇ ಅವರ ಧರ್ಮದ ಗುರಿಯಾಗಿತ್ತು. ಕೋರೆಳ್ಳಿಯ ಮೌಲಾಲಿ ಎನ್ನುವ ಹಾಡುಗಾರ ಕಬ್ಬಲಿಗ, ಹಿಂದೂ ಅವನ ತಾಯಿ 'ಮೌಲಾಲಿ'ಯ ಮಜಾರಕ್ಕೆ ನಡೆದುಕೊಂಡು ಹಡೆದಿದ್ದಳಂತೆ ! ಹೀಗೆ ಹಿಂದೂ–ಮುಸ್ಲಿಂ ಎರಡೂ ಒಂದೆಂಬ ಸಂದೇಶ ಈ ಗೀಗೀ ಪದಗಳ ಮೂಲಸೂತ್ರವೆಂಬಂತೆ ಬದುಕಿ ತೋರಿಸಿದವರು. ಹಾಡಿನ ಮೇಳಗಳಲ್ಲಿಯೂ ಮಲ್ಲಹಸನ, ಹಸನ ಮೊದಲಾದ ಜೋಡಿ ಹೆಸರುಗಳನ್ನು ಅವರೇ ಉಲ್ಲೇಖಿಸಿದ್ದಾರೆ.

ಹೀಗೆ ಗೀಗೀ ಕಾರರು ಲೌಕಿಕಾನುಭವದ ಜೊತೆಗೆ ಪುರಾಣ, ವಚನೋಕ್ತ ಎಷ್ಟೋ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಅವರ ಕುರಿತೋದದ ಪಾಂಡಿತ್ಯ ಗೀಗೀ ಪದಗಳಲ್ಲಿ ಎಲ್ಲೆಲ್ಲೂ ಚಲ್ಲುವರಿದು ಅವರ ಜೀವನಾಸಕ್ತಿಯನ್ನು ಪ್ರದರ್ಶಿಸುತ್ತದೆ. ಅದಕ್ಕೇ ಅವರು 'ಪುಟಾಣಿ ತಿನ್ನು ಹುಡಗೂರಿಗೆಲ್ಲಾ। ಏನಗೊತ್ತ ಹಾಡಿಕಿ ಮಜಲಾ। ಸುದ್ದ ಹಾಡಂದರ ಹ್ಯಾಂಗ ಹಾಡತಾವ ..... ?। ಎಂದು

ಕೇಳಿದ್ದಾರೆ. ಗೀಗೀ ಹಾಡಿಕಿಗೆ ಅನುಭವಮೂಲವಾದ ಲೋಕ ಸಂಪರ್ಕದ ಜೊತೆ, ಕಲಾತ್ಮಕ ಅಭಿವ್ಯಕ್ತಿಯೂ ಅವಶ್ಯವೆನ್ನುತ್ತಾರೆ.

"ಕುಣಿಬ್ಯಾಡ ಟಣ್ ಠಣಣ । ಡಪ್ಪಬಾರ‍್ಸಿ ಡಣ್ ಢಣಣ
ಸಪ್ಪಳ ಮಾಡಿ ಝುಣ್ ಝುಣಣ ।
ಹಾಡುದಕ ಬಂದೀ ಹೇಸಿ ॥"

ಹೀಗೆ ಶಬ್ದನಾದ, ವಾದ್ಯನಿನದ ಸಮ್ಮಿಳನಗೊಂಡು ಚೇತೋಹಾರಿ ವಾತಾವರಣ ಹುಟ್ಟಿಸುವ ಶಕ್ತಿ ಈ ಹಾಡುಗಾರಿಕೆಗಿದೆ.

ಹವ್ಯಾಸಿ ವೃತ್ತಿ

ಮೊದ ಮೊದಲು ಲಾವಣಿ, ಗೀಗೀ ಮೇಳಗಳು ಹವ್ಯಾಸಿಯಾಗಿಯೇ ರೂಪ ತಳೆದು, ಜಾತ್ರೆ, ಆರಾಧನೆಗಳಲ್ಲಿ ಹರಕೆ–ಭಕ್ತಿ, ಸೇವಾಭಾವನೆಯಿಂದ ಹಾಡಿಕೆ ಮಾಡುತ್ತಿದ್ದವು. ಆದರೆ 'ಬರಬರುತ್ತ ಜನಾಕರ್ಷಣೆಯಿಂದ ಬೇಡಿಕೆ ಅಧಿಕವಾಗಿ ಅವು ವೃತ್ತಿ ಮೇಳಗಳಾಗಿ ಪರಿವರ್ತನೆಗೊಂಡವು. ಊರೂರಿಗೆ ಹಾಡಿಕೆಯ ಬೇಡಿಕೆ ಹೆಚ್ಚಾಗಿ, ಜನ ಸಂಭಾವನೆಕೊಟ್ಟು ಕರೆಯಿಸಿಕೊಳ್ಳ ಹತ್ತಿದರು. ಒಂದೊಂದು ವರ್ಷ ಅಗಾವ ಆಮಂತ್ರಣದ ವೀಳ್ಯಕೊಟ್ಟು ಮೇಳಗಳನ್ನು ತಮ್ಮೂರಿಗೆ ಕಾಯ್ದಿರಿಸಿಕೊಳ್ಳುತ್ತಿದ್ದರು. ಸಂಭಾವನೆಯ ಜೊತೆಗೆ ಹಾಡಿಕೆಯ ಮೋಡಿಗೆ ಮರುಳಾದ ರಸಿಕರು ಹಾಡುಗಾರಿಕೆಗೆ ಬಕ್ಷೀಸು ಆಹೇರಿ ರೂಪದಲ್ಲಿ ಹಣಕೊಟ್ಟು ಗೌರವಿಸಿ ಪ್ರೋತ್ಸಾಹಿಸುತ್ತಿದ್ದರು. ಅಷ್ಟೇ ಅಲ್ಲದೆ ಕೆಲವು ಸಾವುಕಾರ ಶ್ರೀಮಂತರು ಹಾಡುಗಾರರಿಗೆ ಹತ್ತಿಪ್ಪತ್ತು ಎಕರೆಗಟ್ಟಲೆ ಭೂಮಿಯನ್ನೇ ಅವರ ಹೆಸರಿಗೆ ಹಚ್ಚಿಕೊಟ್ಟು ಅವರ ವೃತ್ತಿ ಪರಿಣತಿ ಹೆಚ್ಚಿಸಿಕೊಳ್ಳಲು ಅನುಕೂಲ ಮಾಡಿಕೊಟ್ಟ ಉದಾಹರಣೆಗಳೂ ಹಲವಿವೆ. ಇನ್ನು ಕೆಲವರು ತಮ್ಮ ಮಾವಿನ ತೋಪಿನಲ್ಲಿಯ ನಾಲ್ಕೈದು ಮಾವಿನಮರಗಳನ್ನು ಉಂಬಳಿಯಾಗಿ ನೀಡಿದ್ದೂ ಉಂಟು ! ಹೀಗೆ ಅಂದಿನ ಸಮಾಜ ಗೀಗೀ ಹಾಡುಗಾರರಿಗೆ, ಕುಸ್ತಿ ಪಟುಗಳಿಗೆ, ಅವರವರ ಕಲಾ ಬೆಳವಣಿಗೆ ನೀಡಿದ ಪ್ರೋತ್ಸಾಹವನ್ನು ಗಮನಿಸಿದರೆ ಅಂದಿನ ಸಮಕಾಲೀನ ಬದುಕಿನ ಸ್ವಾಸ್ಥ್ಯ, ಸಾಂಸ್ಕೃತಿಕ ಮಟ್ಟ ಎಷ್ಟೊಂದು ಹಿರಿದಾಗಿತ್ತೆಂಬುದೂ ಗಮನಾರ್ಹ.

ಹಾಡಿಕೆಯ ಹವ್ಯಾಸ, ವೃತ್ತಿಯಾಗಿ ಪರಿವರ್ತನೆಗೊಂಡೊಡನೆ, ಹಾಡಿಕೆಯ ಮೇಳಗಳು ಹಲವಾಗಿ ಬೆಳೆದವು. ಹಿಮ್ಮೇಳದಲ್ಲಿದ್ದು ಅನುಭವ ಪಡೆದವರು ಪ್ರಮುಖ ಹಾಡುಗಾರರಾಗಿ, ತಮ್ಮದೇ ಮೇಳ ಕಟ್ಟಿಕೊಂಡರು. ಮೇಳ ಮೇಳಗಳಲ್ಲಿ

ಸ್ಪರ್ಧೆ ಬೆಳೆದು ಹೊಸ ಹಾಡುಗಳ ಬೇಡಿಕೆ ಅಧಿಕವಾಯ್ತು. ಹಾಡು ಹೇಳಿಕೊಡುವವರಿಗೂ ಹುಡುಕಾಟ ಆರಂಭವಾಯ್ತು. ಹಾಡುಗಾರರೇ ರಚನಾಕಾರರಾದರು. ಹೀಗಾಗಿ ಗೀಗೀ ಹಾಡಿನ ಬೆಳೆ ಹುಲುಸಾಯ್ತು. ಅಷ್ಟೇ ಅಲ್ಲದೆ ಜನಾಕರ್ಷಣೆಗಾಗಿ ಹೆಣ್ಣು ಮಕ್ಕಳನ್ನೇ ಪ್ರಮುಖ ಹಾಡುಗಾರರನ್ನಾಗಿಸಿ ಡಪ್ಪುಕೊಟ್ಟು ಅಟ್ಟ ಏರಿಸಿದರು. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಎಂಟ್ಹತ್ತು ಜನ ಖ್ಯಾತನಾಮ ಮಹಿಳಾ ಹಾಡುಗಾರರಾಗಿದ್ದರು. ಒಂದು ಮಾತಂತೂ ಸತ್ಯ ಜಾನಪದವನ್ನು ಸುದೀರ್ಘ ಕಾಲದಿಂದ, ಬೀದಿವರಿಯ ಬೀರನ ಕಥೆಯಾಗಿ ಪರಿಗಣಿಸುತ್ತ ಬಂದ ಸಿರಿವಂತ, ಸಾಕ್ಷರ ಮನೋಭಾವ ಇಲ್ಲಿಯೂ ಬದಲಾಗಲೇ ಇಲ್ಲ. ಡಪ್ಪು ತುಂತುಣಿ ಹಿಡಿದು ಅಟ್ಟವೇರಿದ ಮೇಲ್ವರ್ಗದ ಜನ ತೀರ ವಿರಳ. ವಿಶೇಷವಾಗಿ ಈ ಹಾಡಿಕೆಯೂ ಕೆಳವರ್ಗದವರ ವೃತ್ತಿಯೇ ಆಯಿತು. ಆದರೆ ಅದರಿಂದ ಉಪಜೀವನ ಮಾಡುವ ಆದಾಯ ಮಾತ್ರ ಸಾಧ್ಯವೇ ಇರಲಿಲ್ಲ. ಈ ಹಾಡಿಕೆಯ ಕಲಾಗೌರವಕ್ಕೊ, ಹಾಡುವ ಹೆಣ್ಣಿನ ಕಂಠ ಸಿರಿಗೊ, ಸೊಂಟದ ಸೀರೆಗೊ ಮರುಳಾದ ಮೇಲ್ಜಾತಿಯ ಕೆಲವರು, ಹಾಡಿನ ರಚನಾಕಾರರೋ, ಹಾಡುಗಾರರೋ ಆಗಿ ಡಪ್ಪು ಹಿಡಿದುದೂ ಉಂಟು.

ಹೆಣ್ಣು ಮಕ್ಕಳು ಹಾಡಲಾರಂಭಿಸಿದಂದಿನಿಂದ ಜನಾಕರ್ಷಣೆ ಅಧಿಕಗೊಂಡಿತಾದರೂ ಹರದೇಶಿ–ನಾಗೇಶಿ ಪಂಗಡಗಳಲ್ಲಿ ವೃತ್ತಿ ವೈಷಮ್ಯ ತೀವ್ರಗೊಂಡು, ವೈಯಕ್ತಿಕ ವಿರೋಧ ಬೆಳೆದು ಅದು ಹೆಣ್ಣು–ಗಂಡಿನ ಲಿಂಗ ಸಂಘರ್ಷಕ್ಕೆ ಅನುವು ಮಾಡಿಕೊಟ್ಟುದಂತೂ ಸತ್ಯ. ಪರಸ್ಪರರ ಅವಹೇಳನದ ಹಾಡುಗಳು ಅಶ್ಲೀಲಕ್ಕಿಳಿದು, ಮೊದಲಿನ ಕಲಾತ್ಮಕತೆಯನ್ನು ಕಳೆದುಕೊಂಡುದನ್ನು ಒಪ್ಪಲೇಬೇಕು. ಇದರಿಂದಾಗಿ ಗೀಗೀ ಘನತೆಗೆ ಕುಂದುಂಟಾಗಿ, ಅದು ಕೆಲವು ಸಭ್ಯ ಸಹೃದಯರನ್ನು ಕಳೆದುಕೊಂಡಿತು. ಬರಬರುತ್ತ 'ಗೀಗೀ'ಯಲ್ಲಿ ಅಶ್ಲೀಲತೆ–ಅಧಿಕವಾದುದೂ ಸತ್ಯ.

ರಾಷ್ಟ್ರೀಯ ದೃಷ್ಟಿ

ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ಆಂಗ್ಲ ವಿರೋಧ ಅಲೆಯನ್ನೆಬ್ಬಿಸಿ, ರಾಷ್ಟ್ರೀಯ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ಮಹತ್ಕಾರ್ಯ ನಿರ್ವಹಿಸಿದ ಈ ಗೀಗೀ ಹಾಡುಗಾರರು, ಗಾಂಧಿ, ನೆಹರು, ಸುಭಾಸ ಮೊದಲಾದ ರಾಷ್ಟ್ರನಾಯಕರ, ಉದ್ದೇಶ, ಸಂದೇಶಗಳನ್ನು ಜನಮನದಲ್ಲಿ ಬಿತ್ತಿಬೆಳೆದರು. ಸ್ವಾತಂತ್ರ್ಯಾನಂತರ, ಹಸಿರುಕ್ರಾಂತಿ, ಜನಸಂಖ್ಯಾನಿಯಂತ್ರಣ, ಪಾನನಿರೋಧ

ಮೊದಲಾದ ರಾಷ್ಟ್ರ ನಿರ್ಮಾಣ ಕ್ರಿಯೆಯ ಪ್ರಚಾರ ಮಾಧ್ಯಮವಾಗಿ ಗೀಗೀ ಹಾಡುಗಳು ರಾಷ್ಟ್ರಾದ್ಯಂತ ಅನುರಣಗೊಂಡವು. ಹೀಗೆ ಕಾಲಾನುಕಾಲದ ಬದಲಾವಣೆಗಳನ್ನನುಲಕ್ಷಿಸಿ, ನಾಡು, ರಾಷ್ಟ್ರಕಟ್ಟುವ ಹೊಣೆಗಾರಿಕೆಗೆ, ಜನಪದರನ್ನು ಜಾಗೃತಗೊಳಿಸುವ ಕ್ರಿಯೆಯಲ್ಲಿ, ಈ ಹಾಡುಗಾರರು ಬಹಳ ಪ್ರಯೋಜನಾತ್ಮಕ ಸಾಧನೆ ಮಾಡಿದ್ದಾರೆ. ಆದರೆ ಇತ್ತಿತ್ತಲಾಗಿ, ರಾಜಕೀಯ ಪಕ್ಷಗಳ ಚುನಾವಣೆಯ ಪ್ರಚಾರದಲ್ಲಿ ವ್ಯಾವಹಾರಿಕವಾಗಿ ಬಳಕೆಯಾಗುತ್ತ ಈ ಹಾಡುಗಳು ಸಾಹಿತ್ಯಿಕ ಕಲಾಮೌಲ್ಯವನ್ನು ಕಳೆದುಕೊಳ್ಳುತ್ತವೆ. ಈ ವ್ಯಾಪಾರೀಕರಣದ ದಾಳಿಗೋ, ರಾಜಕೀಯದ ಗಾಳಿಗೋ ತುತ್ತಾಗಿ, ಎಲ್ಲ ಜನಪದ ಕಲೆಗಳು, ಬೀದಿ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಿವೆ. ಸುದೀರ್ಘ ಸಮಯದ, ಸ್ವಂತಿಕೆಯ ಪ್ರದರ್ಶನದ ಅವಕಾಶ ಅವಕ್ಕಿಲ್ಲವಾಗಿದೆ. ಅವಕ್ಕೆ ಕಲಾಗೌರವದ ಗಾಂಭೀರ್ಯ ಬರಲೇ ಇಲ್ಲ.

ಗೀಗೀ ವೈಶಿಷ್ಟ್ಯಗಳು

ಒಂದೂವರೆ ಶತಮಾನದ ಹಿಂದಿನಿಂದ ಹೆಣ್ಣಿನ ಮೇಲ್ಮೆ ಅವಳ ಪ್ರಾಮುಖ್ಯತೆಯನ್ನು ಪ್ರತಿಷ್ಠಾಪಿಸುವ ನಿಟ್ಟಿನಲ್ಲಿ, ಗೀಗೀಕಾರರು ಮಾಡುತ್ತಿರುವ ಪ್ರಯತ್ನವನ್ನು ಸಾಮಾಜಿಕ ಕ್ರಾಂತಿ ಎಂದೇ ಪರಿಭಾವಿಸಬಹುದಾಗಿದೆ. ಹೆಣ್ಣಿಗೆ ಸಾಮಾಜಿಕ ಗೌರವ ಕಲ್ಪಿಸುವುದರ ಜೊತೆಗೆ, ಹೆಣ್ಣು-ಗಂಡಿನ ಸಮಾನತೆಯ ಸಂದೇಶ ನೀಡಿ, ಸಂಸಾರ, ಸಮಾಜದ ಸ್ವಾಸ್ಥ್ಯಗೆ ಪ್ರಯತ್ನಿಸಿದ ಅವರ ಸಾಧನೆಯನ್ನು ಅಪೂರ್ವ ಅಮೂಲ್ಯವೆಂದೇ ಹೇಳಬೇಕು. ಮಹಿಳೆಯರ ಕೈಗೆ ಡಪ್ಪುಕೊಟ್ಟು, ಹಾಡಿಕೆಗಾಗಿ ಅವರನ್ನು ಅಟ್ಟ ಏರಿಸಿ ಸಾಂಸ್ಕೃತಿಕ ರಂಗ ಪ್ರವೇಶಕ್ಕೆ ಅವರು ಹೊಸಲು ದಾಟಿ ಮೊದಲು ಹೆಜ್ಜೆ ಇಡುವಂತೆ ಮಾಡಿದವರೇ ಗೀಗೀಕಾರರು.

ಗೀಗೀ ಹಾಡುಗಾರರು ಬಹುಸಂಖ್ಯೆಯಲ್ಲಿ ಮುಸ್ಲಿಂರು. ಅವರ ಕನ್ನಡ ಅಭಿಮಾನ, ಕನ್ನಡ ಸೇವೆ ಅನನ್ಯ. ಆದಿಲಶಾಹೀ ಆಡಳಿತದಲ್ಲಿದ್ದ ವಿಜಾಪೂರ, ನಿಜಾಂ ಆಡಳಿತದಲ್ಲಿದ್ದ, ಇಂದಿನ ಹೈದರಾಬಾದ್ ಕರ್ನಾಟಕದ ಹಳ್ಳಿ ಹಳ್ಳಿಗಳಿಗೆ ಕನ್ನಡದ ಪುನರ್ ಮನನ ಮಾಡಿಸಿ, ಕನ್ನಡದ ಸಂಸ್ಕಾರ ಕೊಟ್ಟರು. ಅಲ್ಲೆಲ್ಲ ಕನ್ನಡ ಉಸಿರು ತುಂಬುವ ಕೆಲಸ ಮಾಡಿದ ಹಿರಿಮೆಯು ಬಹುಪಾಲು ಗೀಗೀ ಕಾರರಿಗೆ ಸಲ್ಲುತ್ತದೆ. ಮುಂಬೈ ಪುಣೆ ಮೊದಲಾದ ಮರಾಠಿ ಪ್ರದೇಶದಲ್ಲಿಯೂ ಇವರ ಗೀಗೀ ಕನ್ನಡ ಝೇಂಕರಿಸದೆ ಬಿಟ್ಟಿಲ್ಲ.

ಗೀಗೀಕಾರರು ಲಿಂಗ ಸಮಾನತೆ, ಧರ್ಮ ಸಮಾನತೆ ಮತ್ತು ದೈವ ಸಮಾನತೆಯನ್ನು ಎತ್ತಿ ಹಿಡಿದು, ಮನುಷ್ಯ ಮನಗಳನ್ನು ಬೆಸೆವ ಮಹತ್ಕಾರ್ಯ ಮಾಡಿದ್ದಾರೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಇವರ ಪಾತ್ರ ಸಣ್ಣದೇನಲ್ಲ. ಆಂಗ್ಲಾಡಳಿತವನ್ನು ವಿರೋಧಿಸಲು, ಅದಕ್ಕೆ ಅಸಹಕಾರ ತೋರಿಸಲು, ಮತ್ತು ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸಲು ಡಪ್ಪು ಧ್ವನಿಸಿ ಊರೂರಿಗೆ ದೇಶಾಭಿಮಾನದ ಬೀಜ ಬಿತ್ತಿದವರು ಇವರು. ರಾಷ್ಟ್ರ ಪುನರ್ನಿರ್ಮಾಣದ ಕೈಂಕರ್ಯವನ್ನು ದೀಕ್ಷೆ ಪಡೆದಂತೆ ಕಾರ್ಯನಿರ್ವಹಿಸಿದ್ದಾರೆ. ಇವರು ಅದಕ್ಕೆ ಅನುಭವಿಸಿದ ಸಂಕಷ್ಟಗಳು ಅಷ್ಟಿಷ್ಟಲ್ಲ. ೧೯೪೨ರ ಒಂದು ರಾತ್ರಿ ನಮ್ಮೂರಲ್ಲಿ ಜನರನ್ನುದ್ದೇಶಿಸಿ, ರಾಷ್ಟ್ರಾಭಿಮಾನದ ಗೀಗೀ ಹಾಡುತ್ತಿರುವಾಗ, ಪೋಲೀಸರು ಬಂದು ಅವನ ಕೈಯಿಂದ ಡಪ್ಪು ಕಸಿದು ಹರಿದು, ಅವನ ಕೊರಳಿಗೆ ಹಾಕಿ, ಎರಡು ದಿನ ಪೋಲೀಸ ಕಚೇರಿಯ ಮುಂದೆ ಅನ್ನ ನೀರಿಲ್ಲದೆ ನಿಲ್ಲಿಸಿದ್ದನ್ನು, ಅಂದು ಶಾಲಾ ಬಾಲಕನಾಗಿದ್ದ ನಾನು ಇನ್ನೂ ಮರೆತಿಲ್ಲ ! ರಾಷ್ಟ್ರಾಭಿಮಾನದ ಹಾಡು ಹಾಡಿದ್ದಕ್ಕೆ ಹಲವಾರು ವರ್ಷ ಜೇಲುಶಿಕ್ಷೆ ಅನುಭವಿಸಿದವರನ್ನೂ ಬಲ್ಲೆ.

ಗೀಗೀ ಹಾಡುಗಾರರು, ಜನಪದರಿಗೆ ಮನರಂಜನೆಯ ಜೊತೆಗೆ, ಅವರನ್ನು ಸಮಾಜಜ್ಞಾನಸುಶಿಕ್ಷಿತರನ್ನಾಗಿಸುವ ಮಹತ್ಕಾರ್ಯ ಮಾಡಿದ್ದನ್ನೂ ಮರೆಯಲಾಗದು.

ಈ ಗೀಗೀ ಪದಗಳು ಸಮಕಾಲೀನ ಸಮಾಜದ ಚಿತ್ರ ಮೂಡಿಸಿದ್ದಲ್ಲದೆ, ಗೌರವಾನ್ವಿತ ವ್ಯಕ್ತಿ ಚಿತ್ರಗಳನ್ನು ಒಡಮೂಡಿಸಿದ ದಾಖಲೆಗಳು. ಜೊತೆಗೆ ಸಾಮಾಜಿಕ ಸಂಘರ್ಷದ ಘಟನಾವಳಿ, ಪ್ರಕೃತಿ ವಿಕೋಪದ ಆಗು–ಹೋಗುಗಳ ಯಥಾವತ್ತಾದ ಚಿತ್ರ ಸಾಕ್ಷಿಗಳನ್ನು ಒದಗಿಸುತ್ತವೆ. ಬರಗಾಲದ ಬವಣೆ, ರಜಾಕಾರರ ಹಾವಳಿಯುಲ್ಲಾದ ಜನಾಂಗಿಕ ಕ್ರೌರ್ಯ, ವಾರಣ ಹೋಮದ ಸ್ವರೂಪವನ್ನು ಕಣ್ಣಾರೆಕಂಡು, ಬಣ್ಣಿಸಿ ಬರೆದ ಹಲವಾರು ಗೀಗೀ ಹಾಡುಗಳು, ಒಂದು ಕಾಲಕ್ಕೆ ವಿಪುಲವಾಗಿ ಇಲ್ಲಿ ಉಪಲಬ್ಧವಿದ್ದವು. ಮೂವತ್ತೈದು ವರ್ಷಗಳ ಹಿಂದೆ ನಾನು ಬೀದರ ಜಿಲ್ಲೆಯ ಗೋರಟ ಗ್ರಾಮಕ್ಕೆ ಹೋಗಿದ್ದೆ, ಅಲ್ಲೊಬ್ಬ ಗೀಗೀಕಾರ ಹಲವಾರು ಹಾಡುಗಳನ್ನು ಹಾಡಿ, ನನ್ನನ್ನು ದಂಗು ಬಡಿಸಿದ. ಅವುಗಳನ್ನು ನಾನು ದಾಖಲಿಸಿಕೊಳ್ಳಲು ಮುಂದಾದಾಗ, ಅವನು ಹಾಡಿಯೇ ಮೂಡಿಸಿದ ವಿಚಾರಗಳು ನನ್ನನ್ನು ಮಂತ್ರಮುಗ್ಧನನ್ನಾಗಿ ಮಾಡಿದವು !

‘ಹಳಿ ಹುಣ್ಣ ಕೆದರಿ ಕೆದರಿ ಹೊಸಾಗಾಯ ಮಾಡಬ್ಯಾಡ್ರಿ ।
ನಂಜೇರಿ ಮತ್ತ ಮಂದಿ ಸತ್ತಗಿತ್ತಾರು ।
ಶಿವಾ ಕುಡದ ವಿಷಾ ಎಲ್ಲಾ ಅಲ್ಲೇ ಇರ್‍ಲಿ ಬಿಟ್ಟ ಬಿಡ್ರಿ ।
ಉಗಳಿದರ ಲೋಕಸುಟ್ಟ ಬೂದ್ಯಾದೀತು ! ॥ ಗೀ ॥

ಎಂದು ಹಾಡಿ ನಕ್ಕುಬಿಟ್ಟ! ಅವನ ಅನುಭವದ ಪರಿಜ್ಞಾನಕ್ಕಿಂತ ಅವನು ಸಂಶೋಧಕರಿಗೆ ನೀಡಿದ ಸಂದೇಶ ಅವನ ಸಾಮಾಜಿಕ ಕಳ್ಳು ಕಾಳಜಿಯ ಮಾನವೀಯಕಾವ್ಯ ದೃಷ್ಟಿ, ನಾನು ಓದಿದ ಮಹಾಕವಿಗಳನ್ನು ನೆನಪಿಗೆ ತಂತು.

ಈ ಸಂಪುಟದಲ್ಲಿ

ಗುರು ಶಿಷ್ಯ ಸಂಬಂಧ ಇನ್ನೂ ಗಟ್ಟಿಯಾಗಿ ಉಳಿದುಕೊಂಡಿದ್ದರೆ ಅದು ಸಂಗೀತ ಕ್ಷೇತ್ರದಲ್ಲಿ ಮಾತ್ರ. ಘರಾಣೆಯ ಸಂಪ್ರದಾಯದ ಭಕ್ತಿಬಾಂಧವ್ಯ ಅಲ್ಲಿನ್ನು ಅನ್ಯಾದರ್ಶ. ಅದರಂತೆ ಜಾನಪದದಲ್ಲಿ ಗೀಗೀ ಸಂಪ್ರದಾಯಕ್ಕೆ ಹಸನಸಾಬನನ್ನೇ ಗುರುವಾಗಿ ಪರಿಗಣಿಸಿದ ಶಿಷ್ಯ ಕೋಟಿಗೆ, ಬೀಬೀ ಇಂಗಳಗಿಯೇ ತವರು. ಅದು ‘ಗೀಗೀ’ಕಾರರಿಗೆ ಕಾಶಿ. ಹಸನಸಾಬನನ್ನು ಗುರುವರೇಣ್ಯ ಎಂದು ಕಳೆದು ಮೂರು ತಲೆಮಾರಿನಿಂದ ಗೌರವಿಸುತ್ತಲೇ ಬಂದಿದ್ದಾರೆ. ಇಂದೂ ಅನೇಕ ತರುಣ ಹಾಡುಗಾರರು, ಹಸನನ್ನು ಸ್ಮರಿಸಿಯೇ ಹಾಡು ಆರಂಭಿಸುತ್ತಾರೆ. ಈ ಸಂಪುಟದ ಹಾಡುಗಳನ್ನು ಅಂತೆಯೇ ಬೀಬೀ ಇಂಗಳಗಿ ಪರಿಸರದ ಗೀಗೀ ಪದಗಳು ಎಂದು ಹೇಳಿದ್ದು.

ಹಸನನ ಶಿಷ್ಯಂದಿರಲ್ಲಿ ಹೆಸರು ಮಾಡಿದವರು ಕೆಲವರು ಮಾತ್ರ. ಬೀಬೀ ಇಂಗಳಗಿಯ ಇಮಾಮಸಾಬ (೧೮೯೮–೧೯೫೯) ಲಾಳೇಸಾಬ (೧೮೯೬–೧೯೫೯) ಶೇಖ ಮಕ್ತಮಸಾಬ (೧೮೫೦–೧೯೨೦) ಮುಳಸಾವಳಗಿ ಕರೀಮಸಾಬ (೧೮೫೮–೧೯೦೦) ಸೋಫೆಸಾಭ (೧೮೮೦–೧೯೪೦) ಸಿದ್ಧಪ್ಪ ನಬೀಸಾಬ (೧೯೯೦–೧೯೪೫) ಗುಡುಲಾಲ (೧೯೦೬–೧೯೫೭) ಕೋರಳ್ಳಿ ಸಿದ್ರಾಮ (೧೯೧೦–೧೯೬೬) ಮೌಲಾಲಿ (೧೮೮೪–೧೯೪೫) ಇವರಲ್ಲದೆ ಬಸು–ಪಕೀರ ಕಾಶೀಂ, ಈರಣ್ಣ, ಡೋಣೂರ ಬಸು–ಹಸನ, ನಂದ್ಯಾಳದ ಮಲ್ಲಗುರು, ಕರಭಂಟನಾಳದ ಕಾಲು–ನಬಿ, ಬಾಗೇವಾಡಿಯ ಚಾಂದಹುಸೇನಿ, ಮಂಗಲಗಿಯ ನನ್ನಾಸಾಬ, ವಡಗೇರಿ ಭೀಮಶಾ, ಅಮ್ಮಾಪುರದ ಹಣಮಂತ, – ಹೀಗೆ ಇನ್ನು ಹಲವಾರು ಹೆಸರುಗಳನ್ನು ಹೇಳಬಹುದಾದರೂ ಕಲಾತ್ಮಕ ಹಾಡುಗಾರರು ತೀರ ಕಡಿಮೆ.

ಚಾಂದಕವಟೆ ಗುಡುಲಾಲ ಮತ್ತು ಕಡಣಿ (ಕಣ್ಣಿ) ಕಲ್ಲಪ್ಪನ ಹಾಡುಗಳನ್ನು ಪ್ರಸಾರಾಂಗ ಮುಕ್ತ ವಿಶ್ವವಿದ್ಯಾಲಯ ಮೈಸೂರು ಅವರಿಂದ ಈಗಾಗಲೇ ಪ್ರಕಟಿಸಿದ್ದೇವೆ.

ಒಟ್ಟಿನಲ್ಲಿ ವಿಜಾಪುರ ಜಿಲ್ಲೆಯಲ್ಲಿಯ ಬಹುತೇಕ ಹಾಡುಗಳನ್ನು ಶ್ರಮವಹಿಸಿ ಸಂಗ್ರಹಿಸಿದ್ದೇವೆ. ಈ ಸಂಪುಟಗಳಲ್ಲಿ ವೈವಿಧ್ಯತೆ ಇದೆಯಾದರೂ ವಿಶೇಷತೆ ಕಡಿಮೆ. ಆದರೂ ನಾಲ್ಕಾರು ಜನ ಪ್ರಖ್ಯಾತರೂ ಇಲ್ಲಿದ್ದಾರೆ. ಈಗಲೂ ಈ ಪರಂಪರೆಯ ಹಾಡುಗಳನ್ನು ಧನ್ಯಾಳದ ದುಂಡಪ್ಪಗೌಡ, ಅಂದೇವಾಡಿ ಗೈಭಿಕಾ ಮೊದಲಾದವರು ಹಾಡುವುದಷ್ಟೇ ಅಲ್ಲದೆ, ಹೊಸಹಾಡುಗಳನ್ನು ರಚಿಸುತ್ತಲೂ ಇದ್ದಾರೆ.

ಆದರೆ ಗೀಗೀ ಹಾಡುಗಳ ಪ್ರದರ್ಶನಕ್ಕೆ ಅವಕಾಶಗಳು ತೀರ ಇಲ್ಲದಾಗಿ, ಪ್ರೇಕ್ಷಕ ಪ್ರೋತ್ಸಾಹವಿಲ್ಲದ ಈ ಪರಂಪರೆ ನಿಂತು ಹೋಗುವ ಸ್ಥಿತಿಯಲ್ಲಿದೆ.

ಬೀಬೀ ಇಂಗಳಗಿಯ ಸ್ಥಾನಗೌರವ, ಹಸನಸಾಬ ಗುರುವಿನ ನಿಷ್ಠೆ ಇಟ್ಟುಕೊಂಡು ಹಾಡಿದವರು ಈ ಪರಿಸರದ ಗೀಗೀಕಾರರು.

"ಬೀಬೀ ಇಂಗಳಗಿ ನನ್ನ ಠಿಕಾಣಿ ।
ಇಬ್ರಾಮಶಾ ರನ್ನದ ಖಣಿ ।
ಮಲ್ಲ-ಹಸನ ಗುರುವಿನ ಮಣಿ ।
ಜನನಿ ಜನಕರೆಂದು ಹಾಡಿಕಿ
ವಸ್ತಾದ ಹಸನ ಸಾಹೇಬರಿಂದ ಬೆಳೆದು ಬಂದಿತೋಕಲ್ಗಿ ॥"

ಈ ಕಲ್ಗಿ (ನಾಗೇಶಿ) ಹಸನನಿಂದಲೇ ಬೆಳೆದುಬಂದುದನ್ನು ಸ್ಮರಿಸುತ್ತಾರೆ.

"ಕಡಿಹುಟ್ಟ ಮಗಾ ನಾ ನಿಮಗ
ಎತ್ತ ಬಗಲಾಗ । ಪ್ರೀತಿ ನನಮ್ಯಾಗ ಇರ್ಲಿಜರಾ ॥"

ಗುರು ಹಸನನಲ್ಲಿ ವಿಜ್ಞಾಪನೆ

"ಇಂಗಳಿಗಿ ರಾಜದೊಳು ಪುಂಡ ।
ಮಲ್ಲ-ಹಸನ ಬಂಗಾರದ ಗುಂಡ ।
ಗಂಧರ್ವರ ವಂಶ ಪಾಪಿಲ್ಲದ ಪಿಂಡ ।
ಸತ್ತುಳ್ಳ ಇಂಗಳಗಗಿಹೋಗಿ ಶಿರಬಾಗಿ ।

ನಮ್ಮ ಮುತ್ತ್ಯಾ ಹಸನ ಗುರುವಿಗಿ ಮಣಿಬಾಗಿ ॥"

"ಖರೆ ಕವಿ ಪುಂಡ। ನುಡಿಬಾಯಿಲಿ ಹೊಂಟರ।
ಭೂಮಿ ಮ್ಯಾಲ ಪುಟದಂಗಚೆಂಡ"

– ಹೀಗೆ ಇಂಗಳಗಿ ಪರಿಸರದ ಗೀಗೀಕಾರರು ಇಂದೂ ಬೀಬೀ ಇಂಗಳಗಿ ಗುರು ಹಸನನನ್ನು ಸ್ಮರಿಸುತ್ತಲೇ ಇದ್ದಾರೆ.

ಈ ಗೀಗಿ ಪದಗಳನ್ನು ಹಾಡಿ, ಸಂಗ್ರಹಕ್ಕೆ ಸಹಕರಿಸಿದ ಎಲ್ಲ ಹಾಡುಗಾರರಿಗೆ, ತಮ್ಮಲ್ಲಿ ಬರೆದಿಟ್ಟುದನ್ನು ಕೊಟ್ಟು ಉಪಕರಿಸಿದ ಮಹನೀಯರಿಗೆ, ನಮ್ಮ ತುಂಬು ಹೃದಯದ ಕೃತಜ್ಞತೆಗಳು.

ಈ ಸಂಪುಟಗಳ ಪ್ರಕಟಣೆಗೆ ಮುಂದೆ ಬಂದು, ಕಾರ್ಯನಿರ್ವಹಿಸಿ ಅವು ಕೃತಿ ರೂಪ ತಾಳುವಂತೆ ಮಾಡಿದ ನನಗೆ ಆತ್ಮೀಯರು, ಜಾನಪದ ಅಕಾಡಮಿಯ ಸಮರ್ಥ ಅಧ್ಯಕ್ಷರೂ ಆದ ಮಾನ್ಯ ಗೊ.ರು. ಚನ್ನಬಸಪ್ಪನವರಿಗೆ ಮತ್ತು ಹಲವು ರೀತಿಯಿಂದ ನಮಗೆ ಸಲಹೆ ಸಹಕಾರ ನೀಡಿದ ಉತ್ಸಾಹಿ ತರುಣ ರಿಜಿಸ್ಟ್ರಾರ್ ಶ್ರೀ ಬಿ.ಎಸ್. ಪರಡ್ಡಿ ಅವರಿಗೆ ನಾವೆಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆ. ಅಕಾಡಮಿಯ ಸಿಬ್ಬಂದಿ ವರ್ಗಕ್ಕೆಲ್ಲ ನಾವು ಋಣಿ. ಸುಂದರವಾಗಿ ಮುದ್ರಿಸಿ ಕೃತಿಯ ಮೌಲ್ಯ ಹೆಚ್ಚಿಸಿದ ಮುದ್ರಕರನ್ನು ಮರೆಯಲಾರೆವು.

– ಸಂಪಾದಕರು

ಭಾಗ – ೧

ಕೋರಲ್ಲಿ

ಪರಿವಿಡಿ

೧)	ಸಾಕಾದಿತವ್ವಾ ಈ ಗಂಡನಗೂಡಾ	೩
೨)	ಚಂದ್ರ ಬಿಂಬದಂತಾ ನಾರಿ	೬
೩)	ಖ್ಯಾಲಿ	೧೦
೪)	ಹೆತ್ತವ್ವನ ಮನ ನೋಯಿಸಿ	೧೧
೫)	ಮಾತಾಡs ಮಾನುಣಿ	೧೪
೬)	ಲೋಕದ ನಡವಳಿಕೆ	೧೭
೭)	ಪದ್ಮಾವತಿ ಪಾರಿಜಾತ	೨೧
೮)	ಹುಸಿ ಹೋಗದು ನೀ ಮರಿ	೨೫
೯)	ಭೂ ಮಂಡಲಕ ಬಾರ ಆಗೇದ	೨೮
೧೧)	ಚೀನಾ ಯುದ್ಧ	೩೦
೧೨)	ಹಜಾರ ಮಂದಿ ಹರದಾಸರ	೩೭
೧೩)	ಮಗಾ ಹೆಚ್ಚೊ ಮಗಳ ಹೆಚ್ಚೊ	೩೯
೧೪)	ಮಂಡ ಮಂಡ ಪಂಡೀತರೆಲ್ಲರು	೪೨
೧೫)	ಪತಿವ್ರತಾ	೪೫
೧೬)	(ಖ್ಯಾಲಿ) ನಾನಿನಗ ಎಷ್ಟಂತ ವರ್ಣಿಸಲೆ	೪೮
೧೭)	(ಖ್ಯಾಲಿ) ನಾ ಹೋಗ್ತೀನಿ ತೌರೂರಿಗಿ	೪೯
೧೮)	ಹಾದರ ಮಾಡಬೇಕು	೫೦
೧೯)	ಉತ್ತರ ತಗಿಯೊ ಆಡಾಡತ ಬಿತ್ತೊ ಅಗಳಿ	೫೩
೨೦)	(ಖ್ಯಾಲಿ) ಕೆಂಬವಿ ಸಮೀಪ	೫೮

ಸಾಕಾದಿತವ್ವಾ ಈ ಗಂಡನಗೂಡಾ

ಸಾಕಾದಿತವ್ವಾ ಈ ಗಂಡನಗೂಡ ಸಂಸಾರ ।
ಬಾಳ ಬ್ಯಾಸರಾ ।
ನಾ ಎಷ್ಟ ತಾಳಲೆವ್ವ ನನಗಿಲ್ಲ ಆಸರಾ ॥ ॥ ಜೀಜೀ ॥ ಪಲ್ಲ ॥

ಏರು ನಾ ಪದ್ಮಿನಿ ಅಂತಾ ಕಳೆವುಳ್ಳ ಹೆಣ್ಣೀಗಿ
ಒಳ್ಳೆ ಜಾಣೀಗಿ ।
ನಮ್ಮ ತಾಯಿ ತಂದಿ ಕೊಟ್ರು ಹೆಂತಾ ಕ್ವಾಣೀಗಿ ॥ ॥ ಜೀಜೀ ೧ ॥

ಇವನ ಕಿರಿ ಕಿರಿ ಒಳಗ ನಿದ್ರಿ ಇಲ್ರಿ ಕಣ್ಣೀಗಿ ।
ಜೀವ ಸಣ್ಣಾಗಿ ।
ನಮ್ಮಿಬ್ಬರ ಜಗಳ ಬ್ಯಾಸರಾಯಿತು ಓಣೀಗಿ ॥ ॥ ಜೀಜೀ ೨ ॥

ಇಳುವು ಆರ ಮಂದಿ ಅಣ್ಣ ತಮ್ಮದೇರಗಿ ।
ಉರಿ ಹಚ್ಚಲವರ ಮಾರಿಗಿ ।
ಮುಳ್ಳ ಬಡದ ಬಿಟ್ಟಿನಿ ದಾರಿಗಿ ।
ಅವರಿಗಿ ಯಮವಾಗಿ ಬಂದೀನಿ ಗಂಡನ ಊರಿಗಿ ॥ ॥ ಜೀಜೀ ೧ ॥

ಎಂಟ ಮಂದಿ ಎನ್ನ ಗೆಣಿಯಾರಿಗಿ ।
ಹಾಕೀನಿ ಹಾಳ ಗಾರಿಗಿ ।
ಸರಿ ದೊರೆಯ ನನ್ನ ಗೆಳತೆಯರಿಗಿ ।
ಹೋಗಿ ಬರತೀನಂತ ಹೇಳಿ ಕೇಳಿ ಬಂದೆ ಚದುರೆಯರಿಗಿ ॥ ಜೀಜೀ ೨ ॥

ಬಂದಕ್ಕಿ ಹೋಗಿಲ್ಲವ್ವ ತಿರುಗಿ ।
ನಾ ಗಂಡನ ಗುಡಾ ಮರುಗಿ ।
ಇವನ ಚಿಂತಿಯೊಳಗ ಸೊರಗಿ ।
ನನ್ನ ತವರಮನಿ ರಕ್ತದಕಣ್ಣಿ ಇವರ ಕಾಲಾಗ ಹೋಯಿತವ್ವ ಕರಗಿ ॥
॥ ಜೀಜೀ ೩ ॥

ಕೂಡುಪಲ್ಲ ಸಾಕಾದಿತವ್ವಾ ಈ ಗಂಡನಗೂಡಾ ಸಂಸಾರ ।
ಬಾಳ ಬ್ಯಾಸರಾ ।
ನಾ ಎಷ್ಟ ತಾಳಲೆವ್ವ ನನಗಿಲ್ಲ ಆಸರಾ ॥ ॥ ಜೀಜೀ ॥ ಚೌಕ ೧ ॥

ಏರು ಮುನ್ನೂರದಾ ಅರವತ್ತು ಮಂದಿ ಮುತಾಲಿಕರು ಊರೀಗಿ ಕೇರೀಗಿ
ಅವರ ಅಂಜಿಕ್ಯಾಗಿ ।
ಬಿದ್ದಿನೆವ್ವಾ ಇವನ ಸದರೀಗಿ ॥ ॥ ಜೀಜೀ ೧ ॥

ನಾ ಮೊನ್ನೆ ಹೋಗಿದ್ದೆನೆವ್ವಾ ಕಾಸಿನಾಥನ ಜ್ಯಾತ್ರಿಗಿ
ದೊಡ್ಡ ಕೇತ್ರೀಗಿ ।
ಸುತೆಲ್ಲ ನೆರದಾರೊ ಉಚಗೊಳ್ಳಾಕ ನನ ಸರಿಗಿ ॥ ॥ ಜೀಜೀ ೨ ॥

ಈ ಹಗಲಗಳ್ಳ ಹದಿನೆಂಟ ಮಂದಿ ತೊಂಟರಗಿ ।
ಗಂಟಿ ಚೋಡ್ಯಾರಗಿ ।
ಅವರಿಗಿ ತಪ್ಪಿಸಿ ಬಿದ್ದೆ ನಾನು ನೆದರೀಗಿ ॥ ॥ ಜೀಜೀ ೩ ॥

ಇಳುವು ಅವರಿಗ್ದೇಳಿ ಬಂದೆ ಸುಳ್ಳ ಗುಳಗಿ ।
ನಾ ಬರತೀನಿ ಅಂದಿನಿ ನಾಳೀಗಿ ।
ಅಲ್ಲಿ ನಿಂದ್ರುದಿಲ್ಲ ಅರಗಳಿಗಿ ।
ಇದು ಹೇಳಬೇಕಂತ ಬಂದಿನಿ ಗಂಡನ ಬಳೀಗಿ ॥ ॥ ಜೀಜೀ ೧ ॥

ಆ ಮ್ಯಾಗಿನ ಕೇರಿ ಬಾಗಿ ।
ಅಕಿ ಹೇಳ್ಯಾಳ ಗಂಡಗ ಹೋಗಿ ।
ನಿನ್ನ ಹೆಂಡತಿ ಗಂಟಿ ಚೌಡ್ಯಾರಿಗಿ ।
ಹೋಗುವಳೊ ಖರೇ ನೀ ನಂಬಬ್ಯಾಡ ಅವಳೀಗಿ ॥ ಜೀಜೀ ೨ ॥

ಮನ ಒಡಿಸಿದಾಳೋ ಇಬ್ಬರಿಗಿ ।
ನನ್ನ ಮ್ಯಾಲಿನ ತಗದ ನಂಬಿಗಿ ।
ತಾ ತಗೊಂಡ ತನ್ನ ತಂಬಿಗಿ ।
ಮನಿ ಬಿಟ್ಟ ಹೋದ ನಂಬವಲ್ಲ ಇಂದಿಗಿ ॥ ॥ ಜೀಜೀ ೩ ॥

ಏರು ಯಾರ ಕರದರ ಬರಲಿಲ್ಲ ಸೆಟಗೊಂಡ ಹೋದ ಬರಽರ ।
ಮಾಡಿ ಅವಸರಾ ।

ಕೂಡುಪಲ್ಲ ನಾ ಎಷ್ಟ ತಾಳಲೆವ್ವ ನನಗ ಇಲ್ಲ ಆಸರಾ ॥ ॥ ಜೀಜೀ ॥ ಚೌಕ ೨ ॥

ಏರ ಧಗಿ ಆದಿತವ್ವ ಎನ್ನಮ್ಯಾಲಾ ಮುನಿದ ದೇಶಾಯಿ ।
ಇಲ್ಲ ಉಪಾಯಿ ।
ದಡಕ್ಷಚ್ಚಲಿಲ್ಲ ನಾ ಆಗಿನಿ ಅಗಸರನಾಯಿ ॥ ॥ ಜೀಜೀ ೧ ॥

ಅಲ್ಲಲ್ಲಿ ಅನುದರಾಗ ಆಗಿ ಹೋಯಿತವ್ವ ಮಾಯಿ ।
ಮುಣಗಿ ದಂಗಬಾಯಿ ।
ಬಲ್ಲವರು ಕೇಳರಿ ಆಗುದಲ್ಲ ನ್ಯಾಯಿ ॥ ॥ ಜೀಜೀ ೨ ॥

ನಾ ಏನ ಹೇಳಲೆವ್ವ ನೆರಮನಿ ವಿಕಾಬಾಯಿ ।
ಕೇಳ ಸಗುಬಾಯಿ ।
ಕರತಂದು ಬಿಟ್ಟಿನವ್ವ ಅಗಲಿಸಿ ನಮ್ಮ ತಂದಿ ತಾಯಿ ॥ ಜೀಜೀ ೩ ॥

ಇಳುವು ತಾಯಿ ತಂದಿ ಮಾತ ಮೀರಿದಾಕಿ ।
ಒಂದಿನಾ ತಿನ್ನುವುದು ಕರೆಧಕ್ಕಿ ।
ಮೀರಿದವರು ಹೋದ್ರೋ ಮಣ್ಣ ಮುಕ್ಕಿ ।
ಇಳಿ ಇಳಿತ ಬಂದಾಂಗ ತಿಳಿತಬಂತ ತಿಳವಳಿಕಿ ॥ ॥ ಜೀಜೀ ೧ ॥

ನನ್ನ ಬಳಗಕ್ಕೆ ಸೇರಿ ಆಡsಕ್ಕಿ ।
ನಾ ಅಗಲಿ ಬಂದಾಂಗ ಹಕ್ಕಿ ।
ಕರತಂದು ಕೊಟ್ಟಾನವಾ ಬೆರಕಿ ।
ಬಹು ಮಂದಿ ಬೆರಯಿತಾರ ಏನ ಉಂಡೆ ಇವನ ಗಳಕಿ ॥ ॥ ಜೀಜೀ ೨ ॥

ನಂದ್ಯಾರಿಗಿ ಹೇಳಲಿ ಬಳಲಿಕಿ ।
ನಮ್ಮ ತಾಯಿ ಕ್ವಾರಳ್ಯಾಕಿ ।
ಆಕಿ ಬಾಳ ಮಾನುಳ್ಳಾಕಿ ।
ಅಂತಾಕಿ ಹೊಟ್ಟೀಲಿ ಹುಟ್ಟಿ ಇರಬಾರದು ನನ್ನಂತಾಕಿ ॥ ಜೀಜೀ ೩ ॥

ಏರು ಮೌಲಾಲಿ ನಬೀಶಾ ಕೂಡಿ ಪದಾ ಹಾಡುವರೋ ಜೋಡಿ ।
ಹಸನ ಸಾಹೇಬರ ಶಿಷ್ಯರೊ ಜೋಡಿ

ಕೂಡುಪಲ್ಲ ಸಾಕಾದಿತವ್ವಾ ಸಂಸಾರ ಈ ಗಂಡನ ಗೂಡಾ ॥ ॥ ಚೌಕ ೩ ॥

ಚಂದ್ರ ಬಿಂಬದಂತಾ ನಾರಿ

॥ ಸಖಿ ॥

ಶಾರದಾ ದೇವಿ ನೀಡವ್ವಾ ಮತಿ ಕೊಡು ಬಾಯಿ ತೆರದ ।
ನೀಡವ್ವಾ ನಿಂತೀನಿ ನಾ ತೊರದಾs ।
ಮಾಡವ್ವಾ ಸರಸ್ವತಿ ಮಾಡುವೆ ನಿನ್ನ ಶೃತಿ ।
ನೀಡವ್ವಾ ನಿಂತಿದಿನೀ ನಾ ತೊರದಾ ॥ ॥ ೧ ॥

ನಿನ್ನ ಮ್ಯಾಲ ನನ್ನ ಪ್ರೀತಿ ನನ್ನ ಮ್ಯಾಲ ಇರಲಿ ಮಮತಿ ।
ತೀರದಾ ನಿನ್ನ ಕೃತಿ ಒಂದೇ ನಾಲಿಗೆಗೆ ತೀರದಾ ।
ಸದಾ ದೇವಿ ಸ್ಮರಿಸುವೆ ಶ್ರೀ ಶಾರದಾ ।
ಶಾರದಾ ದೇವಿ ನೀಡವ್ವಾ ಮತಿ ಕೊಡು ಬಾಯಿ ತೆರದಾ ॥ ॥ ೨ ॥

ಕ್ವಾರಳ್ಳಿ ಸಣ್ಣ ಬಸ್ತಿ ಅಲ್ಲಿ ಅsದ ನಿನ್ನ ವಸತಿ ।
ಮಾಡುವೆ ಜಾಗ್ರತಿ ಶಿಶುವ ಸಿದ್ರಾಮಗ ।
ಸದಾ ಕಾಲೊ ಕಾಲ ವರುವಾಗ ನಮಗ ।
ಶಾರದಾ ದೇವಿ ನೀಡವ್ವಾ ಮತಿ ಕೊಡು ಬಾಯಿ ತೆರದು ॥ ॥ ೩ ॥

ಪದ ೧

ಚಂದ್ರ ಬಿಂಬದಂತ ನಾರಿ ಒಂದರದಾಗ ಕುಂದಿಲ್ಲ ।
ಬಂಡತಾನ ಮಾಡಿಕೋಂತ ।
ನಿಂದ್ರಲಾರದೆ ಹೊಂಟಿದಾಳ । ಚಂದ್ರ ಸೂರ್ಯನಂತ ಹೋಲೀಕಿ,
ಪಡದ ಬಂದಾಳೇನೊ ಚಲುವಿಕಿ
ಚಂದ್ರ ಕಾಳಿ ಸೀರಿಯುಟ್ಟ ಸುಂದರಿ ತಾನು ಹೊಂಟಿದಾಳೊ
ನಿಂದ್ರಲಾರದೆ ಮುಂದ ಹವಣಿಕಿ ॥ ಜೀಜೀ ೧ ॥

ಬಾಳಿ ಸುಳಿಯಂತಾ ನಾರಿ ಬಾಜರ ಹಿಡದ ಹೋಗುವಾಗ ।
ಭಾಗವಾನರ ಹುಡುಗೊಬ್ಬ ಬಾಳಿಕಾಯಿ ಮಾರುದ ಬಿಟ್ಟು ।
ಕೇಳತಾನ ಬಂದು ಓಡೋಡಿ ।
ಹೇಳ ತಂಗಿ ಹೋಗತಿದಿ ಯಾವ ಕಡಿ ।
ನೀರsಡಿಸಿದೇನೆ ಸ್ವಲ್ಪ ನೀರ ಕುಡಿ
ರಸ್ತೆ ಹಿಡದ ಬರುವಾಗ ಹಸ್ತಂಗ ಕಾಣಸ್ತೀದಿ ನೀನು
ಮಸ್ತ ಹಾಕಿತಿನ್ನು ನೀನು ಬಾಳಿ ಎಲಿ ॥ ॥ ಜೀಜೀ ೨ ॥

ಬಾಳಿಕಾಯಿ ತಿನ್ನಂತ ಬಾಳ ಪರಿ ಹೇಳಿದಾನೊ
ಬಾಳುಳ್ಳ ಆ ನಾರಿ ಬಾಳಿಕಾಯಿ ತಿಲ್ಲಾರದೆ
ಒಲ್ಲೆಂತ ವಾರಿ ಬಿದ್ದು । ದೂರ ಹೋದಳೊ ದೂರಕಡಿ ।
ದುಃಖ ಮಾಡತಾನ ನಿಂತು ಬೋರ್ಯಾಡಿ
ಯಾವ ಕsಡಿ ಹ್ವಾದಳಂತ ಹೇಳಿ ಶೋಧಮಾಡಿ
ಬಾಳಿ ಕಾಯಿವ ಸುಮ್ನೆ ಹೋಯಿತ ಸುರಪುರ ಕಡಿ ॥ ಜೀಜೀ ೩ ॥

ಊರ್ವಸಿಯಂತಾ ರಂಬಿ ಓಣಿ ಹಿಡಿದು ಹೋಗುವಾಗ ।
ಕ್ವಾಣಿನಂತ ಸೂಳಿಮಗ ಸುಂದರ ರೂಪ ನೀಡಿ ನಿಂದರಲಾರದೆ ।
ಬಂದ ಹಚ್ಚಿ ಕೇಳತಾನ ಒಂದ ರಾತ್ರಿ ಹೋಗು ಅವನ ಮಾಡಿ ।
ತಂದ ಕುಡತೀನ ಎದಿ ಕಲ್ಲ ಮಾಡಿ
ನನ್ನ ಮುಂದ ಉಟ್ಟ ತೊಟ್ಟ ಜೋಕಮಾಡಿ ಹತ್ತ ತೊಲಿ –
– ಬಂಗಾರ ಜತ್ತಾಸೆ ಕುಡತೀನಿ ।
ಪತ್ತೆ ಇಲ್ಲದಂತೆ ನಾವು ಜತ್ತಿಗಿ ಹೋಗಿ ಬರೂನು ನಡಿ ॥ ॥ ಜೀಜೀ ೪ ॥

ಜತ್ತಿಗಿ ಹೋಗಬೇಕಂತ ಪತ್ತ ಇಟ್ಟ ಆಕಿ ಮ್ಯಾಲ ।
ಹತ್ತತೊಲಿ ಬಂಗಾರೆಲ್ಲಾ ।
ಹಾಕಿಬಿಟ್ಟ ಕೊರಳಾಗ ಮರಳ ಮಾಡಿ ಗಂಡಸಗ ಜೋಕ ಹೊಡಿಯುತ –
– ಆಕಿ ಹೊಂಟಳೊ ॥ ॥ ಜೀಜೀ ॥ ೧ ॥
ಆ ಪತ್ತಗೇಡಿ ಹೆಣ್ಣಿಗಿ ಗೊತ್ತೈತಿ ಇವನ ಗುಣಾ ।
ಹತ್ತ ತೊಲಿ ಬಂಗಾರೆಲ್ಲಾ ಹಾದಿ ಖರ್ಚಗಿ ಸಾಲುದಿಲ್ಲಾ ।
ಎತ್ತ ಎಮ್ಮಿ ಮನಿಯಾಗ ಭತ್ತಾಭರಣಾ ಎನಿದ್ದರ ಗೊತ್ತಿಗಿ ಹಚ್ಚಿ–
– ಹೋಗೂನ ನಡಿ ॥ ॥ ಜೀಜೀ ॥ ೨ ॥

ನಾರಿ ಮಾತ ಕೇಳಿ ಪಾರ ಸೂರ ಮಾಡಿ ಸಂಸಾರs ।
ಸಾವಿರ ರೂಪಾಯಿ ಇಸ್ಟಂಟೆಲ್ಲಾ
ಸೂಳಿ ಕೈಯಾಗ ಕೊಟ್ಟ ಬಿಟ್ಟ ಈಕಿದೆಂತಾದs ಹಿಕಮತಿ ಹೇಳೋ ॥
॥ ಜೀಜೀ ॥ ೩ ॥

ಸೂರ್ಯಾ ಹೊಂಡುದರಾಗ ನಾರಿ ದಾರಿ ಬುತ್ತಿ ತಯ್ಯಾರ ಮಾಡಿ
ವಾರಿಗಿ ಗೆಣೆಯಾನ ಎಬ್ಬಿಸಿಕೊಂಡು
ಯರನಾಳಕ ಹೋಗುದರಾಗ ಎಡವಿ ಬಿದ್ದ ಕಾಲ ಚಪ್ಪಲಿ ಹರದಳೊ ॥
॥ ಜೀಜೀ ॥ ೪ ॥

ಹರಕ ಚಪ್ಪಲಿ ಹಾಕ್ಕೊಂಡು ಹಾದಿ ನಡಿಯಾಕ ಬರೂದಿಲ್ಲಾ
ಹರನಾಳಕ ಹೋಗಿ ನೀನು ಹೊಲಸಕಂಡು ಬಾ ಅಂತಾ
ಅವನ ಪರಿಲಿಂದ ಹರದಕಿ ನಿಲ್ಲು ಹಂಚಿಕಿ ತಗದಾಳೊ ॥ ॥ ಜೀಜೀ ॥

ತಪ್ಪಲಾರದೆ ಅವನಿಗಿ ಚಪ್ಪಲಿ ಕೈಯಾಗ ಕೊಟ್ಟು ನೀನು
ಚಪ್ಪನ ಬಾ ಅಂತಾನಾ
ಹಿಪ್ಪರಗಿ ಊರಾಗ ಇರತನಂದಳೊ ॥ ॥ ಜೀಜೀ ॥

ಹಿಕಮತಿ ಹೇಳಿ ಆ ನಾರಿ ಹಿಪ್ಪರಗಿ ಊರಬಿಟ್ಟ
ಶಾರಕ ಹೋಗಬೇಕಂತ ನೂರ ರೂಪಾಯಿ ನೋಟ ಮುರಿಸಿ
ಮೋಟರದಾಗ ಕುತ್ತ ಆಕಿ ತಿರಿತಿರಗಾಡಲಿಕ್ಕೆ ಹ್ವಾದಳೋ ॥ ॥ ಜೀಜೀ ॥

ಹಿಗ್ಗಲಿಂದ ಆ ಹುಡುಗ ಹರಕ ಚಪ್ಪಲಿ ಹಿಡಕೊಂಡು
ಹರನಾಳಕ ಹೋಗಿ ಹೊಲಸಕೊಂಡು ಬರುದರಾಗ ಹೊಟ್ಟಿ ಬಾಳ ಹಸ್ತಿದತ
ರೊಟ್ಟಿ ಮಾತ್ರ ಇದ್ದಿದ್ದಿಲ್ಲ ಬಟ್ಟೆ ವತ್ತಿ ಇಟ್ಟು
ಹೋಗಿ ಬಂದಾ ಊರಾಗ ತಿಂದನ ಹೊಟ್ಟೆ ತುಂಬs ಕೂಳೋ ॥ ॥ ಜೀಜೀ ॥

ಅರಿವಿಯೆಲ್ಲಾ ವತ್ತಿ ಇಟ್ಟು ಕುರುಬರಂತಾ ಸೂಳಿ ಮಗಾ ।
ಕಬರಹಾರಿ ಕಾಲ ಮರಿ ।
ಕೈಯಾಗ ಹಿಡಕೊಂಡ ಹಿಪ್ಪರಗಿ ಹಾದಿ ಹಿಡದಾನೊ ॥ ॥ ಜೀಜೀ ॥

ತಪ್ಪಲಾರದೆ ಆ ಹುಡುಗ ಹಿಪ್ಪರಗಿ ಊರಿಗಿ ಹೋಗಿ ।
ತಪಾಸ ಮಾಡಿ ಹುಡುಕಿದರs ।
ಹುಡಿಗಿ ಮಾತ್ರ ಸಿಗಲಿಲ್ಲ ಹುಚ್ಚಾಗಿ ನಿಂತಾ ಹುಚಮೂಳೊ ॥ ॥ ಜೀಜೀ ॥

ಹೆಸರಗೆಟ್ಟ ಹುಚ್ಚ ಬಾಡ್ಯಾ ಹಾದಿ ಹೋಗು ಹೆಂಗಸರಗಿ
ಮೆಚ್ಚಿ ಬೆನ್ನ ಹತ್ತಿದನೊs
ಕಚೇರಿ ಊರದು ಕಳ್ಳ ಬಂದಾನಂತ ಅವನ ಕೈಕಟ್ಟಿ ಬಡದರವನ–
–ಇದ್ದಟೆಲ್ಲಾ ಮಾಡಿ ಬಿಟ್ರೊಹಾಳೊ ॥ ॥ ಜೀಜೀ ॥

ಹಜಾರ ರೂಪಾಯಿ ಹಾಳಾಗಿ ಇದ್ದಟೆಲ್ಲಾ ಕಳಕೊಂಡು
ಅಜಾತ ಹೆಣ್ಣಿಗಾಗಿ ವಿಜಾಪುರಕ ಹೊಂಟನೊ
ಮಜಾ ಮಾಡಿ ಹೋದಳೊ ಮಾನುಳ್ಳಾಕಿ ಈ ಮಾನಗೇಡಿಗಿ ದೊರಿಲಿಲ್ಲ
ಆಕಿ ॥ ॥ ಜೀಜೀ ॥

ಮಾನ ಕಳಕೊಂಡ ಆಗಿ ಹೋಯಿತೊ ಹಕಾಪಕ್ಕಿ ।
ಚಂದ್ರಕಾಳಿ ಸೀರಿಯುಟ್ಟು ಸುಂದರಿ ತಾನು ಹೊಂಟಿದಾಳೊ
ನಿಂದ್ರಲಾರದೆ ಹೊಂಟಿದಾಳೊ ಮುಂದ ಹವಣಿಕಿ ॥ ॥ ಜೀಜೀ ॥ ಚೌಕ ೧ ॥

ಇನ್ನೇನ ಮಾಡ್ಲಿಯಂತಾ ಸನ್ನೇಶಿ ಸೂಳಿಮಗಾs
ಹೊನ್ನಳ್ಳಿ ಮ್ಯಾಲ ಹಾಯ್ದು–
–ಕನ್ನೂರ ಕಾರಜ್ವಾಳ ಕಾಖಂಡಕಿ ಕರನಾಳ
ಮ್ಯಾಕ ದಿಕ್ಕಿಗಿ ಹೋದ ಮನ್ವೀಗಿ ।
ಸಾಕಾಗಿ ಹೋಯಿತು ಅವನ ಮನಸಿಗಿ ।
ಯ್ಯಾವ ಕಡಿ ಹ್ವಾದಳಂತ ಆ ಹೆಣ್ಣಿಗಿ
ಬೆಂಡ್ನೂರ ಬೆಂಗಳೂರ ಕೊಡ್ನೂರ ಕ್ವಾಡಗನೂರ–
–ಕೊರಚಿಗಿ ಮ್ಯಾಲ ಹಾಯ್ದು ದಿಡಗ ಬಂದ ಉಪ್ಪಲದಿನ್ನಿಗಿ ॥ ॥ ಜೀಜೀ ॥

ಉಪ್ಪಲದಿನ್ನಿ ಊರಾಗ ಹೋಗಿ ನಿಪ್ಪಳಾಗಲಿಲ್ಲ ಜೀವ ।
ಇಪ್ಪತ್ತೊಂದ ದಿವಸಕ ಚಪ್ಪಲಿ ಮಾತ್ರ ಕೈಯಾಗ ಹಿಡಿದು
ನೆಪ್ಪ ಆಯಿತ ನಾರಿ ಕಡಿಗಿ ಜಪ್ಪನೆ ಹೊಂಟೊ ಜಾಣ ಜಂಬಗೀಗಿ ॥ ॥ ಜೀಜೀ ॥

ಜಾಣಿ ಮ್ಯಾಲ ಇಟ್ಟಿರತಾನ ನಂಬಿಗಿ ।
ಅಲ್ಲಿ ಹಾಳs ಅಂತ ಹ್ವಾದ ಹಾಂವೇರಿಗಿ ।
ಹಾವೇರಿ ಊರಾಗ ಆರದಿವಸ ಹುಡುಕಿದರ
ಆ ನಾರಿ ಸಿಗಲಿಲ್ಲ ದೂರ ಹೋದಳಂತ
ದುಃಖ ಮಾಡತಾನ ನಿಂತು ಒಳಿತಾಗಿ ॥ ॥ ಜೀಜೀ ॥

ದುಃಖ ಮಾಡಿ ಆ ಹುಡುಗ ಯಾವ ಕಡಿ ಹೋಗಬೇಕಂತ
ಆಲೋಚನ ಮಾಡಿಕೋತ ಆಲಗೂರಕ ಹೊಂಟನೊ
ಆವಾಗ ಮಾತ್ರ ನೆಪ್ಪಿಗಿ ಬಂತೊ
ಕೇಳಬೇಕ ಖಾಸೀಮನಂತ ಬಾಳ ಹಿಗ್ಗs ಆತ ಅವನೀಗಿ
ಹೋಗಿ ಕೇಳತಾನ ನಿಂತ ಒಳಿತಾಗಿ
ನೋಡಿದೇನೊs ಹೇಳೋ ಖಾಸೀಮಾsನನ ಗೆಳೆತೀಗಿ ॥ ॥ ಜೀಜೀ ॥

ಖಾಸೀಮ ಅಂತಾನs ಹೇಸಿ ಹೆಂಗಸನ ಬೆನ್ನ ಹತ್ತಿ
ಪಾಸಿ ಬಿದ್ದೀನಿ ನಿನ್ನಂಗ ದೇಶ ಸಂಚಾರ ಮಾಡಿನೆಪ್ಪಾ ।
ಏನsಕೇಳತಿs ನನ್ನ ಸುಲಿಗಿ ॥ ॥ ಜೀಜೀ ॥

ಖಾಸೀಮನ ಮಾತ ಕೇಳಿ ಕಸ್ನಾಯಿತ ಅವನ ಮನಸಾ ।
ಉಸಿರ ಹಾಕಿ ಆ ಹುಡುಗ ಬಿಸಿಲಿಗಿ ಬೆನ್ನ ಕೊಟ್ಟು ।
ಬಿಸನಾಳಕ ಹೋಗುದರಾಗ ಹಸು ಆಗಿ ಹಲ್ಲಣ ಆತೋ ॥
ಬಿಕಿಬಿಕಿ ಅಳಕೋತ ಬೆಕಿನಾಳ ಊರಿಗಿ ಹೋಗಿ
ಸಿಕ್ಕsವರಿಗಿ ಕೇಳತಾನ ಅವಳ ಅಕ್ಕನ ಮನಿ ಇಂಗಳಿಗೂರಾ ।
ಅಲ್ಲಿಗಿ ಹೋಗಿರಬೇಕಂತ ಹಂಗ ಹರದ ಇಂಗಳಗಿಗಿ ಹೋಯಿತೊ
ಇಂಗಳಿಗಿ ಹಸನ ಸಾಹೇಬ ಹಸ್ತ ಬಂದದಂತಾ ಹೇಳಿ
ತಿಂಗಳದೊಂದು ತಂಗಳ ರೊಟ್ಟಿ ಕೊಟ್ಟಿದಾನ
ಹಂಗ ಹರದ ಹಂಗೆ ತಿಂತೊ ॥ ॥ ಜೀಜೀ ॥

ಇಂಗಳಗಿ ಊರ ಬಿಟ್ಟು ಗುಂಗ ತಲಿಯಾಗ ಏರಿ
ನಿಂಗದ್ಹಳ್ಳಿ ಮ್ಯಾಲ ಹಾಯ್ದು
ಗಂಗನಳ್ಳ ಹಿಟ್ನಳ್ಳಿ ಚಟ್ಟರಕಿ ಚಾಂದಕೋಟೆ ಅಷ್ಟ ಎಲ್ಲಾ–
–ಸುಮ್ನೆ ತಿರಗಿತೊ । ॥ ಜೀಜೀ ॥

ಎಷ್ಟು ಹುಡುಕಿದರ ನಾರಿ ಬೆಟ್ಟಿ ಆಗಲಿಲ್ಲ ಇನ್ನs
ಬಿಟ್ಟ ಹ್ಯಾಂಗ ಹೋಗಲೆಂತ
ಸಿಟ್ಟಿಲಿಂದ ಆ ಹುಡುಗ ಹುನ್ನಳ್ಯಾಗ ಹುಡಕಿ ಕ್ವಾರಳ್ಳೀಗಿ ಬಂತೊ ॥ ॥ ಜೀಜೀ ॥

ಕ್ವಾರಳ್ಳಿ ಊರಿಗಿ ಹೋಗಿ ಕೇಳಬೇಕ ಮೌಲಾಗಂತ ।
ಬಾಳ ಹಿಗ್ಗಲಿಂದ ಹೋಗಿ ಬಗ್ಗಿ ನಿಂತು ಕೇಳುವಾಗ
ಮಗ್ಗಲ ಮ್ಯಾಲ ಒದ್ದಿದಾರೊ ಮಾನ ಎಲ್ಲಾ ಕಳಕೊಂಡು
ಹೀನ ಆಗಿ ಆ ಹುಡುಗಾ ಹಿಕ್ಕಣಗುತ್ತಿ ಊರದಾರಿ ಹಿಡದ
ಹೋಯಿತೋ ॥ ॥ ಜೀಜೀ ॥
ಹಿಕ್ನಗುತ್ತಿ ಊರಿಗಿ ಹೋಗಿ ಹಿಕ ಮತ್ತೊಂದು ತಗದಾನ ।
ಈ ಕಡಿ ಮಾತ್ರ ಬಂದಿಲ್ಲ ಆಕಿ
ಯಾವ ಕಡಿ ಹೋಗಿರಬೇಕಂತ ಬಳಕೋತ ಬಳಗಾನೂರಿಗೆ
ಹೋಯಿತೋ ॥ ॥ ಜೀಜೀ ॥
ನಳಕೋತ ಆ ಹುಡುಗ ನಾಗರಳ್ಳಿ ಮ್ಯಾಲ ಹಾಯ್ದು
ಶೋಧ ಮಾಡಿ ಹುಡುಕಿದಾರ ನಾದದಲ್ಲಿ ಸಿಗಲಿಲ್ಲ
ಲಾಳಸಂಗ್ಯಾಗ ಆದ ಅಂತ ಗ್ವಾಳಸಾರಕ ಸುಮ್ನೆ ಹೋಯಿತೋ ॥ ॥ ಜೀಜೀ ॥
ಗ್ವಾಳಸಾರ ಊರ ಬಿಟ್ಟ ಜಳ್ಳುರಗಿಗೆ ಹೊಂಟಿದಾನ
ಅಳಕೋತ ಹುಡುಗ ಅರ್ಜುನಿಗಿ ಮ್ಯಾಲ ಹಾಯ್ದು
ಕೇಳಕೋತ ಕಡ್ನಿ ಊರ ಕಾಣಿತೋ ॥ ॥ ಜೀಜೀ ॥

ಖ್ಯಾಲಿ

ಹಾ ಅಹುದೊ ವಡ್ಡನ ಮಾಡಿಕೊಂಡೆ ನಾ ।
ಕರೆ ವಡ್ಡರಾಕಿ । ವಡ್ಡನ ಮಾಡಿಕೊಂಡೆನಾ ॥ ॥ ಪಲ್ಲ ॥ ಜೀಜೀ ॥
ಬಿಂಬ ಎಂಬ ಬಿಂದುಲಿ ಬ್ಯಾಡಂದ
ಕುಂಬಕ ಎಂಬ ಕುಂಕುಮ ಧರಿಸಿದ
ಡಂಬಚಾರಕ ಡಾಬ ಇಡಿಸಿದಽ
ಕಳ ಎಂಬು ಕಾಲುಂಗರ ಬ್ಯಾಡಂದಽ
ವಡ್ಡನ ಹಾ ಅಹದೊ ವಡ್ಡನ ಮಾಡಿಕೊಂಡೆನಾ
ಕರೆ ವಡ್ಡಽರಾಕಿ । ವಡ್ಡನ ಮಾಡಿಕೊಂಡೆನಾ ॥ ॥ ಗೀಗೀ ॥ ೧ ॥
ಕಸಬೆಂಬ ಕಾಜಿನ ಬಳಿ ಬ್ಯಾಡಂದ
ಹಿತ ಎಂಬ ಹಿತ್ತಾಳಿ ಬಳಿ ಇಡಿಸಿದ
ಸರ್ವ ಛಾಯದ ಸೀರೀ ಉಡಿಸಿದ
ಕುಬಾಬ ಎಂಬುವ ಕುಬಸವ ಬ್ಯಾಡಂದ
ವಡ್ಡನ । ಹಾ ಅಹುದೊ ವಡ್ಡನ ಮಾಡಿಕೊಂಡೆ ನಾ
ಕರೆ ವಡ್ಡಽರಾಕಿ । ವಡ್ಡನ ಮಾಡಿಕೊಂಡೆನಾ ॥ ॥ ಗೀಗೀ ॥ ೨ ॥
ರಾಗ ಎಂಬ ರಾಗುಟಿ ಬ್ಯಾಡಂದ ।
ಯೋಗ ಭಕ್ತಿಯಿಂದ ನತ್ತ ಇಡಿಸಿದ ।
ಮುಕ್ತಿ ಎಂಬ ಮೂಗುತಿ ಇಡುಯೆಂದಾ ।

ಯುಕ್ತಿಯಿಂದ ನನಗ ವಿಚಾರ ಹೇಳಿದಾ ।
ವಡ್ಡನ । ಹಾ ಅಹುದೊ ವಡ್ಡನ ಮಾಡಿಕೊಂಡೆ ನಾ ।
ಕರೆ ವಡ್ಡರಾsಕಿ ವಡ್ಡನಾ ಮಾಡಿಕೊಂಡೆ ನಾ ॥ ॥ ಗೀಗೀ ॥ ೩ ॥

ಕ್ವಾರಳ್ಳಿ ಊರs ತೌರೂರ ನಂದಾ ।
ಎಳಮೇಲಿ ನನ ಹಾಂಟ್ಯಾಗ ಮಾಡಿಕೊಂಡೆ
ಆಟ ನೋಟಕ ನಾ ಮರುಳಾದೆ
ಮಡಿವಾಳಪ್ಪನ ಪಾದಕ ಎರಗಿದೆ
ವಡ್ಡನ। ಹಾ ಅಹುದೊ ವಡ್ಡನ ಮಾಡಿಕೊಂಡೆ ನಾ
ಕರೆ ವಡ್ಡರಾsಕಿ ವಡ್ಡನ ಮಾಡಿಕೊಂಡೆ ನಾ ॥ ॥ ಗೀಗೀ ॥ ೪ ॥

ಪದಾ ೨

ಹೆತ್ತವ್ವನ ಮನ ನೋಯಿಸಿ

ಎಲೋ ಘಾತಕಿಯೆಂದೇನೂ ಬಾಯಿಲೆ ಹೊತ್ತ ಹಡದ ತಾಯಿಗಿ ।
ನಿಮ್ಮಪ್ಪನ ಆಯಿಗಿ
ಹೆತ್ತವ್ವನ ಮನ ನೋಯಿಸಿ ಆಡುದು ಹೆಂಗಬಂತೊ ಬಾಯಿಗಿ ॥ ॥ ಜೀಜೀ ೧ ॥

ಅವಲಪುರದೊಳ ನಿಮ್ಮ ತಂದೀಗುನಂದು ಆಯಿತು ಲಗಣ ।
ಅದು ನಿನಗೇನು ಗೊತ್ತಣ್ಣಾ । ಸಮಗಾರ ನಿನಗೇನು ಗೊತ್ತಣ್ಣಾ ।
ಸಹಸ್ರ ವರುಷ ನನ್ನ ಸಂಘ ಮಾಡಿದರ ಆಗಲಿಲ್ಲ ಗರ್ಭೀಣಾ ॥ ॥ ಜೀಜೀ ೨ ॥

ಬಂಜಿ ಅಂತಾ ಬಹು ಜನರು ಕರದರೊ ನಿಮ್ಮ ತಂದಿ ಬೀಜಣಾ
ಹುಸಿ ಹ್ಯಾಂಗ ಹೋಯಿತಣ್ಣಾ ।
ಹನ್ನೆರಡು ದೇವರಗಿ ಹರಕಿ ಹೊತ್ತನಾ ಪಡೆದೆ ಜನಿಸಿ ಬಂದಿಯೊ ಪಾಲ್ಗುಣ ॥
॥ ಜೀಜೀ ೩ ॥

ಮಗಾ ಬೇಕಂತ ಮಲ್ಲಿನಾಥಗs ಹಾಕಿದ ಪ್ರದಕ್ಷಿಣಾ ।
ಅವs ಮಾಡಿದಂತ ಕರುಣಾ ।
ನನ ಭಕ್ತಿ ಭಾವದಿಂದ ಬಾಲನ ಪಡೆದೆ ಜನಿಸಿ ಬಂದಿಯೋ ಪಾಲ್ಗುಣಾ ॥
॥ ಜೀಜೀ ॥ ೪ ॥

ಇಳು ಹನ್ನೆರಡು ದೇವರಿಗಿ ಹರಕಿ ಹೊತ್ನಿ ನಿನಗಾಗಿ ।
ಬಲಭೀಮಗ ಹೋಗತಿದ್ನಿ ಶನಿವಾರ ಮಾರುತಿಗಿ ।
ಒಪ್ಪತ್ತ ಉಂಡೆ ಬೆಸ್ತಾರ ಇಂಡಿ ದೇವರಗಿ ।
ನಡಕೊಂಡೆ ಪರವುತ ಮಲ್ಲಯ್ಯಗss ।
ಶಿವಪುತ್ರ ಹುಟ್ಟಿದಿ ಬಾಲ ನೀ ಈಗ ।
ಬಲು ಜಡಿ ತಗಸಿದೆ ನಿನ್ನಲ್ಲೀಗ ।
ಹಿಂತಿಂತ ಹರಕಿ ಬೇಡಿಕೊಂಡೆ ನಿನ್ನ ಸಲುವಾಗಿ ॥ ॥ ಜೀಜೀ ॥

ನನ ಭಕ್ತಿ ಭಾವದಿಂದ ಕಮಲದಲಿ ಗರ್ಭಾಗಿ
ಒಂದೆರಡು ತಿಂಗಳಗಿ ಗೊತ್ತಾsಗೆದ ಜನರಿಗಿ
ನಾ ಬಸರಾಗಿದ್ದ ಬಾಳ ಹಿಗ್ಗ ನಿಮ್ಮ ತಂದಿಗಿ
ಆ ಮ್ಯಾಲ ನನ್ನs ತವರೀಗಿ
ಸುದ್ದಿ ಕಳುವ್ಯಾರು ಮಂದಿ ಮಕ್ಕಳಿಗಿ
ಸ್ವಾದರತ್ತಿ ನಾದಿನಿಯರಿಗೆ
ನನ ಬಳಗದವರು ಬಂದು ಮಾಡ್ಯಾರ ಕುಪ್ಪಸ ಗಳಿಗಿ ॥
॥ ಜೀಜೀ ॥ ೨ ॥

ಅದು ಕುಪ್ಪಸ ಮಾಡಿದ್ದು ನಿನಗಲ್ಲ ಬಾರಿಗಿ
ನೀ ಹುಟ್ಟಿ ಬರೂನಾ ನಿನಗಾಗಿ ಮಾಡಿದ ಕೊಂಚಿಗಿ
ತೊಡಿಸೀನಿ ಕುಪ್ಪಸದ ಅಂಗಿ । ಅದರಂಗ ತೆಲಿಗಿ ಟೊಪ್ಪಿಗಿ ।
ಇದು ಗೊತ್ತsದ ಎಲ್ಲಾರಗಿ
ಇರ ಇರತ ದೊಡ್ಡವನಾಗಿ । ತೊಟ್ಟಿದೆ ಗಂಡಿನ ಉಡಿಗಿ ॥
॥ ಜೀಜೀ ॥ ೩ ॥

ಏರು ಕುಂಚಿಗಿ ಹರದ ನಿನಗ ಕುಲಾವಿ ಕಟ್ಟೀನಿ ನೆತ್ತಿಗಿ
ಇದು ಗೊತ್ತಿಲ್ಲ ಕತ್ತಿಗಿ ।
ಕೂಡುಪಲ್ಲ ಹೆತ್ತವ ಮನ ನೋಯಿಸಿ ಆಡುದು ಹೆಂಗ ಬಂತೊ ಬಾಯಿಗಿ ॥
॥ ಜೀಜೀ ॥ ಚೌಕ ೧ ॥

ಕಂದ ಹುಟ್ಟಿದೊಂದ ತಿಂಗಳ ತುಂಬಿದ ಮ್ಯಾಲ ಎದ್ದಿತವ್ವಾ ಹೊಟ್ಟಾಂದು ।
ಕೂಸ ಬಾಳ ಕೆಮ್ಮೊದು
ಬೆಚ್ಚ ಬೆಳಗ ಎಚ್ಚರಿಕೆ ಇದ್ದ ಅರದರದ ಗುಟಿ ಹಾಕೂದು ॥ ಜೀಜೀ ॥
ನಂಜ ಆದಿತಂತ ನನ್ನ ಮಗನಿಗೆ ಪತ್ತ್ಯೆ ಬಾಳ ಮಾಡುದು
ನಾ ನಿತ್ಯ ನಿತ್ಯ ನೋಡುದು
ಎಣ್ಣಿ ಹುಳಿ ಮಜ್ಜಿಗೆ ಬಿಟ್ಟ ನನ್ನ ಬಾಯಿ ಮ್ಯಾಲ ಬಡದು ॥
॥ ಜೀಜೀ ॥ ೨ ॥

ನೀರsಡಿಸಿದರ ಗಟಾಗಟಾ ಕುಡಿದರ ಕೂಸಿನ ಹೊಟ್ಟಿ ಕುಟ್ಟ ಹಿಡಿಯುದು
ಬಾಳ ಕಷ್ಟ ಪಡಿಯುದು
ತಿಂದೇನಂತೀನಿ ಸೀತ್ನಿ ಗುಗ್ಗರಿ ಕೂಸಿನ ಹೊಟ್ಟಿ ನಿಬ್ರ ಆಗುದು ॥
॥ ಜೀಜೀ ॥ ೩ ॥

ಇಳು ಹಿಂತ ಪರಿಲಿಂದ ನಾ ಮಾಡಿದೆನವು ಪತ್ತ್ಯೆವು
ಒಂದೆರಡು ತಿಂಗಳಗಿ ಕಮ್ಮ ಆಯಿತವು ಕೆಮ್ಮವು
ಮತ್ತ ಮೂರ ತಿಂಗಳಗಿ ಕಣ್ಣ ಬ್ಯಾನಿ ಬಂದಾವು
ಕೆಂಪಗಾಗಿ ಕಣ್ಣ ಚುಚ್ಚುವವು ತೆರಿಲಾರದ ಮುಚ್ಚವವು

ದಿನ ದಿನಕ ಬ್ಯಾನಿ ಹೆಚ್ಚುವವು
ಮೈಯಾಗ ಉರಿ ತರತರ ಬ್ಯಾನಿ ನಿತ್ಯ ನಿತ್ಯವು ॥ ॥ ಹಾ ಜೀಜೀ ೧ ॥

ಗಾಳಿ ಬಿಸಿಲ ಬಡದು ಎಳಿಗಣ್ಣ ನೀರ ಬಸಿವವು
ಮನಿ ಬಿಟ್ಟ ಹೊರಗ ತರಲಿಲ್ಲ ನನ್ನ ಶಿಶುವವು
ಈ ಶಿಶುವಿನ ಕಾಲಾಗ ಆಗಲಿಲ್ಲ ಹಸಿವವು
ನಾ ಮರಗಿದೆನೆವು ಮರೆ ಮರವು
ಈ ಕಣ್ಣಿಂದಾದವು ದೇವರಗಿ ಒಯ್ತಿನಿ ಕಣವು
ಈ ಪರಿ ಮಾಡ್ಯಾಳ ತಾಯಿ ಹ್ಯಾಂಗ ಹೋಯಿತು ಮರೆವು ॥
॥ ಜೀಜೀ ॥ ೨ ॥

ಏರು ಬೆಲ್ಲ ಕೊಬ್ಬರಿ ಬಲ್ಲಂಗೆ ತಿನಿಸಿನಿ ಮಾಡೀನಿ ಮನಿ ಗೊತ್ತೀಗಿ ।
ಗೊತ್ತ ಇಲ್ಲ ಕಽತ್ತೀಗಿ ।

ಕೂಡುಪಲ್ಲ ಹೆತ್ತವ್ವಗ ಮನಾ ನೋಯಿಸಿ ಆಡುವುದು ಹ್ಯಾಂಗ ಬಂತೊ
ಬಾಯಿಗಿ ॥ ॥ ಜೀಜೀ ॥ ಚೌಕ ೨ ॥

ಸಾಲಿದಿಂದ ಮಗ ಮನಿಗಿ ಬಂದರ ಅವ್ವಗ ಅವ್ವ ಅಂದಾನೊ
ನನ್ನ ಬೆನ್ನ ಹಿಂದ ತಿರಗ್ಯಾನೊ
ಹಽಲ್ಲಿ ಮೆತ್ತಗ ಮಾಡಿ ಉಪ್ಪ ಎಣ್ಣಿ ಹಾಕಿ ಮುಟಗಿ ಮಾಡಿ
ತಿನಿಸೊ ತಿನಿಸೀನೊ ॥ ॥ ಜೀಜೀ ॥ ೧ ॥

ತಾಯಿಮ್ಯಾಗ ಲಡಿ ಬಿಟ್ಟು ಕೆಟ್ಟಿದಾ ದೇವತೆ ದೇವೇಂದ್ರನೊ
ಕಪ್ಪಗಾದ ಚಂದ್ರನೊ
ತಾಯಿ ಹೊಟ್ಟಿಲೆ ಹುಟ್ಟಿ ದಶಪತಿ ಜನಿಸಿದ ಶ್ರೀರಾಮ ಚಂದ್ರನೊ ॥

ಇಳು ಎರಡು ಮೂರ ವರುಷತಾನ ತಾಯಿಮ್ಯಾಲ ಹಂಬಲಾ
ಅಳುತ ಅವ್ವಾ ಅಂತಾ ಬರತಿದ್ದಿ ನನ್ನ ಹಿಂಬಾಲ
ನಾಲ್ಕೈದು ವರುಷತಾನ ತಾಯಿ ಮ್ಯಾಗ ಹಂಬಲಾ
ಅಳುತ ಅವ್ವಾ ಅಂತ ಬರುತ್ತಿದ್ದೆ ನನ್ನ ಹಿಂಬಾಲಾ
ನಾಲ್ಕೈದು ವರುಷಕ ಸುತಗೊಂಡಿನೀ ರುಂಬಾಲಾ
ಆ ಮ್ಯಾಲ ಮಲಿ ಕುಡಿಯಲಿಲ್ಲಾ ॥ ॥ ಜೀಜೀ ॥ ೧ ॥

ಕರ್ನಾಟಕದೊಳಗ ಕೋರಳ್ಳಿ ಬಲಾ
ಶಬ್ದಗೆಂದು ಮಡಿವಾಳಗ ಅನುಕೂಲಾ
ಕವಿ ಮಾಡಿ ಬಿತ್ತತಾರ ಸಗರ ನಾಡ ಹೊಳಿಸಾಲಾ
ಹಿಂಗ ಹೇಳತಾನ ಆ ಮೌಲಾ
ಸಭಾದಾಗ ಕುಣದಂಗ ನೌಲಾ
ತಿಳಿ ಮರ್ತ್ಯದ ಶಿಶು ಹಸಿ ಹಾಲಾ
ಈ ಪರಿ ಮಾಡಿದಾಳು ತಾಯಿ ಕಡಿ ತಪ್ಪಿಲಾ ॥ ॥ ಗೀಗೀ ॥ ೨ ॥

ಕೂಡಪಲ್ಲ (ಪ್ರಾರಂಭದ ಪದ್ಯ ಇಲ್ಲಿ ಹೇಳಬೇಕು). ॥ ಚೌಕ ೨ ॥

ಮಾತಾಡಽ ಮಾನುಣಿ

ಮಾತಾಡಽ ಮಾನುಣಿ ಮನಸ ಹರಿತ ನಿನ್ನ ಮ್ಯಾಲಿ ।
ಹೇಳ ನಿನ್ನ ಬೆಲಿ ।
ಒಂದಿನಾ ಬಂದರ ತಂದ ಕೊಡುವೆ ಜೋಮಾಲಿ ॥ ॥ ಪಲ್ಲ ॥

ಮದ್ದಾನಿ ಹಂಗ ಮೈ ವನಪ ತಿದ್ದಿ ನೀರಾರಿ
ತೇಜಿಯ ಮರಿ
ಪಾಗಾದ ಕುದುರಿಯ ತಂದು ಹಿಡದಂಗ ಪೇರಿ ॥ ॥ ಜೀಜೀ ॥

ಏನ ದಿಡಗ ಬಂತು ನಿನಗ ಇನಽಹೋದ ಬಾರಿ
ಇದ್ದಿ ಸಣ್ಣ ಪೋರಿ
ನಗಿಮುಖ ಮೂಗ ಸಂಪಿಗಿ ಕಂಚಿನ ಗೌರಿ ॥ ॥ ಜೀಜೀ ॥

ನಿಂಬಿ ಹೋಳಿನಂಗಽ ಕಣ್ಣ ಹುಬ್ಬ ನೋಡುವ ವೈಯಾರ
ಸಿಲ್ಕಿ ಸಿಲ್ಕಿ ಕಡಿನೋಟದಲ್ಲಿ ಕಣ್ಣಿಗಿ ಸುರಮದ ಗೆರಿ ॥ ॥ ಜೀಜೀ ॥

ಇಳುವು ಬಂಗಾರದೊಳಗ ಮುಳುಗಿದಂಗ ಪಿಂಡಾ ।
ಎದಿಮ್ಯಾಲ ಮುತ್ತಿನ ಚಂಡಾ
ದುಂಡ ಕುಚದ ಮ್ಯಾಲ ಎಳಿಗೋದಿ ಮಣಿಯ ಹಾಕಿಕೊಂಡಾ ॥ ಜೀಜೀ ॥

ಊಚ ಜರದ ಕಿಲ್ಲೆ ಉಟಗೊಂಡ
ಸೀರಿ ನಿಲಗಿ ಹತ್ತಿ ಹಿಡಕೊಂಡ
ಕೊನಿ ಶರಗ ಹಿಡದು ಕುಣಕೋತ ಹೊಂಟಾಳ ಭರದಂಡಾ ॥ ಜೀಜೀ ॥

ನಾರಿ ರೂಪ ಬೆಂಕಿಯ ಕೆಂಡ
ಖಬರ ಹಾರಿ ಬಿದ್ದೆ ಕಡಕೊಂಡ
ತಾಳಲಾರೆ ಮದನ ಬಾಣಕ ಸಾಕತಿನಿ ಇರಕೊಂಡ ॥

ಏರು ಮಾತಾಡಿದರ ಮುತ್ತ ಉದರಿದಂಗ ಬಾಯಿಲಿ
ನಕ್ಕ ಕಿಲಿಕಿಲಿ

ಕೂಡುಪಲ್ಲ ಒಂದಿನಾಽ ಬಂದರ ತಂದ ಕೊಡುವೆ ಜೋಮಾಲಿ ॥
॥ ಜೀಜೀ ॥ ಚೌಕ ೧ ॥

ಗೆಣ್ಯಾ ಅಂದ ಮಾತಿಗಿ ಸಿಟ್ಟಗೇರಿ ಹೊರಳಿ ನೋಡಿ ।
ನಿನಗೇನು ದಾಡಿ
ಪರ ಹೆಂಗಸರ ಮ್ಯಾಲ ನದರ ಬ್ಯಾಡೊ ಹುಚ್ಚ ಕೋಡಿ ॥ ॥ ಜೀಜೀ ॥

ಬಿತ್ತಿದ ಹೊಲಾ ಮೈದಂಗ ಮಾಡ್ತಿ ಜಮಗೇಡಿ ।
ಅನುತರವಲ್ಲ ನಡಿ
ಬೆಲ್ಲ ಹೋಗಿ ಎಳ್ಳಿನ ಗುಡಾ ಕುಡಿದರಾಗುದು ಲೇವಡಿ ॥

ಅಪಕೀರ್ತಿ ತಂದಿ ಸಂಸಾರ ಮಾಡ ಸತಿಗೂಡಿ
ಮುರಸಿಕೊಂಡಿ ದವಡಿ ।
ಮಾಡತಿರಿ ನಕಲಿ ನಾಲ್ಕಾರ ಮಂದಿ ಗೆಳೆಯರ ಕೂಡಿ ॥ ॥ ಜೀಜೀ ॥

ಇಳುವು ಮಹಾ ಶಂಡ ತಾರಕಾಸೂರ
ಶಚಿ ಕಾಲಾಗ ಹೋಯಿತು ಶಿರಾ ।
ಷಣ್ಮುಖ ಹೊಡದದ ಒಗದ ಅಳಿದ ಗಂಭೀರಾ ॥ ॥ ಜೀಜೀ ॥

ಹಿಂದ ಮುಂದ ತಿಳದ ನೋಡೊ ಜರಾ ।
ಜೀವ ಜೋಕಿ ಮಾಡಿಕೊಳ್ಳೊ ಪಾರಾ ।
ಭಂಡ ಆಗಬ್ಯಾಡ ಹಾದರ ಬೇವಿನ ಸಾರಾ ॥ ॥ ಜೀಜೀ ॥

ನಾವು ಅಲ್ಲ ಬಿಟ್ಟ ಬಸವೇರಾ
ಕಲತಿಲ್ಲ ಹುಟ್ಟs ಹಾದರಾ
ತಲಿ ತುಂಬ ಬಳಗದಾಗ ಮಾನಕಳದಿ ಗಂವಾರಾ ॥ ॥ ಜೀಜೀ ॥

ಏರು ದುಶ್ಯಾಸನ ಸೀರಿ ಸೆಳಯುವುದು ಆಗಲಿಲ್ಲ ಕೈಲಿ ।
ಎಂಥಾ ಹುಚ್ಚ ಪ್ಯಾಲಿ ।

ಕೂಡುಪಲ್ಲ ಒಂದಿನ ಬಂದರ ತಂದ ಕೊಡುವೆ ಜೋಮಾಲಿ ॥
॥ ಜೀಜೀ ॥ ಚೌಕ ೨ ॥

ವವ್ವಾರೆ ನೀವು ಬಟ್ಟಲ ಬಸವೇರೆಲ್ಲಾ ।
ಬಿಟ್ಟಿನಿ ಮಡುವೆಲ್ಲಾ
ಒಳಗುಬ್ಬಿಸಿ ಗಂಡರ ಹೆಸರ ಹೇಳತಿರಿ ಮ್ಯಾಲಾ ॥ ಜೀಜೀ ॥

ಮುಚ್ಚಿಟರ ಮುಂದ ಋಣ ಕಣ್ಣ ಆಗುವನಲ್ಲಾ
ಕೋಳಿಯ ತೊಗಲಾ ।
ಭಾರ ಇರುತನಕ ಶರಿಸೂರಿ ಮಾಡಿ ಸುಖಿಸಲಿಲ್ಲಾ ॥
ಯಾವ ಧರ್ಮದಲ್ಲಿ ಇಟ್ಟ ಸಲಹು ಸತಿಮ್ಯಾಲ
ಕೃಷ್ಣ ಗೋಪಾಲ ।
ಮನಸಿಟ್ಟ ಕೆಡಿಸಿದ ಮಾಯಾಕಾರ ಬಿಡಲಿಲ್ಲಾ ॥

ಇಳುವು ಅಂಥವರದು ಆಯ್ತು ಆ ಹಾಡಾ
ನಮ್ಮಂಥವರದೇನು ಪಾಡಾ ॥
ಮಾಡಿಕೊಂಡ ಗೆಣೆತಾನ ಕತ್ತಿ ಒತ್ತಿ ಅನಬ್ಯಾಡಾ ।
ತಕ್ಕ ವರಾ ನೋಡಿ ಮಾತಾಡ ॥

ಹಕ್ಕಿ ಪಕ್ಕಿ ಇದ್ದಂಗ ಜೋಡಾ ।
ಕೊಟ್ಟದ್ದು ಇರಂಗಿಲ್ಲ ಮಾತಿನ ಅನಗಾಲ ಪಾಡಾ ।
ಹೊಡದರ ಆಗುವುದು ಕೇಡಾ ।
ಬಲ್ಲಕ್ಕಿಗೇನು ಹೇಳುವದೇನು ರಗಡಾ ॥
ಮಾನಾಭಿಮಾನ ನಿಮಗ ಕೂಡಿತ ಕರುಣವ ಮಾಡ ॥

ಏರು ಬಡವ ಹೀನ ಮೋಹದಿಂದ ಮಾತ ಕೇಳ ಹೊಯ್ಕಾಲಿ
ಮಾಡಬ್ಯಾಡ ಖಾಲಿ

ಕೂಡುಪಲ್ಲ ಒಂದ ದಿನಾ ಬಂದರ ತಂದ ಕೊಡುವೆ ಜೋಮಾಲಿ ॥
॥ ಜೀಜೀ ॥ ಚೌಕ ೩ ॥

ಇವನ ಬಾಯಿಲಿ ಮಣ್ಣು । ತರಬಿ ಕೇಳಿ ದಾನಸ್ವಾನ
ಮಾಡಲಿನ್ನೇನ ।
ಒಂದಿವಸ ಹೇಳಬೇಕು ಹೊಡದ ಮ್ಯಾಲೆ ನೋಡೋಣ ॥ ಜೀಜೀ ॥

ಮಂದಿ ಮುಂದ ಹೇಳಬ್ಯಾಡ ಗುಪ್ತದಿಂದ ಇರುವುನ
ಕೇಳ್ಯಾರ ಯಾರ್‍ಯಾರನ ।
ಸಂಜೀಕಿ ಬರಾಗ ಒಂದು ತಗೊಂಡು ಬರ್‍ರಿ ಥಾಗೀಣಾ ॥ ಜೀಜೀ ॥

ನೀರ ಬೇದಸದೆ ಟಂಕ ಹಾಕಲಾರದ ವಡ್ಯಾಣಾ ।
ರಾಗುಟಿ ಚೌರಿಣಾ
ಕೊಟ್ಟರ ಬರುವೆ ಕೊಡದಿರಕ ಹೋಗೋ ಸುಮ್ಮನ ॥

ಇಳುವು ಕೆಂಬಾವಿ ಬಾಜೇರಾ ತಿರಗ್ಯಾಡಿ ।
ಥಾಗಿನ ತಗೊಂಡು ಬಾರ ಹುಡಕ್ಯಾಡಿ ॥ ॥ ಜೀಜೀ ॥

ಯಾತಗಿರಿ ಗುಡ್ಡ ಸೇರಿತ ಹೋಗಿ ಸಿರಗೇಡಿ
ಇಂಗಳಗಿ ಜಾಗ ಘನ ಮೋಡಿ ॥ ॥ ಜೀಜೀ ॥

ಮಲ್ಲ ಹಸನ ಇಬ್ಬರು ಜೋಡಿ
ಚಿಕ್ಕಂದಿಲಿಂದ ಕೂಡ್ಯಾಡಿ
ಹುಸೇನ ಪಟೇಲ ವಸ್ತಾದರ ಕವಿಗಳು ಮಲ್ಲಿಗಿ ಮುಡಿ ॥

ಏರು ಕೋಗಿಲಸ್ವರಾ ಕಾಸೀಮ ಸೂರ ಎಳಿಯಲ್ಲಿs
ಈಸಿದಂಗ ಹೊಳಿಯಲ್ಲಿ

ಕೂಡುಪಲ್ಲ ಒಂದಿನಾ ಬಂದರ ತಂದು ಕೊಡುವೆ ಜೋಮಾಲಿ ॥
॥ ಜೀಜೀ ॥ ಚೌಕ ೪ ॥

ಲೋಕದ ನಡವಳಿಕೆ

ಬಲ್ಲವರಿಗಿ ಕೈಮುಗದ ಹೇಳತೀನಿ ಕಂಡವರ ಮಾತ ಕೇಳರಿ ।
ಒಂದೊಂದು ಸಾರಾಂಶದ ಪರಿ ।
ಸಾರ್ತಕ ಆಗಬೇಕೊ ಮರ್ತ್ಯದೊಳಗ ಹುಟ್ಟಿ ವ್ಯರ್ತ ಹೋಗಬ್ಯಾಡರಿ ॥
॥ ಜೀಜೀ ॥

ದುರಾಚಾರ ನಮ್ಮ ದುರ್ದೈವದ ಫಲ ದೊರಿಯತಾದ ನೋಡರಿ ।
ಅದನs ದೂರ ಮಾಡಿ ನಡಿಯರಿ ।
ಘೋರ ಸಂಸಾರ ಸಾಗರದಾಗ ನೀವು ಸುಳ್ಳೆ ಸಾಯಬ್ಯಾಡರಿ ॥ ಜೀಜೀ ॥

ಸತ್ಯ ನುಡಿ ನಮ್ಮ ಸೌಖ್ಯದ ಎಡಿಯೊ ನಿತ್ಯ ಕಾಲ ಪಡಿಯರಿ ।
ಸದ್ಭಕ್ತಿಲಿಂದ ದುಡಿಯರಿ ।
ಭಕ್ತಿ ಹೀನರಿಗಿ ಮುಕ್ತಿ ಸಿಗುವುದಿಲ್ಲ ಮುಕ್ತಿ ಮಾರ್ಗ ಹಿಡಿಯರಿ ॥
॥ ಜೀಜೀ ॥

ಮುಕ್ತಿಯ ಸಾಧನ ಭಕ್ತಿಯ ಕಾರಣ
ಭಕ್ತಿ ಬಿಟ್ಟು ನೀವು ಮುಕ್ತಿ ಬೇಡತಿರಿ
ಮುಕ್ತಿ ಹ್ಯಾಂಗ ದೊರೆಯುವದಾ ॥ ॥ ಜೀಜೀ ॥

ಈ ರಕ್ತ ಪೀತಕ ಶಕ್ತರಾಗಿ ನೀವು
ಶಕ್ತಿ ಕಳಕೊಂಡ ಯ್ಯಾಕ ಗಳಿಕಿಕೊಡತಿರಿ ಭಕ್ತಿ ಕಳದ
ಇದು ತತ್ವ ನೋಡರಿ ನೀವು ತಿಳದಾ
ಮಹಾ ತತ್ವ ಓದತಾನ ಬೇಧ ತಿಳದಾ ॥ ॥ ಜೀಜೀ ॥

ತನ್ನಿಂದ ತಾ ತಿಳಿಯುವದಾ
ನೀವು ಅಜ್ಞಾನಕ ಬಿದ್ದಲಿ ಅನಾಡ್ಯರಾಗತಿರಿ
ಆಚಾರದಲ್ಲಿ ಮಾಡಿ ಶೋಧಾ ॥ ॥ ಜೀಜೀ ॥
ಅಸಿರಿಕ ಸಾಧನಾ ವಿಚಾರ ಕಾರಣ ಬಿಟ್ಟು ನೀವು ವ್ಯಭಿಚಾರಿ
ನಡಿತಿರಿ ।

ನಡವಳಿಕಿ ಇಲ್ಲ ಶುದ್ಧಾ
ಅನಸ್ಯಾರ ನಡೆಯುವ ಅನಾಡ್ಯೆ ಜನ ಕಂಡು
ಶಿವಾಚಾರ ಬಲ್ಲಂತೆ ಶಿವಮತದವರ ಸಹಿತ ಸಿಂಧಿ ಕುಡಿತಾರ ಕುದ್ದ
ಅವರು ಕಂಡಾ ತಿಂತಾರಪಾ ಕದ್ದಾ
ಕಾಟಕರ ಜೋಡ ಬಿದ್ದಾ । ಯಾವ ಜ್ಯಾತ್ಯಾಗ ಉಳಿದಲ್ಲಪ್ಪಾಸುದ್ದ
ಬಸವಾ ಬಸವಾ ಅಂತಾ ಬಸವ್ಯಾರ ಮನಿಗಿ ಹೋಗಿ
ಬಸರ ಮಾಡಿ ಬೆಳಗಾಗಿ ಬರತಾರ ಎದ್ದಾ
ಈ ಹಸಗೇಡಿ ಜನರು ಬಸವ ಬಸವ ಅಂತಾ

ಬಸವ್ವ್ಯಾರಗಿ ಅರಸುತಾರ
ಭಸ್ಮಗಲ್ಲದು ಬಸವ್ವ್ಯಾರ ಪಾದದ ಧೂಳಿ ಭಸ್ಮದಂಗಿರುವುದು
ಕರೆ ಭಸ್ಮ ಇದ್ದರ ಸಹಿತ ಭಕ್ತಿ ಇಲ್ಲದಕ್ಕಾಗಿ ಭಸ್ಮ ಹೋಗಿ
ಆ ಬಸವ್ವ್ಯಾರ ಪಾದದ ದೂಳಂದ ಸರಿ ಆಗುವುದು
ಇದ ನೋಡರಿ ನೀವು ತಿಳದ ತಿಳದು
ತಿಳಿ ತಿಳದ ಹಾಕರಿ ತೊಳದ ।
ಈ ದಶದಿಕ್ಕ ಹಾಕಿ ಈ ಹಸನ ಮಾಡಿ ಮನಾ
ಕೂಡಪಲ್ಲ ಬಸವ ನಾಮ ನೆನೆಯಲಿ ಭಸ್ಮ ಧರಿಸಿ ಬಹಳ ತಿಳದಾ ॥
॥ ಜೀಜೀ ॥ ಚೌಕ ೧ ॥

ಏರ ಆಚ್ಯಾರವಿದ್ದಲ್ಲಿ ವಿಚಾರ ಇರುವುದಿಲ್ಲ ಆಚಾರ ವಿಚಾರ ಹುಡಕರಿ ।
ನರಕಾಗಿ ನೀವು ದುಡಿಯರಿ
ಧರ್ಮ ಕರ್ಮದ ದಾರಿ ತಿಳದ ದುರವ್ಯಸನ ದೂರಮಾಡಿರಿ ॥ ॥ ಜೀಜೀ ॥
ನಮ್ಮ ದೇಶದ ಪದ್ಧತಿ ಕೆಟ್ಟು ಹೋಗ್ಯಾದ ನಿಷ್ಠಿ ನೇಮದ ಬಗಿ
ಎಳ್ಳಷ್ಟು ಇಲ್ಲೊ ಯಾರಿಗಿ ।
ಜಾತಿ ನೀತಿ ಹೇಳು ಜಂಗಮ ಗುರುವಂತ ನಂಬಿಗಿ ಇರಬೇಕ
ಅವರೀಗಿ ॥ ॥ ಜೀಜೀ ॥

ನೆಂಬಿಗಿಟ್ಟ ನಮ್ಮ ಗುರು ಹಾನಂತ ಬೀಳಬೇಕೊ ಪಾದಿಗಿ ।
ಹೊಂದತಿರಿ ನೀವು ಮುಕ್ತಿಗಿ ।
ಹೊಲಗೇರ್ಯಾಗ ಬಿದ್ದು ಕುಲ ಹದಗೆಡಿಸಿ ಬಿತ್ತೊ ಬಳಿಕ ಮುಕ್ತಿ
ಸಿಗುದು ಎಂದಿಗಿ ॥ ಜೀಜೀ ॥

ನಮ್ಮ ತಾಯಿಯ ಮನ ನೊಂದಿಸಬಾರದೊ ಪೂಜೆ ಮಾಡಬೇಕೊ
ತಾಯತಂದಿಗಿ

ಹಡದಂತ ನಮ್ಮ ಜನನೀಗಿ ।
ಹಲ್ಕಟ ಬೈಯ ತಿರೆಪ್ಪಾ ಹೆಂಡರ ಮಾತ ಕೇಳಿ ರಂಡೇರ ಅಂತೀರಿ
ತಾಯಿಗಿ ॥ ॥ ಜೀಜೀ ॥

ರಂಡೇರಂತಿರಿ ತಾಯಿಗಿ । ಬೇಗಳ ಬಾಯಿಗಿ । ನುಡಿಯತದ ನಾಲಿಗಿ
ನಿಮಗ ಕೂನ ಇಲ್ಲ ಹೊದಿರಿ ।
ಹಿಂತಾ ಅಡ್ನಾಡಿ ನಡಿ । ತಾಯಿ ಪಾದ ಹಿಡಿ
ಭಕ್ತಿ ಹಿಡಿ ಭಾವ ಜೋಡಿ ಮುಕ್ತಿಯೆಂಬ ಎಡಿ ತಗೋರಿ
ಅದು ನಿಮಗಾಗಿ ಕುಂತದ ಆಗಲಾಬಲ್ಲವನೆ ಬಲ್ಲಾ
ಈ ಕುಶಲಾ
ಈ ಕುಶಲಕೂನ ಹಿಡದ ಕುಬೇರನ ಸರಿ ಸ್ವರ್ಗ ಮರ್ತ್ಯೇಕ ಬೇಧ ಇಲ್ಲಾ ॥
॥ ಜೀಜೀ ॥

ಈ ರಂಡೇರ ಮೋಹಕ ಮರುಳಾಗಿ ಮಳ್ಳ ಮಂದಿ ಹೆಂಡರದ ಮರತಾರ ।
ಮರ್ಧತರ ಮೞರಿ ಮನಿಕಡಿ ।
ಮನಿಹೊಲಾ ಅಂತು ಮೊದಲೞ ಮಾರ ಅಂತಾರೞ ॥
ಮಾರಿ ಮನ್ಯಾಗಿನ ಗಂಟ ಒಯ್ದು ಕೊಟ್ಟ ಭಂಡ
ರೆಂಡಿಯ ನೆಂಟ ಅನಸತಾರ । ಹಿಂಗ್ಯೆತಿ ಕಲವಿಗಿ ಕಾಲಾ
ಥೇಟ ಘಟಂಗರಗತ್ಲೆ ಇವರ ಡೌಲಾ ।
ಬೂಟ ಮೆಟ್ಟಿ ಉಟ್ಟಾರ ಶಾಲಾ । ಇವರ ತಾಟ ಮಾಟಕಿಲ್ಲಾ ।
ಇವರ ತಾಟ ಮಾಟ ಮುಗದ ಮ್ಯಾಲ ರಂಡೇರ ಹಾಂಟ ಕುಡಸ್ತಾರ
ಬಿಡುದಿಲ್ಲಾ ॥ ॥ ಜೀಜೀ ॥

ಇಳು ಒಣಾ ಆಸೇಕ ಬಿದ್ದು ನೀವು ನಾಶ ಆಗತಿರಿ
ಕಾಸಾ ಹೆಣ್ತೇಗಿ ಪಾರಿಕತಿ ಕೊಡತೀರಿ
ಪಾರಿ ಕತ್ತಿ ಕೊಟ್ಟಂವಗ ಪಾಸಿ ಕೊಡಬೇಕಂತ ಯಮಾ ಹಿಡದಾನ
ಈ ಕೌಲ ॥ ॥ ಜೀಜೀ ॥

ಈ ಮಾತ ನನಗ ಗೊತ್ತಿಲ್ಲ । ನಮ್ಮಪ್ಪ ಹೇಳಿದ ಈ ಅಕಲಾ ।
ಆ ಮಡದಿ ಕಳಕಳ ಕೇಳಿ । ಕಡಿಕಾಲಕ ಬೀಳತೀರಿ ಅಂತಾ
ಯಮಶೂಲಾ ॥ ॥ ಜೀಜೀ ॥

ಏರ ಅಜ್ಞಾನಿ ಹುಡುಗ ನಾ ನನಗಂತು ಗೊತ್ತಿಲ್ಲಾ ಸುಜ್ಞಾನಿಗಳು ಕೇಳರಿ
ಸುದ್ಧ ಹಾದಿ ಹಿಡಿಯರಿ ।
ನೀವು ಸುದ್ದ ಹಾದಿ ಹಿಡಿಯರಿ ಧರ್ಮ ಕರ್ಮದ ದಾರಿ ತಿಳಿದ
ದುರವ್ಯಸನ ದೂರ ಮಾಡಿರಿ ॥ ॥ ಜೀಜೀ ॥

ಕೆಟ್ಟ ಮಂದಿ ಈ ಕಲವಿಗದಾಗ ಹುಟ್ಟಿ ಬಿಟ್ಟರ ಧರ್ಮದ ಬಳಿ
ಕರೆ ಅವರ ಬಿದ್ದಾರ ನಡ ದಾರಿಯಲಿ
ಮಡದಿನ ಬಿಟ್ಟು ಮದನಕ ಒಳಗಾಗಿ ಹೋಗತಾರೋ ಮಗಳೀಗಿ ॥
॥ ಜೀಜೀ ॥

ಮಾನವ ಜನ್ಮಕ ಜ್ಞಾನ ಇಲ್ಲ ಕರೆ ಅರುವಿನ ಜಲ್ಮಕ ಅರುವಿಲ್ಲ
ಕರೆ ಚೊಪ್ಪಿಗೆ ಹಾಕಿಕೇರಿ ಏರಿಗೆ ಕಡೊಇ ಹಿಡದಾರ ಕೈಕೈಯಲಿ ।
ಬಡಿವಾರ ಮಾಡುತ ಬಡವನ ಮಡದಿಗಿ ರಂಬಿಸಿ ಹಾಕ್ತಾರ ಬಲಿ ॥
॥ ಜೀಜೀ ॥

ಹಿಂತಾ ಕೆಟ್ಟ ನಡೆಯುವ ಕೊಟ್ಟಿ ಮಂದಿಗಿ ಸೃಷ್ಟಿಯೊಳಗ ಹುಟ್ಟಿ
–ಕಳದಿಟ್ಟಾರ ಮಳಗಾಲಾ ।
ನಾ ಎಷ್ಟ ಹೇಳಲಿ ಕೊಟ್ಟಿ ಗುಣಾ ನೋಡಿ ಸಿಟ್ಟಿಲಿಂದ ಶಿವ
ತಂದಿಟ್ಟಾನ ಬರಗಾಲಾ

ಹೊಟ್ಟೆ ತುಂಬಾ ರೊಟ್ಟಿ ಕಾಣಲಿಲ್ಲಾ ಒಟ್ಟುಗೂಡಿ ಕೂತ ಕೆಟ್ಟ
ಮಾತಾಡಿ ಕದನಹಚ್ಚಿ ತಿಂತಾವ ಹಗಲೆಲ್ಲಾ ॥ ಜೀಜೀ ॥

ಹಿಂತಾ ಕೆಟ್ಟ ಮಂದಿ ಕರನಾಟಕದೊಳಗ ಬಾಳಬಲ್ಲಂಗ ಕುಳತಿವೆ
ಕೂಳಿಲ್ಲಾ ಇವುಕಿಲ್ಲಾ ಕೊರವಾ ।
ಈ ಪರದೇಶಿ ಮಂದಿs ಪಾಪದ ಗುಣಾ ನೋಡಿ
ತಾಪತ್ರಯ ತಂದ ಪರಮಾತ್ಮಾ ಗರುವಾ ।
ಬರಾ ಬಿದ್ದರಂತ ಬಿಕಿಬಿಕಿ ಸಾಯತಾವ ಬಾಳೇನ ಹೇಳುದ ಇನ್ನs
ಆದರೂ ಇಲಾಜಿಲ್ಲಾ ಇವುಕ ॥ ॥ ಜೀಜೀ ॥

ಹಗಲ ಹನ್ನೆರಡು ತಾಸ ನೋಡ ಹೊಟ್ಟೆ ಕಿಚ್ಚಿನ ಗುಣಾ
ಒಟ್ಟಿದ ಬನವಿಗಿ ಬೆಂಕಿ ಹಚ್ಚಿ ಬರವ ಬೀಳಸಪ ಮಂದಿ ಇರುವರಾ ।
ಬಸವಣ್ಣ ಪತ್ರಿಯ ಹಸಿ ಬಿಸಿ ಇಲ್ಲದೆ ಭಸ್ಮ ಮಾಡುವಂತ
ಬದ್ಮಾಂಶ ಮಂದಿಗೆ ಎಲ್ಲಿದ ಬಂದಿತ ಸುಖವಾ ।
ಕರೆ ಕರೆ ಮಾತ ಈ ಧರೆಯೊಳಗ ನೋಡರಿ ।
ಧರ್ಮ ಎಂಬುದು ಉಳಿಲಿಲ್ಲಾ ಉಡಾಳ ಮಂದಿಗಿ ಹೆಚ್ಚಾತ ಹಿರಿ ॥
॥ ಜೀಜೀ ॥

ಪರೋಪಕಾರ ಮಾಡಿ ಪುಣ್ಯಾನು ಪಡೆಯಲಿಲ್ಲ
ಹಂಕರ ಮಂದಿ ಕೂಡಿ ಉಂಡಾರ ಕುರುಸಾಲೆ ಪರ್ವಾ
ಊರ ಊರಿಗಿ ಎಲ್ಲಾ ಸೇರಕೊಂಡ ಕೂತಾರಪ್ಪಾ
ಯಾರಿಗಂತ ಅನ್ನಭೆಕು ಚೋರ ಬಾಡ್ಯಾ ಗೋಳ
ಕದ್ದ ಒಯ್ದಾದಂತ ಕಾಲಾನ ಕೆರುವಾ ॥

ಕಂದ ಮೌಲಾಲಿ ಬಂದು ಕರ ಮುಗದ ಹೇಳತಾನ ಇಂದಿಗಿ ಸುರುವ।
ಕೆಟ್ಟ ಗುಣಗಳೆಲ್ಲಾ ಸುಟ್ಟ ಬಿಡರಿ ಇಲ್ಲೀಗಿ ।
ಕಲಿವಿಗನ ಕಥಿ ಕಂಡು ಮೌಲಾಲಿ ಹೇಳಿದ ಧರ್ಮದ ನಡಿಯ ಅಡ್ನಾಡಿ
ಕಲವಿಗದಾಗ ಬಂದು ಕರ್ಮ ಹೇಳತಾದ ಕೂಗಿ

ಪದ್ಮಾವತಿ ಪಾರಿಜಾತ

ನಿಮ್ಮ ತಪ್ಪ ಮಾಡಿದ್ದೆಲ್ಲಾ ಮುದ್ದಾಮ ಮುಳುಗಿಸಿ
ಗದ್ದಲ ಮಾಡತಿರಿ ನೀವು ಕಾಲನಾಡಿಸಿ
ಸಧ್ಯ ಸರ್ವರಿಗಿ ಹೇಳತೀನಿ ಕೈ ಜೋಡಿಸಿ
ಬುದ್ಧುಳ್ಳವರು ಕೇಳರಿ ನನ್ನ ಪದಾ ಹಾಡಿಸಿ
ಗುದ್ಲಿ ಮಂದಿಗೇನ ಗೊತ್ತಾ ಪದ್ಮಾವತಿ ಪಾರಿಜಾತ
ಮಧ್ಯರಾತ್ರಿಯೊಳು ನೀರ ಕುಡಿತಾವ ನೀರಡಿಸಿ
ಬುದ್ದಿಗೇಡಿ ಮಂದಿಯೆಲ್ಲಾ ಲೋಕ ಹದಗೆಡಿಸಿ ॥

ಪುರೋಹಿತರ ಮಾಡಿದ ನುಡಿ ಪೂರಾ ಮರತಬಿಟ್ಟಣ್ಣಾ
ಕಮಾನಕಾಟಿ ಅಂಗಿಯು ಬಾರಾ ಕಸೀದು
ತಲಿ ಮ್ಯಾಲ ರುಮ್ಮಾಲ ಸುತ್ತತ್ತಿದ್ದರೊ ಪಕ್ಕಾ ಏಳ ಮಳದ್ದು
ಐದಾರು ಮಳಾ ಉದ್ದ ಧೋತರ ಉಡುವದೊ
ಕಟ್ಟಾ ಮಾಡಿಸಿಕೊಂಡು ತೆಲಿ ಅಂಗಳದಾಗ ತೊಳಿಯತಿದ್ದರೊ
ಬಚ್ಚಲದಾಗ ಜಳಕಾ ಆ ಮ್ಯಾಲ ಆಗುವದು
ತಲಿಮ್ಯಾಗಿನ ಕೂದಲೆಲ್ಲಾ ತುಂಬಾ ಬೋಳಸುದು
ತಲಿ ತುಂಬಾ ಕೂದಲ ಬಿಟ್ಟು ರುಂಬಾಲ ಇಲ್ಲದೆ ತಿರಗಾಡಿದವಗ
ಬೈಲಿಗಿ ತರತಿದ್ದರಪ್ಪಾ ಅವನ ಕಿಂವಿ ಹಿಡಿದು
ಬೈಸ್ಕಾರ ಹಾಕತೀವಿ ಅಂತಾ ಅಂಜಿಕಿ ಹೇಳುದು
ಹಿಂತಾ ನುಡಿ ಇತ್ತೊ ಶಿವಾಚಾರ ಸರ್ವ ಮಂದಿದು
ಹಿರ್‍ಯಾರ ಹೇಳಿದಂತೆ ಕೇಳಿ ಹಿಂದಿನವರು ಸಾಗಿ ಹೋದರೊ
ಕುಂದ ಹತ್ತಲಿಲ್ಲ ಒಂದು ಯಾವ ತರಹದ್ದು
ಪಂಚ ಪಾಂಡವರ ಸರಿ ಅವರಿಗಿ ಯ್ಯಾಕ ಅನಬಾರದು ॥ ॥ ಜೀಜೀ ॥

ಕಾಕ ಮಂದಿ ಹುಟ್ಟಿ ಲೋಕ ಎಲ್ಲಾ ಕೆಡಿಸಿ ಬಿಟ್ರೊ
ನಾಲ್ಕು ಮೂರು ಅಂಗಿ ಗಿರಣಿಮ್ಯಾಗ ಹೊಲಸುದು
ಕೋಟ ಜಾಕೀಟ ಚ್ಯಾಟಿ ಶರ್ಟ ಕಾಲರ ಹಚ್ಚುವದು
ನಂವವರಿ ಮ್ಯಾಂಜಿಸ್ಟರ ಧೋತರ ಉಡುವದು
ತಲಿ ತುಂಬಾ ಕೂದಲ ಬಿಟ್ಟು ರುಂಬಾಲ ಇಲ್ದೆ ತಿರಗತಾರ
ಯಾವಾಗರೆ ತಾಸ ಗಳಿಗಿ ಟೊಪ್ಪಿಗಿ ಹಾಕುವುದು
ಥೇಟ ಕೈದಿ ಮಂದಿಯಂತೆ ಎಲ್ಲಾ ಸಗಟ ಕಾಣುವುದು ॥ ॥ ಜೀಜೀ ॥

ಇಳು ದುಡ್ಡಿಗೆರಡು ಬೀಡಿ ಕೊಂಡು ಸೇದಿ
ಎದರದಿಲ್ಲ ಕೂಲಿ ಇಲ್ಲದ ಮಂದಿ
ಎಷ್ಟ ಉಳದಾವ ಸೇದಿ ಇಟ್ಟಿಟ್ಟ ಬೀಡಿ ಸೇದತಾವ ॥ ॥ ಜೀಜೀ ॥

ಮುಂಜೆಳೆ ಎದ್ದ ಮನಿಯಾನ ಮುದಕರಾ
ಹೊಟೇಲಕ ಹೋಗತಾರ । ಚಹಾ ಕುಡಿತಾರಾ
ತಿನೋದ ನೋಡತಾರ । ಏನ ಹ್ವಾದುವೊ ಹಲ್ಲ ಅಂತಾರ ॥ ಜೀಜೀ ॥

ಹುಡುಗರಿಗಿ ಕೊಟ್ಟಂಗಾತೊ ಹಾಸಿ । ಮನಿಕಡಿ ಆಸಿ
ಬಿಡೊ ಕಪ್ಪಬಸಿ । ಒಳಗೆ ಇರತಾರಾ
ಚೆಂತ್ಯಾನಕಽ ಚಹ ಕುಡಿತಾರಾ ॥ ॥ ಜೀಜೀ ॥

ಏರ ಚಹಾ ಕುಡದ ಚನ್ನಗರೆಲ್ಲಾ ಚ್ಯಾಣಕಿ ಹಂಗ ಮಾತ ಬಾಳ
ತಾಯಿ ತಂದಿಗೂಡ ಬಾಯಿಗಿ ಬಂದಂಗ ವಾದಿಸಿ
ಮಂದಿ ಮ್ಯಾಗ ಹೋಗತಾರ ಹೆಡಕ ಹಾರಿಸಿ ।
ಒಂದು ಗುದ್ದಿದರ ತಾಳುದಿಲ್ಲ ಬೀಳತಾವ ಒದ್ದರ ಜ್ಯಾಡಿಸಿ ॥
॥ ಜೀಜೀ ॥

ಕೂಡುಪಲ್ಲ ಗುದ್ದಿ ಮಂದಿಗೇನ ಗೊತ್ತ ಪದ್ಮಾವತಿ ಪಾರಿಜಾತ
ಮಧ್ಯರಾತ್ರಿಯೊಳು ನೀರ ಕುಡಿಯತಾವ ನೀರಡಿಸಿ ॥ ॥ ಜೀಜೀ ॥
ಬುದ್ಧಿಮಂದಿಗೆಲ್ಲ ಲೋಕ ಹದಗೆಡಿಸಿ ॥ ॥ ಚೌಕ ೧ ॥

ರಾಜ ಪೋಷಾಕ ಉಟ್ಟವರೆಲ್ಲಾ ರಾಜರ ಸರಿ ಆಗುವದಿಲ್ಲಾ
ಮೇಜ ಬಾಕಿನ ಮ್ಯಾಲ ಇವರ ಕಸಾನಾ ಆಗುದು
ಇವರ ಕಽಟ್ಟವಾಗಬೇಕಾದರ ಮೂರ ತಾಸನಾಗುವದು
ಸೇರ ಎಣ್ಣಿ ಸಾಲುದಿಲ್ಲ ಕೈ ಮೈ ತಿಕ್ಕುದೊ
ಸಾಲಲಿಲ್ಲ ಕೊಬ್ರಿಎಣ್ಣಿ ಹೆಣ್ಮಕ್ಕಳ ತಲಿ ಕಾಣಲಿಲ್ಲ
ಒಣಾ ಕೂದಲ ಹಿಕ್ಕಿ ಹಣಿಗಿ ಹಲ್ಲ ಮುರದೊ
ತುರುಬ ಸಣ್ಣಾಗಾಗವುದು ಕೂದಲ ಹರದೊ ॥ ಜೀಜೀ ॥

ಕಾಸ ತನ್ನ ಹೆಂಡರ ಮಕ್ಕಳಿಗಿ ಬೇಡಿದರಂದ್ರ ಪೋಷಾಕ ತೊಡಿಸಿ
ಬ್ಯಾಸರಾಗಿ ಬೀಸುಗಿರಣಿ ತಂದರು ತಮ್ಮ ಊರಾಗ ।
ತ್ರಾಸ ಇಲ್ದೆ ಬೀಸಿ ಕೊಡತಾರ ಒಂದ ಗಳಿಗ್ಯಾಗ
ಹಾಸಿ ಮಲಗತಾರ ಹೆಣ್ಮಕ್ಕಳ ಆಯಾಸ ಇಲ್ದಂಗ
ಪಾಯಾ ಸುದ್ಧ ನಿಮ್ಮಲ್ಲಿ ಇಲ್ಲ ಹದ್ದ ಇಲ್ದೇ ಸಂಸಾರ ಮಾಡಿ
ಇದ್ದ ರೊಕ್ಕಾ ಇಟ್ಟ ಹೋಗ್ತೀರಿ ಹಿಟ್ಟಿನ ಗಿರಣ್ಯಾಗ
ಕೆಟ್ಟ ಹೊಯ್ತು ಸಂಸಾರ ಅಂತೀರಿ ಹೆಂಗಸರ ಕಾಲಾಗ ॥ ಜೀಜೀ ॥

ಹೆಂಗಸರ ಮ್ಯಾಲ ಹರಳಿಕೊಟ್ಟು ಸಂಸಾರೆಲ್ಲಾ ಕೆಟ್ಟು ಹೋಯ್ತು
ಶೋಭಾಕ ಚಂದ ತಂದ ಕನ್ನಡಿ ಇಟ್ಟರಿ ಕರಸಿ ಮನಿಯಾಗ
ಕೋಟ ತೊಟ್ಟ ನಾರ್‍ಯಾರ ಮಾರಿ ನೋಡ್ಯಾರ ಅದರಾಗ
ಕಾಡಗಿ ಕುಂಕುಮ ತೀಡರಂತಿರಿ ಕಸ್ತೂರಿ ತಗದಂಗ

ದೊಡ್ಡವರಂತೆ ಅಜ್ಜ ಇಟ್ಟ ಮಡ್ಡಮ್ಮನಂತೆ ತಿಂದಮ್ಯಾಗ
ಮುಂದಕ ಹೋಗಿ ಹೇಲುದಿಲ್ಲ ಪಾಯಕನಿ ದೊಡ್ಯಾಗ
ಹಿಂತಾ ಸೋಕಿಗಾಗಿ ಸಂಸಾರ ಆಯಿತ ಸಾವಕಾರ ಬಡ್ಡಿಯೊಳಗ ॥
॥ ಜೀಜೀ ॥

ಇಳು ಸಾಲಾ ತಂದು ಶೋಕಿ ನೀರು ಮಾಡಿ ।
ನಾರ್‍ಯಾರೆಲ್ಲ ಕೂಡಿ । ಬಿಟ್ರೊ ನಡೆ ನುಡಿ ।
ಇಟ್ರೊ ಹೊಸಾ ದ್ಯಾಸಾ । ತರತರದ ತಾರಿತಪ ಡ್ರೆಸ್ಸಾ ॥ ಜೀಜೀ ॥

ದುರವ್ಯಸನ ಸೇರೇದ ಮನಿಮಾಡಿ
ಮರ್ತಿರೊ ಮನಿಕಡಿ । ಬರ್ತೀರೊ ಹರಗ್ಯಾಡಿ
ಹೊಟೇಲದಾಗ ದ್ಯಾಸಾ । ಪಟೇಲಬೀಡಿ ಪೀನೇಕೊ ಬಹುಸೊಗಸಾ ॥
॥ ಜೀಜೀ ॥

ಖಾನೇಕೋ ಖಾನಾವಳಿ ಪೀನೇಕೊ ಪಟೇಲಬಿಡಿ ।
ಜಾನೇಕು ಮೋಟಾರಗಾಡಿ
ಸರ್ವಿಸ್ಯೆತಿ ಸರು ಮಂದಿಗಿ ॥
ದೇಖನೆ ಬಹುತ ಅಚ್ಛ್ಯಾ ಹೈ ಸಿನೇಮಾ ಹುಚಮಂದಿಗಿ ॥

ಏರು ಖಾನೇಕು ಪಾನಪಟ್ಟಿ ಸಿಗಬಿತ್ತ ಹೆಣ್ಮಕ್ಕಳಿಗಿ

ಕೂಡಪಲ್ಲ ಗುದ್ಲಿ ಮಂದಿಗೇನ ಗೊತ್ತ ಪದ್ಮಾವತಿ ಪಾರಿಜಾತ
ಮಧ್ಯರಾತ್ರಿಯೊಳಗ ನೀರ ಕುಡಿತಾವ ನೀರಡಿಸಿ
ಬುದ್ದಿ ಮಂದಿಗೆಲ್ಲಾ ಲೋಕ ಹದಗೆಡಿಸಿ ॥ ॥ ಜೀಜೀ ॥ ಚೌಕ ೨ ॥

ಲೋಕದಲ್ಲಿ ನೋಡ್ರೆಪ್ಪಾ ಶೋಕಿ ಜನರು ಹೆಚ್ಚಾಗ್ಯೆತಿ
ಮತ್ತ ಒಂದು ಹೇಳ್ತೀನಿ ಚಿತ್ತ ಇಟ್ಟ ಕೇಳರಿ ನೀವು
ಸತ್ತ ಬಿತ್ತೊ ಶಿವಾಚಾರ ಕಣ್ಣಿಗಿ ಕಾಣುದು
ಪತ್ಯೆ ಹತ್ತಲಿಲ್ಲ ಸತ್ತ ಅಲ್ಲೆ ನಾರುವದು
ಹೊತ್ತ ಒಯ್ದು ಇಲ್ಲಿ ಯಾರು ಮಣ್ಣ ಮಾಡುದು
ಖಾಜಿ ಮುಲ್ಲಾನಂತೆ ಎಲ್ಲಾ ಸಗಟಸರುವು ಉಟ್ಟಿದಾರೊ
ಮುಸಲ್ಮಾನರ ನೇಮದಂತೆ ಸುಲ್ತಿ ಮಾಡುವದು
ಇವರ ಪೂರಾ ಕೊಯ್ಯಾತಾರೇನೋ ನನಗ ತಿಳಿಯದು.

ಕಣಗಂಡ ಮಾತಿದು ಹೆಣ್ಣ ವೇಷ ತೊಟ್ಟಿದಾರೊ
ಕನಡಿ ಕೈಯಾಗ ಹಿಡದ ಇವರು ಕೂದಲ ಹಿಕ್ಕುವದು
ನಿತ್ಯ ನಿತ್ಯ ಮೋತಿಮ್ಯಾಲ ಕತ್ತಿ ಆಡಿಸುವದು
ನಿನಗೆ ಗೊತ್ತಿಲ್ಲೇನೋ ಗಂಡ ನಾಮ ಗೈಭಿಗಾದದ್ದು

ಗಂಡಸಂಬವ ಎಲ್ಲಿ ಅದಾನ ಕಂಡೇನಂದರ ಕಾಣಲೊಲ್ಲ
ಬಗಳಬ್ಯಾಡ ನೀ ಗಂಡ ತರಪೆ ಹಿಡದ
ಬಿಟ್ಟ ಬಿಡೋ ಸೆಂಡಮಂದಿಗಿ ಯಾಕ ಬೆಳಸುವದು
ಫ್ಯಾನ್ಸಿ ಹೆಂಗಸರಂತಾ ಹಾಸ್ಯ ಮಾಡಿ ಹಾಡತಿರಿ
ಫ್ಯಾನ್ಸಿ ಹೆಂಗಸರನ ಕರಕೊಂಡ ಬಂದ್ಯೋ ನೀನೇ ಕಾಲಬಿದ್ದು
ಆಕಿಗಿ ಹಾಡ್ಲಾಕ ಹಚ್ಚಿದಿ ಪದಾ ಹಂತಾದು ಹಿಂತಾದು
ಆಕಿ ಮ್ಯಾಲ ಚುನುಮುರಿ ಬೆಂಡಬತ್ತಾಸ ಹಾರಸುದು
ಹೆಣ್ಣಿನ ಬೆನ್ನಹತ್ತಿ ತಿರಗುವ ಹರದೇಶಿಯಂವಗ
ಲಾಭವಾತೊ ಬಳಕೊಂಡನೊ ಬೆಂಡ ಆಕಿ ಕಾಲಾಗ ಬಿದ್ದದೊ

ಇಳು ಪಿಶಿಬ್ಯಾಗ ತುಂಬಿದಾರೊ ಬೆಂಡಾ । ಚುನುಮುರಿ ಬಳಕೊಂಡಾ
ಬತ್ತಾಸ ಆಯುಕೊಂಡಾ । ಹಾಕ್ಯಾರೊ ಹೆಗsಲಿsಗಿ ।
ಬಸಯ್ಯಗ ಕೊಟ್ಟಾರ ಒಂದ ಸೊಲ್ಲಿಗಿ ॥ ॥ ಜೀಜೀ ॥

ಬಸಯ್ಯಗ ಬಂತೊ ಬಾಳಸಿಟ್ಟಾ । ಮುನಸ ಮಾಡಿ ಹೊಂಟಾ ।
ಸೈಪಕ ಬಿಟ್ಟಾ । ಬಂದಿರೊ ಇಲ್ಲೀಗಿ ।
ವಿಷಯ ಏನೋ ನನ್ನ ಪಾಲಿಗಿ ॥ ॥ ಜೀಜೀ ॥

ಕೂಡಪಲ್ಲ ಗುದ್ಲಿ ಮಂದಿಗೇನ ಗೊತ್ತ ಪದ್ಮಾವತಿ ಪಾರಿಜಾತ
ಮಧ್ಯ ರಾತ್ರಿಯೊಳು ನೀರ ಕುಡಿಯತಾವ ನೀರಡಿಸಿ
ಬುದ್ದಿ ಮಂದಿಗೆಲ್ಲಾ ಲೋಕ ಹದಗೆಡಿಸಿ ॥ ॥ ಜೀಜೀ ॥ ಚೌಕ ೩ ॥

ಹುಸಿ ಹೋಗದುನೀ ಮರಿ

ಹೊಲಾ ಮಾಡಬೇಕೊ ನೆಲಾ ಇಲ್ಲದಲ್ಲಿ ಬೇಲಿ ಇಲ್ಲದೆ ಬೆಳೆಯರಿ।
ಹಸನ ಮಾಡೊ ಹೊಸ ಎರಿ
ಪೂರ್ಣ ಹಸಿಯ ನೋಡಿ ಬಿತ್ತೊ ಬಿಳಿ ಜೋಳಾ ಹುಸಿ
ಹೋಗದುನೀ ಮರಿ ॥ ॥ ಜೀಜೀ ॥

ಮಾಗಿ ಮಾಡೋ ಮಹಾಲಿಂಗನ ಬೆಳಕಿಗಿ ಹಡ್ಡಿ ಕರಕಿ ತಗಿಯರಿ ।
ಕಣಗಲ ಕಿತ್ತಿ ಒಗಿಯರಿ
ಮೂರು ಹರಿಗಳು ಹರಿದು ಹೋಗತಾವ ಮುಂದ ಒಡ್ಡ ಬಿಗಿಯರಿ।
॥ ಜೀಜೀ ॥

ಕಾಮ ಕ್ರೋದವೆಂಬ ಕೂರಗಿ ಹೂಡಿ ಲೋಭ ಮೋಹ ಎರಡು ಹೇರಿ।
ಬಳಸಾಲಕ ಬೇಕರಿ
ಮದಮಚ್ಚರ ಇವು ಮೊದಲೇ ಕೊಳ್ಳಕಟ್ಟಿ ಹಳ್ಳs ಹರಿ ಎರಿಬಿತ್ತರಿ ॥
ಅಂಕುರವೆಂಬು ಅಂಕದ ಬೀಜವು ಹಳ್ಳಕೊಳ್ಳ ಅವು ಸರಿ
ಬೆರಸಿ ಮಾಡೋ ಬ್ಯಾರಿ ಬ್ಯಾರಿ ।
ಭೂಮಿ ಇದ್ದಂಗ ಬಿತ್ತೊ ನೆಲನೋಡಿ ನೆಲವರಿ ಹಾಕರಿ ॥ ಜೀಜೀ ॥

ಇಳು ಆ ಹೊಲಕ ಕೇಳ ಮಲಕ । ಎಡಬಲಕ
ಮುಳ್ಳು ಬೇಲಿ ಹಚ್ಚಿ ಆಳಾವಾ ।
ಆ ಹೊಲಕ ಯಾಂವ ಕೇಳಾವಾ ।
ಆ ಹೊಲಕ ನೀನೇ ಆಳಾವಾ ।
ಜತನ ಕಾಯಿಕೋ ಆಗತದ ಅಲ್ಲಿ ಕಳುವಾ॥ ॥ ಜೀಜೀ ॥
ಮದನೆಂಟಾ ಇಸಗಂಟಾ ಹಾಕೊ ಗಂಟಾ
ಹಳ್ಳದ ಹರಿಯ ಸೆಳುವಾ । ಮ್ಯಾಲೇರಿನೋಡೊ ಆ ನಿಲವಾ ।
ಗುರುಬೋಧಿನ ಕವಣಿ ಬಲು ಬಿಳೆವಾ ।
ಅರವಿನ ಕಲ್ಲ ಹಾಕಿ ಎಬ್ಬಿಸೊ ಹಕ್ಕಿ ಬಳುವಾ॥ ॥ ಜೀಜೀ ॥
ಹೊಡಿ ಹಾಕಿತೊ ಕಾಲ ತೋರಿತೊ । ಮರಿಯಾದಿತೊ
ಕಾಣಬಾರದ ಬೆಳಿಯ ಕಂಡಾವಾ
ಇದರಂತೆ ತಿಳಿಯೋ ಅನುಭಾವಾ
ಜ್ಞಾನಂಬು ಕುಡಗೋಲ ಹಚ್ಚಿ ಕೊಯ್ದ ನೋಡೋನಿತ್ತ ನಿಲವಾ ॥

ಏರ ಹೇ ಶಕ್ತಿ ಯುಕ್ತಿಯೆಂಬು ಜೀವಂ ಹಗ್ಗಮಾಡಿ ಗೂಡಹಾಕೋ ಕಟ್ಟಿ
ಹೊರೀ ।
ಹಾಯ್ದಿ ಒಗಿಯೋ ಬೆನ್ನೂರಿ
ಪೂರ್ಣ ಹಸಿಯ ನೋಡಿ ಬಿತ್ತೊ ಬಿಳಿಯ ಜೋಳಾ

ಕೂಡುಪಲ್ಲ ಹುಸಿ ಹೋಗದು ನೀ ಮರಿ ॥ ಚೌಕ ೧ ॥

ಹೇ ಸಾಧು ಗುಣಾ ಇವು ಸಾಕ್ಷಾತ ಕಣಾ ಮಾಡಿ ಮೇಟಿ ನಡಿಸೋ
ಬಲ್ಬಿಗೀ ।
ಗುರು ಸ್ತೋತ್ರದ ಗುರುತೀಗಿ
ಚಿತ್ತೆ ಮನಸೆಂಬ ಲಂಬವ ಮಾಡಿ ಒಯ್ದು ಹಾಕೋ ಮೇಟಿಗಿ ॥
॥ ಜೀಜೀ ॥

ಹೇ ಮನದಾನ ತನುವೆಂಬು ರತ್ನದ ತೆನಿಯ ಮರಿಯೋ ಲಗುಬಗಿ ।

ಕಡ್ಯಾಕ ಹಾಕೋ ಕಾಡಿಗಿ
ಹದಿನೆಂಟ ಚಿಲ್ಕದ ಹಂತಿ ಕಣ್ಣಿ ಅತ್ತ ಹೊಡಿ ಹೊಡಿಯೊ ನುರ್ತಾಗಿ ॥
॥ ಜೀಜೀ ॥

ಮೂರು ಬುದ್ಧಿ ಮೂರು ಬಾಣಗಳಾರು ಹಚ್ಚೊ ನೀನು ಮೆಟ್ನಾಲಿಗಿ ।
ಮದಾ ವಡಿಯೋ ಮೂಡಲಗಿ
ಧರ್ಮಕರ್ಮವೆಂಬು ಬುಟ್ಟಿ ತುಂಬಿ ತೂರೋ ಹರಿಶ್ಚಂದ್ರನ
ಗಾಳಿಗೀ ॥ ॥ ಜೀಜೀ ॥

ಇಳು ರಾಸಿ ಮಾಡೋ ಹೋಗಿ ನೋಡೋ । ಹನ್ನೆರಡು ಮಂದಿ ಆಯಿಗಾರ
ಕಂಬಾರ ಕುಂಬಾರ ಬಡಿಗೇರ ಬೆನ್ನಿಂದ ಬಂಧ ಹೂಗಾರಾ ।
ಮೊದಲಿಗಿ ಕಾಡತಾರ ಮನಿಹೋಲ್ಯಾ ಮಾದಿಗರಾ ॥ ॥ ಜೀಜೀ ॥

ಅವರೀಗಿ ಎಲ್ಲರಿಗಿ ಸರಿಯಾಗಿ
ನೀ ಹಂಚಿ ಹಾಕ್ಯೊ ಹಾಜರಾ ।
ನೀ ಆಗದೆಂದು ಬ್ಯಾಸರಾ ।
ಬೆನ್ನಿಂದೆ ಬಂದ ಪಿಂಜಾರಾ ।
ಅವರೀಗೆ ಸಿಗಬ್ಯಾಡೊ ಬಂದು ಕಾಡ್ಯಾರಾ । ಗಂಡ ಕೊಜ್ಜೇರಾ ।

ಮಾಡೋ ದಾನಾ ದಶದಿನಾ
ಬಡವರ ನಿನ್ನಲ್ಲಿ ಹಸ್ತ ಬರತಾರಾ ।
ಕೊಡಲಿಕ ನಿನಗ ಬೆವು ತಾರಾ ।
ಮಾಡಿ ಕಳುವೊ ಹೋಗತಾರ
ಅಭಿಮಾನವೆಂಬು ಬೀಜ ಹಿಡಿಯೋ ಬಿಗತಾರಾ ॥

ಏರು ಅರವಳಗಿನ ಕೋಲ್ಯಾಗ ಒಯ್ದು ಇಡುವೊ ಬೀಜಾ
ನುಸಿಯ ಹತ್ಯಾವ ಹುಸೇಯೇಲಿ, ಮರತ ಕುಂತರಿ ಹೌಹಾರಿ
ಕೂಡಪಲ್ಲ ಪೂರ್ಣ ಹಸಿಯ ನೋಡಿ ಬಿತ್ರೋ ಬಿಳಿಯ ಜೋಳಾ
ಹುಸಿಯಾಗದು ನೀ ಮರಿ ॥ ॥ ಜೀಜೀ ॥ ಚೌಕ ೨ ॥

ಬೇರವಿಲ್ಲದೆ ಬೆಳೆಯ ಬೆಳೆದಿತೊ ಮೇಲೆ ರವದಿಯಾ ಕಣಗಿಸಿ ।
ಹೆಂಟಿ ಹಾಕೋ ಬಣವಿಗಿ
ಕಾಗಾರದನಾ ಕಂಡಾಂಗ ಹಿರುತಾದ ಒಯ್ದು ಕಟ್ಟೊ ದವನಿಗಿ ॥ ಜೀಜೀ ॥

ಹೇ ನನ್ನವರಂತ ನೀ ನಂಬಲಿ ಬ್ಯಾಡ ಕೊಂಬ ಕುಪ್ಪದ ರಂಬಿಗಿ
ವಿಚಿತ್ರವಾದ ಹೊಂಬಿಗೆ
ಬೇಲಿಯ ನಿಡದ ಭವನಕ ಬಂಗಾರ ಇಡುವ ಗೊಂಡಿಗೀ

ಇಳು ಕೇಳ ಮಾನಾ ಅರ್ಜುನಾ ಸುವರಣಾ
ಸೂಕ್ಷ್ಮ ಮಾಹಾದಿ ಸಿಗುವುದು
ಶ್ರೀಶೈಲದಲ್ಲಿ ಅರಿಯುವುದೊ
ಸುಜ್ಞಾನದಿಂದ ದೊರಕುವದೊ
ಪಾದಮುಟ್ಟಿ ಮನಕೊರೊ ಪಲ್ಲಕ್ಯಾಗ ಮಾರಿ ತೆರದೊ ॥ ॥ ಜೀಜೀ ॥

ಕವಿ ಗಳಿಸೊ ನೀ ತಿಳಿಸೊ । ಇಡು ಕಳಸೋ
ಗುಡಿ ಕಟ್ಟಿ ಕೊಡಿಯನೇರಿಸುವದು
ಬಿಳಿ ಸುಣ್ಣ ಹಚ್ಚಿ ಸಾರಿಸುವುದು
ಅದರ ಒಳಗ ಲಿಂಗ ಚಲಿಸುವುದು
ಏರು ಕ್ವಾರಳ್ಳಿ ಪದಾ ಕೇಳಿ ಜನಾ ಹಾಡಿ ಹರಸುವುದು

ಕೂಡುಪಲ್ಲ ಪೂರ್ಣ ಹಸಿಯ ನೊಡಿ ಬಿತ್ತೊ ಬಿಳಿಯ ಜೋಳ
ಹುಸಿ ಹೋಗದು ನೀ ಮರಿಃ ॥ ॥ ಜೀಜೀ ॥ ಚೌಕ ೩ ॥

ಭೂಮಂಡಲಕ ಬಾರ ಆಗೇದ

ನಾಡಮ್ಯಾಲ ನಾ ನೋಡಿದೆ ತಿರಗ್ಯಾಡಿ ದರಬಾರದ ಕ್ವಾಡಗ ।
ಇದ ಕಾರಬಾರದ ಕ್ವಾಡಗ ।
ಭೂಮಂಡಲಕ ಬಾರ ಆಗೇದ ಬಾಳದಿಂದ ಕ್ವಾಡಗ ॥ ॥ ಜೀಜೀ ॥

ಆರು ಶಾಸ್ತ್ರ ಹದಿನೆಂಟು ಪುರಾಣ ಬರದಿಟ್ಟಿದ್ದು ಕ್ವಾಡಗ ।
ತೆರದ ಓದಿದ್ದೊಂದು ಕ್ವಾಡಗ
ಓದಿದೆಲ್ಲ ಬೂದಿ ಮಾಡಿ ಬೂದಿ ಹಚಗೊಂಡಿದ್ದೊಂದು ಕ್ವಾಡಗ ॥
॥ ಜೀಜೀ ॥

ರಾಮನ ಅಡಿಯಲಿ ದುಡಕೊಂಡಂತಾ ಅದು ಅರವಿನ ಕ್ವಾಡಗ
ಇದು ಮರವಿನ ಕ್ವಾಡಗ
ಮರವಿನ ಮನೆಯಲಿ ಮತ್ತ ಮನೆಗದಿದು ದುರಮರಣದ ಕ್ವಾಡಗ ॥
॥ ಜೀಜೀ ॥

ಈ ಕ್ವಾಡಗನಾಟ ರೂಢಿಯೊಳಗ ಭೂಮಂಡಲಮ್ಯಾಲ
ಕುಣಿದಾಡುವ ಕ್ವಾಡನಗ ಕಂಡೆ ।
ಮಾಡಲಾರದ ಕಾರ್ಯ ಮಾಡೆನಂತಾದ
ಕೋಡಿಲ್ಲದ ಕಾದಾಡುವ ಕ್ವಾಡಗನ ಕಂಡೆ ।
ನೋಡಲಾರದೆ ನೋಡಿನಂತದ
ಲಬಾಡದ ಕ್ವಾಡಗ ಬಡದ್ಯಾಡಿ ಸಾವುದ ಕಂಡೆ ॥ ॥ ಜೀಜೀ ॥

ಈ ಕೋತಿ ಕುಲಾ ಜಾತಿ ಯಾವುದಿದಕ ಸೂತಕ
ಎಲ್ಲ ಸುತಿಗೊಂಡಿದ ಕ್ವಾಡಗ ಕಂಡೆ ।
ಇದರ ಜಾತಕವೇನೊ ಯಾತರದಾಗ ಜಮಾ
ಮಾತಿನೊಳಗ ಮಾತಿಲ್ಲದ ಕ್ವಾಡಗ ಕಂಡೆ ।
ಹೋತಿನ ಮಲಿಯನ ಚೇತನ ಕುಡುದು
ವಾತ ಬಂತು ಭೂತಾಗಿದ್ದ ಕ್ವಾಡಗ ಕಂಡೆ ॥ ॥ ಜೀಜೀ ॥

ಈ ಮರ್ತ್ಯದೊಳಗ ರತ್ನ ಬಿಟ್ಟು ಹಿತ ಎಂಬು
ಸಾಹಿತ ಕುಡದಿದ್ದ ಕ್ವಾಡಗ ಕಂಡೆ ।
ಹತ್ತಿತೋ ವಿಷ ಬಿತ್ತೊ ಧಗಿ ನೆತ್ತಿ ಮ್ಯಾಲ
ಗಂಗಾನ ಹೊತ್ತಿದ್ದ ಕ್ವಾಡಗ ಕಂಡೆ ।
ಹೊತ್ತ ನೆರಿತ್ಯೆತಿ ಎತ್ತ ಏರಿ ಮುದು ಮೋತಿ ಕ್ವಾಡಗ
ಕತ್ತಿ ಕಾಯದ ಕ್ವಾಡಗ ಕಂಡೆ ॥ ॥ ಜೀಜೀ ॥

ಸುಡುಗಾಡದಗ ಕುತ್ತ ಸಿಡಿಯಾಡತಾನ–
–ಸುಡು ಮಾರಿಯ ಕ್ವಾಡಗ ।
ಇದು ಗಿಡಗಾರನ ಕ್ವಾಡಗ ।
ಕೂಡುಪಲ್ಲ ಭೂಮಂಡಲಕ ಬಾರ ಆಗೇದ ಇದು ಬಾಳದಿನದ ಕ್ವಾಡಗ ॥
॥ ಜೀಜೀ ॥ ಚೌಕ ೧ ॥

ಮೇಲ್ಮಾಡಿಯೊಳ ಕನ್ನಡ ತನ್ನ ಕೈಯಾಗ ಹಿಡದ ನಡಿದಾಡುವ
ಕ್ವಾಡಗ ಕಂಡೆ ।
ಬಡ ನಡು ಬಾಲೆಯರ ಹಿಡಿದು ಸೆಡಕದಲಿ ನಡದಾಡುವ
ಕೊಳಕ ಹಳ್ಳ ಹೊಡೆಯುವ ಕ್ವಾಡಗ ಕಂಡೆ ।
ಹಿಡಿದ ತಂದು ಹೆಡ ಮುರಗಿ ಕಟ್ಟಿ ಮಚ್ಚಿಲಿ ಹೊಡೆಯದ ಕಾಲ
ಹಿಡದಕೊಳ್ಳುವ ಕ್ವಾಡಗ ಕಂಡೆ ॥ ॥ ಜೀಜೀ ॥
ಮತ್ತ ತಿಗಳತಾನದಿಂದ ಉಗಳ ಮಾಡಿ ಸುಳ್ಳ ಬೊಗಳುವ ಕ್ವಾಡಗ ಕಂಡೆ।
ತಿಳಿ ನೀರಿನಕ್ಕಿಂತಾ ತಿಳಿ ಹೇಳಿದಳ ಜಾಡಿಸಿದಂಗ ಸೆಳಕೊಳ್ಳುವ
ಕ್ವಾಡಗ ಕಂಡೆ ।
ಬಹುದು ತಿಂದ ಅಳುವುದು ಬಿಡಲಿಲ್ಲ –
– ಹುಗುಳಿದ ಗಂಟ ಕಳದಿದ್ದ ಕ್ವಾಡಗ ಕಂಡೆ ॥ ॥ ಜೀಜೀ ॥
ಪಗಡಿಯಾಡಲಾಕ ಪಟ್ಟ ಹಾಸಿ ಆಡಿದ್ದೊಂದು ಕ್ವಾಡಗ
ಕವಡಿ ಹಿಡದಿದ್ದೊಂದು ಕ್ವಾಡಗ
ಜಂಪಗಾಲಿಂದ ಹಾರಿಕಿ ಮಾಡಿ ಪಂಪ ಹಚ್ಚಿದ್ದ ಕ್ವಾಡಗ
ಇದು ಕೊಂಪಿ ಎಳದ ಕ್ವಾಡಗ
ಹಿಂದುಸ್ಥಾನಕ ಹಂಪ ಹರದ ಇದು ಕೆಂಪ ಮಾರಿಯ ಕ್ವಾಡಗ ॥
॥ ಜೀಜೀ ॥

ಐರಾವತ ನೀ ಅಂಬಾರಿ ಏರಿ ಮೆರೆದಾಡಿತು ಕ್ವಾಡಗ
ಇದು ನಡದಾಡಿತು ಕ್ವಾಡಗ
ಇದು ದೊರಿಯದಿತು ಕ್ವಾಡಗ
ಚವದ ರತ್ನದೊಳ ಚಲ್ಲಿ ಮೆಲ್ಲಕೇs ಇಲ್ಲಿ ಹಾಯ್ಕೊಂಡಿತು ಕ್ವಾಡಗ ॥
॥ ಜೀಜೀ ॥

ಇದು ಎಲ್ಲಿತಾನ ಹ್ವಾದರ ಇಲ್ಲ ಅನಬ್ಯಾಡ ಗುಲ್ಲ ಮಾರಿಯ
ಗುಲಸ್ಯಾಡುವ ಕ್ವಾಡಗ ಕಂಡೆ।
ಸೊಲ್ಲಾಪುರ ಸರದಾರ ಮಲ್ಲನ ಪ್ರಾಂತದ ಎಲ್ಲಾರಿಗಿ ಹಲ್ಲ
ಮುರದಿದ್ದ ಕ್ವಾಡಗ ಕಂಡೆ।
ಕಲ್ಯಾಣ ಪುರುದೊಳು ನಲ್ಲಿಯಕ್ಕನ ನಾಗಮ್ಮನಲಿ ನೆಲಿ ಕಂಡದ್ದ
ಕ್ವಾಡಗ ಕಂಡೆ॥ ॥ ಜೀಜೀ ॥

ಕೂಡುಪಲ್ಲ ಭೂಮಂಡಕ ಬಾರ ಆಗೇದ ಬಾಳದಿಂ ಕ್ವಾಡಗ ॥ ಚೌಕ ೨ ॥

ಪದಾ : ಚೀನಾ ಯುದ್ಧ

॥ ಸಖಿ ॥

ಆಡುನು ಬಾರವ್ವಾ ಅನುಭವದಾಟಿ ।
ಅನುಭಾವ ಎಂಬುದು ಆನಂದದಾಟ ।
ಗಣಮಹಿಮ ಎಂಬುದು ಗುರುವಿನ ಗುಟ್ಟಾ ।
ಅರಿಯದ ಜ್ಞಾನಿಗಿ ಸಿಗುವುದಿಲ್ಲ ಕಟ್ಟಾ ।
ಆಡುನು ಬಾರವ್ವ ಅನುಭವದಾಟಿ ॥ ॥ ಜೀಜೀ ॥
ಆರುಮಂದಿ ನಾವು ಅಕ್ಕ ತಂಗೇರ ಒಟ್ಟಾ ।
ಅಂತರಂಗದಾಗ ಆತನ ಪೈಟಾ ।
ನಿಂತು ಮಾಡೂನ ಬರ್‍ರೆ ನಿಜಲಿಂಗನಾಟ ॥
ಆಡುನ ಬಾರವ್ವಾ ಅನುಭವದಾಟ ॥ ॥ ಜೀಜೀ ॥
ನೆಂಬಿಗಿ ಎಂಬುವ ತಂಬೂರಿ ಹಿಡಿಯ ।
ಚ್ಯಾಲ ಎಂಬುದು ಕೋಲ ಜಡಿಯ
ಶಾಂತ ಗುಣಾ ಎಂಬುವ ತಂತಿಯ ಬಿಗಿಯ ।
ಆಡುನ ಬಾರವ್ವಾ ಅನುಭವದಾಟ ॥ ॥ ಜೀಜೀ ॥
ಧರ್ಮ ಎಂಬುವದು ದಮಡಿಯ ಬಡಿಯ
ಕರ್ಮ ಎಂಬುವದು ಕೈತಾಳ ಹಿಡಿಯ
ಪರಮಾನಂದ ಎಂಬುವ ಪದಗಳ ಕಲಿಯ
ಆಡುನ ಬಾರವ್ವಾ ಅನುಭವದಾಟ ॥ ॥ ಜೀಜೀ ॥
ಕ್ವಾರಳ್ಳಿ ಊರನಂದು ಹಳ್ಳಿಯೊಳು ಶ್ರೇಷ್ಠಾ
ಅದೇ ಊರಾಗ ಶಬ್ದಸ್ವಾಮಿಯ ಮಠ
ಆತನ ಪಾದದಲಿ ಆಣದ ಊಟ
ಆಡುನ ಬಾರವ್ವಾ ಅನುಭವದಾಟ ॥ ॥ ಜೀಜೀ ॥

ಚೀನಾ ಯುದ್ಧದ ಪದಾ : ೮

ಭವದಲಿ ಹುಟ್ಟಿ ಬಂದು ಬ್ರಹಸ್ಪತಿ ಹೇಳತಾನ–
ಮುಂದಾಗುವಂತಾ ಎಲ್ಲಾ ಕಾಡುವ ಹುನ್ನಾರಾ ।
ಈಗ ಬಂದ ಹತ್ತೇದ ಬ್ರಹ್ಮಾಂಡಕ ಬಾಳ ತೊಂದರಾ ।
ನಮ್ಮ ನೆಹರು ಪಂಡಿತರಿದ್ದರು ಸೂರ್ಯ ಚಂದರಾ ॥ ॥ ಜೀಜೀ ॥
ಚಂದ್ರಲೋಕದಂಗ ಸುಂದರ ನಮ್ಮ ಹಿಂದುಸ್ಥಾನಕ
ತೊಂದರಿ ಬಂದು ಹತ್ತಿತಪಾ ಬಾಳ ದುಸ್ತಾರಾ ।
ಕುಂತ ಕೇಳರಿ ಹೇಳ್ತೀನಿ ಎಲ್ಲಾ ವಿಸ್ತಾರಾ ।
ಹೌದು ಎಲ್ಲಾ ವಿಸ್ತಾರಾ ॥ ॥ ಜೀಜೀ ॥

ಸೃಷ್ಟಿಯಲಿ ನೋಡ್ರೆಪಾ ಶ್ರೇಷ್ಠ ನಮ್ಮ ಹಿಂದುಸ್ಥಾನ
ಅಷ್ಟಗ್ರಹಗಳ ದೃಷ್ಟಿ ಬಿದ್ದು ಕಷ್ಟ ನಡದೈತಿ ।
ಕಷ್ಟದಂತೆ ಫಲಾ ಸುಖ ಮುಂದ ಸಿಗತೈತಿ ।
ಅಲ್ಲಿ ತನಕಾ ಬಕಾಸುರ ಬೆನ್ನು ಹತ್ತೈತಿ ।
ಬಕಾಸುರನ ಕೊಲ್ಲುವಂತಾ ಬಾದ್ದೂರ ನಮ್ಮ ಭೀಮನ ಅವತಾರ
ಪಂಡಿತ ನೆಹರು ಬಿರದು ಅವರಿಗಿ ಪಡದ ಬಂದೈತಿ ।
ತೆರದ ಹೇಳಿದರ ತನ್ನಿಂದ ತಾನ ತಿಳಿತೈತಿ
ತನ್ನಿಂದ ತಾನ ತಿಳಿತೈತಿ ॥ ॥ ಜೀಜೀ ॥

ತಿಬೇಟ ರಾಜನ ತಿಟ್ಟಿಗಾಗಿ ಚೀನರಾಜ ಕೆಟರಾಕ್ಷಿ ।
ಬೆಟ್ಟ ಏರಿ ಭಾರತಕ್ಕ ಬಂದ ದಂಡೆತ್ತಿ
ನಮ್ಮ ಪಂಡಿತ ನೆಹರು ಅವರಿಗಿ ಬಂತ ದುಸ್ರ ಚಿಂತಿ
ಭಾರತಕ ಮಿಲಿಟರಿ ಸೈನ ಎಲ್ಲರ ಸಂಗಾತಿ
ಯುದ್ಧ ಮಾಡಬೇಕಾದರ ಸಧ್ಯೆ ನಮಗ ಸಾಮಾನಿಲ್ಲಾ
ಮುದ್ದತ ಮಾಡಿ ಹಣಾ ಕೊಡರಿ ಖರ್ಚಿನ ಬಾಬತ್ತ
ಮದ್ದ ಗುಂಡ ಸದ್ಯೆ ಬೇಕು ಯುದ್ಧ ನಿಂತೈತಿ
ಹೌದು ಯುದ್ಧ ನಿಂತೈತಿ ॥ ಜೀಜೀ ॥

ಓಸುರೆಲ್ಲಾ ಒಂದೇ ಕೂಡಿ ದೇಶ ಹಿತಾ ಮಾಡ್ರೆಪಾ
ಮೋಸದಿಂದ ಕಾಶ್ಮೀರದಲ್ಲಿ ಚೀನದಂಡ ಬಂದು ನಿತೈತಿ
ಆಸಾಮದಲ್ಲಿ ಅಳತಿ ಇಲ್ಲದ ಕ್ರಾಂತಿ ನಡದೈತಿ
ಭಯಾದಿಂದ ಭಾರತ ಹಿಂದಕ ಸರದೈತಿ ।
ಮಸ್ತಗೇರಿ ಬಂದಾರ ಅವರು
ರಸ್ತೆ ಇಲ್ಲ ನಮಗ ಬರಾಬರಿ
ಪಿಸ್ತೂಲ ಹಾಕಿ ಹೊಡದೇನಂದರ ಬಂದದ ಪಂಚೇತಿ ।
ಹಿಂದುಸ್ತಾನದ ಸೈನ ಹಿಂದಕ ಸರದೈತಿ ॥
ಹಿಕಮತಿ ಎಂಬುದು ಎಲ್ಲದಕು ದೊಡ್ಡದು
ಬರಲಿ ಗುಡ್ಡ ಇಳಿದು ಯುದ್ಧ ಮಾಡಿ ಬೆಳದು ಹೋಗಲಿ ಉಳದು
ಸರದಾರೊ ಹಿಂದಃಕ । ಚೀನಾ ದಂಡ ಬರಲಿ ಮುಂದಃಕ
ಬರಲಿ ಮುಂದಃಕ ॥ ॥ ಜೀಜೀ ॥

ಜರ್ಮನ್ ಜಪಾನ ತುರತಕ ಬಂಗಾಲ ಭಾರತಕ
ಬ್ರಿಟನ್ ನಡಬರಕ ಅಮೇರಿಕಾ ಸರಕ
ನಮ್ಮ ದೇಶಕಾ ಉರಿ ತೊಟ್ಟು ನಿಂತಾರೊ ತರತಕ
ಹೌದು ತೊಟ್ಟ ನಿಂತಾರೊ ತರತಕ ॥ ॥ ಜೀಜೀ ॥

ಎಲ್ಲಾ ರಾಷ್ಟ್ರ ಹತ್ತ್ಯಾರ ನಮ್ಮ ಬೆನ್ನ
ಯುದ್ಧದ ಭಿನ್ನಹ ಕೊಟ್ಟಾರ ಸಂಪನ್ನ
ಕೊಡಬೇಕೊ ನಾವು ಚೀನಾ ಶಸ್ತ್ರಾಸ್ತ್ರ ತರುಸುವದಽಕ
ಸಿದ್ದರಾಗ್ಯಾರ ಮುದ್ಧತ ಮಾಡುದಕ
ಹೌದೊ ಮುದ್ಧತ ಮಾಡುದಕ ॥ ॥ ಜೀಜೀ ॥

ಹಂಗಹರದು ಬಿಡರಿ ಸಂಸಾರ । ಕೊಡರಿ ಬಂಗಾರ
ನಮ್ಮ ಸರಕಾರ ಸಧ್ಯೆ ಬೇಡತಾರ ನಮ್ಮ ಹಿತಕ
ಶಸ್ತ್ರಾಸ್ತ್ರ ಖರೀದಿ ತರಿಸುವದಕ । ಖರೀದಿ ಮಾಡುದಕ ॥ ಜೀಜೀ ॥

ಯುದ್ಧ ನಿಧಿ ಕೊಡ್ರಿ ಅಂತಾ ಕಾಲಬಿದ್ದು ಹೇಳ್ತೀನಿ
ಜಾಲದಲ್ಲಿ ಬಿದ್ದದ ನಮ್ಮ ದೇಶ ಬೈಲಿಗಿ
ಯಾವ ತರಹದು ಮಾಡಬ್ಯಾಡರಿ ಏನು ತಕರಾರ
ಬಲ್ಲವರಿಗಿ ಬಾಗಿ ನಾನು ಮಾಡುವೆನು ನಮಸ್ಕಾರ

ಕೂಡುಪಲ್ಲ ಚಂದ್ರಲೋಕದಂತೆ ಇದ್ದ ಸುಂದರ ನಮ್ಮ ಹಿಂದಸ್ತಾನರ
ತೊಂದರಿ ಬಂದು ಹತ್ತಿತಪಾ ಬಾಳ ದುಸ್ತರಾ ।
ಕುಂತವರಿಗೆಲ್ಲಾ ಹೇಳ್ತೀನಿ ಎಲ್ಲಾ ವಿಸ್ತಾರಾ ।
ಹೌದು ಎಲ್ಲಾ ವಿಸ್ತಾರಾ ॥ ॥ ಜೀಜೀ ॥ ಚೌಕ ೧ ॥

ಏರು ಶಸ್ತ್ರಾಸಕ ಸಿದ್ದ ಮಾಡಿ ಯುದ್ಧ ಮಾಡಲು ನಿಂತಾರಪ್ಪಾ।
ಮದ್ದ ಗುಂಡ ಹಾರಸುದಕ ಇಲ್ಲಿ ಅನುಮಾನಾ ।
ಯುದ್ಧದಲಿ ಚೀನಾ ದಂಡಕ ಆಗುದು ಲುಕ್ಸಾನಾ ।
ಕರುಣ ಬಂದು ಪಂಡಿತ ನೇಹರು ಶಾಂತಿ ಹಿಡದಾನಾ ।
ಹುಕುಮ ಕೊಡುವದು ಒಂದೇ ತಡಾ ಹುರದ ಬಿಡತಾರ ಚೀನದಂಡಾ
ಬಿರದತನಾ ಭಾರತಕ್ಕ ಭಗವಾನಾ ।
ಅವರ ದಯಾ ನಮ್ಮ ಮ್ಯಾಲ ಇರಲಿ ಕಡಿತಾನಾ ।
ಹೌದು ಕಡಿತಾನಾ ॥ ॥ ಜೀಜೀ ॥

ಹೀನ ರಾಜಾ ಚೀನ ಗಡಿ ಸೀಮಿ ಗುರುತುಬಿಟ್ಟು
ಮೇಕ ಧಾಟಿ ಯ್ಯಾಕ ಬಂದಾನ ।
ಕಾಕಗುಣದಾಂವಂತ ನೆಹರು ಕಂಡು ಹಿಡದಾನ
ಖಂಡಿತವಾಗಿ ದಂಡಿಸರೆಪ್ಪಾ ಇಲ್ಲ ಅನುಮಾನಾ ।
ನಾಲ್ಕೈದು ವರುಷವಾತು ಅತಿಕ್ರಮಣ ನಡಸ್ಯಾನಾ
ಹಿಂತಾ ಕೆಟ್ಟ ಕುರುಸಾಲ್ಯಾ ಚೀನದವಗ ಇಲ್ಲರಿ ಅಭಿಮಾನಾ ॥
ಹೌದರಿ ಇಲ್ಲರಿ ಅಭಿಮಾನಾ ॥ ॥ ಜೀಜೀ ॥

ಹಿಮಾಲಯ ಬಿಟ್ಟು ನಮ್ಮ ವಿಮಾನ ನಿಲ್ದಾಣಗಿ ಬಂದರೆಪ್ಪಾ
ಸಮಾಧಾನ ಇರಬೇಕಂದರ ಇನ್ನೂ ಎಲ್ಲಿ ತಾನಾ ।
ನಮ್ಮ ಶಾಂತಿಗಾಗಿ ಸೀಮಿ ಹದ್ದ ಸರಸುತ ಬಂದಾನ
ಮೇಕ ಮೌವ್ವನ ದಾಟಿ ಬರುವಾಗ ಯಾಂವ ತಿರಬ್ಯಾನಾ ।
ಬುದ್ಧಗೇಡಿ ಚೀನ ರಾಜಾ ಹದ್ದ ಮೀರಿ ಬಂದನಿಂತಾ
ಒದ್ದು ಹೊರಗ ಹಾಕುದ್ಯಾಕರಿ ಯಾಕರಿ ಅನುಮಾನಾ ।
ಸಿದ್ಧವಾಗಿ ನಮ್ಮ ಮಿಲಿಟರಿ ಸೂಚನಾ ಕುಳಿತಾನಾ ।

ಇಳು ಎಲ್ಲ ರಾಷ್ಟ್ರದವರು ಆಗ್ಯಾರಾ ಒಕ್ಕಟಾ । ಬಂತೊ ಬಿಕ್ಕಟಾ
ನಮ್ಮ ತಿಬೇಟ । ತನು ಮಾಡಿಕೊ
ಬಿದ್ದ ಬಂದಾನಾ । ಈಗ ಸರದಾನ ನೋಡರಿ ಹಿಂದಕ
ಹೌದು ಸರದಾನ ನೋಡರಿ ಹಿಂದಕ ॥ ॥ ಜೀಜೀ ॥

ಮೋಸಗಾರಿಕಿ ಸುಳ್ಳಿನ ಸೋಂಗಾ । ಸುಮನೆ ಬಿಟ್ಟರ ಹ್ಯಾಂಗ ।
ನಡಸ್ಯಾನ ದಂಗಾ । ಸೀಮಿಯೇ ಭಂಗಾ ।
ಮಾಡಿದಾನ ಒಡಕಾ ಮುಂದ ಮಾಡತಾನ ಬಾಳ ಕೆಡಕಾ ॥ ಜೀಜೀ ॥

ಬಾಳ ಕೆಟ್ಟ ಚೀನಿಯ ದಂಡ । ಮೋತಿ ನೋಽಡಽಽ ಮಂಡಾ
ಇದ್ದಾಂಗ ರಾಹು ಬಂಡ । ಹಿಂತಾಂವ ತಗೊಂಡಾ ॥
ಅವರ ತಿನ್ನಾಕಾ । ಅರುಹಾರಿ ಬಂದಾವರಿ ಜಗಳಕ
ಅವರ ಸಾಯಲಾಕ ॥ ॥ ಜೀಜೀ ॥

ದೂರ ಕುತ್ತ ಕೇಳತಿರಿ ಯಾರ ಸುದ್ದಿ ಯಾರಿಗೇನ ।
ಮೀರಿ ಬಂದದ ನಮ್ಮ ದೇಶದ ಹೆಸರ ಆಗರಿ ಮಿಗಿಲಾನಾ
ಎಷ್ಟೊ ಮಂದಿ ಕೊಟ್ಟ ಕೀರ್ತಿ ಪಡದಾರಾ ।
ಒಬ್ಬ ಅಡವಿ ಮನುಷ್ಯಾಲ ಮಾಣಿಯವಾ ಕೊಟ್ಟ ಸಾವಿರಾ ।

ಕೂಡುಪಲ್ಲ ಚಂದ್ರಲೋಕದಂತಿದ್ದ ಸುಂದರ ನಮ್ಮ ಹಿಂದುಸ್ತಾನಕ
ತೊಂದ್ರಿ ಬಂದು ಹತ್ತಿತಪ್ಪಾ ಬಾಳ ದುಸ್ತರಾ
ಕುಂತ ಕೇಳಿರಿ ಹೇಳತೀನಿ ಎಲ್ಲಾ ವಿಸ್ತಾರಾ
ಹೌದು ಎಲ್ಲಾ ವಿಸ್ತಾರಾ ॥ ॥ ಜೀಜೀ ॥ ಚೌಕ ೨ ॥

ಭಾರತದಲ್ಲಿ ಹುಟ್ಟಿ ಬಂದು ಭಾಗ್ಯಶಾಲಿಗಳಾಗಿರಿ ನೀವು
ಯೋಗಕಾತಿ ಒದಗಿ ಬಂದದ ಆಗಲಿ ತಯ್ಯಾರ
ಜೋಗ ಜಂಗಮರ ಕೊಟ್ಟಾರಪ್ಪಾ ಎಷ್ಟೊ ಬಂಗಾರ
ಬಾಳ ಬಾಲಕಿಯರು ಈಗ ಹುರುಪ ತೊಟ್ಟಾರ
ಎಸ್‌ಆರ್ ಕಂಠಿ ಮಂತ್ರೀಯವರಿಗೆ ಸ್ವಂತ ಹುಡುಗರು ಭೇಟಿಯಾಗಿ

ಉಚ್ಚಿ ಕೊಟ್ಟರೊ ಬೆರಳಾಗಿಂದು ಉಂಗರಾ
ಕೊಟ್ಟ ಮಂತ್ರಿಯವರಿಗೆ ಮಾಡಿಕೊಂಡು ನಮಸ್ಕಾರಾ
ಹಾ ನಮಸ್ಕಾರಾ ॥ ॥ ಜೀಜೀ ॥

ನಾಡ ಹಿತಕಾಗಿ ನಾನು ನೋಡಿದಷ್ಟು ಹೇಳತೀನಿ
ಮೂರ ಭಾವನಾದಿಂದ ಕೊಟ್ಟಾರ ಎಷ್ಟೊ ಬಂಗಾರ ।
ಮುರಾರಜಿ ದೇಶಾಯಿವರ ತೂಕ ತೂಗಿ ಕೊಟ್ಟಾರ
ಗುಜರಾಥದವರ ಕೊಟ್ಟಾರ ಎಷ್ಟೊ ಬಂಗಾರ ।
ಎಲ್ಲಾ ಜಿಲ್ಲಾದಗ ನೋಡರಿ ವಿಜಾಪುರ ಜಿಲ್ಲಾ ಮೇಲಾ
ನಿಜಲಿಂಗಪ್ಪನವರ ಮಂತ್ರಿಯವರ ತೂಕದ ಬಂಗಾರಾ ।
ಕೊಟ್ಟಿದ್ದು ನೋಡು ಎಲ್ಲಾರು ಕಣ್ಣಾರಾ
ನೀವು ನೋಡಿರಿ ಕಣ್ಣಾರಾ ॥ ಜೀಜೀ ॥

ಹಾಯಸ್ಕೂಲ ಚೇರಮನ್ನರಾದ ಪಿ.ಎಂ. ನಾಡಗೌಡರು
ನಾಡ ಹಿತಕ್ಕಾಗಿ ಕೊಟ್ಟಾರ ಎಷ್ಟೊ ಬಂಗಾರಾ
ಅದರಂತೆ ಸಿಂದಗಿ ಎಸ್‌ವ್ಹಿ
ದೇಶದ ಹಿತಕಾಗಿ ಅವರು ಅವರು ಸತತ ದುಡದಾರ ।
ಕುದ್ದ ಠಾಣಾದಲ್ಲಿ ಪೌಜದಾರ ಇದ್ದಾ ಮದ್ದತ ಮಾಡಿ
ಯುದ್ಧ ಅವರ ಕೀರ್ತಿ ನಾಡಮ್ಯಾಲ ಮಾಡರಿ ಪ್ರಚಾರ ।
ಹೌದು ನಾಡಮೇಲೆ ಮಾಡರಿ ಪ್ರಚಾರ ॥ ॥ ಜೀಜೀ ॥

ವಿದ್ಯಾ ಕಲಿಯುವ ವಿದ್ಯಾರ್ಥಿಗಳು ಸದ್ಯ ನಮ್ಮ ಹಾಯಸ್ಕೂಲದಲ್ಲಿ
ಮುದ್ದಾತ ಮಾಡಿ ಹಣಾ ಕೊಟ್ಟರೊ ಒಂದನೆ ನಂಬರಾ
ತಮ್ಮ ತಾಯಿ ತಂದಿಗಿ ಹೇಳತಾರ ಕೊಡರಿ ಮನ್ಯಾನ ಬಂಗಾರಾ
ಇಲ್ಲದಿದ್ದರ ನಾವು ಮಿಲಟರಗಿ ಹೋಗ್ತೇವಿ ಅಂತಾರ
ಅಂತಿಂತಾ ಹುಡುಗರೆಲ್ಲಾ ಹುರುಪು ತೊಟ್ಟು ನಿಂತಾರಪ್ಪಾ
ದೊಂತ ಮಂದಿಗಿ ತಿಳಿಸಿ ಹೇಳರಿ ಬರಲಿ ವಿಚಾರಾ
ಅದಕ ಮೀರಿದರ ಬರತದ ನಮ್ಮ ಸರಕಾರಾ ।
ಹೌದು ನಮ್ಮ ಸರಕಾರಾ ॥ ॥ ಜೀಜೀ ॥

೩೬ ಸ್ವಾರ್ಥದ ಗುಣಾ ಬಾಳ ಕೆಟ್ಟಾ
ಸ್ವಯಂ ನಮ್ಮ ರಾಷ್ಟ್ರ
ಆಗರಿ ಒಕ್ಕಟ್ಟಾ । ಆಗಲಿ ಉತ್ಕೃಷ್ಟಾ
ಉಣಸ ರಾಜರಗಿ । ಆ ಮೇಲಿ ಸುಖರೈತರಗಿ ॥ ॥ ಜೀಜೀ ॥

ಪ್ರಜೆ ರಾಜಗಾದ ಪ್ರತ್ಯೇಕ । ಶಾಂತಿ ಸತ್ವಕ ।
ಸದ್ಯೆ ತುರತಕ । ನಮ್ಮ ಭಾರತಕ ।

ಎಲ್ಲಾರು ಹುರಿಯಾಗಿ
ಮದ್ದತ ಮಾಡರಿ ಸರಿಯಾಗಿ । ಮುದ್ದತ ಮಾಡರಿ ಸರಿಯಾಗಿ ॥
॥ ಜೀಜೀ ॥

ನಮ್ಮ ದೇಶದ ಹಿಡಿ ಅಭಿಮಾನಾ । ಮಧಾಂಧ ಚೀನಾ
ಶಿರಾ ಛೇದನಾ । ಮಾಡು ಒಗೆತನಾ ।
ಶಾಂತಮನಸಿsಗಿ ।
ಹಗಲು ರಾತ್ರಿ ಬೇಡರಿ ದೇವರಗಿ । ಬೇಡರಿ ದೇವರಿಗಿ ॥ ॥ ಜೀಜೀ ॥

ಏರು ದೂರ ಕುಂತ ಕೇಳತಿರಿ ಯಾರ ಸುದ್ದಿ ಯಾರಿಗೇನು
ಮೀರಿ ಬಂದುದ ನಮ್ಮ ದೇಶದ ಆಗಲೇ ಹೆಸರ
ಎಷ್ಟೊ ಮಂದಿ ಹೆಣ್ಮಕ್ಕಳು ಉಚ್ಚಿ ಕೊಟ್ಟರೊ ಕೊರಳಾನ ಬಂಗಾರ ॥
॥ ಜೀಜೀ ॥

ಕೂಡುಪಲ್ಲ ಚಂದ್ರಲೋಕದಂತೆ ಇದ್ದ ಸುಂದರ ನಮ್ಮ ಹಿಂದುಸ್ತಾನಕ
ಹತ್ತಿತಪ್ಪಾ ಬಾಳ ದುಸ್ತರಾ ಎಲ್ಲಾ ವಿಸ್ತಾರಾ ॥ ॥ ಜೀಜೀ ॥ ಚೌಕ ೩ ॥

ಮಾವೊ ಎಂಬು ಮೋಹದರಸಾ ಚೀನದ ಅಧ್ಯಕ್ಷನು
ಅನಾಹುತ ಮಾಡತಾನೆಂದು ಮುಂದಿನ ವಿಚಾರ
ಮೊದಲೆ ಬಂದೊ ಬಸ್ತಿ ಇರಲಿ ನಮ್ಮ ಮಿಲಟರಿ ತಯ್ಯಾರ ।
ಮರವಿಗಿ ಬಿದ್ದು ಹಳಹಳಿಸಬ್ಯಾಡರಿ ನಿಮ್ಮ ಹತಿಯಾರಾ
ಹದ್ದಪಾರೆ ಶಿಸ್ತಲಿಂದ ರಸ್ತೆ ತಯ್ಯಾರ ಮಾಡರೆಪ್ಪಾ
ಪಾಕಿಸ್ತಾನ ಚೀನದವರಿಗೆ ಪತ್ರ ವ್ಯವಹಾರಾ
ಗುಪ್ತದಿಂದ ಗುದುಮುರಗಿ ಹಾಕಿ ಗುಡ್ಡ ಸೇರ್‍ಯಾರಾ ।
ಅವರು ಗುಡ್ಡ ಸೇರ್‍ಯಾರಾ
ಲಂಡನ್ನೆ .... ಪುರಸೊತ್ತು ಮಾಡಿ
ಬಂಡಾರ ನಾಯಿಕೆ ಶ್ರೀಮತಿಗೆ ಅಧ್ಯಕ್ಷ ವಹಿಸ್ಯಾರಾ ।
ಅವರ ಗಂಡಾಂತರ ಬಯಲ ಮಾಡುದಕ ಬಾಳ ನಡಸ್ಯಾರ
ಅವರು ಹೇಳಿದಂತೆ ನಾವು ನೀವು ಕೇಳತಿನಿ ವಿಚಾರಾ ॥
ಅಂತರಾ
ದಕ್ಷಾಯಿಣಿ ಅವತಾರ ತೊಟ್ಟು ರಕ್ಷಿಸುವಾ ಎಲ್ಲಾ ರಾಷ್ಟ್ರ
ಭಾರತ ಮಾತೆಯ ಕುಕ್ಷಾದಲ್ಲಿ ನೆಹರು ಪಂಡಿತ
ಹುಟ್ಟಿ ಬಂದು ಸೃಷ್ಟಿಯೊಳಗ ಕೀರ್ತಿ ಪಡದಾರಾ
ಅವರು ಕೀರ್ತಿಪಡದಾರಾ

ಇಳು ನೆಹರೂನ ಬಿದ್ದಾ ಸುತ್ತೆಲ್ಲಾ । ವಾರಿಗಿ ಜಲ್ಲಾ
ಪಾಕಿಸ್ತಾನ ಸಲ್ಲಾ । ಅಡಿಗೆ ಮುಸ್ಕಿಲಾ ಬಂತೊ ಚೀನಾಕ್ಕಾ
ಚಿಂತಿ ಮಾಡಿ ಹೋಯಿತೊ ಹಿಂದsಕ
ಪೋಷ್ಟ ಪಿತಿ ಕೋರಳ್ಳಿ ಸಿಕ್ಕಾ ।
ಸಿಂದಗಿ ತಾಲೂಕ ವಿಜಾಪುರ ಜಿಲ್ಲಾಕ
ಮೇಲ ಎಲ್ಲಾಕಾ । ಕವಿಮಾಡುದಕ ।
ಬೇಕಾದಾಗ ಗರದರಿ ಹಾಡುದಕ ॥ ॥ ಜೀಜೀ ॥

ಸಿದರಾಯ ಸಭಾದಾಗ ನಿಂತಾ ।
ಮೌಲಾಲಿ ಸಭಾದಾಗ ನಿಂತಾ
ಮಾಡುದು ಕವಿತಾ । ಹಾಡುದ ಸಭಾಕ
ಚಂದ್ರಾಮ ಸಭಾದಾಗ ॥ ॥ ಜೀಜೀ ॥

ಮದಾಂಧ ಚೀನಾ ಮರ್ದನ ಮಾಡಿರಿ
ಭಪ್ಪರೆ ಭಾರತಾ ಪಾಂಡವತರೊಳು ಪರತಾ
ಸುಟ್ಟಂಗ ಲಂಕಾ ಮಾರುತಾ ॥ ॥ ಜೀಜೀ ॥

ಸೇತುವ ಹಾಕಿ ಸಮುದ್ರಾಕ ಕಟ್ಟಿ
ಹಿಂದು ಸೈನ್ಯ ಹೋಗಿ ಮಾಡೇದ ಲೂಟಿ
ಭಪ್ಪರೆ ಭಾರತ ಪಾಂಡವರೊಳೆ ಪರತಾ
ಸುಟ್ಟಂಗ ಲಂಕಾ ಮಾರುತಾ ॥ ॥ ಜೀಜೀ ॥

ಏರು ಎಲ್ಲ ರಾಷ್ಟ್ರದ ಪ್ರೇಮ ಆದ ನಮ್ಮ ಮ್ಯಾಲಾ
ಭಯಾ ಸೇರಿ ಚೀನಿ ಯುದ್ಧ ವಿರಾಮಾ
ಯುದ್ಧದ ಮಾತ ಸದ್ಯ ಹೇಳತಾನ ಸಿದರಾಮಾ
ಬಪ್ಪರೆ ಭಾರತ ಪಾಂಡವರೊ ॥ ॥ ಜೀಜೀ ॥

ಕೂಡಪಲ್ಲ ಚಂದ್ರ ಲೋಕದಂಗ ಸುಂದರ ನಮ್ಮ ಹಿಂದಸ್ಥಾನಕ
ತೊಂದರಿ ಬಂದು ಹತ್ತಿತಪಾ ಬಾಳ ದುಸ್ತರಾ
ಕುಂತ ಕೇಳರಿ ಹೇಳ್ತೀನಿ ಎಲ್ಲಾ ವಿಸ್ತಾರಾ
ಹೌದು ಎಲ್ಲಾ ವಿಸ್ತಾರಾ ॥ ॥ ಜೀಜೀ ॥ ಚೌಕ ೪ ॥

ಹಜಾರ ಮಂದಿ ಹರದಾಸರ

ಹಜಾರಮಂದಿ ಹರದಾಸರ ನೆರದಿರಿ, ಸಮಾನ ಸೆಂಟಿನ ಸರಿ
ಇವೆಲ್ಲಾ ಕಂಟ್ಯಾನ ನರಿ ।
ಕುಂಟೇಣಿನ ಮಗಗ ಯ್ಯಾತಕ ವಂಟ ಹಲಗಿ ಹೊಡಸರಿ ॥ ॥ ಜೀಜೀ ॥
ಅಂಜರದ ಹಣ್ಣಾಗಿ ನಂಜಗಿ ಒಡದೊ ಬೇವಿನ ಹಣ್ಣ ಹಾಕಿ ।
ಬಾಜರಕ ನೂಕಿರಿ ।
ಬೆಲ್ಲದ ದುಖಾನ ಬಾಜರದಾಗ ಬಾಗಿಸಿ ಕೊಯ್ತಿರಿ ಕುರಿ ॥ ॥ ಜೀಜೀ ॥
ಕಾರಣಿಕ ಮಂದಿ ಕ್ವಾಣಿನ ತಂದು ಮ್ಯಾಣೆದಾಗ ಮೆರಸಿರಿ ।
ಓಣ್ಣೋಣಿಗಿ ದಣಿ ಸರಿ ।
ಮಾಣಿಕ ರತ್ನದ ಬೆಲಿ ಇಳದಿತೊ ಕಡಿಗಾಣ ಧಾರಿಣಿ ಸರಿ ॥ ॥ ಜೀಜೀ ॥
ಇಳು ಕಡಿಗಾಣದ ಕಂಕಿ ಹಂತಿಪದಗಳು ದೊಂತ ಕವಿಗಿ
ಅಂತಿದಿ ಬಾಳೆ ಚಂದಾ । ಹಂದಿ ಮರೀಗಿ ತಂದು
ಸಾಕಿ ಹಾಲು ಹಾಕಿದರೇನ ಚಂದಾ ।
ಬುಂದೆ ಬೇಷನ್ ತಿಂದಿತೇನೊ
ಆ ಹಂದಿ ಮರಿಗಿ ಹೇಲಕೇರಿ ಚಂದ ॥ ॥ ಜೀಜೀ ॥
ತುರುಬಿನ ಕೊನಿಗಿ ಸೆರಗಹಾಕಿ
ತಿರುಗಾಡುವಂತ ದರಬಾರದ ನಾಡಿಗೆ ಚಂದ
ಹಗಮಾಲಿಗೆ ಹಾದರಚಂದ
ಕೊಜ್ಜ್ಯಾಗ ಉಟಗೊಂಡ ಚಂದರಕಾಳಿ ಸೀರಿನ ಚಂದ ॥
ಎಷ್ಟ ಸೋಂಗ ಮಾಡಿದರೇನ ಕೊಜ್ಜ್ಯಾ ಕುಂಡಿ ಹಡಸದ
ಟಂವಗಾಣಿಕೇನ ಚಂದ ॥ ॥ ಜೀಜೀ ॥
ಕೂಡಪಲ್ಲ ಚಂದಕ ಮೆಚ್ಚಿದ ಚಂದಗೇಡಿಗ ಚಂದಯ್ಯಾವದಂತೀದಿ ।
ಇವೆಲ್ಲಾ ಕಂಟ್ಯಾಗಿನ ನರಿ ।
ಕುಂಟೇಣಿನ ಮಗಗ ಯಾತಕ ಒಂಟ ಹಲಗಿ ಹೊಡಸರಿ ॥
॥ ಜೀಜೀ ಚೌಕ ೧ ॥
ಜೌಡಲ ಕಟಗಿಯದೊಂದು ಅಂಗಡಿ ಕಟ್ಟಿಸುಡಲಾಕ ಹಚ್ಚಿರಿ ಉರಿ
ಅಳ್ಳೊಡದಿತ ಸಿಂಹದ ಮರಿ
ಸಿಡ್ಲ ಮಿಂಚನನ ಕೈಯಾಗಂತದ ಕಡ್ಯಾಗಿನ ಬುರಬುಗಿ ॥ ॥ ಜೀಜೀ ॥
ಬುರಿ ಬುರಿ ಹತ್ತಿದ ಬೀಜಾ ತಂದು ಜಾಜೇರಕ ನಿಂತಿದೆ
ಇದು ತೇಜಿ ಮಾಲ ಅಂತಿದಿ ।
ಬಂಗಾರದ ಹೂಜಿ ಬಾಜು ಬಿಟ್ಟು ಕಂಬಾರನ ಹೂಜಿ
ಬೇಡತೀರಿ ॥ ॥ ಜೀಜೀ ॥

ಈ ಬ್ರಹ್ಮವ ನೋಡೊ (ಬ್ರಹ್ಮಾಂಡವ ನೋಡೊ ಈ ಭವದಲ್ಲಿರುವ
ಸೂರ್ಯ ಚಂದರ ಚಂದ)
ಈ ಭೂಮಿ ನೋಡೊ ಭವ ಮಂಡಲದಲ್ಲಿ ಮುಂಬೈ ಪಟ್ಟಣ ಚಂದ।
ತಂಬಿಗಿಟ್ಟು ತಂಬಾಕ ಸೇದಾವ ಮುಂಬೈ ನೋಡಿದ
ಡೊಂಬರ ಗುಡಿಸಲ ಚಂದ.

ಈ ಹೇಡಿ ಗೂಡಾ ಹಿಡಿಲಾರೆ ಹುಡದಿ–
ಹಿಡಿಯೆಂದರ ನಾ ಬಲ್ಲೆನು ನನಗೂಡಾ ಏನ ಚಂದ ।
ಆಡಾಂವಾ ಕುಸ್ತಿ ಜೋಡ ಇದ್ದರ ಆಡತೀನಿ ಒಗದ
ಬಿದ್ದರ ಚಂದ ।
ಮಡಿವಾಳನ ನುಡಿ ಎಡಬಿಡಲಾರದೆ ಒಡ್ಡರ
ಹೇಳಿದಂಗ ಮೌಲಾನ ಹಾಡಿಕಿ ಚಂದ ॥ ॥ ಜೀಜೀ ॥ ಚೌಕ ೩ ॥

ಖ್ಯಾಲಿ

ಯಾವ ಕುಲದಾಂವ ಅನ್ನಲೇ ಕಪ್ಪಗೊರಳಿನಂವಗ ।
ಯಾವ ಕುಲದಾಂವ ಅನ್ನಲೆ ॥ ॥ ಪಲ್ಲ ॥

ಮುಸಲ್ಮಾನಗತ್ಲೆ ಗಡ್ಡ ಬಿಟ್ಟಾನ ।
ಜಂಗಮನಗತ್ಲೆ ಕ್ಯಾಂವಿ ಉಟ್ಟಾನ ।
ಬ್ರಾಹ್ಮಣರಂತೆ ಕೃಷ್ಣಾಂಜನಾ ಮುಕಳಿ ಬುಡಕ ಹಾಕೊಂಡ ಕುಂತಾನ ॥
ಯಾವ ಕುಲದಾವ ಅನ್ನಲೆ ಕಪ್ಪಗೊರಳಿನಂವಗ ॥ ॥ ಜೀಜೀ ॥

ದೊಂಬರ ಚನ್ನಮಲ್ಲಿ ಮನೆಯಲಿ ದುಡದಾನ
ಜೀತ ಇಲ್ಲದೆ ಕಃತ್ತಿ ಕಾಯ್ದಾನ
ಸುಳ್ಳೆ ಸುಳಕನಾಗಿ ಊಟ ಮಾಡ್ಯಾನ
ಕೂಳಿಗಾಗಿ ಶಿವ ಕುಲಗೆಟ್ಟಾನ
ಹಾ ಅಹುದೊ ಯಾವ ಕುಲದಾಂವ ಅನ್ನಲೆ
ಕಪ್ಪಾಗೊರಳಿನವಗ ॥ ॥ ಜೀಜೀ ॥

ಬಿಲ್ಲಣಿ ಮ್ಯಾಲ ಮನಸೋತು ಕೆಟ್ಟಾನ
ಹೊಲೆಮಾದರಂತೆ ಬಸವಿ ಇಟ್ಟಾನ
ಮಾಳಪನಲ್ಲಿ ಮೋಳಿ ಹೊತ್ತು ಶರ್ಮಗೇಡಿ ಶಿವ ಧರ್ಮ ಬಿಟ್ಟಾನ
ಯಾವ ಕುಲದಾಂವ ಅನ್ನಲೆ ಕಪ್ಪಗೊರಳಿನಂವಗ ॥ ॥ ಜೀಜೀ ॥

ಕುಲಭೇದ ಅಂಬುದ ಎಳಗಳದ ನೆನದಾನ
ಅರ್ಧಾಂಗಿಯಲ್ಲಿ ಎಸಕ್ಕಾಗ್ಯಾನ
ಮಾನುಮಂದಿಗೆ ಕುಲದಲ್ಲಿ ಮಾನ
ಮೇಲಾನ ವಿಷಯ ನೋಡಿ ನಗತಾರಣ್ಣಾ
ಯಾವ ಕುಲದಾಂವ ಅನ್ನಲೆ ಕಪ್ಪಗೊಳಿನಂವಗ ॥ ॥ ಜೀಜೀ ॥

ಮಗ ಹೆಚ್ಚೊ ಮಗಳ ಹೆಚ್ಚೊ

ಮಗಾ ಹೆಚ್ಚು ಏನ ಮಗಳ ಹೆಚ್ಚ ತಮ್ಮಾ ಹೆಚ್ಚನ್ನು ಲುಚ್ಚ್ಯಾನ ಕಽರಿ
ಈ ಲುಚ್ಚ್ಯಾಗ ಹಚ್ಚರಿ ಬಽರಿ
ಮಗಳ ಕಮ್ಮಂತ ಮಾತಾಡ್ತಿದಿ ಮಗ ಎಲ್ಲಿಂದ ಬಂತರಿ ॥ ॥ ಜೀಜೀ ॥

ಏರ ಮಗಽ ಹುಟ್ಟಿದ ಮನಿ ಮಾಣಿಕ ಅಂತಿರಿ ತಿಳಿದಿಲ್ಲ ಮಗನ ನೆಲಿ।
ಸುಳ್ಳೈಽ ಬಡದಾಡಿ ಆಗ್ತೀರಿ ಖಾಲಿ ।
ಹರೇಕ ಬಂದಮ್ಯಾಗ ಹಡದ ತಂದಿಗಿ ಹೊಡಿಯತಾನ ಮಚ್ಚೀಲಿ ॥
॥ ಜೀಜೀ ॥

ಲವ ಕುಶರು ಇಬ್ಬರು ಮಕ್ಕಳು ಇದ್ದಾರೊ ವನದಲಿ
ಹೊಡೆದಾರೊ ರಾಮನ ತೆಲಿ ।
ಸೀತಾಳಿಂದ ಅಂವ ಪ್ರಾಣ ಪಡದಾನೊ ಬರದದ
ರಾಮಾಯಣದಲಿ ॥ ॥ ಜೀಜೀ ॥

ಬಭ್ರುವಾಹನ ಅರ್ಜುನನ ಮಗ ಜನಿಸಿದನು ಭವದಲಿ ।
ಅರ್ಜುನಗಾದನು ಕೊಲಿ ।
ಹರಿಶ್ಚಂದ್ರರಾಯ ಮಗನಿಗಿ ಜಾಗ ಕೊಡಲಿಲ್ಲ ಸುಡುಗಾಡದಲಿ ॥
॥ ಜೀಜೀ ॥

ಇಳು ತಂದಿ ಮಕ್ಕಳೊಳಗಿಲ್ಲ ರುಚಿ ।
ಹೇಳತೀನ ಬಿಚ್ಚಿ ಈ ಮಾತ ಸುಳ್ಳಲ್ಲ ।
ವಡದ್ಹಾದ ರಾವಣ ಮಗ ಇಂದ್ರಜಿತನ ಭೇಟಿ ಆಗಲಿಲ್ಲ ।
ಆ ಕೆಟ್ಟ ಶನಿ ಹುಟ್ಟಿದಾಕ್ಷಣಕ ।
ಹೋದು ತಂದಿ ಕೈಕಾಲ ॥ ॥ ಜೀಜೀ ॥

ಜೋಗಣಿ ಬೆನ್ನ ಹತ್ತಿ ಜೋಕ್ಯಾ ಸತ್ತ ಹೊಲಗೇರ್ಯಾಗತಿರುಗ್ಯಾನಲ್ಲ
ಜೋತ್ಯಾಡತಾವ ಜೋಗುಣಿ ಚಪ್ಪಲಿ
ಆ ಜೋಕ್ಯಾನ ತಲಿಮ್ಯಾಲ ।
ನೀವು ಜಾಣರಲ್ಲ ಕೋಣಿನಂತ ಮಗ ಹುಟ್ಟಿ ಆಗ್ಯಾನೊ ನೆಲಪಾಲ ॥
॥ ಜೀಜೀ ॥

ನಿರ್ಮಲ್ಯಾನೆಂಬ ಮಗನ ಹಡದಿ ನಿನ ಮನೆತನಕ ದೀಪ ಇಲ್ಲ ।
ಆ ಚೇಲ್ಯಾಮಗಂದು ಚಾಲಸುಮಾರ
ಹೆಣಗಂಡಿನಾಗ ಜಮಾ ಇಲ್ಲ ।
ಮಗಾ ಹಚ್ಚಂತೇರಿ ಮಗನ ಮುಕುಳಿಗಿ ಬೇಕೋ ಕೀಲಿ ॥ ಜೀಜೀ ॥

ಏರ ಖೊಜ್ಜ್ಯಾನಂತ ಮಗಾ ಹುಟ್ಟಿಕೇರಿ ಕುಲದಲ್ಲಿ ಆದ ಅದ್ಗರಿ ।
ಕೂಡುಪಲ್ಲ ಈ ಲುಚ್ಚ್ಯಾಗ ಹಚ್ಚರಿ ಬರಿ ।
ಮಗಳ ಕಮ್ಮ ಅಂತ ಮಾತಾಡತೀದಿ ಮಗಾ ಎಲ್ಲಿಂದ ಬಂತರಿ ॥
॥ ಜೀಜೀ ॥ ಚೌಕ ೧ ॥

ಇನ್ನ ತಗಿರೊ ನೀವು ಬಣ್ಣದ ಕವಿಗಳು ಕಣ್ಣ ತುಂಬ ನೋಡ್ತೀನಿ
ಕಣ್ಗಂಡಿದ್ದೇ ಹಾಡ್ತೀನಿ ।
ಗಂಡ ಖೊಚ್ಚ್ಯಾದಾವೆಲ್ಲಿದು ಬಂದ ಗಂಡಸಗ ಕೇಳ್ತೀನಿ ॥ ॥ ಜೀಜೀ ॥

ಗಂಡ ಬೀಜ ಮಂಜೂರಾದಂತಿರಿ ಗುಂಡ ಬಳಿ ಜೋಳ ಗುನಿ ।
ಒಳಗ್ಹುಟ್ಟ್ಯಾದ ಕಾಡಿಗಿ ತೆನಿ ।
ಕಾಡಿಗಿ ತೆನಿಯಾ ಖೋಡಿ ಹುಟ್ಟಿತು ಹಿಜಡ್ಯಾಗ ಬ್ಯಾಡೊ ಸನಿ ॥
॥ ಜೀಜೀ ॥

ಕಾಡಿಗಿ ತೆನಿಯ ಬೀಜಾ ತಂದು ಬಲ್ಲವರಿಗಿ ತೋರ್ಸಿನಿ
ಈ ಕಾಡಿಗಿ ಬೀಜಿನ ಮನಿ ।
ನಪುಂಸಕ ನಿಮ್ಮ ತಂದಿಯ ನಾಮ ತಾಸ್ಗಿಲಾ ಹೇಳ್ತೀನಿ ॥ ॥ ಜೀಜೀ ॥

ಇಳುವು ಹೆಣ ಗಂಡಾ ಎರಡು ಜತಿ ಪ್ರಥಮ ಪೂರ್ವದಲಿ ಬಂದು
ಅಣ್ಣ ಆಽದ ಹಿರಿಯ ತಂಗಿಯ ಪಾದಕ ನಮಸ್ಕಾರ ಅನ್ನುದು
ತಂಗಿ ನಮಸ್ಕಾರ ಮಾಡ್ಯಾಳೇನೋ ಹಿರಿಯಣ್ಣನ ಪಾದ ಹಿಡಿದು ॥
॥ ಜೀಜೀ ॥

ಮಗಾ ಹೆಚ್ಚಲ್ಲ ಮಗಳ ಹೆಚ್ಚಲ್ಲ ಸವನಂತ ಶಾಸ್ತ್ರ ಬರೆದುದು ।
ಮಗನಾದರೊಂದೆ ಮಗಳಾದರೊಂದೆ ನೀ ಬಂದಲೋ ಅದರಾಂದು
ಮಗಾ ಹೆಚ್ಚಂತ ಅಂತಿರಿ ಮಗ ಬಂದಿಲ್ಲಪಾ ನಿಮ್ಮ ಮುಕಳ್ಯಾಂದು ॥
॥ ಜೀಜೀ ॥

ನೀ ನನ್ನ ಮಗಾ ನಿಮ್ಮಪ್ಪ ಮಗಾ ನಿಮ್ಮ ಮುತ್ಯಾ ಮಗಾ
ನಿಮ್ಮ ಗಂಡಿನ ವಂಶಾವಳಿದು
ನಿಮ್ಮ ಅಣ್ಣ ಹೋದ ನಿಮ್ಮ ಅಜ್ಜ ಹೋದ ನಿಮ್ಮ ಫಣಜ
ನಮ್ಮ ತಾಯಿ ಮೊಲೆ ಹಾಲ ಕುಡಿದು ।
ತಾಯಿ ಮಲಿ ಕುಡಿಲಾರದೆ ಬುಲ್ಲಿ ಕುಡದ ಬಂದಿಯೇನ ನಿಮ್ಮ
ತಂದೀದು ॥ ॥ ಜೀಜೀ ॥

ಕೂಡುಪಲ್ಲ ಮಗ ಹೆಚ್ಚ ಏನ ಮಗಳ ಹೆಚ್ಚ ತಮ್ಮಾ ಹೆಚ್ಚನ್ನು ಲುಚ್ಯಾಗ ಕರಿ
ಈ ಲುಚ್ಚ್ಯಾಗ ಹಚ್ಚರಿ ಬರಿ ।
ಮಗಳ ಕಮ್ಮ ಅಂತಾ ಮಾತಾಡ್ತಿದಿ ಮಗ ಎಲ್ಲಿಂದ ಬಂತರಿ ॥
॥ ಹಾಜೀಜೀ ಚೌಕ ೨ ॥

ಜನಕನ ಮಗಳು ಜಾನಕಿಯಂಥಾ ಮನುಷ್ಯ ಬಾಣಿನ ಫಣಾ
ಡಂಗುರ ಹೊಡಶ್ಯಾಳಣ್ಣಾ ।
ರಾಮಚಂದ್ರಗ ಲಗ್ನ ಮಾಡಿಕೊಂಡು ತಂದಿದ್ದು ಕೊಟ್ಟಳ ರಿಣಾ ॥
॥ ಜೀಜೀ ॥

ಅರವತ್ತ ಮಂದಿ ಹೆಣ್ಮಕ್ಕಳು ದಕ್ಷಬ್ರಹ್ಮ ಹಡದಾನ
ಮಹಾದೇವಗ ಮಾವನಾದ
ಹಿರಿಯ ಮಗಳ ಗಂಡ ಹಿರಸ ತೊಟ್ಟು ಆ ದಕ್ಷನ ಹೋಯಿತೊ
ಹೆಣಾ ॥ ॥ ಜೀಜೀ ॥

ಮಗಳ ಮ್ಯಾಲ ಮೋಹಿಸಿ ಅರಸ ಕಲ್ಲಾಗಿ ಬಿದ್ದನ
ಹೌದು ಪಾದರಕ್ಷಿಯಾದನ
ಮಗ ತಂದು ನನ್ನ ನೊಗಕ ಹಾಕ ಮಗಳೆ ದ್ರವ್ಯ ಧನಾ ॥ ॥ ಜೀಜೀ ॥

ಇಳುವು ಮಗಳಿದ್ದ ಮನಿಗಿ ಬಳಗ ಬಾಳ ಬಾಳುಳ್ಳೊರ ಮನಿಗಿಕೊಟ್ಟ
ನೀ ಮದವಿ ಮಾಡೊ ಎಣ್ಣಿ ಅರಿಷಿಣಿಟ್ಟು ಉಣ್ಣಪ್ಪ ಕಡುಬಿನ ಊಟ
ಕನ್ಯೆದಾನ ಮುಂದ ಯಾವ ಧಾನ ಅಲ್ಲ ಮಾಡಿದಾಣಾ ವೈಕುಂಟಾ ॥
॥ ಜೀಜೀ ॥

ಚಿಲ್ಲಾಳನ ತಾಯಿ ಚಾಂಗುಣಿ ಮಹಾದೇವಗ ಮಾಡಿಸಿ ಊಟ
ತನ್ನ ಮಗನ ಕೊಯ್ದು ಅಡಗೀಯ ಮಾಡಿ ಎಡಿ ಬಡಶ್ಯಾಳ
ಬಂಗಾರ ತಾಟ
ಭಪ್ಪರೆ ಮಗಳೆ ನೀ ಹೆಚ್ಚಿನಕಿ ಅಂತ ಮಾದೇವ ಆಗಿ
ತಲಿಮ್ಯಾಲ ಹಸ್ತ ಇಟ್ಟ॥ ॥ ಜೀಜೀ ॥

ಮಂದಿಲ್ಲ ಮಕ್ಕಳಿಲ್ಲ ಯಾರ‍್ಯಾರಿಲ್ಲ ಎಳಮೇಲಿ ಬಸಯ್ಯ ಒಬ್ಬನೆ
ಸೋಟ ।
ಹೆಂಡರು ಇಲ್ಲಾ ಕಂಡಂಗ ತಿರುಗುವ ಗುಂಡಯ್ಯನ ಕಸ್ತಿ ಗೂಟಾ ।
ಮಂಜೂರ ಆದಳು ಮಂಜೂರಿ ಮಗಳು ಕ್ವಾರಳ್ಳಿ ಕವಿ ಮೇಲಕಟ್ಟಾ॥
॥ ಜೀಜೀ ॥ ಚೌಕ ೩ ॥

(ಕೊನೆಗೆ ಪಲ್ಲವಿ ಪದ್ಯ ಹೇಳಬೇಕು)

ಪುಂಡ ಪುಂಡ ಪಂಡೀತರೆಲ್ಲರು

ಪುಂಡ ಪುಂಡ ಪಂಡೀತರೆಲ್ಲರು ಗಂಡಸಭಾ ನೆರೆಸಿದಿ
ನಿಮ್ಮ ಹೆಂಡವೇಲ ಹದಗೆಡಿಸಿದಿ
ರಂಡ್ಯಾರ ಬೆನ್ನ ಹತ್ತಿ ರಾಜಪಿಂಡ ಕಂಡಂಗ ಧೂಳ ಹಾರಿಸಿದಿ ॥ ಜೀಜೀ ॥

ಹಾದರದಾಗ ನೀವು ಹಮೇಸಿ ತಿರಗ್ಯಾಡಿ ಹಾಲದ ಹರವಿ ಒಡದಿರಿ ।
ಬಹು ಬಾಧಿ ವಿಷಾ ಕುಡಿದಿರಿ ।
ಸ್ವಾದರ ಸೊಸಿಯ ಸ್ವಾದ ಬಿಟ್ಟು ಮಾದರ್ತಿ ಪಾದಾ ಹಿಡಿದಿರಿ ॥ ಜೀಜೀ ॥

ಅಮೃತ ಕುಂಡಲ ಅರಿಯದೆ ನೀವ ಮರೆವಿನ ಮನೆ ಹೊಕ್ಕಿರಿ ।
ಮಿಣ ಮಾದರ ಡೋಣಿ ನೆಕ್ಕಿರಿ ।
ಡೊಣ್ಯಾನ ತೊಗಲಿಗಿ ಶರಣಂದು ಶಿವಶರಣಗ ದೂರ ನೂಕಿರಿ ॥
॥ ಜೀಜೀ ॥

ಮಣ್ಣಿನ ಕಾಯಕ ಕಣ್ಣ ಕಿಸಿಯತಿರಿ ಕ್ಷಣಾ ತಡಿಯದೆ ಹೆಣಗ್ಯಾಡತಿರಿ ।
ಸುಣ್ಣದ ಮಡು ಬೀಳ ತೀರಿ ।
ಬಣ್ಣದ ಭಾಂಡೇಕ ಬಾಯಿ ಕಿಸ್ತ ನೀ ಬೆನ್ನಾಗ ಮರತಿರಿ ॥ ಜೀಜೀ ॥

ಇಳು ಒಳ್ಳೆಯ ಚಂಡು ಹೂ ಮುಡದಂಗ
ಗುಂಡ ಮಾರಿ ಹೆಣ್ಣ ರಕ್ತಪಿಂಡದಿಂದ ಹುಟ್ಟಿ
ದುಂಡತೋಳ ತಿರುವುದು ಕಣ ತೋರಿತೊ ।
ನಾರಿ ಗುಂಡ ಕುಚ ನೋಡಿದರ
ತುಟಿ ತೊಂಡ ಹಣ್ಣಿನಂತೆ ಕಾಮ ಹಿಂಡಿ ಹಿಪ್ಪಿಯಾಗಿ
ಸೆಂಡರಾಗಿ ಸೆರಗದಲ್ಲಿ ಬೆರಿತೊ ।
ಮಂಡ ಮೀಸಿ ಗಂಡಸರ ರಂಡೇರ ಹಾದರಕಾಗಿ
ಭಂಡಾರ ಖಾನ್ಯಾಗ ಬಿದ್ದ ನಾರಿತೊ ॥ ॥ ಜೀಜೀ ॥

ಮಲಮೂತ್ರ ತುಂಬಿದಂತಾ ಮ್ಯಾಲ ತೊಗಲಿನ ಲೇಪ
ಜ್ವಾಲದ ಎಡಿಮಾಡಿ ಮಾಲಕರಿಗಿ ಉಣ ನೀಡಿತೊ ।
ಸಾಲ ಸಾಲ ಕುತ್ತು ಉಂಡವರಿಗೆಲ್ಲಾ ಶೂಲದಲ್ಲಿ ಬಿದ್ದಿದಾರೊ
ಗೋಕಿಲದಾನ ಕೃಷ್ಣಗ ಕೊಲ್ಲಿಸಿ ನೆಲಪಾಲ ಮಾಡಿತೊ ।
ತ್ರಿಶೂಲದ ಸುಂಕ ಹತ್ತಿ ನೀಲಕಂಠ ನಾಮವಿಟ್ಟು
ಕಾಲಮೆಟ್ಟಿ ಕುಣಿದಾಡಿತೊ ॥ ॥ ಜೀಜೀ ॥

ಏರು ಪುಂಡ ಪುಂಡ ಪಂಡಿತರೆಲ್ಲರು ಗಂಡಸಭಾ ನೆರಸಿದಿ
ನಿಮ್ಮ ಹ್ಯಾಂಡವೇಲ ಹದಗೆಡೆಸಿದಿ

ಕೂಡುಪಲ್ಲ ರಂಡ್ಯಾರ ಬೆನ್ನ ಹತ್ತಿ ರಾಜಪಿಂಡ ಕಂಡಂಗ ಧೂಳ ಹಾರಿಸಿದಿ ॥
॥ ಜೀಜೀ ಚೌಕ ೧ ॥

ಏರ ಹೊಲಿಯೊಳಗ ಹುಟಿದ ಹುಲಿಯಂತವರಿಗಿ ತಿಳಿದಿಲ್ಲ ಹೊಲಿಪುರನೆಲಿ।
ಈ ಹೊಲಿ ಎಲ್ಲಾಕು ಮೇಲಲೆ ।
ಮೇಲದ ಹೊಲಿಯಗ ತುಚ್ಛ ಮಾಡತಿದಿ ದಾವಲ್ಲಿಂದು ಬಂದೆಲೆ ॥ ಜೀಜೀ ॥

ಹುಲಿಯೊಳಗ ಹೊರಳ್ಯಾಡಿದ ಮೂಳಾ ಹೊಲಿ ಎಲಿತಾನ ತೊಳದೆಲೆ ।
ಈ ಹೊಲಿಯೊಳಗೆ ನಿಂತೆಲೆ ।
ಮೇಲsದಲ್ಲಮ ಪ್ರಭು ಮಹಾದೇವನ ಸರ್ವಾಗ ತುಂಬೇನ ಹೊಲಿ ॥
॥ ಜೀಜೀ ॥

ಪಾದ ಹೊಲಿ ಪಾದೋದಕ ಹೊಲಿ ಪ್ರಸದ ಕೂಟದ ಹೊಲಿ ।
ಅಲ್ಲಿ ನಾಟಿದ ನಿಜಲಿಂಗ ಹೊಲಿ ।
ವಿಪ್ಲಭಾವ ಈ ಪ್ರಾಣಲಿಂಗಕ ನೆಲಿಯಾಗೇದ ಈ ಹೊಲಿ ॥ ಜೀಜೀ ॥

ಇಳು ಈ ಹೊಲಿ ಎಲ್ಲಾಕ ಮೇಲ
ಹೊಲಿಯೊಳಗ ಅಲ್ಲಮಪ್ರಭು
ತಾ ಮಲಕೊಂಡಿದ ಹಾಸಿಗಿಯೊ ।
ಎಡಬಲಕ ಹೊಲಿತೆಲಿಗುಂಬ ಹೊರಿ
ಮ್ಯಾಲ ಹೊತ್ತ ಶಾಲ ಮುಚಗೊಂಡಿದ ಪಾದಿಗಿಯೊ
ಜಲಾ ಹೊಲಿ ಜಗತ್ತೇ ಹೊಲಿ
ಹೊಲಿ ತೊಳದ ಎಲ್ಲಾನು ಒಗಿಯತ್ತೀಯಾ ಒಗಿಯೋ ॥ ಜೀಜೀ ॥

ಕೈಲಾಸ ಹೊಲಿ ಮುಕ್ಕಾಲಭೃಂಗಿ ಹೊಲಿ
ಮುಟ್ಟಬಾರದಂತ ಒಗದಿ ಶಾಸ್ತ್ರವ ತಗಿಯೊ
ಅಗಳ್ಯಾಡುತ ನಿಂತಾನ ನೀಲಕಂಠ ತ್ರೀಶೂಲಕೊಟ್ಟು
ಮುಕ್ಕಾಲಗ ಮಾಡಿದ ಬಿಗಿಯೊ ।
ಎಲವಿನ ಮ್ಯಾಲ ನಿಲಾ ನಿಂತಾನ ಭೃಂಗಿ ಮಲ ಒಗಿ ।
ಹೊಲಿಯೊಳ ನಾಟಿದ ಅಗಿಯೊ ॥ ॥ ಜೀಜೀ ॥

ಈ ಹೊಡದ ಹೊಲಿ ಮುಟ್ಟಾದ ಹೊಲಿ ಸತ್ತ ಹೊಲಿ
ಬೆನ್ನ ಹತ್ತ್ಯಾವ ನಾನಾ ಬಗಿಯೊ ।
ಈ ಹೊಲಿಯೊಳಗ ಹುಟ್ಟಿದ ಇಲಿಮರಿಗಳೊ
ಗುಲ್ಲ ಮಾಡುದ ಕಂಡು ನೋಡಿ ಬರುವುದೊ ನಗಿಯೊ ॥
ಬ್ರಹ್ಮ ಹೊಲಿ ಬ್ರಹ್ಮಾಂಡ ಹೊಲಿ ಹೊಲಿ ಪಿಂಡದ ಮೂಳಾ
ಎಲ್ಲಿತನಾ ಜಿಗಿತಿ ಜಿಗಿಯೊ ॥ ॥ ಜೀಜೀ ॥

ಏರ ಬಾಲಹಣುಮ ಬಾಲದೇವಿ ಶರಣ ಹೊಕ್ಕು ವಲ್ಲಭಗ ಹೊಡಿಸ್ಯಾರೊ ।
ಕೂಡುಪಲ್ಲ ತಮ್ಮ ಹಂಡವಿಲಾ ಹದ ಗೆಡಿಸಿರೊ
ರಂಡ್ಯಾರ ಬೆನ್ನ ಹತ್ತಿ ರಾಜಪಿಂಡ ಕಂಡಂಗ ಧೂಳ ಹಾರಿಸಿದಿ ॥
॥ ಜೀಜೀ ॥ ಚೌಕ ೨ ॥

ಏರ ಹೊಲಿ ಹೊಲ್ಮ ತಿಳಕೊಂಡಂತವನಿಗಿ ಆತಗ ಅನಬೇಕೊ ಹೊಲಿ
ಈ ಹೊಲಿನೆಲಿ ಏನ ಬಲ್ಲೆಲೆ ।
ಹೊರಪ್ಯಾಟ್ಯಗ ತಾಟಿಲಿ ತಿರಗುವ ಹೊಲ್ಯಾsಗೇನಿಲ್ಲ ಕಾಲೆ ॥ ಜೀಜೀ ॥
ಕಾಯಪೂರ ಇದು ಹೊಲಿ ಪಟ್ಟಣವೊ ಪಟ್ಟಣಬಿಟ ಜಿಗಿಯೆಲೆ ।
ಈ ಹೊಲಿಯಗಸಿ ಧಾಟಲೆ ।
ಸರ್ವರಲ್ಲಿದ್ದು ಇಲ್ಲದಂಗ ಇರತಾನ ಆತನ ಗುರತ ಹಿಡಿಯಲೆ ॥
॥ ಜೀಜೀ ॥

ಇಳು ಈ ಹೊಲಿಯಾಗಾ । ರ್ಯಾರಿಲ್ಲ ತಾಯಿ ತಂದಿ ಬಂಧು ಬಾಂಧವರು
ಯಾರು ಅವs ಇಲ್ಲದವನೊ ।
ಸತಿಸುತರರಿಲ್ಲ ಮಿತ್ರರಿಲ್ಲ ತನ್ನೊಳು ತಾ ಒಬ್ಬವನೊ ।
ರೂಪನಾಮ ಕ್ರಿಯೆಗಳಲ್ಲಿ ಕುಲ ಇಲ್ಲದ ಹೊಲೇ ಹೊಲಗೇರ್‍ಯಾಗ
ತಿರುಗುವನೋ ॥ ॥ ಜೀಜೀ ॥

ಈ ಹೊಲಿಯಾನ ನೆಲಿ ಬಲ್ಲಂತಜಾಣ
ಬೆಲ್ಲದ ಹಾಲ ಹುಲ್ಲಕೊಯ್ಯಾಂವ ಬಲ್ಲಾನೇನೊ ।
ಈ ಪುಲ್ಲ ಮಂದಿ ಕುಲಭೇದ ಕುರುಸಾಲೆ
ಹರದಾಸಗೆಂದಿಗಿ ದೊರದಾನೇನೊ ॥ ಜೀಜೀ ॥

ಏರ ಲೋಕಕ ಹೊರ್ತ ಬಲ್ಲಿದ ಹೊಲ್ಯಾ ಹಲ್ಲಿ ವಸ್ತಿ
ಕೋರಳ್ಳಿ ಮಲ್ಲಿಕಾರ್ಜುನನೊ ।
ಕೂಡುಪಲ್ಲ ನಿಮ್ಮ ಹಂಡವೇಲ ಹದಗೆಡಿಸಿದಿ ।
ರರಿಡ್ಯಾರ ಬೆನ್ನ ಹತ್ತಿ ರಾಜಪಿಂಡ ಕಂಡಂಗ ಧೂಳ ಹಾರಿಸಿದಿ ॥
॥ ಜೀಜೀ ॥ ಚೌಕ ೩ ॥

ಸಖಿ

ಶಾರದಾದೇವಿಗಿ ಆದಿಶಕ್ತಿ ।
ಗುಲ್ ಗುಲ್ ಗೆಜ್ಜಿ ಸಪ್ಪಳ ಮಾಡುತಾ ನೀ ಬರತಿ ॥ ॥ ೧ ॥

ಅಂಧಕಾರ ದುಂದಕಾರದಾಗ ಇರತಿ ।
ಕತ್ತಲಸೀರಿ ಬೆಳಕ ಕುಪ್ಪಸ ಮಾಡಿ ತೊಟ್ಟ ತೋಳ ತಿರುವತ್ತಿ ॥ ೨ ॥

ಮೌಲಾಲಿ ಸಖಿ ಹೇಳಿದ ಚಡತಿ ।
ಸಂತ ಸಭಾದಾಗ ನಿಂತ ಹಾಡಿದರs ಹೊಳಿ ಹರದಂಗ ಭರತಿ ॥ ೩ ॥

ಪತಿವ್ರತಾ

ಹೇ ಮಹಾನಾಡ ಸಭಾದಾಗ ಕೈ ಜೋಡಿಸಿ ಹೇಳತೀನಿ ಹೆಣ್ಮಕ್ಕಳೀಗ ।
ಪತಿವ್ರತದಿಂದ ನಡಿರೆವ್ವಾ ಬಿರು ಬೆಳಗS।
ಪತಿವ್ರತದಿಂದ ನಡಿದವರೀಗಿSS ಪಾರ್ವತಿ ಅಂತೀನಿ ಜಗದಾಗ ॥
॥ ಜೀಜೀ ॥

ಊರ ಒಳಗ ಒಬ್ಬ ಇದ್ದ ಬಡವ ನಾಲ್ಕು ಮಂದಿ ಮಕ್ಕಳಿದ್ದರು ಅಂವನೀಗ।
ಹೌದು ಬಡತಾನ ಹೀನ ನೋಡ್ರಿ ಜಗದಾಗ
ಸತಿಪತಿಯವರು ಹೊತ್ತ ಗಳಿಯತಾರS ಪರಮಾತ್ಮನ ಸ್ಮರಣಿ
ಮನದಾಗ ॥ ॥ ಜೀಜೀ ॥

ಸತಿಪತಿ ಒಂದಾಗಿ ಮಾತಾಡ್ತಾರ, ಹ್ಯಾಂಗ ಹೊತ್ತಗಳಿಯಬೇಕS ಈಗ
ಹೆಂತಾ ವ್ಯಾಳೆ ತಂದ ಭಗವಾನ ನಮಗ
ಹಂತವರಿಗಿ ಕಾಡ್ಯಾಳ ಇದಿಮಾಯಿ ಕೂತಕೇಳರಿ ನೀವು ಸಭಾದಾಗ ॥
॥ ಜೀಜೀ ॥

ಊರ ಒಳಗ ಇದ್ದೊಬ್ಬ ಸಾಹುಕಾರ ಕೂಲಿ ಕೇಳಿದನೋ ಆ ಬಡವಗ ।
ಬಡವಾ ಬರ್ತೀನಿ ಅಂದಾನ ಆ ಸಾಹುಕಾರಗSS
ಮೂರ ತಿಂಗಳ ಮುದ್ದತ ಮುಗಿಸಿ ಕೂಲಿ ಹೋಗ್ಯಾನ
ಸಾಹುಕಾರನ ಮನೀಗSS॥ ॥ ಜೀಜೀ ॥

ಬಡವನ ಹೇಣ್ತಿ ಬಾಳ ರೂಪವಂತಿ ಸಾಹುಕಾರ ಇಟ್ಟ ನೋಡರಿ
ಮನದಾಗ।
ಹಿಂತಾ ಸಾಹುಕಾರ ಹಾನ ನಮ್ಮ ಭಾಗದಾಗSS।

ಇಳು ಇದು ಪ್ರತ್ಯಕ್ಷ ಆದ ಮಾತ ಜಗದಾಗSS ।
ನಾಳೀಗಿ ಮುಂಜೇಳೆ ದಂದಾಕ ಬರತಾಳ ಕೇಳಬೇಕೆಂದಾಗ
ಹೊಲದಾ ॥ ॥ ಜೀಜೀ ॥

ಸಾಹುಕಾರ ನೋಡ್ರಿ ಮನಸಿಟ್ಟಿದಾ ಆಕಿ ಮ್ಯಾಗ
ಹೋಗಿ ಕೇಳತಾನ ಆಕೀನ ಹೊಲದಾಗ ॥ ॥ ಜೀಜೀ ॥

ಇಷ್ಟ ಕೇಳಿ ಘಾಬರಿಯಾಗಿ ನಿಂತಳೊ ಹೊಲದಾಗ
ಪಾರ ಮಾಡೊ ಪರಮಾತ್ಮಾ ನನಗೀಗ ॥ ॥ ಜೀಜೀ ॥

ಏರು ಅಡ್ಡಕೂಲಿ ಮಾಡಿ ಅಳಕೋತ ನಿಂತಾಳ್ರೀಗ
ನಡಿರಿ ಪುರುಷ ಹೋಗೂನು ಈಗ ।
ಬೆಂಕಿ ಹಚ್ಚರಿ ಸಾಹುಕಾರನ ಮನೀಗಿ ।

ಕೂಡುಪಲ್ಲ ಸತಿಪತಿ ಅವರು ಹೊತ್ತ ಗಳಿಯತಾರ ಪರಮಾತ್ಮಾನ
ಸ್ಮರಣೀ ಮನದಾಗ ॥ ॥ ಗೀಗೀ ಚೌಕ ೧ ॥

ಏರು ಕೂಲಿ ಮಂದಿಯೆಲ್ಲಾ ಕರದ ಕೇಳತಾರ ಏನ ಆಯಿತವ್ವಾ ತಾಯಿ ನಿನಗs
ಕರಕೊಂಡ ನಡದ ನಿನ ಗಂಡಗ ।
ಹೊತ್ತ ಮುಳುಗುತನಾ ಮಾಡಬೇಕ ದುಡದಷ್ಟ ಕೂಲಿ ನಿನ
ಪದಕ್ಕಾಗಿ ॥ ॥ ಜೀಜೀ ॥

ಏನ ಹೇಳಲೀ ತಾಯಿಗಳಿರಾ । ಸಾಹುಕಾರ ಅಂದ ಮಾತ ನನಗೆ ।
ಏನ ಆಗೋದ ಆಗಲಿ ಇದರಾಗ ।
ನಿನ್ನ ಕಾಲಾಗ ಮನಿ ಹ್ವಾದರ ಚಿಂತಿಲ್ಲ ಮಹಾದೇವಿ ಬಿಡುದಿಲ್ಲ
ನಾ ನಿನಗ ॥ ॥ ಜೀಜೀ ॥

ತೆಲಿ ಕೆಟ್ಟ ಸಾಹುಕಾರ ನೋಡರಿ ಕರಸಿ ಹೇಳ್ಯಾನ ತನ್ನ ಹೇಣ್ತೀಗಾ ।
ನೀವು ಆಕೆ ಇಡಬ್ಯಾಡರಿ ನನ್ನ ಮ್ಯಾಗ
ಬಡೂತಿ ಕಾಲಾಗ ಜೀವ ಹ್ವಾದರ ಚಿಂತಿಲ್ಲ ನಾನು ಬಿಡಾಂಗಿಲ್ಲ
ಮಹಾದೇವೀಗ ॥ ॥ ಜೀಜೀ ॥

ಇಳು ಏನ ಹೇಳಲಿ ಅರಸಾ ಯ್ಯಾಕ ಹಚಗೊಂಡಿರಿ ಜಲ್ಲಾ ।
ಮೂರ ದಿವಸ ಆಯಿತ ಇನಾ ಜಳಕ ಆಗಿಲ್ಲಾ ॥ ॥ ಜೀಜೀ ೧ ॥

ಆಣಿ ಪ್ರಮಾಣ ಮಾಡಿ ಹೇಳಬೇಕ್ರಿ ನೀವು ಕುಲ್ಲಾ ।
ನಿನ ಮಾತ ನಾನು ಮೀರುದಿಲ್ಲಾ ॥ ॥ ಜೀಜೀ ೨ ॥

ಏರು ಬಡವನ ಹೆಂಡತಿ ಬಾಳ ರೂಪವಂತಿ ಆಕಿನ ಕರಕೊಂಡ ಬರಬೇಕ
ನೀ ಈಗ ।
ಹೆಂಡತಿ ಕೈಲೆ ವಚನ ತಗೊಂಡಾನ್ರಿ ಆಗ ।
ಕೂಡಪಲ್ಲ ಸತಿತಪ ಅವರ ಹೊತ್ತ ಗಳಿಯತಾರ ಪರಮಾತ್ಮನ ಸರಣಿ ಮನದಾಗ ॥
॥ ಜೀಜೀ ಚೌಕ ೨ ॥

ಮಧ್ಯಾನ್ಹ ಹೊತ್ತಿಗಿ ಮೆಲ್ಲsಕ ಹೋಗ್ಯಾಳ್ರಿ ಆ ಬಡವಿ ಮಹಾದೇವಿ
ಮನೆತಾನಾ ।
ಏನ ಮಾಡಲೆವ್ವಾ ತಾಯಿ ನೀನಾ ।
ಬಡವರ ಮನಿಗಿ ಭಾಗ್ಯ ಬಂದಂತೆ ಬಾಳ ಮಾಡ್ಯಾಳ್ರಿ ಆಕಿ
ಮಾನಪಾನ ॥ ॥ ಜೀಜೀ ॥

ಎನ್ನ ಗಂಡ ಕೊಂಚಿ ಕೊರವೆನಾ । ನನ್ನ ಗಂಡಗ ಪಾಡ ಆಗೇದವ್ವಾ
ಬಂದ ಹೋಗ ನೀ ಒಂದಿನಾ ॥ ॥ ಜೀಜೀ ॥

ಸಿಟ್ಟಿಗೇರಿ ಆಕಿ ದಿಟ್ಟಿಸಿ ನೋಡ್ಯಾಳ್ರಿ । ಟೀಕ ಇಟ್ಟ ತಾಯಿ ನನ್ನ
ಮ್ಯಾಲ ಮನಸಾ ।
ಏನ ಕಲ್ತು ಆಯಿತು ಎಷ್ಟು ದಿವಸಾ ॥
ಹೆಣ್ಣ ಮಕ್ಕಳದ ಅಲ್ಲವ್ವ ಈ ಕೆಲಸಾ ।
ನನ್ನ ಗಂಡಗ ಪೈಲೆ ಹೋಗನೀ ಹಿಂದರಗಡೆ ಹೋಗಬೇಕೆನ್ನುವ
ನನ ಮನಸಾ ॥ ॥ ಜೀಜೀ ॥

ಕೈ ಊರಿ ಮೆಲ್ಲಃಕ ಎದ್ದು ಹಿಡದಾಳ್ರಿ ದಾರಿ ।
ನಾ ಯ್ಯಾಕ ಬಂದೆ ಚೀಃಮಾರಿ ।
ಹೋಗಿ ಗಂಡಗ ಹೇಳ್ಯಾಳ ಏಷ್ಟು ನಿಮ್ಮದು ಕಾರಭಾರರಿ
ಹೆಂತಾ ಕೊಟ್ಟಿ ಮಾತ ಅನಿಸಿದಿರಿ ॥ ॥ ಜೀಜೀ ॥

ಸಿಟ್ಟಿಗೇರಿ ಸಾಹುಕಾರ ಕೈಯಾಗಿನ ಮಂದೀಗಿ–
–ತಯ್ಯಾರ ಮಾಡ್ಯಾನ ಅಂವಾ ತುರತಾ ।
ಬೇಡಿದಷ್ಟು ಕೊಡತೀನಿ ಶರತಾ ।
ಬಡವನ ಹೆಂಡತಿಗಿ ಅಡವಿಗಿ ಒಯ್ದು ಹೊಡಿಯಬೇಕ್ರೊ ನೀವು
ತುರತಾ ॥ ॥ ಜೀಜೀ ॥

ಕಡ್ನಿಹಗ್ಗ ಹಚ್ಚಿ ಅಡವಿಗಿ ಒಯ್ಯಾರರಿ ।
–ಬಡವನ ಹೆಣ್ತಿಗಿ ಬಡಿಲಾಕ ಅರುಣ್ಯದಾಗ ॥
ದೇವ ಸ್ಮರಣೆ ಮಾಡ ತಾಯಿ ನೀ ಈಗ ।
ಸಾಹುಕಾರನಾಜ್ಞೆ ಆಗೇದ ತಾಯಿ ಹೊಡದಬಿಡತೀವಿ ನಿನ್ನ
ಕ್ಷಣದಾಗ ॥ ॥ ಜೀಜೀ ॥

ನಾಲ್ಕ ಮಂದಿ ಅಳಮಾರಿ ಮಹಾದೀವಿಗಿ ಹೇಳತಾರ ।
ಸುಮ್ಮನೆ ಯಾಕ ಪ್ರಾಣ ಕೊಡತಿ ನಮ್ಮ ಕೈಯ್ಯಾಗ ॥
ಹೆಂತಿಂತವರು ಸಂಸಾರ ಸಾಗಸತಾರ ಮನಿಯಾಗ ।
ನಾವು ಹೇಳಿದಂಗ ಕೇಳತಾಯಿ ನೀ ಈಗ ॥
ಸ್ವಲ್ಪ ಮಾತಿಗಾಗಿ ಪ್ರಾಣ ಯಾಕ ಕೊಡತಿದಿ
ಸಂಸಾರ ಸಾಗಿಸವ್ವಾ ಮನಿಯಾಗ ॥ ॥ ಜೀಜೀ ॥

ನನ್ನ ತಮ್ಮ ಅಣ್ಣಗಳಿರಾ । ನಿಮಕಡಿ ತಪ್ಪಿಲ್ಲ ಇದರಾಗ ।
ಪತಿವ್ರತ ಹೆಚ್ಚ ಹೆಣ್ಮಕ್ಕಳಿಗಿ ಜಲ್ಮದಾಗ ॥
ಪತಿಸೇವಾ ಮಾಡಬೇಕ ಬೆಗು ಬೆಳಗ ।
ನನ್ನ ಪತಿವ್ರತ ನಿಷ್ಠೆ ಇದ್ದರ ಆ ಪರಮಾತ್ಮ ಬರತಾನ ಕ್ಷಣದಾಗ ॥
॥ ಜೀಜೀ ॥

ಜಂಗಮ ರೂಪ ತಾಳಿ ಮಹಾದೇವ ಬಂದಾನ್ರಿ ।
ಪತಿವ್ರತ ತಾಯಿಗೆ ಉಳುಸುದಕ ಆರ್ಯಾಣದಾಗ ॥
ಯಾಕ್ರೊ ಚ್ಯಾಂಡಾಲರಿರಾ ತಾಯಿನ್ಯಾಕ ತಂದೀರಿ ಇಲ್ಲೀಗ ।
ಮಾದೇವ ಕೀರ್ತಿ ಇರಲಿ ಜಗದಾಗ ।
ಬರೆ ನಾಕ ಸಾವಿರ ರೂಪಾಯಿ ಆಸೇಕ ತಂದಿವಿ
ನಾ ಹತ್ತ ಸಾವಿರ ಕೊಡತೀನಿ ಕ್ಷಣದಾಗ ॥ ॥ ಜೀಜೀ ॥

ಬಡವನ ಹೆಂಡತೀನ ಆಕಿ ಗಂಡನ ಕೂಡಸರಿ ।
ಸಾಹುಕಾರಗ ಬಡಿತದ ಮಹಾರೋಗ ॥
ಇದು ಸುಳ್ಳಲ್ಲ ಹೇಳತೀನಿ ನಾ ನಿಮಗ ।
ಸಾಹುಕಾರ ಸಾಯತಾನ ಊರಿಗಿ ಹೋಗುದರಾಗ ॥ ॥ ಜೀಜೀ ॥

ಬಡವಿ ಪುಣ್ಯದಿಂದ ನಿಮಗ ಧರಶಣನಾದೆ ।
ನಿಮ್ಮ ಪಾಪ ನಿವಾರಣಾಯಿತು ಇಂದೀಗ ॥
ಮಲ್ಲಯ್ಯನ ಮಾತ ಕೇಳಿ ಕೋತವಾಲ ನೋಡ್ರಿ
ಮ್ಯಾಣೆ ತಯ್ಯರ ಮಾಡ್ಯಾರ ಆಗಿಂದಾಗ ॥
ಆ ಮಹಾದೇವಿಗಿ ಹೊತ್ತಾರ ಹೆಗಲಮಾಗ ।
ಹೊತಗೊಂಡ ನಡದಿದಾರ ನೋಡ್ರಿ ಊರೀಗ ॥
ಮಹಾರೋಗ ಬಡೆದು ಸಾಹುಕಾರ ಸತ್ತನಂತ ಸುದ್ದಿಬಂತೊ।
ಹೊತ್ತ ಹೊಂಡುದರಾಗ ಹ್ವಾದರ ನೋಡರಿ ಅಗಸೀಗ ।
ಸಾಹುಕಾರ ಹೆಣಾ ಹೋಗಿ ಬಿತ್ತೊ ಹಳ್ಳ ಕದ್ಯಾಗ ॥ ॥ ಜೀಜೀ ॥

ಏರು ಕಟಗಿ ಕುಳ್ಳ ಚಿಪ್ಪಾಟಿ ಒಟ್ಟ್ಯಾರ ಹೆಣದ ಮ್ಯಾಗ ।
ಊರ ಹೊರಗಿನ ಹೊಲ್ಯಾರ ಸುಟ್ಟಬಿಟ್ರೊ ಬಾಡ್ಯಾಗ ।
ಕೂಡುಪಲ್ಲ ಸತಿ ಪತಿ ಅವರ ಹೊತ್ತ ಗಳಿಯತಾರ ಪರಮಾತ್ಮ ಸ್ಮರಣಿ
ಮನದಾಗ ॥ ॥ ಜೀಜೀ ೩ ॥

ಖ್ಯಾಲಿ

ನಾ ನಿನಗ ಎಷ್ಟಂತ ವರಣಿಸಲೆ
ಬಪ್ಪರೆ ಇಲಿಯೇ ನಾ ನಿನಗ ಎಷ್ಟಂತ ವರಣಿಸಲೆ ॥ ॥ ಪಲ್ಲ ॥

ಸಿಂಹ ಪೀಠದಲಿ ಸೇರಿದ ಇಲಿಯೇ ।
ಗಣಪತಿಗೆ ವಾಹನದ ಇಲಿಯೇ ।
ಪಾರ್ವತಿ ದೇವಿಯ ಮಲಿ ಕಡಿದಂತ ಇಲಿಯೇ ।
ಪರಮಾತ್ಮಗ ವೈರಿಯಾದ ಇಲಿಯೇ ।
ನಾ ನಿನಗ ಎಷ್ಟಂತ ವರಣಿಸಲೆ ।
ಬಪ್ಪಾರೆ ಇಲಿಯೇ ॥ ॥ ೧ ॥

ಮೆಚ್ಚಿಗೆಗೊಮ್ಮೆ ಕಡಿದಂತ ಇಲಿಯೇ ।
ಅತ್ತಿ ಸೊಸೆಗೆ ಜಗಳ ಹಚ್ಚಿದ ಇಲಿಯೇ ।
ಹೊತ್ತಿಗೆ ಪುರಾಣ ಕತ್ತರಿಸಿ ಮತ್ತ ।
ಮರ್ತ್ಯಲೋಕ ಮನಿ ಬಿಡಿಸಿದ ಇಲಿಯೇ ।
ಹಾ ಎಷ್ಟಂತ ವರಣಿಸಲೆ ಹಾ ಅಹುದೊ ।
ನಾ ನಿನಗ ಎಷ್ಟಂತ ವರಣಿಸಲೇ ॥ ॥ ಜೀಜೀ ೨ ॥

ಹುತ್ತಿನಲ್ಲಿ ತಾ ಇರುವ ಇಲಿಯೇ ।
ಕತ್ತಲ ಬೆಳಕಿಗಿ ತಿರುಗುವ ಇಲಿಯೇ ।
ಸತ್ಯ ಶರಣಗ ಗೊತ್ತದ ಇಲಿಯೇ ।
ಮುತ್ಯಾ ಚರಂತೆಪ್ಪಾ ಸಾಕಿದ ಇಲಿಯೇ ।
ಹೌದೊ ನಾನಿನಗ ಎಷ್ಟಂತ ವರಣಿಸಲೆ ।
ಬಪ್ಪಾರೆ ಇಲಿಯೇ ನಾ ನಿನಗ ಎಷ್ಟಂತ ವರಣಿಸಲೆ ॥ ॥ ಜೀಜೀ ೩ ॥

ಖ್ಯಾಲಿ

ಹೋಗ್ತೀನಿ ನನ್ನ ತೌರೂರಿಗಿ ಹೊತ್ತ ಇರುವುದರೊಳಗ ।
ಹೋಗ್ತೀನಿ ನನ್ನ ತೌರೂರಿಗಿ ॥ ॥ ಪಲ್ಲ ॥

ಎಲ್ಲಾ ಬಾಲೆಯರೊಳಗ ಸಣ್ಣಾಕಿ ನಾ ಪೋರಿ ।
ಮೈನೆರೆದ ವರುಷಾತು ಬರವಲ್ದು ಚೀಮಾರಿ ॥
ಗಂಡಂತ ಹ್ಯಾಂಗ ಕರಿಲಿ । ಒಲ್ಲಾದ ನನ್ನ ಸೇರಿ ।
ಬ್ರಹ್ಮ ಬರದಿದ್ದ ಬರಹ ಎಂಥಾನವ್ವಾ ಕೋಡಿ ।
ವರನುಳ್ಳ ವಗತಾನ ಬಂದಿಲ್ಲ ನಾ ಬೇಡಿ ।
ಸೇರಲಾರದ ಸಂವತ್ಸಾರ ಮುಂದ ಆಯ್ತೊ ನಗ್ಗೇಡಿ
ಹೆಂಗಸರಂಗ ಕುಂತು ಬೀಸತಾದ ಹಾಡ್ಯಾಡಿ
ಹೋಗ್ತೀನಿ ನನ್ನ ತೌರೂರಿಗಿ ಹೊತ್ತ ಇರುವುದರೊಳಗ ॥ ಜೀಜೀ ೧ ॥

ಕ್ವಾರಳ್ಳಿ ಊರನಂದು ಆದವ್ವಾ ದೂರಾ ।
ಗಂಡನ ಊರೈತಿ ಎಳಮೇಲಿ ಶಾರಾ ।
ಎಳಮೇಲಿ ಗಂಡಗಂತ । ಬಿದ್ದಾದ ಜೋರಾ ।
ಹೋಗ್ತೀನಿ ನನ್ನ ತೌರೂರಿಗೆ ಹೊತ್ತ ಇರುವುದರೊಳ ॥ ಜೀಜೀ ೨ ॥

ಎತ್ತೇರಿ ಹೋಗ್ತೀನಿ ನೆಲಗೇರಿ ಮಂದಿ
ಕ್ವಾರಳ್ಳಿ ಮಲ್ಲಿನಾಥಾ ಹಾನವ್ವಾ ನಮ್ಮ ತಂದಿ
ಆತನ ಪಾದಕ ಇರತೀನಿ ಹೊಂದಿ
ಹೋಗ್ತೀನಿ ನನ್ನ ತೌರೂರಿಗೆ ಹೊತ್ತ ಇರುವುದರೊಳಗ ॥ ಜೀಜೀ ೩ ॥

ಹಾದರ ಮಾಡಬೇಕ

ಹಾದರ ಮಾಡಬೇಕ ಹೌದ ಹೌದ ಅನುವಂಗ :
ಹಾದರ ಮಾಡಬೇಕ ಹೌದ ಹೌದ ಅನುವಂಗ ಹಗಮಾಲಿತನಾ ಕಲಿಯರೆ ।
ಕಲ್ತು ಹಾದರರಿಯರೆ ।
ಭಾರಾ ವರುಷದ ಭಾರ ಇರುತಾನಾ ಭೂಮಂಡಲ ಸುಲಿಯರೆ ॥
॥ ಜೀಜೀ ॥

ಒಂಬತ್ತ ತೂತಿನ ಸೀರಿ ಉಟ್ಟು ಇಂಬಾಗಿ ಜಗ್ಗ ಹಾಕಿರೆ ।
ನೀವು ಜಂಬದೊಳಗ ಹೋಗತಿರೆ ।
ಹರಕಸೀರಿ ಬರಕಾತಾ ಹಿಂಗಲಿಲ್ಲ ವ್ಯರ್ಥ ಹಾದರ ಮಾಡತಿರೆ ॥
॥ ಜೀಜೀ ॥

ಹಾಳ ಹರಟೆ ಮಾಡಿ ಸೂಳೆರೆಲ್ಲರು ತೋಳಿಗಿ ಕುಬಸ ಕಾಣಿರೆ ।
ಕೂಳಿಗಿ ವರ್ಜಿತಾಗಿರೆ ।
ಕಗ್ಗ ಸೂಳೆರೆಲ್ಲ ಅಗ್ಗ ಮಾಡಿ ನೀವು ದುಗ್ಗಾಣಿಗೆ ಮಾರಿರೆ ॥ ಜೀಜೀ ॥
ಹುಸಿ ಮಾತಾಡಿ ಹಸಿ ಬಿಸಿ ಹಾಕಿ । ಕುಶಿ ಬಂದ ಸೆರಗ ಹಾಸತಿರೆ ।
ನಿಮ್ಮ ಕಸಬಕ ಬಟ್ಟ ತರತಿರೆ ।
ಹಸನ ಮಾಡುದಿಲ್ಲ ಮಸಬ ಜ್ವಾಳಾ ತಂದು ಗಸಿಬಿಸಿ ನೀವು
ಬೀಸತಿರೆ ॥ ॥ ಜೀಜೀ ॥

ಇಳು ಬೀಸುದಕ ಹಾಕಿರಿ ಕಲ್ಲಾ । ನಾರೆರೆಲ್ಲಾ ।
ನಿಮಗ ಇಲ್ಲ ಜಲ್ಲ । ಹಿಟ್ಟ ನೆಲಪಾಲ ಮಾಡಿರಿ
ಹಾದರಗ ಹತ್ಯೆದ ಸರಿಯೆ ॥ ॥ ಜೀಜೀ ॥

ಹದಿಮೂರು ಮಂದಿ ಗೆಳೆತ್ಯಾರಾ । ತಿರಗತಿರಿ ಧರಾ ।
ಹಾದರಂತೆರಾ ತಗೊಂಡ ಮೈಮಾಲಾ ।
ಕಂಡಿಲೇನ ಬಂಗಾರ ಬೆಳ್ಳಿಯೆ ॥ ॥ ಜೀಜೀ ॥

ಹಿಂದ ಮಾಡಬಾರದು ಕಣಗೆಟ್ಟಾಂಗಾಗತಿರಿ
ಪರತ ನಿಮ್ಮಂಗ ದೃಷ್ಟಿಕೊಟ್ಟ ಬರದಾನ
ತಪ್ಪಿಸಬೇಕ ಬ್ರಹ್ಮನ ಬರಿಯೆ ॥
ಹಾದರದ ನೆಲಿಯ ತಿಳಿಯರೆ । ತಿಳದು ಮಾಡರೆ ।
ಸೇರಿ ಗಳಸರೆ । ಹರಿಯಲಾರದು ತಂದು
ತಿದ್ದನೆಲಿಯೇ–
ಹದಿನೈದು ನಿಲಗಿಗಳ ಎಣಿಸಿ । ನಡಿರೆವ್ವಾ ಕುಣಿಸಿ
ಅಂದ ದಣಿಸಿ ರಂಗಮಂಟಪ ಪಾಯರಿ
ಮಾಲಿಂಗನ ಮಾನಿ ಗೆಲಿಯರೆ ॥ ॥ ಜೀಜೀ ॥

ಏರು ಉಟಕೊಂಡ ಹೊಡಿಯರೆ ಜೋಕ । ಮೂರು ಲೋಕ ।
ಹಾದರದ ಮಾಡಿದ್ದಕ ಸಾರ್ಥಕಾಗತೈತಿ ।
ಮರವ ಹಿರಿಬ್ಯಾನಿ ಮನಸ್ಯರ ಕಲಿಯೆ ॥

ಕೂಡುಪಲ್ಲ ಕಡಿಮಾಡಿ ಹಾದರ ಕಲಿಯೇ ಬಾರಾ ವರುಷದ
ಭಾರ ಇರುತಾನಾ ಭೂಮಂಡಲ ಸುಲಿಯರೆ ॥ ಜೀಜೀ ೨ ಚೌಕ ॥

ಏರು ಐದು ಮಂದಿಗ ಐವತ್ತಾರ ದೇಶಕ ತಮ್ಮದೇ ನಡಸ್ಯಾರ ಶಕಾ ।
ಈ ಭೂಮಿಮ್ಯಾಗ ಅಂಶಿಕಾ ।
ಐದು ಮಂದಿ ಗುಣ ಅವಲಂಬಿಸಿಕೊಂಡು ಆರಿಸಿ ಉಣರೆಸುಖಾ ॥
॥ ಜೀಜೀ ॥

ಆರು ಮಂದಿಗಿ ಅಬಸತ ಬ್ಯಾಡ । ಅಹಂಕಾರ ಲಂಕಾಕ ।
ದಶ ಇಂದ್ರಿಯ ದಶಮುಖಾ ।
ಅಯ್ಯೋದ್ಯ ಅರಸಗ ಅರಣ್ಯ ತೊಡಶ್ಯಾಳ ಐವತ್ತಾರು ದಶಮುಖಾ ॥
॥ ಜೀಜೀ ॥

ಎಂಟು ಮಂದಿ ಆ ನೆಂಟರ ಮುಂದ । ನಿಂತ ಮಾಡೊ ಶಕಾ ।
ಉಟ್ಟತೊಟ್ಟ ಪೋಷಕಾ ।
ಮರವು ಎಂಬುವ ಕುದರಿ ಏರಿ ಕುಣಶ್ಯಾಳರಿ ದೇಶ ದೇಶಕಾ ॥ ಜೀಜೀ ॥

ಇಳು ದೇಶ ದೇಶ ಶೋಧ ಮಾಡ್ಯಾರವ್ವಾ । ವರಾ ಹುಡಿಕಿ
ಪುತ್ರರನ ಹಡಿಯರೆ ಮಿತ್ರರ ಜೊತೆ
ಹಾದರತನ ಮಾಡಿ ಗತಿ ಎನಿಸಿದ ಲಕ್ಷ್ಮಿಯಂತೆ ॥ ॥ ಜೀಜೀ ॥

ಕಂಡವರ ಮನಿ ಹೊಕ್ಕು ಬಳಸಿ । ಎಲ್ಲಾ ರಮನಿ ಬಳಸಿ
ದ್ರವ್ಯವನು ಗಳಿಸಿ ಗಂಡಗ ಉಣಸರೆ ತೀರಸರಿ ಅವನ ಭ್ರಾಂತಿ ॥
॥ ಜೀಜೀ ॥

ದೊಡ್ಡ ದೊಡ್ಡ ಸದರ ಬಾಜಾರದಾಗ ಮಾಡಿಕೊಳ್ರೆ ಸಂತೆ
ಆ ಸಂತಿಗಿ ಸಾವಿರ ಮಂದಿ । ಹಾರಸಂದಿ
ಕುಡಸ್ತಾರ ಸಿಂಧಿ ಅಮಲೇರಿಸ್ತಾರ ಮಾಡಕೋತಾರ ತಮ್ಮಂತೆ ॥
॥ ಜೀಜೀ ॥

ಹೆಸರ ತರ್ರೆ ನಿಮ್ಮ ತಾಯಿಯ ಹೆಸರ ತರೆ, ತೌರಮನಿ ಲೇಸರೆ
ತರದಿದ್ದರ ನಿಮಗ ದೋಷರೆ,
ಕುಶಲದ ವಿಭೂತಿ ಕುಂಕುಮ ಬಚ್ಚಿಟ್ಟು ಕುಡಿಹುಬ್ಬವ ಕುಣಿಸರೆ ॥
॥ ಜೀಜೀ ॥

ಗುಪ್ತ ಭಾತ್ಮಿಯಿಂದ ಗೋಪೇರ ದ್ವಾರದ ಆತನ ಪೌತೆಗ
ಮೂರ ಕೀಲಿ ಮುರಿಯರೆ
ನಿಗದನ ಮೇಳ ಮಾಡಿಕೊಂಡು ಸಾವಾಧಾನ ಹಾದಿಗಳಿಸರೆ
ಹಿಂಗ ಮಾಡಿದರ ಹಾದರ ಕರೆ । ಕೇಳರಿ ಆರ್ಯರೆ ॥

ಹಿಂಗ ಮಾಡಿದಕ್ಕಿ ಹಾದರಗಿತ್ತಿ ಕರೆಪತಿವೃತ್ತಿ
ಅಪೂಟಾ ಗರ್ತಿ ಕೀರ್ತಿ ಮರ್ತ್ಯಕ ಸಾರತದ
ಕ್ವಾರಳ್ಳಿಗಿ ನೀವು ಬರೆ,
ಆ ಚರಂತಿ ಸ್ವಾಮಿಗಿ ನಂಬಿ ಮಾಡಿ ತುಂಬಿ
ಜಗತ್ತೆಲ್ಲ ತುಂಬಿ ತುಳುಕುವರಿಗೆಲ್ಲ ತುಳಿರೆ
ನಿಮಗ್ಯಾತರ ಹಾದರ ತಗಿ ಬರತದ ನಗಿ
ಹಿಂತಾ ಸೂಳೆರಗಿ ಹೇಳಿ ಹೇಳಿ ಮುಪ್ಪನಾದ
ಮೌಲಾನ ಕವಿಯ ಮನ್ನಿಸರೆ ॥ ॥ ಜೀಜೀ ಚೌಕ ೩ ॥

ಉತ್ತರ ತಗಿಯೊ ಆಡಾಡತ ಬಿತ್ತೋ ಅಗಳಿಯೋ

ನಿನ್ನ ಮ್ಯಾಲ ಬಂತ ನನ್ನ ವಾರ ಏತರದಿತ್ತ ಭಾರ
ಕತ್ತಿ ಢಾಲ ಫೇರಾ ।
ವಾರ ತಗಿಯೋ ಆಡಾಡತ ಅಗಳಿ ಬಿತ್ತೊ ಬಾಳ ಬಿರಿ ॥ ॥ ಜೀಜೀ ॥

ಹಿಜಡ್ಯಾಂದು ಕೇಳತಿನಿ ಸ್ಥಳಾ । ತಿಳಿಸೊ ಇದರ ಕಳಾ ।
ಹಾಕಬ್ಯಾಡ ಮಳಾ೬। ಮಂಡಗ್ಯೆಲೆ ।
ಬರಬರತ ಕಂಡೆನಾ ಇಂಡಿ ಗ್ರಾಮದಲ್ಲ್ಯೋ ॥ ॥ ಜೀಜೀ ॥

ಆ ಹಿಜಡ್ಯಾ ಓದುದು ಯಾವ ಕಲ್ಮಾ ।
ಅವನದೊಂದು ಜಲ್ಮ ಪ್ರಾಂತದಲ್ಲೇ ।
ಶಿಲಾ ಶಿಲಾ ಇಳಿದು ಬಂತು ಯಾರ ಅಂಶದಲ್ಲ್ಯೋ ॥ ॥ ಜೀಜೀ ॥

ಇಳುವು ಒಬ್ಬ ಹಿಜಡ್ಯಾ ಸತ್ತಿದ್ದ ಜ್ವರ ಬಂದು ಇಂಡ್ಯಾಗ ।
ಊರ ಮುಂದ ಹಳ್ಳದ ದಂಡ್ಯಾಗ ॥ ॥ ಜೀಜೀ ॥

ಸುತ್ತ ಸುದ್ದಿ ಹೋಗಿ ಮುಟ್ಟಿತೊ ಖಾಜಿ ಮುಲ್ಲಾಗ ।
ಯಾವ ಮಂತ್ರ ಓದಿದ ಅವಾ ಆವಾಗ ॥ ॥ ಜೀಜೀ ॥

ಮೇನ ಮುಸಲ್ಮಾನರು ಬಂದ ಕೂಡ್ಯಾರು ಆಗಬೇಗ ।
ಮಣ್ಣ ಮಾಡುದಸಿಂದ ಹಿಜಡ್ಯಾಗ ॥ ॥ ಜೀಜೀ ॥

ಏರು ಎಲ್ಲ ತರದ ಎಲ್ಲ ಜೀನಸ ತರಸಿ ಶ್ಯಾಣೆರಗಿ ನೆರಸಿ ।
ಶಾಸ್ತ್ರಕ ಅನುಸರಿಸಿ ।
ಕೂಡಪಲ್ಲ ಉತ್ತರ ತಗಿಯೊ ಆಡಾಡತ ಬಿತ್ತೋ ಅಗಳಿಯೋ ॥
॥ ಜೀಜೀ ॥ ಚೌಕ ೧ ॥

ಇದು ತುರಾಯದವರಿಗೆ ತುರ್ತ ಬೇಕೋ ಇದರರ್ಥ ।
ಕುಂಡರ ಬ್ಯಾಡೊ ಮರತ ।
ಮನಸಿನ್ಯಾಗ ನಾ ಬಂದಿನಿ ಬಾಳ ಜಾಗದಾಗ ಕೇಳುತ ॥ ॥ ಜೀಜೀ ॥

ಮಣ್ಣ ಮಾಡುದಸಿಂದ ತಯ್ಯಾರಾ । ಊದ ಕಪ್ಪುರಾ ।
ತಂದ್ರೊ ಬಾಜಾರದಾಗ ಅಭೀರ ।
ಅಷ್ಟರಾಗ ಬಂದನೋ ಒಬ್ಬ ದಾರಿಕಾರಾ ॥ ॥ ಜೀಜೀ ॥

ಯಾಕೋ ಜನಾ ನಿಂತದ ಜಮಾಸಿ । ನೋಡಿದ ಅಜಮಾಸಿ ।
ಬಂದಾವ ಕೇಳಿದ ಪುರಮಾಸಿ ।
ನೀವು ಮಣ್ಣ ಮಾಡತೀರಿ ಹಿಜಡ್ಯಾಗ ಹ್ಯಾಂಗ್ಯಾಂಗ ತಿಳಿಸಿ ॥ ಜೀಜೀ ॥

ಇಳುವು ದಾರಿಕಾರ ಅಂತಾನ ನೀವು ಕೂಡಿರಿ ಶಾಣೆ ಶಾಣೇರಾ ।
ನನ್ನ ಮಾತ ಕೇಳ ವಂದಜರಾ ॥ ॥ ಜೀಜೀ ॥

ಹೆಣ್ಣ ಗಂಡ ಎರಡು ಅಲ್ಲಾ ಯಾವ ಗುಸಲಿ ಮಂತರಾ ।
ಓದಿ ಹೆಣಕ ಹಾಕಬೇಕೋ ನೀರಾ ॥ ॥ ಜೀಜೀ ॥

ಏಸ ತುಕಡಿ ಮಾಡಬೇಕೋ ಅರಬಿ ಹೇಳೊ ಚ್ಯಾತುರಾ ।
ಗೋರಿ ತಗಿಯಬೇಕೊ ಎಷ್ಟು ಅಂತರಾ ॥ ॥ ಜೀಜೀ ॥

ಏರ ಇಷ್ಟು ಹೇಳಿ ಹೆಣಾ ಸಂತಗಲಸಿ । ಹೋಗರಿ ಸಂಹರಸಿ ।
ಕೂಡೇದ ಇಲ್ಲಿ ಪರಸಿ ತಿಳದ ಬಗಿಯೋ ।
ಕೂಡುಪಲ್ಲ ವಾರತಗಿಯ ಆಡಾಃಡತ ಅಗಳಿ ಬಿತ್ತೊ ಬಾಳ ಬರಿಯೊ ॥
॥ ಜೀಜೀ ॥ ಚೌಕ ೨ ॥

ನಾ ಸ್ವಲ್ಪ ಕೇಳತೀನಿ ದರು । ಯಾಂವ ಅವನ ಗುರು ।
ಶಾಣೆರಿಗಿ ನೆರದ ಸಭಾದಲ್ಲೆಯೊ ।
ಬಾಯಿ ಮಾತ ಅಲ್ಲ ಇದು ಕಿತಾಪದಾನ ಬಲಿಯೊ ॥ ॥ ಜೀಜೀ ॥

ಹಿಜಡ್ಯಾನ ತಾಯಿ ತಂದಿ ಯಾರು
ನನ್ನ ಮುಂದ ತೋರು ।
ಸಭಾದಾಗ ಬಾರೋ ಆಡೂನು ಕುಸ್ತಿ ।
ಹರದಾಸದವರಿಗೆ ಇರಬೇಕೊ ಈ ಹಿಜಡ್ಯಾನ ಹ್ಯಾಸ್ತಿ ॥ ॥ ಜೀಜೀ ॥

ಹೆಂಗಾಯಿತೊ ಅವನ ಉತ್ಪತ್ತಿ ।
ಇದ್ದಿದಿಲ್ಲ ಸತಿ ।
ಎಲ್ಲಾರಿಗಿ ಪ್ರತಿ ಜಗಕ ಜ್ಯೋತಿ ।
ಇಲ್ಲಿ ತನಕ ಹಿಜಡ್ಯಾಂದು ಜುರ್ಭ ನಡುವತೈತಿ ॥ ॥ ಜೀಜೀ ॥

ಅವಗ್ಯಾರು ಕಟ್ಟಿದಾರ ಪಟ್ಟ ।
ಶಿಕಾ ಯಾವ ಕೊಟ್ಟಾ ।
ಪಿತಾಂಬರ ಉಟ್ಟ ಶೀಲವಂತೊ ।
ಅವನ ಮುಂದ ಜಕ್ಕಶ್ಯಾಳ ಪಾತರ ಸುಕಾತಿ ॥ ॥ ಜೀಜೀ ॥

ಇಳುವು ಇಂಗಳಗಿ ಬೀಬೀ ಜ್ಯಾಗಿರಿ ಇರುವ ಸ್ಥಳಾ ।
ಇಬ್ರಾಹಿಮಶಾ ವಸ್ತಾದ ಶಾರ್ದೂಲಾ ॥
ಮಮ್ಮದ ಇಮಾಮಶಾ ಹಾಡತಾರ ರಂಗಲಾಲಾ ।
ಹಿಡದ ತಿರವಿದಂಗ ಇಸ್ಕೂಲಾ ॥ ॥ ಜೀಜೀ ॥

ಮಲ್ಲ–ಹಸನನ ಪದಗಳು ಸಂಖೆ ಸಾವಿರದ ಮ್ಯಾಲ ।
ಅಷ್ಟ–ಇಷ್ಟ ಅಂಬುದಕ ಅಳತಿಲ್ಲಾ ॥ ॥ ಜೀಜೀ ॥

ಏರು ಚಂದು ನಿಂಗಪ್ಪನ ಹಾಡಿಕಿ ।
ಶುದ್ಧ ತಾರಕ್ಕಿ ।
ಕೇಳಿ ಹೋಗಾಕಿ ತಿಳಿದ ಬಗಿಯೊ ।
ಕೂಡಪಲ್ಲ ವಾರ ತಗಿಯೋ ಆಡಾಡತ ಅಗಲಿ ಬಿತ್ತೊ ಬಾಳ ಬಿಗಿಯೋ ॥
॥ ಜೀಜೀ ॥ ಚೌಕ ೩ ॥

ಖ್ಯಾಲಿ

ಕೆಂಬವಿ ಸಮೀಪದಲ್ಲಿರುವ ಕೊಳ್ಯಾಳ
ಅದು ನಿವಳsಽ ನೀರಿಂದ ಹೆಚ್ಚಿನ ಗೋಳಾ ॥ ॥ ಜೀಜೀ ॥ ಪಲ್ಲ ॥

ನೀರಡಿಸಿ ದನಕರಗಳ । ಬ್ಯಾಗರಿತಾವೊ ಬಾಳ ।
ಬಾಂವಿ ತುಂಬ ಇಟ್ಟ ಕೊಡಗೋಳ ।
ಉಸರ ಹಾಕುತ ಹೆಣ್ಣ ಮಕ್ಕಳ
ನಿದ್ದಿಲ್ಲೊ ರಾತ್ರಿ ವಿರಳs ।
ಮಾಡ್ಯಾರೊ ತವರ ಮನಿ ನೆಪ್ಪಾ ।
ಹೆಂತಾ ಊರಿಗೆ ಕೊಟ್ಟ ನಮ್ಮsಪ್ಪಾ ।
ನೀರಿಲ್ಲೋ ಸಿಂಪಾ । ಹೆಚ್ಚಿನ ತಾಪಾ ।
ಕೆಂಬವಿ ಸಮೀಪದಲ್ಲಿರುವ ಕೊಳ್ಯಾಳ ॥ ॥ ಜೀಜೀ ೨ ॥

ನೀರಡಿಸಿ ಹಿಂಡುವ ಎಮ್ಮಿ ।
ಮುಸರಿ ನೀರ ಕಾಣವಲದೊಮ್ಮಿ
ಕುರಿ ಕುದರಿಗಳು ನೀರಡಿಸಿ
ಹಿಂಗ ಕರುವತಾವ ಹೂಂಕುರಿಸಿ
ನೀರ ಹಾಕವರಿಲ್ಲೊ ಬೆರಸಿ ನೀರಿಲ್ಲದ ನಾಯಿದ
ನೀರಿಲ್ಲದ ನಾಯಿದಾ ಪರವೂರಿಗೆ ಹೋದಾ ।
ಕೆಂಬವಿ ಸಮೀಪದಲ್ಲಿರುವ ಕೊಳ್ಯಾಳ ॥ ಜೀಜೀ ೩ ॥

ನೀರಡಿಸಿ ಬಂದ ದಾರಿಕಾರಾ । ಚಾತುರಾ ।
ಕಣ್ಣೀಗೆ ತಂದಾ ನೀರಾ । ನೀರಡಿಸಿ ಬಂದಾ ದಾರಿಕಾರಾ ॥ ಜೀಜೀ ೪ ॥

ಕೈಯಾಗ ಹಿಡಕೊಂಡ ಚರಗಿ
ನೀರಡಿಸಿ ಮನಿ ಮನಿ ತಿರಗಿ
ಜೀವಣಸಿಂಗ ಬಂದ ಕಾರಕೂನಾ
ಕರದೊಯ್ದ ತನ್ನ ಮನಿತಾನಾ
ನೀರ ಹಾಕಿ ತೃಪ್ತಿ ಪಡದಾನಾ
ಹಿಂತವರಿರಬೇಕು ನೋಡ ಊರೊಳಗ
ಇದ್ದರ ಆಗುವದು ಬೇಗು ಬೆಳಗ
ಸುಬೆದಾರನ ಆಜ್ಞೆಯ ಒಳಗ
ಹೇಳುವರೋ ಎಲ್ಲಾ ತಿಂದಾಂಗೊ ಬೆಲ್ಲಾ
ಕೆಂಬವಿ ಸಮೀಪದಲ್ಲಿರುವ ಕೊಳ್ಯಾಳ ॥ ಜೀಜೀ ೫ ॥

ಭಾಗ – ೨

ಮುಳಸಾವಳಗಿ

ಪರಿವಿಡಿ

೧)	ತುರಾಯದವರು ಬಲು ಬಿಗದ ಕುಂತಾರ	೫೯
೨)	ಪಿಂಡ ಬ್ರಹ್ಮಾಂಡ–ಬ್ರಹ್ಮಾಂಡ ಪಿಂಡ	೬೨
೩)	ಮಂಡೋಧರಿ	೬೪
೪)	ನಮ್ಮ ನಿಮ್ಮದು ಇದೇ ಶರಣಾರ್ಥಿ	೬೬
೫)	ಎಚ್ಚರಾಗೊ ಜರಾ	೬೯
೬)	ಸವ್ವಾಲ ಸಾಕ ಮಾಡೊ ದನದಿ ಶಾಹೀರಾ	೭೩
೭)	ಹೆಣ್ಣ ಗಂಡು ಎರಡು ಜೋಡ	೭೫
೮)	(ಸಖಿ) ಎಣಿಸಿ ಆರಬಾಳಿಕಾಯಿ	೭೯
೯)	ಪುಣ್ಯ ಬರತದಂತ	೮೦
೧೦)	ಮುಂಚೇಳೆ ಎದ್ದು ನನ್ನ ಮುಂದ ಹಾಯ್ದಾಳೊ	೮೪
೧೧)	ಅತ್ತಿನ ಕೊಲ್ಲುವ ಭೇತ ಮಾಡ್ಯಾಳ	೮೮
೧೨)	ಶ್ರವಣ ಕುಮಾರ	೯೧
೧೩)	ಮಲ್ಲಿಗ್ಹೂವಿನಂಥ ಹೆಣ್ಣ	೯೫
೧೪)	ಗ್ವಾಡಿ ಜಿಗದ ನೀ ಓಡಿ ಹೋದಿನಂತಿ	೧೦೧
೧೫)	ಶರಣಪ್ಪ ಮುತ್ತ್ಯಾ	೧೦೪
೧೬)	ಜ್ಯಾತ್ರಿಗಿ ಹೋಗು ಮಿತ್ರನ ಕಂಡು	೧೧೭
೧೭)	ಬಾಗಲಕೋಟೆ ಹುಂಡೇಕಾರ	೧೨೦
೧೮)	ಸಖಿ	೧೨೭
೧೯)	ಎಂಬತ್ತೆರಡ ಸವಾಲ	೧೨೮
೨೦)	ಗಂಡ ಹೆಚ್ಚಂತ ಬಂಡ ಮಾಡವರು	೧೩೩
೨೧)	ಕತ್ತಿಯಂಗ ಕುಣಿಯಬೇಡ	೧೩೭
೨೨)	ಅರಸಗ ಯಾಕ ಬಂತ ವನವಾಸ	೧೩೯
೨೩)	ಕರ್ನಾಟಕ ದೇಶದ ಹೆಣ್ಣ ಕಾಡಿಗಣ್ಣ ನಡಾ ಸಣ್ಣ	೧೪೩
೨೪)	ಹೆಣ್ಣ ಬಾಲಿ ಸಣ್ಣಕ್ಕಿ	೧೪೬
೨೫)	ಆರ ಗುಣಾ ಅಳಿದಂತ ಶಕ್ತಿ	೧೪೯
೨೬)	ಸಖಿ	೧೫೨
೨೭)	ಗಂಡ ಹೆಂಡರ ವ್ಯಾಪಾರ ಮಾಡತಿದ್ರೊ	೧೫೩
೨೮)	ಗೆಳತಿ–ಗೆಳಯರ ಕಥಿ	೧೫೬
೨೯)	ಬಾರೊ ಬಾರೊ ನನ್ನ ಸ್ವಾದರ ಮಾವಾ	೧೫೯
೩೦)	ಕೃಷ್ಣ ಹುಟ್ಟಿ ಬಂದಾ	೧೬೨

ತುರಾಯದವರು ಬಲು ಬಿಗದ ಕುಂತಾರ

ಹತ್ತು ಮಂದಿ ಚಿತ್ತಿಟ್ಟು ಕೇಳರಿ । ಯಾರಿಗೇsನ ಅಂದಿsನಿ
ಕರದs ನಾ ಬಂದಿನೋ ।
ತುರಾಯದವರು ಬಲುಬಿಗದ ಕುಂತರಪ್ಪಾ
ಇವರಿಗೇ ಅಂದಿನೋ ॥ ॥ ಜೀಜೀ ॥

ಇವರಲಿಂದ ನನ್ನ ಬೆಳಗನಾದಿತಂತ ಇವರನೇನ ಕsರಸೀನೋ
ಪತ್ರ ಬರದ ಕಳಸೀನೊ ।
ನಮ್ಮ ಮ್ಯಾಲ ಇಷ್ಟ ಸೆಡುವ ಮಾಡಲಾಕ ಇವರನೇನ ಕರಸೀನೊ ॥
॥ ಜೀಜೀ ॥

ಸರ್ವದೈವ ಚೌಕಾಸಿ ಮಾಡಿಸಿ ಏಸು ಮನಿಯ ಮುರಸಿನೋ
ಯಾರದೇನ ಹರಸಿನೋ ।
ನಮ್ಮಮ್ಯಾಲ ಬಹಳ ಕುನಸ ಇಟ್ಟರ ಇವರ ನೆತ್ತಿಗೇನ ವರಸಿನೋ ॥
॥ ಜೀಜೀ ೩ ॥

ನಾವು ಇವರು ಗಂಡ–ಗಂಡಸರು ಹೌದು । ನೋಡುತನಕ ನೋಡತೀನೋ।
ಕಡಿಗೆ ಕಲಾಸ ಮಾಡತೀನೊ ।
ನಮಗ ಇವರು ಹೆಣ್ಣs ಅಂದ ಬಳಿಕ ಇವರ ಮಳ್ಳ ಇಳಿಸಿ
ಬಿಡತಿನೋ ॥ ॥ ಜೀಜೀ ॥

ಇಳು ನೀ ಓಡಿ ಬಂದಿ ಅವಸರದಿ ಕೊನಿ ಕಡಿದಿ ।
ಇಷ್ಟ್ಯಾಕ ನೀನು ಹಾತೊರದಿ ಹಂಗ ಹರದಿ ।
ನಾ ಹುಡುಕಿ ಕರೆಯುವದರೊಳಗ ಅಲ್ಲೇ ಬಂದು ನೆರದೊ
॥ ಜೀಜೀ ೧ ॥

ನಾ ಶ್ರೇಷ್ಠ ಅಂತಾ ಅಹಂಕಾರ ಸುದ್ದಿ ಹರದಿ ।
ಉಪ್ಪ ಇದೆ ನಾ ಮೆರದಿ ಉರದಿ । ಬಲು ಮೆರದಿ ।
ನನ್ನ ಕೈಯಾಗ ಸಿಕ್ಕರs ಮುಂದ ಬಾಯಿ ತೆರದಿ ॥ ॥ ಜೀಜೀ ೨ ॥

ಇನ್ನ ಮ್ಯಾಲ ನೋಡೋs ತುಸು ಗರದಿ । ಬಂತೊ ವರದಿ ।
ಇನ್ನ ನಮ್ಮ ನಿಮಗs ಯ್ಯಾತರ ವರದಿ । ಮನ ಮುರದಿ ।
ನೀನು ಇಲ್ಲೇ ಕುಂದ್ರಂತ ಸುಳ್ಳೇಳಿ ಮನಿಕಡಿ ಹೋದಿ ॥ ಜೀಜೀ ೩ ॥

ಏರ ಹಿಂದ ಮುಂದ ನಿಂದೆ ಆಡಿದರ । ನಿಮ್ಮ ಜೀವತಿಂತಿನಿ
ಕೂಡಪಲ್ಲ ಅದಕೇ ಬಂದs ನಿಂತೀನಿ । ತುರಾಯದವರು ಬಲು ಬಿಗದ
ಕುಂತಾರಪ್ಪಾ ।
ಅವರಿಗೇನ ಅಂದೀನಿ ॥ ॥ ಜೀಜೀ ಚೌಕ ೧ ॥

ಬಂತ ಸವಾಲ ಜರಾ ಕುಂತ ಕೇಳರಿ ಚಿಂತಿ ಮಾಡುದು ಯಾಕರಿ ।
ಅಂತಾದೇನ ಬಂತರಿs ।
ಭ್ರಾಂತನಾಗಬೇಡ ಉತ್ತರ ಹೇಳ ಹಂಗೆ ನಡಿಲಿ ಉಸ್ತರಿ ॥ ॥ ಜೀಜೀ ॥

ಮುಸಾಪುರ ಪೈಗಂಬರು ಶರಣ ಇದ್ದಾನರಿ ತನ್ನ ಮತಕ ಶ್ರೇಷ್ಠರಿ
ಅವಧೊರಿ ಶಾಸ್ತ್ರದಾಗ ನೋಡರಿ ।
ಹತ್ತು ಮಾಪ ಏನು ಹೇಳುದರಿ ಅವನ ಚಿತ್ತ ಒಂದು ತಿಳಸರಿ ॥
॥ ಜೀಜೀ ೨ ॥

ಏಸ ದಿವಸ ಆ ಶರಣನ ಸಂಗತಿ ಬೆತ್ತ ಇಳದ ಬಂತರಿ
ಯಾವ ಕೊಟ್ಟ ಹೇಳರಿ ।
ನಿಮಗ ಬಗೆಹರಿಯದಿದ್ದರ ನಿಮ್ಮ ವಸ್ತಾದಗ ಹೋಗಿ ಕೇಳರಿ ॥
॥ ಜೀಜೀ ೩ ॥

ಇಳು ಗಿಡದ ಹೆಸರ ಹೇಳಬೇಕೊ ಬೇಸಿ । ನೀ ಸೋಸಿ
ತುದಿ ಟೊಂಗೆ ಬೇರ ಬುಡದರಸಿ । ಏಣಿ ಏಣಿಸಿ ।
ಯಾವ ಟೊಂಗೆದಾಗ ಬೆತ್ತ ಹುಟ್ಟಿತು ಪುರಮಾಸಿ ॥ ಜೀಜೀ ೧ ॥

ಎಷ್ಟ ಉದ್ದ ಬೆತ್ತ ಪಿಡದಸಿ । ಅವಕಡಿಸಿ
ಗಿಡ ಕಾಯಿ ಹೂವ ಎಲೆ ಸರಸಿ । ಬೀಜ ದರಿಸಿ
ಇವು ಇಷ್ಟೂ ಹೆಸರು ನೀನು ಹೇಳಿ ಹಾಡೋ ಹರದಾಸಿ ॥ ಜೀಜೀ ೨ ॥

ಇದು ಇರುವ ಸ್ಥಳಾ ನಮಗ ತಿಳಿಸಿ । ಬಗೆಹರಿಸಿ ।
ಈ ಬ್ರಹ್ಮಾಂಡೆಲ್ಲಾ ಚರಸಿ ಸಂಹರಿಸಿ
ತಿರುಗಾಡಿ ನೋಡಿ ಬಂದು ನನಗ ಹೇಳಬೇಕೊ ಹರದಾಸಿ ॥
॥ ಜೀಜೀ ೩ ॥

ಏರು ಏಸು ಮಂದಿ ಕೂಡಿ ಬೆತ್ತ ಕೊಟ್ಟಾರೊ ಗಾದಿಮಾತ ತಗದಿನೊ
ನಗ ನಗತ ಬಲಿಯ ವಗದಿನೊ ।
ಕೂಡಪಲ್ಲ ತುರಾಯದವರು ಬಲು ಬಿಗದ ಕುಂತಾರಪಾ ಇವರಗೇನು ಅಂದಿನೋ ।
॥ ಜೀಜೀ ಚೌಕ ೨ ॥

ಬೆತ್ತಿನೊಳಗ ಹಿಂಗ ಇತ್ತು ಪರಾಕ್ರಮಿ ನಿತ್ಯ ಸ್ತೋತ್ರ ಮಾಡುದೊ
ಅಂತ್ರಲಿಂಗ ತಿರುಗುದೋ ।
ಅಂತ್ರ ಹೋಗಿ ಅದು ದಂಡಿನೊಳಗ ಸ್ವಂತ ಲಡಾಯಿ ಮಾಡುದೊ ॥

ಬೆತ್ತಿನ ಹೆಸರ ಲಗು ಗೊತ್ತು ಮಾಡಿಕೊ । ಇಷ್ಟೇ ನಿಮಗ ತಿಳಿಸುದೊ ।
ಹೆಚ್ಚಿಗೇನ ಹೇಳುದೊ ।
ಹೇಳದಿರಕ ಡಪ್ಪ ಜ್ಯಾಂಜ ಹೊರಿಸಿ ನಿಮಗ ಊರ ಸುತ್ತ
ಮೆರಸೂದೊ ॥ ೨ ॥

ಏಸು ವರುಷ ಆ ಶರಣನ ಸಂಗತಿ ಬೆತ್ತ ಎಲ್ಲಿ ಇರುವದೋ ।
ಎಷ್ಟ ವರುಷ ಬಾಳುದೊ
ಶರಣನ ಮರಣಾ ಆಗುಕಾಲಕ ಮತ್ತೆ ಯಾರ ಸ್ವದ್ಯಾನ ಆಗುದೊ ॥
॥ ಜೀಜೀ ೩ ॥

ಇಳು ನೀ ಬರಬಾರದಿತ್ತೊ ಹೇ ಹಿಂತಲ್ಲಿ ನಮ್ಮಲ್ಲಿ
ಮರಸೊಳ್ಳಗಿ ಪದಾ ಏನ ಬಲ್ಲಿ ತಿಳಿವಲ್ಲಿ
ನಿಮ್ಮ ವಸ್ತಾದನ ಅಬರು ನೀನು ಕಳದಿ ಹುಚ್ಚ ಪ್ಯಾಲಿ ॥ ಜೀಜೀ ೧ ॥

ಮಕ್ತುಮ ಸಾಹೇಬ ಚರಣದಲ್ಲಿ ದಯದಲ್ಲಿ
ದಿನಕ್ಕೊಂದು ಕವಿಯ ಮಾಡುತಲಿ ಹಾಡುತಲಿ
ಗುರು ಸೋಫೆಸಾಹೇಬರ ಪಾದ ಕಮಲ ಸ್ಮರಿಸುತಲಿ ॥ ಜೀಜೀ ೨ ॥

ಸಿದ್ದಪ್ಪ ಹೇಳಿದ ನುಡಿಯಲ್ಲಿ ಅಡಿಯಲ್ಲಿ
ನೀವು ತಪ್ಪಿದ್ದರ ತಗಿರಿ ಇದರಲ್ಲಿ ಪ್ರಾಸದಲ್ಲಿ
ಜ್ಞಾನಿಕರು ಕುಂತು ಚೌಕಾಸಿ ಮಾಡರಿ ಇದರಲ್ಲಿ ॥ ॥ ಜೀಜೀ ೩ ॥

ಏರ ಹಿಂದ ಮುಂದ ನಿಂದೆ ಆಡಿದರ ನಿಮ್ಮ ಜೀವ ತಿಂತಿನಿ
ಆದಕೇ ಬಂದ ನಿಂತಿನಿ ।

ಕೂಡಪಲ್ಲ ತುರಾಯದವರು ಬಲು ಬಿಗದ ಕುಂತಾರಪ್ಪಾ ಅವರಿಗೇನ ಅಂದಿನಿ ॥
॥ ಜೀಜೀ ಚೌಕ ೩ ॥

ಪದಾ : ಪಿಂಡ ಬ್ರಹ್ಮಾಂಡ–ಬ್ರಹ್ಮಾಂಡ ಪಿಂಡ

ಪಿಂಡ ಬ್ರಹ್ಮಾಂಡ ಬ್ರಹ್ಮಾಂಡ ಪಿಂಡಿಂದು ಕೇಳತೀನಿ ತಪಶೀಲಾ ।
ಅಖಂಡ ಸ್ವರೂಪ ಯಾವ ನೋಡ್ಯಾನದು ಉತ್ತರ ಕಡೊ ಮೊದಲಾ ॥
॥ ಪಲ್ಲ ॥

ಏರು ನೀ ಹುಟ್ಟುವುದಕಿಂತ ನಿರಾಕಾರ ಇತ್ತಂದಿ ಮೊದಲಿಗಿ ।
ನಿರಾಕಾರ ಸುದ್ದಿ ನಿನಗ್ಯಾವ ಹೇಳ್ಯಾನ ಬಂದು ಇಲ್ಲಿ ಸರಿಯಾಗಿ ॥
॥ ಜೀಜೀ ॥

ಹೇಳಿಕೆ ಮಾತ ಕೇಳಿ ಬೊಗಳು ಕೆಲಸ ಬ್ಯಾಡೊ ನಾಯಿಯಾಗಿ ।
ಪುರಾಣ ಶಾಸ್ತ್ರ ನಾವು ನೀವು ನೆರದೀವಿ ಕೇಳಿಕೊಂಡು ಬಾರೊ
ಶಾಣೇರಗಿ ॥ ॥ ಜೀಜೀ ॥

ನಾನು ನೀನು ಇಲ್ಲ ಪಂಚಭೂತವಿಲ್ಲ ಸುರುವಿಗಿ ।
ಏನಿಲ್ಲದಾಗ ಅಲ್ಲಿ ಮತ್ತ್ಯಾರಿದ್ದರು ನಿರ್ಬಯಲಾಗಿ ॥ ॥ ಜೀಜೀ ॥

ಇಳು ಕಟ್ಟಿದ ಬುತ್ತಿ ಕಲ್ಕಿ ಮಾತ ಕಡೀಗೆ ಮುಟ್ಟುದಿಲ್ಲಾ ।
ಕಲ್ತ ಹಾಡಾಂವದ ಖರೆ ತಟ್ಟುದಿಲ್ಲಾ ॥ ॥ ಜೀಜೀ ॥

ಪಂಚಭೂತ ಒಂದಕ್ಕೊಂದು ಹ್ಯಾಂಗ ಅದಾವ ಶ್ಯಾಮೀಲಾ ।
ಉತ್ಪತ್ತಿ ಹೆಳು ಬಿಡುದಿಲ್ಲಾ ॥ ॥ ಜೀಜೀ ॥

ಉತ್ಪತ್ತಿ ಆಗುದಕ ಕಾರಣವೇನಿತ್ತು ಮೊದಲಾ ।
ತಿಳಿಲಾರದೆ ಬೀಳಬ್ಯಾಡ ಹುದಲಾ ॥ ॥ ಜೀಜೀ ॥

ಏರು ಬಲ್ಲಾವಂತ ನಿನಗ ಇಲ್ಲಿಗೆ ಕರಸ್ಯಾರ ಜ್ವಾಕಿ ಮಾಡಿಕೊ ಹಲ್ಲಾ ।
ಕೂಡಪಲ್ಲ ಅಖಂಡ ಸ್ವರೂಪ ಯಾವ ನೋಡ್ಯಾನದು ಉತ್ತರ ಕೊಡು ಮೊದಲಾ ॥
॥ ಜೀಜೀ ॥ ಚೌಕ ೧ ॥

ಏರು ಆದಿ ಮಾನವನ ಉತ್ಪತ್ತಿ ಹೇಳು ಭೇದ ಕೇಳುವೆ ಜಾಣ ।
ಮಾನವ ಮೂರ್ತಿ ತಯ್ಯಾರ ಆಗುದು ಹ್ಯಾಂಗಾಯಿತು ಕಲ್ಪನಾ ॥
॥ ಜೀಜೀ ॥ ೧ ॥

ವೇದ ಓದಿಕೊಂಡ ಹೇಳು ವೇದ ಬರದಾಂವ ನೀನಾ ।
ನಿನಕಿಂತ ಮೊದಲು ಮಾತುವಾಯಿತು ತಗಿಯೊ ಶಾಣೆತನಾ ॥
॥ ಜೀಜೀ ॥ ೨ ॥

ಹೆಣ್ಣ ಗಂಡ ಹುಟ್ಟಸ್ಯಾನಂತಿದಿ ಸಭಾದಾಗ ನೀನಾ ।
ಶರೀರ ಇಲ್ಲದೆ ಶಿವ ಹ್ಯಾಂಗ ಮಾಡ್ಯಾನಿದು ಸಾಹಸಪೂರ್ಣ ॥
॥ ಜೀಜೀ ॥ ೩ ॥

ಆದಿಯಲ್ಲಿ ಆಧಾರ ಆದಿಶಕ್ತಿ ಆಕಿಲಿಂದೆ ಉತ್ಪನ್ನಾ ।
ಓಂ ನಾದ ಬಿಂದು ಕಲೆರೂಪದಕ್ಕಿ ಶಕ್ತಿ ಸುಂದರ ಸುಗುಣಾ ॥
॥ ಜೀಜೀ ॥ ೪ ॥

ಇಳು ಓಂ ಅಂಬುವ ಶಬ್ದ ಮೊದಲ ಇತ್ತೆಂದು ಹೇಳತೀರಿ ।
ಅಲ್ಲಿ ಯಾಂವ ನೋಡಿರಿ ॥ ॥ ಜೀಜೀ ॥

ವಸ್ತಾದರು ಪದಾ ಮಾಡಿ ಕೊಟ್ಟಿದ್ದು ಹಾಡತೀರಿ ।
ಬಿರಸಗಿ ಬಿದ್ದರ ಬಿಟ್ಟು ಓಡತೀರಿ ॥ ॥ ಜೀಜೀ ॥

ಈ ಶರೀರ ಬಿಟ್ಟು ಕಡಿಗಿ ಇದ್ದವರ‍್ಯಾರಂತೀರಿ ।
ಅವನ ವರ್ಣ ಹೇಳೊ ಶಾಹಿರಿ ॥ ॥ ಜೀಜೀ ॥

ಏರು ಬ್ರಹ್ಮ ಜ್ಯೋತಿ ರೂಪ ಮಾಯ ಪಣತಿರೂಪ ಪುಣ್ಯ ಎಣ್ಣಿ ಭಲಾ ।
ಕೂಡಪಲ್ಲ ಅಖಂಡ ಸ್ವರೂಪ ಯಾವ ನೋಡ್ಯಾನದು ಉತ್ತರ ಕೊಡು
ಮೊದಲಾ ॥ ॥ ಜೀಜೀ ॥ ಚೌಕ ೨ ॥

ಏರು ನಿಂದು ನಿನಗ ಚಂದಾಗಿ ತಿಳದಿಲ್ಲ ಮಂದಿಗೇನು ಹೇಳತಿ ।
ನಿನ್ನ ಉತ್ಪನ್ನ ನಿನಗ ಗೊತ್ತಿಲ್ಲ ಕೆಳಿದರ ಕುತ್ತ ಅಳತಿ ॥ ॥ ಜೀಜೀ ॥

ಶಕ್ತಿ ಮಾಡಿಟ್ಟ ನೈಸರ್ಗಿಕ ನೇಮ ಯಾಕ ದಾರಿ ಬ್ಯಾರೆ ಐತಿ ।
ದಿವಸss ಶರೀರ ಎಷ್ಟು ಬೆಳಿತೈತಿ ಹೇಳಾಕೋ ಅಡಜ್ಯಾತಿ ॥ ಜೀಜೀ ॥

ಯಾವ ವಯಸ್ಸಿನತನಾ ಶರೀರ ಬೆಳಿತೈತಿ ಮೊದಲು ಸಣ್ಣಾವಿರತಿ ।
ಶರೀರ ಸಣ್ಣದಿದ್ದಾಗ ಕುರುಸಾಲೆ ಹೇಲಾಗ ಕೈ ಹಾಕತಿ ॥ ಜೀಜೀ ॥

ಶರೀರ ಸಣ್ಣದಿದ್ದಾಗ ಜನ್ಮವಿದು ಜನ್ಮವಿದು ಅಜ್ಞಾನ ಅನಸೈತಿ ।
ನನ್ನ ಶರೀರ ಬೆಳದಂಗ ಹರಿದಾಸಗ ಖರೆ ಜ್ಞಾನ ಬಂದೈತಿ ॥ ಜೀಜೀ ॥

ಏರು ಕಲ್ಗಿ ಪದಗಳು ಮಾಡುವ ಮಡಿವಾಳಗ ದರ್ಜವಿಲ್ಲ ಇನಮ್ಯಾಲ ।
ಕೂಡಪಲ್ಲ ಅಖಂಡ ಸ್ವರೂಪ ಯಾವ ನೋಡ್ಯಾನದು ಉತ್ತರ ಹೇಳೊ
ಮೊದಲ ॥ ॥ ಜೀಜೀ ॥ ಚೌಕ ೩ ॥

ಮುಂಡೋಧರಿ (ಸವಾಲ)

ಮಹಾನುಭಾವ ಪಂಡಿತ ಸಭಾದಲ್ಲಿ ನಿನ್ನ ಕೇಳತೀನಿ ತರ್ಕಹಿಡಿ ।
ಮಾಯಾ ಮುಂಡೋಧರಿಗಿ ಯಾವ ಎಳಿತಿದ್ದ ಹೇಳಿ ಹೇಳಿ ಹಾಡಿ
ಬೆಳದೊಯ್ಯೊ ಖಡಿ॥ ॥ ಜೀಜೀ ॥

ರಾಮ ಲಕ್ಷ್ಮಣರಿಗಿ ಆಹುತಿ ಕೊಡಲಾಕ ದೇವಿ ಗುಡಿಗಿ ರಾವಣ ವೈದಾ।
ಎತ್ತ ಕಟ್ಟಿದಂಗ ಅವನಿಗಿ ಕಟ್ಟಿದರು ರಥಾ ಯಾವ ಹೊಡಿತಿದ್ದ॥
॥ ಜೀಜೀ ॥

ಬಾಳ ಬಾಳ ಇಂವಾ ಸಾಲಿಕಲ್ತಾನಂತ ಅಕ್ಷರಜ್ಞಾನ ಕೇಳತೀನಿ ಬೇಧಾ।
ಅಲ್ಪಪ್ರಾಣ ಮಹಾಪ್ರಾಣಾಕ್ಷಾರಾ ಅನುನಾಸಿಕ ಅನ್ನುದು ಯಾವುದಾ ॥
॥ ಜೀಜೀ ॥

ಇಳುವು ವ್ಯಂಜನ ಸ್ವರಗಳೆಷ್ಟು ಒರಿಗಿ ಹಚ್ಚಿ ಹೇಳೊ ಎಲ್ಲಾ ।
ಹೇಳಲಾರದೆ ಬಿಡುದಿಲ್ಲಾ ॥ ॥ ಜೀಜೀ ॥

ಕಂಠ್ಯೆ ವರ್ಣದಂತ್ಯವರ್ಣ ಸರಿಯಾಗಿ ಹೇಳು ಇದರ ಮ್ಯಾಲಿ ।
ಆವರ್ಗೀ ಅಕ್ಷರ ಎಲ್ಲಾ ॥ ॥ ಜೀಜೀ ॥

ಸಜಾತಿ ವಿಜಾತಿ ಅಕ್ಷರ ಹೇಳು ಕುಲ್ಲಾ ।
ಐವತ್ತೆರಡರ ಅಕ್ಷರ ಮೂಲಾ ॥ ॥ ಜೀಜೀ ॥

ಏರು ಜೋಡಕ್ಷರ ಒಂಟಕ್ಷರ ಯಾವ್ಯಾವು ವಿಷಮ ಅಕ್ಷರ ಹೇಳು ಲಗು ಮಾಡಿ।
ಕೂಡಪಲ್ಲ ಮಾಯ ಮುಂಡೋಧರಿಗಿ ಯಾಂವ ಎಳಿತಿದ್ದ ಹೇಳಿ ಹಾಡಿ
ಬೆಳೆದೊಯ್ಯೊ ಖಡಿ ॥ ॥ ಜೀಜೀ ॥ ಚೌಕ ೧ ॥

ಏರು ನೂರ ಅಕ್ಷರಗಿ ಕೂಡಿ ಸಾವಿರ ಆಗತೈತಿ
ನೂರ ಸಾವಿರಗಿ ಒಂದ ಲಕ್ಷ ಆಗತೈತಿ
ನೂರ ಲಕ್ಷಕ್ಕ ಒಂದು ಕೋಟಿ ಆಗತೈತಿ
ನೂರ ಕೋಟಿಗಿ ಒಂದ ಶತಕೋಟಿ ಆಗತೈತಿ
ನೂರ ಶತಕೋಟಿಗಿ ಎಷ್ಟಾಗತೈತಿ
ಹಾಡಪ್ಪಾ ಬಂದಿದಿ ಕವಿ ಕಟ್ಟಿ॥ ॥ ಜೀಜೀ ॥

ಒಂದರ ಹಿಂದ ಒಂದು ಸಂಖ್ಯಾ ಮೂವತ್ತಾರು
ಕಡೀ ಸಂಖ್ಯಾ ಹೇಳೋ ಗಂತ್ರಮಟ್ಟಿ ।
ಚಂದ್ರ ಸಣ್ಣ ದಮ್ಮ ಆಗತಾನ ಸ್ವಚ್ಛ ಹೇಳು ಕೆಸರಿಟ್ಟಿ ॥ ಜೀಜೀ ॥

ಜ್ಞಾನ ಸಿಂಧುದಾಗ ಅಧ್ಯಾಯಗಳು ಎಷ್ಟು ಹೇಳು ಬಂದಿದಿ ತರ್ಕ ಕಟ್ಟಿ।
ಚಂದ್ರ ಅಮಾಸಿ ದಿನಾ ಯವಲ್ಲಿರತಾನ
ಬುದ್ಧಿಗಿ ನಿನಗ ಆಗಿಲ್ಲ ಬೆಟ್ಟಿ ॥ ॥ ಜೀಜೀ ॥

ಇಳು ನವಗ್ರಹಗಳ ಇತಿಹಾಸ ಕೇಳತೀನಿ ಶಾಹೀರಾ ।
ನೀ ತಿಳದು ಹೇಳ ಮಜಕೂರಾ ॥ ॥ ಜೀಜೀ ॥

ಭೂಮಿದಿಂದ ಎತ್ರ ಯಾವುದೈತಿ ಕವಿಗಾರಾ ।
ಅದರ ಕ್ಷೇತ್ರ ಫಳದ ಆಕಾರಾ ॥ ॥ ಜೀಜೀ ॥

ಶೀತ ಉಷ್ಣ ಕಿರಣಗಳು ತಿಳಿಸಿ ಹೇಳು ಉತ್ತರ
ಬಿಡುದಿಲ್ಲವಂತ ಅತ್ತsರಾ ॥ ॥ ಜೀಜೀ ॥

ಏರು ಯಾವ ಗ್ರಹದೊಳ ಮೀನ ಒಡಲಾಗ ಐತಿ ಹೇಳಿ ಮುಂದ ಡಪ್ಪ ಬಡಿ ।
ಕೂಡಪಲ್ಲ ಮಾಯ ಮುಂಡೋಧರಿಗಿ ಯಾಂವ ಎಳಿತಿದ್ದ ಹೇಳಿ ಹಾಡಿ
ಬೆಳೆದೊಯ್ಯೊ ಖಡಿ ॥ ॥ ಜೀಜೀ ॥

ಏರು ಆಘೀಜವೆಂಬ ಅಕ್ಷರ ಕುರಾನದೊಳು ಎಷ್ಟ ಸರ್ತಿ ಬಂದಾವ ಒಟ್ಟಾ।
ಬೇ ಅಂಬುವ ಅಕ್ಷರ ಎಷ್ಟೆಷ್ಟು ಬಂದಾವ ಬುರಡಿ ಅಲ್ಲೊ ಈ
ಮಾತಾ ॥ ॥ ಜೀಜೀ ॥

ಸಿದ್ದಿ ಬುದ್ದಿ ಗಣಪತಿ ಪತ್ನಿಯರು ಎರಡು ಕನ್ಯೆ ಅವನಿಗೆ ಯಾವ
ಕೊಟ್ಟ ।
ನಂದೇಶ್ವರನ ಸತಿ ಯಾವಕ್ಕಿ ತಮ್ಮಾಗೊಳ್ಳ ಆಗುದಿಲ್ಲಾ ಮಾರಾಟಾ ॥
॥ ಜೀಜೀ ॥

ಆದಿ ಮಧ್ಯ ಅಂತ್ಯ ಗಣಗಳು ಯಾವ್ಯಾವು ಭಾವನಾಮವಾಚಕ ಚೊಕ್ಕಟ್ಟು
ಸಂಧಿ ಉಪಸರ್ಗದ ಮರ್ಮ ಹೇಳತೀನಿ ವಿಸರ್ಗದ ಗುಟ್ಟಾ ॥
॥ ಜೀಜೀ ॥

ಇಳುವು ನಾ ಜವಾಬ ಕೊಡತಿನಂತ ಎದಿ ಉಬ್ಬಿಸಿ ।
ನಿನ್ನ ಬಿಟ್ಟೇನು ತಲಿ ಬಗ್ಗಿಸಿ ॥ ॥ ಜೀಜೀ ॥

ನಿನ್ನ ಗುರುವಿನ ಆಣೆ ಜವಾಬ ಕೊಡ ತಳಾ ಸೋಸಿ ।
ಮಣ್ಣ ಕೊಟ್ಟೇನು ಹಾಡಿದರ ಹುಸಿ ॥ ॥ ಜೀಜೀ ॥

ಏರು ಮುಳಸಾವಳಗಿ ಊರಾಗ ಕವಿ ಬರದ ನಾಗೇಶಿ ।
ಅಲ್ಲಿ ಬಂದು ಕಲಿಕೊ ಹರದೇಶಿ ।

ಕೂಡಪಲ್ಲ ಮಡಿವಾಳನ ಗುರು ಕಲಾ ಸಾಹೇಬರು ಅಲ್ಲಂತಾರ ನಮ್ಮ ಗಡಿ
ಮಹಾನುಭಾವ ಪಂಡಿತ ಸಭಾದಲ್ಲಿ ನಿನ್ನ ಕೇಳತಿನಿ ತರ್ಕಹಿಡಿ
ಮಾಯ ಮಂಡೋಧರಿಗಿ ಯಾವ ಎಳಿತಿದ್ದ ಹೇಳಿ ಹಾಡಿ
ಬೆಳೆದೊಯ್ಯೊ ಖಡಿ ॥ ॥ ಜೀಜೀ ॥ ಚೌಕ ೩ ॥

ನಮ್ಮ ನಿಮ್ಮದು ಇದೇ ಶರಣಾರ್ಥಿ ॥ ಸವಾಲ ॥

ಸುದ್ದಿ ಕೇಳಿ ಬಂದೆ ದೂರತನಕ ನಿಮ್ಮದು ವಾರ್ತಿ
ಸಾರತದ ಕೀರ್ತಿ
ಕಡಿ ಮಜಲಿಗಾಯಿತೊ ನಮ್ಮ ನಿಮ್ಮದು ಇದೇ ಶರಣಾರ್ಥಿ ॥
॥ ಜೀಜೀ ॥

ಈ ಊರ ಜಾತ್ರ್ಯಾಗ ಆಗಿ ಕುಂತಿರೋ ಮೇಲಾ ।
ಮಾಡತಿರಿ ಡೌಲಾ ।
ಎಲ್ಲೆಲ್ಲಿ ಬೆಳದ ತಂಗದಿರೊ ಖಡೆ ರುಂಬಾಲಾ ॥ ॥ ಜೀಜೀ ॥
ನಮಗ ನಿಮಗ ಇದೇ ದರಶಣಾ ಬಂತ್ರಿ ಸವಾಲಾ ।
ಹಾಕತೀನಿ ಜರಾ ।
ಇದರ ಜವಾಬ ಹೇಳಬೇಕು ತಿಳಿದಂಗ ಕುಂತ ಜನರೆಲ್ಲಾ ॥ ಜೀಜೀ ॥

ಇಳುವು ಒಬ್ಬ ಭಾವಾ ಇದ್ದ ಊರಾಗ ।
ಒಂದ ಒಂಟಿ ಸಾಕಿದ್ದ ಮನಿಯಾಗ ।
ಹೆಂಡರು ಮಕ್ಕಳಿಲ್ಲೊ ಅವಗ ।
ಅವ್ಹೊಬ್ಬನೆ ಇದ್ದ ನಿರ್ಧಾರಾ ।
ಆರ ತಾಸ ರಾತ್ರಿ ಬರಪೂರಾ ।
ಒಂಟಿ ಹರಕೊಂಡ ಹೋದಿತೊ ದೂರಾ
ಸಾವುಕಾರನ ಹೊಲಾ ಮೇದದಂತ ಹಿಡಿದು ಕಟ್ಯಾರಾ ॥ ॥ ಜೀಜೀ ॥
ಆ ಒಂಟಿ ತಂದ್ರೊ ಚಾವಡಿಗಿ
ಕರಶಾರೊ ನ್ಯಾಯಕ ಪಂಚರಗಿ
ಮಾಲ ಕಟ್ರಿ ಅಳತಿಗಿ ಸರಿಯಾಗಿ
ಲುಷ್ಕಾನ ಒಂದ ನಂಬರಾ
ಭಾವಾನ ಹಿಡದ ತಂದಾರಾ
ನೂರ ರೂಪಾಯಿ ಅವಗ ಕಟ್ಯಾರ
ಎಲ್ಲಿಂದ ಕೊಡಬೇಕೊ ಭಾವಾಗ ಬಂತೊ ಘೋರಾ ॥ ॥ ಜೀಜೀ ॥
ಸಾವುಕಾರಗ ಹೇಳಿದ ಭಾವಾಸಾ ।
ನನ್ನ ಕೈಯಾಗ ಏನಿಲ್ಲ ಕೆಲಸಾ ।
ಎರಡು ಕುಂಬಳ ಬೀಜ ನನ್ನ ಹತ್ತರಾ ।
ನೀವು ತಗೊಂಡು ಹೋಗ್ರಿ ಬಲ್ಲವರಾ ।
ತೋಟದೊಳಗ ಮಾಡರಿ ಆಕಾರಾ ।
ದಿನ ದಿನಾ ಹಾಕರಿ ನೀರಾ
ಕಾಯಿ ಆದ ಮ್ಯಾಲ ಇನ್ನ ಮುಂದ ನೋಡರಿ ಮಜಕೂರಾ ॥
॥ ಜೀಜೀ ॥

ಏರು ಸಾವುಕಾರ ಬಿಟ್ಟ ಒಂಟಿ ಬಿಡಬ್ಯಾಡ ಇನ್ನೊಂದು ಸರತಿ
ನೋಡಿಕೊ ಮರತಿ ।

ಕೂಡಪಲ್ಲ ಕಡಿ ಮಜಲಿಗಾಯಿತೊ ನೋಡೊ ನಮ್ಮ ನಿಮ್ಮದು ಇದೇ
ಶರಣಾರ್ಥಿ ॥ ॥ ಜೀಜೀ ॥ ಚೌಕ ೧ ॥

ಏರು ಕುಂಬಳ ಬೀಜ ಒಯ್ದು ಸಾವಕಾರ ಆಗ
ಹೇಳಿ ಭಾವಾಗ ।
ಮಡಿ ಮಾಡಿ ಒಯ್ದು ಊರಿದ ತನ್ನ ತೋಟದಾಗ ॥ ॥ ಜೀಜೀ ॥
ಬೀಜ ನಾಟಿತ ಮುಂದ ನಾಲ್ಕಾರ ದಿವಸದೊಗಳಗೆ ।
ಹೇಳತೀನಿ ನೀನೋಡೊ ಭಾರಕ ಬಂತೊ ಆ ಬಳ್ಳಿ
ಹೂಕಾಯಿಯೊಳಗ ॥ ॥ ಜೀಜೀ ॥
ಮುಂದೆ ಕಾಯಿ ಭಲೆ ಕಾಯಿ ಆದಾವಂತ ಸುದ್ದಿ ಹರಿತ್ರಿ ಊರಾಗ ।
ಮಾಡಬೇಕ ಹ್ಯಾಂಗ ನಾಲ್ಕ ಮಂದಿ ಕೂಡಿ ಮಸಲತ
ಮಾಡಿದರಾಗ ॥ ॥ ಜೀಜೀ ॥

ಇಳು ಬೇಡಿದರ ಕೊಡುವದಿಲ್ಲ ನಮಗ ।
ಹೋದರ ಸರ್ವ ರಾತ್ರ್ಯಾಗ ।
ಬೇಲಿ ಕಿತ್ತಿ ಹೊಕ್ಕರೊ ತ್ವಾಟದಾಗ ।
ಕಾಯಿ ನೋಡಿ ಕುಶಿ ಆಗ್ಯಾರ ।
ಮನಸಿಗಿ ಬಂದಷ್ಟು ಹರದಾರ ।
ಇದರ ಸಂವಿ ನೋಡಬೇಕಂತ ಬಂದ ಕೊಯಿದಾರ ॥ ॥ ಜೀಜೀ ॥
ಕಾಯಿ ಬಿಚ್ಚಿ ಎರಡು ಹೋಳಾಗಿ
ಬೀಳುದು ಕೇಳ ಹೊತ್ತ ಮುಳಗಿ ।
ಕೂಡುದು ಸರ್ವ ರಾತ್ರಿಗಿ ।
ಹಿಂಗೈತಿ ಅದರ ಮಜಕೂರ ।
ಯಾರಿಗಿ ತಿಳಿಯದ ಇದರ ತಂತರಾ ।
ಅವರೀಗಿ ಒದಗೀತೊ ಕಾಳಗೊಳಗ ಸಿಕ್ಕರು ॥ ॥ ಜೀಜೀ ॥
ಆ ಕಾಯಿ ಒಳಗ ಗಪ್ಪಾಗಿ
ಬಂದ ಸಿಕ್ಕಾರಣ್ಣಾ ಕತ್ತಲಾಗಿ
ಮುಂದೆ ತಾಸಿನೊಳಗ ಮಳಿಯ್ಯಾಗಿ ।
ಹಳ್ಳ ಬಂತು ಕೇಳ್ರಿ ಬರಽರಾ ।
ತೋಟದೊಳಗ ಹೊಕ್ಕಾವ ನೂರಾ ।
ಒಂದು ಹಗಲ ರಾತ್ರಿ ನಾಡ ಡೋಣಿ ಕೂಡಿತ್ರಿ ಸಮ್ದುರಾ ॥ ಜೀಜೀ ॥

ಏರು ಈ ಸವಾಲ ಆಯಿತ ಹೇಳಬೇಕ ಜರಾ ರತಿ ಶಾಸ್ತ್ರದಾಗೈತಿ

ಕೂಡಪಲ್ಲ ಕಡಿ ಮಜಲಿಗಾಯಿತೊ ನೋಡೊ ನಮ್ಮ ನಿಮ್ಮಗ ಇದೇ ಶರಣಾರ್ಥಿ ॥
॥ ಜೀಜೀ ॥ ಚೌಕ ೨ ॥

ಏರು ಒಬ್ಬ ಬ್ಯಾಟಿಗಾರ ಎಬ್ಬಿಸಿದೊಂದು ಚಿಗರಿಗಿ ।
ಹಚ್ಚಿ ನಾಯಿಗಿ ।
–ನಾಯಿ ಬಭಕಿಗಿ ಚಿಗರಿ ಬಿತ್ತ ಸಮುದರದಾಗ ಹೋಗಿ ॥ ಜೀಜೀ ॥

ಆ ಕುಂಬಳಕಾಯಿ ತೇಲುತ ಬಂತ ಅಲ್ಲಿಗಿ ।
ಚಿಗರಿ ಬಿದ್ದಲ್ಲಿಗಿ ।
ಆ ಕಾಯಿಗಿ ಒಂದು ತೂತಿತ್ತು ಹೊಕ್ತಿ ಒಳಗ್ಹೋಗಿ ॥ ॥ ಜೀಜೀ ॥

ಒಂದ ಚಿಗರಿ ನಾಲ್ಕ ಮಂದಿ ಅದೇ ಕಾಯಿವೊಳಗಾಗಿ
ನಡದಿತೊ ಸಾಗಿ ।
ಒಂದ ಊರಲ್ಲಿ ಒಬ್ಬ ಮನುಷ್ಯಾಗ ನಾರ ಆಗಿತ್ತೊ ಕಾಲೀಗಿ ॥
॥ ಜೀಜೀ ॥

ಇಳುವು ಉರುಪ ತಾಳಲಾರದೆ ಉರಳ್ಯಾಡಿ
ಸಂಕಟಕ ಬಂದಾನೊ ಓಡಿ
ನೀರಾಗ ಬಂದಾ ನಿಂತಾಣಣ್ಣಾ ।
ಕೊಡಲಾಕ ನಿಂತ ತನ್ನ ಪ್ರಾಣಾ ।
ಆ ಕಾಯಿ ಅಲ್ಲಿಗೆ ಬಂತೊ ಜಾಣಾ ।
ಕಾಲೊಳಗೆ ಹೊಕ್ಕಿತೊ ಆ ಕಾಯಿ ಇತ್ತ ಯಾವ ಬಣ್ಣಾ ॥ ಜೀಜೀ ॥

ಕಾಲ ಕೊಯ್ಯಲಾರದೆ ಕಾಯಿ ತಗಿರೆಣ್ಣಾ
ಮೀನ ಗಂಡಿನೊಳಗ ಅವರ ಮರಣಾ
ಆಗತೈತಿ ಉಳಸರಿ ಪ್ರಾಣಾ
ಅವರನ್ನ ಕಡಿಯಾಕ ಮಾಡರಿ ವೈರಿ ಕಲ್ಗಿ ನಿಶ್ಯಾನಾ ॥ ॥ ಜೀಜೀ ॥

ಅನುಭವದೊಳಗ ಅಂದೀರಿ ।
ಇದಲ್ದೆ ಪರತ ಹುಡಕರಿ ।
ಮತ್ತು ಶಾಸ್ತ್ರದಾಗ ನೋಡರಿ ।
ಹಿಂಗ ಬ್ಯಾರೆ ತಗಿರಿ ಕಲ್ಪನಾ ।
ಸುಳ್ಳ ಹೇಳಿ ಹೋಗಬ್ಯಾಡಣ್ಣಾ
ಮಾಯದಲೆ ಸಂಗ ತಂದು ಹಾಕ್ಯಾನ ಗಂಟಲಗಾಣಾ ॥ ಜೀಜೀ ॥

ಏರು ಈ ಸವಾಲ ಹೇಳಬೇಕು ಸ್ವಲ್ಪು ರತಿ ಶಾಸ್ತ್ರದಾಗೈತಿ ।
ಕೂಡಪಲ್ಲ ಕಡಿ ಮಜಲಿಗಾಯಿತ ನೋಡೊ ನಮ್ಮ ನಿಮಗ ಇದೇ ಶರಣಾರ್ಥಿ ॥
॥ ಜೀಜೀ ॥ ಚೌಕ ೩ ॥

ಎಚ್ಚರಾಗೊ ಜರಾ

ಎಚ್ಚರಾಗೊ ಜರ ಮುಚ್ಚ ಬ್ಯಾಡೊ ಕಣ್ಣಾ । ಹಚ್ಚಿ ನೋಡತೀನಿ ಗುರಿ ।
ಹೊಡಿ ನಣ್ಣಾ ಲಗೋರಿ ।
ಮುಜರಿ ಹಿಡದ ಹೊಡಿ ತಪ್ಪಿದಂದ್ರ ಬಳಿ ಕುಬಸ ಸೀರಿ ಆಯೇರಿ ॥
॥ ಜೀಜೀ ॥ ಪಲ್ಲ ॥

ಏರು ಹೂಲಿ ಹೋದಮ್ಯಾಲ ತಯ್ಯಾರ ಆಗಿ ಬಂದು ಮೀಸಿ ಹಾಕತಿರಿ ಹುರಿ ।
ಮುಳಸಾವಳಗಿ ಎಂಬು ಅರಿ ।
ಒಂಬತ್ತ ಮಂದಿ ಪುರುಷರಿಗೆ ಏಳು ಮಂದಿ ಸ್ತ್ರೀಯರ
ಮಾಡಬೇಕ ಸರಿ ॥ ॥ ಜೀಜೀ ॥

ಹೇ ಆಸು ಮಂದೀಗಿ ನಾಲ್ಕು ಮಕ್ಕಳು ತಿಗಡಿ ಸಾಲಿ ಇದು ಬಿರಿ ।
ಬಲ್ಲವಗ ಯಾತರ ಬಿರಿ ।
ನಾಲ್ಕ ಮಂದಿ ತಾಯಿ ತಂದಿ ಹೆಸರ ನೀ ತಿಳಸಿ ಹೇಳೋಬ್ಯಾರಿಬ್ಯಾರಿ ॥
॥ ಜೀಜೀ ॥

ಇಳು ನಾಲ್ಕು ಮಂದಿ ಮಕ್ಕಳದು ಹೇಳ ಬೇಕ್ರಿ ವಿಸ್ತಾರಾ ।
ಮೂರು ಮಂದಿ ಬತಲೆ ಒಬ್ಬ ಉಡುತಿದ್ದಿಲ್ಲ ಧೋತರಾ ।
ಅವನ ಬಲ್ಲಿ ನಾಲ್ಕು ದುಡ್ಡು ರೊಕ್ಕ ಇದ್ದಾವ ಚಾತೂರಾ ।
ಅವರಷ್ಟೂ ಮಂದಿ ಕೂಡಿದರು ಮಸಲಾತಿ ಹೀಗ ಮಾಡಿದರಾ ।
ಅವರು ತಯ್ಯಾರಾಗಿ ನಡದಿದಾರಾ ।
ವ್ಯಾಪರ ದಸಿಂದ ಮುಂಬೈ ಮಾರ್ಗ ಹಿಡದಿದಾರಾ ॥ ಜೀಜೀ ॥

ಕೆಲವು ದಿವಸ ಹೋಗುವತನಾ ನೆದರೀಗೆ ಬಿತ್ತೊ ಸಮುದರಾ ।
ನೋಡಿ ಗಾಬರ್ಯಾಗಿ ನಿಂತಾನ ಮಚಲ್ ಬಂದರಾ ।
ತಾಯಿ ತಂದಿ ದೊರತ ಇಲ್ಲೊ ಬೇಡಿದ್ದಕೆಲ್ಲಾ ತೊಂದರಾ ।
ಏನss ಪಗಡಿ ಸಾಲ ಬಾಜಾರ । ನೋಡುದಕೆ ಸಾಲವಲ್ಲದು ನೆದರಾ ॥
ನಾಲ್ಕು ಬಿಲ್ಲ ಬಾನ ಹಾಜರಾ ।
ಮೂರ ಮರಕಿದ್ದು ಒಂದು ದರುಸ್ಥಿದ್ದಿದ್ದಿಲ್ಲಾ ಪೂರಾ ॥ ಜೀಜೀ ॥

ಆ ಮುರಕ ಬಿಲ್ಲ ಬಾಣ ತಗೊಂಡಾರೊ, ಆಶ್ಚರ್ಯ
ತಮ್ಮ ತಮ್ಮೊಳಗೆ ತಾವು ಮಾಡಲಿಲ್ಲಾ ಗೋಚರಾ ।
ಅವನ ಖರೀದಿ ತಗೊಂಡಾರೊ ಮಾಡಲಿಲ್ಲ ತಾಶ್ಚರ್ಯ
ಒಂದ ಮಳಿಗಿಗ್ಹೋಗಿ ಮುಟ್ಯಾರಾ । ಬಹು ಜ್ವಾಕೀಲಿಗ ॥
ಮೂರ ವಸ್ತಿ ಅಲ್ಲಿ ಕೊಟ್ಟಾರಾ ।
ನಾಲ್ಕಂಬು ದಿವಸಕ ಮುಂಬೈ ನಗರ ಬಿಟ್ಟಾರಾ ॥ ಜೀಜೀ ॥

ಏರು ಹೇ ನಾಲ್ಕು ಮಂದಿಯೊಳಗ ಯ್ಯಾಂವ ಹಿರ್ಯಾಂವ ಇದ್ದ ನೋಡ ಕಾರ್ಬಾರಿ।
ಬಿಲ್ಲಿ ತುಳಿಯಾಂವ ಬಿರಿಬಿsರಿ ।
ಕೂಡಪಲ್ಲ ಮುಜರಿ ಹಿಡದ ಹೊಡಿ ತಪ್ಪಿದರ ಬಳಿ ಸೀರಿ ಕುಬಸ ಆಯೇರಿ ॥
॥ ಜೀಜೀ ॥ ಚೌಕ ೧ ॥

ಹೇ ಮುರಕ ಬಿಲ್ಲ ಬಾನ ತಗೊಂಡ ನಡದಾರೊ ಮನಸಿನೊಳಗ ಉಕ್ಕತಿತ್ತೊ।
ಬ್ಯಾಟಿ ಆಡೇನೆಂಬುತಿತ್ತೊ ।
ಎಡ ಬಲ ಹುಡುಕುತ ಹೊರಟಾರೊ ಹಕ್ಕಿ ಪಕ್ಕಿ ಮ್ಯಾಲ ನೆದರಿತ್ತೊ॥
॥ ಜೀಜೀ ॥

ಹೇ ಅಷ್ಟರೊಳಗೆ ನಾಲ್ಕು ಚಿಗರಿ ಕಂಡಾರೊ ಚಿಗರಿ ಮಹಿಮಬ್ಯಾರೆ ಇತ್ತೊ।
ಅವರಿಗೆ ಅದು ತೋರಿತೋ ।
ಮೂರ ಚಿಗರಿ ಸತ್ತಿದ್ದು ಮೊದಲೆ ಒಂದು ಜೀವಾ ಇಲ್ಲದೆ ಮೇವತ್ತಿತ್ತೊ॥ ॥ ಜೀಜೀ ॥

ಮೇವು ಚಿಗರಿಗೆ ಬಿಲ್ಲ ಬಿಟ್ಟರೊ ಟೇಂಕರಿಸಿ ಬಾಣ ಹೊಡದಿತ್ತೋ
ಕಾಳಜದಾಗ ಬಡದಿತೋ ।
ನಾಲ್ಕು ಮಂದಿಯೊಳಗ ಯಾಂವ ಒಗದರಿ ಚಿಗರಿ ಜಿಗದ ಬಿದ್ದಿತೋ॥
॥ ಜೀಜೀ ॥

ಇಳುವು ಚಿಗರಿ ಬಿದ್ದದ್ದು ನೋಡಿ ಸಂತೋಷವಾಯ್ತೊ ಅವರ ಮನಾ ।
ನಮ್ಮ ಭಾವಕ ಮೆಚ್ಚಿ ಇಂತಾ ಬ್ಯಾಟಿ ಕೊಟ್ಟಾನೊ ಭಗವಾನಾ ।
ಕಾಲ ಕಟ್ಟಿ ಹೊರಬೇಕಂತ ತಗದಿದ್ದಾರೊ ಕಲ್ಪsನಾ ।
ಅಲ್ಲಿ ಸುತ್ತಮುತ್ತ ನೋಡು ತಾನಾ ।
ನಾಲ್ಕು ಹಗ್ಗ ಬಿದ್ದಿದು ಒಂದೇ ಸವನಾ ।
ಮೂರ ಹರಕ ಇದ್ದು ಗಾವನ್ನಾ ।
ಒಂದು ಹಗ್ಗ ತುದಿಯ ಬಡ್ಡಿ ನಡುವ ಇದ್ದಿದ್ದಿಲ್ಲ ಕೂನಾ ॥ ಜೀಜೀ ॥

ಬಡ್ಡಿ ತುದಿಯಿಲ್ಲದ ಹಗ್ಗ ಅವರು ತಗೊಂಡಾರೊ ಆ ಕ್ಷಣಾ ।
ಕಾಲ ಕಟ್ಟಿ ತಲಿಯ ಮ್ಯಾಲ ಹೊತಗೊಂಡು ನಡದಾರಣ್ಣಾ ।
ಮುಂದ ಹೋಗುತನಕ ಒಂದು ಬಂದು ಹತ್ತಿತ ಪಟ್ಟಣಾ ।
ಪಟ್ಟಣದ ಕೇಳರಿ ಬಯಾನಾ ।
ಅಲ್ಲಿ ಇದ್ದಾವ ನಾಲ್ಕು ಮನಿತಾನಾ ।
ಮೂರ ಹಾಳ ಇದ್ದು ಒಂದು ಇದ್ದಿದ್ದಿಲ್ಲ ಬಸ್ತಾನಾ॥ ॥ ಜೀಜೀ ॥

ಊರೊಳಗ ಹೊಕ್ಕಾರೊ ಕಂಡಂಗಾಯಿತು ಆರ್‍ಯಾಣಾ ।
ಮೃಗಜಾತಿ ಹೊರತ ಮತ್ಯಾರ ಸುಳುವು ಇಲ್ಲಣ್ಣಾ ।
ಒಂದ ಮನ್ಯಾಗ ಒಯ್ದಾರೊ ಚಿಗರಿನಾ ।
ಎದರಾಗ ಮಾಡುನು ಅಡಗಿ ನಾ ।
ಹುಡಕ್ಯಾಡತಾರೊ ಬಾಂಡೆವನ್ನಾ ।
ಒಂದ ಮಾಡಿನೊಳಗ ಡಬ್ಬ ಹಾಕಿದ್ರೊ ಗಡಿಗಿನಾ ॥ ॥ ಜೀಜೀ ॥

ಏರು ಗಡಗಿ ತಗೊಬೇಕಂತ ಅವರು ಬಹಳ ಕಷ್ಟ ಬಿಟ್ಟರೊ ಪರಿಪರಿ
ನೆಲಕಲಿಲ್ಲೋ ಶಾಹಿರಿ ।

ಕೂಡಪಲ್ಲ ಮುಜರಿ ಹಿಡಿದ ಹೊಡಿ ತಪ್ಪಿದಂದ್ರ ಬಳಿ ಸೀರಿ ಕುಬಸ ಆಯೇರಿ ॥
॥ ಜೀಜೀ ॥ ಚೌಕ ೨ ॥

ಎತ್ತಲಾರದ ಒಂದು ಕಲ್ಲ ತಗೊಂಡು ಮ್ಯಾಲನಿಂತ ನೋಡತಾರಪ್ಪಾ।
ಬಲ್ತಿ ಪೇರ ಉಳಿತಪ್ಪಾ ।
ಒಬ್ಬರ ಮ್ಯಾಲ ಒಬ್ಬರು ನಾಲ್ವರು ನಿಂತಾರ ಗಡಿಗಿ ಬಾಳ ದೂರ
ಉಳಿತಪ್ಪಾ॥ ॥ ಜೀಜೀ ॥

ಐದು ಗಜ್ಯಾ ಆವಾಗ ಭೂಮಿ ಹಡ್ಡಿ ನಾಲ್ಕು ಮಂದಿ ಸ್ವಂತಪಾ ।
ಅವರ ಯತ್ನ ನಿಂತಿತಪಾ ।
ತೆಗ್ಗಿನೊಳಗ ಒಬ್ಬ ಕುಂತ ಕೈ ಚ್ಯಾಚಿದರ ಗಡಿಗಿ ಬಂತಪಾ ॥ ಜೀಜೀ ॥

ಗಡಿಗಿ ಒಳಗ ಅವರು ಅಡಗಿ ಮಾಡಿಕೊಂಡು ಊಟಕ ಕುಂತರೆಪಾ ।
ಒಬ್ಬ ದಾರಿಕಾರ ಬಂದಽಪಾ ।
ನಾಲ್ಕು ಮಂದಿ ನನ್ನ ಬಿಟ್ಟ ಕುಂತಿರಿ ನನ್ನ ಪಾಲ ಎಲ್ಲೆದ ತಾರಪಾ ॥
॥ ಜೀಜೀ ॥

ಇಳುವು ಒಂದ ಎಲುವು ಬಂದಿತಪ್ಪಾ ದಾರಿಕಾರನ ಪಾಲಕಽ।
ಕೈ ಹಚ್ಚುದರೊಳಗ ಬೀಜಾಗಿ ಬಿತ್ತ ನೆಲಕ ।
ಆ ಬೀಜ ಹೋಗಿ ಒಂದ ಬೆಳ್ಳಿ ಹಬ್ಬಿತೆ ಮ್ಯಾಲಕ ।
ಬೆಳ್ಳಿಗಿ ಕಾಯಿ ಕೈಲಾಽಕ ।
ಅದು ಮುಚ್ಚಿ ಬಿಟ್ಟಿತ ಮೂರು ಲೋಕ ।
ಇರಬಿ ಎಂಬತ್ತು ಕೋಟಿ ಜೀವರಾಶಿ ಸರಸಲಿಲ್ಲದಕ ॥ ॥ ಜೀಜೀ ॥

ಬೆಳೆದ ಹಾಡಾವರಂತ ನಿಮ್ಮ ಸುದ್ದಿ ಸುತ್ತ ದೇಶಕ ।
ಹೇಳದಿರಕ ಸೀರಿ ಕುಬಸ ಉಡಸತೀನೋ ಹರದೇಶಿ ।
ಬಲಿ ಒಳಗ ಬಂದ ಸಿಕ್ಕೀರಿ ರೊಕ್ಕದ ಆಸೇಕಾ
ನಗ ನಗತ ಹಾಕಿದೇನೊ ಸರಕಾ ।
ಗುರು ಪುತ್ರಗ ಹತ್ತಿತೊ ತರಕಾ ।

ನಿಮ್ಮ ತ್ರಾಣ ಅಲ್ಲಾ ತುರತಕಾ
ಡಪ್ಪ ತುಂತುಣಿ ತುರಾಯಿ ಕಸಗೋತಿನಿ ಹೇಳದಿರಕ ॥ ಜೀಜೀ ॥

ಮುಳಸಾವಳಗಿ ಮತಾಬ ಸಾಹೇಬ ಪೀರ ಒಲತ ಭಾವಕ ।
ಸಿದ್ದಪ್ಪನ ಕವಿಗಳು ಕಂಡಿದ್ದಿಲ್ಲೊ ದೇಶಕ ।
ಹರದಾಸಿ ಕೇಳ್ರಿ ಎದ್ದ ನಿಂತ ಹೊಡಿಯತಾನ ಹಕಾ ।
ವಸ್ತಾದ ಕಲಾಶಿನ ಗುಣಕ ।
ವೈರಿ ಕೇಳಿ ನಾಚಿ ನಿಂತ ಮನಕ ।
ಇದು ಬಿಟ್ಟಿದ್ದಲ್ಲೊ ನಿಮ್ಮ ಹೆಣಕ ।
ಇದೊಂದು ಇರಲಿ ಹೊತಗೊಂಡು ತಿರುಗೊ ಸಾವು ತನಕಾ ।

ಏರು ಭೀಮ ನರಸು ಚಂದ್ರಾಮ ಸಭಾದಾಗ ಮಾಡಿಬಿಟ್ಟರೊ ಶಾಹಿರಿ ಸೂರಿ।
ನೆಲಕಲಿಲ್ಲೊ ಶಾಹಿರಿ

ಕೂಡಪಲ್ಲ ಮುಜರಿ ಹಿಡದ ಹೊಡಿ ತಪ್ಪಿದಂದ್ರ, ಬಳಿ ಸೀರಿ ಕುಬಸ ಆಯೇರಿ ॥

॥ ಜೀಜೀ ॥ ಚೌಕ ೩ ॥

ಸಾಕ ಮಾಡೊ ದನದಿ ಶಾಹಿರಾ

॥ ಸವಾಲ ಪದಾ ॥

ಸಾಕ ಮಾಡೊ ದನದಿ ಶಾಹಿರಾ । ಹಿಡಿಧೀರಾ ।
ಕಡಿ ತನಕ ಕಲ್ತ ಹಾಡವರಾ । ಎಡವವರಾ ।
ಮಣ್ಣ ಮುಕ್ಕಿ ಹೋಗ್ಯಾರೊ ಬಾಳ ಮಂದಿ ನಿಮ್ಮಂಥ ಶಾಣೇರಾ ॥
॥ ಜೀಜೀ ॥

ಚಿತ್ತೆಲ್ಲಿ ಇಟ್ಟಿದೊ ಪಾಮರಾ ಗಂವಾರಾ ।
ತೋಡಿಯಾಗಲಿಲ್ಲೊ ರಣಶೂರಾ ಚಾತೂರಾ ।
ಅದಕ ಇದಕ ನೋಡ ಜಮೀನಾ ಸಮಾನಕ ಹಾಯಪೀರಾ ॥ ಜೀಜೀ ॥

ನೀವು ಅದೇನಂತಿರಿ ಶಾಣೇರಾ । ಪಂಡಿತರಾ ।
ಉಚಗಂಟ ಹಾಕಿ ಓಡವರಾ । ನೀವು ಹಗುರಾ ।
ಬಲಿವಳಗ ಸಿಕ್ಕಿರಿ ಪಾರಾಗಿ ಹೋಗುದು ದುಸ್ತರಾ ॥ ॥ ಜೀಜೀ ॥

ಇಳುವು ಸುದ್ದಿ ಕೇಳಿ ಬಂದಿನಿ ನೀ ಆಗಿನಂತಿ ಕವೇಸೂರಿ ।
ಕೈಗೂಡಿಸಿ ಕೊಟ್ಟ ಶ್ರೀಹರಿ ॥ ॥ ಜೀಜೀ ॥ ೧ ॥

ನಮ್ಮ ಮ್ಯಾಲ ಇಷ್ಟೊಂದು ನಿಮ್ಮ ಕುರಕುರಿ ।
ಸುಳ್ಳೆ ಗುಡ್ಡsಕ ಅತ್ತಾಂಗ ನರಿ ॥ ॥ ಜೀಜೀ ॥ ೨ ॥

ಹಿಂದ ಮುಂದ ಸುಳ್ಳೆ ನೀವು ಮಸಿ ಹಾಕತಿರಿ ಹೊರಿ ।
ನನ್ನ ಮುಂದ ಹೋಗಲಿಂದ ತೀರಿs ॥ ॥ ಜೀಜೀ ॥ ೩ ॥

ಏರು ಹತ್ತ ಕೊಬ್ಬರು ಇರತಾರೊ ಬಲ್ಲವರಾ । ಹೇಳವರಾ ।
ನೀವೆಲ್ಲಾ ಚಂಡಿ ಕೊಯ್ಯುವರಾ । ಬಂದವರಾ ।
ಕೂಡಪಲ್ಲ ಮಣ್ಣ ಮುಕ್ಕಿ ಹೋಗ್ಯಾರೊ ಬಾಳ ಮಂದಿ ನಿಮ್ಮಂತ ಶಾಣೇರಾ ॥
॥ ಜೀಜೀ ॥ ಚೌಕ ೧ ॥

ಸಭಾ ನೆರದ ಕುಂತದ ಒಳೆ ಗಿರಕಾ । ಕೇಳೊ ಮೂರ್ಖಾ ।
ಹೇಳಿ ಕೇಳಿ ಒಗುವತೀನಿ ಸರಕಾ । ಹಿಡಿತರಕಾ ।
ನಗ ನಗತ ಕೇಳಿದರ ನಿನಗ ಮುಟ್ಟತದ ಚುರಕಾ ॥ ॥ ಜೀಜೀ ॥

ಒಂದು ತೇಜಿ ಬಹುಟೀಕಾ । ನಾಜೂಕಾ ।
ಆರು ಕಾಲ ಇದ್ದಾವೊ ಅದಕ । ಕೇಳ ಶೋಕ ।
ಎರಡ ಕಾಲ ಭೂಮಿ ಮ್ಯಾಲ ಊರಿ ನಡುದು ಮುಂದsಕ ॥ ಜೀಜೀ ॥

ಉಪರಾಟಿ ನಾಲ್ಕು ಕಾಲ ಮ್ಯಾಕ । ಸಮತಕ ।
ಅದರ ಬೆನ್ನ ಇರುವುದು ತೆಳಿಯಾಕ । ನೋಡ ನೆಲಕ ।
ಸುಳ್ಳಂದ್ರ ತೋರಸ್ತೀನಿ ಆಗೋ ನನ್ನ ಸೇವಕ ॥ ॥ ಜೀಜೀ ॥

ಇಳುವು ತೇಜಿ ವರ್ಣ ಹೇಳಬೇಕೊ ಎರಡು ಇದ್ದಾವ ಅದsಕ ತೆಲಿ ।
ಮುಂಗಾಲ ಚೆಪ್ಪಿಬಲ್ಲಿ ಮsssಲಿ ॥ ॥ ಜೀಜೀ ॥

ಯಾಂವ ಜೀನ ಹಾಕಿಕುಂತ ತಿರಗತಾನೊ ಅದರ ಮ್ಯಾಲಿ ।
ನೀ ಹೇಳಿ ಹಾಡೊ ಸಭಾದಲ್ಲಿ ॥ ॥ ಜೀಜೀ ॥

ನಾ ಶ್ರೇಷ್ಠ ಅಂತಾ ಸುಳ್ಳೆ ಬೊಗಳತಿದಿ ಬಾಯಲ್ಲಿ
ಇಷ್ಟ ಹಮ್ಮು ಯಾಕೊ ನಿನ್ನಲ್ಲಿ ॥ ॥ ಜೀಜೀ ॥

ಏರು ಹಿಂದ ಮುಂದ ಆಗೊ ಎಚ್ಚರಾ । ಹುಶ್ಯಾರಾ ।
ಈ ಸವಾಲ ಬಂತೊ ಬಲ್ ಜಬರ್ ಬೆ–ಕಬರಾ ॥

ಕೂಡಪಲ್ಲ ಮಣ್ಣ ಮುಕ್ಕಿ ಹೋಗ್ಯಾರೊ ಬಾಳ ಮಂದಿ ನಿಮ್ಮಂತ ಶಾಣೇರಾ ॥
॥ ಜೀಜೀ ॥ ಚೌಕ ೨ ॥

ಏರು ತೇಜಿ ವರ್ಣ ಇತ್ತೊ ಹೆಂತಾದ ಏಸ ತರದೊ ।
ಲಗುಮಾಡಿ ಕೇಳೊ ನೀ ಶೋಧ ಈ ಭೇದಾ ।
ಇದರ ಉತ್ತರ ಹೇಳಿದರ ಹೌದಂದೇನ ನಾ ಮರದ ॥ ಜೀಜೀ ॥

ನಾ ಬೆಳಸುದಿಲ್ಲ ಹೆಚ್ಚಿಂದ ಇನ್ನ ಮುಂದ ।
ಪಾರಾಗಿ ಹೋಗೋ ನೀ ಇಂದ । ಇದರಾಂದss।
ಹಿಂಗ ಕೇಳೂತ ಹ್ವಾದರ ರಾತ್ರಿ ಬೆಳಗ ಆಗುವದೊ ॥ ಜೀಜೀ ॥

ಸಿಗಬಾರದ ಸಿಕ್ಕಿದಿ ನೀ ಬಂದ । ಪಸಂದ ।
ನಗ ನಗತ ಹೇಳೊ ಆನಂದ । ಕುಸಿಲಿಂದ ।
ಹೇಳದಿರಕ ದಪ್ಪ ಕಸಗೋತಿನಿ ನಿನ್ನ ಕೈಯಾಂದ ॥ ಜೀಜೀ ॥

ಇಳುವು ಮುಳ ಸಾವಳಗಿ ಮತಾಬಸಾಹೇಬ ನೆನದ ಹಳ್ಳದಾ ಸನಿ ।
ಮತಿಕೊಟ್ಟ ಅವನ ಮಗ ಧ್ವನೀ ॥ ॥ ಜೀಜೀ ॥

ಗುರುಸೋಫೆ ಸಾಹೇಬರು ಇದ್ದಂಗ ಮುತ್ತಿನಗೊನಿ ।
ಸಿದ್ದಪ್ಪನ ಭೇದ ನರ್ಜೀನಿ ॥ ॥ ಜೀಜೀ ॥

ಭೀಮ ನರಸು ಸಭಾದಾಗ ಮಾಡತಾರೊ ಗಾಯನೀ
ಉಂಡಂಗ ಹಾಲ ಮ್ಯಾಲಿನ ಕೆನಿ ॥ ॥ ಜೀಜೀ ॥

ಏರು ರಾಜಿ ಸಾಹೇಬ ಹಿಡದಾನೊ ಸೂರಾ । ಗಂಭೀರಾ ।
ಡಪ್ಪಿನ ಮ್ಯಾಗ ಕಲ್ಗಿ ಜರತಾರಾ । ಮಾಡ್ಯಾರಾ ।

ಕೂಡಪಲ್ಲ ಮಣ್ಣ ಮುಕ್ಕಿ ಹೋಗ್ಯಾರ ಬಾಳ ಮಂದಿ ನಿಮ್ಮಂತ ಶಾಣೇರಾ ॥
॥ ಜೀಜೀ ॥ ಚೌಕ ೩ ॥

ಹೆಣ್ಣ ಗಂಡು ಎರಡು ಜೋಡ

ಆದಿ ಅನಾದಿದಿಂದ ನಡೆದು ಬಂದ ಮಾತ ಬೇಧ ಮಾಡುವ ಕಾರಣಿಲ್ಲಾ।
ಪದಾ ತಿಳಿದು ಹಾಡು ಇನ್ನ ಮ್ಯಾಲಾ ।
ಹೆಣ್ಣು ಗಂಡು ಎರಡು ಜೋಡ ಅದಾವ ಹೆಚ್ಚು ಕಡಿಮಿಲ್ಲಾ ॥
॥ ಜೀಜೀ ॥ ಪಲ್ಲ ॥

ನೀ ಒಂದರದಾಗ ದೊಡ್ಡಾಂವ ಇದ್ದರೆ ನಾ ಒಂದರದಾಗ ದೊಡ್ಡಕ್ಕೆ
ನಿನಗ ಆಗೆ ನಿಂತಲ್ಲೇನು ಸಖಿ
ಸಂಭ್ರಮ ಸುಖ ಸರಿಯಾಗಿ ಬೇಕಾದಲ್ಲಿ ಕಾರಣ ಅಂಬುಜ ಮುಖಿ ॥
॥ ಜೀಜೀ ॥

ಸ್ವಯಂ ನೀ ಸುರವಿಗಿದ್ದರೆ ಸ್ವಯಂ ಶಕ್ತಿ ಇದ್ದಕ್ಕಿ ।
ನಿನ್ನ ಪರಬ್ರಹ್ಮಗ ತಿದ್ದಕ್ಕಿ ।
ಜ್ಞಾನಶಕ್ತಿ ನಾ ಅನಸಿಕೊಂಡು ನಿನ್ನ ಸರ್ವಜ್ಞಾನ ಗೆದ್ದಕ್ಕಿ ॥ ಜೀಜೀ ॥

ವೇದಶಕ್ತಿ ಪರನಾದ ಶಕ್ತಿ ನಾನು ಮಾಯ ಶಕ್ತಿ ಹೋಲಕಿ
ಮಹಾದೇವನ ಬೆನ್ನಿಗಿ ನಿಲ್ಲಕ್ಕಿ ।
ಅಪರಾಧ ಮಹಿಮೆ ಅನಂತಶಕ್ತಿ ನಾ ಬ್ರಹ್ಮಸೃಷ್ಠಿ ಬಾಲಕಿ ॥ ಗೀಗೀ ॥

ಇಳುವು ಆದಿಶಕ್ತಿ ಅನಿಸಿಕೊಂಡೆ ಆದಿದೇವನ ಅರ್ಧಾಂಗಿ
ಆದಿ ಅನಾದಿ ಹಿಡಿದು ಅರ್ಧಭಾಗ ನಾ ನುಂಗಿ
ಗುರು ಲಿಂಗ ಜಂಗಮ ಬಿಟ್ಟ ನಾ ಗುರುಲಿಂಗಿ ॥ ಗೀಗೀ ೧ ॥

ಶಂಕರಗ ಪಾರ್ವತಿ ನಾನು ಅರ್ಧನಾರಿ ನಟೇಶ್ವರ ನೀನು
ಈ ಮಾತ ಸುಳ್ಳ ಏನೇನು
ನೀ ವಿಚಾರ ಮಾಡುದಕ ವಿಚಾರಶಕ್ತಿ ಅನಿಸಿದೇನು ॥ ॥ ಗೀಗೀ ೨ ॥

ಋಷಿಗಳಿಗೆ ಋಕ್ಷೇಶ್ವರಿ ಆದಿಶಕ್ತಿ ನಾನಾಗಿ
ಬ್ರಹ್ಮನಿಗೆ ಸರಸ್ವತಿ ಲಕ್ಷ್ಮಿ ಆಗಿ ಶ್ರೀಹರಿಗಿ
ದೈತ್ಯರಿಗೆ ದತ್ಯೇಶ್ವರಿ ದೇವಿ ಆದಿ ದೇವತರಿಗೆ ॥ ॥ ಗೀಗೀ ೩ ॥

ನಿನ್ನ ಬೆನ್ನ ಹಿಂದೆ ಇರುವೆನು
ನೀ ಹೊರಸಿದಷ್ಟು ಹೊರುವೆನು
ಮಿಕ್ಕಿದ ಕಾಲಕ್ಕ ನಿನಗ ತಗೊಂಡು ಹಾರುವೆನು ॥ ॥ ಗೀಗೀ ೪ ॥

ನಿನ್ನಂತೆ ಶರೀರಾ ನನಗೂ ಐತಿ ಸರಿಯಾಗಿ
ಚೌಕಾಸಿ ಮಾಡಿದರ ಏನೂ ಇಲ್ಲ ಹೆಚ್ಚಾಗಿ
ನೀ ಹೊರಗಿಂದ ತಂದರ ಮಾಡಿಕೊಡಬೇಕ್ರಿ ಅಡಗಿ ॥ ಗೀಗೀ ೫ ॥

ಕಡಿಮಿಲ್ಲಾ ಎದರಾಗ ಏನೇನು । ಸವಜೋಡ ಅದೀವಿ ನಾನು ನೀನು
ನೀ ಗಂಡಸ ಎದರಾಗ ದೊಡ್ಡವನು
ಕತ್ತಿ ಹಿಡಿದು ಲಡಾಯಿ ಮಾಡುದಕ ಧೈರ್ಯಶಕ್ತಿ ನಾನು ॥ ಗೀಗೀ ೬ ॥

ಏರು ನಿನಗೂ ಒಂದು ಹೆಸರಿದ್ರ ನನಗೊಂದು ಹೆಸರಾ–
ನಿನಗೂ ನನಗೂ ಬೇಧಿಲ್ಲಾ ।
ಇದು ತಿಳಿದವನಿಗೆ ವಾದ ಇಲ್ಲ ॥

ಕೂಡಪಲ್ಲ ಹೆಣ್ಣ ಗಂಡು ಎರಡು ಜೋಡ ಅದಾವ ಹೆಚ್ಚು ಕಡಿಮಿಲ್ಲಾ ॥
॥ ಗೀಗೀ ॥ ಚೌಕ ೧ ॥

ಶಕ್ತಿಗೆ ಬಿಟ್ಟು ಮುಕ್ತಿ ಆಗಿಲ್ಲ ತಮ್ಮಾ ಶಕ್ತಿ ಸಾಹಸ ಪಡಕೋರೊ
ನಮ್ಮ ಶಕ್ತಿ ಪಾದ ಹಿಡಕೋರೊ
ಶಕ್ತಿಹಂಗ ನೀಗುದಕ್ಕ ಮೂಲಾ ಭಕ್ತಿ ಇಟ್ಟು ದುಡಕೋರೊ ॥ ಗೀಗೀ ॥

ತೆಳಗ ಶಕ್ತಿ ಐತಿ ಮ್ಯಾಲ ಶಕ್ತಿ ಐತಿ ಶಕ್ತಿ ಮಹಿಮ ತಿಳಕೋರೊ
ಹ್ಯಾಂಗ ಉಳಿತಿ ಉಳಕೋರೊ ।
ಹೆಣ್ಣ ಸುಳ್ಳಂತ ಸತ್ಯ ಆಣಿ ಮಾಡಿ ಸಭಾದೊಳಗ ಬೆಳಕೋರೊ ॥
॥ ಗೀಗೀ ॥

ಗಾನಶಕ್ತಿ ಅಭಿಮಾನ ಶಕ್ತಿ ನಾನು ಸರ್ವಶಕ್ತಿ ಗಂಭೀರೊ
ನಾ ಸರ್ವರೊಳಗ ಮೆಂಬರೊ
ಪ್ರಾಸ ಅಡಿ ಗಣ ತಾಳ ಶಕ್ತಿ ಆಗಿ ಆರಿಸಿ ತಂದಾಕಿ ಅಂದಾರೊ ॥
॥ ಗೀಗೀ ॥

ಪರಮಶಕ್ತಿ ಪರಪೂರ್ಣ ಶಕ್ತಿ ನಾನು ಪರಮಭಾವಿ ಅವತಾರೊ
ನಂದಿದ್ದ ಸರ್ವದೇವರೊ
ಕರುಣಶಕ್ತಿ ಮಾಯಾದೇವಿಯ ವರ್ಣನೆ ಎಷ್ಟು ಹೇಳಲಿ ವಿಸ್ತಾರೊ ॥
॥ ಗೀಗೀ ॥

ಇಳು ಜನತಕ್ಕೆ ತಾಯಾಗಿ ನನ್ನ ಮಾಯಿ ಹತ್ತ್ಯೆತಿ ।
ಕೂಟಕ್ಕೆ ಸತಿಯಾಗಿ ಎನ್ನ ಮಾಯಿ ಕೊಡ್ಯೆತಿ ।
ಮೋಹಕ ಮಗಳಾಗಿ ಎನ್ನ ಮಾಯಿ ಹುಟ್ಯೆತಿ ॥ ॥ ಗೀಗಿ ೧ ॥

ಪರಿ ಪರಿ ರೂಪಗಳು ತೋರಿ । ಆ ನಾರಿ ಸ್ವರ್ಗದ ದಾರಿ ।
ಸಕಲರಿಗೆ ನಾರಿ ಹಿತಕಾರಿ
ಆ ನಾರಿ ಮುನಿದರೆ ಬೀಳುವುದು ನೀ ಗಾರಿ ॥ ॥ ಗೀಗೀ ೨ ॥

ನವರಂಗ ಬಾಜರಕ್ಕನಾರಿ ನಟೇಶ್ವರಿ ಬರತಿ
ನಿಮ್ಮ ಜನ್ಮ ಪಾವನ ನಾರಿಯಿಂದಲೆ ಶುಭಕೀರ್ತಿ
ಬ್ರಹ್ಮಾಂಡ ಹೊತ್ತು ನಿಂತ್ಯೆತಿ ಮಾಯ ಆಟಗಾರ್ತಿ ॥ ॥ ಗೀಗೀ ೩ ॥

ಈ ಮಾಯದ ಬಲಿಽದು ಹೇಳತಿನಿ ಪೇರಿ ।
ಹೊರಗ ಹೋಗುದಿಲ್ಲ ದಾರಿ ।
ನೀ ಹೊಡೆದನಂತಿದಿ ಖರೆವಾರಿ
ಎಂಥಿಂತವರು ಸತ್ತಾರೊ ನಿಂದೇನ ಕಿಮ್ಮತ್ತ ಕೂರಿ ॥ ॥ ಗೀಗೀ ೪ ॥

ಈ ಸಂಸಾರದೊಳಗ ನೀ ಗಂಡ ನಾ ಹೆಂಡತಿ
ನೀ ಒಂಟ ಅನಬೇಡ ಜೋಡ ಹಾರೊ ಶಿವಪಾರ್ವತಿ
ಸತಿ ಮಾಡಿಕೊಂಡು ನಿಮ್ಮ ಬಸವ ಹೊಂದಿದ ಸದ್ಗತಿ ॥ ಗೀಗೀ ॥

ಶಿವಶಣರು ಹೇಳ್ಯಾರ ಸಾರೀ ಆ ನಾರಿ ದೊಡ್ಡ ಉಪಕಾರಿ ।
ಆಕಿ ಪಾದಕ ಹೊಡದಾರೊ ಮುಜರಿ
ಈ ಸರ್ವ ಪ್ರಮಾಣಕ್ಕ ನೀನೆ ಅಂತ ಅಧಿಕಾರಿ ॥ ॥ ಗೀಗೀ ॥

ಏರು ಸಂಸಾರ ಸಾಕಂತ ಸಾಧುರಾಗತಾರ ನಂದೇ ಅದಕ ಅನಕೂಲಾ ।
ನನ್ನ ಹುಕುಮವಿಲ್ಲದೆ ನಡೆಯುದಿಲ್ಲಾ ।
ಕೂಡಪಲ್ಲ ಹೆಣ್ಣ ಗಂಡು ಎರಡು ಜೋಡ ಅದಾವ ಹೆಚ್ಚಾ ಕಡಿಮಿಲ್ಲಾ ॥
॥ ಗೀಗೀ ॥ ಚೌಕ ೨ ॥

ಸೂಜಿಯ ತುದಿಯ ಮೇಲೆ ಸಹಸ್ರ ವರುಷತನ ವಿಶ್ವಾಮಿತ್ರ ಜಪಮಾಡಿ ।
ಕ್ಷಣದೊಳಾದ ಮಾನಗೇಡಿ
ಬ್ರಹ್ಮನ ಹಿರಹಾರಿ ಭಿನ್ನಾಗಿ ಕುಳಿತಾನೊ ಗುರುತಿಲ್ಲೇನೊ ಕುಲಗೇಡಿ ॥
॥ ಗೀಗೀ ॥

ಜಟಾ ಮಠಾ ಕಾಯಕೊಂಡು ಬೆಟ್ಟದೊಳು ಒಂದು ಗುಡಿ
ನನ್ನ ಗುಡಿಯೊಳಗ ನಿನ್ನ ದಡಿ
ನನ್ನ ಗುಡಿ ಬಿಟ್ಟು ನಿನ್ನ ಗಡಿಯಾರ ಕೇಳಬೇಕು ಗುಡಿಯೊಳಗ
ಕಂಡ್ಹಿಡಿ ॥ ॥ ಜೀಜೀ ॥

ಭಗ್ವಾ ಹಾರೆ ಭವ ಗೆದ್ದೇನಂದಿ ಅರಬಿಗಿ ಹಚ್ಚಿ ಪುಡಿ ।
ಸ್ವಲ್ಪ ವಿಚಾರ ಮಾಡುದ್ಯೆತಿ ತಡಿ ।
ಭಗಾ ಅಂತಿನಿ ನನ್ನ ಯೋನಿಗಿ ಅಂತಾರ ಕೊರಳಾಗ ಹಾಕಿ
ಕುಲಗೇಡಿ ॥ ॥ ಜೀಜೀ ॥

ತೊಗಲ ಹೊತ್ತು ಹಗಲ ರಾತ್ರಿ ಬರೆ ತಗಲ ವ್ಯಾಪಾರ ರಾಡಿ ।
ಏನೇನು ಶುದ್ಧವಿಲ್ಲ ನಡಿ ।
ನೀ ಒಲ್ಲೇ ನಂದರ ನಿನಗ ಹ್ಯಾಂಗ ಬಿಟ್ಟಿತು ನಿನಗ್ಯಾಂಗ
ತಟ್ಟಿತು ಯಡಿ ॥ ॥ ಗೀಗೀ ॥

ಇಳುವು ನಿಮ್ಮ ಅವಿವೇಕಾತ್ಮ ಮುಕ್ತಾಗುದಾದರ ಹೀಂಗ ನಡಿಬೆ ।
ನಮ್ಮ ಸ್ಜ್ಮತಿಯೆಂಬ ತಂಗಿನ್ನ ಮಾಡಿಕೊಂಡ ಸತ್ಯ ದುಡಿಬೇ
ಪ್ರಮಾಣ ಆಗುತನಕ ನೀ ವಿಶ್ವಾಸವಿಟ್ಟುರಥ ಹೊಡಿಬೇ ॥

ಮತಿ ಎರಡು ದಳ ಪದರ ಹಿಡಿಯೊ
ಅತಿ ಮುದ್ದಾಗಿ ಆಕಿಗೂಡ ನಡಿಯೊ
ನೀ ವಿರತಿ ಆಗುದಕ್ಕ ಗಡಿಯೊ
ಶಮ ದಮಾದಿ ಷಟ್ ಸಂಪತ್ತ ಆಗತಾವ ರಡಿಯೊ ॥ ॥ ಗೀಗೀ ॥

ಬೆಲ್ಲಿಗಿ ಬಿಟ್ಟ ಸವಿ ಕಡಿಯಾಕ ಇಲ್ಲ ನೀ ತಿಳಿಬೇ ।
ಆ ಬೆಲ್ಲ ತಿಂದ ಮೇಲೆ ತಿಳಿಯುವುದು ಒಳಗಿನ ಕಳಿಬೆ ।
ಎಲ್ಲೆಲ್ಲಿ ಹೋದರ ಸಹಿತ ಸುತ್ತ ಮಾಯದ ಬಲಿಬೇ ॥
ಮಿಗಿಲಾದ ಮಹಾತ್ರಿದ ನದಿಯೊ ।
ಈತಗ ಬಜಾರದ ಬದಿಯೊ ।
ಇದನ್ನ ದಾಟಿದರ ದೊಡ್ಡ ಪಡಿಯೊ
ಇದು ದಾಟುದಾದರ ನೀ ತೆರೆದು ನೋಡ ಬೇಧ ವಿಧಿಯೊ ॥ ಗೀಗೀ ॥

ಆಕಾಶ ಪರ ಆಕಾಶ ಆಗುವದು ಬಹಳ ಬಿರಿ ಬೇ
ದೇಶ ದೇಶ ಹೋದವರ ಸಹಿತ ಈಶ್ವರನ ಪಾದ ನಿನ್ನ ಸರಿಬೇ
ಅನಿವಾಸಿ ಪದವಿ ಮುಕ್ತಾಂಗಿ ನಿರುಪವ ಅರಿಬೇ
ಆಕಿ ತೆರೆದು ನಿಂತಾಳೊ ಉಡಿಯೊ
ಮುಕ್ತಾಗುದಾದರ ಅಲ್ಲಿಗೆ ನಡಿಯೊ
ಆಕಿನೊಡಗೂಡಿ ಆಗೊ ಸೇರ ಛಡಿಯೊ
ವಸ್ತಾದ ಕಲಾಸಾಹೇಬರ ಪಾದ ಹಿಡಿಯೊ ॥ ಗೀಗೀ ॥

ಏರು ಸಿಂದಗಿ ತಾಲೂಕಿನೊಳಗ ಮುಳಸಾವಳಗಿ ನಗರ ಪ್ರಭಲಾ ।
ಮಡಿವಾಳ ಅದಾನ ಸಣ್ಣ ಬಾಲಾ
ಕೂಡುಪಲ್ಲ ಹೆಣ್ಣ ಗಂಡು ಎರಡು ಜೋಡ ಆದಾವ ಹೆಚ್ಚು ಕಡಿಮಿಲ್ಲಾ ॥
॥ ಗೀಗೀ ಚೌಕ ೩ ॥

ಸಖಿ

ಎಣಿಸಿ ಆರು ಬಾಳಿಕಾಯಿ ಗುಣಿಸಿ ಮೂರು ಪೇರುಕಾಯಿ ।
ಹಣ್ಣು ಹದಿನೆಂಟ ಮಾವಿನಕಾಯಿ
ಐದು ಮಂದಿಗಿ ಹಂಚಬೇಕು ।
ಇಲ್ಲದಿದ್ದರೆ ಹಾಡುದು ಬಿಡಬೇಕು ॥ ॥ ಜೀಜೀ ॥

ನಾಲ್ಕ ಅದಾವ ಲಿಂಬಿಕಾಯಿ । ಪಂಚವೀಸ ಅದಾವ ಪಪ್ಪಾಕಾಯಿ ।
ಅಡತಾರ ಏಳು ಟೆಂಗಿನ ಕಾಯಿ ।
ಐದೇ ಭಾಗ ಮಾಡಬೇಕು ಅಣ್ಣ ತಮ್ಮರಿಗಿ ಸವನಾಗಿ ಹಂಚಬೇಕೊ ॥
॥ ಜೀಜೀ ॥

ಏಂಟು ಅದಾವ ಜಾಜಿ ಕಾಯಿ । ಮೂವತ್ತಾರು ಖಜೂರಿ ಕಾಯಿ ।
ತೊಂಬತ್ತಾರು ಬದನಿಕಾಯಿ । ಐದು ಪಾಲಿಗೆ ಇಡಬೇಕು ।
ಪಾಪ ಮಾಪ ನಿನಕಡಿ ಅsದ ತಿಳಕೊ ॥ ॥ ಜೀಜೀ ॥

ಮುಳ ಸಾವಳಗಿ ಅನುಭವ ಕಾಯಿ । ಮತಿ ಉಳ್ಳವಗ
ಮನೋಭಾವಕಾಯಿ ।
ಮರಿಬ್ಯಾಡ ಲಗು ಹುಡುಕೊ । ವಸ್ತಾದ ಕಲಾಶನ ಬಲ್ಲಿ ಬಂದು
ದುಡಕೊ ॥ ॥ ಜೀಜೀ ॥

ಪುಣ್ಯ ಬರತದಂತ

ಶಾಹೀರ ಅಂತ ಬಂದಿದ್ಯೋ ತಿಳಿಯಲೊ ನಿನ್ನ ಶಾಣೆತನಾ।
ಹೌದಂತಾರ ಪಂಡಿತ ಜನಾ ।
ಪುಣ್ಯ ಬರತಾದಂತ ನೀರಿದ್ದ ಜ್ಯಾಗಿನ್ಯಾಗ ಒಬ್ಬ ಬಾವಿ ಹೊಡದಾನಾ॥
॥ ಜೀಜೀ ೧ ॥

ಕೈಲಾಸ ಜನ ನೀರ ಕುಡಿದು ಹೋಗತಿತ್ತು ಕೇಳು ಒಂದಾನೊಂದು ದಿನಾ ।
ಕುರುಡ ಕುಂತ್ರ ಬಂದ್ರೊ ಅಲ್ಲಿ ತನಾ।
ಕುರುಡನ ಹಿಡಕೊಂಡು ಕುಂಟ ಇಳಿಯತಾನ ಜೋಲಿ ಹೋಯಿತು ತಕ್ಷಣಾ॥ ॥ ಜೀಜೀ ೨ ॥

ಇಬ್ಬರು ಬಾವಿಯಲ್ಲಿ ಬಿದ್ದು ಸುತ್ತಿದಾರು ಪಾಪ ಇದ್ದ ಕಾರಣಾ
ಅದು ಪುಣ್ಯ ಹ್ಯಾಂಗ ಹೇಳಣ್ಣಾ ।
ಮನಿಗಿದವಗ ಹ್ಯಾಂಗ ಎಬ್ಬಿಸಬಾರದು ಮನಿಗೆ ಬೆಂಕಿ ಹತ್ತುನಾ॥
॥ ಜೀಜೀ ೩ ॥

ನೀರಾಗ ಬಿದ್ದು ತಾಸ ಹೊತ್ತಯಿತ ಹ್ಯಾಂಗ ಸತ್ತಾವ ಹೇಳಣ್ಣಾ।
ಸುಳ್ಳೆ ಬಂದು ಆದ್ಯೊ ಹೈರಾಣ ।
ಗುಡ್ಡದಾಗ ನೀರಾಗ ಬಂಡಿಗಲ್ಲ ತೇಲುತ ಬಂತಣ್ಣಾ ॥ ಜೀಜೀ ॥

ಇಳು ನಮಾಜಿಗಿ ಹೋಗಬೇಕಂದ ಮಸೂತ್ಯಾಗ ಅಜಾ ನಡದಿತ್ತು ।
ಹೊರಳಿ ನೋಡುದರಾಗ ನೆರೆ ಮನೆಗೆ ಬೆಂಕಿ ಹತ್ತಿತ್ತು ।
ಇತ್ತ ಹೊರಳಿ ನೋಡುದರೊಳಗ ಅಕ್ಕಿಕಾಳ ಟಾಯಿಮ ಇತ್ತು।

ಹೆಂಡತಿ ಕರಿತಾಳ ಮನೆಯಲ್ಲಿ ಕಾಮ ಏರಿ ತನ್ನ ತಲಿಯಲ್ಲಿ ।
ಬರ್ರಿ ಅಂತಾಳ ಹಾಸಿಗಿ ಮ್ಯಾಲ ಒಂದೇ ಟಾಯಿಮಕ ಮೊದಲು ಹೋಗುವದ್ಯಾವಲ್ಲಿ॥ ॥ ಜೀಜೀ ೧ ॥

ಹೇಳಿ ದಾಟುದರಾಗ ಕೆಸರಾಗ ತೆಲಿ ಡೋಗಿತ್ತು
ಆಡೋಗಿ ಮೇಲೆ ಹಿಂಗಿತ್ತು ಬರಹ ಬರದಿತ್ತು
ಆಡೋಗಿ ಇನ್ನೂ ಏನ ಆಗಬೇಕಾಗಿತ್ತು
ಓದಿ ವಿಚಾರ ಮಾಡಿದ ಮನದಲ್ಲಿ ಇದು ಸತ್ತಾದೇನು ಯಾವಲ್ಲಿ
ಬಂದು ಬಿದ್ದೈತಿ ಇದು ಕೆಸರಿನಲ್ಲಿ ।
ಇನ್ನೂ ಆಗೇದಂದ, ಏನು ಇರಬೇಕು ಇದರಲ್ಲಿ ॥ ಜೀಜೀ ೨ ॥

ಕೇಳತೀನಿ ಶರೀರ ಡೋಗಿದು ಏನೇನು ಇತ್ತು
ಏನೇನು ಆಗತಿತ್ತು ಮುಂದೇನ ಆಯಿತ್ತು

ಮುಂದ ಹೋಗುದರಾಗ ಒಂದು ಸಣ್ಣ ಹಳ್ಳಿ ಹತ್ತಿತ್ತೊ
ಭಗವಾ ಹಾಕ್ಯಾನ ತನ್ನ ಮೈಮ್ಯಾಲಿ
ಬಾಳ ಶಾಣೆ ಇದ್ದ ಶಾಸ್ತ್ರದಲ್ಲಿ
ನಾಲ್ಕು ಮಂದಿ ಶಿಷ್ಯರು ಸಂಗತಿಲಿ
ಬ್ಯಾರೆ ಬ್ಯಾರೆ ಕುಲದವರು ಜಾತಿಬೇಧ ಅವರಲ್ಲಿ ॥ ಜೀಜೀ ೩ ॥

ಏರ ಊರಾಗ ಒಬ್ಬ ಮಠದ ಮುತ್ಯಾ ಇದ್ದ ನಡತಿ ಕೆಟ್ಟದೂ ಇಡೀ ಜನಾ।
ನಿತ್ಯ ಮಾಡುವರೊ ದರ್ಶನಾ ।

ಕೂಡಪಲ್ಲ ಪುಣ್ಯ ಬರತಾದಂತ ನೀರಿದ್ದ ಜ್ಯಾಗಿನಾಗ ಒಬ್ಬ ಭಾವಿ ಹೊಡದಾನ ॥
॥ ಜೀಜೀ ಚೌಕ ೧ ॥

ಸಾವುಕಾರನ ಮನಿಯಾಂದ ಬುತ್ತಿ ಹೋದ ಬಳಿಕ ಮುತ್ಯಾನ
ಊಟ ಆವಾಗ।
ಒಂದು ದಿನ ಬುತ್ತಿ ತರುವುದರೊಳಗ ವಿಚಿತ್ರ, ಆಯಿತ ಹಾದ್ಯಾಗ ॥
॥ ಜೀಜೀ ॥

ನಾಗರ ಹಾವಿನ ಹೊಡೆದು ಒಗದಿದ್ದರೊ ಹಾವಿಗಿ ಹದ್ದ
ಹಿಡಕೊಂಡ ಬಾಯಾಗ ।
ಹಾರ್‍ಯಾಡತಿತ್ತೊ ಅಂತ್ರದಾಗ ।
ಹಾವಿನ ಬಾಯಾನ ವಿಷ ಬಿಂಬು ಬಿದ್ಯೆತ್ರಿ ಕೈಯೊಳಗಿನ ಬುತ್ಯಾಗ ॥
॥ ಜೀಜೀ ॥

ಗೊತ್ತವಿಲ್ಲದೆ ನಾರಿ ನಿತ್ಯ ಬಾರಿ ತಾ ವೈದಾಳ ಎಡಿ ವೈಯಂಗ
ಮುಂದ ಕುತ್ತ ಉಣಸ್ಯಾಳ ಮುತ್ಯಾಗ
ಊಟಮಾಡಿ ಮುತ್ಯಾ ಹೊಚಗೊಂಡು ಮಲಗ್ಯಾನ ಅಲ್ಲೆ ಆದ ತಣ್ಣಗ ॥
ಮುತ್ಯಾ ಸತ್ತನಂತ ಸುತ್ತಿನ ಊರ ಜನಾ ಗೊತ್ತುಗಾಣಿಸಿ ಆತಗ।
ಇಂದ್ರನ ಚೌಕಾಸಿ ನಡದಿತ್ತೊ ಸ್ವರ್ಗದಾಗ ।
ನಿರಪರಾಧಿ ಶಿಕ್ಷೆ ಯಾರಿಗೆ ಕೊಡಬೇಕು ಹಾಡಿ ಹೇಳು ಸಭಾದಾಗ ॥
॥ ಜೀಜೀ ॥

ಇಳು ಈ ನ್ಯಾಯ ಕೇಳುದಕ್ಕ ಐದಾರು ದಿನ ಕುಂತಾರ
ನ್ಯಾಯ ಬಗಿಹರಿಸಿದ ಮೇಲೆ ತಯ್ಯಾರಾಗಿ ನಿಂತಾರ
ಐದು ಮಂದಿ ಬಂದಿದ್ದೆವು ಇನ್ನೊಬ್ಬ ಎಲ್ಲಿ ಅಂತಾರ
ಮುತ್ಯಾ ಸತ್ತ ಶಿಕ್ಷಾ ಯಾರ ಕಡಿ
ಐದನೆದವನ ಕೊಡುವೊ ಹುಡಕ್ಯಾಡಿ
ನಾಲ್ಕ ಮಂದಿ ಉಳದೇವು ಸವಜೋಡಿ
ಶ್ರೀಶೈಲಕ ಹೋಗುನಂತ ಬೆನ್ನಿಗಿ ಹಾಕ್ಯಾರ ಕಾವಡಿ ॥ ಜೀಜೀ ೧ ॥

ಶ್ರೀಶೈಲಕ ಹೋಗಿ ಒಂದು ನದಿಯ ನೋಡಿದಾರ
ಕಾವಡಿ ಇಳಿಸಿ ನಾಲ್ವರು ನದಿಯಲ್ಲಿ ಸ್ನಾನ ಮಾಡಿದರಾ
ಹಿಟ್ಟಕ್ಕಿ ಬ್ಯಾಳಿ ತಂದು ವಲಿಗುಂಡ ಹೂಡಿದರಾ
ಮಲಗ್ಯಾರ ಅವರು ಊಟ ಮಾಡಿ
ಅವರ ದೈವ ಹೆಂತಾ ಕಿಡಿಗೇಡಿ
ಅವರು ಅಷ್ಟೇ ಬಂದಿದ್ದರು ಬೇಡಿ
ತಲಿಗುಂಬ ಚಿಮಣಿ ಇತ್ತು ಉರಿಹತ್ತಿತ್ತು ಸುತ್ತ ಕಡಿ ॥ ॥ ಜೀಜೀ ೨ ॥

ಇಳಕೊಂಡ ಗುಡಿಸಲ ಸುಟ್ಟ ಭಸ್ಮ ಆತು ಪೂರಾ
ಈ ನಾಲ್ಕ ಮಂದಿ ಹೆಣಾ ಪುಟ್ಟ ಬಿದ್ದಾವ ಹೆಂತಾ ಘೋರಾ ।
ಹಾದಿ ಹಿಡಿಲಾರದಂಗ ಜನಾ ಹೋಗಿ ಬರತಾರಾ ।
ದೈವ ನೆರದ ಚೌಕಾಸಿ ಮಾಡಿ ।
ನಾಲ್ಕು ಮಂದಿ ಹಿರಿಯರು ಕೂಡಿ ।
ಇವರಿಗೆ ಹುಗುಳುವುದು ಹ್ಯಾಂಗ ಎಲ್ಲಿ ತೋಡಿ ।
ಯಾವ ಕುಲದ ಹೆಣಗಳಂತ ಖೂನ ಹಿಡಿಬೇಕು ಯಾವ ಕಡಿ
॥ ಜೀಜೀ ॥

ಏರ ಹೆಣಾ ಕೂನ ಹಿಡಿದು ಕೊಟ್ಟ ಬಾರೊ ತಮ್ಮಾ ಮಣ್ಣ ಮಾಡಿಲ್ಲ
ಇನ್ನು ತನಾ ।
ನಿನ್ನ ಗುರುವಿನ ಆಣಿ ಹೈವಾನಾ ।
ಕೂಡಪಲ್ಲ ಪುಣ್ಯ ಬರತದಂತ ನೀರಿದ್ದು ಜ್ಯಾಗಿನಾಗ ಒಬ್ಬ ಭಾವಿ
ತೋಡಿದಾನಾ ॥ ಜೀಜೀ ಚೌಕ ೨ ॥

ಏರು ಹಾದ್ಯಾಗ ಒಬ್ಬ ಬರುವಾಗ ಸತ್ತಿದ್ದಾ ಹೊತ್ತ ಹೆಣಾ ವೈದಾರಾ ।
ಆ ಹೆಣಕ ವೈದ ವಗದಾರಾ ।
ಹೆಣಾ ವಗದು ಗೋರಿ ಮನಿಗಿ ತಂದಾರೊ ಹ್ಯಾಂಗ ಹೇಳೊ
ಶಾಹೀರಾ ॥ ಜೀಜೀ ॥

ಲಗಾಮ ಇಲ್ಲ ಏಂಟುಕಾಲಿನ ಕುದರಿ ಹಿಂದ ಬಾಲ ಇಲ್ಲ ಜರಾ ।
ನಾಲ್ಕು ಹೊತ್ತೀಗಿ ಅನ್ನ ಭರಪೂರಾ ।
ಮ್ಯಾಲ ಕುಂತವನ ಸಿರಿ ಹೇಳಲಿ ಎಷ್ಟು ಮಂದಿ ನೋಡತಾರಾ ॥
॥ ಜೀಜೀ ॥

ಹಾದಿ ಹಿಡಿದು ನಾ ಈಗ ಬರುವಾಗ ಪದೆ ಪದೆ ಆದ ಮಜಕೂರಾ
ಆರು ಮಂದಿ ಬಂದ್ರೊ ಗೆಳೆಯರಾ ।
ಆತು ತಾಟ ಹಚ್ಚಿ ಊಟಕ ಕುಂತಾರ ಮತ್ತೆ ಬಂದಾರ ಮೂವರಾ ॥
॥ ಜೀಜೀ ॥

ಆರು ಮೂರು ಒಂಬತ್ತು ಆಗಿತ್ತು ತಮಗೆ ತಾವೆ ಎಣಿಶ್ಯಾರಾ ।
ಆರು ಮಂದಿ ಅಂದ್ರೊ ಬರಪೂರಾ ।
ಬಂದ ಮೂರು ಮಂದಿ ಯಾವಲ್ಲಿ ಹೋದರು ಹುಡಿಕಿ ಕೊಡೊ
ಶಾಹೀರಾ ॥ ಜೀಜೀ ॥

ಇಳು ಎಂಟು ಹತ್ತು ಹದಿನೆಂಟ ಜನಾ ನೆರದಾರು ।
ಆರು ಹದಿನೆಂಟ ಮಂದಿ ಹಿಂಗ ವಿಚಾರ ಮಾಡ್ಯಾರಾ ।
ಸಂಶೆ ಬಂದು ಮನಸಿನ್ಯಾಗ ಮತ್ತು ಎಣಿಸಿ ನೋಡತಾರಾ
ಹದಿನೆಂಟು ಆರು ಆದಿತು ಎಲ್ಲಾ।
ಎಲ್ಲಾ ಹೋಗಿ ಆರೇ ಮಂದಿ ಖುಲ್ಲಾ ।
ಹದಿನೆಂಟ ಮಂದಿ ತಪಸೀಲಾ
ಆರು ಮೂರು ಹದಿನೆಂಟು ಮಂದಿದು ಪತ್ತಾ ಹೇಳು ಮೊದಲಾ ॥
॥ ಜೀಜೀ ॥

ನದಿ ಸ್ನಾನ ಮಾಡುದಕ ಆರ ಮಂದಿ ನಡದಿದ್ದರು
ವಸ್ತ್ರ ವಲ್ಲಿ ಕಳೆದು ನೀರಿನೊಳಗ ಇಳಿದಾರು
ಈ ಮರ್ಮ ತಿಳಿದು ಪಂಡಿತರು ತಲಿಯ ತೂಗ್ಯಾರು
ಜಳಕ ಮಾಡಿ ಕಡಿಗಿ ಬಂದ ಮ್ಯಾಲಾ ।
ಐದು ಮಂದಿ ಹೋದ್ರ ಸಿಗಲಿಲ್ಲಾ ।
ಒಬ್ಬ ಉಳಿದಾನ ದಿಕ್ಕ ಯಾರಿಲ್ಲಾ
ಹಿಂದ ಮುಂದಿನದು ಮರತಾನ ತಂದಽ ತನಗ ನೆನಪಿಲ್ಲಾ ॥
॥ ಜೀಜೀ ೨ ॥

ಮರೆತಿದ್ದೆ ಮಾಯ ಅರಿತಿದ್ದೆ ಆತ್ಮ ಅಂದಾರು
ಆ ಅರುವಿನಲ್ಲಿ ಪರದೇಶದವರು ಬಂದಾರು
ಪರಪುರುಷ ಇವನೆಂದು ಪರಮಾಮೃತ ತಂದಾರು
ಅವರಿವರು ಕೂಡಿ ಉಂಡ ಮ್ಯಾಲಿ
ಅವರಿವರು ಯಾರು ತಿಳಿಲಿಲ್ಲಾ
ಅವರಿವರು ಭೇದ ಉಳಿಲಿಲ್ಲಾ
ಮುಳಸಾವಳಗಿ ಸಿದ್ದಪ್ಪನೆ ಬಲ್ಲಾ ॥ ॥ ಜೀಜೀ ॥

ಏರು ಕಲಿಗಿ ಜ್ಯಾಗ ಮರುಸಾವಳಗಿ ನಾಡಮೇಲೆ ವಾಯನಾ ।
ಹರದಾಸರಿಗೆ ಇಟ್ಟಾರ ಘಣಾ

ಕೂಡುಪಲ್ಲ ಪುಣ್ಯ ಬರತಾದಂತ ನೀರಿದ್ದ ಜ್ಯಾಗಿನಾಗ ಒಬ್ಬ ಭಾವಿ ಹೊಡದಾನಾ ॥
॥ ಜೀಜೀ ॥ ಚೌಕ ೩ ॥

ಮುಂಚೇಳೆ ಎದ್ದು ನನ್ನ ಮುಂದ ಹಾಯ್ದಳೊ
ಸಖಿ : ೩

ಹರದೇಶಿ ಹುಡುಗ ಓಡಿ ಬಂದಿ ।
ಕಲ್ತ ನಾಲ್ಕು ಪದಾ ಹಾಡಿದಿ ।
ಸವಾಲ ಕೇಳಿದರ ಹೋಗತಿದಿ
ಜೀವಕ್ಕ ಉರಲ ಬಂತಾ ।
ಮೂರು ಗೋರಿ ಸವಾಲಿಂದು ವಿಪರೀತಾ ॥ ॥ ಜೀಜೀ ॥

ಜನಕ ನನ್ನ ತಂದಿಯಾದಿ
ಮನಕ ನನ್ನ ಮಗನಾದಿ
ಇನ್ನೊಂದು ಸ್ವಲ್ಪ ನಿಂತ್ರ ನನ್ನ ಮಾವನಾಗ ತಿದ್ದಿಯಂತಾ ॥ ॥ ಜೀಜೀ ॥

ಜನಕ ನನ್ನ ತಾಯಿ ಆದಿ ।
ಮನಕ ನನ್ನ ಸವತಿಯಾದಿ ।
ಇನ್ನೊಂದು ಸ್ವಲ್ಪ ನಿಂತ್ರ ನನ್ನ ಅತ್ತಿಯಗುತಿದ್ದಿಯಂತಾ ॥ ॥ ಜೀಜೀ ೨ ॥

ಜನಕ ನನ್ನ ತಮ್ಮನಾದಿ
ಮನಕ ನನ್ನ ಮಗನಾದಿ ।
ಇನ್ನೊಂದು ಸ್ವಲ್ಪ ನಿಂತರ ನನ್ನ ಗಂಡನಾಗತಿದ್ದಿಯಂತಾ
ಮೂರನೆ ಗೋರಿ ಮೇಲೆ ಅಳತಾಳ ಕುಂತಾ ॥ ॥ ಜೀಜೀ ॥

ಅಳಕ್ಕಿ ಯಾರು ಹೇಳತಿದ್ದಿ
ಸತ್ತವರದು ಏನು ಸುದ್ದಿ
ಹೌದು ನಿಂದು ಅಂತಿನಿ ಬುದ್ಧಿ
ಮುಳಸಾವಳಗಿ ಪ್ರಖಾತ । ವಸ್ತ್ರಾದ ಹೇಳ್ಯಾನ ಈ ಮಾತೆ ॥ ॥ ಜೀಜೀ ॥

॥ **ಪದಾ** ॥

ಮುಂಜೆಳೆದ್ದ ನನ್ನ ಮುಂದ ಹಾಯ್ದಳೊ ನೋಡಿ ಬಂದಾವ ಉರಿಚಳಿ ।
ರೂಪ ಚಂದ್ರನ ಕಳಿ ।
ಪ್ರೀತಿಲಿಂದ ಹಾತೊರೆದು ಬಂದೀನಿ ನೀ ನಿತ್ತs ಮಾತಾಡು ನನ್ನ
ಅರಗಿಳಿ ॥ ಜೀಜೀ ॥

ಹೆಸರ ನೇತ್ರಾ ನಡಸಣ್ಣ ನಡದರ ಬಳಿಕ್ಯಾಡಿದಂಗ ಬಾಳಿ ಸುಳಿ ।
ಕೊರಳ ತುಂಬ ಏಕುಳಿ ।
ಕರಣ ಬುಗಡಿ ಗಂಟಿ ಝುಮಿಕಿಮ್ಯಾಲ ಹಚ್ಚಿಸ್ಯಾಳ ನೋಡಿ ಸರ್ಪಳಿ ॥
॥ ಜೀಜೀ ॥

ನೆಲ್ಲಿ ಸರಾ ಕಾರಿಪಟಿಗಿ ಗೆಜ್ಜೆ ಟಕ್ಕಿ। ಸರಗಿ ಪದಕ ಸರದಾಳಿ ।
ಕಾಲಾಗಽ ಪಂಚೇರ ರುಳಿ ।
ಹತ್ತಿ ಒತ್ತಿನ ಶಿಸ್ತ ಕಾಣಸ್ತಾವ ಕೈಕಟ್ಟಿ ಬಂಗರದಬಳೀಽಽ ॥ ಜೀಜೀ ॥

ಇಳು ಉಟ್ಟ ಶಾಲ ಪಿತಾಂಬರ ದಟ್ಟೆನೀ ಉಟ್ಟೆ ।
ಕನ್ನಡಿ ಹಚ್ಚಿದ ಕುಬಸ ಜರಕಟ್ಟಿ ತಿಟಿಮೀಟಿ ।
ಕುಚ ಒತ್ತಿ ಬಂದಾವ ಹಸ್ತ ಹಚ್ಚಿ ನೋಡಲೇನ ಮುಟ್ಟಿ ॥ ಜೀಜೀ ॥

ಏರುದುರುಬ ಸುರಳಿ ಹೊಡದ ಕಟ್ಟಿ ರಾಗುಟಿ
ಉರ್ವಶೀ ರಂಬ್ಯಾರಂಗ ದಾಟಿ ಡೌಲಿಟ್ಟಿ ।
ಕೂನ ಇಲ್ದವರಂಗ ಮಾತಾಡದೆ ಮೂಗ ಮುರದ್ಹೊಂಟಿ ॥ ಜೀಜೀ ॥

ಹತ್ತ ಹನ್ನೆರಡು ವರುಷವಾಯಿತ ಹುಟ್ಟಿ ಹುಚ್ಚಾಟಿ
ನಾವು ನೀವು ಆಡೀವಿ ಮನಿಕಟ್ಟಿ
ಇತ್ತುರಾಟಿ ನೀ ಇಲ್ಲಂದ್ರ ನೀರಾಗೇ ಕೈಬಿಟ್ಟು॥ ॥ ಜೀಜೀ ॥

ಚೆದರಿ ಬೆದರಿ ಒಳೆ ಇದರಿಗೆ ನಿಂತಾಳೊ ಹೇಳತಾಳೊ
ಸುಗುಜ್ಯಾಣಾ ।
ಆಡಿ ನೋಡೊ ಹೈರಾಣಾ ।
ಪರ ಹೆಂಗಸರ ಸಹವಾಸ ಚಲೋದಲ್ಲಾ ತಿಳದನೋಡೊ
ಸುಗಣಬಾನಾ ।
ಏನಂದೋ ಶತಮೂರ್ಖಾ ಮನುಜಾ ನಿನಗ ಮನಿಯ್ಯಾಗ ಮಡದಿ
ಇಲ್ಲೆನೊ ।
ಪಡದ ಬಂದದ್ದು ಒಲ್ಲೇನೋ ।
ಕಂಡದ್ದಕೆಲ್ಲಾ ಕೈಹಾಕಿದನೆಂದರ ಅಂಗಡ್ಯಾಗ ಮಾರುವ ಬೆಲ್ಲೇನೊ ॥
॥ ಜೀಜೀ ॥

ಸೀತಾನ ಕಾಲಾಗ ರಾವಣ ಸತ್ತಾನೊ ಹಿಂದಾದ ಕಲ್ತೇನೋ
ಅದರ ಸುಖಾ ಬಲ್ಲೇನೋ ।
ಗಂಡ ಪುಂಡ ಕಡಿದ ತುಂಡ ಮಾಡಿ ನಿನ್ನ ಜೀವಾದ ರಸಿಕ
ಬಲ್ಲೆನೊ ॥ ॥ ಜೀಜೀ ॥

ಹೇ ಗಳಿಗಿ ಸುಖಕ ನೀವು ಮರುಳಾಗಿ ಬಿದ್ದಿರಿ ಸಹಸ್ರ ಜನ್ಮ ತಿರಗಿದೋ ।
ನಿನಗ ಬ್ಯಾಸರಿಲ್ಲೇನೋ ।
ಜ್ಞಾನಯೋಗಿ ಅಜ್ಞಾನ ಆದರ ಈ ಜಲ್ಮ ಹುಟ್ಟಿ ಸ್ವಾರ್ಥಕವೇನೋ ॥
॥ ಜೀಜೀ ॥

ಇಳು
ಅಲಲಾ ಹೆಣ್ಣ ಹೊಯಿಮಾಲಿ ಚ್ಯಾಮೂಲಿ
ನೀ ಎಲ್ಲಿ ಕಲ್ತ ಬಂದೆ ಸಾಲಿ । ಬಂಗಾಲಿ ।
ಇನಾs ಇಟ್ಟೆ ಇದ್ದಿನೀ ಎಲ್ಲಿ ಕಲ್ತೆ ಒಮ್ಮೆಲೆ ॥ ॥ ಜೀಜೀ ೧ ॥

ಕರಿತೀನಿ ಬಾಬಾ ಅನ್ನುತಲಿ ಸನ್ಮತಲಿ ।
ಇಬ್ಬರು ಕೂಡಿ ಇರೂನು ಅಂದದಲ್ಲಿ । ಗುಪ್ತದಲ್ಲಿ
ನೀ ಬಲ್ಲೇನಂದ್ರ ನಾ ಕೆಡಸ್ತೀನೆ ಜುಲ್ಮಲೆ ॥ ॥ ಜೀಜೀ ೨ ॥

ಶಿವ ಕೊಟ್ಟದೈತಿ ನಿನ್ನ ಬಲ್ಲಿ ಹಾಲಿ ಹಾಲಿ ।
ನೀ ಮಾಡಿಕೊಂಡಿಲ್ಲ ನಿನ್ನ ಕೈಲಿ ಹುಟಿತಲಿ
ನಾ ಎಷ್ಟ ಕೇಳಿದರ ಪರ ಉಪಕಾರ ಮಾಡವಲ್ಲಿ ॥ ॥ ಜೀಜೀ ೩ ॥

ಏರ ಕೂಡಪಲ್ಲ
ಮುಂಜೆಳೆದ್ದ ನನ್ನ ಮುಂದ ಹಾಯ್ದಲ್ಲೋ ನೋಡಿ ಬಂದಾವ ಉರಿ ಚಳಿ
ರೂಪ ಚಂದ್ರನ ಕಳಿ ।
ಪ್ರೀತಿಲಿಂದ ಹಾತೊರೆದು ಬಂದೀನಿ ನೀ ನಿತ್ತs ಮಾತಾಡs ನನ್ನ
ಅರಗಿಳಿ ॥ ॥ ಜೀಜೀ ॥ ಚೌಕ ೨ ॥

ಏರ
ಹೇ ಕಾಂತಿ ಅಂತಾಳ ಗುಣವಂತ ಕೇಳೊ ನೀ ಕಾಂತಾ ನಡಿಯೋ ಪರಬಾರಿ
ಹೋಗುವ ದಿನ ಕsರಿ ।
ದಾರಿ ಖರ್ಚಿಗಿ ತಗೊಂಡು ಬಾರೋ ಹೋಗೂನು ದೇಶಾವರಿ ॥
॥ ಜೀಜೀ ೧ ॥

ಭೂಮಿ ಸೀಮಿ ಎಲ್ಲಾ ಮಾರಿಕೊಂಡಾನೊ ಆಗಿ ನಿಂತಾನ ಉಸರಿ ।
ಅವಗ ತಗೊಂಡಿತ್ತ ಚಳಿರಿ ।
ರೋಕ ಚಾರ ಪಾಚ ಹಜಾರ ರೂಪಾಯಿ ತಗೊಂಡಾಳ ಸುಂದರಿ ॥
॥ ಜೀಜೀ ೨ ॥

ಹೇ ಭಾವ ಮೈದುನರ ಹೊಲಿ ಬಂದರ ನಡಿಯಲಾರೆ ಸಣ್ಣ ಪೋರಿ।
ಆಗಿ ನಿಂತಿನಿ ಉಸ್ತರಿ
ಅಡಿಚಗಣ್ಣಿನ ಕುದುರಿ ತಗೊಂಡು ಬಾ ಹೋಗೂನುರಾತೊರಾತರಿ ॥
॥ ಜೀಜೀ ೩ ॥

ಇಳುವು
ಲಗು ತಗೊಂಡು ಬಾರೊ ನೀ ಹುಡಿಕಿ । ತಡಿಹಾಕಿ।
ತಂದವಗ ಆಗತೀನಿ ಉಡಕಿ । ತಗೊ ಅಡಕಿ ।
ಇಲ್ಲಂದ್ರರ ಹರದಾಸಂದು ಹಾರಿಸಿ ಬಿಡತಿನಿ ಪಡಕಿ ॥ ॥ ಜೀಜೀ ೧ ॥

ಮುಳಸಾವಗಳಿ ಊರಾಗ ನಿಧಿ ಹಾಕಿ । ಬೇಡೊ ಹರಕಿ ।
ಗುರು ಸೋಫೆಸಾಹೇಬ ಬರದು ಬಲ್ಕಿ ಇತ್ತ ಹುಲ್ಕಿ ।
ಸಿದ್ಧಪ್ಪನ ನುಡಿಯ ಕೇಳಿ ವೈರಿ ನಿಂತಾನ ಉಸರ ಹಾಕಿ ॥ ಜೀಜೀ ॥

ಏರ ಮುಂಜೆಳೆದ್ದ ನನ್ನ ಮುಂದ ಹಾಯ್ದಳೊ ನೋಡಿ ಬಂದಾವ ಉರಿಚಲಿ
ಕೂಡಪಲ್ಲ ರೂಪಚಂದ್ರನ ಕಳಿ ।
ಪ್ರೀತಿಲಿಂದ ಹಾತೊರೆದು ಬಂದೀನಿ ನೀ ನಿತsಮಾತಾಡs ನನ್ನ
ಅರಗಿಳಿ ॥ ॥ ಜೀಜೀ ಚೌಕ ೨ ॥

ಏರ ಹೇ ಕಾಂತಿ ಅಂತಾಳ ಗುಣವಂತ ಕೇಳೊ ನೀ ಕಾಂತಾ ನಡಿಯೋ ಪರಬಾರಿ
ಹೋಗುವ ದಿನ ಕsರಿ ।
ದಾರಿ ಖರ್ಚಿಗಿ ತಗೊಂಡು ಬಾರೋ ಹೋಗೂನು ದೇಶಾವರಿ ॥
॥ ಜೀಜೀ ೧ ॥

ಭೂಮಿ ಸೀಮಿ ಎಲ್ಲಾ ಮಾರಿಕೊಂಡಾನೊ ಆಗಿ ನಿಂತಾನ ಉಸರಿ ।
ಅವಗ ತಗೊಂಡಿತ್ತ ಚಳಿರಿ ।
ರೋಕ ಚಾರ ಪಾಚ ಹರಾಜ ರೂಪಾಯಿ ತಗೊಂಡಾಳ ಸುಂದರಿ ॥
॥ ಜೀಜೀ ॥

ಹೇ ಭಾವ ಮೈದುನರ ಹೂಲಿ ಬಂದರ ನಡಿಯಲಾರೆ ಸಣ್ಣ ಪೋರಿ ।
ಆಗಿ ನಿಂತಿನಿ ಉಸ್ತರಿ
ಅಡಿಚಗಣ್ಣಿನ ಕುದುರಿ ತಗೊಂಡು ಬಾ ಹೋಗೂನುರಾತೋ ರಾತರಿ
॥ ಜೀಜೀ ೩ ॥

ಇಳು ಲಗು ತಗೊಂಡು ಬಾರೊ ನೀ ಹುಡಿಕಿ । ತಡಿಹಾಕಿ ॥
ತಂದವಗ ಆಗತೀನಿ ಉಡಕಿ । ತಗೊ ಅಡಕಿ ।
ಇಲ್ಲಂದರ ಹರದಾಸಂದು ಹಾರಿಸಿ ಬಿಡತಿನಿ ಪಡಕಿ ॥ ॥ ಜೀಜೀ ೧ ॥

ಮುಳಸಾವಳಗಿ ಊರಾಗ ನಿಧಿ ಹಾಕಿ । ಬೇಡೊ ಹರಕಿ ।
ಗುರು ಸೋಫೆಸಾಹೇಬ ಬರದು ಬಲ್ಕಿ ಇತ್ತ ಹುಲ್ಕಿ ।
ಸಿದ್ದಪ್ಪನ ನುಡಿಯ ಕೇಳಿ ವೈರಿ ನಿಂತಾನ ಉಸರ ಹಾಕಿ ॥ ಜೀಜೀ ॥

ಏರ ಮುಂಜೆಳೆದ್ದ ನನ್ನ ಮುಂದ ಹಾಯ್ದಳೊ ನೋಡಿ ಬಂದಾವ ಉರಿಚಲಿ
ಕೂಡಪಲ್ಲ ರೂಪ ಚಂದ್ರನ ಕಳಿ
ಪ್ರೀತಿಲಿಂದ ಹಾತೊರೆದು ಬಂದೀನಿ ನೀ ನಿತ್ತs ಮಾತಾಡs ನನ್ನ
ಅರಗಿಳಿ ॥ ॥ ಜೀಜೀ ಚೌಕ ೩ ॥

ಅತ್ತಿನ ಕೊಲ್ಲುವ ಭೇತ ಮಾಡ್ಯಾಳ

ಅತ್ತಿ ಮನಿಗಿ ಸೊಸಿ ನಡಿಲಾಕ ಬಂದಾಳೊ ಪ್ರೀತಿ ಬಾಳ್ವೆ ಮಾಡುದಕ
ಅತ್ತಿನ ಕೊಲ್ಲುವ ಭೇತ ಮಾಡ್ಯಾಳ ಆಕಿ
ಮನಿ ವೈವಾಟ ಮಾಡಿಕೊಳ್ಳುದಕ ॥ ॥ ಜೀಜೀ ॥

ಎಪ್ಪತ್ತ ವರುಷದ ಮುಪ್ಪಾನ ಮುದುಕಿ ಕೊಟಿಗ್ಯಾಗ ಕುಂತಾಳ
ನೂಲುದಕ ।
ಐದು ತಾಸ ಹೊತ್ತೇರಿ ಮನಿಯಾಗ ಯಾರಿಲ್ಲಾ
ಮಗಾ ಉಂಡ ಹೋದನ ಹೊಲಕ ॥ ॥ ಜೀಜೀ ॥

ಸೊಸಿಯ ಹರಿಕಿ ಕೈಗೂಡಿ ಬಂದಿತ
ಹೋಗ್ಯಾಳ ಅತ್ತಿಯ ಹಂತ್ಯಾಕ ।
ಹೊರಗ ಅಂಗಾತ ಕೆಡವಿ ಎದಿಯ ಮ್ಯಾಲ ಕುಂತಾಳ ಆಕ್ಷಣಕ ॥
॥ ಜೀಜೀ ॥

ಯಾಕ ನನ್ನ ಸೊಸಿ ಹಿಂಗ್ಯಾಕ ಬಂದಿ ಎನ್ನ ಜೀವನೀ ಕೊಲ್ಲುದಕ ।
ಕೊಲ್ಲಬ್ಯಾಡ ನಿನ್ನ ಕಾಲಬೀಳತೀನಿ
ಜಿಂದಗಾನಿ ಕುಡತಿನಿ ವೈವಾಟಕ ॥ ॥ ಜೀಜೀ ॥

ಎಷ್ಟ ಹೇಳಿದರ ಬರಲಿಲ್ಲ ಎದರ ನಿಂತಾಳೊ ತಲಿ ಹೊಡೆಯುದಕ ।
ಬಾಯಿಯಾಗ ಕೂಗತಾಳಂತ ಬಾಯಿ ತುಂಬ ಅರಳಿ ತುರಕ್ಯಾಳ
ಗಂಟಲ ತನಕಾ ॥ ॥ ಜೀಜೀ ॥

ತಡಾ ಮಾಡಲಿಲ್ಲ ಒಣಕಿ ತಗೊಂಡು ನಿಂತಾಳ ತಲಿಯ
ಹೊಡೆಯುದಕ ।
ಮುದಕಿ ಪ್ರಾಣ ಉಳದ ಬಂದಿತೊ
ಹೊಲದಿಂದ ಮಗ ಬಂದ ಮಧ್ಯಾನ್ಹಕ ॥ ॥ ಜೀಜೀ ॥

ಇಳು ಗಂಡ ಬಂದ ಸಪ್ಪಳ ಕೇಳ್ಯಾಳ ।
ಒಣಕಿ ಇಟ್ಟು ಹೊರಗೆ ಬಂದಾಳ ॥ ॥ ಜೀಜೀ ॥

ಗಂಡನ ಮುಂದ ತೋಡಿ ಹೇಳತಾಳ
ಅತ್ತಿ ಕಳವಿನೊಳಗ ಸಿಕ್ಕಾಳ
ನಿತ್ಯ ಸೇರ ತಿಂತಾಳ
ಈಗ ಸದ್ಯಕ ಕೋಲ್ಯಾಗ ಹಾಳ ॥ ॥ ಜೀಜೀ ॥

ಏರು ಕೋಲಿ ಹೊಕ್ಕು ಮಗಾ ತಾಯಿನ್ನ ನೋಡತಾನ
ಮುದಿಕಿ ಬಂದಿತ್ತರಿ ನಿರಜೀವಕ ।

ಕೂಡಪಲ್ಲ ಅತ್ತಿನ ಕೊಲ್ಲುವ ಭೇತ ಮಾಡ್ಯಾಳ ಮನೆ ವೈವಾಟ
ಮಾಡಿಕೊಳ್ಳುದಕ ॥ ॥ ಜೀಜೀ ಚೌಕ ೧ ॥

ಮಗನ ಕಂಡು ತಾಯಿ ಕೈಸೊನ್ನಿ ಮಾಡತಾಳ
ಅರಳಿ ಸಿಕ್ಕಾದ ಗಂಟಲದಾಗ ।
ತಾಯಿ ಆಡಿದ ಸೊನ್ನಿ ಮಗನಿಗೆ ತಿಳಿಯಲಿಲ್ಲ
ಹೆಂಡತಿ ಕೇಳತಾನ ಆವಾಗ ॥ ॥ ಜೀಜೀ ॥

ಹೆಂಡತಿ ಹೇಳತಾಳ ಇನ್ನಿಷ್ಟು ತುರಕಂತಾಳ ಅತ್ತಿ ಬಾಯಾಗ ।
ಕಳ ನನ್ನ ಸವತಿ ಹಾಳ ಮಾಡತಾಳ
ಹೊತ್ತು ವೈದು ಒಗಿರಿ ಬಾಯಾಗ ॥ ॥ ಜೀಜೀ ॥

ಆಗ ತನ್ನ ಹೆಂಡತಿಯ ಮಾತ ಕೇಳಿ
ಪಡಚಿ ಕಟ್ಟಿದ ನೋಡ್ರಿ ಕಂಬಳ್ಯಾಗ ।
ಬಡಾ ಬಡಾ ಹೊತ್ತಗೊಂಡ ಆದಾನ
ವೈದು ಒಗದ ಬಂದ ನೋಡ್ರಿ ಬಾಯ್ಯಾಗ ॥ ॥ ಜೀಜೀ ॥

ಮುದುಕಿ ಮಾಡಿದ ಪುಣ್ಯ ಉಳಿದ ಬಂದಿತೊ
ಮಹಾದೇವ ಬಂದಾನ ಅವಾ ಬೇಗ ।
ಬಾಂಯ್ಯಾನ ಮುದುಕಿನ ಕಡಿಯಾಕ ತಗೆದು
ಹಂಚಿಕಿ ಹೇಳತಾನ ಮುದುಕೀಗ ॥ ॥ ಜೀಜೀ ॥

ನಿನ್ನ ಹೊಟ್ಟಿ ಮಗಾ ನಿನಗ ಮುನಿದಾನವ್ವಾ
ನೀನು ಹೋಗಬ್ಯಾಡ ನಿಮ್ಮನೀಗ ।
ಕೊಡಪನ ಹೊನ್ನ ಕುಡತೀನಿ ರಗಡ
ನೀ ಮುರಸಿಗೊಂಡು ತಿನ್ನಹೋಗ ಅಡಿವ್ಯಾಗ ॥ ॥ ಜೀಜೀ ॥

ಇಳುವು ಶಿವಾ ಕೊಟ್ಟ ಹೋದ ಆವಾಗ
ಮುದುಕಿ ಹಾಕ್ಯಾಳ ಮನದಾಗ ॥ ॥ ಜೀಜೀ ॥

ಕುಡಬೇಕ ವೈದ ನನ್ನ ಮಗನೀಗ ।
ಶ್ರೀಮಂತ ಆಗಲಿ ಊರಾಗ ॥ ॥ ಜೀಜೀ ॥

ಹೊತಗೊಂಡ ಹೊಂಟಾಳ ಓಣ್ಯಾಗ ।
ಸೊಸಿ ಕಂಡು ಹೇಳತಾಳ ಗಂಡಗ ॥ ॥ ಜೀಜೀ ॥

ಅತ್ತಿ ದೆವ್ವ ಆಗಿ ಬಂದಾಳೀಗ ।
ಹೊಡಿರಿ ಕರಕೊಂಡು ಬೀಳಲಿಬೇಗ ॥ ಜೀಜೀ ॥

ಏರು ಅತ್ತೀ ಹೋದುದು ಸೊಸಿ ಬಿಡಸಗೊಂಡ ನೀ ಎಲ್ಲಿ
ತಂದೀದಿ ಹೇಳಬೇಕ ।

ಕೂಡಪಲ್ಲ ಅತ್ತೀನ ಕೊಲ್ಲುವ ಭೇತ ಮಾಡ್ಯಾಳಾಕಿ ಮನಿ ವೈವಾಟ
ಮಾಡಿಕೊಳ್ಳುದಕ ॥ ॥ ಜೀಜೀ ಚೌಕ ೨ ॥

ಏನ ಹೇಳಲಿ ಸೊಸಿ ವಿಚಿತ್ರ ಸುದ್ದಿ ನಾ ಇದ್ದೆ ಅಡವಿ ಬಾಂಯಾಗ ।
ಕುಡುಪನ ಹೊನ್ನ ರಗಡ ಬಾಂಯಾಗ
ಅತ್ತಿನ್ನ ವಗದ ಬಾಂಯಾಗ ನನ್ನ ಒಗದ ಬಾ ಜಾಳಿಗಿ ತುಂಬ
ಬಳಕೊಂಡ ಬರತೀನಿ ದೈವುಳ್ಳವರು ಆಗೂನು ಊರಾಗ ॥
॥ ಜೀಜೀ ॥

ಆಗ ತನ್ನ ಹೆಂಡತಿಯ ಮಾತು ಕೇಳಿ
ಪಡಚಿ ಕಟ್ಯಾನ ಕಂಬಳ್ಯಾಗ ।
ಬಡಬಡ ಹೊತಗೊಂಡು ಆರ್‍ಯಾಣಕ್ಕೊಯಿದು
ಬಿರಸಿಲೆ ಒಗದ ನೋಡ್ರಿ ಬಾಯಾಗ ॥ ॥ ಜೀಜೀ ॥

ಮುಳಗಿದ ನಾರಿ ಮೇಲಕ್ಕೇಳಲಿಲ್ಲ ತಾಯಿನ ಕೇಳತಾನ ಆವಾಗ ।
ತಾಯಿ ಹೇಳತಾಳ ಹೊನ್ನ ಬಳಿಯತಾಳ
ಗುರುಳಿ ಏಳತಾವ ನೀರೊಳಗ ॥ ॥ ಜೀಜೀ ॥

ಇಳು ಮೂರ ದಿನದ ಮ್ಯಾಲ ನೋಡ್ಯಾನಲ್ಲಾ ।
ಹೆಣಾ ಆಗಿ ಬಂತ್ರಿಕಾಲ ಮೇಲಾ ॥ ॥ ಜೀಜೀ ॥

ತಾಯಿಗಿ ಮಗಾ ಕೇಳ್ಯಾನಲ್ಲಾ ।
ಎವ್ವಾ ಹೆಂಡತಿ ಜೀವಾ ಇಲ್ಲಾ ॥ ॥ ಜೀಜೀ ॥

ಮತ್ತೊಂದ ಮದವಿ ಮಾಡ್ಯಾಳಲ್ಲಾ
ಕರ್ಮ ಅಂಬುದು ಜಯವಾಗಲಿಲ್ಲ
ಧರ್ಮ ಅಂಬುದು ಜಯವಾಯಿತಲ್ಲಾ
ಮುಳಸಾವಳಗಿ ಕಲಾಸ ಬಲ್ಲಾ ॥ ॥ ಜೀಜೀ ॥

ಏರು ಕವಿ ಮಡಿವಾಳ ಹಿಂಗ ಪದಗಳ ಹಾಡಿದರ
ಮೂಡಿದಂಗ ರವಿ ಗಗನಕ।

ಕೂಡುಪಲ್ಲ ಅತ್ತಿನ ಕೊಲ್ಲುಬೇತ ಮಾಡ್ಯಾಳ ಮನಿ ವೈವಾಟ ಮಾಡಿಕೊಳ್ಳುದಕ॥
॥ ಜೀಜೀ ಚೌಕ ೩ ॥

ಶ್ರವಣಕುಮಾರ

ಕಲ್ಪಿಕಿದೊಳಗಿನ ಕರ್ಮ ಹೆಚ್ಚಿತೊ ಕೆಟ್ಟ ಹೋಯಿತು ಭವನಾ ।
ಯಾರು ಕಾಣಲಿಲ್ಲೊ ಶಿವನಾ
ಹೆಣ್ಣಗಂಡ ಎರಡು ನೀತಿ ನೀತಿ ಪದಗಳ್ಹಾಡಿ ಕೆಡಸ್ಯಾರ ಸಾಧುರನಾ ॥
॥ ಜೀಜೀ ॥

ಸಾಧು ಅನಬೇಕ ಶ್ರೀ ಶ್ರಾವಣಗ ಕೇಳರಿ ಸತ್ಯ ವಚನಾ
ಭಾವಕ ಒಲಿತಿದ್ದ ಭಗವಾನಾ ।
ನಿತ್ಯ ಕಾಲದಲ್ಲಿ ತಾಯಿತಂದಿ ಪೂಜೆ ಮಾಡತಿದ್ದ ಶರಣಾ ॥ ॥ ಜೀಜೀ ॥

ಶ್ರಾವಣನ ತಾಯಿ ತಂದಿ ಕುರುಡರೊ ಕಾಣುತ್ತಿದ್ದಿಲ್ಲ ಕಣ್ಣಾ
ಚಿಂತಿಯೊಳಗ ಆಡಿ ಕುಂತಾರ ಸಣ್ಣಾ ।
ಇಲ್ಲೆ ಕುಂತರ ಇನ್ನೇನು ಫಲಾ ಅಂತಾ ತಗದಾರ ಯೋಚನಾ ॥ ಜೀಜೀ ॥

ತಾಯಿ ತಂದಿ ಕೂಡಿ ಮಗಾ ಶ್ರಾವಣಗ ಕರದಾರ ಒಂದಿನಾ ।
ಕರೆದು ಕೇಳತ್ತಾರ ಅವನಾ ।
ಕಾಶೀ ಜಾತ್ರೆ ಮಾಡಬೇಕಂತಿವಿ ತೋರಿಸು ನಮ್ಮನ್ನ ॥ ಜೀಜೀ ॥

ತಾಯಿ ತಂದಿ ಮಾತ ಕೇಳಿ ಶ್ರಾವಣ ಕುಂದ್ರಸ್ಯಾನೊ ತಾನಾ ।
ಕಾವಡಿ ಹೊತ್ತಾನ ಇಬ್ಬರನಾ ।
ತಾಯಿ ತಂದಿಗಿ ತಗೊಂಡ ಶ್ರಾವಣ ಕಾಶೀಗಿ ನಡದಾನ ॥ ಜೀಜೀ ॥

ಇಳು ಕೈಲಾಸದೊಳಗ ಮಾತಾಡತಿದ್ದರು ಏನೇನ ।
ಅಲ್ಲಿ ಕೂಡಿ ಪಾರವತಿ ಶಿವನಾ ॥ ॥ ಜೀಜೀ ॥

ಕಾವಡಿ ಹೊತ್ತು ಬರತಾನೊ ಈಗ ಶ್ರಾವಣ
ಅವನ ಜಾಗ ಮಾಡಬೇಕ ಹಸನಾ ।
ಹಕ್ಕಿಪಕ್ಕಿ ಮಜಲ ಮಾಡಿ ಹೇಳ್ಯಾವ ಆ ದಿನಾ ॥
ನೀ ತಿರಗಿ ಹೋಗು ಶ್ರಾವಣಾ ॥ ॥ ಜೀಜೀ ॥

ಶ್ರಾವಣ ಅಂತಾನ ತಾಯಿ ತಂದಿಗಿ ಕೊಟ್ಟಿನಿ ವಚನಾ ।
ನಾ ತಿರಗಿ ಹೋಗುದಿಲ್ಲ ಇನ್ನಾ ॥ ॥ ಜೀಜೀ ॥

ಏರು ಹಕ್ಕಿ ಪಕ್ಕಿ ಮಿರಗ ಜಾತಿ ಮೊದಲ ಮಾಡಿ ಹೇಳ್ಯಾವ ಆ ದಿನಾ ।
ಕಾಳ ಕವಡಗಿ ಬಂತರಿ ಮರಣಾ ।
ಕೂಡಪಲ್ಲ ಹೆಣ್ಣ ಗಂಡ ಎರಡು ನೀತಿ ಪದಾಹಾಡಿ ಕೆಡಸ್ಯಾರ ಸಾಧುರನಾ ॥
॥ ಜೀಜೀ ಚೌಕ ೧ ॥

ಯಾರ ಹೇಳಿದರ ಕೇಳಿಲಿಲ್ಲ ಶ್ರಾವಣ ಕಾಂತಾರದಡಿವ್ಯಾಗ ।
ಕಾವಡಿ ಇತ್ತೊ ಹೆಗಲ ಮ್ಯಾಗ ।
ನಿಂದ್ರದ ಕುಂದ್ರದ ಅವ ದಡದಡ ಹೋಗುತ್ತಿದ್ದ ರಾಮಸ್ಮರಣ್ಯಾಗ ॥
ನಡುದಾರ್‍ಯಾಗ ಹೋಗಿ ಒದರಿ ಕೇಳತಾರ ಮಗ ಶ್ರಾವಣಗ ।
ನೀರಡಿಕಿ ಬಾಳ ಆಯಿತರಿ ನಮಗ ।
ವ್ಯರ್ಥ ಸಾಯಿತೀವಿ ತುರ್ತ ನೀರ ತಂದು ಕುಡಿಸಬೇಕ ನಮಗ ॥
॥ ಜೀಜೀ ॥

ತಾಯಿ ತಂದಿ ಹಿಂಗ ವ್ಯರ್ಥ ಸಾಯತಾರ ತಿಳದ ಮನಸ್ಸನ್ಯಾಗ ।
ಹೂಜಿಯ ತಗೊಂಡ ಕೈಯಾಗ ।
ಶಿವನ ಹವಾಲಿ ಮಾಡುತ ನಡದಾನ ಕಾಂತರದ ಅಡಿವ್ಯಾಗ ॥ ಜೀಜೀ ॥

ಇಳು ಕೈಯಾಗ ಹೂಜಿಯ ತಕ್ಕೊಂಡು ದಾರಿಯ ಹಿಡಿದಾನೋ
ತಿರಗಿ ತಿರಗಿ ಹೊರಳಿ ನೋಡುವನೋ
ಕೂನ ತಪ್ಪಿತಂತ ಕಲ್ಲ ಮುಳ್ಳ ಗುರ್ತ ಮಾಡುವನೋ
ಹುಲಿಗಿ ಕರಡಿಗಿ ಹೇಳತಾನ ನೆದರಿಡಬೇಡಿರಿ ನೀನೋ
ತಾಯಿ ತಂದಿಗಿ ನೀರ ತಂದು ಕುಡುಸತಿನೋ ॥ ಜೀಜೀ ॥

ಏರು ಮೃಗಜಾತಿ ಎಲ್ಲ ಹೇಳತಾವ ನೀರಿನ ಆಶೆ ಬ್ಯಾಡೊ ನೀನಾ ।
ನೀ ತಿರಗಿ ಹೋಗೊ ಶ್ರಾವಣಾ

ಕೂಡಪಲ್ಲ ಗಂಡ ಎರಡು ನೀತಿ ಪದಗಳ್ಹಾಡಿ ಕೆಡಿಸ್ಯಾರೊ ಸಾಧುರನಾ ॥
॥ ಜೀಜೀ ಚೌಕ ೨ ॥

ಹುಲಿ ಕರಡಿ ಅಡ್ಡ ಬಿದ್ದ ಹೇಳತಾವ ನೀರಿನ ಹೈರಾಣ ।
ನಮ್ಮ ಮಾತು ನೀವು ಕೇಳರಿ ಶರಣಾ ।
ಕೆಟ್ಟ ಘಾತಕ ದಶರಥ ಅಂಬಾವ ಹಗಲೆಲ್ಲಾ ಕೇರಿಯ ಕಾಯತಾನಾ ॥
॥ ಜೀಜೀ ॥

ನಮಗ ಸದ್ಯಕ ನೀರ ಕುಡುದಿಲ್ಲಲ್ಲಾ ಹೊಡಿತಾನ ಒಂದೇ ಸವನಾ ।
ಹಿಂತಾ ಪಾಪಿಷ್ಟ ಅಂವಾ ಅದಾನ ।
ನೀವು ಅಲ್ಲಿ ತನಾ ಹೋದರ ತಿಳಿತಾದರಿ ವರ್ತಮಾನಾ ॥ ಜೀಜೀ ॥

ಶ್ರಾವಣ ಎದಿ ಒಡೆದು ಅಂತಾನ ಹೆಂತಾ ಬೈಮಾನಾ ।
ಇದಕ ಏನು ಮಾಡಬೇಕು ಯೋಚನಾ
ತಾಯಿ ತಂದಿಗಿಂತ ಜನ್ಮ ಹೆಚ್ಚಿಂದಲ್ಲಾ ಹೋಗಲಿ ನನ್ನ ಪ್ರಾಣಾ ॥
॥ ಜೀಜೀ ॥

ಇಷ್ಟ ಗಟ್ಟಿ ಮನಸ ಮಾಡಿ ಶ್ರಾವಣ ದಾರಿ ಹಿಡದಾನ ।
ಹಂಗೆ ತಿರಗಿ ತಿರಗಿ ನೋಡತಾನ ।
ಕಲ್ಲ ಮುಳ್ಳ ತುಳಕೋತ ನಡದಾನ ಕಬರಿಲ್ಲ ಏನೇನಾ ॥ ಜೀಜೀ ॥

ಇಳು ಕೂನ ತಪ್ಪಿತಂಥ ಕಲ್ಲ ಮುಳ್ಳ ಕೂನ ಮಾಡುವನೊ
ಹುಲ್ಲಿ ಹುಲ್ಲಗಿ ಗಂಟ ಹಾಕುವನೊ ॥ ॥ ಜೀಜೀ ॥

ಎಲ್ಲಾ ಹಕ್ಕಿ ಪಕ್ಕಿಗಿ ಒದರಿ ಅಂವಾ ಹೇಳತಾನೊ
ನಮ್ಮ ತಾಯಿ ತಂದಿಗಿ ಮಾಡ್ರಿ ಜೋಪನಾ ॥ ॥ ಜೀಜೀ ॥

ದೂರದಿಂದ ನೋಡಿದ ನೀರ ಕಾಣಸತಿತ್ತೊ ಒಂದೇ ಸವನೊ
ಮನಸನ್ಯಾಗ ಹುರುಪ ಆಗ್ಯಾನೊ ॥ ॥ ಜೀಜೀ ॥

ತಾಯಿ ತಂದಿಗಿ ಕುಡಿಸಿ ಹಿಂದಾಗಡಿ ನಾನು ಕುಡಿಯಬೇಕು ಅಂತಾನೊ ।
ನೀರ ತುಂಬುದರೊಳಗ ಸಪ್ಪಳಾಯಿತು ಹೂಜವನಾ ॥ ॥ ಜೀಜೀ ॥

ದಶರಥಗ ಬಂತು ಅನುಮಾನೊ
ಬಿಲ್ಲ ಟಂಗೇರಿಸಿ ಹೊಡದಾನ ಬಾಣವನೊ
ಬಾಣ ಬಡಿದು ಬಿದ್ದ ಶ್ರಾವಣನೊ ॥ ॥ ಜೀಜೀ ॥

ಏರು ಕೆರಿಯ ದಂಡಿ ಮ್ಯಾಲ ಬಿದ್ದ ಹೊರಳ್ಯಾಡತಾನ ತರಚಿದಂತೆ ಮೀನಾ
ಪಕ್ಕ ಪಕ್ಕ ಮುಕ್ಕ ತಿದ್ದ ಮಣ್ಣ।

ಕೂಡಪಲ್ಲ ಹೆಣ್ಣ ಗಂಡ ಎರಡು ನೀತಿ ಪದಗಳ್ಹಾಡಿ ಕೆಡಸ್ಯಾರ ಸಾಧುರನಾ ॥
॥ ಜೀಜೀ ಚೌಕ ೩ ॥

ಬಾಣದ ಪೆಟ್ಟಿಗಿ ಏನ ಘಾತ ಮಾಡಿದಿ ಅಂತಾನ ಶ್ರಾವಣಾ ।
ತಾಯಿ ತಂದದು ಕೊಂದೊ ಪ್ರಾಣಾ ।
ನೀರಡಿಸಿ ಇನ್ನು ಉಳಿಯುವುದಿಲ್ಲಾ ಮಾಡಿದೊ ಹೈರಾಣಾ ॥ ಜೀಜೀ ॥

ಇಷ್ಟ ಕೇಳಿ ದಶರಥ ಕಣ್ಣೀರ ಸುರಸ್ಯಾನ
ಏನ ಯೋಚನಾ ಮಾಡಬೇಕು ನಾನಾ ।
ಅವರಿಗೆ ಒಯ್ದು ನೀರ ಕುಡಿಸಿ ಬರತೀನಿ ಅಂತಾನ ॥ ಜೀಜೀ ॥

ಇಷ್ಟ ಕೇಳಿ ಶ್ರಾವಣನ ಮನದಾಗ ಆಯಿತೊ ಸಮಾಧಾನ
ಅವನ ಕೈಯಾಗ ಹೂಜಿ ಕೊಟ್ಟಾನ ।
ದಶರಥ ಗಿಡದ ಬಲ್ಲಿ ಹೋಗಿ ಕಣ್ಣೀರ ಸುರಶ್ಯಾನ ॥ ಜೀಜೀ ॥

ಕಾಲ ಸಪ್ಪಳ ಕೇಳಿ ತಾಯಿ ತಂದಿ ಬಂದನೇನು ಶ್ರಾವಣಾ ।
ಗಡಾನೆ ನೀರ ತಂದು ಕೊಡುವೊ ನೀನ
ಇಷ್ಟ ಕೇಳಿ ದಸರಥ ಅಡ್ಡ ಬಿದ್ದಾ ಅವರಿಗೆ ಅಂತಾನಾ ॥ ಜೀಜೀ ॥

ದಸರಥ ಕೈ ಮುಗದ ಕೇಳತಾನ ಸತಿ ಪತಿ ಇಬ್ಬರನಾ
ಶ್ರಾವಣನ ಕೊಂದಿನ ನಾನ ।
ನನ್ನ ಕರ್ಮ ನಾ ತೊಳಿ ಬೇಕಾಗೆದ ಇನ್ನೇನು ಯೋಚನಾ॥ ಜೀಜೀ ॥

ತಾಯಿ ತಂದಿ ಕೂಡಿ ದಶರಥಗ ಕೇಳತಾರೊ ಹ್ಯಾಂಗ ಕೊಂದೊ ನೀನಾ ।
ಏನಾದಿದ್ದು ಹೇಳು ವರ್ತನಾ ।
ಕೆರಿ ದಂಡಿ ಮ್ಯಾಲ ಒಬ್ಬ ಶರಣನ ಕೊಂದರ ನಿನಗ ಆಗ ತಾವಂತ
ಹೇಳಿದರು ಸಂತಾನ ॥ ॥ ಜೀಜೀ ॥

ಇಳು ಇಷ್ಟು ಕೇಳಿ ತಾಯಿ ತಂದಿಯು ಬಂದುವಪ್ಪಾ ಕಣ್ಣಾ ।
ಅವರು ಮಾಡತಾರ ಶಿವನ ಧ್ಯಾನ ॥ ಜೀಜೀ ॥

ಆ ಶರಣಿ ಶರಣರು ಕೂಡಿ ದಶರಥಗ ಅಂತಾನಾ
ನಿನ್ನ ಮಗಾ ವನವಾಸ ಮಾಡತಾನ ॥ ॥ ಜೀಜೀ ॥

ಅವs ವನವಾಸಕ ಹೋದಾಗ ಆಗಬೇಕು ನಿನ್ನ ಮರಣಾ
ಅವs ಹಾಕಬಾರದು ನಿನಗ ಮಣ್ಣಾ॥ ॥ ಜೀಜೀ ॥

ಇಷ್ಟ ಕೇಳಿ ದಶರಥ ಚಿಂತಿ ಮಾಡತಾನ
ಇದು ಏನ ಬಂತು ಹೈರಾಣ ॥ ॥ ಜೀಜೀ ॥

ಏರು ಸಿಂದಗಿ ತಾಲೂಕ ಮುಳಸಾವಳಗಿ ಕಲ್ಗಿಯದ ವಾಯನಾ ।
ಬಸವಂತ ಹಿಂಗ ಹೇಳ್ಯಾನ
ಕೂಡಪಲ್ಲ ಹೆಣ್ಣ ಗಂಡ ಎರಡು ನೀಡಿ ಪದಗಳ್ಹಾಡಿ ಕೆಡಸ್ಯಾನ ಸಾಧುರನಾ ॥
॥ ಜೀಜೀ ಚೌಕ ೪ ॥

ಮಲ್ಲಿಗ್ಹೂವಿನಂತ ಹೆಣ್ಣ ॥ ಪದಾ ॥

ಮಲ್ಲಿಗ್ಹೂವಿನಂಥ ಹೆಣ್ಣ ಮಯ್ ಬಣ್ಣ ನಿಂಬಿ ಹಣ್ಣ
ರೂಪ ರಂಬಿ ಪಾತರಕಿನ್ನ ಮಿಗಲೆ ।
ಪೃಥ್ವಿ ಬಿಟ್ಟ ಸೂರ್ಯ ಇಳಿದಂಗಾಯಿತ ಮೂಗಲ್ ।
ಇಷ್ಟು ಕೇಳಿ ಎನ್ನ ಎದಿ ಭುಗಿ ಭುಗಿಲ್ ।
ಎಪ್ಪಾ ಕನಸ ಅಲ್ಲಾ ಕಾಣಾಽ ಕಾಣಾ ಹಗಲ್ ।
ರಾಜ ಬೀದಿಯೊಳಗ ಹಾಯ್ದು ಮೋಜ ಮಾಡಕೋತ
ಮಾತನಾಡಿದರ ಸ್ವರಾ ಸಣ್ಣ ಕೋಗಿಲ್ ॥ ॥ ಜೀಜೀ ॥ ಪಲ್ಲ ॥

ಏರ ಹವಳ ತುಟಿ ಹಲ್ಲ ಸಣ್ಣ ಗಲ್ಲ ತಿಳಪ ಕೂಡಿದ ಹುಬ್ಬ
ಕುಂಕುಮ ಹಚ್ಚಿ ಕೊರದಾಳಪಾಽ ಅಸಲ್ ।
ಹೊತ್ತು ಹೊಂಡು ಮುಂದ ಬಿದ್ದಂಗೆಳಿ ಬಿಸಲ್ ।
ಶುದ್ಧ ಸೂತ್ರ ಗೊಂಬಿಕಿಂತಾ ನಾರಿ ಮೀಸಲ್ ।
ಇಷ್ಟು ವಾರಿ ಗೆಳೆತೇಯರೊಳಗ ನಾರಿ ಅಸಲ್ ।
ಮರ್ತ್ಯದೊಳಗ ಹುಟ್ಟಿ ಬಂದು ಇಂಥಾ ಸತಿ
ಇರಬೇಕೆಂದು ಬೇಡಿಬಂದಿಲ್ಲ ಕೋಡಿ ನಮ್ಮ ತಾಸಿಲ್ ॥ ಜೀಜೀ ॥

ಚಪ್ಪನಾರು ದೇಶದೊಳಗ ತಪ್ಪಿ ಹುಟ್ಯಾಳಪ್ಪಾ
ಇಂಥಾ ಸುಂದರೂಪ ಎಂದು ನಾನು ನೋಡಿಲ್ ।
ಯಾಕೋ ನೋಡಿದಿಂದ ನನ್ನ ಜೀವಕ ಪಾಡಿಲ್ ।
ನಮ್ಮ ಹಿರಿಯರು ಇಂಥಾ ಕನ್ಯೆ ತಗದ ಮಾಡಿಲ್ ।
ನಾ ಪೂರ್ವದಲ್ಲಿ ಬೇಡಿ ಬಂದಿದ್ದು ಕೂಡಿಲ್
ರೂಪ ನೋಡಿದರ ಕಣ್ಣಿಗಿ ಕೋಲಾಮಿಂಚ ಹೊಡದಂಗಾಗಿ
ಕತ್ತರಿಸಿ ಹಾಯ್ದೆ ಕಟ್ಟಿಽಗಿ ದಿಗ್ ದಿಗಲ್ ॥ ॥ ಜೀಜೀ ॥

ಇಳು ಝುಗ ಝುಗಿಸುತ ಪಿತಾಂಬರ ಜ್ಯೋತಿ ।
ನಡಾ ಏನ ಹತ್ತಿ ತೋಳಿನೊಳಗ ಒತ್ತಿ ।
ಕಣಾ ಜರತಾರಿ । ಕುಬಸ ಕನಡಿಯೋ ॥ ॥ ಜೀಜೀ ॥

ಕುಚ ಒತ್ತಿ ಬಂದಾವ ಚಿಟಲಿಂಬಿ । ಕಾಯಿಹಂಗ ತುಂಬಿ ।
ಹಿಚಕತಿನಿ ರಂಬಿ । ಚಿತ್ರದಾನ ಗೊಂಬಿ ।
ಸ್ವಲ್ಪ ನೀ ತಡಿಯೇ ॥ ॥ ಜೀಜೀ ॥

ಮಿಗಲ್ = ಹೆಚ್ಚಿನದು, ಶ್ರೇಷ್ಠ
ಮೂಗಲ್ = ಆಕಾಶ
ಮೋಜ = ಹುಡುಕಾಟಿಕೆ
ತಿಳಪ = ಸಣ್ಣ
ಮೀಸಲ್ = ಪರಿಶುದ್ಧ, ಅಪ್ಪಟ
ವಾರಿಗೆಳತೇರ = ಸಮ ವಯಸ್ಸಿನ
ಅಸಲ್ = ಶ್ರೇಷ್ಠ
ಕೋಡಿ = ಸತದೃಷ್ಠ
ತಾಸಿಲ್ = ಹಣೆಬರಹ
ಚಪ್ಪನ್ನಾರ = ಐವತ್ತಾರು
ಹತ್ತಿ = ಸಣ್ಣ
ಪಾಡಿಲ್ = ಆರಾಮವಿಲ್ಲ
ತಗದ = ಹುಡುಕಾಡಿ
ಕೂಡಿಲ್ = ಕೈವಶವಾಗಿಲ್ಲ
ಕತ್ತರಿಸಿ = ಕಣ್ಣಿಗಿ ಕತ್ತಲ ಬರು
ನಡಾ = ಸೊಂಟ

ಕಾಮನಬಾದಿ ತಾಳಲಾರೆ । ಕೋಪ ಬಾಳ ನಿಂದು
ಸಿಟ್ಟು ಬಂದರೆ ಒಂದೆರಡು ಬಡಿಯೇ ॥ ॥ ಜೀಜೀ ॥

ಏರ ರಮನೀ ನಿನ್ನದಸಿಂದ ಬ್ರಮಿಗೊಂಡಂಗ
ನಾ ಹುಚ್ಚ ಹಿಡದ ತಿರಗತೀನಿ ಭೂಮಿಮಂಡಲ್
ನೀ ಚೇಡಿಗೀಡಿಮಾಡಿಯೇನ ಬೆಂಡಲ್
ನಾ ಆರೇಳು ದಿವಸಾಯಿತು ಉಂಡಿಲ್
ಹಿಂಗಽಽ ತಿರಗತೀನಿ ಮನಿಯಮಾರ ಕಂಡಿಲ್ ।

ಕೂಡಪಲ್ಲ ರಾಜಬೀದಿಯೊಳಗ ಹಾಯ್ದು ಮೋಜ ಮಾಡಕೋತ
ಮಾತನಾಡಿದರ ಸ್ವರಾ ಸಣ್ಣ ಕೋಗಿಲ್ ॥ ॥ ಜೀಜೀ ಚೌಕ ೧ ॥

ಏರ ಯಾಕೊ ಎಣ್ಣಾ ಆರೇಳು ದಿವಸಾಯಿತು ಉಂಡಿಲ್ಲಂತಿದಿ
ಜ್ವಾಳ ಇಲ್ಲೇನೊ ನಿನಗ ತಿಲ್ಲಾಕಽ।
ಹಕ್ಲಾಯಿದು ಕರೆ ನಡಿ ನಮ್ಮ ಹೊಲಕಽ ।
ಎಷ್ಟ ಬಂಗಡತನ ಗುಣಾ ನಿನ್ನ ಬಲ್ಲೇಕ ।
ಯಾರ ಕಲಸ್ಯಾರಪ್ಪಾ ಹಿಂತಾ ಮಾತ ಅಲ್ಲಾಕಽ ।
ಬೋಳೆ ಮನಸ್ಯಾನಂಗ ಬಾಳ ಒಳ್ಳೆಯವನಾಗಿ ಬಂದು
ಅರಿದ ಮಳ್ಳನಂಗ ಕೇಳತಿದಿ, ಒಳ್ಳೆ ಮೆಲ್ಲಕಽ॥ ॥ ಜೀಜೀ ॥

ಕುಂಕುಮ ಹಚ್ಚು ಹಣಿಗೆಲ್ಲಾ ಹೆಂಡಿ ಹಚ್ಚಿ ಜಗಿತಾನ ಕೆಡಿಸಿ
ಕಣ್ಣೀಲೆನೋಡು ಮನಸ್ಯಾ ಇದ್ದಿ ಕೀಟಕ ।
ನಮ್ಮ ಅಣ್ಣ ಕೇಳಿದರ ಬಾಳ ಕಟಕ ।
ನಿನ್ನ ಸೀಳಗಾಯಿ ಒಡದಂಗ ಪಟಕ ।
ಒಂದೇ ಏಟ ಕೊಟ್ಟರ ನಿನಗ ಸಾಕಬೇಕಾದಿತಪ್ಪಾ
ನೀರ ಬೇಡಲಿಕ್ಕಿಲ್ಲ ಒಂದ ಗುಟಕ ॥ ॥ ಜೀಜೀ ॥

ಜ್ಯಾರ ಕರ್ಮದೊಳಗ ಬಂದು ಜೋಕಮಾರ ಉರದ ಮೆರದ
ಹೊಲೆಯರ ಕೈಲೆ ಬಡಿಸಿಕೊಂಡ ಹೆಡಕ್ ।
ಬಿದ್ದ ನೆಳ್ಳತಿದ್ದ ಅಗಸರ ಪಡಿ ಬುಡಕ್ ।
ಸೀತಾನ ರಾವಣ ಒಯ್ದಾ ಮುಂದ ಆದ ಕೆಡಕ್ ।
ಹಣಮಂತ ಲಂಕಾ ಸುಟ್ಟ ಆಗಿಂದಾಗ ತೊಡಕ್ ।
ಪರಸ್ತ್ರೀಯರ ಸಂಘ ಮಾಡಿ ಪಾರ ಆಗಿಹೋಗಿಲ್ ಯಾರು
ಘೋರ ಆದ ಮುಂದ ತೊಡಕ್ ॥ ॥ ಜೀಜೀ ॥

ಬಾಳ = ಬಹಳ **ಉಂಡಿಲ್ = ಊಟ ಮಾಡಿಲ್ಲಾ** **ನಿಂದು = ನಿನ್ನದು**
ಹಕ್ಲ = ರಾಶಿಮಾಡುವಾಗ ಸೂಡಿನಿಂದ ಬಿದ್ದ ತೆನೆ **ಬಾದಿ = ಕಷ್ಟ**
ಬಂಡಗ = ಸುಳ್ಳು, ಮೋಸ **ದಸಿಂದ = ಸಲುವಾಗಿ** **ಮೆಲ್ಲಕ = ಸಾವಕಾಶ**
ಚೇಡಿ = ಭಾನುಮತಿ ಮಂತ್ರ ತಂತ್ರ **ಒಗಿತಾನ = ಸಂಬಂಧ** **ಬೆಂಡಲ್ = ಕುತಂತ್ರ**
ಬುಡಕ = ಕೆಳಗೆ

ಇಳು ಛೀ : ತಗಿಯಪ್ಪಾ ನಿಂದ್ಯಾತರ ನಡತಿ ।
ನಮಗ ಸರಿ ಬರುವದಿಲ್ಲ ಶ್ರೀಮಂತರ ಮಗಳು
ಇಂಥಾ ಕೆಲಸ ಮಾಡಿದವಳಲ್ಲಾ ॥ ॥ ಹಾಜೀಜೀ ॥ ೧ ॥

ಯವ್ವಾ ತಾಯಿ ಜಲ್ಲ ಸುಡಲಿ ಬೆಂಕಿ ಹೆಚ್ಚಲಿ ।
ಹಾದರ ಹ್ಯಾಂಗ ಮಾಡಲಿ ।
ಪರ ಪುರುಷರನ ನೆದರೆತ್ತಿ ನೋಡಿದವಳೆಲ್ಲಾ ॥ ॥ ಜೀಜೀ ೨ ॥

ಪತಿವ್ರತಾ ಧರ್ಮ ಎಂಬುದು ಅಗ್ನಿಯ ಕುಂಡ ಇದ್ದಂಗ ।
ತಿಳಿಯ ಮೂರ್ಖಾ ।
ದುಮುಕವಾಗ ಬಂದು ಬಿಡಿಸುವರ್‍ಯಾರಿಲ್ಲ
ಬಾಳುಳವರ ಮಗಳು ನಾನು ಸಾವಿರಮಂದಿಯೊಳಗ ॥ ಜೀಜೀ ೩ ॥

ಏರ ಹೋಗಿಕುಂತರ ಹೀಂಗ ಅಂತಾ ಯಾರು ಅಂದಿಲ್ಲಾ
ಇನಕಾ ನಮ್ಮ ತಾಯಿ ತಂದಿಗಿ ಬಟ್ ತಂದಿಲ್ ।
ವಂಶ ಪಾರಂಪರೆ ಹಿಂತಾ ಬುದ್ಧಿ ಬಂದಿಲ್ಲಾ ।
ನಿನಗ ಹೆಂಗ ತಿಳಿದಿತವ್ವಾ ದಕ್ಕಿ ತಿಂದಿಲ್ಲಾ ।
ಕೂಡಪಲ್ಲ ರಾಜ ಬೀದಿಯೊಳಗ ಹಾಯ್ದು ಮೋಜ ಮಾಡಕೋತ
ಮಾತನಾಡಿದರ ಸ್ವರಾ ಸಣ್ಣ ಕೋಗಿಲ್ ॥ ॥ ಜೀಜೀ ಚೌಕ ೨ ॥

ಏರ ಅಲಲಾಽ ಹೊಯ್ಮಾಲಿ ಕಲಾಯಿ ಮಾತಕೇಳಿ ಹಾಕಿ ಹೋದಿನಂತಿ
ಮಾತಿನ ಹಂದರಾ ।
ನಾ ಬಿಡತಿನೇನಽ ಸಿಟ್ಟಿಗಿ ಬಂದ ಹಲ್ಲ ತಿಂದರಽ ।
ಎಷ್ಟು ಬೈತಿದ್ದಿ ಪಕ್ಕನೆ ಹೂಂ ಅಂದರಽ ।
ಏನ ಚಾಜ ಹೋಗತಿತ್ತ ಒಮ್ಮಿ ಬಂದರ ।
ಬಂಗಾರದಂತಾ ಹುಡುಗ ನಾನು ಬಾಯಿ ತೆರದ ಕೇಳಿದರ ।
ದೊಡ್ಡಸ್ಥನಾ ಏನ ಒಲ್ಲಂದರಽ ॥ ॥ ಜೀಜೀ ॥

ಚುಟ್ಟನ ಚೇಳ ಕಡದಂಗಾಗಿ ಚಟ್ಟನೆ ಜ್ಯಾಡಿಸಿಕೊಂಡು
ಹೋಗಬ್ಯಾಡ ಬಾಲಿ ತುಸು ನಿಂದರಽಽ ।
ಸ್ವಲ್ಪ ಬಡವನ ಮ್ಯಾಲ ಮಾಡಿನೋಡ ನೆದರ ।
ಸಾವಿರ ಕೊಟ್ಟರು ಸಂತಾನ ಸಿಗದು
ಹಿಂತಾ ಜಲ್ಮ ಹೋಗತದ ನಿರ್ವಾಯಿಲ್ಲಾ ನೀನೇ ಕುತ್ತು ಕೊಂದರಽ।
ಊರಿಗ ಒಳ್ಳೆ ಹುಡುಗ ನಾನು ಸುಳ್ಳೆ ಹೇಳುದಿಲ್ಲ
ಸಧ್ಯೆ ಆಣಿ ತಕೋ ಮುಕ್ಕ ನೀರ ಕುಡದರ ।
ಹಿಂಗ ನಿನ್ನ ದ್ಯಾಸಿನೊಳಗ ನಾ ಮಡದರಽ ।
ಮುಂದ ಪಕ್ಕನೆ ಗಂಡ ದೆವ್ವ ಆಗಿ ಬಡದರಽ ।
ನಾ ಹೋಗಲಿಕ್ಕಿಲ್ಲ ಒಂದೇ ಹಟಾ ಹಿಡದರಽ ।

ಗುಲ್ಲ ಮಾಡಿ ಒಯ್ದು ನನ್ನ ಗಲಿಗಿ ಹಾಕಿದರ ।
ಅಂಜುದಿಲ್ಲ ಈಗ ತೆಲಿಹೆಡದರs ॥ ॥ ಜೀಜೀ ॥

ಇಳು ಜಿಂವಾ ಗಟ್ಟಿ ಮಾಡಿ ನೋಡ ಇಟ್ಟ ಕಾಮನಾಟ ।
ಹೆಂತಾ ರುಚಿಕಟ್ಟಾ । ಬಲ್ಲೇನsಳ ಹುಚ್ಚಿ
ಸುಮನೆ ಒಲ್ಲೇ ಅಂತೀ ॥ ॥ ಜೀಜೀ ॥

ಗಾಳಿ ಬಿಟ್ಟಾಗ ಜಲ್ದಿ ಮಾಡಿ ತೂರಿ ಕೊಳ್ಳೋಣು ।
ನಾಳೀಗಿ ಅಂದವರ ಮನಿ ಹಾಳ
ಅಂಬುದು ತಿಳದ ನೋಡ ಹುಚ್ಚಿ ॥ ॥ ಜೀಜೀ ॥

ಈ ಜಲ್ಮ ನೀರಿನ ಮ್ಯಾಗಿನ ಗುರುಳಿ।
ಹೋಗದ ಉರುಳಿ । ಬರುದಿಲ್ಲ ಮರಳಿ ।
ಜಲ್ಮ ಸ್ಥಿರವಲ್ಲಾ ತಿಳದ ನೋಡ ಹುಚ್ಚಿ ॥ ॥ ಜೀಜೀ ॥

ಏರ ಬಾಳ ಹೇಳುದಿಲ್ಲ ನಾ । ನಾಳಿ ಬರತೀನಿ ಅಂದರ
ಸದ್ಯೆ ಸಾವಿರ ರೋಖಹಿಡಿ ಮೊದಲs।
ಕೊಟ್ಟ ವಚನ ತಿರಗಿ ಆಡುದಿಲ್ಲ ಬದಲ್ ।
ಅಂವಾ ಸುಳ್ಳ ಹೇಳು ಸೂಳಿಮಗ ತಗಲ್ ।

ಕೂಡಪಲ್ಲ ರಾಜ ಬೀದಿಯೊಳಗ ಹಾಯ್ದು ಮೋಜ ಮಾಡಕೋತ
ಮಾತನಾಡಿದರ ಸ್ವರಾ ಸಣ್ಣ ಕೋಗಿಲ್ ॥ ॥ ಜೀಜೀ ಚೌಕ ೩ ॥

ಏರ ನಾರಿ ಮನಸ ಕರಗಿ ಕರಗಿ ನೀರಿನಕಿಂತಾ ತಿಳಿಯಾಗಿ
ತುಂಬಿದ್ಹೊಳಿ ಸರರರ ಸರದಂಗ ।
ಒಳೆ ಹಣ್ಣಿಗಿ ಬಂದ ಚಂದ್ರ ಮಾಂವ ಹರದಂಗ ।
ಬಾಲಿ ಕಾಳಜದಾಗ ಕಾಮನ ಬಾಣ ಇರದಂಗ ।
ಮನ್ಮಥ ತಡಿವಲ್ಲದು ಹಿಡಿಯಲಾರೆ ನಾನೆಷ್ಟು
ಒತ್ತಿ ಹಿಡಿಯಲು ಆಗತದ ಜರದಂಗ ॥ ॥ ಜೀಜೀ ॥

ಸೀರಿ ಉಟ್ಟು ಕುಬಸಾ ತೊಟ್ಟು ವಸ್ತಾ ಒಡವಿ ಡಾಗಿನಿಟ್ಟು ।
ಗಂಡಸೆಂಬು ಕೂನಾ ಅಗ್ದೆ ಇಲ್ಲದಂಗಾ ।
ಹೊತ್ತ ಮುಳಗಿ ಬಾರೊ ನೀನು ಯಾರು ಅರಿಯದಂಗಾ ।
ಇಷ್ಟು ಕೇಳಿ ತಯ್ಯಾರಾದ ಚಲುವ ಚನ್ನೀಗ ।
ವಸ್ತಾ ವಡವಿ ಡಾಗೀಣೆಟ್ಟು ದ್ಯಾಸ ಮಾಡಿ ಹೊಂಟಾರ
ಒಳೆ ಕೈಲಾಸದಿಂದ ಹಾರಿ ಪೋರಿ ಇಳದಂಗ ॥ ॥ ಜೀಜೀ ॥

ಬಾಲಿ = ಹುಡುಗಿ **ಕೂನಾ = ಗುರುತು** **ಹಾರಿ = ಜಿಗಿದು**
ಅಗ್ದಿ = ಇದ್ದಕ್ಕಿದ್ದಂತೆ **ತಯ್ಯಾರ = ಹೋಗಲು ಸಿದ್ಧತೆ**

ಚದುರಿ ಅಂಗಳದಾಗ ನಿಂತ ಒದರಿ ಕೇಳಿದರ
ಧ್ವನಿ ಕೂನ ಹಿಡದ ಬಂದಳೊ ಗ್ವಾಡಿ ಜಿಗದಂಗ ।
ಅಕ್ಕನ ಮನಿಗಿ ತಂಗಿ ಬಾಳದಿನಕ ಬಂದಂಗ ।
ತೆಕ್ಕಿಗಿ ಬಿದ್ದು ದುಃಖ ಮಾಡತಾಳ ಬಲ್ಲಂಗ ।
ಇಷ್ಟ ಕೇಳಿ ಗಂಡ ನಿಂತ ಹುಚ್ಚ ಹಿಡಿದಂಗ।
ಹಸ್ತ ಬಂದಾನಂತ ಸಣ್ಣ ಶ್ಯಾವಿಗಿ ಬಸ್ತಕೇಸಿ
ಹಾಸಿಗಿ ಮಾಡಿಕೊಟ್ಟ ಮಲಗಸ್ಯಾಳ ಚಪ್ಪರ ಪಲ್ಲಂಗ ॥ ಜೀಜೀ ॥

ಇಳು ಗಂಡಗ ಹೇಳತಾಳ ಇವತ್ತ ಬ್ಯಾರೆ ಮಲಗೊ ।
ನಮ್ಮ ತಂಗಿ ಬಂದಾಳ ನಾಳಿಗಿ ಆಕಿ ಹೋಗಕ್ಕಿ
ಮಾತಾಡತೀವಿ ಪ್ರೀತಿಲಿ ॥ ॥ ಜೀಜೀ ॥

ಇಷ್ಟು ಹೇಳಿ ಹೋದಳೊ ಹೊರಿಯಾಕ
ಮಂಚದ ಮ್ಯಾಲ ಮಲಗಿದ್ದ ಗಂಡ
ನೋಡಿ ಗೇಣಸ್ತಾನ ತನ್ನ ಮನದಲ್ಲಿ ॥ ॥ ಜೀಜೀ ॥

ನಡಪತ್ಲೆ ಸೊಸಿ ಆಗಬೇಕ ನನಗ
ಅಂಜುದ ಇದಕ್ಯಾಕ ಹೋಗಿ
ಜೀಂವ ಗಟ್ಟಿ ಮಾಡಿ ನೋಡ ಜುಲಮೀಲಿ ॥ ॥ ಜೀಜೀ ॥

ಏರ ಬೆಳಗಾಗು ತನಕ ಇಬ್ಬರು ಏಕಾಂತದಾಗ ಇರಬೇಕಂತ
ಗಟ್ಟಿ ಹಾಕಿ ಬಿಟ್ಟ ಕೋಲಿ ಬಾಗಿಲ್ ।
ಸಾಂಬ ಕಳಸ್ಯಾನಪಾ ನನಗ ತುಂಬಿದ ಅಗಲ್ ।
ಮುಂದ ಹಿಗ್ಗಿ ಮೂರ ಗೇಣ ಉಳಿತ ಮುಗಲ್ ।
ಕೂತ ಹಿಡಿಲಾಕ ಹ್ವಾದರ ಬರಿ ತೊಗಲ್ ।

ಕೂಡಪಲ್ಲ ರಾಜ ಬೀದಿಯೊಳಗ ಹಾಯ್ದು ಮೋಜ ಮಾಡಕೋತ
ಮಾತನಾಡಿದರ ಸ್ವರಾ ಸಣ್ಣ ಕೋಗಿಲ್ ॥ ॥ ಜೀಜೀ ॥ ಚೌಕ ೪ ॥

ದಕ್ಕಿ ಹಚ್ಚಿದ ಮ್ಯಾಲ ಎದ್ದು ಕಕ್ಕಾಬಿಕ್ಕಿ ನೋಡತಾನ
ತೆಕ್ಕಿಯೊಳಗ ತಗೊಂಡಾನ ಮುರದ್ದs।
ಹಂಗೆ ಮೈಯ ಮ್ಯಾಲ ಬಿದ್ದ ಹಂಗsದೊರದ ।
ಇಬ್ಬರ ಗುದುಮುರಗಿ ಒಳಗ ಸೀರಿ ಕುಬಸ ಹರದ ।
ನಾ ಬಾಳ ಹೇಳುದಿಲ್ಲ ತೆರದ ।
ಜೋರ ಮಾಡಿ ಹೋಗಿ ಅಂವಾ ಘೋರ ಬಿಟ್ಟ ಕೂನಾ ಹಿಡದ
ಗಂಡಸಂತ ದೂರ ನಿಂತಾ ಸರದs ॥ ॥ ಜೀಜೀ ॥

ಗುದುಮುರಗಿ ಆಡಿ ಗಂಡಗ ಸಿಟ್ಟ ಬಂದಿತಪ್ಪಾ
ಕುಟ್ಟು ಒನಕಿ ತಗೊಂಡ ಮೈ ಆಗದ್ದ ।

ಹಗೆ ಹಾರ ಹೊಡದ ಹಾಕತೀನಿ ಹುಗದ ।
ಅಷ್ಟು ಕೇಳಿ ಗ್ಯಾಟದವರು ಬಂದರು ಗ್ವಾಡಿ ಜಿಗದ
ರಟ್ಟಿಗಿ ಹಗ್ಗಾ ಹಚ್ಚಿ ಅಂವಗ ಎಳದೊಯ್ದು ಚೌಡ್ಯಾಗ
ಹೆಡಮುರಗಿ ಕಟ್ಟ್ಯಾರ ಒಳೆ ಬಿಗದ ॥ ॥ ಜೀಜೀ ॥

ಸೀರಿ ಉಟ್ಟು ಕುಬಸಾ ತೊಟ್ಟು ಇಂಥಾ ಕೆಲಸಾ ಮಾಡ್ಯಾನಂತ
ಊರ ಸಣ್ಣ ದೊಡ್ಡ ದೈವ ನೆರದ್ದು ।
ಅಂವಗ ಕಡಚಗಿ ಕಾಸಿ ಮುಕುಳಿ ಮ್ಯಾಗ ಬರದ್ದು ।
ಯಾರು ಪಾರಾಗಿ ಹೋಗಿಲ್ಲ ಹಿಂಗ ಉರದ್ದು ।
ದಂಡ ಕಟ್ಟಿದಾರ ಬಾಡ್ಯಾ ಕುಂಡಿ ಕೊಡತಿದ್ದೇನು ।
ಮುಕ್ಕ ಪುಂಡಿ ಇಲ್ಲ ತಿಂದೇನಂದರ ಹುರದ್ದು ॥ ॥ ಜೀಜೀ ॥

ಇಳು ಛೀಃ ಹಾಕಿ ಬಿಟ್ಟರೊ ಕೈ ಸೆರಿ ।
ತಗೊಂಡ ಏಕ ದಾರಿ ।
ಹೋದ ದೇಸ್ಯಾ ವರಿ । ಮರಳಿ ಬರಲಿಲ್ಲ ॥ ॥ ಜೀಜೀ ॥

ಪೀರ ಮತಾಬ ಸಾಹೇಬ ದೇವರ ।
ಕೊಟ್ಟ ನಮಗ ಆರು ।
ಸಿದ್ದಣ್ಣನದ ಅರುವ ಅಗ್ದಿ ಕಸರಿಲ್ಲಾ ॥ ॥ ಜೀಜೀ ॥

ಏರು ಭೀಮ ನರಸಪ್ಪ ಮಡಿವಾಳಪ್ಪ ಹಾಡಿದರ
ರಥಾ ಹೂಡಿ ಬಿಟ್ಟಂಗ ಒಂದೆ ಹೆಗಲ್ ।
ಇಷ್ಟು ಕೇಳಿ ವೈರಿ ಬಿಟ್ಟ ಉಣುವ ಅಗಲ್ ।
ವಸ್ತಾದ ಕಲಾಶನ ಅಕಲ್ ।

ಕೂಡಪಲ್ಲ ರಾಜ ಬೀದಿಯೊಳಗ ಹಾಯ್ದು ಮೋಜ ಮಾಡಕೋತ
ಮಾತನಾಡಿದರ ಸ್ವರಾ ಸಣ್ಣ ಕೋಗಿಲ್ ॥ ॥ ಜೀಜೀ ॥ ಚೌಕ ೫ ॥

ಗ್ವಾಡಿ ಜಿಗದ ನೀ ಓಡಿ ಹೋದಿನಂತಿ

ತೋಡಿ ಮಾಡಿನಂತಾ ಗ್ವಾಡಿ ಜಿಗದ ನೀ ಓಡಿ ಹ್ವಾದಿನಂತೀ ।
ಹಾಕಿನ ಹುದಲ್ಹಂತೀs ।
ಹೇಳಿನಂತ ಬಾಳ ಹಮ್ಮದಿಂದ ತಮ್ಮಾ ದಮ್ಮನಾಗಿ ಕುಂತಿs॥
॥ ಜೀಜೀ ॥ ಪಲ್ಲ ॥

ಆನಿಗಿ ಆಡಮರಿ ಈಡಲ್ಲ ಹಾ ಜೋಡಾಗುದೇನ ಸಂಗತಿ ।
ವ್ಯರ್ಥ ಪ್ರಾಣ ಕೊಡತಿ ।
ಹಿಟ್ಟಾ ಬೂದಿ ಸವನಾಗುದೇನ ಸರಿ ಹ್ಯಾಂಗ ಮಾರತ್ಯೆತೀs ॥ ಜೀಜೀ ॥
ಲಂಕಾದೊಳಗ ನೀ ಹುಟ್ಟಿ ಬಂದ ಆ ರಾವಣನ ಸರಿ ಅಂತೀs ।
ತ್ರಾಣ ಅಲ್ಲೊ ನಿಂದು ಕೋತಿs ।
ಎಷ್ಟು ಬಾಯಿ ಕೂರಾದರು ಮೀರಿ ಮರ ಹರಿಬಲ್ಲದೇನೊ ಕತ್ತಿs॥
॥ ಜೀಜೀ ॥

ಇಳು ನಾ ಕೇಳುವುದು ಯಾವುದು
ನೀ ಹೇಳುವುದು ಯಾವುದು
ಮೂರ್ಖಾ ನಿನ್ನಂಗ ಉತ್ತರ ಹೇಳವರು
ಹೋಗ್ಯಾರ ಕೈಲಾಗದಕ
ನೀ ಒಬ್ಬ ಶಾಣೆ ಉಳದದಿ
ಹಿಂದ ನೋಡ ಶಿಲ್ಕಾ ॥ ॥ ಜೀಜೀ ॥

ಏರು ಸಂದಿ ಗೊಂದಿ ಮೂರ ಪದಾ ಕಲ್ತು ನೀ ಕವಿಶೂರ ಅನಿಸಿನಂತೀ ।
ಯಾರಿಗಿ ನೆಲಿ ಕೇಳತಿ ।

ಕೂಡಪಲ್ಲ ಹೇಳಿನಂತ ಬಾಳ ಹಮ್ಮದಿಂದ ತಮ್ಮಾ ದಮ್ಮನಾಗಿ ಕುಂತಿs ॥ ಜೀಜೀ ॥

ಏರು ಕಾಸಭಾಗ ಬಂದ ಕಂಡ ಬಂದೀನಿ ಮುಳಸಾವಗಿ ಸಮೀಪ ಅಗ್ದಿ।
ಭಾಂವಿ ನೀರ ಗರ್ದಿ।
ಹೋಗಿ ಬರುವ ಜನಾದಾರಿ ಮ್ಯಾಗ ನೀರ ಕುಡಿಯತಿತ್ತ ಜಲ್ದಿ ॥
॥ ಜೀಜೀ ॥

ದೇಶ ಸಂಚಾರ ಒಬ್ಬ ತಿರುಗತ ತಿರುಗುತ ಭಾವಾಲಾಡುಬಂದಿ।
ಸುಳ್ಳ ಅಂದಗಿಂದಿ ।
ಬಂದ ಕುಂತ ಅದೇ ಬಾಂವಿಮ್ಯಾಗ ಮೈಯಾಗ ಇರ್ದ ಚಿಂದಿ॥
॥ ಜೀಜೀ ॥

ಹಮ್ಮು = ಗರ್ವ
ದಮ್ಮ = ಯಬ್ಬಿ
ಈಡ = ಸಾಟಿ, ಸರಿ
ತ್ರಾಣ = ಶಕ್ತಿ
ಬಾಯಿ = ನಾಲಿಗೆ
ಚಿಂದಿ = ಹರಿದ ಅರವಿ ತುಣುಕು
ಗರ್ದಿ = ಸೂಸಲಾಡು, ಬಹಳ
ಜಲ್ದಿ = ಅವಸರ
ಶಾಣೆ = ಜಾಣ
ಶಿಲ್ಕ = ಉಳಿದದ್ದು
ಕುಶಿ = ಸಂತೋಷ
ಕರಿ = ಕರೆ
ಬಲ್ಲಿ = ಹತ್ತರ

ಇಳು ಕಾಸಭಾಗ ನೋಡಿ ಕುಶಿ ಆಗಿದಾನೊ ಮನದಲ್ಲಿ ।
ಈ ಬ್ರಹ್ಮಾಂಡದಾನ ಮನವಂತ್ರ ಇದ್ದುವಪ್ಪಾ ಅಲ್ಲಿ ।
ಆ ತೋಟದವನಿಗೆ ಭಾವಾ ಕರಿಯತಾನ ತನ್ನ ಬಲ್ಲಿ ।
ಒಂದ ಬೀಜ ಕೊಟ್ಟನೊ ಭಾವಾ ಸಾಹೇಬ ತನ್ನ ಕೈಲಿ ।

ಏರು ಇದನೊಯ್ದು ಮಡಿ ಮಾಡಿ ಊರೋ ನೀ ಮುಂಚೆ ಹೂವ ಚಿಗುವತೈತಿ ।
ಕಾಯಿ ಆಗತೈತಿ ।

ಕೂಡಪಲ್ಲ ಹೇಳಿನಂತ ಬಾಳ ಹಮ್ಮದಿಂದ ತಮ್ಮಾ ದಮ್ಮನಾಗಿ ಕುಂತಿ ॥
॥ ಜೀಜೀ ಚೌಕ ೨ ॥

ಏರು ಹೇಳಿ ಕೇಳಿ ಆ ಭಾವಾ ಹೋದಾನೊ ತನ್ನ ಮಾರ್ಗ ಹಿಡದಕೇಸಿ ।
ಇಷ್ಟು ಎಲ್ಲಾ ತಿಳಿಸಿ ।
ಬೀಜ ಒಯ್ದು ಅಲ್ಲಿ ಊರಿದಾ ಅಲ್ಲಿ ತನಕಾ ಹೂ ಆಗಿತಪ್ಪಾ
ಪುರಮಾಸಿ ॥ ॥ ಜೀಜೀ ॥

ಊರಿದ ಮರುದಿನ ಹೋಗಿ ನೋಡತಾನ ಕಾಯಿ ಆಗಿತ್ತ ಬೇಸಿ ।
ದೇಕೋ ನಜದೀಕ್ಸೆ ।
ಬಡ್ಡಿ ಕಡೆ ಅರ್ಧಕಾಯಿ ಬಿಟ್ಟು ನಡು ಕೊಯ್ದಾನ ಸಂಹರಿಸಿ ॥
॥ ಜೀಜೀ ॥

ಅರ್ಧಕಾಯಿ ಆ ಬಳ್ಳೀದ ಉಳಿದಿತೊ ಕೇಳಪ್ಪಾ ಹರದಾಸಿ ।
ತು ಸಮಜ ಕೂಬ ದಿಲ್ಲಸಿ ।
ಅರ್ಧಕಾಯಿ ಅಂವಾ ಮಾರುತ ನಡದಾನೊ ಧಾರಣಿ ಬಗಿಹರಿಸಿ ॥
॥ ಜೀಜೀ ॥

ಇಳು ಅರ್ಧಕಾಯಿ ತಕ್ಕೊಳ್ಳುದಕ ಎಷ್ಟ ಬಿದ್ದಿತಪ್ಪಾ ರಖಮಾ ।
ನಿತ್ಯ ಕೊಯ್ದಾಂಗ ಮಾರುತಿದ್ದನೊ ನೇಮಾ ।
ಬೆಳಗಾಗುತನ ಹಿಂಗಿತೊ ಕಾಯಿ ಬಲ್ಲಧರ್ಮಾ ॥ ॥ ಜೀಜೀ ॥

ಏರ ತಡಾ ಮಾಡಬ್ಯಾಡಪ್ಪಾ ಬಡಾನೆ ಹೇಳಪ್ಪಾ ತುದಿನಾಲಗಿ ಮ್ಯಾಲೈತಿ ।
ನಿತ್ಯ ಕಾಯಿ ತಿಂತೀಽ ।

ಕೂಡಪಲ್ಲ ಹೇಳಿನಂತ ಬಾಳ ಹಮ್ಮದಿಂದ ತಮ್ಮಾ ದಮ್ಮಾಗಿ ಕುಂತಿ ॥
॥ ಜೀಜೀ ಚೌಕ ೩ ॥

ಮಡಿ = ಬೀಜ ಹಾಕಲು ನೆಲ ಸಮತಟ್ಟು ಮಾಡುವುದು **ಸಾಕಿ = ಜೋಪಾನಮಾಡಿ**
ಮುಂಚೆ = ಮೊದಲು **ಮಾರುತ = ಮಾರಾಟ** **ಬತ್ತಗೊಡದ = ಕಮರಿ ಹೋಗದ**
ಬಡ್ಡಿ ಕಡೆ = ಮೊದಲಿನ ಕಡೆಗೆ **ಬಡಾನೆ = ತಕ್ಷಣ**
ನಡು = ಮಧ್ಯದಲ್ಲಿ **ಜ್ವಾಕಿ = ಜೋಪಾನ.**

ಏರ ಕಾಯಿ ಹೆಸರ ನಾ ನಿನಗ ಕೇಳತೀನಿ ಯಾಂವ ಮಾಡಿದ ಜ್ವಾಕಿ ।
ಪ್ರೀತಿಲಿಂದ ಸಾಕಿ
ಹೊತ್ತ ಹೊತ್ತಿಗೆ ಬತ್ತಗೊಡದ ನಿತ್ಯ ನೀರ ಹಾಕಿ ॥ ॥ ಜೀಜೀ ॥

ಹುಡುಗುರೊಳು ನೀ ಬೆಳೆದ ಹಾಡಾವ ತಿಳದಿಲ್ಲ ನನ್ನ ದುಡಕಿ
ಜ್ಯಾಡಿಸಿನೋ ಪಡಿಕಿ
ಎಲ್ಲಿದ್ದಲ್ಲಿದು ಕರಕೊಂಡು ಬಾ ನಿನ್ನ ವಸ್ತಾದನ ಹುಡಿಕಿ ॥ ಜೀಜೀ ॥

ಸ್ವತಃ ಕವಿ ನೀ ಮಾಡತಿದ್ದರು ಮತ್ತಷ್ಟು ನಿನ್ನ ಹುಲಿಕೆ
ಹಾಡತಿದೋ ಕಲಿಕಿ ।
ಇಂದ ನಾಳಿ ಅಂತಾ ರಿಂದಿಗಿ ಹಾಕಿ ಹಿಂದುಳಿಸ ಬ್ಯಾಡ ಶಿಲ್ಕಿ ॥
॥ ಜೀಜೀ ॥

ಇಳು ಮುಳಸಾವಳಗಿ ಮತಾಬಸಾಹೇಬ ನೆನದಾನೊ ಹಳ್ಳದ ದಡಿಯೋ ।
ಜರಾ ಎಚ್ಚರಿಟ್ಟ ನಡಿ ಸಿದ್ದಪ್ಪ ಹೇಳಿದ ನುಡಿಯೊ ।
ಗುರು ಸೋಫಿ ಸಾಹೇಬರ ಚರಣಕ ಭಕ್ತಿ ಇಟ್ಟು ನಡಿಯೊ ।
ಕಂದ ಮಡಿವಾಳ ಹಿಂಗ ಹಾಡ ಹಾಡಿದರ ಪ್ರಾಸಕಟ್ಟಿ ತೊಗತ್ತೈತಿ
ದಪ್ಪ ಮರತ ನಿಂತಿ ।

ಏರ ತಡಾ ಮಾಡಬ್ಯಾಡಪ್ಪಾ ಬಡಾನೆ ಹೇಳಪ್ಪಾ ತುದಿ ನಾಲಗಿ ಮ್ಯಾಲೈತಿ ।
ನಿತ್ಯ ಕಾಯಿ ತಿಂತೀ ।
ಕೂಡಪಲ್ಲ ಹೇಳಿವಂತ ಬಾಳೆ ಹಮ್ಮದಿಂದ ತಮ್ಮಾ ದಮ್ಮಾಗಿ ಕುಂತಿs ॥
॥ ಜೀಜೀ ॥ ಚೌಕ ೪ ॥

ದುಡಕಿ = ಹಾಡಿನ ಅನುಭಾವ **ಹುಲಿಕಿ = ಏರಮಾರಿ, ಜಗಿದು ನಿಲ್ಲು** **ದಡಿಯೊ = ದಂಡೆ, ಕೈಗೆ**
ಪಡಿಕಿ = ಹಳೆಯ ಸೀರೆ **ಕಲಿಕಿ = ಬೇರೆಯವರು ಹೇಳಿದ್ದು**
ಹುಡಿಕಿ = ಶೋಧಮಾಡಿ **ರಿಂದಿಗಿ = ಆಲಕ್ಷ, ತಡ.**

ಶರಣಪ್ಪ ಮುತ್ತ್ಯಾ (ಬಂಥನಾಳ)

ರೂಢಿಯೊಳಗ ತಾವು ಪಾಡಾಗಿ ಮೆರದಾರ
ಕ್ರಿಯಾಚಾರದೊಳಗ ಬಂಧೂರಾ ।
ಈ ಲೋಕದೊಳಗ ಪಾರಾದವರಾ
ಅವರ ಮುಂದ ಇಲ್ಲ ನೋಡರಿ ಯಾರ‍್ಯಾರ ।
ಹಿಂದ–ಕೊಂದೇ ನೋಡು ಹೊಂದಿಲ್ಲದವರಿಗಿ
ಧೂಳ ತಿಟ್ಟಸ್ವಾಮಿ ಹೋಗಿದಾರ ಶರಣಪ್ಪನವರಾ ॥ ಜೀಜೀ ॥ ಪಲ್ಲ ॥

ಏರು ನೂರು ವರುಷದ ಜ್ಯಾಡಿ ಹೇಳತಿನಿ ಕುಂತ ಕೇಳರಿ ನೀವು ಹಿರಿಯರಾ ।
ಶರಣಪ್ಪನವರ ಬಂದ ಮಜಕೂರಾ ।
ಮೈಸೂರ ಸೀಮ್ಯಾಗ ಅವರಿದ್ದವರಾ
ದೇಶ ಸಂಚಾರ ತಿರಗುತ ತಿರಗುತ ಕಪ್ಪಡಿ ಸಂಗಮಕ್ಕ ಬಂದಿದ ರಾ॥
ಶರಣಪ್ಪನವರಾ ॥ ಜೀಜೀ ॥

ಸಂಗಮನಾಥನ ಗುಡಿಯೊಳಗ ಹೋಗಿ ಮೂರದಿವಸ ಸ್ವಾಮಿ
ಕೂತಿದಾರಾ ।
ಲಿಂಗಪೂಜಿ ಮಾಡತಾರ ಇಲ್ಲ ಕಸರಾ ।
ಅವರ ಭಾವಕ ಒಲ್ದಾನ ಶಂಕರಾ ।
ಕೊಟ್ಟ ವಚನಕ ಸೆಟಿ ಮಾಡಲಿಲ್ಲ ತೆಲಿ ಮೇಲ ಹಸ್ತ ಇಟ್ಟರ
ಸಂಗಮೇಶ್ವರಾ ॥ ಜೀಜೀ ॥

ಇಳು ಸಂಗಮೇಶ್ವರನ ಗುಡಿಯ ಬಿಟ್ಟಾರಾ ।
ಇತ್ತ ಸೋಮವಾರಾ ।
ಶರಣಪ್ಪನವರಾ । ಹೊಳಿಗೆ ಬಂದಾರಾ ॥ ॥ ಜೀಜೀ ॥

ಹೊಳಿ ತುಂಬಿ ಹೋಗುದು ನೋಡ್ಯಾರಾ ।
ಇದ್ದಿದ್ದಿಲ್ಲ ಅಂಬಿಗೇರಾ ।
ಜ್ಯಾಡಿ ಹಾಸ್ಯಾರಾ ಗುರುವಿನ ನೆನದಾರಾ ॥ ॥ ಜೀಜೀ ॥

ಜ್ಯಾಡಿ ಮ್ಯಾಲ ಶರಣಪ್ಪ ಕುಳಿತಾರ ।
ಲಕುಳ ತಿರವ್ಯಾರಾ ।
ಅಂದರೊ ಹರಽ ಹರಾಽ ಹೊಳಿಯ ದಾಟಿದರಾ ॥ ॥ ಜೀಜೀ ॥

ಏರು ಹೊಳಿದಾಟಿ ನೋಡರಿ ಶರಣಪ್ಪನವರು ಬಂದು ನಿಂತರೊ
ಬ್ಯಾಲ್ಯಾಳದೂರಾ
ಅಲ್ಲಿ ಬೆಟ್ಟಿ ಆದರೊ ಅವ್ವಪ್ಪನವರಾ
ಅವರು ಮುಂದಿಂದ ಹೇಳ್ಯಾರ ಚಲಂತರಾ

ಕೂಡಪಲ್ಲ ಹಿಂದ ಕುಂದೆ ನೋಡು ಹೊಂದಿಲ್ಲವರಿಗಿ ಧೂಳ ತಿಟ್ಟ ಸ್ವಾಮಿ
ಹೋಗಿದಾರಾ ಶರಣಪ್ಪನವರಾ ॥ ॥ ಜೀಜೀ ॥ ಚೌಕ ೧ ॥

ಏರು ಬಿಳಿಯ ಜ್ಯಾಡಿ ನೋಡರಿ ಹೊತ್ತಾರ ತೆಲಿಮ್ಯಾಗ
ರುದ್ರಾಕ್ಷಿ ಮಾಲಿ ಅವರ ಕೊರಳಾಗ
ಅಂಗದಟ್ಟಿ ಹಾಕಿದರೊ ಮೈಯಾಗ
ವಿಭೂತಿ ಧರಿಸಿದಾರೊ ಫಣಿಯಾಗ
ಉಗ್ಗದ ಚರಗಿ ಹಿಡಿದಾರೊ ಕೈಯಾಗ
ಕೈಕಪಡೆಂಗ ಅವರ ಕಾಲಾಗ । ಬಂದಾರೊ ಡೋಣ್ಯಾಗ ॥ ಜೀಜೀ ॥

ಡೋಣಿಯ ದಾಟಿ ನೆಗಿನಾಳ ಸೀಮ್ಯಾಗ ।
ಬಂದ ನಿಂತ್ರೊ ಸ್ವಾಮಿ ಆವಾಗ ।
ಒಬ್ಬ ಕುರುಡ ಕುಂತಿದ್ದ ದಾರಿಯ ಮ್ಯಾಗ ।
ನೀ ಯಾರಂತ ಕೇಳಿದರಂವಗ ।
ದುಷ್ಟ ಮಾತೊಂದು ಆಡಿದ ಕುರುಡ ಸಿಟ್ಟ ಬಂದಿತರಿ ಸ್ವಾಮೀಗ ।
ಹೊಡೆದ ತೆಲಿಯ ಮ್ಯಾಗ ॥ ॥ ಜೀಜೀ ॥

ಇಳುವು ಕುರುಡಗ ಬಂದಾವಪ್ಪಾ ಕಣ್ಣಾ । ಓಡ್ಯಾನ ಒಂದೇ ಸವನಾ ।
ಟಣ್ ಟಣಾ ಹಾರ್ಯಾನಾ । ಊರಿಗಿ ಬಂದಾಽನಾ ॥ ॥ ಜೀಜೀ ॥

ದಂಗಾಗಿ ಕೇಳತದ ಜನಾ । ಹ್ಯಾಂಗ ಬಂದುವೊ ಕಣ್ಣಾ ।
ಹೇಳಬೇಕೋ ನೀನಾ । ಕೇಳತಾರವನಾ ॥ ॥ ಜೀಜೀ ॥

ಬಾಂವಿ ದಂಡಿ ಮೇಲೆ ಒಬ್ಬ ಶರಣಾ । ಮೋರ್ತ ಮಾಡ್ಯಾನಾ ॥
॥ ಜೀಜೀ ॥

ಕೇವಲ ಭಗವಾನಾ । ಕೊಟ್ಟನಪ್ಪಾ ಕಣ್ಣಾ ॥

ಏರು ನೆಗಿನಾಳ ಜನಾ ನೋಡರಿ ಎಲ್ಲಾರು ಕೂಡ್ಯಾರ
ಏನ ಹೇಳಲಿ ಸ್ವಾಮಿ ಚಮತ್ಕಾರಾ ।
ಅಡಿವರ್ಗ ಆದಾರೊ ಎಲ್ಲಽರಾ ।

ಕೂಡಪಲ್ಲ ಹಿಂದ ಕುಂದೆ ನೋಡ ಹೊಂದಿಲ್ಲದವರಿಗೆ ಧೂಳ ತಿಟ್ಟಸ್ವಾಮಿ
ಹೋಗಿದಾರ ಶರಣಪ್ಪನವರ ॥ ಜೀಜೀ ॥ ಚೌಕ ೨ ॥

ಏರು ಪಾಯಪಗೌಡ ಮನಸಿಗಿ ತಿಳದು ದೈತರಾಣ್ಯಾರ್ನ ಕರಸಿದನಲ್ಲಾ ।

ಡಂಗೂರ ಸಾರಿ ಹೇಳಿದರಲ್ಲಾ ।
ಮಠಾ ಕಟ್ಟಿಸಬೇಕರಿ ರಾತ್ರಿ ಹಗಲಾ
ಅಂಗದಿಂದ ಸೌರಾಂಶರಾದೆವೊ ಸ್ವಾಮಿ ಪಾದಕ ಭಕ್ತಿ ಇಟ್ಟಿವಲ್ಲಾ
ನಾವು ನಡದೇವಲ್ಲಾ ॥ ॥ ಜೀಜೀ ॥

ಪಾಯಪ ಗೌಡನ ಹೆಂಡತಿ ಅಂತಾಳ ನಮ್ಮ ಹೊಟ್ಟೇಲೆ
ಕೊಡಬೇಕರಿ ಫಲಾ ।
ನಾವು ಪ್ರಾಣ ಕೊಡತೇವು ನಿಮ್ಮ ಪಾದದ ಮ್ಯಾಲಾ ।

ಆಕಿ ಭಾವಕ ಶರಣಪ್ಪ ಒಲಿತಾನಲ್ಲಾ ।
ಜಾತ್ರಿ ಮಾಡಿ ನೀವು ತೇರು ಎಳಸಿದರ
ಸ್ವಾಮಿ ನಿಮಗ ಕೊಡುವನಪ್ಪಾ ಫಲಾ । ಅಪ್ಪಣಿ ಆಯ್ತಲ್ಲಾ

ಇಳು ಸ್ವಾಮಿ ಕೊಟ್ಟ ವಚನ ಸುಳ್ಳಲ್ಲ । ಹುಟ್ಟಿದಾನ ಬಾಲ ।
ಗೌಡತಿ ಕುಶಿಯಾಲಾ । ಬಂಜಿತನ ಹಿಂಗಿತಲ್ಲಾ ॥ ॥ ಜೀಜೀ ॥

ಬೇಡಿದ ಹರಕಿ ಕೈಗೂಡಿತಲ್ಲಾ । ದಾಸೋಗ ಇಡಿಸ್ಯಾರಲ್ಲಾ ।
ಜಂಗಮರ ಮ್ಯಾಲ । ಭಕ್ತಿ ಇಟ್ಟಾಳಲ್ಲಾ ॥ ॥ ಜೀಜೀ ॥

ಹನ್ನೆರಡು ವರುಷ ಆಯ್ತಲ್ಲಾ । ಪಟ್ಟ ಮುಗಿತಲ್ಲಾ ।
ದೈವಕ ಹೇಳ್ಯಾರೆಲ್ಲಾ । ಇರಲಿ ಕುಶಿಯಾಲಾ ॥ ॥ ಜೀಜೀ ॥

ಏರು ಹೇಳಿ ಕೇಳಿ ಅವರು ಬಿಟ್ಟಾರ ಊರಾ ಕಳಿಸೂತ ಹೊಂಟಾರೊ ಎಲ್ಲರಾ ।
ಪಳಪಳ ಉದರಸತಾರೊ ಕಣ್ಣೀರಾ ನಮ್ಮ ಪಾಲಕ ಮುಳಾಗಿದಾನೊ ಶಂಕರಾ ।

ಕೂಡಪಲ್ಲ ಹಿಂದ ಕುಂದೆ ನೋಡರಿ ಹೊಂದಿಲ್ಲದವರಿಗಿ ಧೂಳತಿಟ್ಟ ಸ್ವಾಮಿ
ಹೋಗಿದಾರ ಶರಣಪ್ಪನವರಾ ॥ ॥ ಜೀಜೀ ॥ ಚೌಕ ೩ ॥

ಏರು ಆಕಾಶವಾಣಿ ನುಡಿದಾದ ಆವಾಗ ನೆಗಿನಾಳ ಸ್ಥಳಾ ಬಿಟ್ಟಿದಾರಾ ।
ಲೋಕದಾಗ ಜನರೈಕ್ಯ ಆಗಿದಾರಾ ।
ಬಂಥನಾಳ ಗ್ರಾಮಕ ಬಂದಿದರಾ ।
ದಾರಿ ಮೇಲ ಮುಳ್ಳ ಹೆಂಟ ಕಂಡಕೇರಿ ಅದರ ಮ್ಯಾಲೆ ಮೋರ್ತ ಮಾಡಿದರಾ ।
ಅವರು ಮಲಗಿದಾರಾ ॥ ಜೀಜೀ ॥

ಸಕರಿ ಸಾಹೇಬನ ಗುಮಟಕ ಹೋಗಿ ತಾಂವಿರುವ ಟಾಂವಕಿ ನೋಡಿದರಾ ।
ಗುಪ್ತದಿಂದ ಮಾತಾಡಿದರಾ ।
ಗುರುಬೋಧೆ ಶರಣಪ್ಪಗ ತಿಳಿಸಿದರಾ ।
ಪ್ರಭುವಿನ ವಚನಾಯ್ತೊ ಶರಣಪ್ಪಗ ಗುಮಟದ ಮಠಾ ಕಟ್ಟ ಅಂದಾರಾ ।
ಅವರ ಹೇಳಿದರಾ ॥ ಜೀಜೀ ॥

ಇಳುವು ಕೊಟ್ಟಾರೆಪ್ಪಗ ಕನಸ ಬಿದ್ದಿತ್ತೊ । ನೋಡತಾನ ಸುತ್ತೊ ।
ವಿಚಿತ್ರ ಆಗಿತ್ತೊ । ಹೊತ್ತ ಹೊಂಟಿತೊ ॥ ॥ ಜೀಜೀ ॥

ಏರು ಬಣಜಿಗೇರ ಕೊಟ್ರೆಪ್ಪ ಹೇಳತಾನ ದೈವ ಕೇಳರಿ ನೀವು ಎಲ್ಲಾರಾ ।
ಒಂದು ಸ್ವಪ್ನ ಬಿದ್ದಿತು ಚಮತ್ಕಾರಾ
ಒಬ್ಬ ಯೋಗಿ ಹೆಂಟದ ಮೇಲೆ ಮಲಗಿದರಾ ॥

ಕೂಡಪಲ್ಲ ಹಿಂದ ಕುಂದೆ ನೋಡೊ ಹೋದಿಲ್ಲದವರಿಗೆ ಧೂಳ ತಿಟ್ಟಸ್ವಾಮಿ
ಹೋಗಿದಾರ ಶರಣಪ್ಪನವರಾ ॥ ಜೀಜೀ ॥ ಚೌಕ ೪ ॥

ಏರು ಬಂಥನಾಳ ಜನಾ ನೋಡರಿ ಎಲ್ಲಾರು ಕೂಡಿ ಹೊಂಟಾರ ಸ್ವಾಮಿನ
ನೋಡುದಕ ।

ದಂಗಾಗಿ ನಿಂತಾರೊ ಜನಲೋಕ
ಸಾಷ್ಟಾಂಗ ಹಾಕಿದಾರೊ ಸ್ವಾಮಿ ತನಕ
ಬಾಪುಗೌಡ ಕುಲಕರ್ಣಿ ಶಂಕರೆಪ್ಪ ನಾವು ಇರ್ತೇವ್ರಿ ಸೇವಾಕ
ಬರ್ರಿ ಊರ ತನಕ ॥ ॥ ಜೀಜೀ ॥

ಶರಣಪ್ಪನವರು ಭಕ್ತರಿಗೆ ಹೇಳತಾರ ಮಾನಾಪಾನ ಕೊಡಬೇಕರಿ
ಇರುತನಕ ।

ಹಿಂಗ ನಡಸಿ ಕೊಡಬೇಕರಿ ಕಡಿತನಕ ।
ಮುಂದ ಚಂಚಲಾಗಬಾರದು ತೊಡಕ ।
ಬೇಡಿದ ವಚನ ಕೈಗೂಡಿಸಿದರ ನಾವು ಬರ್ತೀವರಿ ಬಂಥನಾಳಕ
ಅಲ್ಲಿ ಇರುವದಕ ॥ ॥ ಜೀಜೀ ॥

ಇಳುವು ಮೂರೂರ ದೈವ ಎಲ್ಲಾ ಕೂಡಿ ।
ಹೆಡಿಗಿ ಜಾತ್ರಿ ಮಾಡಿ ।
ಬಡವರಿಗಿ ಅನ್ನಾ ನೀಡಿ
ಹೊಂಟರೊ ಪರುವ ಮಾಡಿs ॥ ॥ ಜೀಜೀ ॥

ಕರಕೊಂಡು ಹೊಂಟರೊ ಆರತಿ ಮಾಡಿ ।
ಸರ್ವರೆಲ್ಲಾ ಕೂಡಿ ।
ಬಡವರಿಗಿ ಅನ್ನಾ ನೀಡಿ ।
ಕಾಳಿ ಬೋರ್ಯಾಡಿ ॥ ॥ ಜೀಜೀ ॥

ಏರು ಸಣ್ಣ ದೊಡ್ಡವರ ಅಪ್ಪಣೆ ತಗೊಂಡು ಮಠದಾಗ ಸ್ವಾಮಿ ಮೂರ್ತ
ಮಾಡಿದರಾ ।

ಸೀತಾಳ ಬಾವಿ ನೋಡರಿ ಹೊಡಸಿದರಾ ।

ಕೂಡಪಲ್ಲ ಹಿಂದ ಮುಂದೆ ನೋಡ ಹೊಂದಿಲದವರಿಗೆ ಧೂಳತಿಟ್ಟಸ್ವಾಮಿ
ಹೋಗಿದರಾ ।

ಶರಣಪ್ಪನವರಾ ॥ ॥ ಜೀಜೀ ॥ ಚೌಕ ೫ ॥

ಏರು ಮನಸಿನ್ಯಾಗ ಆಲೋಚನೆ ಮಾಡ್ತಾರ ಅರವತ್ತ ಮೂರ ಮಂಟಪ
ಮಾಡುದಕ ।

ಅವರು ಬಸವ ಪುರಾಣ ಹಚ್ಚುದಕ ।
ಜಂಗಮರ ತೃಪ್ತಿ ಅವರು ಬಿಡಸುದಕ ।

ಮೂರ ತಿಂಗಳ ಪುರಾಣ ನಡದಿತೊ ಬಸವರಾಜನ ಶೃತಿ ಸಾರುದಕ।
ದೈವ ಕೇಳುದಕs ॥ ॥ ಜೀಜೀ ॥

ಅರವತ್ತ ಮೂರ ಮಂದಿ ವಿರಕ್ತರನ ತರಿಸಿಕೊಂಡ್ರು ತಮ್ಮ ಹಂತ್ಯಾಕ।
ಪಟ್ಟ ಚರಾ ಬಂಧ ಮೀರಿದ ಸಾಲsಕ ।
ಕಾಳಿ ಬೋರಿ ಹಿಡಿಸಿದರಾ ಪರಾಕ ।
ಒಂದೊಂದು ಮಂಟಪದ ಒಬ್ಬೊಬ್ಬ ಪಾದಪೂಜೆ ನೇಮಿಸಿ ಬಿಟ್ಟರ
ಟೀಕ ಮುಕ್ತ ಆಗುದಕ ॥ ॥ ಜೀಜೀ ॥

ಇಳುವು ಪಾದಪೂಜೆs ಬೇಡಿದ್ದ ಕೊಟ್ಟಾರಲ್ಲಾ ।
ವಿಭೂತಿ ಮೊದಲ ।
ಅಷ್ಟಗಂಧದ ಮ್ಯಾಲ ।
ಕರ್ಪೂರ ಬೆಳಗ್ಯಾರಲ್ಲಾ ॥ ॥ ಜೀಜೀ ॥

ಕೈಕಾಂತಿ ಕ್ಯಾಂವಿ ರುಮ್ಮಾಲ ।
ಕಫಾಲಿ ಮೈಮ್ಯಾಲಾ ।
ವಿರಕ್ತರಿಗೆಲ್ಲಾ ಕೊಟ್ಟ ಸರುವೆಲ್ಲಾ ॥ ॥ ಜೀಜೀ ॥

ಏರು ಪುರಾಣ ಮೆರಸಿ ನೆರದ ಜನರು ಹರದ ಹೋದರೊ ಎಲ್ಲರಾ ।
ಸರವತ್ತರಿಗೆ ಅಪ್ಪಣೆ ಕೊಟ್ಟಿದರಾ । ಅಡ್ಡ ಬಿದ್ದ ಆಶೀರ್ವಾದ
ಬೇಡಿದರಾ ॥ ॥ ಜೀಜೀ ॥

ಕೂಡಪಲ್ಲ ಹಿಂದ ಮುಂದೆ ನೋಡೊ ಹೊಂದಿಲ್ಲದವರಿಗೆ ಧೂಳತಿಟ್ಟ
ಸ್ವಾಮಿ ಹೋಗಿದರಾ । ಶರಣಪ್ಪನವರಾ ॥ ॥ ಜೀಜೀ ॥ ಚೌಕ ೬ ॥

ಏರು ಮಸಳಿಗೌಡ ಚಿಂತಿ ಮಾಡತಾನ ಗೇಣಸ್ತಾನ ತನ್ನ ಮನದಾಗ ।
ಬಾಳ ಜಡಾ ಆಗೇತಿ ಮಗಳ ಮೈಯಾಗ ।
ಶ್ಯಾಣೇರನ ಕರದ ತಂದು ತೋರಸಿದರಾಗ ।
ಅದೇ ವ್ಯಾಳೇದಾಗ ಶರಣಪ್ಪ ಹೋಗಿ ನಿಂತಿದ್ದಾ ಅವರ
ಅಂಗಳದಾಗ ॥ ॥ ಜೀಜೀ ॥

ಕೂನ ಹಿಡದ ನೋಡಿರಿ ಅಡ್ಡ ಬಿದ್ದನೊ ನಮಸ್ಕಾರ ಮಾಡಿದ
ಸ್ವಾಮಿ ಪಾರಮಾಡಬೇಕರಿ ಬೇಗ ।
ಹಡದ ಬ್ಯಾನಿ ಹತ್ತೇದ ಗುರುಸಿದ್ದವಗ ।
ಸ್ವಾಮಿ ಆವಾಗ ಧೂಳ ಪಾದಕ ಕೊಟ್ಟರೊ ತಂದ ಹಾಕಿದಳೊ ಬಾಯಾಗ।
ಎದ್ದಳಾವಾಗ ॥ ॥ ಜೀಜೀ ॥

ಇಳುವು ಮಸಳಿ ದೈವ ಕೂಡ್ಯಾರ ವತನ ಕೊಟ್ಟಾರ ।
ಭಕ್ತಿ ಇಟ್ಟಾರ ಮಠಾ ಕಟ್ಟಿದಾರಾ ॥ ॥ ಜೀಜೀ ॥

ಗುರುಬಸಯ್ಯ ಶಂಕರಯ್ಯ ಇಬ್ಬರ
ಒಂದೇ ಹೊಟ್ಟಿಯವರಾ ।
ಅವರಿಗಿ ತಂದಾರ ಮರಿಯ ಮಾಡಿದರಾ ॥ ॥ ಜೀಜೀ ॥

ಗುರುಬಸಯ್ಯನ ತಳದಾಗ ಬಿಟ್ಟಾರಾ ।
ಶಂಕರಯ್ಯನ ತಂದಾರಾ ।
ಬಂಥನಾಳಕ ಬಂದಾರಾ । ಪಟ್ಟಗಟ್ಟಿದರಾ ॥ ॥ ಜೀಜೀ ॥

ಏರು ಬಂಥನಾಳ ಊರಾಗ ಪಟ್ಟಗಟ್ಟಿದಾರೊ । ಅರ್ಥ ಅರಿಯದಂಗ ಇರುತಾ ।
ತುಳಜಾಪುರಕ ಸ್ವಾಮಿ ಸಾಗಿದರಾ ।
ಭವಾನಿ ಕೃಪೆ ಸಲಿಸಿದರಾ ।
ಕೂಡಪಲ್ಲ ಹಿಂದ ಕುಂದೆ ನೋಡು ಹೊಂದಿಲ್ಲದವರಿಗೆ ಧೂಳತಿಟ್ಟಸ್ವಾಮಿ
ಹೋಗಿದರಾ ।
ಶರಣಪ್ಪನವರಾ ॥ ॥ ಜೀಜೀ ॥ ಚೌಕ ೭ ॥

ಏರು ಶರಣಪ್ಪನವರ ಮಹಾತ್ಮ ನೋಡರಿ ಹೇಳಲಾಕ ಅದು ಅಳಕಿಲ್ಲಾ
ಹೇಳಕೊಂತ ಹ್ವಾದರ ಸರಿಲಾಕಿಲ್ಲಾ
ಹೋದ ಬದಕ ತಂದ ಕೊಟ್ಟಿದಾರಲ್ಲಾ
ಮರ್ತ್ಯದೊಳಗ ತಾವು ಬಂದಕೇರಿ ಚಿನಮಣಿ ಚಿತ್ತೆ ಮಾಡಿದರಲ್ಲಾ ।
ಮಹಿಮ ತೋರಿದನಲ್ಲಾ ॥ ॥ ಜೀಜೀ ॥

ಬಣಜಿಗೇರ ಉಪ್ಪಿನ ಶಿವಬಸಪ್ಪಾ ಈ ವಾರ್ತೆ ಕೇಳಿ ಓಡಿಬಂದಾನಲ್ಲಾ
ಬಂದು ಸ್ವಾಮಿ ಪಾದಕ ಎರಗಿದನಲ್ಲಾ ।
ಕರ ಮುಗದು ಭಿನ್ನ ಹೇಳಿದನಲ್ಲಾ ।
ಯ್ಯಾಕ ಆಗವಲ್ದಂತಾ ವತನ ತಗೊಂಡು ಸ್ವಾಮಿ ಬೆನ್ನ ಹತ್ತಿದರಲ್ಲಾ
ಮಹಿಮ ತೋರಿದರಲ್ಲಾ ॥ ॥ ಜೀಜೀ ॥

ಇಳು ಮೂರದ್ನ ಹೂರಣ ಹಾಕಂದ ಶರಣ ಹೇಳಿದ್ದ
ಜಂಗಮರ ಮಂದಿಗಿ ಭಿನ್ನ ಹೇಳೆಂದ ॥ ॥ ಜೀಜೀ ॥

ಸಾವಿರ ಪಂತಿ ಕೂಡಸ್ಯಾನೊ ತಂದ ॥ ತೀರ್ಥ ಮಾಡಂದ ।
ಭೋಜನಕ ನಡಿ ಅಂದಾ । ಉಳ್ಳಾಕ ನೀಡಂದಾ ॥ ॥ ಜೀಜೀ ॥

ಮಾಡಿದ ಭಕ್ತಗ ಹಿಡಿದಿತೊ ಗಾಭ । ನೀರ ಇಲ್ಲದ್ದ ।
ಶರಣಪ್ಪ ಹೇಳಿದ್ದ ಸೀತಾಳ ಮುಗ–ಸಂದಾ ॥ ॥ ಜೀಜೀ ॥

ಏರು ಸಾವಿರ ಗಣಂಗಳಿಗೆಲ್ಲಾ ಒಂದೇ ಚರಗಿ ನೀರ ಆಗ್ಯಾವ
ನೀಲಗಂಗಮ್ಮ ಆಗ್ಯಾಳ ಆಧಾರಾ ।
ಕುಂತ ಜನಾ ಅಂದಿತರಿ ಹರಹರಾ ।

ಕೂಡಪಲ್ಲ ಹಿಂದ ಕುಂದೆ ನೋಡ ಹೊಂದಿಲ್ಲವರಿಗಿ ಧೂಳೆತಿಟ್ಟಸ್ವಾಮಿ
ಹೋಗಿದರೂ। ಶರಣಪ್ಪನವರಾ ॥ ॥ ಜೀಜೀ ಚೌಕ ೮ ॥

ಏರು ಶರಣಪ್ಪನವರ ಮಹಾತ್ಮೆಯ ಕೇಳಿ ಭದ್ರಪ್ಪ ಮನಸಿಗಿ ತಿಳಿದಿದ್ದ।
ಉಕ್ಕಲಿ ಸ್ಥಳಾ ಅಂವಾ ಬಿಟ್ಟಿದ್ದಾ।
ಬಂಥನಾಳ ಗ್ರಾಮಕ ಬಂದಿದ್ದಾ।
ಹುಟ್ಟು ಗುರು ನನ್ನ ಮೈಯಾಗ ಸೇರೇತಿ
ಸ್ವಾಮಿ ಪಾರ ಮಾಡಬೇಕೆಂದಿದ್ದ। ಅಡ್ಡ ಬಿದ್ದಿದ್ದಾ ॥ ॥ ಜೀಜೀ ॥

ಶರಣಪ್ಪನವರು ಭದ್ರಪ್ಪಗ ಹೇಳತಾರ ನಾನು ಹೇಳಿದಂಗ ಕೇಳಬೇಕೆಂದಾ।
ಸಹಸ್ರ ಭೋಜನ ಮಾಡಿಸಂದಾ ಕರಗಡಬಸೇರ ತುಪ್ಪ ಉಣಸಂದಾ।
ಯ್ಯಾಕ ಆಗವಲ್ದಂತ ವಚನ ತಗೊಂಡು
ತಿರಗಿ ಊರಿಗಿ ಅಂವಾ ಬಂದಾ। ಆಧಾರ ಹಚ್ಚಿದ್ದಾ ॥ ಜೀಜೀ ॥

ಇಳುವು ಬಾ ಅಂತಾ ಕೆಮ್ಮ ಕರಕೊಂಡಾ
ಕ್ಯಾಕರಿಸಿ ಉಗುಳಿದ ಮಲ್ಲಿಗ್ಹೂವ ಬಿದ್ದು ನೋಡರಿ ಬಾಯಾಂದಾ ॥
॥ ಜೀಜೀ।

ಮ್ಯಾಲೆ ಮ್ಯಾಲೆ ಹೇಳಿ ಕಳಸಿದ್ದ
ಜೀಂವಕಾತೊ ಭಾದಶ್ರಾಪ ಕೊಟ್ಟಿದ್ದ
ವಂಶ ಕಂಡಿತಂದಾ ॥ ॥ ಜೀಜೀ ॥

ಬೇಡಿದ ಹರಕಿ ಮಾಡಲಿಲ್ಲ ಬಂದ।
ಶಂಕರಯ್ಯನ ಕರಸಿದ್ದ ಅಗ್ಗಿ ಹಾಯೆಂದ
ಪ್ರಧೂಳಿ ನಡಸಂದಾ ॥ ॥ ಜೀಜೀ ॥

ಏರು ಹತ್ತೂರ ಜನರು ಎಲ್ಲಾರು ಕೂಡ್ಯಾರ ಅಪ್ಪನೋರ ಲಿಂಗಾದಾಗ
ಆಗಿದಾರಾ

ದೂಳ ಸಮಧಿ ಅವರು ತಗಸಿದರಾ।
ಕಮರೀಯ ಮಠಕ ಸ್ವಾಮಿ ಸಾಗಿದರಾ।

ಕೂಡಪಲ್ಲ ಹಿಂದ ಕುಂದೆ ನೋಡರಿ ಹೊಂದಿಲ್ಲದವರಿಗಿ
ಧೂಳತಿಟ್ಟ ಸ್ವಾಮಿ ಹೋಗಿದರಾ। ಶರಣಪ್ಪನವರಾ ॥ ಜೀಜೀ ॥ ಚೌಕ ೯ ॥

ಸುದ್ದಿ ಕೇಳಿ ಸುತ್ತಿನ ಜನರು ಸುತ್ತಮುತ ಬಂದ ನೆರದಾರ
ನಗಾರಿ ನೌಬತ್ತ ನುಡಿಸಿದರಾ
ಚಿಟ್ಟಲಗಿ ಬಾರಿಸಿ ಕೊಂಬ ಹಿಡಿಸಿದರಾ
ಅರಬಿ ಗುಲಾಲ ಮಲ್ಲಿಗ್ಹೂವ ಅಗರಬತ್ತಿ ನೋಡರಿ ಹಚ್ಚಿದರಾ।
ಮಕರಂಧ ಹಿಡಸಿದರಾ ॥ ॥ ಜೀಜೀ ॥

ಕೊಟಗಿ ಒಳಗ ಸಮ್ಮಂಧಿ ತಗದಾರೊ । ಅಳತಿಬರೊಬರಿ ಇಟ್ಟಾರಾ।
ಅಪನವರ್‍ನ ಚೀಲದೊಳಗ ಎತಿದರಾ ।
ಪುಷ್ಪಾಂಜನ ಮಾಡಿ ಚಂಡಿ ಕಟ್ಟಿದರಾ ॥ ॥ ಜೀಜೀ ॥

ಇಳುವು ಮೂರ ಸರತಿ ಊಯಾಲಿ ಆಡಿದರು ।
ತಿರಗುಣ್ಯಾಗ ಇಟ್ಟರು ಗಚ್ಚ ಒರಸಿದರು।
ಸೂತ್ರ ಹಿಡದಿದರು ॥ ॥ ಜೀಜೀ ॥

ಹಿಂದsಕ ಏರಿ ಬಂದರೊ। ಮಣ್ಣ ದಬ್ಬಿದರೊ
ಬಸವಣ್ಣನ ಕುಂಡ್ರಿಸಿದರೊ । ಅಪನವರು ನಿಂತರೊ ॥ ॥ ಜೀಜೀ ॥

ಏರು ಪತ್ರಿ ಒಗೆದು ಚಪ್ಪಳಿಗಿ ಇಟ್ಟರೊ ಪುಗೆ ಪುಗೆಯೆಂತ ಅಂದಾರೊ।
ಮಂಗಳವಾರ ದಿವಸ ಸ್ವಾಮಿ ಹೋಗಿದರೊ
ಪುಷ್ಪದ ಮಳಿ ಅವರು ಕರದಾರೊ
ಕೂಡಪಲ್ಲ ಹಿಂದು ಕುಂದೆ ನೋಡರಿ ಹೊಂದಿಲ್ಲವರಿಗೆ ಧೂಳಿತಿಟ್ಟ ಸ್ವಾಮಿ
ಹೋಗಿದಾರೊ ॥ ॥ ಜೀಜೀ ॥ ಚೌಕ ೧೦ ॥

ಏರು ಪುರಾಣ ಹಚ್ಚಿ ಪ್ರಸಿದ್ಧರಾದರೊ । ಅಪನೋರು ಬೆಳಕಿಗಿ ಬಂದಾರಾ।
ಶಂಕರಯ್ಯನವರು ಮೀರಿದ ಸ್ಥಲಗಳೊ । ಹಸುಗೂಸಿಗಿ ಬೇಕಾದವರು।
ಪಲ್ಲಕ್ಕಿವೊಳಗ ಮೊಹರ್ತ ಮಾಡಿದರೊ । ಚತ್ತ ಚಾಮರ ಕೋಟಿಗಳ
ಹಿಡಿಸಿದರೊ।
ಬೆಳ್ಳಿ ಬೆತ್ತದವರು ಚಡಿ ಜೋಪಾದಿಯವರು ಮುಂದ ಬಂದ ಟೆಂಕ
ಸಾರಿದರೊ ಕಾಳಿ ಹಿಡದರೊ ॥ ॥ ಜೀಜೀ ॥

ಮುನ್ನs ಪುರಾಣ ಶಂಕರಯ್ಯನವರು ಪರವುತ ದಾರಿ ಹಿಡದಾರೊ।
ಮಹಾಕೂಟದೊಳಗ ಜಳಕ ಮಾಡಿದರೊ ।
ಉಳವಿ ಕ್ಷೇತ್ರ ಅವರು ನೋಡಿದರೊ ।
ಸುತ್ತಿನ ಪರಸಿ ಬಂದು ನೆರದಿತೊ
ಮಟ್ಟ ಮಾಯ ಅವರು ಆಗಿದಾರೊ। ಸ್ವಾಮಿ ಹೋಗಿದಾರೊ ॥
॥ ಜೀಜೀ ॥

ಇಳುವು ಬಂದ ಪರಸಿಗಿ ಅಪ್ಪಣೆ ಕೊಟ್ಟಾರ
ಹಿಂದಕ ತಿರಗ್ಯಾರ
ಬಂಥನಾಳಕ ಬಂದಾರ ಚೌರವ್ವನ ಕಳಸಿದಾರೊ ॥ ॥ ಜೀಜೀ ॥

ಏರು ಬಣಜಿಗೇರ ಮಲ್ಲಿಕಾರ್ಜುನನ ಮನಿಯಾಗ
ಸ್ವಾಮಿ ಪರಾಕ್ರಮ ತೋರಿದರಾ ।
ನೀಡಿದಷ್ಟು ಅಡಗಿ ಹಂಗೆ ಸರಸಿದಾರಾ।
ಬಲ್ಲವರು ಧನ್ಯ ಧನ್ಯ ಆಗಿದರಾ ।

ಕೂಡಪಲ್ಲ ಹಿಂದ ಕುಂದೆ ನೋಡ ಹೊಂದಿಲ್ಲದವರ ದೂಳತಿಟ್ಟೆಸ್ವಾಮಿ
ಹೋಗಿದರಾ ಶರಣಪ್ಪನವರಾ ॥ ॥ ಜೀಜೀ ॥ ಚೌಕ ೧೧ ॥

ಏರು ಪುರಾಣ ಹಚ್ಚಿ ಪ್ರಸಿದ್ಧರಾದರೊ
ಅಪನೋರು ಬೆಳಕಿಗಿ ಬಂದರೊ
ಹತ್ತು ಮಂದ್ಯಾಗ ಹೌದ ಹೌದ ಅನಿಸಿದಾರೊ
ನಿತ್ಯ ಅವರು ದಾಸೋಹ ಅವರು ಇಡಸಿದಾರೊ
ಅಜಮಾಸಿ ಬಂದ ಭಕ್ತರೊ ಶರಣಪ್ಪಗ ಕಾಯಿ ಒಡಸಿದಾರೊ
ಕರ್ಪೂರ ಬೆಳಗಿದಾರೊ ॥ ॥ ಜೀಜೀ ॥

ಶಿವರಾತ್ರಿ ದಿನ ಅಗ್ಗಿ ನೇಮಿಸಿ ಸ್ವಾಮಿ ಆವಾಗ ಇಟ್ಟಾರಾ ।
ರೆಬಿನಾಳ ಪಾಲಕಿ ತರಸಿದಾರಾ । ಅಗ್ನಿಕುಂಡ ಅವರು ತರಸಿದಾರಾ ।
ಗಂಧದ ಕೊರಡ ತಂದ ಹಾಕಿದರೊ ಅಗ್ನಿ ದೇವತೆಯ ಪೂಜೆ
ಮಾಡಿದರಾ ॥ ॥ ಜೀಜೀ ॥

ಇಳುವು ಚಾಂದಕೋಟಿಗಿ ಚಟ್ಟರಕಿ ಹಚ್ಯಾಳ । ಸಿಂದಗಿಗಿ ಬಂದಾಳ ॥ ಜೀಜೀ ॥
ನಿವ್ವಳಕೋಡಿ ಇಂಗಳಗಿ ಹರನಾಳ ಹಿಪ್ಪರಗಿ ಯರನಾಳ
ಜಾಲವಾದಿ ನಿವಳಾ । ಬಡಗ್ಯಾನ ನಗರ್‍ಯಾಳ ॥ ॥ ಜೀಜೀ ॥

ಕೊಂಡಗೂಳಿ ಬೈರೋಡಗಿ ಬೂದ್ಯಾಳ ಹುಲಬೆಂಚಿ ನಗರ್‍ಯಾಳ
ಮುಂದ ಸಾತ್ಯಾಳ ಅಲ್ಲಿಂದ ಕಡಕೋಳ ॥ ॥ ಜೀಜೀ ॥

ಏರು ಕೊಗಟನೂರ ರಾಂಪೂರ ಸೊಂಪುರ ಗಣಿಯಾರ ಎಳಮೇಲಿ
ಭಕ್ತರು ತಯ್ಯಾರಾ ॥
ಬೇಡಿಕೊಂಡು ಅಗ್ಗಿಗೆ ಬರ್ತಾರಾ ।

ಕೂಡಪಲ್ಲ ಹಿಂದ ಕುಂದೆ ನೋಡರಿ ಕುಂದಿಲ್ಲದವರಿಗಿ ಧೂಳತಿಟ್ಟ ಸ್ವಾಮಿ
ಹೋಗಿದರರಾ । ಶರಣಪ್ಪನವರಾ ॥ ॥ ಜೀಜೀ ॥ ಚೌಕ ೨ ॥

ಏರು ವಾಡೆ ಸುರಗಳ್ಳಿ ತಾಂಬಾ ಮಸಳಿ ಸಂಗೂಗಿ ಶಿರಶ್ಯಾಡ ಮನಸನಹಳ್ಳಿ
ಹಿರಿನಾದ ಅರ್ಜುನಗಿ ಗುಡ್ಡಳ್ಳಿ ।
ಲಾಳಸಾರ ಗ್ವಾಳಸಾರ ಹೂವಿನಹಳ್ಳಿ।
ಗುಂದಗಿ ನಾವದಗಿ ಅಳ್ಳೊಳ್ಳಿ ಮಂದಿ ತರ್ಪೆ ಗಟ್ಟಿ ಬಂದಿತಹೊಳ್ಳಿ
ಮುಂದ ಕುರಬತಳ್ಳಿ॥ ॥ ಜೀಜೀ ॥

ತೆಗ್ಗೆಳ್ಳಿ ರಾಮನಹಳ್ಳಿ ಖ್ಯಾಡ ಬುಂಯಾರಾ ।
ಇಂಡಿ ಬೆವನೂರಾ ಮಾಯನಳ್ಳಿ ।
ಸಾಲೋಟಗಿ ಸಾತಲಗಾಂವ ತೆನ್ನಳ್ಳಿ ।
ಹಿರಿರೂಗಿ ತಡ್ಲಿಗಿ ಹೊನ್ನಳ್ಳಿ ।
ರೂಡಿಗಿ ಖ್ಯಾಡಿಗಿ ಮಿರಗಿ ಶಿವಪುರ ಮಂದಿ ಬಂದಿತರಿ
ಭೀಮರತಿ ಹೊಳಿ ಸುರದಂಗ ಮಳಿ ॥ ॥ ಜೀಜೀ ॥

ಇಳು ನಾಗಠಾಣ ಹತ್ತರಕಿ ಕೊಟ್ನಾಳ । ಕೋಳುರಗಿ ದೇಗಿನಾಳ ಮುಂದ
ಶಿರನಾಳ ॥ ॥ ಜೀಜೀ ॥

ಗುಣಿಕಿ ಬಮನಳ್ಳಿ ಬಲಿಮಿಂಚನಾಳ
ಈಂಗನಾಳ ಬಸನಾಳ ಅಡವಿ ನಂದ್ಯಾಳ
ಅಲ್ಲಿಂದ ಹತ್ತರಕ್ಯಾಳ ॥ ॥ ಜೀಜೀ ॥

ಏರು ಹಿಟ್ನಳ್ಳಿ ಗಂಗನಹಳ್ಳಿ ಅಂಕಲಗಿ
ಬೆನಕನಾಳ ಪಡಗಾನೂರ ಭಕ್ತರು ತಯ್ಯಾರಾ ।
ಬಮ್ಮನಳ್ಳಿ ಇಂಗಳೇಶ್ವರ ಡೋಣೂರ
ಬೇಡಿಕೊಂಡು ಅಗ್ಗಿಗೆ ಬರ್‍ತಾರಾ ।

ಕೂಡಪಲ್ಲ ಹಿಂದ ಕುಂದಿಲ್ಲದ ನೋಡ ಹೊಂದಿಲ್ಲದವರಿಗೆ ದೂಳತಿಟ್ಟಸ್ವಾಮಿ
ಹೋಗಿದರಾ ಶರಣಪ್ಪನವರಾ ॥ ॥ ಜೀಜೀ ॥ ಚೌಕ ೧೩ ॥

ಏರು ಉಕ್ಕಲಿ ಮನಗೂಳಿ ಡೋಣಸಾಲ ಗೌಡರು ಉಟ್ಟ ತೊಟ್ಟ ಶೃಂಗಾರ
ಆಗಿದಾರಾ ।

ಕುದರಿ ಮೇಲೆ ಅವರು ಕುಳತಾರಾ ।
ಚಕ್ಕಡಿ ಕೊಳ್ಳ ಅವರು ಕಟಿಸಿದರಾ ।
ಹೆಂಗಸರ ಗಂಡಸರು ಮುದಕ್ಯಾರು ಕೂಡಿ ಗಾಡಿಯೊಳಗ ಅವರ
ಕುಳಿತಾರಾ ಅಗ್ಗಿಗಿ ಬರತಾರಾ ॥ ॥ ಜೀಜೀ ॥

ಒಗದಿರಗಿ ಮೈದುರಗಿ ಕರ್ಜಗಿ ಜಾಡ್ಯರ ನೋಡರಿ ಹಟಕಾರ
ತ್ವಾಳನೂರದಾಗ ಬಾಳ ಚೆಟ್ಟೇರಾ ।
ಮಸಳ್ಯಾಗ ಹಾರ ಬಾಳ ಜ್ಯಾಡರ ।
ಅಂಕಲಕೋಟೆ ಬಾಗಲಕೋಟೆ ತಾಳಿಕೋಟೆ ಸುತ್ತ ನಾಡದಾ
ಸುರಪುರಾ ಬಂದ ಸಾವಕಾರಾ ॥ ॥ ಜೀಜೀ ॥

ಇಳು ಪಾಢೆ ಪ್ರಥಮ ದಿವಸ ಎದ್ದಾರಾ ।
ಝಳಕ ಮಾಡ್ಯಾರಾ ।
ಶಿವಪೂಜಿ ಮುಗಸಿದರಾ ॥ ॥ ಜೀಜೀ ॥

ಆರ ತಳಗಿ ದಿವ್ಯ ಹಿಡಸಿದರಾ ।
ಪುರವಂತನ ಕರಸಿದಾರಾ ।
ಒಡಬ ಓದಿದರಾ ॥ ॥ ಜೀಜೀ ॥

ಏರು ಅಗ್ಗಿಗೆ ಹೋಗಿ ಪ್ರದಕ್ಷಿಣೆ ಹಾಕಿದಾರೊ । ಧೂಳ ಪದಕ
ನೋಡರಿಹೊಡದಾರ

ಮಲ್ಲಿಗ್ಹೂವ ಅವರು ಒದಗಿದಾರಾ ।
ಉಗ್ಗಳಸಿ ಅಗ್ಗಿ ಅವರು ಹಾಯ್ದಾರಾ

ಕೂಡಪಲ್ಲ ಹಿಂದ ಕುಂದಿಲ್ಲದ ನೋಡ ಹೊಂದಿಲ್ಲದವರಗಿ ಧೂಳತಿಟ್ಟಸ್ವಾಮಿ
ಹೋಗಿದರ । ಶರಣಪ್ಪನವರಾ ॥ ॥ ಜೀಜೀ ॥ ಚೌಕ ೧೪ ॥

ಏರು ಅಗ್ಗಿಯ ಹಾಯ್ದು ಅಪನೋರು ಹೋಗಿ ಖುರ್ಚಿಯ ಮ್ಯಾಲ
ಅವರು ಕುಂತಾರ
ಚುಕ್ಕಿವೊಳಗ ಚಂದ್ರಾಮನಂಗ ಕಂಡಾರಾ ।
ಬಂದ ಮಂದಿ ಅವಗ ಕಾಯಿ ಒಡದಾರಾ ।
ಸುತ್ತಿನ ಮಂದಿ ಆಯೇರಿ ಮಾಡಿದಾರೊ ।
ಪರಸಾದ ಮುಗಸಿ ಹೋಗ ಅಂದಿದಾರಾ ।
ಪರಾಕ ಹೊಡದಿದಾರಾ ॥ ॥ ಜೀಜೀ ॥

ಕಲಬುರ್ಗಿ ಕಲ್ಯಾಣಕ ಹೋಗಿ ಬಸವಣ್ಣನ ಮಹಾತ್ಮ ನೋಡಿದರಾ ।
ಸೊಲ್ಲಾಪುರಕ ಸ್ವಾಮಿ ಸಾಗಿದರಾ ।
ಸಿದ್ಧೇಶ್ವರನ ದರ್ಶನಮಾಡಿ ಬಂಥನಾಳ ಗ್ರಾಮಕ ಬಂದಿದರಾ ।
ತೀರ್ಥ ತಂದಿದರಾ ॥ ॥ ಜೀಜೀ ॥

ಇಳು ಮನಸಿನೊಳಗ ಮಂಡಿಸಿ ಮಾಡಿದ್ದ
ಉಳವಿಗಿ ಹೋಗುದು ಕನಸಿನ್ಯಾಗ ಬಂದಾ
ಶರಣಪ್ಪ ಬ್ಯಾಡಂದಾ ॥ ॥ ಜೀಜೀ ॥

ಹೇಳಿದ ಮಾತ ಕೇಳಲಿಲ್ಲ ಅವಂದ ।
ಬಾಲ ಒಲದಿದ್ದ ಗಂಧದ ಮಳಿ ಕರದ ।
ಮಹಿಮ ತೋರಿದ್ದ ॥ ॥ ಜೀಜೀ ॥

ಗುರುವಿನ ಮಾತ ಶೆಟಿಯ ಮಾಡಿದ್ದಾ
ಮುಳಸಾವಳಗಿ ಬಂದಾ ।
ಗೌಡರನಕರದ ಉಳವಿಗಿ ನಡಿರೆಂದಾ ॥ ॥ ಜೀಜೀ ॥

ಏರು ಎಲ್ಲಾರನ ಕರಕೊಂಡ ಹೊಂಟಾರೊ ಸ್ವಾಮಿ ಬಾದಾಮಿ ಪುರ
ಅವರು ಹೊಕ್ಕಾರಾ ॥
ಮಹಾಕೂಟದೊಳಗ ಝಳಕ ಮಾಡಿದರಾ ।
ಉಳವಿ ಕ್ಷೇತ್ರ ಅವರು ನೋಡಿದರಾ ।
ಕೂಡಪಲ್ಲ ಹಿಂದ ಕುಂದಿಲ್ಲದೆ ನೋಡರಿ ಹೊಂದಿಲ್ಲದವರಿಗೆ ದೂಳತಿಟ್ಟಿ
ಸ್ವಾಮಿ ಹೋದರಾ । ಶರಣಪ್ಪನವರಾ ॥ ॥ ಜೀಜೀ ಚೌಕ ೧೫ ॥

ಏರು ಉಳವಿಗಿ ಹೋಗಿ ತಿರಗಿ ಬಂದಾರೊ । ವಿಭೂತಿ ಉಂಡಿ ತಾವು
ತಂದಿದರಾ
ಬೇಡಿದವರಗಿ ಒಂದೊಂದು ಕೊಟ್ಟಿದರಾ ।
ಕಡಗಂಜಿ ಮಠಕ್ಕೆ ಸ್ವಾಮಿ ಸಾಗಿದರಾ ।
ಮುಂದಾಗು ಹುನ್ನರ ತಿಳಿಲಿಲ್ಲ ಸ್ವಾಮಿಗಿ
ಜಡಾ ಆಗೇದಂತ ತಿರಗಿದರಾ ।
ಮಠದಾಗ ಮಲಗಿದಾರಾ ॥ ॥ ಜೀಜೀ ॥

ಡೋಣೂರ ಗೌಡನ ಕರಸಿಕೊಂಡರೊ ।
ಹೇಳಿಕಿ ಕೇಳಿಕಿ ಮಾಡಿದರಾ ।
ಬಂಥನಾಳ ಜನಾ ನೋಡರಿ ಕೂಡಿದರಾ ।
ಚನಬಸಯ್ಯನ ಅವರ ಕೈಯಲಿ ಕೊಟ್ಟಿದರಾ
ತಾಂಬಾಕ ಹೋಗಿ ಗೈಮರಿ ತಂದು ಈ ಭೂತಿ ವೀಳ್ಯೆವ
ಮಾಡಿದರಾ ರುದ್ರಾಕ್ಷಿ ಕಟ್ಟಿದರಾ ॥ ॥ ಜೀಜೀ ॥

ಇಳು ಬಾ ಅಂತಾ ನಿಂಬೆಕ್ಕನ ಕರದಾರೊ ।
ಬಾಳ ಅವನ ಜೋಕೆ ಎಂದರೊ ।
ನಂದು ಆಯಿತೆಂದರೂ ।
ಕಣ್ಣೀಗಿ ನೀರ ತಂದರೊ ॥ ॥ ಜೀಜೀ ॥

ಬಂದ ದೈವಕ ಅಪ್ಪಣೆ ಮಾಡಿದರೊ।
ಶಿವ ಶಿವಾ ಹಂಗ ಅಂದರೊ
ಅಪನೋರು ಹೋದರೊ
ಲಿಂಗದೊಳಗ ಆದರೊ ॥ ॥ ಜೀಜೀ ॥

ಏರು ಸೃಷ್ಟಿಯೊಳಗ ಬಹುಶ್ರೇಷ್ಠ ಅನಿಸಿತೊ ಸಣ್ಣ ಹಳ್ಳಿ ಬಂಥನಾಳದೂರಾ।
ಅಲ್ಲಿ ಸಾಕ್ಷಾತ ನೆನದಾನ ಶಂಕಽರಾ ।
ಅವನ ಹೊರ್ತ ಇಲ್ಲಿ ನೋಡರಿ ಯಾರ‍್ಯಾರಾ ।
ಕೂಡಪಲ್ಲ ಹಿಂದ ಕುಂದಿಲ್ಲದ ನೋಡರಿ ಹೊಂದಿಲ್ಲದವರಿಗಿ ದೂಳ ತಿಟ್ಟಸ್ವಾಮಿ
ಹೋದರಾ। ಶರಣಪ್ಪನವರಾ ॥ ॥ ಜೀಜೀ ॥ ಚೌಕ ೧೬ ॥

ಏರು ಸುದ್ದಿಯ ಕೇಳಿ ಸುತ್ತಿನ ಜನರು ಸುತ್ತ ಮುತ್ತ ಬಂದು ನೆರದಾರಾ।
ನಗಾರಿ ನೌಬತ್ತ ನುಡಸಿದರಾ ।
ಚಿಟ್ಟಲಿಗಿ ಬಾರಿಸಿಕೊಂಡ ಹಿಡಸಿದರಾ
ಅಬಿರ ಗುಲಾಲ ಮಲ್ಲಿಗೆ ಹೂವ್ವಾ ಅಗರ ಬತ್ತಿ
ನೋಡರಿ ಹಚ್ಚಿದರಾ।
ಮಕರಂದ ಹಿಡಿಸಿದರಾ ॥ ॥ ಜೀಜೀ ॥

ಕೊಟಗಿ ಒಳಗ ಸಮಂದಿ ತಗದಾರ
ಅಳತಿ ಬರೋ ಬರಿ ಇಟ್ಟಾರಾ
ಅಪನವರನ್ನ ಚೀಲದೊಳಗೆತ್ತಿದರಾ
ಪುಷ್ಪ ಜಲ ಮಾಡಿ ಚಂಡಿ ಕಟ್ಟಿದರಾ ॥ ॥ ಜೀಜೀ ॥

ಇಳು ಮೂರಸರತಿ ಉಯ್ಯಾಲಿ ಅಡಿದರು
ತಿರುಗುಣ್ಯಾಗಿಟ್ಟು ಸೂತ್ರ ಹಿಡಿದಿದರು ॥ ॥ ಜೀಜೀ ॥

ಹಿಂದಕ ಏರಿ ಬಂದರೊ
ಮಣ್ಣ ದಬ್ಬಿ ಬಸವಣ್ಣನ ಕುಂಡ್ರಿಸಿದರು
ಅಪನವರು ನಿಂತೊ ॥ ॥ ಜೀಜೀ ॥

ಏರು ಪತ್ರಿ ಒಗೆದು ಚಪ್ಪಳಿಗಿ ಇಟ್ಟಾರೊ ಪುಗೆಪುಗೆ ಅಂತಾಂದಾರು
ಮಂಗಳವಾರ ದಿವಸ ಸ್ವಾಮಿ ಹೋಗಿದಾರು ।
ಪುಷ್ಪದ ಮಳಿ ಅವರು ಕರದಾರು ।
ಕೂಡಪಲ್ಲ ಹಿಂದ ಕುಂದಿಲ್ಲದೆ ನೋಡ್ರಿ ಹೊಂದಿಲ್ಲದವರಿಗೆ ದೂಳ ತಿಟ್ಟಸ್ವಾಮಿ
ಹೋಗಿದರಾ । ಶರಣಪನವರಾ ॥ ॥ ಜೀಜೀ ॥ ಚೌಕ ೧೭ ॥

ಏರು ದೊಡ್ಡವರ ಮಹಾತ್ಮರಿಗೆ ಕೇಳಿದವರಿಗೆ ಪಾಪ ವಿನಾಶ ಹ್ವಾದಿತೊ
ಪುಣ್ಯದ ಸದ್ಗತಿ ಹೊಂದಿತೊ
ಮುಕ್ತಿಯ ಮಾರ್ಗ ತೋರಿತೊ
ಹಗಲ ಇರಳ ಅವರ ಸ್ಮರಣಿ ಮಾಡಿದರ
ಬಂದ ಕಂಟಕ ಬಯಲಾದಿತೊ । ಅದು ಹೋದಿತೊ ॥ ॥ ಜೀಜೀ ॥

ಅಂಥವರ ಮಾತಿಗೆ ನಿಂದೆ ಆಡಿದರ ವಂಶ ಖಂಡಿತಾದಿತೊ
ಗೋ ಹತ್ಯೆ ಶಿಶು ಹತ್ಯಾ ಹತ್ತಿತೊ ।
ಸ್ತ್ರೀ ಹತ್ಯೆ ಎಂದಿಗು ಬಿಟ್ಟಿತೊ ।
ಭಕ್ತಿಲಿಂದ ತಾವು ನಡದರ ಮುಕ್ತಿ ತೋರಿತೊ ಮುಂದ ಉಳದಿತೊ ॥
॥ ಜೀಜೀ ॥

ಇಳು ಮುಳಸಾವಳಗಿ ಊರ ಮೋಜಿಂದ
ಮತಾಬ ಸಾಹೇಬ ನೆನದ ಆತನ ದಯದಿಂದ
ವರುವ ಬೇಡಿದ್ದಾ ಗುರು ಸೋಫೆ ಸಾಹೇಬ ಹೇಳಿದ್ದ
ಶಿಷ್ಯಾಗ ತಿಳಸಿದ್ದ
ಸುಳ್ಳ ಬ್ಯಾಡಂದ ಕರೆ ನುಡಿಯೆಂದ
ಏರು ವಿಕ್ರಮನಾಮ ಸಂವತ್ಸರದಾಗ ಪದಾ ಮುಗದದರಿ ಗುರುವಾರ
ಸಿದ್ಧಪ್ಪ ಆಗ್ಯಾನೊ ಕಿಂಕರಿ
ಅವಗ ಗರುವ ಇಲ್ಲ ನೋಡರಿ ಜರಾ
ಕೂಡಪಲ್ಲ ಹಿಂದಕ ಒಂದೆ ನೋಡರಿ ಹೊಂದಿಲ್ಲದವರಿಗೆ ದೂಳಬಿಟ್ಟಿಸ್ವಾಮಿ
ಹೋಗಿದರಾ । ಶರಣಪನವರಾ ॥ ॥ ಜೀಜೀ ॥ ಚೌಕ ೧೮ ॥

ಜ್ಯಾತ್ರಿಗಿ ಹೋಗು ಮಿತ್ರನ ಕಂಡು

॥ ಖ್ಯಾಲಿ ॥

ಜ್ಯಾತ್ರಿಗಿ ಹೋಗು ಮಿತ್ರನ ಕಂಡು ಮಿತ್ರಿ ಚಿಂತಿ ಮಾಡತಾಳ।
ಖಾತ್ರಿ ಹೇಳರಿ ಹೋಗುದು ಯಾವಲ್ಲಿ ।
ಜ್ಯಾತ್ರಿಗೆ ಹೋಗು ಜಾಣ ಒಂದ ಖಾತ್ರಿ ಜರದ ರುಮಾಲ ಸುತ್ತಿ।
ಸಾಟಿ ಸತ್ತರಿ ರೂಪಾಯಿದೊಂದ ಧೋತರ ಉಟ್ಟು ಕರಬತ್ತ ಕಾಟಿ
ಛತ್ರಿ ಹಿಡಕೊಂಡು ಕೈಯೊಳಗ
ಒತ್ತರ ಮಾಡಿ ಹೊಂಟ ರಸ್ತೀಲಿ
ಎತ್ತರ ಕುದರಿ ಮ್ಯಾಲ ಕುಂತ ಶಿಸ್ತೀಲಿ
ಶಾಸ್ತ್ರ ಶಾಣೆ ಇದ್ದ ಸರ್ವ ವಿದ್ಯೆದಲ್ಲಿ
ಪುರುಷನ ರೂಪ ನೋಡಿ ಹರುಷದಿಂದ ಅಂತಾಳ ಬಾಲಿ ।
ಅರಿಷಿಣ ತೆನಿಯಂತ ಹುಡುಗ ಅರಸನ ಮಗ ಆದಾನೇನು ।
ಕರದರ ತಲಿಗೆ ಹೊಡೆದಾನೇನು ನಾ ಎಂಥ ಇವರ ಕರಿಯಲಿ।
ಇವನ ಕೂನ ಹತ್ತೊಲ್ಲದು ಎಲ್ಲೆಲ್ಲಿ ॥ ೧ ॥

ಬಾಳ ಮಾಡಿ ಇವನಿಗೆ ಬಾಲಕೃಷ್ಣ ಅನಬೇಕಾದರ ನೀಲವರ್ಣ ಇಲ್ಲೊ
ಶಿವ ಅನಬೇಕಾದರ ಮೂರ ಕಣ್ಣ ಇವನಿಗಲ್ಲಾ
ಚತುರ ಮುಖದವನಲ್ಲಾ ।
ಚಂದ್ರನಂಥ ಅನಬೇಕಾದರ ಡಾಗ ಇಲ್ಲ ಎಲ್ಲೆಲ್ಲಿ
ಏನು ಪಡೆದು ಬಂದಿದ್ದಾನೋ ದೇವರ ಬಲ್ಲಿ
ಇವನ ಹಡೆದ ತಾಯಿ ಇದ್ದಾಳೊ ಯಾವಲ್ಲಿ ।
ಗುಂಗ ವರದ ನಿಂತಾಳಾಗ ಸಂಗ ಮಾಡಿ ಹೋದರ ಬಂಗಾರ
ಕುಡತೀನಿ ಅಂತಾಳ ಹತ್ತತೊಲಿ ॥ ೨ ॥

ಇಳು ಈ ಚದುರಿಯ ಮಾತ ನೆದರಾಗ ಇಲ್ಲದೆ ಚದುರತಾ ಕುದರಿ
ಹೊಡಿತಾ ಸದರ ವಿಜಾಪುರಕ ಹೋಯಿತೊ
ಸಂಕ್ರಾಂತಿ ಹಬ್ಬದ ದಿವಸ ಸಿದ್ಧರಾಮನ ಜಾತ್ರಿ ಅಲ್ಲಿ ಇತ್ತು
ಅಲ್ಲಿ ನೆರೆದ ಮಂದಿ ನೋಡಕೋತ ನಿಂತಿದಾರು।
ದೇವರಿಗೆ ಹೋಗು ಬಾಲೆರೆಲ್ಲಾ।
ಕಾಯಿ ಕರಪರ ಉಡ್ಯಾಗ ಕಟಗೊಂಡು ನೆನಪಹಾರಿ ಅಲ್ಲಿ ನಿತ್ರೋ॥
ಅಗಲ ತಗೊಂಡು ಹೋಗು ಮಂದಿ ಹಂಗ ಹರೆದು ಬರದು ಕಂಡು
ಸುಂದರ ಸುಗುಣ ತನ್ನ ಕುದರಿ ನಿಂದರಸಲಾರದ ಮುಂದಕ ಹೊಡೆದಾ।
ಬದು ಹಾರಿ ಮಂದಿ ಬೆನ್ನ ಹತ್ತ್ಯೋ
ಹಳ್ಳಿ ಮುದುಕಿ ಹೋಗುವುದರೊಳಗ ಹಳ್ಳಿಯೊಳಗಿನ ಮುದುಕೊಬ್ಬ

ಬಳ್ಳೊಳ್ಳಿ ಮಾರಕೋತ ಹೊಂಟಿದಾನೊ
ಉಳ್ಳಾಗಡ್ಡಿ ಬುಟ್ಟಿ ಇಟ್ಟು । ಬಳ್ಳೊಳ್ಳೆವನ ತೆಕ್ಕಿಗೆಬಿದ್ದು
ಬಣಗಾರ ಮುದಕನ ಕೈಯಿಲೆ ಬಾಯಿ ಬಾಯಿ ಹೊಡೆಸಿಗೊಂಡು
ಸುಮ್ಮನೆ ಕುಂತೋ
ಎಲಿಗಾರಕಿ ಇವನ ನೋಡಿ ಎಲಿ ಎಲ್ಲಾ ಹಾರಿಸಿದಾಳೊ
ಖಾಲಿ ಬುಟ್ಟಿ ತಲಿಮ್ಯಾಲ ಬಾರ್ಲ ಹಾಯಕೊಂಡು ಬಾಜ್ಯಾರ ಹಿಡಿದು
ಸುಮ್ಮನೆ ನಡಿತೊ
ಬುಕಿಟಗಾರ ಬೀಯಮ್ಮ ನೋಡಿ ಒಕ್ಕಟ್ಟಾಳ ಕುಂಕುಮಡಬ್ಬಿ।
ಅಭೀರ ಗುಲಾಲ ಹಲಪುಡಿಯೆಲ್ಲಾ ಹಾರಿಸಿದಾಳೊ ಮಂದಿ ಮ್ಯಾಲ।
ಬಾಜಾರ ಹಿಡಿದು ಕೆಂದುಳಿ ಎದ್ದಿತೊ
ಸಣ್ಣ ದೊಡ್ಡ ನೆರದ ಮಂದಿ ಕಣ್ಣಿಗೆಲ್ಲಾ ಬೀಳಲಾಕ ಹತ್ತಿತ್ತು
ಹೆಣ್ಣಿನ ಕೂಡಿ ಆದ ಜಾನ ಇಬ್ಬರು ಅಣ್ಣದೇರು ಕುಂಡಿ ಮ್ಯಾಲ
ಹೊಡೆದರ ನೆನಪಾಯಿತೋ।
ಕುಂಬಾರ ಹುಡಗಿ ಕತ್ತಿ ಹಿಡಕೊಂಡು ಕಟ್ಟೀ ಮ್ಯಾಲ ಕುಳಿತ್ತಿದ್ದರಲ್ಲಿ
ಬತ್ತೀಸ ಕಾಳಿ ಹುಡುಗನ ಕಂಡು ತತ್ರ ಬತ್ರ ಮಾಡಿ ಬಾಲಿ ।
ಕತ್ತರಿಸಿಗೊಂಡು ಬಿದ್ದಾಳ ಗಡಗಿ ಮ್ಯಾಲಿ ।
ಗಡಗಿ ಒಡೆದಿದ್ದು ನೋಡಲಿಲ್ಲ ಪ್ಯಾಲಿ ।
ಬೋಕಿ ಹೊತಗೊಂಡ ಹೊಂಟಾಳ ತಲಿಮ್ಯಾಲಿ ।
ತಳವಾರ ಹುಡುಗಿ ಚ್ಯಾವಡಿ ಉಡುಗಿ ಚಂದ್ರ ಸಾಲಿಗಿ ಹೋಗುವಾಗ
ಸುಂದರಾಂಗನ ಕಂಡು ಬಾಲಿ ಇಂದ್ರಕಾಮ ತಲಿಗೇರಿ ।
ಅಡ್ಡ ಬಿದ್ದಾಳ ಜಾಣನ ಇದಿರೀಗಿ
ಅವ ಹೋದದ್ದು ಖಬರ ಇಲ್ಲೊ ಚದುರೀಗಿ ॥
ಮೆಟ್ಟಗಾಲ ಮೇಲೆ ಇಟ್ಟು ಎಷ್ಟೊ ಮಂದಿ ತುಳಿತಾರ ಗೊಡ್ಡೆಮ್ಮಿ
ಅಂತಾಕಿ ॥

ಲಮಾಣ್ಯಾರ ಕೇರ ಸಕ್ರಿ ಅಲ್ಲಿ ಸಂತೆ ಒಳನ ಕಟ್ಟಗಿಮಾರಿ।
ಸುಮ್ಮನೆ ಮನಿಕಡಿ ಹೋಗಲಿಲ್ಲಾ ।
ಜಮರ ಜನಾ ನೆರೆದಿದ್ದಾರ ಕಂಡು । ನೋಡಲಾಕ ಬಂದಿದ್ದಾಳು
ಅಲ್ಲೀಗಿ।
ಬಹು ದಿಟ್ಟಿಸಿ ನೋಡಿದಾಳೊ ಪುರುಷನಿಗೀ ।
ಕಟ್ಟಿದ ಗಗ್ರಿಯೆಲ್ಲಾ ಹರದಿದ್ದಾವಾ ತಾನಾಗಿ ।
ಕಮಂಡಿ ಕಟ್ಟದ ಕೂದಲ ಹಿಡಿದು
ದವಡಿ ದವಡಿ ಹೊಡದಿದ್ದಾರೊ ಒಬರ ಸಹ ಇಲ್ಲೊ ಕಳಗೇಡಿಗಿ
ಎಲ್ಲಾ ಕಂಡು ಗೊಲ್ಲರ ಎಲ್ಲಿ ಹಲ್ಲ ಕಿಸಗೊಂಡು ಹೊಂಟಿದಾಳು
ನಲ್ಲನಬಲ್ಲಿ ಹೋಗಬೇಕಾದರ ಎಲ್ಲಿ ದಾರಿ ಸಿಗುವಲ್ಲದು

ಅಲ್ಲೆ ಇದ್ದಾಳು ಹಳಿ ಜೋಳಿಗಿ
ಎಂದೆಂದು ನೋಡವಾರ ಬಿಜನಿಗಿ
ಎಮ್ಮಾ ಲೇಸ ಗುಂಟೆ ಅಡವಿ ಮಂದಿಗಿ
ಹುಚ್ಚ ಹಿಡದವರಂಗ ಹೋಗಿ ಬಚ್ಚಲ ಕುಣಿಯಾಗ ಕಡಕೊಂಡು ಬಿದ್ದು
ಕಚ್ಚಿದಾವ ನಾಯಿ ಒಳಿತಾಗಿ

ಏರು ಆ ಡಂಬರ ಭೀಮಿ ದಾಸರ ರಾಮಿ ಜಂಬದಿಂದ ಹೋಗುದರೊಳಗ
ಗಂಭೀರನ ಮುಖ ಕಾಣಿಸತ್ತಿತ್ತು।
ಹಾರಿ ಹೌರಂಡಿ ಎನ್ನ ದಾರಿ ಒಳಗ
ಸರದ ನಿಂತು ಜೋರದಿಂದ ಒದ್ದಳು ಧಕ್ಕಿ ಮಿಕ್ಕಿ ಆಗುದರೊಳಗ ।
ಹತ್ತಿ ಸಂದಿ ಅಲ್ಲಿ ಇತ್ತು ಪತ್ತಾರ ಹುಡುಗಿ ಬಚ್ಚಲದಾಗ
ಜಳಕ ಮಾಡುದು ಬಿಟ್ಟುಗೊಟ್ಟು ಹಣಿಕೆ ಹಾಕಿ ನೋಡಕೋತ ನಿಂತಳೊ।
ತತ್ರ ಬತ್ರ ಮಾಡಿ ಬಾಲಿ ಒತ್ತರ ಮಾಡಿ ಹೋಗ ಬೇಕಂದ್ರ
ಹತ್ತರ ಇಟ್ಟ ಸೀರಿ ಬಿಟ್ಟು ಕುಬಸನೆ ತೊಟ್ಟು ಹೊಂಟಳೊ
ಹೊರಗ ಬಂದು ನೋಡುದರೊಳಗ ಮಂದಿ ಯಾರು ಇದ್ದಿದ್ದಿಲ್ಲ
ದಾರಿ ತಪ್ಪಿ ಜುಮ್ಮಾ ಮಸೂತಿಗಿ ಹೋದಳೊ
ಅಲ್ಲಿ ಮುಲ್ಲಾ ಸಾಹೇಬ ಅಲ್ಲಾನ ಮ್ಯಾಲ ನಂಬಿಗೆ ಇಟ್ಟು
ನಮಾಜ ಮಾಡಿ ಬರುವುದರೊಳಗ ಇದರಿಗೆ ಹೋಗಿ ನಿಂತಿದಾಳೊ
ಮುಲ್ಲಾಸಾಹೇಬ ನೋಡಿ ಗಾಬರಿಯಾದ
ಅಲ್ಲಾ ಮೈ ಕ್ಯಾಕರೆ ಬಡೇ ಸೈತಾನ ಗಡ
ಕುಂಡಿ ಮ್ಯಾಲ ಜಡದರ ಬತ್ಲೆ ಅದಿನಂದ ಹೇಳಿದಳು ।
ಗುಂಗ ಎಲ್ಲಾ ಇಳಿದ ಬಳಿಕ ಲುಂಗಿ ಕೊಟ್ಟ ಮುಲ್ಲಾ ಸಾಹೇಬ
ಉಟಕೊಂಡು ಮನಿಕಡಿ ಹೋದಳು
ಹಂಡ ಬೆರಕಿ ಹೂಗಾರ ಮಾಳಿ
ಪುಂಡ ಹುಡುಗನ ಕಂಡ ಕೂಡಲೆ
ಚೆಂಡು ಹೂವಿನ ಹಾರ ತಂದು
ಹಿಂಡ ಮಂದ್ಯಾಗ ಹಾಕ್ಯಾಳ ಕೊರಳಲ್ಲಿ
ಮುಖ ನೋಡ ಬೇಕೆನುವ ಪ್ರೀತಿಲಿ
ಸುಖ ಆಗಬೇಕು ಜಾಣ ಇನಮ್ಯಾಲಿ
ಇದು ಮುಳಸಾವಳಗಿಯ ಮಡಿವಾಳನ ಖ್ಯಾಲಿ॥

ಬಾಗಲಕೋಟೆ ಹುಂಡಕಾರ

ಬಾಗಲಕೋಟೆ ಶಾಹರದಾಗ ಹುಂಡೇಕಾರನ ಮನಿಯಾಗ
ಸೂರ ಆಯಿತ ಏನ ಹೇಳಲಿ ಶುಕ್ರಾರ ದಿನಾ ।
ರಘುನಾಥ ಲಿಂಗೈಯ್ಯ ಮಾಡಿದ ಮಸಲತನಾ ।
ಈ ಹುಡುಗನ ಕೊಂದರ ಆದಿತೇನೊ ದ್ರವ್ಯ ಸ್ವಾದೀನಾ ॥ ಜೀಜೀ ॥

ತಾಸ ರಾತ್ರಿಯಾದ ಮ್ಯಾಲ ಕೂಸಿನ ಮೋಸ ಮಾಡಿ ಕೊಂದಾರಣ್ಣಾ।
ಕಾಸ ತಾಯಿ ಮನಿಯಳಗಿದ್ರ ಆದೀತ ಇನ್ನೇನಾ ।
ಆಸೆ ಕಡದ ಬಂತೊ ಈಶ ಒಯ್ದನೋ ರೇವಣ ಸಿದ್ದನಾ ॥ ಜೀಜೀ ॥

ವಿಜಾಪುರ ಜಿಲ್ಲೆಗೆಲ್ಲಾ ಮಂಜೂರವಾದ ಮನಿತಾನಾ
ಏನ ಹೇಳಲೆಪ್ಪಾ ಇಂಥಾ ಭಾರಿ ಸಾವಕಾರೊ ।
ಮುಂಬೈ ಇಲಾಖತನಕ ಹುಂಡೆಚೀಟಿ ಹುಕುಮ ನಡಸುವರೊ
ಶಿವನಲ್ಲಿ ಬೇಡಿ ಬಂದರೊ ಲಕ್ಷ್ಮೀಪುತ್ತರ ರುದ್ರಪ್ಪಣ್ಣನವರೊ
ಬೆಳಗಾಂವಿ ಧಾರವಾಡ ಶಾಪೂರ ಸೋಲಾಪುರ
ಸೊಲಗೇನ ಅಂಗಡಿ ಹಿರಿಚಂದ್ರಪೂರತನಕ ನೇಮಿಸಿ ಬಿಟ್ಟಾರೊ
ಅವರ ಕೈತೆಳಗಿದ್ದರ ನೋಡರಿ ಉಳಕಿ ಮಾರ್ವಾಡಿಯವರೊ ॥ ಜೀಜೀ ॥

ಹಿಂಗ ನೋಡರಿ ಇಲ್ಲಿತನಾ ಸಾಗಿ ಬಂತೊ ಮನಿತಾನಾ ।
ಯಾವುದಕೇನ ಕಡಿಮೆ ಮಾಡಿದ್ದಿಲ್ಲ ದೇವರೊ ।
ಅಲ್ಲಿ ಬಡ್ಡಿ ಖಾತೆ ನಡಸತಿದ್ದರು ಮಹಾರಾಣಿಯವರೊ ।
ಅವರಿಗಿ ವಿಧಿ ಕಾಡು ಕಾಲ ಬಂತಿನ್ನ ಅದಕೇನ ಮಾಡುವರೊ ।
ಲುಚ್ಚ್ಯಾ ಸೂಳಿಮಕ್ಕಳ ಕೂಡಿ ಕಚ್ಚಾ ಕೆಲಸಾ ಮಾಡಿದಾರೊ ।
ಬೀಳಗಿಗಿ ಕರಕೊಂಡು ಹೋಗಿ ಅಣ್ಣಯ್ಯಗ ಹುಚ್ಚ ಹಿಡಿಸಿದರೊ ।
ಅವರ ಉಪ್ಪುಂಡ ಉಪಕಾರನೆಲ್ಲಾ ತೀರಿಸಿಬಿಟ್ಟಾರೊ ॥ ॥ ಜೀಜೀ ॥

ನಾಲ್ಕ ಮಂದಿ ಹಿರಿಯರ ಕೂಡಿ ಏಕಾಂತ ಮಾತನಾಡಿ
ಗಂಗಪ್ಪಣ್ಣನ ಮಗನ ತಗೊಂಡ ದತ್ತಕ ಮಾಡ್ಯಾರೊ ।
ಸುತ್ತಿನ ದೇವರಿಗೆಲ್ಲ ಸಂತೋಷದಿಂದ ಕಾಯಿ ಒಡದಾರೊ ।
ಬಾಳ ಚಲೊ ಆಯಿತಂತಾರಿ ಊರಾನ ಸಾವಕಾರೊ ।
ಮಲ್ಲೇಶಪ್ಪಗ ಇಲ್ಲಿ ತನಾ ವಿಧಿ ಕಾಡುಕಾಲಿತ್ತು
ಎಂದಿಗಿ ಬಿಟ್ಟ ಹ್ವಾದಿತಂತಾರ ಅಣ್ಣ ಹೆಂಡರು ।
ನಮಗ ಮರತ ಕುತ್ತಾರಂತ ದುಃಖಮಾಡಿ ಅಳತಾರೊ ॥ ಜೀಜೀ ॥

ಇಳು ಯಾರ ಮುಂದ ಇನ್ನೇನ ಹೇಳಬೇಕ
ಮನಿಗಿ ಮಾಲಕಾದ ರೇವಣಸಿದ್ಧಾ
ಅಂತಾ ಕೇಳತಾರ ಕರಬಸಯ್ಯನ ಕರಽದಾ ॥ ॥ ಜೀಜೀ ॥

ಚಿಂತಿ ಮಾಡತಾರ ಆವಾಗ । ಇದ್ದಿದ್ದಿಲ್ಲ ಮನದಾಗ ।
ದತ್ತಕ ಮಾಡುವುದಾ ।
ಯಾಕ ಕೇಳ ನಮಗ ವೈರಿಯಾದಾ ॥ ॥ ಜೀಜೀ ॥

ಏರು ಹೊಟ್ಟೆಯೊಳಗ ಬೈಮಾನತಾನ ಮ್ಯಾಗಿನ ಮಾತ ಕರದರೇನೊ
ಬಾರೋ ಮಗನೆ ಹಸ್ತಿದೇನೋ ಊಟ ಮಾಡೋನೋ
ಹಂಗೆ ತೊಡಿಮ್ಯಾಲ ಕೂಡ್ರಿಸಿಕೊಂಡ ಹೇಳಿದಾರ ಗದ್ದು ತುಟಿಯನಾ ।
ಮುಂದ ದೊಡ್ಡವನಾದ ಮೇಲೆ ಮಾಡೊ ನಮ್ಮನ ಜೋಪಾನಾ ॥
॥ ಜೀಜೀ ॥

ಕೂಡಪಲ್ಲ ತಾಸ ರಾತ್ರಿಯಾದ ಮೇಲೆ ಕೂಸಿನ ಮೋಸ ಮಾಡಿ ಕೊಂದಾರಾ
ಕಾಸ ತಾಯಿ ಮನಿಯಾಗಿದ್ರ ಆದಿತ್ತೀನ್ನೇನಾ
ಆಸೆ ಕಡದಬಂತ ಈಶ ಒಯ್ದ ರೇವಣಸಿದ್ದೆನಾ ॥ ಜೀಜೀ ॥ ಚೌಕ ೧ ॥

ಏರು ಸೂತ್ರದ ಗೊಂಬಿಯಂಥಾ ಕೂಸಿನ ಹೆಂಗ ಕೊಂದರೊ ಸೂಳಿ ಮಕ್ಕಳು
ಏನ ಹೇಳಲೆಪ್ಪಾ ಅವನ ಚಲುವಿಕಿ ।
ಅವನ ಹುಬ್ಬಗೊಳ ನೋಡಿ ಸುದ್ಧ ರಾಮನ ಹೋಲೀಕಿ ।
ಅವನ ಮೈ ಬಣ್ಣ ಕಂಡು ನಿಂಬಿ ಹಣ್ಣಿಗಿ ಬಂತ ನಾಚೀಕಿ ।
ಓಣಿಯೊಳಗ ಬಂದರ ಕಂದಾ ಸುಂದರ ಕಿರಣ ಬಿದ್ದಂಗಾಯಿತೊ
ಸುಂದರ ತಪ್ಪಿ ಹುಟ್ಟದಾನ ಹಡದಾಳ ಹೆಂತಾಕಿ
ಉದಯ ಹೊರಡುದೊರಳಗ ಮೂಡಿದಂಗ ಬೆಳ್ಳಿ ಚುಕ್ಕಿ ॥ ಜೀಜೀ ॥
ಖಡೆ ತೋಡೆ ಉಡದಾರ ಕಂಠಿ ಗೋಪ ಕೊರಳಾಗ ।
ವಾರಿಕಟ್ಟ ರುಮಾಲ ಸುತ್ತಿ ಕೂಡ್ರುವ ಬೈಟಾಕಿ ।
ಅಂವಾ ಪಂತೆ ಭೋಜನ ಮಾಡೂದು ನಿತ್ಯ ಸಣ್ಣಕ್ಕಿ ।
ಅಂವಾ ಪ್ರೀತಿಲಿಂದ ಹೊರುವ ಶಾಲ ಜರದ ಪಡಿಕಿ ।
ಶೃಂಗಾರ ಬಂಗಾರ ತಯ್ಯಾರಾಗಿ ಕುದರಿಮ್ಯಾಲ ಕೂತಗೊಂಡ
ಹೊಂಟರ ಮಂದಿ ನೋಡತಿತ್ತ ಮಿಕಿ ಮಿಕ್ಕಿ।
ಮೈತುಂಬ ಬಂಗಾರ ಜಡಿಸಿದಾರ ನೋಡರಿ ಎಂಥಾ ಸಾವರಕಿ ॥
॥ ಜೀಜೀ ॥

ಗಲ್ಲ ತಿಳಪ ಹಲ್ಲ ಸುದ್ದ ದಾಳಿಂಬರ ಭೀಜಾ ಎಲ್ಲಾರೊಳಗ
ಶ್ರೇಷ್ಠ ಅನಿಸಿದಾನ ಸಾಲಿ ಬರೆಲಿಕ್ಕ ।
ಅಕ್ಷರ ಬಾಳಬಾಳ ಮುತ್ತ ನೋಡರಿ ಬರುವ ಹೊಂದಿಕಿ।
ಮಂದಿ ಮಾತಾಡತಾರ ಹುಡುಗಂದು ಏನ ಚಾತುರಕಿ ।
ಮುಂದ ಬಂತೊ ಕಾಡುಕಾಲ ಬಂದರವರು ಗುರುಸ್ವಾಮಿ
ಚಂದದಿಂದ ನಮಸ್ಕಾರ ಮಾಡ್ಯಾನ ಹೋಗಿ ಪಾದಕ್ಕ।
ನೀವು ಏನ ಕಾರಣ ತಡದಿರಿ ಸ್ವಾಮಿ ಇಷ್ಟು ದಿವಸಕ್ಕ॥ ॥ ಜೀಜೀ ॥

ನಾಲ್ಕ ಮಂದಿ ಕೂಡಿಕೊಂಡು ಮಸಲಾತಿ ಮಾಡಿದಾರೊ
ಲಿಂಗಯ್ಯ ತಗದಾನೊಂದು ದೊಡ್ಡ ಹಂಚೀಕಿ ।
ಹುಡುಗನ ಕರದುಕೊಂಡು ಹೋದರಾತೊ ಹಿರಿವಳಿ ಜಳಕಕs।
ಅಲ್ಲಿ ಕೊಂದು ಬರೂಣಂತ ದೊಡ್ಡ ಮಡವಿನ್ಯಾಗ ನೂಕಿ ।
ರಾತ್ರಿ ಗಾಡಿ ಕೂತಗೊಂಡು ಒತ್ತರ ಮಾಡಿ ಹೊಂಟಾರಣ್ಣಾ ।
ಹೊತ್ತಹೊಂಡುದರೊಳಗ ಜನಾ ಕೂಡೇದ ದಕಮುಕಿ ।
ಸುತ್ತಿನ ಹಳ್ಳಿ ಪಳ್ಳಿ ಮಂದಿ ಬಂತೊ ಗ್ರಹಣ ಜಳಕಕ ॥ ॥ ಜೀಜೀ ॥

ಇಳುವು ಮೂರ ತಾಸ ಹೊತ್ತ ಏರಾಣಾ ।
ತಗದಾರೋ ಕಲ್ಪನಾ ।
ಜಳಕದ ಸಲುವಾಗಿ ಕಳಿಸಿಟ್ಟರೊ ಮುಸ್ಕಿ ಜರದಂಗಿ ।
ಇಲ್ಲಿ ನೀರ ಅದಾವ ಸ್ವಲ್ಪಾ ಬಾರೋ ರೇವಣೆಪ್ಪಾ
ಹೋಗೂನು ಇಂಬಾಗಿ ।
ಇನಿಸ್ಪೆಕ್ಟರ್ ಬಂದರೊ ಅಲ್ಲಿssಗಿ ॥ ॥ ಜೀಜೀ ॥

ಏರು ಸರಕಾರಿ ಇನಿಸ್ಪೆಕ್ಟರ್ ಬಾಳ ವಿಚಾರ ಮಾಡಿ ಕೇಳತಾನ
ಏನ ಮಸಲತ ಮಾಡಿ ತಂದೀರಿ ಹುಡುಗsನ ।
ಒಳೆ ಕಣ್ಣ ಕಿಸ್ತ ಕೇಳತಿದ್ದ ರಘುನಾಥನ ।
ಮುಂದ ಹೆಚ್ಚು ಕಡಿಮೆ ಆದರ ನಿಮ್ಮನಕೊಂಡ ಮುನಿಗೇನ ।
ಕೂಡಪಲ್ಲ ತಾಸ ರಾತ್ರಿಯಾದ ಮೇಲೆ ಕೂಸಿನ ಮೋಸ ಮಾಡಿ ಕೊಂದಾರಣ್ಣಾ ।
ಕಾಸ ತಾಯಿ ಮನಿಯೊಳಗಿದ್ದರೂ ಯನ್ನೇನಾ
ಆಸೆ ಕಡದ ಬಂದಿತ ಈಶ ಒಯ್ದ ರೇವಣಸಿದ್ಧನಾ ॥
॥ ಜೀಜೀ ॥ ಚೌಕ ೨ ॥

ಏರು ವ್ಯಾಳೆ ಕೂಡಿ ಬರಲಿಲ್ಲ ಓಡಿಬಂದರೊ ಮರುದಿನಾ
ಲಿಂಗಯ್ಯ ತಗದಾನ ಮತ್ತೊಂದ ಅಖಲಾ ।
ಕೊಟ್ಟಿ ಮಾರ್ವಾಡ್ಯಾಗ ರಘುನಾಥ ತಿಳಿಸಿದಾನಲ್ಲಾ ।
ಕದಾ ಹಾಕಿ ಬಂದ ಮಾಡಿದಾರ ಸುತ್ತಿನ ಬಾಗಿಲಾ
ಹೊತ್ತ ಮುಳುಗಿ ಕತ್ತಲಾಯಿತ ಪ್ರೀತಿಲಿಂದ ಪಾರ್ವತೆವ್ವಾ
ರೇವಣೆಪ್ಪನ ಕೂಡ್ರಿಸಿದಾಳ ಮಂಚದ ಮ್ಯಾಲಾ ।
ಬುಂದೆ ಬೇಸನ ತಂದಿನಿ ಪಳಾರ ಮಾಡೊ ಸಕ್ಕರಿಹಾಲಾ ॥ ಜೀಜೀ ॥

ಯಾಕಯವ್ವಾ ಎನ್ನ ಜೀಂವದಾಗ ಎತ್ತೆತ್ತರ ಆಗತೈತಿ
ನೀರಡಿಕಿ ಆಗಿ ಸ್ವರಾ ನಂದು ಬತ್ತೈತಿ ಎಲ್ಲಾ ।
ನನಗ ಹಡದ ತಾಯಿ ತಂದಿ ಈಗಿನ ವ್ಯಾಳೇಕ ಇಲ್ಲಿಲ್ಲಾ ।
ನನಗ ಮೋಸ ಒದಗಿ ಬಂತ ನೋಡ ಕಾಡುಕಾಲಾ ।

ಅಡಗಿಮಾಡು ಸಂಗವ್ವ ಕೇಳಿ ಎದಿಬಾಯಿ ಬಡಕೊಂಡ ಅಳತಾಳ।
ಓಡಿ ಹ್ವಾದಿನಂದರ ನಮ್ಮನ ಹೊರ್‍ಯಾಕ ಬಿಡಲಿಲ್ಲ ।
ನಮ್ಮ ಹೊಟ್ಟೆ ಕಿಚ್ಚಿಗಾಗಿ ಬಂದು ಸಿಕ್ಕಿದೇವಲ್ಲಾ ॥ ಜೀಜೀ ॥

ಮೂಕ ದೆವ್ವಿನಹಂಗ ಭೇತಮಾಡಿ ಕೂತಿದಾನೊ
ಘಾತಕ ಮಾರ್‍ವಾಡಿ ಮನಿಯಾಗ ಹೋಗಿ ನಿಂತಿದ್ದಾನಲ್ಲಾ ।
ಕಣ್ಣಿ ಚಿವಟತಾಳ ಪಾರ್ವತೆವ್ವಾ ಮ್ಯಾಲಿಂದ ಮ್ಯಾಲಾ
ಲಗು ಹತ್ಯಾ ಮಾಡರಿ ಮಂದಿs ಉಲುವ ಯಾರಿಲ್ಲಾ
ಚನಬಸವ್ವ ಕೂತಗೊಂಡ ಕೇಳಿ ಬ್ಯಾಡವ್ವ ತಂಗಿ ಹಿಂತಾ ಕೆಲಸಾ
ಹಿಂದಾಗಡಿ ನಮ್ಮ ಅಬರು ಉಳಿಲಾಕಿಲ್ಲಾ ।
ಕೂಸಿನ ಕೊಂದ ಪಾಪ ಎಂದೆಂದಿಗೂ ಬಿಡಲಾಕಿಲ್ಲಾ ॥ ಜೀಜೀ ॥

ಮರಣ ಒದಗಿ ಬಂತನೋಡರಿ ಒಳಿಯ್ಯಾಕ ಕರದುಕೊಂಡು ಹೋಗಿ
ಲಿಂಗಯ್ಯ ತುಂಬಿದ ಚರಗಿ ಕೊಟ್ಟಾನ ಕುಡಿಯಾಕೊ ಬಾಲಾ ।
ಎತ್ತಿ ಕುಡಿಯುವದರೊಳಗ ಒತ್ತಿ ಹಿಚಿಕಿದಾನೊ ಗಂಟಲಾ ।
ಹುಡುಗನ ಸಂಕಟಕಾಗಿ ಚೂರಿತ್ತ ಅವನ ಮಾರೆಲ್ಲಾ ।
ಸಣ್ಣವರ ದೊಡ್ಡವರss ಸಾಯತೀನಿರೊ ನೀವsರೇ ಉಳಿಸಿಕೊ ಬನ್ನಿರೊ
ಎಷ್ಟು ಹಲಬಿದರs ಒಬ್ಬರೂ ಸನೇಕ ಬರಲಿಲ್ಲಾ ।
ಒಂದ ನಿಮಿಷ ಮಾತ್ರದಲ್ಲಿ ಪ್ರಾಣ ಹಾರಿ ಹೋಯಿತೆಲ್ಲಾ ॥ ಜೀಜೀ ॥

ಇಳು ಮತ್ತೊಂದು ಮಾಡ್ಯಾರ ಮಸಲತಿ
ಚೀಲದಾಗ ಒತ್ತಿ ।
ತುರ್ಕ್ಯಾರ ಆ ಕ್ಷಣಕs। ಲಿಂಗಯ್ಯನ ವಿಳಾಸ ಇತ್ತsರಿ ಚೀಲಕ ॥
॥ ಜೀಜೀ ॥

ಸರಕಾರಕ ಸುದ್ದಿ ತಿಳಿಸ್ಯಾರs
ಬಂದರೊ ಪೌಜದಾರಾ
ಆಗಿನ ಕ್ಷಣಕ। ಚೌಕಾಸಿ ಪಾರೆ ಇಟ್ಟಾರ ಹೆಣಾ ಕಾಯುದಕ ॥ ಜೀಜೀ ॥

ಹತ್ತೆಂಟ ಮಂದಿ ಪೋಲಿಸರು ।
ಕಾವಲಿಟ್ಟಾರೊ ಬಿಡಲಿಲ್ಲೊ ಹೊರಿಯಾಕs।
ಇಂಗ್ರೇಜ್ಯಾರ ಕಾಯ್ದೆ ನಾಜೂಕಾ ॥ ॥ ಜೀಜೀ ॥

ಏರು ಐಬ ಹತ್ತದಂಗ ಹೆಣಾ ಅರಮನ್ಯಾಗ ಇಟ್ಟಾರಣ್ಣಾ ।
ಅಂಗಲಿಂಗದಿಬ್ಬರದು ನೋಡರಿ ಬಾಳ ಗೆಳೆತ್ಯಾನಾ ।
ಮಸ್ತ ರೂಪಾಯಿರೊಖ್ಖ ಕೊಟ್ಟಿದಾನೊ ಲಂಚವನಾ ।
ಗೌಡ ಚೀಲ ಎತ್ತಿ ಇಳುವ್ಯಾನ ಅರಿದ ಮುಳ್ಳ್ಯಾನಂತವನಾ ।

ಕೂಡಪಲ್ಲ ತಾಸ ರಾತ್ರಿ ಆದಮ್ಯಾಗ ಕೂಸಿನ ಮೋಸ ಮಾಡಿ ಕೊಂದಾರಣ್ಣಾ
ಖಾಸ ತಾಯಿ ಮನಿಯಾಗಿದ್ದರ ಆದಿತ ಇನ್ನೇನಾ ।
ಆಸೆ ಕಡದ ಬಂತ ಈಶ ಒಯ್ದ ರೇವಣಸಿದ್ಧನಾ ॥
॥ ಜೀಜೀ ॥ ಚೌಕ ೩ ॥

ಏರು ಆರ ತಾಸ ರಾತ್ರಿಯೊಳಗ ಲಿಂಗಯ್ಯ ಕರೆತಂದಾs ಮಟಕಾದವಗ
ಬಾಳ ಬಾಳ ಹೇಳಿ ಅಂವಗ ಹಚ್ಚಿದ್ದ ಪಂಟಾ ।
ಸೈನಕ ಹೋಗುದೈತಿ ಹೊತಗೊಂಡು ನಡಿಯೊ ರೇಶ್ಮಿ ಗಂಟಾ ।
ಇಷ್ಟ ಮಾತ ಹೇಳಿಕೇರಿ ಗಂಟ ಹೊರಸಕೊಂಡು ನಡೆದಾ
ಮಳ್ಳ ಸೂಳಿ ಮಗಾ ಅಂವನ್ನ ಹಿಂಬಾಲ ಹೊಂಟಾ ।
ಅಂವಗ ತಿಳಿದಿದ್ದಲ್ಲ ಲಿಂದಯ್ಯ ಮಾಡಿದ್ದ ಕಪಟಾ ॥ ಜೀಜೀ ॥

ಒತ್ತರ ಮಾಡಿ ಹೊತಗೊಂಡ ಹೋಗಿ ನದಿಯಾಗ ಚಲಿದಾರೋ ।
ನೀರ ಕಿರಿದದ್ದು ನೋಡರಿ ಮಳಕಾಲಮಟಾ ।
ಚೀಲ ಮುಳಗಲಿಲ್ಲ ಮಂದಿಗಿ ಕಾಣುದು ಕಣಮುಟ್ಟಾ ॥ ಜೀಜೀ ॥

ಒಗದ ಓಡತಿದ್ದs ಲಿಂಗಯ್ಯಗ ಯಾತರದ್ದಿದ್ದಿಲ್ಲಾ ಒಂದಿಷ್ಟಾ ।
ಮಟಕಾದಂತವಗ ಕರದಕೇರಿ ನಿಷ್ಟುರ ಬರಬ್ಯಾಡೋ ತಮ್ಮಾ
ಆಗಿ ಹೋಗೋ ನೀ ದೇಶ ಭ್ರಷ್ಠಾ ॥ ॥ ಜೀಜೀ ॥

ನಿನಗ ಹಿಡಕೊಂಡ ಹೋದರ ಬಿಡಿಸಿ ತರತೀನಿ ರೂಪಾಯಿ ಬಿದ್ದಷ್ಟಾ ।
ಮುಂದ ಹೋಗಿ ಮುಟಗಾದಂವ ದಿಂಗ ಬಡದ ನಿಂತಾ ತಾನಾ ।
ಏನ ಹೇಳಲಿ ಲಿಂಗಯ್ಯನವರೆ ಬಂದಿತ ಕಷ್ಟ ॥ ಜೀಜೀ ॥

ನನ್ನ ಹೆಂಡರ ಮಕ್ಕಳಿಗಿ ತಂದಿಟ್ಟೊ ಕೂಳಿನ ಪರಿಪಾಟ ।
ಲಿಂಗಯ್ಯ ಕೊಂದನಂತ ಊರ ತುಂಬ ಆಯಿತೋ ಬಬ್ಬಾಟಾ ।

ಇಷ್ಟ ಮಾತ ಹೇಳಿಕೇರಿ ಓಡಿ ಹ್ವಾದಾ ಮಟಗಾದಾಂವ ।
ಪೆನ್ನಿನ ಸರಕಾರ ಮೊಗಲಾಯಿ ನಾಡ ಬಾಳ ಕೆಟ್ಟಾ
ಅಲ್ಲಿ ಓಡಿ ಹೋಗಿ ತನ್ನ ಹೆಂಡಿರ ಮಕ್ಕಳ ಬಿಟಗೊಟ್ಟಾ ॥ ಜೀಜೀ ॥

ಇಳು ತಾಯಿ ಬಂದಳೊ ಲಗು ಮಾಡಿ
ಅಳತಾಳ ಬೋರ್ಯಾಡಿ
ಬಿದ್ದ ಮಗನ ಮ್ಯಾಲಿ ।
ಮೂರದಿವಸವಾಯ್ತು ಕಾಣವಲ್ಲಿ
ಮಾತಾಡss ನನ್ನ ರೇವಣೀss ।
ಸಕ್ಕರಿಯss ಗಿಣಿ
ಹ್ಯಾಂಗ ಮರಿಯಲಿs ।
ಲಿಂಗಯ್ಯನ ಕಾಲಾಗ ಹೊಯ್ತು ನಿನತಲಿ ॥ ॥ ಜೀಜೀ ॥

ಏರು ಹಡೆದ ತಾಯಿ ಚನ್ನಮ್ಮನವರು ದುಃಖಮಾಡಿ ಅಳತಾರೊ
ದ್ರವ್ಯಕ್ಕಾಸೆ ಮಾಡಿ ಕೊಂದ್ರು ಮಗನಪ್ರಾಣಾ ।
ನಾ ಉಣಸಿ ತಿನಿಸಿ ಎತ್ತಿ ಇಳಿವಿ ಸಲವಿದ್ದೇನ ।
ನನ್ನ ಕೊಟ್ಟ ದೈವಕ್ಕಿಂತ ಮಗಾಹ್ಯಾಂಗ ಸಿಕ್ಕಾನ ।
ಕೂಡಪಲ್ಲ ತಾಸ ರಾತ್ರಿ ಆದಮ್ಯಾಲ ಕೂಸಿನ ಮೋಸಮಾಡಿ ಕೊಂದಾರಣ್ಣಾ।
ಖಾಸ ತಾಯಿ ಮನಿಯಾಗಿದ್ರ ಆದೀತಾ ಇನ್ನೇನಾ ।
ಆಸೆ ಕೆಡದಬಂತ ಈಶ ಒಯ್ದ ರೇವಣಸಿದ್ದನಾ ॥

॥ ಜೀಜೀ ॥ ಚೌಕ ೪ ॥

ಸರಕಾರದವರು ಸಿಟ್ಟಿಗೇರಿ ಏಕದಂ ಹೊಂಟಾರಣ್ಣಾ
ಲೂಟಿ ಮಾಡುವಂಗ ಹುಂಡೇಕಾರನ ಮನಿಯಾಗ ।
ಸಾಹೇಬರ ಹುಕುಮ ಕೊಟ್ಟರು ಹಿಡಕೊಂಡ ಬಾರೊ ನಾಲ್ಕು ಮಂದೀಗ।
ರಟ್ಟಿಗಿ ಹಗ್ಗಾ ಹಚ್ಚಿ ತಗೊಂಡ ಬಾರೊ ಅಂದರು ಬೈಲೀಗಿ
ಚನ್ನಬಸವ್ವಾ ಪಾರ್ವತೆವ್ವಾ ದುಃಖಮಾಡಿ ಅಳತಾರ
ಏನ ಹೊತ್ತ ತಂದಿ ಸ್ವಾಮಿ ನಮ್ಮ ಪಾಲೀಗ ॥ ॥ ಜೀಜೀ ॥
ಏನ ಬಂದಿದ್ದ ಬರಲಿ ಗಟ್ಯಾಗಿ ನಿಂದರುಣ ಆವಾಗ
ಹಿಂದ ಮುಂದ ಪಾರೇದವರು ಬಂದುಬಸ್ತಿನೊಳಗ ಅವರನ್ನ
ಚಂದದಿಂದ ಹಿಡಕೊಂಡ ತಂದರೊ ಹೊಸಾ ಪ್ಯಾಟ್ಯಾಗ ॥ ಜೀಜೀ ॥
ಮಂದಿ ಮಾತಾಡತಾರ ಏನ ಬಂತೊ ಹುಂಡೇಕಾರsಗ ।
ಪಕ್ಕನs ಚಿದ್ರಪಿದ್ರ ಆದಿತ್ತೆನೊ ಇಂಥಾ ಕೆಲಸ ಆದಿತೆಂದಿಗ ।
ಬಾಗಲಕೋಟ ತಾಲೂಕಿಗೆಲ್ಲಾ ಮೀರಿದಂತಾ ಸಾವಕಾರ
ಧೈರ್ಯವಾನ ಅಂಜುತಿದ್ದಿಲ್ಲಪ್ಪಾ ಒಬ್ಬರಿಗ ।
ಅಂವ ಇದ್ರ ಹಾಕಿಸಿ ಬಿಡತಿದ್ದ ಶೂಲ ಗಲ್ಲೀಗಿ ॥ ॥ ಜೀಜೀ ॥
ಇಳುವು ಮರುದಿವಸ ನಡೀತೊ ಚೌಕಾಸಿ ।
ಚನಬಸವನ ಕರsಸಿ ।
ಕೇಳ್ಯಾನೊ ರಾವಸಾಹೇಬರು ಅಂಜಬ್ಯಾಡವ್ವಾ
ಮಾಡುದಿಲ್ಲಾ ಜಬರದಸಿ ॥ ॥ ಜೀಜೀ ॥
ಬ್ಯಾಡೆಂದರ ಕೇಳಲಿಲ್ಲ ಯಾರು ।
ಕೊಂದಾಂವ ಲಿಂಗಯ್ಯನವರು ।
ಕರೆ ಮಜಕೂssರ ।
ರಘುನಾಥ ಪಾರ್ವತೆವ್ವನ ಪಿತರು ॥ ॥ ಜೀಜೀ ॥
ರಘನಾತ ಲಿಂಗಯ್ಯ ಆದ ಕೊಟ್ಟಿ
ಬಾಳ ಮೂರಾ ಬಟ್ಟಿ । ಕೇಳಿ ಸಾಹೇಬssರು ।
ಬೈತಾರು ದೊಡ್ಡ ದೊಡ್ಡ ಸಾವುಕರು ॥ ॥ ಜೀಜೀ ॥

ಏರು ದೊಡ್ಡ ಗುನೆ ಕಟ್ಲೆ ಇದು ದೌಡ ಹ್ಯಾಂಗ ಬಿಟ್ಟತಣ್ಣಾ
ಸಡವಿನ ಪ್ರಕಾರ ಕೇಳತಾನ ದಿನಾs ಒಬ್ಬರನss।
ಮಸ್ತರೊಬ್ಬ ಖರ್ಚಮಾಡಿ ಕರಸ್ಯಾರ ದೇಶಾಯಿ ವಕೀಲನಾ ।
ಬಾಳ ಕುಶಲದಾಂವ ಗೆಲಿಸಿದ ಖಟ್ಲೆ ಬಿಡಿಸಿ ಬಿಟ್ಟಾನಾ ।
ಕೂಡಪಲ್ಲ ತಾಸ ರಾತ್ರಿ ಆದಮ್ಯಾಗ ಕೂಸಿನ ಮೋಸಮಾಡಿ ಕೊಂದಿದಾರಣ್ಣಾ ।
ಖಾಸ ತಾಯಿ ಮನಿಯಾಗಿದ್ದರೇನ ಆದಿತೋ ಇನ್ನೇನಾ
ಆಸೆ ಕಡದ ಬಂತ ಈಶ ಒಯ್ದು ರೇವಣಸಿದ್ಧನಾ ॥
॥ ಜೀಜೀ ॥ ಚೌಕ ೫ ॥

ಒಂದ ತಿಂಗಳಮ್ಯಾಗ ಖಟ್ಲೆ ಕಮೀಟಿ ಮಾಡಿ ಕಳಿಸಿಕೊಟ್ಟ
ಆರೋಪಿ ಜನರು ಸಹಿತ ಸಾಕ್ಷಿಗಿ ನಿಂತಾ ।
ಗಂಗಪ್ಪ ಹೇಳತಾನ ಸಂಶೆ ಅವರ ಮ್ಯಾಲಿತ್ತಾ ।
ದೇಶಾಯಿ ವಕೀಲ ಹೇಳತಾನ ಸಾಹೇಬರ ಇದರಿಗಿ ನಿಂತಾ ।
ರಾವಸಾಹೇಬರ ಕೇಳರಿ ಪಕ್ಕಾ ವಿಚಾರ ಮಾಡಿರಿ
ಮನಿ ಮಗನ ಕೊಲ್ಲುವದು ಹ್ಯಾಂಗ ಆದಿತಾ ।
ಅವರ ಅಬರು ಕಳಿಬೇಕಂತ ಇವರು ಮಾಡ್ಯಾರ ಬೇಕಂತಾ ॥ ಜೀಜೀ ॥

ಮುತ್ತಿನ ಬಾವುಲಿ ಕಿವಿಯಲ್ಲಿ ಬಂಗಾರ ಡಾಗಿಣ ಮೈಮ್ಯಾಲಿ
ದ್ರವ್ಯಕ ಆಸೆ ಮಾಡಿ ಕೊಂದಾರ ವ್ಯರ್ಥ ಆದೀತೇ ।
ಈಗ ಕೆಟ್ಟ ಕಾಲ ಗಾಳಿ ಬೀಸಗೋತ ನಡದೀತಾ ।
ಈಗ ಯಾರ ಕೊಂದಾರ ಟಾಂವಕಿಲ್ಲ ಮಾದೇವಗ ಗೊತ್ತ ।
ಜಝ್ಝುಸಾಹೇಬನ ಇದಿರಿಗಿ ನಿಂತು ದೇಶಾಯಿ ವಕೀಲ ಜವಾಬಕೊಟ್ಟಾ।
ಮೂರ ದಿಸವದೊಳಗ ಖಟ್ಲೆ ನಿಕಾಲ ಆದೀತss।
ಒಳಗಿಂದೊಳಗ ರೊಖ್ಖಾ ಲೆಖ್ಖವಿಲ್ಲದೆ ಹೋದೀತಾ ॥ ॥ ಜೀಜೀ ॥

ಇಳು ಲಿಂಗಯ್ಯನ ಮ್ಯಾಗ ಏರಿತೊ ಚಾರ್ಜಾ ಆಯ್ತೊ ಅಪ್ಪಣಿ ।
ಹುಕುಮ ಕೊಟ್ಟಾಳ ಪಟ್ಟದರಾಣಿ ।
ಲಿಂಗಯ್ಯಗ ಬಡದಿತೊ ಭ್ರಮತಿ ಹತ್ತಿತೊ ಚಿಂತಿ ।
ಬಡಕೊಂಡ ಹಣಿ ಹಣಿ ।
ಜಲ್ಮ ಟೀಪಾಯ್ತೊ ಕಾಳಾ ಪಾಣಿ ॥ ॥ ಜೀಜೀ ॥

ಏರು ದೇಶದೊಳಗ ಮುಳಸಾವಳಗಿ ಊರಾ
ವಾಸ ಮಳಿರಾಜ ದ್ಯಾಸಾ ।
ಏಸಕಾಲ ನಿತ್ಯ ನೆನೆವನು ನಾನಾ ।
ನೀವು ಕೂತ ಕೇಳರೆಪ್ಪಾ ಹುಂಡೇಕಾರನ ಕಥಿಯನಾ ।
ಪದಾ ಮಾಡಿ ಇಟ್ಟರ ಕಲಾಶಬಿಚ್ಚಿಟ್ಟಂಗ ಸಕ್ಕರಿ ಚೀಲನಾ ।

ಕೂಡಪಲ್ಲ ತಾಸರಾತ್ರಿ ಆದಮ್ಯಾಗ ಕೂಸಿನ ಮೋಸ ಮಾಡಿಕೊಂದರಣ್ಣಾ ।
ಖಾಸ ತಾಯಿ ಮನಿಯಗಿದ್ದರ ಆದಿತ್ಯ ಇನ್ನೇನಾ ।
ಆಸೆ ಕಡಗ ಬಂತು ಈಶ ಒಯ್ದ ರೇವಣ ಸಿದ್ದನಾ ॥
॥ ಜೀಜೀ ॥ ಚೌಕ ೬ ॥

॥ ಸಖಿ ॥

ಕುರಸಾಲ್ಯಾ ಹುಂಜ ಕೋಳಿ ಕುಂಡ್ಯಾಗ ಹುಟ್ಟಿತು
ಹುಟ್ಟಿಸಿದಂತಾ ತಾಯಿಗಿ ಮೆಟ್ಟಿತೊ ।
ತಾ ಮಾಡಿದ ಕರ್ಮ ತನ್ನ ಪಾಲಕ ಕಡಿಪಾಲಕ ಅಡ್ಡಗಟ್ಟಿತೊ ॥
॥ ಜೀಜೀ ॥

ಹರದೇಶಿ ಹುಂಜಿನ ಉಪಟಳ ಹೆಚ್ಚ ನಡೀತೊ ।
ಪರದೇಶ ಇಂದ್ರ ಪುಣ್ಯಾ ಸರಿದು ದಾರ ಕಡಿತೊ ।
ಅಟ್ರಾ ತತ್ವೆಲ್ಲಾ ಅಟ್ರಾ ಸೂಕ್ಷ್ಮದ ದೇಹದ ತತ್ವ ನಮ್ಮ ಕೋಳಿ ಹಡಿತೊ ॥
॥ ಜೀಜೀ ॥

ಹಡೆದ ಕೋಳಿ ಮರಿ ಜೋಪಾನ ಮಾಡಿತು ।
ಕ್ವಾಡಗ ಹುಂಜ ಮತ್ತ ಕೋಳಿಕಡಿ ನೋಡಿತೊ ।
ಬಿಡುವುದಿಲ್ಲ ಬೆನ್ನ ಹತ್ಯದಂತ
ನಮ್ಮ ಹುಡುಗಿ ಓಡ್ಯಾಡಿ ಹಿಡಿತೊ ॥ ॥ ಜೀಜೀ ॥

ಕುರುಸಾಲೆ ಹುಡುಗಿ ಕೇಳಲಿಲ್ಲ ನನ್ನ ಮಾತೋ
ನೆರಮನಿ ಮುಲ್ಲಾಗ ಕರೀತೊ ।
ಮುಲ್ಲಾ ಒಂದ ಪಾತೆ ಕೊಟ್ಟು ನಿಮ್ಮ ಹುಂಜ ಮರಿಗಾಯಿತೊ ॥
॥ ಜೀಜೀ ॥

ಯಾವ ಮಂತ್ರದಿಂದ ಹುಂಜ ಅಲಾಲ ಆಯಿತೊ ।
ಚೂರಿ ಯಾವ ಕಂಬಾರ ಮಾಡಿದ್ದು ಇತ್ತೊ ।
ಮುಲ್ಲಾನ ಕರದಕ್ಕಿ ಹುಡಗಿ ಹೆಸರ ಕೇಳತೀನಿ ನಿನ್ನ ಜೀವಕ
ಉರಲಬತ್ತೊ ॥ ॥ ಜೀಜೀ ॥

ಮುಳಸಾವಳಗಿ ಊರ ಹೆಸರಾಯಿತು
ವಸ್ತಾದ ಕಲಾಶನ ಮಾತು ಕಂದ ನರಸು–ಭೀಮ
ಸಖಿ ಹೇಳತಾರ ಸಭಾದಾಗ ನಿಂತೊ ॥ ॥ ಜೀಜೀ ॥

॥ ಸಖಿ ॥ ಎಂಬತ್ತೆರಡು ಸವಾಲ

ಬರುವಾಗ ಒಂದು ದಾರ್‍ಯಾಗ ಗಿಡಾ ಇತ್ತು।
ಖರೆ ಖರೆ ಸುಳ್ಳಲ್ಲ ಈ ಮಾತು ।
ಎರಡ ಬಡ್ಡಿ ಮುಂದೆ ಒಂದೆ ಚಂಡಿ ಗಿಡಾ ತಪ್ಪಲಿಲ್ಲದ ಇತ್ತೊ
ಗಿಡದ ಚಂಡಿ ಗಿಡದಾಕಾರದಂಗ ಇತ್ತೊ
ಕೆಂಪ ಕರಿದು ಹಲವು ಬಣ್ಣಿತ್ತು
ಒಂದೊಂದು ಬಡ್ಡಿಗಿ ಮೂರುವರಿ ಬೇರುಗಳು ಗಿಡಾ ರಾತ್ರಿ
ಮಲಗತಿತ್ತೊ ॥ ಜೀಜೀ ॥

ಅಜಮಾಸ ಗಿಡಾ ದೀಡಗೇಣ ಎತ್ತರಿತ್ತೊ ।
ಬಡ್ಡಿಕ್ಕಿಂತ ತುದಿ ಮೊದಲ ಹುಟ್ಟಿತ್ತೊ ।
ಹೆಣ್ಣ ಗಂಡ ಎರಡು ಜಾತಿ ಗಂಡ ಗಿಡಾ ಒಂದು ಮಗ್ಗಲಿತ್ತೊ ।
ಗಂಡಾ ಗಿಡಾ ಟಾಯಮ ಟೇಬಲ್ ಕೇಳತಿತ್ತೊ
ಅದರ ರಸಾ ಹೆಣ್ಣ ಗಿಡಕ ಇಳಿತಿತ್ತೊ
ವರ್ಷನೊಳಗ ಹನ್ನೆರಡು ಸರತಿ ಕಾಯಿ ಬೆಳಿಯತಿತ್ತೊ ॥ ಜೀಜೀ ॥

ಕಾಯಾಗ ಕಯಿ ಹೆಣ್ಣ ಗಂಡ ಹುಟ್ಟತಿತ್ತು ।
ಒಳ್ಳೊಳ್ಳೆಯವರ ಮನಸಾಯಿತೊ ।
ಇದೇ ಗಿಡಾ ಇದೇ ಕಾಯಿಯಂತ ಹೇಳುವ ಶಾಹೀರಗ ಶರಣ
ಮಾಡತಿನಿ ನಿಂತೊ ॥ ॥ ಜೀಜೀ ॥

ಸುತ್ತ ದೇಶದೊಳಗ ಮುಳಸಾವಳಗಿ ಹೆಸರಾಯಿತು ।
ಅಲ್ಲಿ ನೆನದ ಪೀರಾ ಹುಣಚಿ ಗಿಡದ ಸುತ್ತ ಮುತ್ತ
ವಸ್ತಾದ ಸಿದ್ದಪ್ಪಾ ಕವಿ ಮಾಡಿ ಹೇಳ್ಯಾನ ಇವತ್ತs ॥ ॥ ಜೀಜೀ ॥

॥ ಪದಾ॥

ಬಪ್ಪರೆ ಕವೇಶ್ವರ ಬಲು ಸಿಕ್ಕಿ ಬಾರೊ ಮುಂದ ಜಪ್ಪಿಸಿ ನೋಡಣ್ಣಾ
ನಿನ್ನ ಡಪ್ಪ ಕಟ್ಟಿಸಿ ಬಿಡುವೆನಾ ।
ಎಂಬತ್ತೆರಡು ಸವಾಲ ಕೇಳತಿನಿ ತಪ್ಪದೆ ನೀನು ಹೇಳಣ್ಣಾ ॥ ಜೀಜೀ ॥

ಎಲ್ಲ ಶಾಸ್ತ್ರ ನಾ ಬಲ್ಲವನೆಂದು ಗುಲ್ಲ ನಡಸಿದೊಯಣ್ಣಾ ।
ಬಲಿವೊಳಗ ಬಿದ್ಯೊ ಹೈವಾನಾ ।
ಬೈಲಿಗಿ ಕಾಲಿಟ್ಟು ಬೈಲಿನೊಳಗ ಬಂದಾವ ಯಾವ ಯಾವ ಗುಣಾ ॥
॥ ಜೀಜೀ ॥

ಭೂಮಿ ತಾಯಿ ಯಾವೂರಕ್ಕಿ ಗಂಡನ ಮನಿ ಯಾವೂರಣ್ಣಾ ।
ಅದು ಯಾರು ಮಾಡ್ಯಾರ ಲಗ್ನಾ ಲಗ್ನಾಣ್ಣಾ ।
ಭೂದೇವಿ ಲಗ್ನಕ ಯಾರು ಬಂದಿದ್ದರು ಖರ್ಚು ಆಯಿತೆಷ್ಟು ಹಣಾ ॥
॥ ಜೀಜೀ ॥

ಭೂದೇವಿ ಗಂಡನ ಹೆಸರ ತರ್ಕಮಾಡಿ ಹೇಳಣ್ಣಾ।
ಈ ಭೂಮಿ ಆಯುಷ್ಯ ಎಷ್ಟು ವರುಷ ಪ್ರಮಾಣಾ ।
ಭೂದೇವಿ ಸತ್ತರ ಎಲ್ಲಿ ಹುಗಳಬೇಕ ತಿಳಿದ ಹೇಳ ಸುಜ್ಞಾನಾ ॥ ಜೀಜೀ ॥
ಭೂಮಿಗಿ ಹೊಲಿ ಬಂದಕಾಲಕ ನಬಿಸಾಹೇಬ ಶರಣಾ ।
ಎಲ್ಲಿ ಮಾಡಿದ ಪ್ರಾರ್ಥನಾ ।
ಭೂಮಿ ಹೋದ ಮೇಲೆ ನೀ ಇರುವುದು ಯಾವಲ್ಲಿ ಹೇಳಬೇಕಣ್ಣಾ॥
॥ ಜೀಜೀ ॥

ಇಳು ನೀರಿಗಿ ಹೊಲಿ ಬಂದರ ತೊಳಿಯ ಬೇಕ ಯಾವಲ್ಲಿ ।
ಚಿಟಕಿಗಿ ಚೆಳಿ ಬಂದರ ಕಾಸ ಬೇಕ ಯಾವಲ್ಲಿ ।
ಗಾಳಿಗಿ ಗಾಳಿ ಸುಂಕ ಆದರ ಚೀಟಿ ಕಟ್ಟುವುದು ಯಾವಲ್ಲಿ ।
ಸೂರ್ಯಗ ಬಿಸಿ ಹತ್ತಿದರ ಯಾವ ಗಿಡದ ನೆರಳ ಆಧಾರಾ ।
ನೀ ತಿಳದ ಹೇಳ ಕವಿಗಾರಾ ॥ ॥ ಜೀಜೀ ॥

ನೀರಿಗಿ ಉಕ್ಕ ಬಂದರ ನೀರಾಗ ಏನ ಹಾಕತಾರ
ಯಾವ ರಾಜ ದೊಡ್ಡವ ಹೇಳು ತಮ್ಮಾ ರಾಜ್ಯದಲ್ಲಿ
ಗಣಪತಿಗಳು ಎಷ್ಟು ಮಂದಿ ಉಸರಬೇಕು ಸಭಾದಲ್ಲಿ
ಗಣಪತಿಯ ಮೊದಲಿನ ಶಿರಾ ಹೋಯಿತ ಯಾವಲ್ಲಿ ।
ಸಾಲಿ ಕಲತ ಬ್ರಹ್ಮದೇವರಾ ಯಾಂವಿದ್ದನೊ ಆಗ ಮಾಸ್ತರಾ ।
ಈ ಮಾತು ಬಹಳ ಮಜಕೂರಾ ।
ಬ್ರಹ್ಮನ ಐದ ಶಿರಾ ಎಲ್ಲಿ ಇತ್ತೊ ಶರೀರಾ ॥ ॥ ಜೀಜೀ ॥
ಕಾಮಧೇನು ಕಲ್ಪವೃಕ್ಷ ಹುಟ್ಯಾವ ಯಾವಲ್ಲಿ ।
ಚಿಂತಾಮಣಿ ಮುಕ್ತಾಫಲಾ ಯಾವ ಜಾಗಾದ ಮ್ಯಾಲಿ ।
ಅಮೃತ ಅಂದರ ಕೂಗಿ ಹೇಳು ಬಾಯಿಲಿ ।
ಧರ್ಮ ನರ್ಕಾ ಎಷ್ಟ ಪ್ರಕಾರಾ ।
ಮರಿಯಲಾರದೇ ಹೇಳು ಶಾಹೀರಾ ।
ನಿಂದ ತಿಳದು ಹೋಗತದ ಸಾರಾ ।
ಯಾವ ತತ್ತಿಯೊಳಗ ಕತ್ತಲಿ ಹುಟ್ಟಿತೊ ಕವಿಗಾರಾ ॥ ॥ ಜೀಜೀ ॥

ಏರು ಕತ್ತಲ ತೆಲಿ ಎತ್ತಿ ನೋಡಿತು ಎಲ್ಲಿ ಭೂಮಿ ತಲಿಯಣ್ಣಾ ।
ಆಕಿ ಕಾಲ ಯಾವಲ್ಲಿ ಸುಜ್ಞಾನಾ ।

ಕೂಡಪಲ್ಲ ಎಂಬತ್ತೆರಡು ಸವಾಲ ಕೇಳತಿನಿ ತಪ್ಪದೆ ನೀನು ಹೇಳಣ್ಣಾ॥
॥ ಜೀಜೀ ॥ ಚೌಕ ೧ ॥

ಮಕ್ಕಾದ ವಿಸ್ತಾರ ಲೆಕ್ಕ ಕೇಳತೀನಿ ಚೊಕ್ಕ ಹೇಳ ತಪಶೀಲಾ ।
ಅದಕ ಕಂಬ ಎಷ್ಟು ಬಾಗಿಲಾ ।
ಉರ್ದು ಭಾಷಾದೊಳಗ ಒಂಬತ್ತು ಚಕ್ರದು ಹೆಸರು ಹೇಳಲ್ಲಾ ॥
॥ ಜೀಜೀ ॥

ನಾಲ್ಕು ಆಶ್ರಮ ಐದು ಅವಸ್ಥಾಕ ಏನೇನು ಅಂದ್ರೊ ಗಸುಲುಲ್ಲಾ ।
ಉರ್ದು ಭಾಷಾದೊಳಗ ಹೇಳು ಎಲ್ಲಾ ।
ಪಂಚಭೂತ ಆತ್ಮಕ ಏನಂದರು ಹೇಳಲಾರದೆ ಬಿಡುವುದಿಲ್ಲಾ ॥ ಜೀಜೀ ॥
ಪ್ರಾಣ ಮಾಯಿ ಮಾಡಿದ ಯೋಗಿಗಳು ಎಷ್ಟು ಅದಾರೊ ಅನಗಾಲಾ ।
ಅದರ ಏನನ್ನುತ್ತಿದ್ದರು ಅವರೆಲ್ಲಾ
ಉರ್ದುದೊಳಗ ನಾಲ್ಕು ವೇದಕ ಏನಂದರು ಬಲ್ಲವರು ಹೇಳರಿ ಕಲಾ ॥
॥ ಜೀಜೀ ॥

ಖುರಾನ ಒಂದರ ಕವಿ ಕರ್ತೃರಾದರೊ ತಮ್ಮಾ ಯಾರ‍್ಯಾರು ಅದರ ಸಾಕಿಲ್ಲಾ ।
ಅದರ ಯಾರದಿತ್ತೊ ಅನಕೂಲಾ ।
ಅಲ್ಲಹಾಮಸೂರ ಯಾವಲ್ಲಿ ಹುಟ್ಟಿತು ಇಲ್ಲಿ ಹೇಳು ತಾತ್ಕಾಲಾ ॥
॥ ಜೀಜೀ ॥

ಇಸ್ಲಾಮದ ಗುರುಗಳ ಹೆಸರ ಏನು ಕಲಾಪತನ ಸೀಲಾ ।
ಇದು ಹೇಳಲಾರದೆ ಬಿಡುವದಿಲ್ಲಾ ।
ಮಸೂತಿ ಹೋಗಾಗ ಮಸೂತಿಗಿ ಏನಂದಿ ಮಸೂತಿ ಏನಂತೊ ಆಮ್ಯಾಲಾ ॥ ॥ ಜೀಜೀ ॥

ಇಳು ಮುಸಲ್ಮಾನರ ಗೋರಿಮ್ಯಾಲ ಎರಡು ಕಲ್ಲು ಇಡತಾರ ।
ಎರಡು ಕಲ್ಲಿನ ಹೆಸರು ಹೇಳೊ ಕವಿಗಾರಾ ।
ಬಾರಿಕಂಟಿ ಒಯ್ದು ಗೋರಿಮ್ಯಾಲ ಯಾಕ ಜಡಿತಾರಾ ॥ ॥ ಜೀಜೀ ॥
ಮೋಹರಮ್ ಹುಟ್ಟಿತ ಯಾಕ ।
ಇದರ ಶ್ರುತಿ ಸುಮ್ಮನೆ ಹೇಳಬೇಕ ।
ಆ ಫಂಜಿ ಮರ್ಮ ತಿಳಿಯಬೇಕ ।
ಸರ್ವವೆಲ್ಲಾ ಶಾಸ್ತ್ರ ಬಲ್ಲವನೇ ಹೇಳತಾನ ಇದಕ ॥ ॥ ಜೀಜೀ ॥
ಮತ್ತೊಂದ ಮಾತ ಕೇಳತಿನಿ ಶಾಹೀರಾ ।
ದೇವರ ಗುಡಿಯೊಳಗ ಗಂಟಿಯಾಕ ಕಟ್ಟತಾರ ।
ಪೂಜೇದ ಟಾಯಮಕ ಶಂಖ ಯಾರು ಊದತಾರ
ಆಂವಿ ಚಿತ್ರ ಯಾಕೊ ಹೊಸ್ತಿಲಕ
ಬಸವನ ಮೂರ್ತಿ ಅಲ್ಯಾಕ ।
ಸರಿಯಾಗಿ ಮಾಡಿ ಹೇಳೊ ತರ್ಕಾ ।
ಮೂರ್ತಿ ಮಾರಿ ಯಾರದೈತಿ ಸದ್ಯ ಹೇಳಬೇಕ ॥ ॥ ಜೀಜೀ ॥

ಇನ್ನೊಂದು ಮಾತ ನಾ ಕೇಳತಿನಿ ಕವಿಗಾರಾ ।
ಯಾವ್ಯಾವ ಜ್ಯಾತಿ ಹೆಣ್ಣ ಎಷ್ಟ ಜಾತಿ ಗಂಡಸರಾ ।
ಅವರವರ ಜ್ಯಾತಿ ಕೂಡಿ ಎಷ್ಟು ಸಂಖ್ಯೆ ಗುಣಾಕಾರಾ ಜಲಪ್ರಾಣಿ
ಮ್ಯಾಲ ಇಲ್ಲ ಯಾಕ ॥ ॥ ಜೀಜೀ ॥

ಈ ಪಕ್ಷಿಗಳಿಗೆ ಸಹಿತ ಚೊಕ್ಕ
ಚೇಳಿಗಿ ಹಡಿಯಲಿಕ್ಕೆ ಬರುವುದಿಲ್ಲ ಯಾಕೆ ।
ಬೋಳ ಹಡಿಯಬೇಕಾದರ ಬ್ರಹ್ಮ ಹಾದಿ ಮಾಡಲಿಲ್ಲ ಯಾಕ ॥
॥ ಜೀಜೀ ॥

ಏರು ಕೈಲಾಸದ ಉದ್ದಗಲ ಕೇಳತೀನಿ ಎಷ್ಟ ಅದರ ಪ್ರಮಾಣ ।
ಇಲ್ಲಿಂದ ದಾರಿ ಯಾವುದಣ್ಣಾ ।

ಕೂಡಪಲ್ಲ ಎಂಬತ್ತೆರಡು ಸವಾಲ ಕೇಳತೀನಿ ತಪ್ಪದೆ ನೀನು ಹೇಳಣ್ಣಾ ॥
॥ ಜೀಜೀ ॥ ಚೌಕ ೨ ॥

ಏರು ಇಪ್ಪತ್ತೆಂಟು ನಕ್ಷತ್ರದೊಳಗ ಅಭಿಜಿತ ನಕ್ಷತ್ರಕ ।
ಹಿಡಿಯಲಿಲ್ಲ ಗಣಿತಕ್ಕ ।
ಹೆಣ್ಣ ರಾಶಿ ಮತ್ತು ಗಂಡ ರಾಶಿಗಳು ಯಾವ್ಯಾವು ಹೇಳ ತುರ್ತಕ ॥
॥ ಜೀಜೀ ॥

ತಾತ್ಕಾಲ ಲಗ್ನದ ಕುಂಡಲಿಯೊಳಗ ರಾಹು ಐದನೆ ಸ್ಥಾನಕ
ಆ ಕೂಸು ಹುಟ್ಟಿದ ಕಾಲಕ
ರವಿಚಂದ್ರ ಹನ್ನರಡನೆ ಸ್ಥಾನಕ ಇದ್ದರೆ ಹ್ಯಾಂಗ ಜನ್ಮ ಜಾತಕ ॥
॥ ಜೀಜೀ ॥

ಹೊಟ್ಯಾಗ ಕೂಸ ಗಂಡ ಹೆಣ್ಣ ಆದರ ಹೇಳುದು ಗಣಿತ ಮಾಡಿ ಹೇಳಬೇಕ ।
ಆ ಯೋಗಾಯೋಗ ತಿಳಿಯಬೇಕ
ರೋಗದೊಳಗ ಎಷ್ಟುಭಾಗ ಅದಾವ ತಮ್ಮಾ ಸಾರಿ ಹೇಳು ಸದ್ಯಕ ॥
॥ ಜೀಜೀ ॥

ರೋಗ ಬರುವುದಕ ಕಾರಣವೇನು ಬೇಗ ಉತ್ತರಾ ಕೊಡಬೇಕ ।
ಇನ್ನು ಬಹುಕಾಲ ನೀ ದುಡಿಬೇಕ ।
ಅತಿಸಾರ ಯಾವ್ಯಾವು ಮಲಬದ್ಧ ಅಂದರೇನು ಅರ್ಥ ಬಿಡಿಸಿ
ಹಾಕಬೇಕ ॥ ॥ ಜೀಜೀ ॥

ಚರಕೀಲಾ ಸ್ಥಿರಕೀಲಾ ತಿರಗ್ಯಾಡಿ ಕೀಲಾ ಪರಿ ಪರಿ ಈ ದೇಹಕ ।
ಪಂಚಭೂತ ಶರೀರ ಕಾಯಕಾ ।
ಅನ್ನಾಶಯ ರಕ್ತಾಶಯ ವಾತ ಪಿತ್ತ ಕಫಾ ಯಾವ ಭಾಗಕ ॥ ಜೀಜೀ ॥

ಇಳು ಈ ಜಗತ್ತಿನೊಳಗ ಹೊಸ ದೀನಸ ಯಾವುದೈತಿ
ನವರಂಗ ಬಾಜಾರದೊಳು ಚಲುವ ದೀನಸ ಯಾವುದೈತಿ
ಈ ಬ್ರಹ್ಮ ಸೃಷ್ಟಿಯೊಳು ಅಮೂಲ್ಯ ದೀನಸ ಯಾವುದೈತಿ
ಕಬ್ಬಲಗ್ಯಾರ ಗುರು ಯಾರಪ್ಪಾ । ಇದರ ತಳಾ ಸೋಸಿದವರಪ್ಪಾ ।
ಧೈರ್ಯ ಇದ್ದರ ಕಾಲಕೆದರಪ್ಪಾ ।
ಯಾತಾಳ ಮನೊಬಾ ಯಾರ ಮಕ್ಕಳಪ್ಪಾ ಹೇಳಪ್ಪಾ॥ ॥ ಜೀಜೀ ॥

ಕಾಳಭೈರವ ಹಿರೋಡ್ಯ ಹುಟ್ಟಿದ ಕಾರಣ ಏನೈತಿ ।
ಏಳು ಮಕ್ಕಳ ತಾಯಿಗಿ ಗಂಡ ಯಾರ ಅಧಿಪತಿ ।
ಆ ಏಳು ಮಕ್ಕಳದು ಹೆಸರು ಹೇಳು ಅಡಜಾತಿ
ದುರಗಿ ಮುರಗಿ ತವರ ಮನಿಯಾವದಪ್ಪಾ ।
ಶೃತಿ ಸಮ್ಮತಿಲಿ ಹಾದಿ ಹೇಳಪ್ಪಾ।
ಕೇಳಿ ಮಾರಿ ಮಾಡಬ್ಯಾಡ ಕಪ್ಪಾ ।
ನಮ್ಮ ಭಾರತದ ರೊಖ್ಖಿಗಿ ಸಿಂಹದ ಮುಖಾ ಯಾಕೆಪ್ಪಾ
ಚಂದ್ರಗ ಢಾಗ ಎಷ್ಟ ಬಿದ್ದಿದ್ದು ಹೇಳು ಕೈಯೆತ್ತಿ
ವಿಶ್ವಾಪ ಆಗಿ ಸಧ್ಯ ಉಳದಾವ ಎಷ್ಟು ಪೂರ್ತಿ।
ಲಂಕಾ ಹಣುಮ ವಿಷ್ಣುಗ ಗುರು ಯಾರು ಹೇಳು ಗುರುಮೂರ್ತಿ।
ಜಯದ್ರಥಗ ಪಾರ್ಥ ಹೊಡದಾನಪ್ಪಾ
ಅವನ ಶಿರಾ ಎಲ್ಲಿಗಿ ಹೋಯಿತಪ್ಪಾ
ಇದು ತೋರಿಸಿ ಕೊಡು ಇಷ್ಟs ನೆನಪಾ ।
ಶ್ರವಣ ಬಾಳಿನ ದೇಹಕ ಕಿಚ್ಚ ಎಲ್ಲಿ ಕೊಟ್ಟರಪ್ಪಾ ॥ ಜೀಜೀ ॥

ದ್ರೌಪತಿಗಿ ವಸ್ತ್ರಾಪಹರಣ ಆದ ಮಾತು ಗುರುತೈತಿ
ಎಂಟುಕೋಟಿ ವಸ್ತ್ರ ಕೃಷ್ಣ ಕೊಟ್ಟಾನೊ ಕೈಮತ್ತ
ಗುರುವಿನಾಣಿ । ಸಧ್ಯ ಬಿಟ್ಟು ಎಲ್ಲಿಗಿ ಹೋಗತಿ ।
ಅದು ಯಾವ ಪ್ಯಾಟ್ಯಾಗಪ್ಪಾ ।
ಯಾವ ಜ್ಯಾಡ ನೇಯಿದಾ ಸೀರಿ ಹೇಳಪ್ಪಾ ।
ಕಡಿ ಹಿಡಿದು ಮಾಡಿ ಹೇಳು ನೆನಪಾ ।
ಭಿಕ್ಷಾದ ಅನ್ನದೊಳಗ ಪಾಲ ಎಷ್ಟ ಉಸರಪ್ಪಾ ॥ ಜೀಜೀ ॥

ಏರು ಕಲಗಿ ಜ್ಯಾಗ ಮುಳಸಾವಳಗಿ ವಾಯಣಾ ।
ಕಲಾಶ ಇಟ್ಟಾಣೊ ಫಣಾ ।
ಕೂಡಪಲ್ಲ ಎಂಬತ್ತೆರಡು ಸವಾಲ ಕೇಳತೀನಿ ತಪ್ಪದೆ ನೀನು ಹೇಳಣ್ಣಾ॥
॥ ಜೀಜೀ ॥ ಚೌಕ ೩ ॥

ಗಂಡ ಹೆಚ್ಚಂತ ಬಂಡ ಮಾಡವರು

ಗಂಡಿಗೆ ಬೆಳೆಸುವ ಪುಂಡ ಗಂಡರು ಬಂದೀರಿ ಗಂಡಸರು
ಹುಟ್ಟಿಲ್ಲೊ ಗಂಡೀಲಿ।
ನಿಮ್ಮ ಕುಂಡಿಗೆ ಹೊಡದಾರೊ ಹೆಂಡೀಲಿ ।
ಗಂಡ ಹೆಚ್ಚಂತ ಬಂಡ ಮಾಡವರೆಲ್ಲಾ ಹುಟ್ಟರೇನ ನೀವು ಕುಂಡಿಲಿ ॥
॥ ಜೀಜೀ ॥ ಪಲ್ಲ ॥

ಏರು ಭೂಮಿಗಿ ಬಸವಣ್ಣ ಹೆಪ್ಪ ಕೊಟ್ಟಾನಂತ ಹೇಳತಿರಿ ಶಾಸ್ತ್ರರಾ ।
ನಮ್ಮ ಗೂಡಾ ಎಂಥಾ ದುಸ್ತಾರಾ ।
ದ್ವಾಪಾರದೊಳಗ ಬಸವಣ್ಣ ಕರೆ ಹೇಳು ವಿಸ್ತಾರಾ ॥ ॥ ಜೀಜೀ ॥

ಅದಕs ಮೊದಲು ಭೂಮಿ ಇದ್ದಿದ್ದಿಲ್ಲವೇನು ಹ್ಯಾಂಗ ಆಯಿತ ಆಕಾರಾ।
ನಿನ್ನೆ ಹುಟ್ಯಾವ ಬಸವೇಶ್ವರಾ ।
ಆಧಾರವಿಲ್ಲದೆ ಸುಳ್ಳೆ ಯಾಕ ಹಲಬತಿರಿ ತಿಳಿತು ನಿಮ್ಮ ಮಜಕೂರಾ ॥
॥ ಜೀಜೀ ॥

ಇಳು ಭೂಮಿ ತಯ್ಯಾರಾಗುದಕ ಬೀಜ ಬೇಕಂದ್ರ ಮೊದಲಾ ।
ಪಂಚಭೂತ ಕೊಡಲಾರದೆ ಬ್ರಹ್ಮ ಸೃಷ್ಟಿ ಆಗಿಲ್ಲಾ ।
ಪಂಚಭೂತದ ಬೀಜ ಎಲ್ಲಾ ಯಾವ ಹೇಳಬೇಕು ಕುಲ್ಲಾ ।
ಆಕಾಶಕ ಬೀಜ ಯಾವುದು ।
ಅದು ಬರೇ ಬಯಲ ರೂಪಾದೋ ।
ಇದು ನಿನ್ನ ಜೀವಕ ತಾಪಾದೋ ।
ನಿನ್ನ ಗುರುವಿಗಿ ಕೇಳು ತಿಳಿಯಲಾರದು ।
ಹಾಡುವುದು ಪಾಪ ಅದೊ ॥ ॥ ಜೀಜೀ ॥

ನೀರೇ ನಿರಂಕಾರ ಇತ್ತಂದರಿ ನಿರ್ಬೈಲಾ ।
ನೀರಿಗಿ ಹೆಪ್ಪ ಕೊಟ್ಟವರಾ ಹೆಸರು ಹೇಳು ಖಿಲ್ಲಾ ।
ನಿಗರ್ಯಾಡಿ ಹಾಡಿ ನಮ್ಮದೇನು ಕಿತ್ತುವದಿಲ್ಲಾ ।
ಸಿಗಬಾರದು ಸಿಕ್ಕರಿ ಬಂದು ।
ಅಲ್ಲಿವು ಇಲ್ಲಿವು ಪದಗಳು ತಂದು
ಇದು ಬಿಟ್ಟು ಹೇಳತಿರಿ ಮತ್ತೊಂದು
ಶಿಕ್ಷಾ ಕೊಡತಿನಿ ನೀವು ಹಾಡಬಾರದೆಂದು ॥ ॥ ಜೀಜೀ ॥

ನೀವು ತಿಳದು ನೋಡ್ರಿ ಗಾಳಿಯೊಳಗ ಭೀಜಿಲ್ಲಾ ।
ನೀರಿನೊಳಗ ಸಹಿತ ಇಲ್ಲಪ್ಪಾ ಗಂಡಿನ ಪಾಲಾ ।
ಬೆಂಕಿಗಿ ಭೀಜ ಯಾವಲ್ಲಿ ಅದು ಹೇಳು ಮೊದಲಾ ।
ಇವು ಪಂಚಭೂತಗಳು ಐದು
ಐದಕ್ಕೈದಾಗಿ ಇಪ್ಪತ್ತೈದು
ಪಂಚಕರಣ ನೋಡ್ರಿ ನೀವು ತೆರದss।
ನಮ್ಮ ಗಿಡದೊಳಗ ಉತ್ಪತ್ತಿ ನಿಮ್ಮ ಬೀಜೆಂದು ॥ ಜೀಜೀ ॥

ಏರು ಬೀಜ ಮೊದಲಂಥ ಬೊಗಳುವ ನಾಯಿ ಬೊಗಳಬ್ಯಾಡೋ ತಿಂಡಿಲೀ।
ನೀವು ಬಿದ್ದಿರಿ ಇದೇ ಕಿಂಡಿಲಿ।

ಕೂಡಪಲ್ಲ ಗಂಡ ಹೆಚ್ಚಂತ ಬಂಡ ಮಾಡವರೆಲ್ಲಾ ಹುಟ್ಟಿರೇನ ನೀವು ಕುಂಡೀಲಿ ॥
॥ ಜೀಜೀ ಚೌಕ ೧ ॥

ಏರ ನಾರದೊಳ ಬೀಜವಿಲ್ಲದೆ ಆ ಬೀಜ ಯಾವ ಕೊಟ್ಟಾsನ।
ಅದರಾಗ ಯ್ಯಾವ ಹುಟ್ಯಾನಾ ।
ಬೀಜ ನಮಗ ಕಹಿ ಬೀಜಬ್ಯಾಡ ಇದನ್ಯಾಂವ ಬರದಿಟ್ಟಾನ ॥ ಜೀಜೀ ॥

ಮೂಲಸೃಷ್ಟಿ ಬಾಳ ಗುಮ್ಮ ಐತಿ ಕೇಳರಿ ನಿಮ್ಮ ಗುರುವಿನ್ನಾ ।
ತಿಳಲಾರದೆ ಬಂದಿರೊ ಹೈವಾನಾ ।
ಆದಿ ಪುರುಷ ಯಾವಲ್ಲಿ ಹುಟ್ಟೇದ ಹೇಳಿ ಮಾಡು ಗಾಯನಾ ॥
॥ ಜೀಜೀ ॥

ಇಳು ಮೂಲಸ್ವಯಂ ಶಕ್ತಿ ಶಕ್ತಿಯಿಲ್ಲದೆ ಸ್ವಯಂ ನಾದಯಾವಲ್ಲಿ ।
ಆ ಶಕ್ತಿ ವಾಸಿನಿಂದೆ ಗೋಲಾಕಾರ ಆ ಮೇಲಿ ।
ಪಾಪ ಚೈತನ್ಯ ರೂಪದ ನಾದ ಹೋಗೇದ ಬೀಳುತಲಿ ।
ಓಂ ಎಂಬುವ ನಾದ ಝುಂಕರಿಸಿ
ಅದರಿಂದ ಜ್ಯೋತಿ ಪ್ರಜ್ವಲಿಸಿ ।
ಆಕಾಶಭಾಗ ಉದುರಿಸಿ ।
ಆಕಾಶದೊಡಲೊಳು ವಾಯು ತತ್ವ ಉದ್ಭವಿಸಿ ॥ ಜೀಜೀ ॥

ವಾಯು ತತ್ವದೊಳು ಅಗ್ನಿತತ್ವ ಹುಟ್ಟಿತು ಆ ಮ್ಯಾಲಿ ।
ಎರಡನೂರ ಗೋಲ ಕಡೆದು ಬಿದ್ದಾವ ಅಧೋಭಾಗದಲ್ಲಿ।
ಒಂದನೆ ಗೋಲಿನಿಂದ ಭೂಮಿ ತಯ್ಯಾರಾಯಿತೊ ಹುಚ್ಚ ಪ್ಯಾಲಿ।
ಹಿಂಗ ತಗದ ಹೇಳಬೇಕ ಸೋಸಿ ।
ಸಭಾ ಮಾಡತೈತಿ ಚೌಕಾಸಿ ।
ಇದು ಸಾಯುವಷ್ಟರ ಅನುಸರಿಸಿ ।
ಯಾವಲ್ಲಿ ಬೆಳೆದ ಬಲಾ ಅನಿಸಿಕೊಂಡೊ ಬಿಕನಾಸಿ ॥ ಜೀಜೀ ॥

ಭೂಮಿ ಬೀಜದ ನ್ಯಾಯ ಕೇಳಿ ಬಂದೀರಿ ಎಲ್ಲೆಲ್ಲಿ ।
ಇದು ಹೌದೇನಲ್ಲಾ ಮತ್ತ ಕೇಳೋ ಪಂಡಿತರೆಲ್ಲಿ ।
ತಕರಾರ ಇದ್ರ ಈಗ ಸದ್ಯೆ ಕೇಳರಿ ಸಭಾದಲ್ಲಿ
ಬರದಂತ ಪುರಾಣಗಳು ತರಿಸಿ ।
ನಿನಗ ಕಲಿಸಿದ ಗುರುವಿನ ಕರಸಿ ।
ಪ್ರಮಾಣಾಗಲಿ ಹರದಾಸಿ ।
ನಿಮ್ಮ ಗುರುವಿಗೆ ಮಗಾ ಇಲ್ಲ ನೀ ಯಾರ ಮಗಾ ಪರದೇಶಿ ॥
॥ ಜೀಜೀ ॥

ಏರು ಕಂಡ ಕಂಡಲ್ಲಿ ಹೋಗಿ ಪದಗಳ ಬರಕೊಂಡ ಕಲ್ತ ಬಂದಿ ಝುಂಡೀಲಿ ।
ಹೆಂಡಿ ತಿಂದ್ರಿ ನಿಮ್ಮ ಸೊಂಡೀಲಿ ।
ಕೂಡಪಲ್ಲ ಗಂಡ ಹೆಚ್ಚಂತಾ ಬಂಡ ಮಾಡಾವರೆಲ್ಲಾ ಹುಟ್ಟಿರೇನ ನೀವು ಕುಂಡೀಲಿ ॥
॥ ಜೀಜೀ ॥ ಚೌಕ ೨ ॥

ಏರು ರೊಕ್ಕದಾಸೆಕ್ಕಾಗಿ ಸಿಕ್ಕಾಂಗ ಬೊಗಳುದು ಯಾಂವ ಕಲಸ್ಯಾನ ಹಲಕಟ್ಟಾ
ತಗದ ಹಾಕರೋ ಹಿಂತಾವೆಲ್ಲಾ ಚಟಾ ।
ಭೀಜಿನ ಮಕ್ಕಳು ಭೂಮಿ ಮೇಲೆ ಇರಬ್ಯಾಡರಿ ಬೈಲಾಗ
ಮಾಡಿಕೋರೊ ಮಠಾ ॥ ॥ ಜೀಜೀ ॥

ಸೀರ‍್ಯಾಗ ಹುಟ್ಟಿ ನಿಮ್ಮ ಸ್ಥಿತನು ಹೇಳಲಿ ಆಕಾರದಿಂದ ಅರಭಟಾ ।
ಪರಬ್ರಹ್ಮನ ತಾಯಿ ನಮ್ಮ ಗಟಾ ।
ಭೂಮಿಗಿ ಬಿಟ್ಟು ಬೈಲಗಿ ತಿರಗತಾದ ಯಾವ ಗಂಡ ಮರ್ಕಟಾ ॥
॥ ಜೀಜೀ ॥

ಕುಂತರ ಭೂಮಿ ಬೇಕು ನಿಂತರ ಭೂಮಿ ಬೇಕು ಸತ್ತರ ಭೂಮಿ ಸಂಗಾಟ ।
ಭೂಮಿಯಲ್ಲಿ ಮಠಾ ।
ಎಂಥಿಂಥವರು ಭೂಮ್ಯಾಗ ಹುಟ್ಟಿ ಭೂಮಿಗೆ ನಿಂದೆ ಆಡತಿ
ಪಾಪಿಷ್ಟಾ ॥ ॥ ಜೀಜೀ ॥

ಇಳು ಎದಿ ಮೇಲೆ ಮಲಿ ಇಟಗೊಂಡು ತಿರಗಾಂವ ಗಂಡಸಲ್ಲಾ ।
ಹೆಸರಿಗಿ ಮಲಿ ಆ ಮಲಿಯೊಳಗ ಹಾಲಿಲ್ಲಾ ॥ ॥ ಜೀಜೀ ॥

ನಮ್ಮ ಹಾಲ ಕುಡಿಯದೆ ನೀವು ಜೋಪಾನಾಗಿಲ್ಲಾ ।
ಈ ಭೂಮಿ ಅನ್ನಾ ಉಂಡ ಬಳಿಕ ಚೈತನ್ಯ ಬಂದು ಈ ದೇಹಕ ।
ರಾಮನಾಟಕ ಮೂಲ ಗರ್ಭಕ ಆ ಮೇಲೆ ಗಂಡ ಬಂದು ಹೆಣ್ಣ
ಕೂಡಿರಬೇಕ ॥ ॥ ಜೀಜೀ ॥

ನಿಮ್ಮ ದೇವ ದೇವತೇರಾ ಹುಟ್ಟಾರ ಇದೇ ಭೂಮಿ ಮ್ಯಾಲಾ ।
ಹುಟ್ಟಿದ ಶರಣರೆಲ್ಲಾ ಆಗ್ಯಾರ ಇಲ್ಲೆ ಮಣ್ಣ ಪಾಲಾ ।
ಎಷ್ಟ ಮಂದಿ ಸತ್ತ ಹೋದರು ಭೂಮಿ ಸತ್ತ ಹುಟ್ಟಿಲ್ಲಾ ।
ನಾವು ಅಮರ ಎದಕ ಅನಬೇಕ ತಾವು ದೈವ ದೇವರಿದ್ದ ಬಳಿಕ
ಒರಿಗಿ ಹಚ್ಚಿ ವಿಚಾರ ಮಾಡಬೇಕೋ
ಇವರ ಗುರುವಿನ ಮಕ್ಕಳು ಆಣಿ ಮಾಡಿ ಹಾಡಬೇಕ ॥ ಜೀಜೀ ॥

ಏರು ಕರ್ನಾಟಕ ಭಾಗ ಮುಳಸಾವಳಗಿ ಪ್ರಭಲಾ
ಸಿಂಧಗಿ ತಾಲೂಕ ಕಡಿ ಹಳ್ಳಿಯ ಮ್ಯಾಲಾ
ಮತಾಬ ಸಾಹೇಬ ದೇವರ ಬೆಂಬಲಾ ॥ ॥ ಜೀಜೀ ॥

ಪದಾ ಹಾಡಬೇಕ ಆಧಾರಕ ಹಚ್ಚಿ ಕಡಿತರಾ ।
ಇಟ್ಟು ನೀವು ತರ್ಕಾ ।
ನೆನಪ ಹಾರಿ ಬಿದ್ದಿತೊ ಪರಕಾ ।
ಪೇರ ಬಿತ್ತಂದರ ನಿಮ್ಮನ ಬಿಗಿತಿನಿ ಬೇವಿನ ಮರಕಾ ॥ ॥ ಜೀಜೀ ॥

ಕೂಡಪಲ್ಲ ಕವಿ ಮಡಿವಾಳನ ಪ್ರಾಸ ಪದಗಳು ಅಳದೊಯಿರಿ ಬಂಡಿಲಿ
ನಿಮ್ಮ ಎದಿಯಾಗ ಹೊಡದಂಗ ಗುಂಡೀಲಿ ॥ ॥ ಜೀಜೀ ಚೌಕ ೩ ॥

ಕತ್ತಿಯಂಗ ಕುಣಿಯಬೇಡ

॥ ಸವಾಲ ಪದಾ ॥

ಕತ್ತಿಯಂಗ ಕುಣಿಬ್ಯಾಡೆ ಕುರಸಾಲ್ಯಾ ಪಡಿಬೀಜ
ಕತ್ತಿಯಂಗ ಹಾಡುವವ ಕವಿಗಾರ ಅಲ್ಲಾ
ಕುಂಭ ಕರ್ಣ ರಾವಣ ಹುಟ್ಟುದಕ ಯ್ಯಾರ ಶಾಪ ಆಗೈತಿ ಮೊದಲಾ।
ಹಿರಣ್ಯ ಕಶ್ಯಪ ಯಾರ ಮಗಾ ತಮ್ಮಾ ಹೇಳಲಾರದೆ ಬಿಡುದಿಲ್ಲಾ
ಭೂಮಿ ಸುತ್ತಿ ಬಗಲಾಗ ಹಿಡಕೊಂಡಾಂವ ಯಾವ ಋಷಿ
ಹೇಳಬೇಕ ಮೊದಲಾ ॥ ॥ ಜೀಜೀ ॥

ಅಂತಾ ಋಷಿಗೆ ಯಾಂವ ಹೊಡದಾನೊ ಸತ್ಯ ಪ್ರಮಾಣ ಇನ್ನ ಮ್ಯಾಲ
ಜಯ ವಿಜಯರು ಯಾರ ಬಾಗಿಲ ಕಾಯತಿದ್ದರು
ಯಾಂವ ಮಾಲೀಕ ಅವರ ಹಿಂಬಾಲಾ ॥ ॥ ಜೀಜೀ ॥

ಜಯ ವಿಜಯರಿಗೆ ಯಾರ ಶ್ಯಾಪ ಆಯಿತು
ಜಾಗೃತಿಯಿಂದ ಹೇಳಬೇಕಲ್ಲಾ
ಅಮರಾವತಿ ಆಳುವಂತಾ ಇಂದ್ರಗ ಯಾರ ಆಗಿ ಕುಳಿತಾರ ಮೂಲಾ ॥
॥ ಜೀಜೀ ॥

ಇಳು ಹತ್ತ ಅವತಾರ ಯಾಕ ಹೊತ್ತ ಭಗವಾನ ।
ಇದು ಯಾರ ಶ್ಯಾಪ ಕಾರಣಾ ॥ ॥ ಜೀಜೀ ॥

ಈ ಪದಕ ಪದಾ ಸರಿಯಾಗಿ ಉತ್ತರ ಕೊಡುವಣ್ಣಾ।
ಇಲ್ಲದಿದ್ದರ ಹಲ್ಲ ಮುರಿತೀನಣ್ಣಾ॥ ॥ ಜೀಜೀ ॥

ಸುಳ್ಳ ಗೊಳ್ಳ ಬ್ಯಾಡೊ ಸಮಾಧಾನಾ ।
ಕೀರೆ ಮಾಡಿ ಹಾಡಿ ಹೇಳಣ್ಣಾ ॥ ॥ ಜೀಜೀ ॥

ಏರು ಸ್ವರ್ಗದಲ್ಲಿ ಯಾರು ಮೊದಲು ವಾಸ ಮಾಡುತಿದ್ರು
ದಂತ ವಕ್ರ ಮತ್ತು ಶಿಶುಪಾಲ।

ಕೂಡಪಲ್ಲ ಕತ್ತಿಯಂಗ ಹಾಡುವವ ಕವಿಗಾರ ಅಲ್ಲಾ ।
ಕುಂಬಕರ್ಣ ರಾವಣ ಹುಟ್ಟುದಕ ಯ್ಯಾರ ಶ್ಯಾಪ ಆಗೈತಿ ಮೊದಲಾ॥
॥ ಜೀಜೀ ॥ ಚೌಕ ೧ ॥

ಏರು ಪೂರ್ವದೊಳಗಿನ ಮಾತು ಕೇಳತೀನಿ ಹರಿಭಕ್ತಿ ರಾವಣೇಶ್ವರಾ ।
ಗೆಳತಾನ ಹೋಗಿ ಕಹಿತಾನ ಯಾಕ ಬಂತು ಗಾಯನಮಾಡಿ ಹೇಳು
ಕವಿಸಾರಾ ॥ ॥ ಜೀಜೀ ॥

ದಂತ ವಕ್ರ ಶಿಶುಪಾಲ ಸಾಯುವಾಗ ತೆರದಿತ್ತಿಲ್ಲೊ ಮುಕ್ತಿದ್ವಾರಾ ।
ಕುಂಬಕರ್ಣ ರಾವಣರಿಬ್ಬರಿಗಿ ಆಗೈತಿಲೊ ಶಾಹೀರಾ ॥ ಜೀಜೀ ॥

ಹಿರಣ್ಯ ಕಶ್ಯಪನ ಹೆಂಡತಿ ಹೆಸರ ಹೇಳ ಫೀರಾ ।
ಬಿತ್ತರಿ ಜೀವಕ ಘೋರಾ ।
ಭಕ್ತ ಪ್ರಲ್ಹಾದ ಇವರ ಹೊಟ್ಟೆಲೆ ಹುಟ್ಯಾನ ಗೊತ್ತೈತಿ ಕಥಿ ಸಾರಾ ॥
॥ ಜೀಜೀ ॥

ಇಳು ಸಮುದ್ರನಾಥ ಪ್ರಲ್ಹಾದಗ ಏನ ಆಗತಾನ ।
ಹಾಡಿ ಹೇಳಿ ಬೆಳಿಯೋ ಸುಜ್ಞಾನಾ ॥ ॥ ಜೀಜೀ ॥
ಆ ಭಕ್ತ ಪ್ರಲ್ಹಾದಗ ಸಾಲಿ ಯಾಂವ ಕಲಿಸ್ಯಾನಾ ।
ಆ ಗುರುವಿಂದು ಹೇಳು ನಾಮಕರಣಾ ॥ ॥ ಜೀಜೀ ॥
ಅವನ ಗುರು ಯಾರ ಪೂಜಿ ಮಾಡತಿದ್ದ ಅನುದಿನಾ ।
ಮಾಡಿ ಹೇಳಬೇಕ ಗಾಯನಾ ॥ ॥ ಜೀಜೀ ॥

ಏರು ಋಷಿಗಳ ಜೀವ ಯಜ್ಞ ಯಾರ ಭಂಗ ಮಾಡ್ಯಾರಾ
ಹುಸಿಯಾದರ ಮುರದೇನ ಹಲ್ಲಾ ।

ಕೂಡಪಲ್ಲ ಕತ್ತಿಯಂಗ ಹಾಡುವವ ಕವಿಗಾರಲ್ಲ
ಕುಂಬಕರ್ಣ ರಾವಣ ಹುಟ್ಟುದಕ ಯ್ಯಾರ ಶ್ಯಾಪ ಆಗೈತಿ ಮೊದಲಾ ॥
॥ ಜೀಜೀ ॥ ಚೌಕ ೨ ॥

ಧನವಂತ ಕುಬೇರನಲ್ಲಿ ದರೋಡಿ ಯಾವ ಕಳ್ಳ ಮಾಡ್ಯಾನ ಹೋಗಿ ।
ಯಾಂವ ಬಂದು ಅಬಸತ ಮಾಡ್ಯಾನ ಕೇಳತೀನಿ ನಿನಗ ಶಿರಬಾಗಿ ॥
॥ ಜೀಜೀ ॥

ಪ್ರಲ್ಹಾದನ ಪ್ರಾಣ ಹೊಡಿಬೇಕಂತ ಬಾಳ ಚಿಂತಿ ಅವರ ತಂದಿಗಿ ।
ಭೂಮಿಯೊಳಗ ಹುಗದಾರ ಪ್ರಲ್ಹಾದಗ ಬರಿಮೈ ಇಟ್ಟ ಇಂದೀಗಿ ॥
॥ ಜೀಜೀ ॥

ಭೂಮ್ಯಾಗ ಹುಗುಳಿದರ ಭೂಮಿ ಕರಕೊಳ್ಳಿಲ್ಲಾ
ಜೀವಂತ ಉಳಿದ ಬಂದಾನ ಕಡಿಗಿ ।
ಭೂಮಿ ಯಾಕ ಕರಕೊಳ್ಳಲಿಲ್ಲ ಹೇಳ ತಿಳಿದ ಹೋಗಲಿ ನಿನ್ನ ಸುಡಗಿ ॥

ಕೂಡಪಲ್ಲ ಮಂದಿ ಪದಗಳು ತಂದು ನಾವೇ ಅಂದಿರಿ ಕವಿಗಾರಾ ।
ಹಂದಿ ಜನನ ಹುಟ್ಟಿ ಬಂದವರಾ ॥ ॥ ಜೀಜೀ ॥
ಜರಾ ಗುರುವಿನ ಅರಿವು ಇಟ್ಟ ನಡಿರೊ ಪಾಮಾರಾ
ಜನ್ಮ ಆಗತದ ಉದ್ದಾರಾ ॥ ॥ ಜೀಜೀ ॥
ಸಿಂದಗಿ ತಾಲೂಕ ಮುಳಸಾವಳಗಿ ಜಾಹೀರಾ
ಮಹಾದೇವಿ ತಾಯಿ ಆಸರಾ ।

ಏರು ಕಲಗಿ ವಸ್ತಾದ ಹೇಳತಾನ ಗುರುವಿನ ಆಣಿ ಬಿಡುದಿಲ್ಲಾ ।

ಕೂಡಪಲ್ಲ ಕತ್ತಿಯಂಗ ಹಾಡುವವ ಕವಿಗಾರಲ್ಲ
ಕುಂಬಕರ್ಣ ರಾವಣ ಹುಟ್ಟುದಕ ಯಾರ ಶ್ಯಾಪಾಗೈತಿ ಮೊದಲಾ ॥
॥ ಜೀಜೀ ॥ ಚೌಕ ೩ ॥

॥ ಪದಾ ॥

ಅರಸಗ ಯಾಕ ಬಂತು ವನವಾಸ

ಏರು ಕಲ್ವಿಕಿದೊಳಗಿನ ಕೌತುಕ ಹೇಳತೀನಿ ದೈವ ಕೇಳರಿ ಕುಂತು ।
ಭೂಮಿಮ್ಯಾಗ ಪಟ್ನ ಒಂದಿತ್ತು ।
ಏನ ಕಡಮಿ ಆದೀತೊ ಅರಸಗ ವನವಾಸ ಯಾಕ ಬಂತೊ ।
ಆನಿ ಕುದರಿ ಪಾಗ ಪಾಗ ಸಾಲ ಸಾಲ ಅಳತಿಲ್ಲದ ಮಾತೊ ।
ಹೇಳತೀನಿ ದೈವ ಕೇಳರಿ ಕುಂತೊ ।
ಭಾಗ್ಯದ ಲಕ್ಷ್ಮಿ ಬಾಗಿಲ ಕಾಯತಾಳ ಅವನ ಮನಿಯ ತೊತ್ತೋ ॥
॥ ಜೀಜೀ ॥ ಪಲ್ಲ ॥

ಐವತ್ತಾರು ದೇಶದ ಅಗಸ ಅವನ ಭೂಮಿಸೀಮಿ ಮಸ್ತೊ
ಅರಸಕಿ ಮಾಡತಿದ್ದ ಕುಂತೊ
ಮೂರು ಲಕ್ಷ ದಂಡೈತಿ ಜನಾ ಅವನ ಹುಜೂರ ನಡಿಯತಿತ್ತೊ ॥
॥ ಜೀಜೀ ॥

ಇಳು ಅರಸನದು ಕೇಳರಿ ವಿಚಾರ
ಅವನ ಹೊಟ್ಟೆಲೆ ಇಲ್ಲೊ ಪುತ್ತರಾ ॥ ॥ ಜೀಜೀ ॥
ಈ ಅರಸಕಿ ಮಾಡಬೇಕಾದರ ।
ಮುಂದ ಯಾರು ಹೇಳಬೇಕು ಹೆಸರಾ ॥ ॥ ಜೀಜೀ ॥

ಏರು ಗುಡ್ಡ ಗಂವಾರ ಸೇರುದೇ ಪಾಸs ಇರಬಾರದ ಜನದ ಹೊರತೊ
ಬಂಜಿಯೆಂಬುದು ಜಲ್ಮ ವ್ಯರ್ಥ ।
ಕೂಡಪಲ್ಲ ಏನ ಕಡಿಮಿಯಾದಿತೊ ಅರಸಗ ವನವಾಸ ಯಾಕ ಬಂತೊ ॥ ಜೀಜೀ ॥

ಏರು ಅರಸನ ಹೆಂಡತಿ ಅರಸಗ ಹೇಳತಾಳ ಆಗಬ್ಯಾಡರಿ ಗಾಬರಿs।
ಅರಸಾ ಹುಟ್ಟಿ ಬರತಾನರಿss।
ಮೂರ ತಿಂಗಳ ಗರ್ಭ ನಿಂತಿತೊ ದಯಮಾಡ್ಯಾನ ಶ್ರೀಹರಿss॥
॥ ಜೀಜೀ ॥

ಏಳು ತಿಂಗಳ ಬಂಕಿ ಕಾಡ್ಯಾವೊ ಬೇಡ್ಯಾಳೊ ದಿನಸ ಗೋರಿ ।
ಬ್ರಹ್ಮ ಉಪಾಧ್ಯಾನ ಕಂಸಾಳರಿss॥
ಬೇಡಿದ್ದ ಕೊಡತೀನಿ ಹೆಣ್ಣ ಹುಟ್ಟಿದರ ಗಂಡಂತ ಹೇಳರಿss ॥ ಜೀಜೀ ॥

ಇಳು ಸೂಲಗಿತ್ತಿಗ ಕರಸಿ ಆಗ ಹೇಳತಾಳ ಅಕಲಾ
ಹೆಣ್ಣ ಹುಟ್ಟಿದರ ಮಾಡಬ್ಯಾಡ ಗುಲ್ಲಾ ॥
ಗಂಡಂತ ಪಟ್ಟಣಕ ಜಾಹೀರ ಮಾಡಬೇಕಲ್ಲಾ।
ಹೆಣ್ಣ ಅಂದರ ಅರಸ ಇರುದಿಲ್ಲಾ ॥ ॥ ಜೀಜೀ ॥

ಏರು ಅರಸನ ಹೆಂಡತಿ ಹಿಂಗ ಹೇಳತಾಳ ದೈವ ಕೇಳರಿ ಕುಂತs।
ಹೇಳತೀನಿ ಇದೇ ಒಂದು ಮಾತು ।
ಕೂಡಪಲ್ಲ ಏನ ಕಡಮಿ ಆದಿತೊ ಅರಸಗ ವನವಾಸ ಯಾಕ ಬಂತೊ॥
॥ ಜೀಜೀ ॥ ಚೌಕ ೨ ॥

ಒಂಬತ್ತ ತಿಂಗಳ ತುಂಬ್ಯಾವ ನವಮಾಸ ಬ್ಯಾನಿ ಎದ್ದಾವ ಚಡತs।
ಕಣ್ಣ ತಾ ತೆರದಾನ ಭಗವಂತs।
ತುರತಾ ತುರತs ಹಡೆದಾಳ ಆಕಿ ಹೆಣ್ಣ ಕೂಸ ಇತ್ತೊ॥ ॥ ಜೀಜೀ ॥
ಗಂಡಸಮಗಾ ಅಂತ ಅರಸಗ ಹೇಳಿದರ ಉಮ್ಮೆದಾರಾ ಬಂತೊ ।
ಉಪಧ್ಯಾನ ಕರಸಿ ಕೇಳ್ಯಾನೋ ಕುಂತೆದಾರ ।
ಕೂಸಿನ ಲಕ್ಷಣ ಗುಣಗಳ ಕೇಳರಿ ಅಂವಾ ಹುಟ್ಯಾನ ಕರ್ತೃ ॥
॥ ಜೀಜೀ ॥

ಹನ್ನೆರಡು ವರುಷ ಕೂಸಿನ ಮಾರಿ ನೋಡಬಾರದೊ ಮತ್ತss।
ಪೀಡಾ ಇದು ತಾಯಿ ತಂದಿ ಸುತ್ತೊs।
ನಾಳೆ ಬರುವುದು ಕಾಳ ಕಂತಕ ಬಿಡಾಕಿಲ್ಲ ತುರತೋ॥ ॥ ಜೀಜೀ ॥
ಗುಪ್ತದಿಂದ ಆ ಕೂಸ ಬೆಳಿಯತಾದ ಕೇಳ ಮಾತಿನ ಚಮತೊ ।
ಕವೇಸೂರಗ ಗೂಡಾರ್ಥಿವಿಟ್ಟಿತೊ ।
ನಗತ ನಗತ ನನ್ನ ಜವಾಬ ಹೇಳ ಮ್ಯಾಲಬಿದ್ದಿತನ ಕಡತೊ ॥
॥ ಜೀಜೀ ॥

ಇಳು ಅರಸರ ಪೀಳಿಗಿ ಬೆಳಯುದೇನ ಅವಸರದಿಂದ ।
ಅವರ ಹಚ್ಚುದು ಹಣಿಮ್ಯಾಗ ಗಂಧಾ ॥ ॥ ಜೀಜೀ ॥
ಕವೇ ಸೂರಗ ಹೇಳತೀನಿ ಚಿತ್ತ ಇಟ್ಟ ಕೇಳರಿ ನಂದ ।
ಅವನ ಹೆಸರ ಗೋಪಿ ಚಂದಾ ॥ ॥ ಜೀಜೀ ॥
ಏರು ಹನ್ನೆರಡು ವರುಷ ಪ್ರಾಯಕ ಬಂದು ಹರೆs ಅಂವಂದು ಚಡತs।
ಹೆಣ್ಣ ರೂಪ ಅಂಬುದೆ ಅಡಗಿತ್ತು ।
ಕೂಡಪಲ್ಲ ಏನ ಕಡಮಿ ಆದಿತೊ ಅರಸಗ ವನವಾಸ ಯಾಕ ಬಂತೊ॥
॥ ಜೀಜೀ ॥ ಚೌಕ ೩ ॥

ಮಗನ ಮಾರಿ ನೋಡಿ ಆ ಅರಸ ಹರುಷವ ಬಿಟ್ಟಿದ್ದಾ ।
ಪರಧಾನೀನ ಕರಸಿ ಹೇಳಿದ್ದಾ ।
ಮಗನ ತಕ್ಕ ಕನ್ಯಾ ನೋಡಿ ಅಂಟಾ ಹಾಕೊ ಲಗ್ನ ಮಾಡೋನಂದಾ॥
॥ ಜೀಜೀ ॥

ಅರಸನ ಮಾತು ಕೇಳಿ ಪರಧಾನಿ ತಯ್ಯಾರಾಗಿದ್ದಾ
ಮೂರಲಕ್ಷ ದಂಡ ಕೂಡಿಸಿದ್ದಾ ।
ಲಕ್ಷಪತಿ ಅರಸನ ಮಗಳ ತಗದು ಲಗ್ಗಿಣ ಮಾಡಿದ್ದಾ॥ ॥ ಜೀಜೀ ॥

ಅರಸ ಪರಧಾನಿ ಲಗ್ಗಣಮಾಡಿ ಕೂತಿದ್ದರೊ ಕುಶಿಲಿಂದಾ ।
ದಂಡ ತಯ್ಯಾರ ಆಗಲೆಂದಾ ।
ಸೊಸೀನ ಕರಕೊಂಡು ನಮ್ಮ ಪಟ್ಟಣಕ ಹೋಗಬೇಕೊ ಇಂದಾ ॥
॥ ಜೀಜೀ ॥

ಹೆಂಗ ಹೆಂಗಸರಿಗೆ ಮದುವಿ ಮಾಡಿದರು ಯಾರಿಗಿ ತಿಳಿಯದಾ ।
ಗೋಪಿ ಚಂದಾ ತಾ ಗಾಬರ್‍ಯಾದಾ ।
ನಾನು ಹೆಣ್ಣ ಆಕೀನೂ ಹೆಣ್ಣ ಮುಂದ ಹ್ಯಾಂದ ಮಾಡಲೆಂದಾ ॥
॥ ಜೀಜೀ ॥

ಇಳು ಗೋಪಿ ಚಂದsಗ ಬಾಳ ಬಂದೀತ ದುಃಖ
ಹಡದವ್ವ ತಂದಿಟ್ಟ ಜೀವಕಾ ॥ ॥ ಜೀಜೀ ॥
ದಂಡೆಲ್ಲ ಬಿಟ್ಟು ಗೋಪಿಚೆಂದ ನಡದ ವನವಾಸಕಾ ।
ಹೋಗಿ ಬಿದ್ದ ಕೆಟ್ಟ ಅರಣ್ಯಾsಕs ॥ ॥ ಜೀಜೀ ॥
ಬಂಗಾಲಿ ದೇಶದ ಋಷಿ ಕುಳಿತಿದ್ದಾನೊ ತಪಕ ।
ಅವನ ಹಂತೇಲಿದ್ದ ಸೇವಕs ॥ ॥ ಜೀಜೀ ॥
ದೂರದಿಂದ ಗೋಪಿಚಂದ ಓಡಿಹ್ವಾದ ಆ ಮಠಕs ।
ಹೋಗಿ ಬಿದ್ದ ಋಷಿಯ ಪಾದsಕss ॥ ॥ ಜೀಜೀ ॥

ಏರು ಕೈ ಹಿಡಿದು ಆ ಋಷಿ ಎಬ್ಬಿಸ್ತಾನ ಮಾತನಾಡೊ ಕುಂತು ।
ಗೋಪಿ ಚಂದ ಏನ ವ್ಯಾಳೆ ಬಂತೊ ।

ಕೂಡಪಲ್ಲ ಏನ ಕಡೆಮಿ ಆದಿತೊ ಅರಸಗs ವನವಾಸ ಯಾಕ ಬಂತೋ ॥
॥ ಜೀಜೀ ॥ ಚೌಕ ೪ ॥

ತಾಯಿ ಮಾಡಿದ ಕೌತುಕ ಹೇಳಿ ಅಳತಾನ ಸೆರಿ ಸೂರಿ
ಋಷಿ ಕೇಳಿ ಆದಾನೊ ಗಾಬರಿ
ನಾ ಹೆಣ್ಣ ನನಗ ಹೇನ್ತೀನ ಮಾಡ್ಯಾರ ಏನ ಕೇಳ್ತೀರಿ ॥ ॥ ಜೀಜೀ ॥
ಋಷಿ ಆ ಅರಸಗ ವಚನ ಕೊಟ್ಟ ಆಗಬ್ಯಾಡ ಗಾಬರಿ ।
ನಿಮ್ಮ ಚರ್ಮ ನಮsಗ ಕೊಡರಿ ।
ನಮ್ಮ ಶರೀರ ಕೊಡತೀವಿ ನಿಮಗ ತಗೊಂಡು ಹೋಗರಿss ॥
॥ ಜೀಜೀ ॥

ಇಳು ಋಷಿ ಆಗ್ಯಾನ ಕೇಳರಿ ಪದ್ಮ ಜಾತದ ಹೆಣ್ಣಾ
ಅವನ ಮ್ಯಾಗ ಶಿಷ್ಯ ಇಟ್ಟ ಕಣ್ಣಾ ॥ ॥ ಜೀಜೀ ॥
ಗುರು ಶಿಷ್ಯರೊಳಗ ನಡದೀತ ಕೇಳ ಗೆಳೆತಾನಾ ।
ಬಸರಾಗಿ ಹಡದಾನ ಅಂತಾ ಹೆಣ್ಣಾ ॥ ॥ ಜೀಜೀ ॥
ಗೋಪಿ ಚಂದನ ಹೆಂಡತಿ ಹಡದಾಳ ಗಂಡಸ ಮಗನ ।
ಚಿತ್ತಟ್ಟು ಕೇಳರಿ ಜನಾ ॥ ॥ ಜೀಜೀ ॥

ಏರು ಕವಿ ಮಡಿವಾಳ ಇರುವುದು ಮುಳಸಾವಳಗಿ ಠಿಕಾಣಾ ।
ಅವರು ಕವಿಗಳು ಅಮೃತ ಪಾನಾ । ॥ ಜೀಜೀ ॥

ಕೂಡಪಲ್ಲ ಸ್ವಂತ ಸಭಾದಾಗ ನಿಂತ ಪಿತಾಂಬರಾ ಹಾಡಿದ ನಗುನಗುತಾನ ।
ವೈರಿನ ಕೇಳ್ಯಾನ ತುರತೊ ।
ಏನ ಕಡಿದು ಆದಿತೊ ಅರಸಗ ಯ್ಯಾಕ ಬಂತೊ ವನವಾಸಾ ॥
॥ ಜೀಜೀ ॥ ಚೌಕ ೫ ॥

ಕರ್ನಾಟಕ ದೇಶದ ಹೆಣ್ಣ ಕಾಡಿಗಣ್ಣ ನಡಾ ಸಣ್ಣ

ಜೋಕ ಹೊಡದದ ಹೊಂಟೆ ನೀನು ರಸ್ತೀಲಿ ।
ನಿನ ಮ್ಯಾಲ ಮನಸೋತ ಬಂದೆ ಪ್ರೀತೀಲಿ ।
ನನಗೂಡ ಮಾತನಾಡ ಬಂದ ಸಿಶ್ತೀಲಿ ।
ಡೌಲ ನೋಡಿ ಖ್ಯಾಲಾಯಿತ ಮೌಲ ಕೊಡತಿನಿ
ಜಾನಿ ಬೇಗನೆ ಬಾರಽ ನಮ್ಮ ಹಂತೀಲಿ ॥ ॥ ಜೀಜೀ ॥

ಹಸರ ಸೀರಿ ಹವಳ ಗೆರಿ ನಾಮಧಾರಿ ಕುಂಕುಮಗೆರಿ ।
ನಿಲಗಿ ಒದುತಿದಿ ಕರಿ ಸೀರೀಲಿ ।
ನಾ ಬಂದ ನಿಂತೀನಿ ನೀ ಬರುವ ದಾರೀಲಿ ।
ಮೌನಬ್ಯಾಡ ಮುನಿಸಬ್ಯಾಡ ನನಗೂಡ ಮಾತನಾಡ
ಇಲ್ಲದಿದ್ದರ ಒಯ್ಯತೀನಿ ಜೋರೀಲಿ ॥ ॥ ಜೀಜೀ ॥

ಗೆಜ್ಜಿ ಟಿಕ್ಕೆ ವಜ್ರ ಟಿಕ್ಕೆ ಶಿಬಿಕಿ ಟಿಕ್ಕೆ ನೀ ಕಟ್ಟೆ
ತರಿಸಿ ಕೊಡತೀನಿ ಈ ಕ್ಷಣದಲಿ ।
ಇಷ್ಟು ಉಮೆದಾರ ಅದಽ ನನ್ನ ಮನದಲಿ ।
ನಾ ಸುಳ್ಳ ಹೇಳುದಿಲ್ಲ ಈ ಸಭಾದಲ್ಲಿ ।
ನನ್ನ ಆಣಿ ನಿನ್ನ ಆಣಿ ದೇವರಾಣಿ ದಿಂಡರಾಣಿ
ಪ್ರಾಣ ಹೋಗತದ ನಿನ್ನ ವ್ಯಸನದಲ್ಲಿ ॥ ॥ ಜೀಜೀ ॥

ಇಳು ಮತ್ತೇನ ಬೇಡತಿ ಬೇಡ ।
ಮಾಡಬೇಡ ತಡಾ ।
ಇರು ನನ್ನ ಜೋಡಾ
ತಿಳದ ನೋಡ ನನ್ನ ಕಾಂತಿ ॥ ॥ ಜೀಜೀ ॥

ತುಂಬಿದಂಗ ಸಮುದರದ ಮಡಾ
ಇಲ್ಲ ಅರಗೊಡಾ ।
ಮನ್ಯಾಗೈತಿ ಈಡಾ
ತೀರಸ ನನ್ನ ಭ್ರಾಂತಿ ॥ ॥ ಜೀಜೀ ॥

ಚಿತ್ತಿಟ್ಟ ಕೇಳ ನನ್ನ ಮಾತ
ಇರಲಿ ನಿನ ಮಮತಾ
ಬೇಡಿಕೊಳ್ಳುವೆನು ನಿಂತಾ
ಇದಕ ಏನಂತಿ ॥ ॥ ಜೀಜೀ ॥

ಏರು ರಮಣಿ ನಿನ ಕುಚಗಳು ಬೆಟಲಿಂಬಕಾಯಿಯಂಗ
ಒತ್ತಿಹಿಡದ ನೋಡಲೇನ ಹಸ್ತೀಲಿ ।
ನನ್ನ ಭ್ರಾಂತಿ ಬಿಡಿಸಬೇಕ ನೀನು ಶಿಸ್ತೀಲಿ
ಕೂಡಪಲ್ಲ ಡೌಲ ನೋಡಿ ಖ್ಯಾಲ ಆಯಿತ ಮೌಲ ಕೊಡತೀನಿ ಜಾಣಿ
ಬೇಗನೆ ಬಾರಽ ನನ ಹಂತೀಲಿ ॥ ॥ ಜೀಜೀ ॥ ಚೌಕ ೧ ॥

ಯಾಕೋ ಎಣ್ಣಾ ನನ್ನ ಮ್ಯಾಲ ಕಣ್ಣಾ
ಹೇಳತೀನಿ ಕೇಳೋ ಜಾಣಾ
ಕಪಾಳ ಮ್ಯಾಲ ಹೊಡದಿನಿ ಸರಸಿ
ನಮ್ಮಪ್ಪಾ ಅಣ್ಣ ತಮ್ಮದೇರ ಕರೆಸಿ
ನಿನಗ ಸಣ್ಣಾಗಿ ಕುಟ್ಟಸೇನ ನುರಸಿ
ಗಂಡಭಾವ ಮೈದುನ ಕೆಟ್ಟವರ ಹಾರೊ ಕೇಳೊ ಎಣ್ಣಾ ।
ಹೇಳಿದರ ಬಿಡತಾರ ಒರಸಿ ॥ ॥ ಜೀಜೀ ॥

ಮನಸ್ಯಾ ನೀನು ಬಾಳಕೆಟ್ಟ ಆಡತಿದಿ ಹಲಕಟ್ಟ
ಹೇಳತಿನಿ ನಾ ಸೊಟ್ಟ ।
ಕಡಿಽಕಾಲಕ ಬಿಡತಿನಿ ಹುಗಸಿ ।
ನಿನ್ನ ಒಯ್ಯಲಾಕ ಸಿಗುದಿಲ್ಲ ಅಗಸಿ ।
ನಿನ್ನ ಹೆಸರಂಬುದು ನಾ ಮುಡಿಸಿ
ಕುಂಬಕರ್ಣ ರಾವಣ ಹೆಣ್ಣಿಗಾಗಿ ಸತ್ತರಣ್ಣಾ
ಕೇಳ ಬೇಕೊ ರಾಮಾಯಣ ತಗಸಿ ॥ ॥ ಜೀಜೀ ॥

ಮನಿಯಾಗ ಹಾಳ ಮಡದಿ ಆಕಿ ಗೂಡಾ ಆಡ ಹುಡಗಾಟ ।
ನಾಲ್ಕ ಮಂದಿ ಮಕ್ಕಳ ಹಡದಿ
ಸಾವುಕಾಲಕ ಹಾಕತಾರ ಕುಂದ್ರಿಸಿ ।
ನನಗ್ಯಾತಕ ಕೇಳತಿದಿ ಅಡ್ರಾಸಿ ।
ನಿನ್ನ ತೆಲಿ ತೆಲಿ ಕಟಸೇನ ಪರದೇಸಿ
ಪರಸ್ತ್ರೀಯರ ನೋಡುದು ದಾರಿ ತರಬಿ ಕೇಳುದು
ತರವಲ್ಲ ಈ ಬುದ್ಧಿ ಸನ್ನೇಸಿ ॥ ॥ ಜೀಜೀ ॥
ಇಳು ಹೆಣ್ಣಿನ ಮ್ಯಾಲ ಮನಸಿಟ್ಟ
ಆಗ್ಯಾನ ಕಷ್ಟ ಎಷ್ಟ
ಚಂದ್ರಾಮ ಕನಿಷ್ಟ । ನೋಡ ಚಾತೂರಾ ॥ ॥ ಜೀಜೀ ॥

ಗೌತುಮ ಋಷಿ ಅಂಬಾವ ಇದ್ದ
ಹೆಣ್ಣಿಗಾಗಿ ಜೀವಕೊಟ್ಟ ಶಾಹೀರಾ ॥ ॥ ಜೀಜೀ ॥
ಏರು ಇಂತಿಂತವರು ಹೆಣ್ಣಿಗಾಗಿ ಹೋಗ್ಯಾರ–ಮಣ್ಣಿಗಿ ।
ತಿಳದ ನೋಡೊ ಚನ್ನಾಗಿ ಮನಸಿನಲ್ಲಿ

ನೀ ಇರಬಾರದು ಪರಸ್ತ್ರೀಯರ ದ್ಯಾಸಿನಲ್ಲಿ
ನಿನಗ ಮುಕ್ತಿಮಾರ್ಗ ಸಿಗುದಿಲ್ಲ ಸ್ವರ್ಗದಲ್ಲಿ
ಕೂಡಪಲ್ಲ ಡೌಲ ನೋಡಿ ಖ್ಯಾಲ ಆತ ಮೌಲ ಕೊಡತಿದ್ದ ಜಾಣಿ
ಬೇಗನೆ ಬಾರಽ ನನ ಹಂತೀಲಿ ॥ ॥ ಜೀಜೀ ॥ ಚೌಕ ೨ ॥

ನಾರಿ ಆಡಿದ ಮಾತ ಕೇಳಿ ಮನಸ್ಯಾಗ ಬತ ತಿಳಿ
ಬಂದನಂವಾ ಹೊಡಮಳ್ಳಿ ತಿರಽಗಿ ।
ತಪ್ಪಾಯಿತಂತ ಬಿದ್ದ ಪಾದಕ ಎರಗಿ ।
ನಾ ಮಾರಿ ತೋರಿಸುದಿಲ್ಲ ಯಾರ ಯಾರೀಗಿ ।
ಏಕಧಾರಿ ಹಿಡಕೊಂಡ ಮೆಯೆಲ್ಲಾ ಬೂದಿ ಬಡಕೊಂಡು
ಬೇಡಿಕೋತ ಹೊಯಿತ ಊರೂರಿಗಿ ॥ ॥ ಜೀಜೀ ॥

ಇಷ್ಟಾದರು ನಾಚಿಕಿಲ್ಲಾ ಮನಸ ಇಡತಾರ ಹೆಣ್ಣಿನ ಮ್ಯಾಲ
ಹೇಳತಿನಿ ಇವರ ಕೀಲ ।
ಕರಸಬೇಕ ಹರದಾಸಿ ಮಂದೀಗಿ ।
ನಿತ್ಯ ಪೂಜೆ ಮಾಡಬೇಕೊ ತಾಯಿ ತಂದೀಗಿ ।
ಎರಡು ಜೋಡಾವ ನೋಡ ಸಂದಿ ಸಂದೀಗಿ ।
ತಿಳಿಲಾರದ ಮಂದಿ ಇವರು ಇವರ ಬಲ್ಲಿ ಇಲ್ಲ ಅಬರು
ಬೀಳತಾರ ಸುಳ್ಳ ಸುಳಗೊಂದೀಗಿ ॥ ॥ ಜೀಜೀ ॥

ಇಳು ಮುಳಸಾವಳಗಿ ನಗರ ಜಾಹೀರಾ ।
ದೇಶಕ ಹೆಸರಾ
ನೆನದಾನ ಪೀರ ಹುಣಚಿ ಬನದಾಗ ॥ ॥ ಜೀಜೀ ॥

ಗಂಗಾ ಭಾಗೀರಥಿ ಅವನ ಮುಂದ ।
ಹರಿಯತಾಳ ಚಂದ ।
ಬಾಳ ಆನಂದ । ಸಾರುವೆ ಸಭಾದಾಗ ॥ ॥ ಜೀಜೀ ॥

ಅಜ್ಞಾನಿ ಮಡಿವಾಳ ಸಣ್ಣಾಂವ ।
ಇರಲಿ ಪ್ರೇಮ ಭಾವ ।
ಪದಾ ಮಾಡಾಂವ ತಿಳಿರಿ ಮನದಾಗ ॥ ॥ ಜೀಜೀ ॥

ಏರು ಹರದೇಸಿ ಮಂದಿಯೆಲ್ಲಾ ಗುಂಗ ಹೊಡದ ಕುಂತಾರಲ್ಲಾ ।
ಬಾಣ ಹೊಡದಂಗಾದಿತಲ್ಲ ಎದಿಯಲ್ಲಿ ।
ಇವರು ಪುರಮಾಸಿ ಬಂದ ಸಿಕ್ಕಾರ ಕೈಯಲ್ಲಿ
ತಂದೆ ಬಸವೇಶ್ವರನ ದಯಾ ಆದ ನನ್ನ ಮ್ಯಾಲಿ ।
ಕೂಡಪಲ್ಲ ಡೌಲ ನೋಡಿ ಖ್ಯಾಲ ಆತ ಮೌಲ ಕೊಡತಿನಿ ಜಾಣಿ
ಬೇಗನೆ ಬಾರಽ ನನ ಹಂತೇಲಿ ॥ ॥ ಜೀಜೀ ॥ ಚೌಕ ೩ ॥

ಹೆಣ್ಣ ಬಾಲಿ ಸಣ್ಣಕಿ

ಏರು
ಹತ್ತು ಮಂದಿ ಗೆಳತ್ಯಾರೊಳಗ ಮುತ್ತಿನಂತಾ ಕಾಂತಿ ಈಕಿ
ಕೈ ಬೀಸಿ ನಡದಾಳಣ್ಣಾ ದಿಡsಗ್ ।
ಪಿಲ್ಲೆ ಕಾಲಾಗಿಟ್ಟಾಳಣ್ಣಾ ಕಾಲ ಕಡsಗ್ ।
ಈಕಿ ನೌಕ ನೋಡಿ ಬಂತ ನನಗ ನಡsಗ್ ।
ಯಾವೂರಾಕಿ ಯಾತರಕಿ ಹೆಣ್ಣ ಬಾಲಿ ಸಣ್ಣಕಿ
ಗೊತ್ತ ಹತ್ತಲಿಲ್ಲೊ ಈಕಿ ಬೆಡsಗ್ ॥ ॥ ಜೀಜೀ ॥ ಪಲ್ಲ ॥

ಪುಂಡಿ ಬೀಜಿನ ಕುಬಸಾ ತೊಟ್ಟು ದಂಡಿ ಕಟ್ಟಿನಡದರ ಒಳೆ
ಮುಂಡಿ ಮ್ಯಾಗ ಮಲ್ಲಿಗ್ಹೂವ ಮುಡದಂಗ ।
ಈಕಿ ರೂಪ ನೋಡಿ ಹಾಲ ತುಪ್ಪ ಕುಡದಂಗ ।
ಸಿಟ್ಟಿಲೆ ನೋಡಿ ನಾರಿ ಸಿಡದಂಗ ।
ನಾ ಬಡಕೋತಿನಿ ಬಾಡಿಗಿ ಎತ್ತ ದುಡದಂಗ ।
ಬರತಾಳಿಲ್ಲೊ ಹ್ಯಾಂಗ ಮಾಡಲಿ ಬರೋಸ ನನಗ ಹತ್ತವಲ್ದು
ಯಾಕೋs ನನಗ ಆಗೇದ ಎದಿ ಒಡದಂಗ ॥ ॥ ಜೀಜೀ ॥

ಬಾಳಿ ಪಟ್ಟಿ ಸೀರಿಯನುಟ್ಟು ಬಾರ ಮಾಡಿ ಹೊಂಟರ ಒಳೆ
ಬಾಜಾರದಾಗ ಪಟ್ಟದಾನಿ ನಡದಂಗ
ಚಲೋ ಊಚ ಕುದುರಿ ಲಗು ದಾರಿ ಹಿಡದಂಗ ।
ಏನ ಅಂವಸರ ಹೋಗ್ತಾಳ ಗುಂಡ ಬಡದಂಗ ।
ಕಿಲಿ ಕಿಲಿ ಮಾತನ್ನೇಳಿ ಕುಲು ಕುಲು ನಕ್ಕರ
ದನಿ ನಾಗಸ್ವರ ತಾಸೆ ಬಡದಂಗ ॥ ॥ ಜೀಜೀ ॥

ಕಾಲಬಟ್ಟ ಕೈಬೀಸಿ ಕಾಲುಂಗರಿಟ್ಟು ನಡದರ
ಸಪ್ಪಳಾತೊ ತಾಳ ಗತ್ತ ಕಟದಂಗ ।
ಈಕಿ ದೇಹದೊಳಗ ಚೊಕ್ಕ ಬಂಗಾರ ಜಡದಂಗ ।
ಮೈ ನಾರತದ ಮಲ್ಲಿಗ್ಹೂವಿನ ಗಿಡದಂಗ ।
ರಂಬಿಗಿ ಹರೆ ಬಂದಿತಪ್ಪಾ ತುಂಬಿದ ಕೊಡದಂಗ ।
ಮಗ್ಗಿ ಚಂಡಿನಂತಾ ಮಲಿ ಮೇನಾರಿದ ಹೆಣ್ಣ ಬಾಲಿ
ಕಾಣುದಿಲ್ಲೊ ಇನ್ನs ಮಾತ್ರ ಹಡದಂಗ ॥ ॥ ಜೀಜೀ ॥

ಇಳು
ಈಕಿ ರೂಪ ನೋಡ ಚಿತ್ರದಾಗ ಬರದಂಗ ।
ಬಾಲಿಗಿ ಬಣ್ಣ ಬಂತೊ ಕೆಂಪ ಮೂಡಲ ಹರದಂಗ ॥ ॥ ಜೀಜೀ ॥

ಲಗು = ತೀವ್ರ, ಅವಸರ
ಅಂವಸರ = ವೇಗ
ಮೇನರು = ಹೆಣ್ಣು ಮಗಳು ದೊಡ್ಡವಳಾಗುವ ಸಂದರ್ಭ
ಊಚ = ಒಳ್ಳೆಜಾತಿ, ನಾರತದ = ವಾಸನೆ

	ಮಾತನಾಡಿದರೆ ಊಚ ಮುತ್ತ ಸುರದಂಗ ।	
	ನಾ ನಿಂತೆ ಹಾಳಬಾವಿ ತೆರದಂಗ ॥	॥ ಜೀಜೀ ॥
ಏರು	ಹ್ಯಾಂಗಾದರᔕ ಬಂದಾಳೀಕಿ ಹೋಗಿ ಹಾಯಲೇನ ತೆಕ್ಕಿಗಿ	
	ಹಕ್ಕಿ ಮ್ಯಾಲ ಎರಗಿದಂಗ ಗಿಡᔕಗ್ ।	
	ಪಿಲ್ಲೆ ಕಾಲಾಗಿಟ್ಟಾಳಣ್ಣಾ ಕಾಲ ಖಡᔕಗ್ ।	
	ಈಕಿ ನೌಕ ನೋಡಿ ಬಂತೊ ನನಗ ನಡᔕಗ್ ।	
ಕೂಡಪಲ್ಲ	ಯವ್ವೂರಾಕಿ ಯಾತರಾಕಿ ಹೆಣ್ಣ ಬಾಲಿ ಸಣ್ಣಕ್ಕಿ ।	
	ಗೊತ್ತ ಹತ್ತಲಿಲ್ಲೊ ಈಕಿ ಬೆಡᔕಗ್ ॥	॥ ಜೀಜೀ ॥ ಚೌಕ ೧ ॥
ಏರ	ಅತ್ತಿ ಮನಿಗಿ ಸೊಸದೇರಗಿ ತೊತ್ತಿನ ಮೃಗಾ ಬಂದಕೇರಿ ।	
	ಗೊತ್ತ ಕೆಳತಿದಿಯೊ ನಮ್ಮ ಹಟᔕಕ ।	
	ನನ್ನ ಸುತ್ತ ಮಂದಿ ಹಾರ ಬಾಳ ಕೀಟಕ ।	
	ನಿನ್ನ ಒಯ್ದು ಬಿಗಸ್ಯಾರೋ ಪೋಲಿಸ ಗ್ಯಾಟಕᔕ।	
	ಬಿಗಸಿ ಬೆನ್ನಮ್ಯಾಲ ಬಡದಾರೊ ಪಟᔕಕಿ	
	ಬಾದ್ದೂರ ಹಾನ ಸ್ವಾದರ ಮಾವ ಹಾದರ ಕೇಳಿದರ	
	ನಿನ್ನ ಕಡದ ಒಗದಾನ ಒಂದೇ ಏಟಕ ॥	॥ ಜೀಜೀ ॥
	ಭಾವ ಮೈದುನದಾರ ಕೇಳಿ ಸೀಳಿ ನನ್ನ ಒಗದಾರೊ	
	ಗಂಗಿ ನೀರ ಕುಡದಾರೊ ಗುಟᔕ ಕಾ ।	
	ಹೇಳ ಕೇಳದೆ ಜೀಂವಾ ಬಿಟ್ಟ ಪಟᔕಕ ।	
	ಟಬ್ಬಿನᔕಗಾ ಟುಬಾಕಿ ಹಾರಿಸಿ ಹಲಗಿ ಬಡಿಸಿ ಕಾಳಿಹಿಡಿಸಿ	
	ಒಯ್ದು ಹುಗಳ್ಯಾರ ಹಾಳ ತ್ವಾಟಕ ॥	॥ ಜೀಜೀ ॥
	ಮಾನಗೇಡಿ ಮನಸ್ಯಾ ನೀನು ಮಾತು ಕೇಳು ರೀತಿಗೇಡಿ	
	ನೀರ ಹಾಕವರಿಲ್ಲ ಒಂದ ಗುಟᔕಕ ।	
	ಎಪ್ಪಾ ಮಾತನಾಡಬಿದ್ದಿಯೊ ಪೇರ ಪಟᔕಕ ।	
	ನನ್ನ ಜೀಂವಕ ಹತ್ತಿತ್ತ ನೋಡಪಾ ಚುಟುಕ ।	
	ಸರದ ನಿಂದ್ರು ಸ್ಮರಣಾಗೇ ಹ್ಯಾಂಗ ಕಾಣಸ್ತಾದ ನಿನಗ ।	
	ಕರೀತಿದಿ ನನಗ ಕಾಮನಾಟಕ ॥	॥ ಜೀಜೀ ॥
ಇಳು	ಯಾಕೋ ಯಾಂಸಿ ದಿಗಡಿ ಆಡತಿದಿ ಮೆಲ್ಲᔕಕ ।	
	ನಿನ್ನ ಕಿಂವಿ ಕಿತ್ತಿ ಬಡದಾರೊ ನೆಲಕ ॥	॥ ಜೀಜೀ ॥
	ಈಗಿನ ಸರಕಾರ ಕಾಯ್ದೆ ಆದೊ ಕೆಟ್ಟಕಾಲಕ	
	ನಿನಗ ಒಯ್ದು ಹಾಕಿಸಿ ಬಿಟ್ಟಾರೊ ಶೂಲᔕಕ ॥	॥ ಜೀಜೀ ॥

ಬಂದಕೇರಿ = ಬಂದಮೇಲೆ
ಹಾನ = ಇದ್ದಾನೆ
ದಿಗಡಿ =
ಹಾರ = ಅದಾರ
ಸ್ವಾದರಮಾವ = ತಾಯಿತ ತಮ್ಮ
ಬಿಗಸ್ಯಾರೊ = ಕಟ್ಟಿಹಾಕು
ಕೇಟಕ = ಕಿರಿ ಕಿರಿ
ಪೆದ = ಪರತ, ಬೇರೆ
ನಿಂದ್ರು = ನಿಲ್ಲು

ಏರು ಸತ್ತ ಸ್ವರ್ಗಕ ಹೋಗುತನಕಾ ಬಾಳ ಅಂಜಿ ನಡಿಬೇಕು ।
ನೀರ ಮ್ಯಾಲ ನಡದಂಗ ಹಡsಗ್ ।
ಪಿಲ್ಲೆ ಕಾಲಾಗಿಟ್ಟಾಳಣ್ಣಾ ಕಾಲ ಕಡಗ
ಈಕಿ ನೌಕ ನೋಡಿ ಬಂತ ನನಗ ನಡಗ ।
ಹಂಗೆ ಬೆನ್ನ ಹತ್ತಿ ಹ್ವಾದ್ನಿ ನಾ ಹುಡುಗಾ ।

ಕೂಡಪಲ್ಲ ಯಾವೂರಾಕಿ ಯಾತರಾಕಿ ಹೆಣ್ಣ ಬಾಲಿ ಸಣ್ಣಕಿ
ಗೊತ್ತ ಹತ್ತಲಿಲ್ಲ ಈಕಿ ಬೆಡsಗ್ ॥ ॥ ಜೀಜೀ ॥ ಚೌಕ ೨ ॥

ಏರು ನಿಮ್ಮ ಮಾವ ಸುಂಬಳ ಬುರುಕ ಬುನಾದಿ ಕೌದಿ ಹರಕ
ಅವನ ಜಲ್ಮ ಹೊಯ್ತು ಹಳಿ ಕೋರ್‍ಯಾಗ ।
ನಿಮ್ಮ ಅತ್ತಿ ಕೂರಿ ವರಿತಾಳ ಉಟ್ಟ ಸೀರ್‍ಯಾಗ ।
ತಟಕ ಎಣ್ಣಿ ಕಾಣೆ ತಂಗಳ ಮುರಿವಾಗ ।
ಬಾಳ ಬಡತನಂತಾ ಹೇಳತಿದಿ ನಿಮ್ಮ ಹಿರಿಯಾಗ ।
ಭಾವಮೈದುನದೇರ ಸುದ್ದಿ ಬಾಳ ಹೇಳತಿದಿ ನಾರಿ
ಒಯ್ದ ಹಾಕಲೇನ ಹಾಳ ಗಾರ್‍ಯಾಗ ॥ ॥ ಜೀಜೀ ॥

ಹಾದರೆಂಬುದು ಎಂಥಾ ರುಚಿ ತಿಳದ ನೋಡ ನೀ ಹುಚ್ಚಿ
ಹಾಲಿನೊಳಗನ ಸೆಂವಿ ಇದ್ದ ಕೆನಿಯಾಗ ।
ಸುವಾಸಿನಿ ತಗೊ ಕ್ಯಾದಿಗಿ ತೆನಿಯಾಗ ।
ಬೇಗ ಪಾರಿಕತ್ತ ಬೇಡ ನಿಮ್ಮ ಧನಿಯಾಗ ।
ನಾವು ನೀವು ಕೂಡಿದರ ಹವಳ ಮುತ್ತ ಸುರದಂಗ ।
ಸಿಂಪಿ ಒಳಗ ಬಿದ್ದ ಸಾತಿ ಹನಿಯಂಗ॥ ॥ ಜೀಜೀ ॥

ಇಳು ಆಕಿನ ಕರದ ಹೇಳತಾನ ಹಾಳ ಗ್ವಾಡ್ಯಾಗ ।
ಒಂದ ಗಂಡ ದೆವ್ವ ಬಡದೀತ ಆ ಬಾಡ್ಯಾಗ ॥ ॥ ಜೀಜೀ ॥

ಅಲ್ಲೇ ಸತ್ತ ಬಿದ್ದ ಹಾಳ ಮಣ್ಣ ಹೂಡ್ಯಾಗ ।
ಎಳದೊಗದ ಬಂದರು ಕಲ್ಲ ಮುಳ್ಳಾ ಪಡ್ಯಾಗ ॥ ॥ ಜೀಜೀ ॥

ಏರು ಇಂಗಳಗಿ ಗ್ರಾಮದೊಳಗ ಇಬ್ರಾಹಿಮಾ ವಸ್ತಾದರ ಪದ ಹಿಡಿಯೊ
ನೀ ಹುಡಕsಗಾ ।
ಪಿಲ್ಲೆ ಕಾಲಾಗಿಟ್ಟಾಳಣ್ಣಾ ಕಾಲ ಖಡsಗ ಈಕಿನ ನೋಡಿ ಬಂತೊ
ನನಗ ನಡಗ ।

ಕೂಡಪಲ್ಲ ಯಾವೂರಾಕಿ ಯ್ಯಾತರಾಕಿ ಹೆಣ್ಣ ಬಾಲಿ ಸಣ್ಣಕ್ಕಿ ಗೊತ್ತ ಹತ್ತಲಿಲ್ಲೊನ
ಈಕಿ ಬೆಡsಗ್ ॥ ॥ ಜೀಜೀ ॥ ಚೌಕ ೩ ॥

ಕೋರ್‍ಯಾಗ = ಕಂಬಳಿ
ಕೂರಿ = ಮೈಯೊಳಗೆ ನಿರ್ಮಾಣವಾಗುವ ಕೀಟಕ

ಆರ ಗುಣಾ ತಿಳಿದಂತಾ ಶಕ್ತಿ

॥ ಶಕ್ತಿ ಪದಾ ॥

ಪತಿವ್ರತ ಸೀತಾದೇವಿಗಿ ನಿಂದೆ ಆಡುದ ಧರ್ಮವೇನೊ ।
ನಾ ನಿನ್ನ ಸತಿ ಅಲ್ಲೇನೊ ।
ಆರು ಗುಣಾ ಅಳಿದಂತಾ ಶಕ್ತಿಗೆ ಮಾನ ಕಳಿತಿದಿಯೇನೊ ॥
॥ ಜೀಜೀ ॥ ಪಲ್ಲ ॥

ಮದಲ ನಿಮ್ಮ ತಂದಿ ಕೂನ ಎಲ್ಲಿತ್ತೊ ಬಯಲಿಗಿ ಬಯಲೆ ಎಲ್ಲಾನೊ ।
ಸುಮ್ಮನೆ ಬೊಗಳಾಂವ ಮೂರ್ಖನೊ
ನಮ್ಮ ತಾಯಿದಿಂದ ಬಂದು ಆಕಾರ ಮೂಡಿದ ಮೇಲೆ ಹಿಡದಿ
ನಿಮ್ಮ ತಂದಿ ಕೂನೊ ॥ ॥ ಜೀಜೀ ॥

ಇಳು ಬಲ್ಲಂತ ಹಿರಿಯರು ನೆರದ ಕುಂತಾರ ಗರ್ದಿಭಾರ ।
ನಮ್ಮ ನಿಮ್ಮ ಇಬ್ಬರ ನ್ಯಾಯ ಮಾಡುವ ಪಂಡಿತರ ।
ರಾಮಾಯಣ ಮಹಾಭಾರತ ಓದಿ ನೋಡರಿ ಎಲ್ಲಾರು
ನೀ ಬಾರೊ ನನ್ನ ಇದರ ।
ಸುಳ್ಳ ಮಾಡಬೇಕೋ ಶಾಸ್ತರಾ ।
ನಿನಗಂತೀನಿ ಕವೇ ಶೂರಾ ।
ಡಂಬಚಾರಕ ನುಡಿದರ ಅಲ್ಲ ನೀ ತಂದಿ ಕುವರಾ ॥ ॥ ಜೀಜೀ ॥

ತಾಯಿ ಮಲಿಯ ಹಾಲ ಕುಡಿದು ಎಲ್ಲಾರಾಗ್ಯಾರ ದೊಡ್ಡವರಾ ।
ನನ್ನ ಕಡೆ ತಪ್ಪ ಇದ್ದರ ಹೇಳರಿ ಹಿರಿಯರಾ ।
ನಾ ಹೆಂಗಸ ಮೊದಲೆ ಉಡದಾರ ಇಲ್ಲದ ಮುಡದಾರ ।
ದೈವಕ ಮಾಡುವೆ ನಮಸ್ಕಾರ ।
ನನಗ ಆಸರಿಲ್ಲ ಯಾರ್‍ಯಾರ ।
ರಂಬಿಸಿ ತಂದು ಕುತಗಿ ಕೊಯ್ದಿರೊ ತಾಯಗಂಡರಾ ॥ ॥ ಜೀಜೀ ॥

ಏರು ಭೂಮಿ ಹಸರ ಆದಮ್ಯಾಲ ಮೊಲಾ ಅಂತದೊ ಇನ್ನ ಅಂಜಿಕಿ
ಯಾರದೇನೊ ।
ನನ್ನ ಜಲ್ಮಕ ನಾ ಶ್ರೇಷ್ಠನೊ
ಕೂಡಪಲ್ಲ ಆರ ಗುಣಾ ಅಳಿದಂತಾ ಶಕ್ತಿಗೆ ಮಾನ ಕಳಿತಿದಿಯೇನೊ ॥
॥ ಜೀಜೀ ॥ ಚೌಕ ೧ ॥

ಮತ್ತ ಇವನ ಆರಾಬಾರ ಹಿಡದದ್ದು ತಿಳಿಸಿ ಹೇಳುವೆ ದೈವಕ ।
ನ್ಯಾಯ ಮಾಡಬೇಕರಿ ಮಾನಕ ।
ಆರು ಮಂದಿ ಇವನ ಗೋಣ ಮುರಿಯತಿದ್ದರು ಮುಚ್ಚಿಕೊಂಡೆ
ಹಂತ್ಯಾಕ ॥ ॥ ಜೀಜೀ ॥

ಎಂಟು ಮಂದಿ ಹಲ್ಲು ತಿಂತಿದ್ದರು ಇವನ ಮ್ಯಾಲ ಯಾವಾಗ
ಹಾಕೂನು ಶೂಲಕ।
ಇಂಥ ಕೆಟ್ಟ ಪಾಮರ ದೇಹಕ ।
ಹದಿನೆಂಟ ಮಂದಿ ಬ್ಯಾರೆ ಇದ್ದರೊ ಮುಸಕಿಕಟ್ಟಿ ಒಯ್ಯಲಾಕ ॥ ಜೀಜೀ ॥

ಇಷ್ಟು ಮಂಕಾಗೆ ಶೋಧಿಸಿ ನಾನು ಕಳವಿದೇನೊ ಹಿಂದಕ
ಪತಿ ಬೇಕಂತ ನನ್ನ ಜಲ್ಮಾಕ ।
ಬೇಕಾದಷ್ಟು ನಾ ಕಷ್ಟಪಟ್ಟರೆ ಆಗಲಿಲ್ಲ ಸಾರ್ಥಕ॥ ॥ ಜೀಜೀ ॥

ಇಳು ನಮ್ಮ ತಾಯಿ ತಂದಿ ತಿಳಿಯದೆ ಕೊಟ್ಟರು ಹಿಂತವರ ।
ನಾ ಸಣ್ಣಕ್ಕಿ ಮೊದಲೆ ಹೆಂಗ ಇರಬೇಕು ಆರ್ಣ್ಯಾಣದಾಗ ।
ಕುಳಿತಿರುವ ಸಭಾಕೆಲ್ಲಾ ತಿಳಿಸಿ ಹೇಳತೀನಿ ಬೇಗ ।
ಕೂಡಸರಿ ನನ್ನ ಗಂಡಗ ಕೈಮುಗುವತೀನಿ ಸರ್ವರಿಗ ।
ಮಾನಾಪಮಾನ ಕೂಡೈತಿ ನಿಮಗ ।
ಕೋಗಿಲ ಹಲಬಿದಂಗ ಹಲಬತೀನಿ ಆರ್ಣ್ಯಣದೊಳಗ ॥ ಜೀಜೀ ॥

ಆರು ಮಂದಿ ಅಕ್ಕ ತಂಗೇರ್ನ ಬಿಟ್ಟ ಕ್ಷಣದಾಗ ।
ನೆದರೆತ್ತಿ ನೋಡಲಿಲ್ಲ ಹತ್ತ ದಿಕ್ಕದೊಳಗ ।
ನಂಬಿಗಿ ತಂಬಿಟ್ಟ ಪದರಾಗ ।
ಕಟಗೊಂಡ ಬಂದೀನಿ ಇಲ್ಲೀಗ ।
ನಡಿ ಎಂಬುವ ಮಡಿಯನ್ನುಟ್ಟು ಬಂದೀನಿ ಗಂಡನ ಮನೀಗ ॥
॥ ಜೀಜೀ ॥

ಏರು ತಪ್ಪ ಇದ್ದರೆ ತಗದ ಹಾಕರಿ ಸುಳ್ಳೆಸುಳ್ಳ ಬಯಲಿಗಿ ತಂದಾನೊ
ನನ್ನ ಪತಿ ಕೆಟ್ಟ ಹುಚ್ಚ ಹಾನೊ
ಕೂಡಪಲ್ಲ ಆರು ಗುಣಾ ಅಳಿದಂತಾ ಶಕ್ತಿಗೆ ಮಾನ ಕಳಿತಿದಿಯೇನೊ॥
॥ ಜೀಜೀ ॥ ಚೌಕ ೨ ॥

ಸಿದ್ದವ್ವ ಶಿವವ್ವ ವೀರಭದ್ರಕ ಮೂರ ಮಂದಿ ತಾಯ್ದೇರೊ
ಬಾಳ ಪರಿಯ ಹೇಳಿ ಕಳವ್ಯಾರೊ
ಸಂಕಟ ಸಮಯ ಬಂದ ಕಾಲಕ ತರಬೇಕೊ ನಮ್ಮ ಹೆಸರೊ ॥ ಜೀಜೀ ॥

ಮುಂದಿನ ಮನಿ ಮಾಯವ ಹಂಗ ಅಂತಾಳೊ
ಹೆಂತಾ ಹುಚ್ಚ ಸೂಳ್ಯಾರೊ ।
ಕರುಣೆಲ್ಲದ ನಿಮಗ ದೂರ್ಯಾರೊ ।
ಆತ್ಮವೆಂಬುವ ಪುರುಷ ನಿನ್ನಲ್ಲಿ ಇಲ್ಲೇ ಮಾಡೊ ಸಂಸಾರೊ ॥
॥ ಜೀಜೀ ॥

ಇಳು ಮುಳಸಾವಳಗಿ ನಗರ ಜಾಹೀರಾ ಸುತ್ತ ದೇಶಕ ।
ಮತಾಬ ಸಾಹೇಬ ಗಂಭೀರ ನೆನದಾನ ಹಳ್ಳದ ದಡಕ ।
ಆತನ ಕುರಣದಿಂದ ಪದಾ ಹುಟ್ಟತಾವ ಖಡಕ ।
ಸುಮ್ಮನೆ ಬಾರೊ ಗುಣವಂತಾ ।
ನನಗೂಡಾ ತೊಡಬ್ಯಾಡ ಪಂತಾ ।
ಕೈ ಮಾಡಿ ಕರೀಯತೀನಿ ಕಾಂತಾ
ಹದಿನೆಂಟ ಶಾಸ್ತ್ರ ಕೂತಾವ ಎರಡು ಜೋಡಂತಾ ॥ ॥ ಜೀಜೀ ॥

ಅಜ್ಞಾನಿ ಮಡಿವಾಳನ ಪದಾ ಆವರಿ ಬಾಳ ಖಡಕ
ಬಲ್ಲಂತ ಶಾಣೇರು ಹಚ್ಚಿ ನೋಡರಿ ಕಾಟಾಕ ।
ಹೆಚ್ಚು ಕಡಿಮಿಲ್ಲರಿ ಬರೋಬರಿ ತೂಕಕ ।
ನಾ ಸಬಾಕೆಲ್ಲಾ ಹೇಳತೀನಿ ನಿಂತ । ನಾ ಶಾಣೇಕ್ಕಲ್ಲ ಹುಚ್ಚಂತ
ಖರೆ ಇದ್ದರೆ ತಾಳಿ ಕೊಡರೆಂತ
ಹರದಾಸಿ ಆಟ ನಡಿಯಲಿಲ್ಲ ಸಭಾ ಬಿಟ್ಟ ಹೊಯ್ತು ॥ ॥ ಜೀಜೀ ॥

ಏರು ನಮ್ಮ ತಂದಿಯ ಹೆಸರು ಬಸವೇಶ್ವರನೊ ಅವನ ಮಾದೇವ ಮುನಿದಾನೊ ।
ಅತನ ಶಿವನಕ ಸೆರಿ ಅದ್ಯಾನೊ ।

ಕೂಡಪಲ್ಲ ಆರು ಗುಣಾ ಅಳಿದಂತ ಶಕ್ತಿಹಗೆ ಮಾನ ಕಳಿಯತಿದೇನೊ ॥
॥ ಜೀಜೀ ॥ ಚೌಕ ೩ ॥

॥ ಸಖಿ ॥

ಆದಿಯಲ್ಲಿ ಇದ್ದsಕಿ ಆದಿಶಕ್ತಿ।
ಆದಿ ಮಧ್ಯ ಅಂತಿ ಬುನಾದಿಶಕ್ತಿ ।
ಭೇದಾ ಭೇದದಿಂದ ಸೃಷ್ಟಿ ರಚಿಸಿರಕ್ಕಿ ಇಚ್ಛಾಶಕ್ತಿ॥ ॥ ಜೀಜೀ ॥

ಮೊದಲಿಗಿ ಇದ್ದಾಳು ಮಾಯಾ ಶಕ್ತಿ।
ಮಾಯಾದಲ್ಲಿ ಹುಟ್ಟಿ ಸೋಯಮ ಶಕ್ತಿ ।
ಮೂಲ ಉತ್ಪತ್ತಿಗಿ ಶಕ್ತಿನೆ ಕಾರಣಿಕ ಆಕಿ ನಿರ್ಮಾಣ ಶಕ್ತಿ ॥ ಜೀಜೀ ॥

ರಣದಾಗ ಹೊಕ್ಕಿತು ದೈರ್ಯ ಶಕ್ತಿ ।
ರಣಶೂರದ ಹೂಡಿತು ಶೌರ್ಯಶಕ್ತಿ॥ ॥ ಜೀಜೀ ॥

ಓಂ ಅಂದಲ್ಲಿ ಕಲೆನಾದ ಶಕ್ತಿ ।
ನಾಮ ರೂಪ ಕ್ರಿಯೆ ಭೇದ ಶಕ್ತಿ ।
ಸಂಭ್ರಮ ಸಾಹಿತ್ಯ ಸರಿಯಾಗಿ ರಚಿಸಿದಳು ನೆಮ್ಮದಿಯಾದ ಶಕ್ತಿ॥
॥ ಜೀಜೀ ॥

ಚಿತ್ತದಲ್ಲಿ ಸದಾ ಚಿತ್ತ ಶಕ್ತಿ ।
ಶೃತಿಯ ಮಿತಿಮೀರಿ ಗತಿಶಕ್ತಿ ।
ಅಧ್ಯಯನ ಅನುಭಾವನಿಧಿ ದೆಸೆಮೀರಿ ನೆಲೆಯಾದಳು ಶಕ್ತಿ॥
॥ ಜೀಜೀ ॥

ಮುಳಸಾವಳಗಿಯ ಮಹಿಮೆ ಅನಂತ ಶಕ್ತಿ
ತಳದಾನ ರಾಣಿ ಅತ್ಯಂತ ಶಕ್ತಿ ।
ಕಳಿಯುಳ್ಳ ಸಿದ್ದಪ್ಪನ ಹಡದಕ್ಕಿ ಆನಂದದ ಸತತಾ ಶಕ್ತಿ ॥
॥ ಜೀಜೀ ॥

ಗಂಡ ಹೆಂಡಿರ ವ್ಯಾಪಾರ ಮಾಡತಿದ್ರೊ

ನಾರಿ ಅಂತಾ ಯಾರಿಗೆ ತಿಳಿಯದೊ ಬ್ಯಾರೆ ಐತಿ ಒಳಗಿನ ಕುಶಲಾ
ಗಂಡ ಹೆಂಡರ ವ್ಯಾಪಾರ ಮಾಡತಿದ್ರೊ ಪ್ರೀತಿಲಿಂದ ಅಂಗಡಿ ಮ್ಯಾಲಾ ॥
॥ ಜೀಜೀ ॥

ಗಟ್ಟಕ್ಕ ಹೋಗು ಮುಂದ ಗಂಡ ಹೇಳತಾನ ಮನಿಯೊಳಗ ಏನೂ ಕಡಿಮಿಲ್ಲಾ।
ಹಾಲಬಾನ ಉಂಡ ಮಲಗ ಮಂಚದ ಮ್ಯಾಲ ಮೂರೂ ಚೆಂಜಿಲಿ ಹಾಕ
ತೊಲಬಾಗಿಲಾ ॥ ॥ ಜೀಜೀ ॥

ಗಂಡನ ಮಾತಿಗ ನಾರಿ ಅಂತಾಳ ಎಂದ ಬರತೀರೇನೊ ಬರೋಸಿಲ್ಲಾ
ಗಚ್ಚಿನ ಹೌದದೊಳು ಪಾದ ಎದ್ದರಿ ಸ್ವಾಮಿ ಲಘು ತೀರ್ಥ ತಿರೊಣಿಲ್ಲಾ ॥
॥ ಜೀಜೀ ॥

ಇಳು ನಿಮ್ಮಂತ ಗೊಂಬಿ ಒಂದ ತಂದ ಇಡರಿ ಸಂಜೀಮಾಡಿs ।
ಹೊತ್ತ ಗಳೀತೀನಿ ಮಾರಿ ನೋಡಿ ॥ ॥ ಜೀಜೀ ॥
ಹೆಂಡತಿಗಿ ಹೇಳತಾನ ದೀರ । ಸದಾ ಚಿತ್ತ ಇರಬೇಕ ನೋಡ ನನಕsಡಿ ।
ಬೇಕಾದ್ದ ಉಣ್ಣ ಹಟs ಮಾಡಿ ॥ ॥ ಜೀಜೀ ॥
ಇಷ್ಟು ಹೇಳಿ ಸಾವಕಾರ ಕುದರಿಗಿ ಹಾಕಿದಾನ ಥಡಿs।
ನಾರಿ ಅಳತಾಳ ನೋಡ ಬೋರ್ಯಾsಡಿ ॥ ॥ ಜೀಜೀ ॥

ಏರು ಇಷ್ಟ ಹೇಳಿ ಗಂಡ ಗಟ್ಟಕ ಹ್ವಾದಾನೊ ಮುಂದ ಬಂತರಿ ಕಾಡೋ
ಕಾಲಾ ।

ಕೂಡಪಲ್ಲ ಗಂಡ ಹೆಂಡರು ವ್ಯಾಪಾರ ಮಾಡತಿದ್ರೊ ಪ್ರೀತಿಲಿಂದ ಅಂಗಡಿ
ಮ್ಯಾಲಾ ॥ ॥ ಜೀಜೀ ॥ ಚೌಕ ೧ ॥

ಗಂಡ ಹ್ವಾದ ಮರದಿನಾ ರಾತ್ರ್ಯಾಗ ನಾರಿ ತಗದಾಳ ಮನದಾಗ ಬೇತ ।
ಕೆಟ್ಟ ಚ್ಯಾಲ ನಂದು ರಾತ್ರಿ ಹೊತ್ತ ಹೋಗುದಿಲ್ಲ ಗಂಡಸ ಮಗ್ಗಲದಾಗ
ಇಲ್ಲದ ಹೊರತಾ ॥ ॥ ಜೀಜೀ ॥

ಹಳ್ಳಗ ಬೆಳ್ಳಗ ಹರೇದವನ ಮಾಡಿದರ ಮೂರೇ ದಿನಕ ಹತ್ತುದು ಗೊರ್ತಾ
ಕಟಗಿ ಒಡ್ಯಾವ ಕೋರಿ ಹರಕsಗ ಹೇಳತಾಳ ಮನಿಗಿ ಬಾರೊ ಸಂಜಿ
ಹೊತ್ತಾ ॥ ॥ ಜೀಜೀ ॥

ದುಡ್ಡ ಕೊಟ್ಟ ಅವನ ಗಡ್ಡ ಬೋಳಸ್ಯಾಳ ಬಿಸಿನೀರ ಇಟ್ಟ ಎರದಾಳ ಶಿಸ್ತಾ।
ಬೆಳ್ಳ ಬೆಳತಾನ ಗುದುಮುರಗಿ ಹಾಕಿ ಮನಿಗಿ ಕಳಸ್ಯಾಳ ಹರೆಯೆs
ಹೊತ್ತಾ ॥ ॥ ಜೀಜೀ ॥

ಇಳು ಗೆಣಿಯಾಗ ಸಣ್ಣ ಶಾವಿಗಿ ಸುರಳಿ ಹೋಳಿಗಿ ಸಕ್ಕರಿಪುಡಿ ।
ಬಿಸಿ ಬಿಸಿ ತುಪ್ಪ ಕಿಚ್ಚsಡಿ ॥ ॥ ಜೀಜೀ ॥

ಸೂಳಿಮಗಾ ತಿಂದಂಗಾದ ಲಟ್ಟ
ರಕೀಪ ಯಾಂವ ಕೊಟ್ಟ । ಅಡತಾರ ದೀಡ ।
ಅವನ ಸ್ವರೂಪ ಸಿಂಹಾಸನ ಜೋಡಿ ॥ ॥ ಜೀಜೀ ॥

ಗಂಡ ಕೂಡ ಒಂದ ಅಗಡ ಬಂಬ । ಕೊಟ್ಟಾನೋ ಸಾಂಭಾ ।
ಎಂಥಾ ಕಿಡಿಗೇಡಿ । ಮುದ್ದ ಕೊಡತಾಳ ಮಾರಿ ನೋಡಿ ॥ ಜೀಜೀ ॥

ಏರು ಮುಂದ ಮೂರ ವರುಷಕ ಗಂಡ ಬಂದಾನೊ ಕೂಸ ಆಡೂದ
ಓಣಿಮ್ಯಾಲಾ ।
ಕೂಡಪಲ್ಲ ಗಂಡ ಹೆಂಡರು ವ್ಯಾಪಾರ ಮಾಡತಿದ್ದರು ಅಂಗಡಿ ಮ್ಯಾಲಾ ॥
॥ ಜೀಜೀ ॥ ಚೌಕ ೨ ॥

ಏರು ಗಂಡ ಬರೋಟ್ಲೆ ಆ ಕೂಸ ಕೊಟ್ಟಳೊ ಮುದ್ದಕೊಟ್ಟ ಒಂದೆಳೆಂಟಾ ।
ನಾ ಗಟ್ಟಕ್ಕ ಹೋಗಾಗ ನನ ಹೆಂಡತಿ ಬಸರ ಇದ್ಲೊ ।
ಅದು ಆದದ್ದು ನನ್ನ ಅದೃಷ್ಟಾ ॥ ॥ ಜೀಜೀ ॥

ಹಿತ್ತಲದಾಗ ಗೆಣಿಯಾನ ಕರದ ಹೇಳತಾಳ ತಗೊಂಡು ಹೋಗೊ
ನಿನ್ನ ಕೋರಿ ಗಂಟಾ ।
ಇಂದಿನಿಂದ ನೀ ಇಲ್ಲಿಗಿ ಬರಬ್ಯಾಡ ನಮಗ ನಿಮಗಾಯಿತೊ ಮಟ್ಟಾ ।
ಉಣೂದು ಮಲಗೂದು ಎರಡು ಬಿಡಸ್ಯಾಳಂತಾ ಮನಸಿನ್ಯಾಗ
ಆದಾನೋಸಿಟ್ಟಾ ॥

ಓಣಿಯೊಳಗ ಆಡುವ ಕೂಸಿನ ಹೆಗಲ ಮೇಲೆ ಹೊತಗೊಂಡ
ಹೊಂಟಾ ॥ ॥ ಜೀಜೀ ॥

ಇಳು ಮೂರ ಮಂದೀದ ನಡೀತ ಜಟಪಟಿ ।
ಕೂಡ್ಯಾರ ದೈವ ಪ್ಯಾಟಿ ।
ಕೂಡ್ಯಾರ ಶಾಣೇsರಾ ॥ ॥ ಜೀಜೀ ॥

ಬಡವಗ ಕೇಳತಾರ ಕರದ ।
ಕೂಸ ಹೆಂಗ ನಿಂದಾ ಹೇಳೊ ವಿಸ್ತಾರಾ ॥ ಜೀಜೀ ॥

ಏರು ಬಡವ ಹೇಳತಾನ ದೈವ ಕೇಳರಿ ಇದು ನಂದು ಸುಳ್ಳಲ್ಲಾ ।
ಕೂಡಪಲ್ಲ ಗಂಡ ಹೆಂಡರು ವ್ಯಾಪಾರ ಮಾಡತಿದ್ದರೊ ಅಂಗಡಿ ಮ್ಯಾಲಾ ॥
॥ ಜೀಜೀ ॥ ಚೌಕ ೩ ॥

ಏರು ಸಾವಕಾರನ ಮಡದೀನ ಕರದ ಕೇಳತಾರ ಕರೇ ಮಾತ ಹೇಳ ತೆಂಗಿ ।
ಮಂದಿ ಮಕ್ಕಳಿಗಿ ನಂದ್ಯಾಂಗ ಅಂತಾನ ಇನಾ ಬಿಟ್ಟಿಲ್ಲಾ ತಲಿಯಾನ
ಬಿಂಗಿ ॥ ॥ ಜೀಜೀ ॥

ನಮ್ಮ ಮನಿಯಗೊಂದು ಆಕಳ ಮಣಕಿತ್ತು ಹಾಲ ಹಿಂಡುದು
ಹುಬ್ಬಳ್ಳಿ ಚರಿಗಿ ।
ಮಜ್ಜಿಗಿ ಮಾಡ್ಲಾಕ ಇಸಗೊಂಡ ಬಂದೀನಿ ಬಡವನ ಮನಿರೇವೀಗಿ ॥
॥ ಜೀಜೀ ॥

ಇವನ ರೇವಿಗೇನ ಪುಕ್ಕಟ್ಟ ದುಡದಿಲ್ಲಾ ಮಸರ ಕೊಟ್ಟನಿ ಕೋಡೀಗಿ ।
ಇವನ ರೇವಿಗಿ ನಮ್ಮಲ್ಲಿ ದುಡುವತಾನ ಮಜ್ಜಿಗಿಕೊಟ್ಟ ಮುಟ್ಟಸೀನ
ಬಾಡೀಗಿ ॥ ॥ ಜೀಜೀ ॥

ಇಳು ಮಜ್ಜಿಗ್ಯಾಗ ಹ್ವಾದಿತಾ ಈ ಹೊತ್ತಾ ।
ಬೆಣ್ಣೆ ಕೊಡು ಮಾತ ಯ್ಯಾಂವ ಮಾಡೀsದ್ದಿ ।
ಈಗ ಬೇಡತಾನ ಬೆಣ್ಣೆಯ ಮುದ್ದಿ ॥ ॥ ಜೀಜೀ ॥

ಈ ನಾರಿ ಸಭಾಕs ಇಷ್ಟಂದು ಕೂಸ ಎತಗೊಂಡು
ಹಿಡದಾಳ ಮನಿ ಹಾದಿ ।
ಅಲ್ಲಿ ನ್ಯಾಯ ಆಗೂದು ಮರಿಯಾದಿ
ನಾವು ನೀವು ಬಂದೀವಿ ಕೂಡಿ । ಹಾಕತೀವಿ ಜೋಡಿ
ಹಿಡಿ ಹಾದಿ । ಇದರಂತೆ ಕವಿಮಾಡ ವ್ಯಾದಿ ॥ ॥ ಜೀಜೀ ॥

ಏರ ಕಂದ ಯಮನಪ್ಪ ಹಿಂಗ ಪದಾ ಹಾಡತಾನ
ಸರ್ವರೂಡ್ಯಾಗ ಆಡಿದ ಬಾಲಾ ।

ಕೂಡಪಲ್ಲ ಗಂಡ ಹೆಂಡರು ವ್ಯಾಪಾರ ಮಾಡತಿದ್ದರು ಪ್ರೀತೀಲಿ ॥
॥ ಜೀಜೀ ॥ ಚೌಕ ೩ ॥

ಗೆಳತಿ ಗೆಳೆಯರ ಕಥಿ

ಗೆಳತಿ ಗೆಳೆಯರ ಕಥಿ ಕೇಳರಿ ಗೆಣಿಯಾ ಹುಚ್ಚ ಇದ್ದಾ ।
ರಂಬಿಸಿ ಗೆಣಿಯಾನ ಸುಲಕೊಂಡು ಕಡಿಗಿ ಜಾಡಿಸಿ ಬಿಟ್ಟಾಳವ್ವಾ ಒದ್ದ ॥
॥ ಜೀಜೀ ॥ ಪಲ್ಲ ॥

ನಾಗಪುರ ಸೀರಿ ಉಡಲಾಕ ನಾಜೂಕ ತರಸಬೇಕರಿ ನೂರಾರ ಕೊಟ್ಟ ।
ಗುಳೆದಗುಡ್ಡ ಇಲಕಲ್ಲ ಬಾದಾಮಿ ಕುಬಸ ಬೇಕರಿ ಏಳೆಂಟಾ ॥ ॥ ಜೀಜೀ ॥

ನಿಬ್ಬಣಕ ಹ್ವಾದಲ್ಲಿ ಬರತಾವ ಕೇಳರಿ ಕಟ್ಟಿ ಇಡೂಣು ಗಂಟಾ ।
ಇನ್ನೊಂದು ಝರದ ಕುಪ್ಪಸ ತಗೋರಿ ಬೀಳಲಿ ಬೇಕಾದಷ್ಟು ॥ ॥ ಜೀಜೀ ॥

ಇಳು ಇಷ್ಟಾದರ ಅರಿಬಿದು ಆಯ್ತು ನೋಡರಿ ಹಿಂಜೋsಲಿ ।
ಹಿಂದ ಉಳಿದಿದ್ದೆಲ್ಲ ಉಳಿಯsಲಿ ॥ ॥ ಜೀಜೀ ॥

ಮತ್ತೊಂದು ಮರತೀರಿ ಕಾಲಾಗಿನ ಚಪ್ಪಲಿ
ನಿಂಗಾ ಇರಬೇಕ ಪನ್ನಿಯ ಮೇsಲಿ ॥ ॥ ಜೀಜೀ ॥

ನಾ ನಿತ್ಯ ತಿನ್ನsಕ್ಕಿ ನೂರಾರೇsಲಿ ।
ತಂಬಾಕ ಚೀಲ ಕುತನಿಯದಿರsಲಿ ॥ ॥ ಜೀಜೀ ॥

ಏರು ಇಷ್ಟೆಲ್ಲ ಆಯ್ತು ಮತ್ತೊಂದು ಮರತೀರಿ ಕನಡಿ ತರಸರಿ ದೊಡ್ಡದಾ ।
ಕೂಡಪಲ್ಲ ರಂಬಿಸಿ ಗೆಣಿಯಾನ ಸುಲಕೊಂಡು ಕಡೀಗಿ ಜಾಡಿಸಿ ಬಿಟ್ಟಾಳ ಒದ್ದಾ ॥
॥ ಜೀಜೀ ॥ ಚೌಕ ೧ ॥

ಅರಬಿದ ಏನ ಹೇಳತೀರಿ ಇದೇನ ದೊಡ್ಡ ಡಾಗಿಣ ಅಲ್ಲಾ ।
ಸರಗಿ ಬಡಸರಿ ಹದನಾರ ತೊಲಿss ।
ಹಗsರ ಬೆಲಿ ವಸ್ತಾ ನಾ ನಿಮಗ ಹೇಳತೀನಿ
ಕಿಂವಿಯೊಳಗ ಇರಬೇಕರಿ ಸರಪಳಿ ಹಚ್ಚಿದ ವಾಲೀ ॥ ॥ ಜೀಜೀ ॥

ಸಜ್ಜವಾದ ಗೆಜ್ಜಿ ಟಿಕ್ಕೆ ನೆಲ್ಲಿಸರಾ ಸರದಾಳಿ
ಪದಕ ಒಂದ ಬೇಕರಿ ತಾಳಿ ಸ್ವಾಮಾನದಲ್ಲಿ ।
ಹತ್ತ ಸಾವಿರ ನತ್ತ ಸದ್ಯಕ ತುರ್ತಕ ಬೇಕ
ಶಿಸ್ತ ಕಾಣತದ ನನ ಮೂಡಿನಲಿ ॥ ॥ ಜೀಜೀ ॥

ವಂಕಿ ಎರಡ ಆದರ ಸಾಕs ನಾಲ್ಕ ಬಳಿ ಬಂಗಾರ ನಾಜೂಕss ।
ಅದರ ಮುಂದ ಗೋಟ ಹಚ್ಚಿದ ಪಾಟಲಿs ।
ನಡವಿನಲಿ ಡಾಬಬೇಕs ಕಾಲಲಿ ಪಂಚೇರ ರುಳಿ ಟೀಕs ।
ಪಿಲ್ಲೆ ಕಾಲುಂಗರ ಶಿಸ್ತ ನನ್ನ ಬೆರಳಿನಲಿ ॥ ॥ ಜೀಜೀ ॥

ಇಳು ಮುಂದಿರತss ಮಾಡಿಸರಿ ಕಟಾಣಿ ಸರಾ ಗೋದೇsಳಿ ।
ನಿಮ್ಮ ಪತ್ತುಳ್ಳ ಪತ್ತಾರನ ಕೇಳಿss ॥ ॥ ಜೀಜೀ ॥

ಮುಂಬೈಗಿ ಹೋಗಿ ಬಂಗಾರ ತಗೊಂಡ ಬರ್ರಿ ನೀವು ನಾಳೀsಗಿ ।
ಸೋಸಿದ್ದ ಕುರೇದ ಬೆಳ್ಳೀss ॥ ॥ ಜೀಜೀ ॥

ಏರು ಮಂದಿ ಹೆಂಗಸರಂಗ ಹೆಚ್ಚಿಗಿ ಮಾತ್ರ ಕಾಡಾಕ್ಕಿಲ್ಲಾ
ನನ್ನ ಭಾವ ಶುದ್ಧಾ ।
ಕೂಡಪಲ್ಲ ರಂಬಿಸಿ ಗೆಣಿಯಾನ ಸುಲಕೊಂಡ ಕಡೀಗಿ ಜ್ಯಾಡಿಸಿ ಬಿಟ್ಟಾಳ ಒದ್ದಾ ॥
॥ ಜೀಜೀ ॥ ಚೌಕ ೨ ॥

ಏರು ಮಾತಾsದ ಇನ್ನೊಂದ ಹೇಳತೀನಿ ನಿಮ್ಮ ಮುಂದ
ನನ್ನ ಮನಿ ಗ್ವಾಡಿ ತೊಲಿ ಬಾಳ ಸುಮಾರಾ ।
ಕಡೇಪಾಟ ಮನಿಯೊಂದ ಹಾಕಿಸಿ ಕೊಡಬೇಕರಿ ।
ಬಾಳ ದಿವಸ ಇರತದ ನಿಮ್ಮ ಹೆಸರಾ ॥ ॥ ಜೀಜೀ ॥

ಎರಡ ಅಂಕಣ ಕೋಲಿ ಇರಲಿ ಅಡಗಿಮನಿ ಎತ್ತರ ಇರಲಿ ।
ಚೌಸಷ್ಠಿ ಪಡಸಾಲಿ ಒಳೇ ಅಟಂಭಾರಾ ।
ಮೇಲ್ಮಾಡೆ ಶಿಸ್ತಾಗಿರಲಿ ಕಮಾನ ಕಿಡಕಿ ಸರಿಯಾಗಿರಲಿ ।
ನನ್ನ ಮನಿ ಸುತ್ತ ಮುತ್ತ ಆದ ಬಾಜ್ಯಾರಾ ॥ ॥ ಜೀಜೀ ॥

ಏ ನಾರಿss ಆಡಿದ ಮಾತ ಕೇಳಿ ಮನಸನ್ಯಾಗ ಉಮೇದ್ವಾರಿ ।
ಸಾಗ್ವಾನಿತೊಲಿ ತರಸಿದಾನೊ ನೂರಾರಾ ।
ಬಾಳ ಸರಳ ಮಲ್ಲಾಡಬಿದರಾ ತರಸಿದಾನೊ ಸಾವಿರಾರಾ ।
ಕೂಡಸ್ಯಾನ ಶಾಣಾ ಶಾಣೆ ಬಡಿಗ್ಯಾರಾ ॥ ॥ ಜೀಜೀ ॥

ಇಳು ತಡ ಮಾಡಲಿಲ್ಲ ಕರಿs ಕಲ್ಲ ತರಶ್ಯಾನ ಝುಳ ಝುಳಾ ।
ಪಾಯಾ ತಗಶ್ಯಾನ ಸೋಸಿ ತಳಾss ॥ ॥ ಜೀಜೀ ॥

ಶಾಬಾದಿ ಕಲ್ಲ ಇದ್ದಂಗ ರತ್ನದ ಹರಳಾ ।
ಸಿಮೆಂಟಕ್ಕ ರೊಖ್ಖ ಹ್ವಾದು ಬಾಳಾss ॥ ॥ ಜೀಜೀ ॥

ಏರು ಹಿಂದ ಮುಂದ ನೋಡಲಿಲ್ಲ ಮಳ್ಳ ಗಂಡಸಗ ತಿಳಿಯಲಿಲ್ಲಾ
ಬಲ್ಲಂಗಾ ಕುಣಿತದ ಹುಚ್ಚೆದ್ದಾ ।
ಕೂಡಪಲ್ಲ ರಂಬಿಸಿ ಗೆಣಿಯಾನ ಸುಲಕೊಂಡ ಕಡೀಗಿ ಜ್ಯಾಡಿಸಿ ಬಿಟ್ಟಾಳ ಒದ್ದಾ ॥
॥ ಜೀಜೀ ॥ ಚೌಕ ೩ ॥

ಇಷ್ಟೆಲ್ಲಾ ಆಗುವದರೊಳಗ ಹಣಾ ಉಳಿಯಲಿಲ್ಲಾ ಕೈಯಾಗ ।
ಗಂಗಾಳ ಚರಗಿ ಸಾವಕಾರನ ಮನಿಗಿ ಹೋಗ್ಯಾವ ಹೊಂಟಾ ।
ಕೋಟ ಬೂಟ ರುಮಾಲು ಹೊತ್ತು ಮುಕಳ್ಯಾನ ಧೋತರ
ಹೊಯ್ತು ಲಂಗೂಟಿ ಹಾಕಿಕೋತ ಪಡಸೆಂಟಾ ॥ ॥ ಜೀಜೀ ॥

ನೆರೆ ಹೊರೆಯವರು ಅವಗ ಒದ್ದ ಒದ್ದು ಕೇಳತಾರ ಎಲ್ಲಿ ಇಟ್ಟಿಯೊ
ನಿನ ಇಸ್ಟೆಂಟಾ ।
ಗಂಟ ಇರುತಾನಾ ಒಳೆ ಭಂಟನಂಗ ತಿರಗತಿದ್ದಿ ಇನ್ನ ಹರಕೊರೊ
ಆಕಿ ಕಡಿ ಸೆಂಟಾ ॥ ॥ ಜೀಜೀ ॥

ಇಳು ಛೀಮಾರಿ ಆಗಿ ತಿರಗತಾದ ದೇಶದ ಮ್ಯಾಗ
ಕಟಗಿ ಹೊರಿ ಹೊತಗೊಂಡ ತಲಿಮ್ಯಾಗ ॥ ಜೀಜೀ ॥

ಕಲಗಿ ಪದಾ ಹುಟ್ಟತಾವ ಕೇಳರಿ ಮುಳಸಾವಳಗ್ಯಾಗ ।
ಮತಾಬ ಸಾಹೇಬನ ದಯಾ ನಮ್ಮ ಮ್ಯಾಗ ॥ ॥ ಜೀಜೀ ॥

ಏರು ನಮ್ಮ ವಸ್ತಾದ ಮಡಿವಾಳ ವೈರಿಗಿ ಹೇಳತಾನ ಝುಳ ಝುಳಾ ।
ಸಭಾ ಬಿಟ್ಟ ಹ್ವಾದಗೀದಿ ನಿ ಎದ್ದಾ ।

ಇಳು ರಂಬಿಸಿ ಗೆಣಿಯಾನ ಸುಲಕೊಂಡ ಕಡೀಗಿ ಜ್ಯಾಡಿಸಿ ಬಿಟ್ಟಾಳ
ಒದ್ದಾ ॥ ॥ ಜೀಜೀ ॥ ಚೌಕ ೪ ॥

ಬಾರೊ ಬಾರೊ ನನ್ನ ಸ್ವಾದರ ಮಾವಾ

ಬಾರೊ ಬಾರೊ ನನ್ನ ಸ್ವಾದರ ಮಾವ ನಿನ್ನ ಮ್ಯಾಲ ನನ್ನ ಪ್ರೀತಿ ಇತ್ತೊ।
ಬಾಳ ದಿನಕ ಭೇಟಿ ಆಯಿತೊ ।
ಹನ್ನೆರಡ ದೇವರಗಿ ಹರಕಿ ಹೊತ್ತಿದರ ಇಲ್ಲೆ ಕೈಯ್ಯೊಗ್ಗಿಡಿತ್ತೊ॥ ॥ ಜೀಜೀ ॥
ನಿನಗ ಒಂದಿವಸ ಬೇಡತೀನಿ ತಂದ ಕೊಡಿರಿ ಬೇಗನೆ।
ತಾಯಿ ತಮ್ಮ ಸೋದರ ಮಾವನೇ ।
ನಾ ಬೇಡದ್ದು ನೀ ತಂದ ಕೊಟ್ಟರ ಕರೆ ನೀ ನಿಮ್ಮಪ್ಪನ ಮಗನೇ ॥ ಜೀಜೀ ॥
ಇದೇ ಭೂಮಿ ಮ್ಯಾಗ ಪಕ್ಷಿ ಆದ ಒಂದ ಕುಂತ ಕೇಳರಿ ಬೇಗನೇ
ಹೇಳತೀನಿ ಪಕ್ಷಿ ವರ್ಣನೆ ।
ಮೂಗು ಚೋಟಿ ಉದ್ದ ಆದ ಬಾಯಿ ಬೆನ್ನ ಮ್ಯಾಗ ಅದಕ ಶಾಹೀರ
ಶ್ರೇಷ್ಠನೇ ॥ ॥ ಜೀಜೀ ॥

ಇಳು ಆ ಪಕ್ಷಿ ತಂದ ಕೊಟ್ಟರೆ ಕರೆನೀ ಹೌದು ।
ಇಲ್ಲದಿದ್ದರೆ ಆಣಿ ಹಾಕತೀನಿ ನಿನ್ನ ಗುರುವಿಂದು ।
ಎಷ್ಟೊ ಮಂದಿ ಹೋಗ್ಯಾರು ಸುಳ್ಳ ಹೇಳಿ ಪಂದು ।
ನೀ ಒಬ್ಬ ಗಂಟಬಿದ್ದಿದಿ । ನಾ ಶ್ರೇಷ್ಠ ಅಂತ ಬಂದೀರಿ ।
ಮೀಸಿ ಹುರಿ ಹಾಕಿ ಕುಂತೀದಿ ।
ನೀ ಆಡಾಡತ್ತ ಬಂದ ನನ್ನ ಕೈಯಾಗ ಸಿಕ್ಕೀದಿ ॥ ॥ ಜೀಜೀ ॥
ಮರತ ಕುಂದ್ರ ಬ್ಯಾಡ ಪಕ್ಷೀದು ಹೇಳತೀನಿ ಮತ್ತೊಂದು ।
ಆರ ಬಾವಿ ಬೆನ್ನ ಮ್ಯಾಗ ಅದಕಿರಬೇಕ ನೋಡೊಂದು ।
ಆ ಪಕ್ಷಿ ಕಣ್ಣ ರಂಗಲಾಲ ।
ನೆತ್ತೀಯ ಮ್ಯಾಗ ಅದರ ಬಾಲ ।
ಯಾವತ್ತು ಇರೂದು ಸದಾ ಕಾಲಾ ।
ಏ ಭೂಮಿ ಅಕಾಶಕ ಏಕ ಆಗೇದ ಅದರ ಬಾಲಾ ॥ ॥ ಜೀಜೀ ॥

ಏರು ಇಂದ ತಂದಕೊಡು ನಾಳೆ ತಂದುಕೊಡು ಜಲ್ಮ ಹೋಗುತನಕ ಮುದ್ದತೊ
ಕರಾರ ನಿನಗ ಮಾಡಿತ್ತೊ

ಕೂಡಪಲ್ಲ ಹನ್ನೆರಡ ದೇವರಗಿ ಹರಕಿ ಹೊತ್ತಿದರ ಇಲ್ಲೇ ಕೈಗೊಡಿತ್ತೊ ॥
॥ ಜೀಜೀ ॥ ಚೌಕ ೧ ॥

ಹೆಣ್ಣ ಆದಯೇನ ಗಂಡ ಆದಾ ತಿಳಿವಲ್ದು ಮಜಕೂರಾ ॥
ತಿಳಿಸಿ ಹೇಳರಿ ನನಗ ಆಕಾರಾ ।
ಶಾಣ್ಯಾರ ಅಂತಾ ನಿಮಗ ಕೇಳಲಿಕ ಬಂದೀನಿ ಮಾಡಬ್ಯಾಡ
ತಾಸ್ತಾರಾ ॥ ॥ ಜೀಜೀ ॥

ಮತ್ತ ಆ ಪಕ್ಷಿ ತತ್ತಿ ಇಡತದೊ ಇಪ್ಪತ್ತೊಂದು ಸಾವಿರಾ ಆರನೂರಾ ।
ಹಿಂಗಿತ್ತೊ ಪಕ್ಷಿ ಕರರಾ ।
ಇಪ್ಪತ್ತೊಂದು ಲಕ್ಷ ಮರಿ ಮಾಡತಿತ್ತೊ ಏನ ಹೇಳಲಿ ಚಮತ್ಕಾರಾ ॥
॥ ಜೀಜೀ ॥

ಇಳು ಒಂದೊಂದು ತತ್ತಿಒಳಗ ಏಸ ಮರಿ ಇದ್ದು ಜಾಣಾ ।
ಕೂಡಿದ್ದ ಸಭಾಕೆಲ್ಲಾ ತಿಳಿಸಿ ಹೇಳಬೇಕಣ್ಣಾ
ಪ್ರೀತಿಲಿ ಕೇಳತೀನಿ ಜಗಳ ತಗೀಯ ಬೇಡಣ್ಣಾ ।
ನಾವು ನೀವು ಇಬ್ಬರು ಜೋಡಿ ।
ಹಾಡಲಾಕ ಬಂದಿತೊ ಕೂಡಿ ।
ಲಗು ಮಾಡಿ ಹೇಳೊ ಇದರ ತೋಡಿ ।
ಸುಮ್ಮನೆ ಕುಂತ ಹೊತ್ತ ಗಳಿಯಬ್ಯಾಡ ನೀ ಕೊಡೀ ॥ ॥ ಜೀಜೀ ॥

ಇಪ್ಪತ್ತೊಂದು ಲಕ್ಷ ಮರಿಯೊಳಗ ಏಸ ಆವ ಗಂಡ ।
ಕಾಲ ಕೆದರಿ ಜಗಳ ತಗಿಲಾಕ ಬಂದಿದೊ ಮಂಡಾ ।
ಹೇಳಲಾರದೆ ಡಪ್ಪ ಹಿಡದೆಂದರ ಕೆಡವೇನ ಲಂಡಾ ।
ನನ್ನ ಕೈಯ್ಯಾಗ ಸಿಕ್ಕಿ ಪುರಮಾನಸಿ ನಾ ಶ್ರೇಷ್ಠ ಅನತಿ ಹರದಾಸಿ ।
ನಿನಗ ಬಿದ್ದದ ಮಾಯೆದ ಪಾಸಿ ।
ನಗ ನಗತ ನಿನ್ನ ಜೀವಕ ತಂದಿನೊ ಘಾಸಿ ॥ ॥ ಜೀಜೀ ॥

ಏರು ಯಾವ ಟಿಕಾಣದಾಗ ಇರತದ ಪಕ್ಷಿ ಎಲ್ಲಿ ಮನೆ ಮಾಡಿತೊ
ಏನೇನ ಊಟ ಉಂಡಿತೊ ।
ಕೂಡಪಲ್ಲ ಹನ್ನೆರಡ ದೇವರಗಿ ಹರಕಿ ಹೊತ್ತೆರ ಇಲ್ಲೆ ಕೈಗೂಡಿತೊ ॥
॥ ಜೀಜೀ ॥ ಚೌಕ ೨ ॥

ಏರು ಇಪ್ಪತ್ತೊಂದು ಲಕ್ಷ ಮರಿಗಳಿಗೆಲ್ಲಾ ಹ್ಯಾಂಗ ಮಲಿಯ ಕುಡಿಸಿತೊ ।
ದಿನಂಪ್ರತಿ ಅದು ಬೆಳಸಿತೊ ।
ಕೃತಾಯುಗ ತ್ರೇತ್ರಾಯುಗ ದ್ವಾಪಾರಯುಗ ಕಲಿಯುಗಾ ವಾಹಿನಿ
ಹರಿಸಿತೊ ॥ ॥ ಜೀಜೀ ॥

ಒಂದೊಂದ ಯುಗದೊಳಗ ಏನೇನ ಊಟ ಮಕ್ಕಳಿಗಿ ಅದು
ಉಣಸೀತೊ ।
ಅವರ ಮನಾ ಶಾಂತಿ ಮಾಡಿತೊ ।
ಭೂಮಿ ಆಕಾಶಕ ಹಾಸಿಗಿ ಮಾಡಿ ಅದರ ಮ್ಯಾಗ–
ಮಕ್ಕಳನ ಮನಗಿಸಿತೊ ॥ ॥ ಜೀಜೀ ॥

ಈ ಸಭಾದಾಗ ಕೂಡ್ಯಾರ ದೊಡ್ಡ ಪಂಡಿತರಾ ।
ಅರ್ಥ ಮಾಡಿ ಹೇಳಬೇಕೊ ಹೇಳಬೇಕೊ ನೀನು ಇದರ ಉತ್ತರಾ।
ತಡಾ ಮಾಡಬ್ಯಾಡ ಲಗು ಮಾಡಿ ಹೇಳೋ ಒತ್ತರಾ ॥ ॥ ಜೀಜೀ ॥

ನನ್ನ ಕೈಯಾಗ ಸಿಕ್ಕಿದಿ ಸರದಾರಾಽ ನಾ ಶ್ರೇಷ್ಠ ಅಂತಿದಿ ಬಾದ್ದೂರಾಽ।
ಕಡಿಗಾಗತಿದಿ ಮುಡದಾರಾಽ।
ನಿಂದೆಽಲ್ಲ ಗೊತ್ತೈತಿ ಜಾಮೀನಕ ಹಾಕುವ ದಾರಾ ॥ ॥ ಜೀಜೀ ॥

ಇಳು ಸುತ್ತ ದೇಶದೊಳಗ ಮುಳಸಾವಳಗಿನಗರ ಜಾಹೀರಾಽ।
ಹುಣಚೀಯ ಬನದಾಗ ಮತಾಬಸಾಹೇಬರ ಗುಡಿ ಶೃಂಗಾರಾಽ।
ನಂಬಿದ ಭಕ್ತರಿಗೆ ಮಾಡ್ತಾನ ಬಂಗಾರಾ ।
ಮಡಿವಾಳ ಅಲ್ಲಿ ಕವಿಗಾರಾ । ಎಲ್ಲಾರ ಬೆರಳಾನ ಉಂಗುರಾಽ।
ಬೇಧ ಇಲ್ಲ ಅವನ ಬಲ್ಲಿ ಇದ್ದಂಗ ದೊಡ್ಡ ಸಾಗರಾ ॥ ॥ ಜೀಜೀ ॥

ಏರು ಕೂಸ ಯಮನಪ್ಪನ ಪದಾ ಕೇಳಿಕೇರಿ ವೈರಿಽ ಎದಿ ಒಡದೀತೊ।
ಸಭಾ ಬಿಟ್ಟು ಅದು ಓಡಿತೊ ।
ಕೂಡಪಲ್ಲ ಹನ್ನೆರಡು ದೇವರಗಿ ಹರಕಿ ಹೊತ್ತಿದರ ಇಲ್ಲೆ ಕೈಗೂಡಿತೊಽ॥
॥ ಜೀಜೀ ॥ ಚೌಕ ೩ ॥

ಕೃಷ್ಣ ಹುಟ್ಟಿ ಬಂದಾ

ವಸುದೇವ ದೇವಕಿಯರ ಹೊಟ್ಟೆಲೆ ಕೃಷ್ಣ ಹುಟ್ಟಿ ಬಂದಾ ಪಾಖಂಡಾ।
ಚೋರ ಜಾರ ಗೊಲ್ಲಗ ಹ್ಯಾಂಗ ಅನಬೇಕು ಖರೇ ಮುಂಡಾ॥
॥ ಜೀಜೀ ॥ ಪಲ್ಲ ॥

ಗೋಕುಲದಾಗ ಹಾಲ ಮೊಸರು ಕದಿತಿದ್ದಾ ಗೌಳಗಿತ್ಯಾರ ಮನಿಯಾಗ ಹೋಗಿ।
ಗೋಪ್ಯಾರ ಗಂಡ ಬಂದು ಹೊಡಿಯಬೇಕಂದರ ಆಡತಿದ್ದ ಸಣ್ಣ
ಶಿಶುವಾಗಿ॥ ॥ ಜೀಜೀ ॥

ಝಳಕ ಮಾಡುದಕ ಗೋಪ್ಯಾರ ಹೋದರ ಹೋಗ್ಯಾನ ಅಲ್ಲೀಗಿ।
ಝಳಕ ಮಾಡುದರೊಳಗ ಗೋಪ್ಯಾರ ಸೀರಿ ವೈದು ಸಿಗಸ್ಯಾನ
ಗಿಡಗಳಿಗಿ॥ ॥ ಜೀಜೀ ॥

ಬಾಯಿಗಿ ಬಂದು ಅಂಜಕಿ ಹಾಕಿದರು ಅವನೀಗಿ ।
ನಮ್ಮ ಗಂಡದೇರು ಕರಕೊಂಡ ಬರತೀನಂದರಽಽ ಸೀರಿಕೊಟ್ಟಾನ ತಿರಗಿ॥
॥ ಜೀಜೀ ॥

ಇಳುವು ತನ್ನ ಹೊಟ್ಟೆ ಪಾಡಿಗಾಗಿ ದನಾ ಕಾಯಿತಿದ್ದ ಹಗಲೆಲ್ಲಾ ।
ಕೈಯಾಗ ಹಿಡದ ಕೊಳಲಾ ॥ ॥ ಜೀಜೀ ॥

ಶ್ರೀಕೃಷ್ಣನ ಪೌರುಷ ಹೇಳುದೇನ ಕಾರಣವಿಲ್ಲಾ ।
ಅವನ ಚರಿತ್ರೆ ಗೊತ್ತ ನಮಗೆಲ್ಲಾ ॥ ॥ ಜೀಜೀ ॥

ಮಾಂವ ಕಂಸಾಸೂರನ ಪ್ರಾಣ ಹೊಡದಾನೊ ಗೋಪಾಲ।
ಹುಜರಾ ಹುಜರ ಲಡಾಯಿ ಮಾಡಲಿಲ್ಲಾ॥ ॥ ಜೀಜೀ ॥

ಏರು ಕೌಂಸನ ಸತಿ ಖಾಸ ಅಕ್ಕನ ಸರಿ ಕಾಮಿಸಿ ಅವರನ ಕೂಡಿಕೊಂಡ
ಕೂಡಪಲ್ಲ ವಸುದೇವ ದೇವಕಿಯರ ಹೊಟ್ಟೆಲೆ ಕೃಷ್ಣ ಹುಟ್ಟಿ ಬಂದಾ ಪಾಖಂಡ
ಚೋರ ಜಾರ ಗೊಲ್ಲಗ ಹ್ಯಾಂಗ ಅನಬೇಕು ಖರೆಮುಂಡಾ ॥
॥ ಜೀಜೀ ॥ ಚೌಕ ೧ ॥

ಏರು ಹತ್ತು ಅವತಾರ ಎತ್ತಿದ ಕಾರಣ ಸತ್ಯ ಸಾರಿ ಹೇಳು ಸಭಾದಲ್ಲಿ
ಕೈಲಾಸ ಬಿಟ್ಟು ಭೂಲೋಕಕ್ಕ ಬರಲು ಯಾರ ಶ್ಯಾಪ ಪ್ರಮಥದಲ್ಲಿ॥
॥ ಜೀಜೀ ॥

ಮೀನ ಆಗಿ ಹುಟ್ಟಿ ಮೊದಲಿನ ಅವತಾರದಲ್ಲಿ ತಿರಗತಿದ್ದ ಸಮುದ್ರದಲ್ಲಿ।
ನೀರೊಳಗ ಎಷ್ಟ ವರ್ಷ ಇದ್ದ ಸಾರಿ ಹೇಳು ಗಾಯನದಲ್ಲಿ ॥ ಜೀಜೀ ॥

ಕೂರ್ಮ ಅವತಾರ ಆಗಿ ಹೊರಳಾಡುತಿದ್ದ ಕೆಸರಿನಲ್ಲಿ ।
ವರಾಹ ಅವತಾರ ತಾಳಿ ಹಂದಿ ರೂಪಾಗಿ ತಿರಗತಿದ್ದ ಸಂಡಾಸದಲ್ಲಿ
ಇಂಥಾ ಹೊತ್ತು ಯಾಕ ಬಂತು ಭಗವಂತ ಅಂದ ಮೂರಲೋಕದಲ್ಲಿ
ವಾಮನ ಅವತಾರ ಬ್ರಾಹ್ಮಣನಾಗಿ ಪಂಚಾಂಗದ ಗಂಟ ಅವನ
ಬಗಲಲ್ಲಿ ॥ ॥ ಜೀಜೀ ॥

ಇಳುವು ಪಶುಜ್ಯಾತಿ ನಾರಸಿಂಹ ಆಗಿ ಬಂದಾನ ।
ಅದು ಹೇಳು ಯಾವ ಕಾರಣಾ ॥ ॥ ಜೀಜೀ ॥

ಪರಶುರಾಮನ ಅವತಾರಕ್ಕೆ ತಾಯಿನ್ನ ಟಾರ್ ಹೊಡದಾನಾ ।
ನಿಮ್ಮ ಕೃಷ್ಣ ಹೆಂತಾ ಅಜ್ಞಾನಾ ॥ ॥ ಜೀಜೀ ॥

ರಾಮನ ಅವತಾರ ತಾಳಿ ಸೀತಾನ ಮಾಡಿಕೊಂಡಾನಾ
ಎಂಥಾ ಎಡಿ ಉಂಡಾನ ॥ ॥ ಜೀಜೀ ॥

ಏರು ತ್ರಿಕಾಲ ಜ್ಞಾನಿ ಅನಿಸಿಕೊಂಡ ರಾಮ ಸೀತಾನ್ಯಾಕ ಕಳಕೊಂಡಾ
ಕೂಡುಪಲ್ಲ ವಸುದೇವ ದೇವಕಿಯರು ಹೊಟ್ಟಿಲೆ ಕೃಷ್ಣ ಹುಟ್ಟಿ ಬಂದಾ ಪಾಖಂಡಾ
ಚೋರ ಜ್ಯಾರಗೊಲ್ಲಗ ಹ್ಯಾಂಗ ಅನಬೇಕು ಖರೇ ಪುಂಡಾ ॥
॥ ಜೀಜೀ ॥ ಚೌಕ ೨ ॥

ಏರು ರಾಮ ಅವತಾರ ತಾಳಿ ವಾಲಿಗಿ ಮಾಡ್ಯಾನ ಮರಣಾ ।
ವಾಲಿ ಹೆಂಡತಿನ ತಂದು ಸುಗ್ರೀವನಿಗೆ ಕೊಟ್ಟಾನಾ
ಮಾಡಬೇಕು ಕುಂಟಿಲತನಾ ॥ ॥ ಜೀಜೀ ॥

ತಾನೇ ದೇವರಿದ್ದು ಐರಾವಣಗ ರಾಮಚಂದ್ರ ಸೈನಿಗ್ಯಾಕ ಕೇಳ್ಯಾನಾ ।
ದಾಸಾನ ದಾಸಾಗಿ ದುಡಿದ ಮಾರುತಿಗಿ ಲಂಗೂಟಿ ಕಳಿಸಲಿಲ್ಲಾ
ಇವನಾ ॥ ॥ ಜೀಜೀ ॥

ಕರಡಿಗೂಡಾ ಲಗ್ನ ಆಗ್ಯಾನ ಕೃಷ್ಣ ಸಿಗಲಿಲ್ಲೇನ ಇವಗ ಹೆಣ್ಣಾ ।
ಸಾವಿರ ಗೋಪ್ಯರ ಹೆಸರ ಕೇಳತೀನಿ ಹೇಳಬೇಕು ನೀನಾ ॥ ಜೀಜೀ ॥

ಗಂಡಸ ಮಕ್ಕಳೆಷ್ಟು ಹೆಣ್ಣ ಮಕ್ಕಳೆಷ್ಟು ಹೇಳಬೇಕ ಅವರ ನಾಮಕರಣಾ
ಚೌದಾವತಾರಕ ಒಟ್ಟುಗೂಡಿಸಿ ಹತ್ತು ಅವತಾರದವಾ ಭಗವಾನಾ ॥
॥ ಜೀಜೀ ॥

ಇಳುವು ತೋಡಿಗಿ ತೋಡಿ ಇದ್ದರ ಡಪ್ಪ ಹಿಡಯಬೇಕು ।

ಕೋಡ ಮುರದಂಗ ಉತ್ತರ ಕೊಡಬೇಕು ॥ ॥ ಜೀಜೀ ॥

ನಿನ್ನ ಗುರುವಿನಾಣೆ ಮಾಡಿ ಇದ್ದಕಿದ್ದಂಗ ಹೇಳಬೇಕು
ತಿಳಿಲಿಕಂದ್ರ ಬಂದು ಕೇಳಬೇಕು ॥ ॥ ಜೀಜೀ ॥

ಬಾ ಬಂದು ಕೇಳಕೋ ಮುಳಸಾವಳಗಿ ಜ್ಯಾಗಾಕೋ
ಏರು ಕವಿ ಮಡಿವಾಳ ಮಾಡಿದ ಪದಗಳುಹರದೇಶಿಗಿ ಹೊಡದಂಗ ಗುಂಡಾ ।

ಕೂಡಪಲ್ಲ ವಸುದೇವ ದೇವಕಿಯರ ಹೊಟ್ಟೆಲೆ ಕೃಷ್ಣ ಹುಟ್ಟಿ ಬಂದಾ ಪಾಖಂಡಾ ।
ಚೋರ ಜ್ಯಾರಗೊಲ್ಲನ ಹ್ಯಾಂಗ ಅನಬೇಕು ಖರೇ ಮುಂಡಾ ॥
॥ ಜೀಜೀ ॥ ಚೌಕ ೩ ॥

ಭಾಗ – ೩

೧) ಡೋಣೂರ ೨) ಸಾಲೋಟಗಿ

೩) ಧನ್ನ್ಯಾಳ ೪) ಯಳಮೇಲಿ

೫) ಸಾರವಾಡ ೬) ಇಂಗಳೇಶ್ವರ.

ಪರಿವಿಡಿ

೧)	ನಾಗರ ಅಮಾಸಿ	೧೬೭
೨)	ಶಾಸ್ತ್ರ ಮಾತ ನೀ ತಗಿ	೧೭೨
೩)	ಹೆಣ್ಣ ಕಂಡಿನೊಂದ	೧೭೫
೪)	ಚಂದ್ರನಂತ ಚೆಲುವ	೧೭೮
೫)	ಚಕ್ಕಡ	೧೮೧
೬)	ಖ್ಯಾಲಿ	೧೮೧
೭)	ಬೀಸಿ ಒಗುತೀವ ತಗೊಂಡು ಹೋಗಾಕೊ ನಿನ್ನ ಉತ್ತರ	೧೮೨
೮)	ಖ್ಯಾಲಿ	೧೮೩
೯)	ಖ್ಯಾಲಿ	೧೮೪
೧೦)	ಖ್ಯಾಲಿ	೧೮೪
೧೧)	ಯಥಾ ಬ್ರಹ್ಮಾಂಡ ತಥಾ ಪಿಂಡಾಂಡ	೧೮೭
೧೨)	ಯ್ಯಾಕ ತಂಗಿ ಇಷ್ಟ್ಯಾಕ ಸೊರಗಿದಿ	೧೮೯
೧೩)	ಪರದೇವರ ಮ್ಯಾಲ ಭಕ್ತಿ ನಮ್ಮದು	೧೯೦
೧೪)	ಖ್ಯಾಲಿ	೧೯೩
೧೫)	ಸಖಿ	೧೯೩
೧೬)	॥ ಸಖಿ ॥ ಬಾಳದಿವಸ ನಾ ಮರತ ಕುತ್ತೀನ ॥ ಪದಾ ॥ ಖ್ಯಾಲಿ ॥	೧೯೪
೧೭)	ಪಕ್ಷಿ ಒಂದ ಕಂಡೆನು	೧೯೫
	(ಖ್ಯಾಲಿ) ಬರದಿಟ್ಟಾರ ಲೆಖ್ಖಾ ॥	೧೯೬
೧೮)	(ಸಖಿ) ಓದಿಕೊಂಡಿನ ಲೆಖ್ಖಾ	೧೯೬
೧೯)	(ಸಖಿ) ಬಿತ್ತವರಿಗಿ ಉಡಿಚಂದ	೧೯೬
೨೦)	ಬೀಬೀ ಫಾತಿಮಾ	೧೯೮
೨೧)	ಖ್ಯಾಲಿ	೨೦೨

ನಾಗರ ಅಮಾಸಿ

ನಾಗರ ಅಮಾಸಿ ದಿನಾ ನಾರಿನ ಕಂಡಿನೋ ಸೀರಿ ಉಟ್ಟ ಶೃಂಗಾರಾ
ಆಗಿ ನಿಂತಾಳ ತಯ್ಯಾರಾ
ಇಷ್ಟ ದಿವಸ ಈಕಿ ಎಲ್ಲಿ ಇದ್ದಳೊ ಇಕಿನ ಇಂದ ಕಂಡೆ ಕಣ್ಣಾರಾ ॥
॥ ಜೀಜೀ ॥

ಕಾಲೊಳು ಪೈಜಾನಾ ನುಡಿಸುತ ಚಣ ಚಣಾ ನಾರಿ ಹೊಂಟಾಳೋ ಬರರಾ
ಕೂಡಿಕೊಂಡ ಗೆಳೆತೆರಾ ।
ವಯಸ್ಸದಲ್ಲಿ ಬಹಳ ದಿವಸ ಆಗಿಲ್ಲಾ ರೂಪ ಎಳಿ ಚಂದರಾ ॥
॥ ಜೀಜೀ ॥

ಹಣಿ ಮ್ಯಾಲ ಕುಂಕುಮ ಕೊರದಾಳೋ ಚಂದರಾ ಒಪ್ಪತಾದ ಸಾದರ
ಕೊರಳಾಗ ಹಂಗನೂಲ ದಾರಾ ।
ಮಾತ ಹೇಳಿ ಮುಂದಕ ಸಾಗಿದರ ಮನದೊಳಗ ಆದಿ ಗಿರಿಗಿರಾ ॥
॥ ಜೀಜೀ ॥

ಇಳು ನನ್ನ ಕಂಡು ವಾರಿಗಣ್ಣಿಲೇ
ವವ್ವಾರೆ ಕೋಮಲೆ ನೀ
ನಗುತ ಹೊಂಟೆ ಕಿಲಿ ಕಿಲಿ ॥ ॥ ಜೀಜೀ ॥

ತುದಿ ನಿಲಗಿ ಹಿಡಿದು ಕೈಯ್ಯಲಿ
ರಾಜ ಬೀದಿಯಲಿ
ಆಡುದಕ ಹೊಂಟೆ ಜೋಕಾಲಿ ॥ ॥ ಜೀಜೀ ॥

ಸಮಾಧಾನವಿಲ್ಲ ಮನದಲ್ಲಿ
ಹ್ಯಾಂಗ ಮಾಡಲಿ
ನೇತ್ರ ಹೊಳುವತಾವ ಸೂತ್ರದಲ್ಲಿ ॥ ॥ ಜೀಜೀ ॥

ಏರು ತಿರುಗಿ ನೋಡಽ ಜರಾ ಮರಗಿಸಬೇಡಾ ಇರಲಿ ಜರಾ ಆಸರಾ ।
ಬಡವನ ಮೇಲೆ ನೆದರಾ ।
ಕೂಡಪಲ್ಲ ಇಷ್ಟ ದಿವಸ ಈಕಿ ಎಲ್ಲಿ ಇದ್ದಳೊ ಇಕಿನ ಇಂದ ಕಂಡೆ ಕಣ್ಣಾರಾ ॥
॥ ಜೀಜೀ ॥ ಚೌಕ ೧ ॥

ಚದುರಿ ಬೆದರಿ ಒಳೆ ಎದುರಿಗೆ ನಿಂತಾಳೋ ಹೇಳತಾಳೊ ಸುಚನಾ ।
ಆದಿ ನೋಡೊ ಹೈರಾಣಾ
ಪರ ಹೆಂಗಸರ ಸವ್ವಾಸ ಚಲೋದಲ್ಲಾ ತಿಳಿದು ನೋಡೊ ಸುಗಜಾಣಾ ॥ ॥ ಜೀಜೀ ೧ ॥

ಎರಳಿಯಂಗ ನಾರಿ ಹೊರಳಿ ನೋಡತಾಳೊ ಗಿಡಗಿನಂಗ ನೆದರಾ।
ಆಕಿಗಿಲ್ಲ ದರಕಾರಾ ।
ರೂಪಲಾವಣಿ ನೋಡಿ ಬಡಿಕೋತಾರ ಹಣಿ ಹಣಿ ಕೈವಶ
ಆಗೂದು ಜರೂರಾ ॥ ॥ ಜೀಜೀ ॥

ಅಳಿಯೋ ಅಳಿಯೋ ಆರ ಗುಣಗಳು ದುರ್ಜನೀ ಇರತದ ನೋಡ ಇನಾ।
ಕಾಣುದು ದೂರ್ತ ಲಕ್ಷಣಾ ।
ಪ್ರಕಾಶದಲ್ಲಿ ಪರಮಾನಂದನಾ ಕಾಣಿಸಿಕೋ ನೋಡಣಾ ॥ ॥ ಜೀಜೀ ॥

ಇಳು ಇದರಲ್ಲಿ ಇಲ್ಲ ಏನೇನಾ । ಬ್ರಹ್ಮ ಸಾಧನಾ
ಇಲ್ಲದಿರಕ ನರಕ ಸ್ವಧ್ಯಾನಾ ॥ ॥ ಜೀಜೀ ೧ ॥

ಆನಂದ ಮೂರ್ತಿ ಆಗಿ ನೀನಾ
ಹೊಂದೊ ವಸ್ತುವಿನಾ ।
ಸತ್ತು ಹುಟ್ಟಿ ಬರುವುದು ಏಸ ದಿನಾ ॥ ॥ ಜೀಜೀ ೨ ॥

ಕಾಮ ನಾಟದಲ್ಲಿ ಬಂದು ಮಾಡ ಜತ್ತನಾ ।
ಬೆಳ್ಳ ಬೆಳತಾನಾ ಗಾಯನಾ ॥ ॥ ಜೀಜೀ ೩ ॥

ಏರು ತಿರುಗಿ ನೋಡ ಜಗಾ ಮರಗಸ ಬೇಡಾ ಇರಲಿ ಜರಾ ಆಸರಾ।
ಬಡವನ ಮೇಲೆ ನೆದರಾ ।
ಕೂಡಪಲ್ಲ ಈಸ ದಿವಸ ಈಕಿ ಎಲ್ಲಿ ಇದ್ದಳು ಇಂದ ಕಂಡೆ ಕಣ್ಣಾರಾ ॥
॥ ಜೀಜೀ ॥ ಚೌಕ ೨ ॥

ಏರ ಕ್ಯಾಂಪಿ ಜುಬ್ಬ ಮೈಯಲ್ಲಿ ಧರಿಸಿದಾನೋ ಮೈಗಿ ಬೂಧಿ ದರಶ್ಯಾನ।
ಗುಡ್ಡ ಗಂವಾರ ಸೇರ್‍ಯಾನೊ ।
ಆಧಾರ ಚಕ್ರ ಬಿಟ್ಟು ಅಡವಿ ಸೇರಿದಾನೊ ಅರಣ್ಯ ಮಾರ್ಗ
ಹಿಡಿದಾನೊ ॥ ॥ ಜೀಜೀ ॥

ಕಾಮಕ್ರೋಧ ಮದ ಮಚ್ಚರ ಲೋಭ ಅಹಂಕಾರ ಬಿಡು ಅಣ್ಣಾ
ಮಧ್ಯದಲ್ಲಿ ನಿಲ್ಲಣ್ಣಾ
ಆಸನವು ಬಲಿಸಿ ವ್ಯಸನದಿಂದ ನೀ ಹಸನವು ಮಾಡಿ ನೋಡಣ್ಣಾ॥
॥ ಜೀಜೀ ॥

ಅಳಿಯೋ ಅಳಿಯೋ ಆರು ಗುಣಗಳು ದುರ್ಜನೀ
ಇರತದನೋಡು ಈ ಘನಾ ।
ಕಾಣುದು ದೂರ್ತ ಲಕ್ಷಣಾ
ಕುಂಡಲಿಯೆಂಬು ಶರ್ಪ ತಿರುಗಿದರ ಬೆಳಕ ಬಿತ್ತ ನೋಡಣ್ಣ ॥

ಇಳು ಡೋಣಿಯ ದಂಡಿಲಿ ಡೋಣೂರ ಥಡಿ ।
ಅಲ್ಲಿ ನಡಿ ಶಿಲೇಮಾನ ಪೀರನ ಪಾದ ಹಿಡಿ ॥ ॥ ಜೀಜೀ ೧ ॥

ದಸ್ತಗೀರ ಕುಬೇದಾರ ಗಡಿ । ಡಪ್ಪ ಚಾಪ ಹೊಡಿ ।
ಏರಸಂದೇನು ಮುತ್ತಿನ ಕೊಡಿ ॥
ಬಸು ಹಸನ ಇಬ್ಬರು ಜೋಡಿ
ಹಾಡುವರು ಕವಿ ಮಾಡಿ
ಕುಂತ ಕೇಳರಿ ಅನುಭವದ ನುಡಿ ॥ ॥ ಜೀಜೀ ॥ ತಿರುನುಡಿ ॥

॥ ಪದಾ ॥ ಸುಟ್ಟಗಡಿಗಿ ಮಣ್ಣೀಗಿ ಕೂಡುದಿಲ್ಲ ॥

ತನುವಿನ ಗಡಿಗಿ ಮನವ ಬೇಧಿಸೋ ಮರವಿನೊಳಗ ಮನೀ ಮಾಡಿ।
ಕೆಡಗುಡಬ್ಯಾಡ ಈ ನುಡಿ ।
ಸುಟ್ಟ ಗಡಗಿ ಮಣ್ಣಿಗಿ ಕೂಡುದಿಲ್ಲಾ ಮೊದಲೇ ಅದು ಬಿಡಗಡಿಗಿ ॥ ಜೀಜೀ ॥
ಬ್ರಹ್ಮವೆಂಬು ಕುಂಬಾರ ಮಾಡಿದಾನೊ ತಿಳದ ತನ್ನ ಮನಸೀಗಿ
ಮುಂದ ಮಾಡುವ ಬಗಿ ।
ರಜ ಗುಣ ತಮ ಗುಣ ಸತ್ವ ಗುಣದಲ್ಲಿ ತಾನೇ ಬಿದ್ದ ಸಾಲಿಗಿ ॥
ಹೇ ಅಂತ್ರ ಆಕಾಶಲಿಂದ ಮಣ್ಣ ತಂದಾನೊ ತೋಸಿದಾನೊ ಒಳಿತಾಗಿ ।
ಕೆಸರವಾಯಿತೊ ಒಳೆ ಜಿಗಿ ।
ಪಂಚಕ್ಲೇಶವೆಂಬು ಲದ್ದಿ ಕೂಡಿಸಿ ತುಳದ ನೋಡ ಜಿಗಟಾಗಿ ॥
ತಾನೇ ವೇಣಿ ತಿಗರಿಯ ಮಾಡಿ ತಂದ ಶರೀರ ಬಡ್ಡಿಗಿ ।
ತಿರುವಿದಾನ ಒಳಿತಾಗಿ ।
ತಿರುವಿ ತಿರುವಿ ಬಾಳಕಷ್ಟ ಬಿಡುವನೊ ಅಷ್ಟದಳಗಳೆಲ್ಲ ಬಿಗಿ ॥

ಇಳು ಹೆಂತಾವ ನೋಡ್ರಿ ಕುಂಬಾರಾ
ತ್ರಿವಿಧ ಬರರಾ । ಹಾರಿತ ಜುಮ್ಮರಾ ।
ಬೆವರ ಒಡದಿತೋ ಆ ಇಂದ್ರಿ ಸ್ಥಳಾ ಬಿಟ್ಟಿತೊ ॥ ॥ ಜೀಜೀ ॥
ಆಸಿಕಾ ಚಕ್ರವನ್ನು ಇಳಿದು
ಮಣಿಪುರದ ಸರಿದು ಬಂತ ನಳ ಹಿಡಿದು
ಎಸಳ ಒಡರಿತೊ ಕಂಡ ಕ್ಷಣಕ ಕಮಲ ಅರಳಿತೊ ॥ ॥ ಜೀಜೀ ॥
ಆರಿತೊ ರಸಾ ಬಿಂದು ಕೂಡಿ ।
ಮೂರು ನಲಿದಾಡಿ। ಆಡಿತೊರಾಡಿ ।
ತಾನೆ ಇಂಗಿತೊ । ಇಲ್ಲಿ ತತ್ವ ಉತ್ಪನ್ನ ಆದಿತೊ ॥ ॥ ಜೀಜೀ ೩ ॥
ಏಕ ಯೋನಿ ವರ್ಗದಲ್ಲಿ ತಾನೇ ಜರಿದಾನೋ ಮುರಹರಿ ಮುದ್ರಿ, ಹಿಡಿ
ಬಾಯಲ್ಲಿ ಚರನ್ಯಾಡಿ
ಕೂಡಪಲ್ಲ ಸುಟ್ಟ ಗಡಗಿ ಮಣ್ಣಿಗಿ ಕೂಡುದಿಲ್ಲ ಮೊದಲೇ ಅದ ಬಿಡಗಡಿಗಿ ॥
॥ ಜೀಜೀ ಚೌಕ ೧ ॥

ಶಕ್ತಿ ಬೆಳಸಿ ತನ್ನ ಯುಕ್ತಿಯಲಿಂದ ಜ್ಞಾನದಿಂದ ಭೇದಿಸಿ ।
ಕಡೆಗಿ ಮಾಡಿದಾನೊ ಹಸಿ
ಹಂಗೆ ಒಯ್ದು ಅವಾ ಕೋಲಿ ತುಂಬಿದಾನ ಸಣ್ಣು ದೊಡ್ಡು ಸವಹರಿಸಿ ॥

ಬೇಡಿದವರಿಗೆಲ್ಲ ಹಂಗೆ ಕೊಡತಾನೊ ಆಗ್ಯಾವಂತಾನ ಹಸಿ ಬಿಸಿ ।
ಇದರ ಮ್ಯಾಲ ನಿಮ್ಮ ಕುಸಿ
ಅಟುಗೋಬೇಕಾದರ ಸುಟಗೋಬೇಕಪ್ಪಾ ಗುರುಪಾದಕ ಹೊಂದಿಸಿ ॥

ಇಳು ಗುರುವೆಂಬ ಆಮಗಿ ಹಾಕಿ ಹಚ್ಚೊ ಅದಕಬೆಂಕಿ
ಮುಂದ ಬಹು ಜ್ವಾಕಿ
ಅದನs ನೋಡಾನಾ ಸುಟ್ಟ ಶರೀರ ಹೋಗುದು ದುರ್ಗುಣಾ ॥ ೧ ॥

ನೀರ್ಹಾಕಿ ತೊಳಿಯೊ ಜಳ ಜಳಾ
ಬ್ಯಾರೆ ಅದರ ಕಳಾ ॥
ಅದರದು ತಳಾ ತೊಳಿಯೋ ಹಸನಾ ।
ವಲಿ ಗುಂಡ ತ್ರಿಕೂಟ ಆಸನಾ ॥ ॥ ಜೀಜೀ ೨ ॥

ಮನವೆಂಬು ಮರದಲಿ ಹಾರಸಿ ಅಕ್ಕಿಯನ ತಳಸಿ ।
ಹಳ್ಳವನು ಆರಿಸಿ
ಗಡಗ್ಯಾಗ ಹಾಕಣಾ ಬೇಧಾಗ್ನಿ ಬೆಂಕಿ ಮಾಡಣಾ ॥ ॥ ಜೀಜೀ ೩ ॥

ಚಿತ್ತ ಚಲ್ಲಾಟ ಉಲ್ಲಾಟ ಪದಾ ಮಾಡಿ
ಸಂಶೆಯೆಂಬುವ ಸ್ವಾರಿ ಸುಟ್ಟ ಆಗಲಿ ಬೂದಿ
ತಳ ಇಲ್ಲದ ಗಡಿಗಿ । ನೀರಿಲ್ಲದ್ದಡಗಿ
ಒಳಿತಾಗಿ ಬಂದಿತ ಕುದಿ ॥ ॥ ಜೀಜೀ ೪ ॥

ಕೂಡಪಲ್ಲ ಸುಟ್ಟ ಗಡಗಿ ಮಣ್ಣಿಗಿ ಕೂಡುದಿಲ್ಲಾ ಮೊದಲೇ ಅದ ಬಿಡಗಡಗಿ ॥
॥ ಜೀಜೀ ॥ ಚೌಕ ೨ ॥

ಹೇ ಆರು ಗುಣಗಳೆಂಬುವ ಆರಿಸೊ ಚಂಚಲಿ ಎಡಿಮಾಡಿ ಹಿಡಿ
ದೂರ ಹಾದಿ ।

ಇಗೆ ವಯ್ದಿನೊ ನಿಧಿ
ಜಂಬು ಗಡ್ಡಿ ದಾಟಿ ಹ್ಯಾಂಡ ನಡಿಯಬೇಕ ಜಮಾಸಿಗ ಮಕಾನದಿ ॥
॥ ಜೀಜೀ ॥

ಹೇ ಕಳ್ಳ ದಡಿಲೆ ಎರಡು ಶೆಳ್ ವಡದಿದಾವೊ ಅಲ್ಲೆ ತಪ್ಪುವುದೊ ಹಾದಿ ॥
ಎಡಗಡಿಯ ಹಿಡದೀ ।
ಬಲಕಿನ ನೇತ್ರ ಬಲಗಡಿ ಹಿಡದು ನೀ ಭಯಾಬಂದು ಜರದೀ ॥

ಇಳು ಅಲ್ಲೆ ಮುಂದ ಕಾಣುವುದು ಗುಡಿ ।
ನೋಡುತ ನಡಿ ।

ಹಿಡದ ಈ ಧಡೀ ಹೋಗಿ ತಪ್ಪನೋ
ತರ್ಕ ಹಿಡಿದು ತರುವ ತಾಲಿನೋ ॥ ॥ ಜೀಜೀ ॥

ಅಲ್ಲಿ ಭಕ್ತಿ ಭಾವ ಬಲಗೊಂಡು
ಈಶನ ಕಂಡು ನೋಡೊ ಮನಗಂಡು
ವಾಸ ನಮೀಸೋ । ನಮೊ ನಮೋಯೆಂದು ಸಾದಿಸೊ ॥ ಜೀಜೀ ೨ ॥

ಸುತ್ತ ದೇಶದೊಳಗ ಡೋಣೂರಾ ಆದಿತ ಹೆಸರಾ ।
ಶಿಲೇಮಾನ ಪೀರಾ ।
ಸತ್ವ ತೋರಿಸೊ ಬಸು ಹಸನಗ ವರುವ ಪಾಲಿಸೊ ॥ ಜೀಜೀ ૩ ॥
ತಿರನುಡಿ ॥ ಚೌಕ ૩ ॥

ಶಾಸ್ತ್ರ ಮಾತ ನೀ ತಗಿ

ಆಳಿ ಚ್ಯಾಳಿ ನೋಡಿ ಅಜಮಾಸ ತಿಳಕೊಂಡಿ ಬಿದ್ಯೋ ನನ್ನ ತೆಕ್ಕಿಗಿ।
ತೀರಿ ಹೋಗಲಿಂದೀಗಿ ।
ಸಾಮುದ್ರೇಕ ಲಕ್ಷಣಾ ಕೇಳತೀನಿ ಶಾಸ್ತ್ರ ಮಾತ ನೀ ತಗಿ॥ ಜೀಜೀ ೧ ॥

ಹೇ ಸ್ತ್ರೀಯರಲ್ಲಿರುವ ನಾಲ್ಕು ಜ್ಯಾತಿಗಳು ಹಸ್ತೀನ ಚಿತ್ತ ಪದ್ಮೀನಾ
ರೂಪದಲ್ಲಿ ಕಾಮೀನಾ ।
ಚಾಂಗುನಿ ಸ್ತ್ರೀಯಳು ಹ್ಯಾಂಗ ಇರುವಳೊ ನೋಡೋದು ತಲಕ್ಷಣಾ ॥
॥ ಜೀಜೀ ೨ ॥

ಹೇ ಪುರುಷನಲ್ಲಿರುವ ನಾಲ್ಕು ಗುಣಗಳು ಸರಿಗೂಡಿಸಿ ನೋಡಣ್ಣಾ
ಈ ಮಾತ ಸುಳ್ಳಲ್ಲಣ್ಣಾ।
ದಾವ ಸ್ತ್ರೀಯರಲ್ಲಿ ಪುರುಷ ಹೋದರ ಕಿರಕ ನೋಟಕನೆಪ್ಪಣ್ಣಾ॥
॥ ಜೀಜೀ ೩ ॥

ಹೇ ಏಸ ಕಳಿಯ ಸರ್ವಂಗ ರೂಪಕ ತಗಿಯೋ ಆಕಿಯ ವರುಣಾ
ಬೇಡತಾಳೊ ಪುರುಷನ।
ತತ್ವಕ ಸರಿಯಾಗಿ ತಂದಕೊಡಬೇಕೊ ಆಕಿ ಬೇಡಿದ ಅರಸನಾ ॥ ೪ ॥

ಇಳು ಬೆನ್ನ ಕುಮಕ ತಗೊಂಡು ಬಂದು ನಿಂತಿದಣ್ಣಾ ಹಾಡುದಕಾ
ಇನ್ನ ತೀರಿ ಹೋಗಲೋ ನಮ್ಮ ನಿಮ್ಮ ಬೆಳಕ
ನಿಮ್ಮದೆಲ್ಲ ತಿಳದದಣ್ಣಾ ಬಂದಿರಣ್ಣಾ ಜಗಳಕ
ಚಿತ್ತಿನಿ ಸ್ವಾತಿ ಸ್ತ್ರೀಯಳಿಗಿ ಹದಿನೆಂಟ ಕಳಿಯ ಆಕಿಗಿ
ಕಾಮನಾಟಕ ಒಪ್ಪುವ ಪುರುಷನಿಂತ ಮರುಳಾಗಿ ॥ ಜೀಜೀ ॥
ಪದ್ಮಿಣಾ ಲಕ್ಷಣಾ ಅದು ಹ್ಯಾಂಗ ಇರುವುದು
ನಡದರ ಪಾದ ಆಕಿ ಹೆಜ್ಜಿ ಯೋಗ ಮಾಡುವುದು
ಆಕಿ ದೃಷ್ಟಿ ಕಮಲಗಳು ದಾವ ಪರಿಯ ಹೊರಳುವದು
ದರ ನೆರಳಬಿದ್ದಿತ ಆಕಿಗಿ । ತಾಜನಸಿ ಬಂದಾಳ ದರುನಿಗಿ।
ಸೌಭಾಗ್ಯದಂತೆ ಸಂಪತ ತನ್ನ ಪುರುಷನಿಗಿ ॥ ಜೀಜೀ ॥

ಏರು ಹೇ ಪತಿ ಕೇಳೋ ಜೋತಿಷ್ಠನಲ್ಲಿ ಹೋಗಿ
ಚಲೋ ಮೂರ್ತವನ್ನು ತಗಿ । ಹೋಗುದಕ ಹಾಸಿಗಿ ।

ಕೂಡಪಲ್ಲ ಸಾಮೋದ್ರಿಕ ಲಕ್ಷಣಾ ಕೇಳತಿನಿ ಶಾಸ್ತ್ರಮಾತ ನೀ ತಗಿ ॥ ಜೀಜೀ ೧ ॥

ಸತಿ ಪತಿ ಹಿತದಿಂದ ಕೂಡುವಾಗ ಎಷ್ಟ ಇರಬೇಕೋ ರಾತರಿ ।
ನೋಡಿ ಹೇಳೋ ಸರಾಸರಿ ।
ಒಂದೇ ಅಮಲದಲ್ಲಿ ಹೋಗಿ ಕೂಡಿದರ ಬಿಂದು ಆಗುವದು
ಯಾವ ಪರಿ ॥ ಜೀಜೀ ॥

ಹೇ ಒಂದನ ಮೀರಿ ಎರಡಕ ಕೂಡಿದರ ಹೆಣ್ಣ ಗಂಡ ನೋಡರಿ ।
ಹಿಡದ ಹಾದಿ ಬಿಟ್ಟರಿ ।
ನಪುಂಸಕಲಿಂದ ಹ್ಯಾಂಗ ಜನಸತದ ಹೇಳುದು ಅದಽಬಲ್ ಬಿರಿ ॥
॥ ಜೀಜೀ ೨ ॥

ಒಂದ ದಿವಸಕ ಹನ್ನೆರಡು ತಾಸುಗಳು ಘಳಿಗೆಗೊಮ್ಮೆ ಕೂಡರಿ
ಗಣಿತವನ್ನು ಕಟ್ಟಿರಿ ।
ಕುರುಡ ಕುಂಟ ಮೂಕರು ಗರ್ಭದಲ್ಲಿ ಜನಿಸಿದಾರೋ ಯಾವ ಪರಿ ॥

ಇಳು ಮತ್ತು ತಾಸಿನ ಮ್ಯಾಲ ಎಷ್ಟು ದಿವ್ಸ ಹಸಿಯವಿರುವುದು
ಎಷ್ಟ ತಾಸಿನ ಮ್ಯಾಲ ಆ ಬೀಜ ಹಸಿಯ ಹೋಗುವುದು ।
ಕಮಲರಳಿ ಕುಂತಿತ ಬಾಯಿ ಬಿಚ್ಚಿ
ಆ ಬಿಂದು ಇಂಗಿದರ ಮುಚ್ಚಿ
ಹಾಲಿಲಿಂದೆ ಬೆಣ್ಣೆ ಬರುವುದು ಕರೆಮತ್ತ ಗಚ್ಚಿ॥ ॥ ಜೀಜೀ ೨ ॥

ತಿರನುಡಿ ಪತಿ ಕೇಳೋ ಜೋತಿಷ್ಯನಲ್ಲಿ ಹೋಗಿ। ಚಲೋ ಮೂರ್ತವನ್ನ ತಗಿ।
ಹೋಗುದಕ ಹಾಸಿಗಿ।
ಸಾಮೂಹಿಕ ಲಕ್ಷಣ ಕೇಳತೀನಿ ಶಾಸ್ತ್ರಮಾತನೀ ತಗಿ ॥
॥ ಜೀಜೀ ॥ ಚೌಕ ೨ ॥

ತಾಯಿ ಹೃದಯದಲ್ಲಿ ಪಿಂಡ ಜನಿಸುವಾಗ ಮುಖಾ ಇರುವುದು
ಯಾವ ಕಡಿ।
ತಗಿಯ ಬೇಕೋ ಇದರ ತೋಡಿ ।
ಯಾರ ಬಲ್ಲಿ ಇದರ ಜವಾಬ ಹೊಂಡತದ ಹೌದ ಅಂತೀನಿ ನನ್ನ
ಗಡಿ ॥ ॥ ಜೀಜೀ ॥

ಬಾಳ ಮಂದಿ ಹರದಾಸರೆಲ್ಲಾ ಹಾಡತಾರೋ ಕವಿ ಮಾಡಿ ।
ಆಗತಾರೋ ಪುಡಿ ಪುಡಿ
ಹಗಲರಾತ್ರಿ ಬಂದು ಹಲಬಿ ಹೋಗತಾರ ಏನೂ ಇಲ್ಲದೆ ಒದರ್ಯಾಡಿ ॥
॥ ಜೀಜೀ ॥

ಹೇ ನೀವೊಂದ ಬೈದರ ನಾವೊಂದು ಬೈತೀನಿ ನಾವು ನೀವೇ ಹಾಕ್ಯಾಡಿ।
ತಿಳಿಯಲಾರದೆ ಈರ್ಯಾಡಿ।
ಕುಂತ ನೋಡುವವರದು ಏನು ಹೋಗುದು ಹೋಗೂನು
ನಡಿಯೊ ಮನಿಯಕಡಿ ॥ ಜೀಜೀ ॥

ಇಳು ಸುತ್ತ ದೇಶದೊಳಗ ಹೆಸರಾಯಿತ ಕೇಳಽ ಡೋಣೂರಾ ।
ಶಿಲೆಮಾನ ಸಾಯಿಬಾ ನೆನದಾನೊ ಸತ್ಯಳ್ಳ ಪೀರಾ ।
ಆತನ ಭಜನಿ ಮಾಡಿದರ ಪಾಪಾಗುದು ಪರಿಹಾರಾ

ಬಂದ ಕಂಟಕ ಆಗುವುದು ಬೈಲಾ।
ಆತನ ಸೇವಾ ಹಗಲೆಲ್ಲಾ ।
ಆತನ ಸ್ತೋತ್ರ ಮಾಡಿದರ ಆಗುವನೋ ಸಾಮೀಲಾ॥
ಬಸು ಹಸನ ಹಾಡತಾರ ಕವಿಗಳು ಕಟ್ಟಿ ನೇಮಾ ।
ಎಂದೆಂದಿಗಿ ಮರಿಲಾರೆ ತಾಯಿ ಸರಸ್ವತಿ ನಾಮಾ ।
ಚಿಕ್ಕಂದಿನಿಂದ ವರುವವಿದೆ ಎನ್ನ ಮ್ಯಾಲ ಪ್ರೇಮಾ ।
ನೀ ಕೊಟ್ಟ ಬುದ್ದಿ ಇಟ್ಟಿಲ್ಲಾ । ಕುಣಂಕಾರದೊಳಗಿನ ಶೀಲಾ ।
ಅಂತರಂಗದೊಳಗ ಅನುವಾದದ್ದು ಬಿಟ್ಟಿಲ್ಲಾ॥ ॥ಜೀಜೀ॥

ಏರು ಪತಿ ಕೇಳೋ ಜೋತಿಷ್ಯದಲ್ಲಿ ಹೋಗಿ ಚಲೋ ಮೂರ್ತವನ್ನು ತಗಿ
ಹೋಗುದಕ ಹಾಸಿಗಿ

ಕೂಡಪಲ್ಲ ಸಾಮುದ್ರಿಕ ಲಕ್ಷಣ ಕೇಳತೀನಿ ಶಾಸ್ತ್ರಮಾತ ನೀ ತಗಿ ॥ಜೀಜೀ ೩॥

ಹೆಣ್ಣ ಕಂಡಿನೊಂದ

ಹೆಣ್ಣ ಕಂಡಿನೊಂದ ಬಣ್ಣ ಗುಲಾಬಿ । ಕಣ್ಣಿಗಿ ಹಚ್ಯಾಳೊ ಕಾಡಿಗಿ
ಧಡಿಯ ಸಣ್ಣ ಮಲ್ಲಿಗಿ ।
ಕಾಲೊಳು ಪೈಜಣ ನುಡಿಸುತ ಜಣಝುಣಾ ಕಾಲುಂಗರ ಬೆರಳಿಗಿ ॥
॥ ಜೀಜೀ ॥

ಸೀರಿ ಉಟ್ಟಾಳೊಂದ ಚಂದ್ರಕಾಳಿ । ಕುಪ್ಪಸ ಮೈಯಿಗಿ ।
ಒಪ್ಪತಾವ ನಾರಿಗಿ ।
ತೋಳ ತಿರವಿ ಕೈಬೀಸಿ ಹ್ವಾದರ ನೋಡಿ ನಿಂತೆನೊ ಗಾಭಾಗಿ ॥ ಜೀಜೀ ॥

ವಸ್ತ್ರ ಅಲಂಕಾರ ಎಷ್ಟ ಹೇಳಲಿ । ಗೆಜ್ಜೆ ಟಕ್ಕೆ ಕೊರಳಿಗಿ
ಬುಗುಡಿ ವಾಲಿ ಕಿವಿಗಿ ।
ಚಂದದಿಂದ ಚದುರಿನ ನೋಡಿದರ ತುರುಬಿನಲ್ಲಿ ಕ್ಯಾದಿಗಿ ॥ ಜೀಜೀ ॥

ಇಳು ಎಷ್ಟಂತ ನೋಡಲಿ ಈಕಿ ರೂಪಾ । ಬಂತ ತಾಪಾ ।
ಕೈಕಾಲ ನೋಡಿದರ ಸೈ ಪ್ರಾಯ ಏನ ಹೊಳಪಾ ।
ಈಕಿ ರೂಪ ನೋಡಿ ನನ್ನ ಕಣ್ಣ ಮುಚ್ಚತಾವ ಗಪ್ಪಾ ॥ ಜೀಜೀ ॥

ಹೆಜ್ಜಿ ಒಗುವತಾಳ ಚಪಾ ಚಪಾ । ತಾರೀಪಾ ।
ಸಣ್ಣ ಕುಚ ನಾರಿಗೆ ವಪ್ಪ್ಯಾವ ಅಪರೂಪಾ ।
ಕೈ ಹಚ್ಚಿ ನೋಡಲೇನ ಮನದಾಗ ಬಾಳ ಅಕ್ಷೇಪಾ ॥ ಜೀಜೀ ॥

ಏರು ಹೇ ಸ್ವತಃ ನೋಡಿದರ ಸೂರ್ಯ ಚಂದರಾ
ಇಳದ ಬಂದಾಂಗ ಭೂಮಿಗಿ। ಕಸರ ಇಲ್ಲೊ ನಾರಿಗಿ
ಕೂಡಪಲ್ಲ ಕಾಲೊಳು ಪೈಜನ ನುಡಿಸುತ ಝುಣ ಝುಣಾ ಕಾಲುಂಗುರ
ಬೆರಳೀಗಿ ॥ ॥ ಜೀಜೀ ಚೌಕ ೧ ॥

ಏರ ಹೇ ಸಂದಿ ಗೊಂದಿ ಕೇಳುತ ಮುಂದಿನ ಶೋಧ ಮಾಡತಾರಣ್ಣಾ
ದಾದ ಹತ್ತವಲ್ಲ ದಣ್ಣಾ
ಗೌರಿ ಮನಿಯ ದಾವ ಓಣ್ಯಾಗೈತಿ ದಾವಲ್ಲಿ ಇರತಾಳಣ್ಣಾ॥
॥ ಜೀಜೀ ॥

ಏ ಕೇಳಿದರ ಯಾರು ಹೇಳುವದಿಲ್ಲಾ ಕೇರಿಗಿ ಹೋಗಬೇಕಣ್ಣಾ।
ಆರ ತಾಸ ಮದ್ಯಾನಾ
ಇದರ ಹೊರತ ಮತ್ತೆಲ್ಲಿ ಸಿಗುವದಿಲ್ಲ ನೀರಿಗಿ ಬರತಾಳಣ್ಣಾ
॥ ಜೀಜೀ ೨ ॥

ಕಾವಲ ಮಾಡುತ ಕುಂತಾರಿ ಏಂಟುದಿನಾ ನೆಂಟ್ರಂದ್ರ ಬರಲಿಲ್ಲಣ್ಣಾ।
ಪ್ರಾಣ ಹತಿವಾಯಿತಣ್ಣಾ
ಇನ್ನೊಂದೆರಡ ದಿವಸ ಆದರs ಇದೇ ಗೋರಿಗೆ ಹೋಗುದು ಹೆಣಾ ॥
॥ ಜೀಜೀ ೩ ॥

ಇಳು ನಾರಿ ಹೊಂಟಾಳ ಕಿಲಿಕಿಲಿನಗುತಾ । ಕೊಡಹೊತ್ತs।
ನಾರೇರು ಆಕಿಯ ಸುತ್ತ । ಏನ ಸಿಸ್ತಾ ।
ನಲದಾಡುತ ಹೊಂಟಾಳ ಸಂಜೀಯ ಒಂಬತ್ತ ಸುತ್ತಾ ॥ ಜೀಜೀ ॥

ಧೈರ್ಯ ಮಾಡಿ ಇದರಿಗೆ ನಿಂತ । ಕೇಳುತ ।
ನಿಂತಾಡ ಏರಡ ಮಾತ । ನಿನ್ನಂತ
ನಿನ್ನ ಕಾಲಾಗ ನನ್ನ ಪ್ರಾಣ ಕೆಡುವುದು ಬಂತಾ ॥ ॥ ಜೀಜೀ ೨ ॥

ಎಂಟ ದಿವಸ ಆಯಿತ ಇಲ್ಲೆ ಕುಂತ । ಕಾಯುತ
ನೀ ಹೇಳಿದ್ದಂಗ ಕೇಳುತ । ನಿನ್ನ ಮಾತ ।
ಆ ನಾರಿ ಹೇಳತಾಳ ನಮನ್ಯಾಗ ಹೆಂಡಿ ಬಳಿಯಂತಾ ॥ ಜೀಜೀ ॥

ಏರು ಆದರ ಆಗಲಿ ನೋಡೂನು ಅಂದಾನು ಹೋಗಬೇಕಂದ ನಾಳೀಗಿ ॥
ಮುಂದs ಮಾಡುನು ಇದರ ಬಗಿ ।
ಕೂಡಪಲ್ಲ ಕಾಲೊಳು ಪೈಜನಾ ನುಡಿಸುತ ಝುಣ ಝುಣಾ ಕಾಲುಂಗರ ಬೆರಳೀಗಿ ॥
॥ ಜೀಜೀ ಚೌಕ ೨ ॥

ಮುಂಜಾನೆದ್ದು ಅವs ಜಳಕ ಮಾಡಿದಾನೊ ಹೋಗಬೇಕಂದ
ಮನದಾಗ ।
ಧೋತರ ಮರತ ಅಡ್ಯಾಡಗ ।
ಕುಶಿಯ ಬಂದು ಕುಂಡ್ಯಾಗ ಹೊಕ್ಕಿತೊ ಬತಲೆ ಹೋದ ಗುಡಿಯಾಗ ॥
ಪೂಜಿ ಮಾಡುತ ಕೂತಿದ್ದ ಪೂಜಾರಿ ಹೊಳ್ಳಿ ನೋಡಿದನಾವಾಗs।
ನೆದರ ಬಿತ್ತೊ ಅದರ ಮ್ಯಾಗs।
ಮದ್ಯಾನ್ಹಾದೊತ್ತಾ ಸ್ವಾಮಾನ ನೋಡಿ ಬೊಬ್ಬಿ ಹೊಡದ ಗುಡಿಯಾಗ ॥
ಗಾವಳ್ಯಾದಿತ ಬಂದ್ರೋ ಹುಡುಗರು ನೋಡತಾರೊ ಆವಾಗs।
ಬತಲೆ ನಿಂತಿದ್ದ ಗುಡಿಯ್ಯಾಗ ।
ಮದಲೆ ಸ್ವಲ್ಪ ಕರ್‍ರದ ಮನಷ್ಯಾ ನೆರಿಯ ಒಡದಾವ ಮುಕಳ್ಯಾಗ ॥
ಕುಂಡಿ ಬಿಂಡಿ ನೋಡಿ ಹೆಂಡಿ ಬಡಿದಾರೋ ಮೊದಲೆ ಬೆರಕಿ
ಗೊಳಸಂಗ್ಯಾಗ ।
ಮೆರಸುತ ತಂದ್ರೊ ಊರಾಗ ।
ಚಾವಡಿ ಮುಂದ ಅವನ ಅಬರು ಕಳದರೊ ಕಜಿಲ ಮಾಡಿ ಬಿಟ್ರೊ
ಜನದಾಗ ॥

ಇಳು ಡೋಣೂರ ಪದಾ ಬಲೆ ತೊಡಕ ಬತ್ತದಾಕಾ ।
ಸೀಲೇಮಾನ ಸಹದೇವ ಇರುವ ತನಕಾ । ಅನ್ಮಾನಾ ಯಾಕಾ ।
ಮರ್ತುಜಾ ವಸ್ತಾದರ ಬೆನ್ನ ಹಿಂದ ನಮಗ ಕುಮಕಾ ॥
ಹಿಂಗ ನಡಿಲಿ ಬೇಗು ಬೆಳತನಕ ಚಂತ್ಯಾಕ ।
ತುಣ ತುಣಿ ಸಪ್ಪಳ ಕಡಿತನಕ । ಹೋಡ್ಯಾಕ ।
ಬಾಣಿಗಿ ಬಾಣ ಬೀಳಲೆಪ್ಪ ಸಾವುತನಕ ॥ ॥ ಜೀಜೀ ॥

ಏರು ದಸ್ತಗೀರ ಹೀಂಗ ಸೂರ ಹಿಡದಾನು ಹಾಡಿಹರಸುವೆ ನಿನ್ನ ಹೋಗಿ
ಮಾತ ಅಲ್ಲಿ ಇದು ತಗಿ

ಕೂಡಪಲ್ಲ ಕಾಲೋಳು ಪೈಜಣ ನುಡಿಸೂತ ಝುಣ ಝುಣಾ ಕಾಲುಂಗರ
ಬೆರಳೀಗಿ ॥ ॥ ಜೀಜೀ ಚೌಕ ೩ ॥

ಚಂದ್ರನಂತ ಚಲುವ

ಚಂದ್ರನಂತ ಚಲುವನ ಕಂಡು ಚದುರಿ ಬೆದರಿ ನಿಂತಾಳ ನಾರಿ
ಇದರ ಸದರ ನೈನ ಆದ ಶಡಕ ॥ ॥ ಜೀಜೀ ॥ ಪಲ್ಲ ॥

ಸಿಂಧಿ ಕಟ್ಟಿ ಮುಂದ ಬಸರಿ ಗಿಡಾ ಎಡಕ
ಊರಾನ ಹೆಂಗಸರು ಬಂದಾರ ಅವನ ನೋಡಾಕ ।
ಬಾಳ ಮಂದಿ ಬಾಲೇರ ಬಂದು ಭ್ರಾಂತಿಗೆಟ್ಟು ಕರುವತಾರ
ಒಂದೇ ಚಂದ ಗೀಗೀ ಪದ ಹಾಡಾಕ ॥ ॥ ಜೀಜೀ ॥

ನೂಲು ರಾಟಿ ಕದರ ಬಿಟ್ಟು ಕಬ್ಬಲಗೇರ ಸಕ್ರಿ ಬಂದು
ಕರಕರ ಮುಂಡೇರಽಂಗ ಬಾಯಿ ತೆರೆದು
ಅವನ ಮ್ಯಾಲ ಬೀಳತಾಳ ಹೋಗಿ ಮುರದ
ಜಾಣ ಜೀವಕಂಜಿ ನಿಂತ ದೂರ ಸರದಽ
ಮುಲ್ಲಾ ಹಸು ಹಿಂಡುದು ಬಿಟ್ಟ
ಎದ್ದ ಓಡಿಬರುವಾಗ ಆಕಳ ಒದ್ದು ಮುಂದಿನ ಹಲ್ಲ ಮುರದ ॥ ಜೀಜೀ ॥

ನಾಯ್ದಿರ ಸಂಗಿ ಕುರಬರ ಗಂಗಿ ಮಾದರನಿಂಗಿ ಹೇಳತಾಳ
ಜಲ್ದಿ ಬಾರಽ ಕಲ್ಲಾನ ಹಿಟ್ಟ ತಗದ ।
ನಾವು ಮೂವರು ಕೂಡಿ ಹಿಡಿಯೋಣಂತ ಬಿಗದ।
ನಲ್ಲ ಹೋಗತಾನ ಕೈಯೊಳಗ ಸಿಗದಽ।
ಆರೇರ ಸಖ್ಖಿ ತಳವಾರ ತುಕ್ಕಿ ಕಕ್ಕಾ ಬಿಕ್ಕಿ ನೋಡತಾರ
ತುಂಬಿದ ಕೊಡಾ ನಿಂದ್ರಾ ಕಿಲ್ದ ಒಗದ ॥ ॥ ಜೀಜೀ ॥

ಪಿಂಜಾರ ಪೀರಿ ಬಳಗಾರ ಈರಿ ಹೌಹಾರಿ ಬರುವಾಗ
ದಿಡ್ಡಿ ಬಾಗಲ ತಟ್ಟಿ ಬೆನ್ನ ತರದ।
ಬಡಿಗೇರ ಭೌರಿ ಕುಂತಿದಾಳೊ ಮೈನೆರದ ।
ಅರಿಷಣ ಮೈಲೆ ಬಂದಾಳಣ್ಣಾ ಕ್ವಾಟಿ ಜಿಗದ ।
ಮುಸಲರ ಹುಸನಿ ವ್ಯಸನ ಹತ್ತಿ ಉಸರ ಹಾಕಿ
ಕರೆಯತಾಳ ಚದರನಿದರ ನಿಂತ ಕೈಮುಗದ॥ ॥ ಜೀಜೀ ॥

ಇಳುವು ಹಡದ ಮೂರ ದಿನಾ ಆಗಿಲ್ಲ ಕಬರಹಾರಿ ಕುಂಬಾರ ರಾಮಿ
ಗೆಣ್ಯಾ ಸಿಗವಲ್ಲ ದಿಕ್ಕ ತಪ್ಪಿ । ತಿರಗ್ಯಾಳ ಏಳೂರು ಸೀಮಿ ॥ ಜೀಜೀ ॥

ಬಣಗಾರ ಭವಾನಿ ಕೊಂಡಗೂಳಿ ಕುಂಬಾರ ಸ್ವಾಮಿ
ಮನ್ಮಥ ತಲಿಗೇರಿ ತಿರಗತಾಳ ಸೀಮಿ ಸೀಮಿ ।

ಏರು ಹೊಲ್ದಾಗ ಇದ್ದ ಹೊಲೇರ ಈರಿ ಎದ್ದು ಓಡಿ ಬರುವಾಗ
ಹೆಸರ ಬಳ್ಳಿ ಬಿದ್ದಾವು ಕಾಲಿಗಿ ತೊಡಕಾ

ಸೀರಿ ನಿಲಗಿ ತಟ್ಟಿ ಸಿಕ್ಕಾವು ಬಾರಿ ಗಿಡಕ
ಮುಂಗಾರಿ ಕೊಯ್ಲಿ ತಟ್ಟಿ ಉರುಳಿ ಬಿದ್ದಾಳ ಬುಡುಕ ।
ಕೂಡಪಲ್ಲ ಬಾಳ ಮಂದಿ ಬಾಲೇರ ಬಂದು ಭ್ರಾಂತಿಗೆಟ್ಟು ಕುರವತಾರ ॥
॥ ಜೀಜೀ ॥ ಚೌಕ ೧ ॥

ಏರು ಅಯ್ಯೋಳ ಸಿದ್ದಿ ಗೆಣ್ಯಾನ ಮುದ್ದಿ
ಬಹಳ ಕೇಳತಾಳ ಕೈ ಒಯ್ದು ಗಲ್ಲಕ ।
ಅವಗ ಕಣ್ಣ ಚಿವುಟಿ ಕರುವತಾಳ ಮೆಲ್ಲಕ
ಇಲ್ಲೆ ಹೋಗುನು ನಡಿರಿ ಊರ ಮುಂದಿನ ಹೊಲಕ
ರಡ್ಯಾರ ರಾಯಿ ಜಾಡರ ಬಾಯಿ ಬಿದ್ದುಗಾಯಿ ತೋರಸ್ತಾರ
ಓಡಿ ಬಂದು ಆ ದೇವಲ್ಲs ಹಲಕs ॥ ಜೀಜೀ ॥

ಚಪ್ರೇರ ಕಾಸಿ ಅಂತಾಳ ಬೇಸಿ । ಗಂಡ ಹೋಗ್ಯಾನ ಪರದೇಸಿ
ಮನಿಯಾಗ ಯಾರ ಉಳಿದಿಲ್ಲಾ ಸಿಲ್ಲsಕ ।
ನಲ್ಲs ಇಂದು ನಡಿರಿ ನಮ್ಮ ರಂಗ ಮಹಲಕ
ನಿನಗ ಬಿಟ್ಟರs ಬಂತು ನಮ್ಮ ಕುಲಕ ।
ಲಮಾಣ್ಯರ ಚೊಂಗಿ ಬಿಂಗಿ ಹಿಡದು ಅವನದು ಹರದಾಳ ಅಂಗಿ ।
ಬಂದು ನಿಂತಾಳ ಅವನ ಎಡಬಲಕ ॥ ॥ ಜೀಜೀ ॥

ಜಾತಗಾರ ರಾಜಿ ಕಟಗರ ಕಾಜಿ ಡೊಂಬರ ಗಿರಜಿ
ಬ್ಯಾಸತ್ತು ಕೈ ಊರಿ ಕುಂತಾರ ನೆಲಕ ।
ದಾಸರ ಗಿರಿಜೆ ಬಂದು ಹೇಳತಾಳ ಶ್ಲೋಕ ।
ಅವ ಮಾರಿ ಎತ್ತಿ ನೋಡವಲ್ಲ ಮೇಲಕ ।
ಚಂಚರ ಕಂಡಿ ಅಂತಾಳ ಮಿಂಡಿ ದೂದಿ ಉಂಡಿ
ಹಿಡಿ ಹಿಡಿ ಬೆಂಕಿ ಹೊಡದದ ನೋಡು ಎನ್ನ ಚನಕ ॥ ॥ ಜೀಜೀ ೩ ॥

ಇಳುವು ಬಾಗೊಂಡರ ಮತ್ತಿ ಅಂತಾಳ ಬುಕಿಟಗಾರ ಲಾಲಿ
ಬಾಳಿ ಹಣ್ಣ ತಂದುಕೊಡು ಬಲದೂರ ಇವರ ಮ್ಯಾಲೆ ॥ ಜೀಜೀ ॥

ರಜಪೂತರ ಅಂದಿ ಅಂತಾಳ ಒಕ್ಕಲಿಗೇರ ಕಲ್ಲಿ ।
ಸಾಲ ಆದರ ಚಿಂತಿಯಿಲ್ಲ ಹೊಚ್ಚಬೇಕ ಇವಗ ವಲ್ಲಿ ॥ ಜೀಜೀ ॥

ಹಸಿ ಕುಶಿಲಿಂದ ಇರೂನಂತಾsಳ ಅಗಸರ ನೀಲಿ ।
ಎದರಾಗ ಏನೂ ಇಲ್ಲ ಇಟಗೋ ಅಂತಾಳ ಮುರು ಜೋಲಿ ॥
॥ ಜೀಜೀ ॥

ಏರು ಮಾರವಾಡಿ ಹಿನ್ನೆಲಾಡಿ ಇವಗ ನೋಡಿ ನಗತಾಳ ।
ಆಗ ಬಂದು ನಿಂತಾಳ ಎಡ ಬಲಕ
ಝುರದ ಗಗ್ಗರಿ ಉಟಗೊಂಡು ಲಾಲಾಬಡಕ
ಹಿಂಬರಕಿಲೆ ಕುಪ್ಪಸ ತೊಟ್ಟ ಬೆನ್ನ ನೋಡಕ

ಕೂಡಪಲ್ಲ ಬಾಲೇರು ಬಂದು ಭ್ರಾಂತಿಗಟ್ಟು ಕರೆಯತಾರ
ಒಂದೇ ಚಂದ ಗೀಗೀ ಪದ ಹಾಡಾsಕ ॥ ॥ ಜೀಜೀ ॥ ಚೌಕ ೨ ॥

ಬ್ರಾಹ್ಮಣರ ತುಳಸಿ ಆರೇರ ಕಳಿಸಿ । ಬಾಯಿ ತೆರದ ಆಕಳಿಸಿ
ಮೈಯ ಎತ್ತಿ ಒಡಮುರದು ಬಗಲ ।
ಕೈ ಮಾಡಿ ಕರುವತಾರ ಹಾಡ ಹಗsಲs।
ನಿಂದ ದಸಿಂದ ತಂದಿವಿರಿ ತುಂಬಿದ ಗಲ್ಲಾs
ಸುಬ್ಬಿ ಶಂಕರಿ ಇಬ್ಬರು ಕೂಡಿ
ಹಬ್ಬ ಹಾಕಿ ನೋಡತಾರ ಮ್ಯಾಲ
ಹರದ ಬಿದ್ದಂಗಾತ ಮುಗsಲs
ಪತ್ತಾರ ರುದ್ರಿ ಒತ್ತರ ಮಾಡಿ
ಕತ್ರಬಿತ್ರಿ ಬರುವಾಗ ಜನ ನೋಡಿ ನಿಂತಿತ ದಿಗಲ
ದೇವಿ ಅಂತಾಳ ಮಾಡೋ ನೀ ತಗಲಾs
ಬಣಜಿಗೇರ ಬಸಲಿಂಗಿ ಕರದರs ಬರಲವಲ್ಲಂತ
ಅಂಬರಿಸಿ ಕಡದಾಳ ಗಲ್ಲದ ತೊಗಲs
ಜೀರಗ್ಯಾನಿ ಕೊರವೇರ ಮಾನಿ ಕೈ ಹೊಡದು
ನಗುವಾಗ ಹಿಡದಂಗಾತು ಇಂಗ್ರೇಜರ ಬಗಲಾ ।
ಉಪ್ಪಾರ ಕೇಡಿ ಬಂದಾಳ ಓಡಿತುಪ್ಪಾ ಹಚಗೊಂಡತಲಿ।
ತೊಳಕೊಂಡಿಲ್ಲಾ ಅಟಗಾಳ ಹಚ್ಚಿದ ಕೂದಲ ॥ ॥ ಜೀಜೀ ॥

ಇಳುವು ಬಾವಾಗೊಳ ಜಂಗಲಿ ಅಂತಾsಳ
ಹೋದ ಸೀರಿ ಸೋಟ
ಮನಿ ಮಜಾಡಿ ಹುಡಕತಿನಿ ಇವತ್ತ
ಬಿದ್ದಿನಿ ನಾs ಗಂಟs
ಕುಂಚಿ ಕೊರವೇರ ಕೊಳವಿ ಬಂದು
ಹೇಳತಾಳ ನೋಟ
ನನ್ನ ಮನದಾನ ಮಾತ ಹೇಳರಿ ಆಗಬ್ಯಾಡ ಸಿಟ್ಟಾ
ಗೊಲ್ಲಕ ಗುಲಾಬಿ ಬಿಚ್ಚ್ಯಾಳ ವೈಧ್ಯದ ಗಂಟಾ
ಯಾವ ಜೀನಸು ಬೇಕು ತಗೋರಿ ನಿಮ್ಮ ಕೈಮುಟ್ಟಾ ।

ಏರು ಅಷ್ಟ ಮಂದಿ ಹೆಂಗಸರು ಕೂಡಿ ಘಾಸಿ ಮಾಡಿ ಒಯ್ಯಬೇಕಂತ
ನೆರದಾರಣ್ಣಾ ಬಸರಿ ಗಿಡದ ಎಡಕ ।
ಇಬ್ಬರು ಮೂವರು ಬಂದು ಹಾಯ್ದಾರ ಅವನ ನಡಕ ।
ಸರಗಾರ ಚೆಂದಿ ಬಂದು ಹಿಡದಾಳ ಅವನ ಹೆಡಕ ।

ಕೂಡಪಲ್ಲ ಬಾಳ ಮಂದಿ ಬಾಲೇರ ಬಂದು ಭ್ರಾಂತಿಗೆಟ್ಟು ಕರೆಯತಾರ
ಒಂದೇ ಚಂದ ಗೀಗೀ ಪದ ಹಾಡುದಕ ॥ ॥ ಜೀಜೀ ಚೌಕ ೩ ॥

ಚಕ್ಕಡ

ನಮ್ಮ ನೆರಮನಿ ಬಂದ ನೀ ಇರತಿ ।
ನಾ ಕರದಾಗ ಬೆನ್ನ ಹತ್ತಿ ಬರತಿ ॥ ॥ ಜೀಜೀ ॥

ಬ್ಯಾಡಂದ್ರ ಯಾಕ ಇಲ್ಲಿ ಬಂದಿ ।
ಬಂದ ಡೊಗ್ಗತಿ ಸಂದಿ ಗೊಂದಿ ।
ನಿನಗ ಉಗಳ್ಯಾರ ಊರಮಂದಿ ॥ ॥ ಜೀಜೀ ॥

ಬಂದರ ಯಾಕೆ ಇಲ್ಲಿ ಬರವಲ್ಲಿ ।
ನಾ ಕೇಳಿದಂಗ ನೀ ಹೇಳವಲ್ಲಿ
ಕೇಳಿನ ಇಂದಿನ ರಾತ್ರಿ
ಇಲ್ಲಿ ಬಂದ ಕೂಡ್ಯೆತಿ ಜಾತ್ರಿ ॥ ॥ ಜೀಜೀ ॥

ಒಬ್ಬ ಹರದಾಸ ಗಂಟ ಬಿದ್ದ ಕಾತ್ರಿ
ಬ್ಯಾಡಂತ ಇವನ ಸಂಗ ಬಿಟ್ಟಿ ।
ಬರ ಬರತ ನಿನ್ನ ಬುಟ್ಟಿ।
ವಸ್ತಾದ ಮಲ್ಲಣ್ಣ ಹೇಳಿದಾನ ಕವಿಕಟ್ಟಿ ।
ದುಂಡಣ್ಣ ಹೊಡಿ ಅಂದಾನ ಗಟ್ಟಿ ॥ ॥ ಜೀಜೀ ॥

॥ ಖ್ಯಾಲಿ ॥

ಪ್ರಾಯಕ ಬಂದಾಳ ಹುಡುಗಿ ಮನಗಂಡಾ ।
ಇನ್ನು ಯಾಕ ಬರಲಿಲ್ಲ ಈಕಿ ಗಂಡಾ ॥ ॥ ಜೀಜೀ ॥ ಪಲ್ಲ ॥

ಮಾಯದ ಮರವಿ ಗಂಟಾ ಕಟಗೊಂಡಾ ।
ಏಸ ದಿನಾ ಆತು ಹೊತಗೊಂಡಾ ॥ ॥ ಜೀಜೀ ॥

ಆರು ಬಣ್ಣದ ಸೀರಿ ಉಟಗೊಂಡಾ ।
ಮೂರು ಬಣ್ಣದ ಕುಬಸಾ ತೊಟಗೊಂಡಾ ॥ ॥ ಜೀಜೀ ॥

ಎಂಟ ಮಂದಿನ ಗಂಟ ಹಾಕಿಕೊಂಡಾ
ಹತ್ತ ಮಂದಿನ ಜತ್ತ ಮಾಡಿಕೊಂಡ
ಒಂಬತ್ತ ಬಾಗಿಲಮನಿ ಮಾಡಿಕೊಂಡಾ ।
ಮನಿಮುರದ ಹೋದಿ ಮ್ಯಾಲಕತ್ತ ಹೊಯ್ಕೊಂಡಾ
ಧನ್ಯಾಳ ತವರಮನಿ ಮಾಡಿಕೊಂಡ್ರಾ ।
ನಮ್ಮ ಮಳಿಸ್ವಾಮಿ ನೀ ಕೂಡಿಕೊಂಡಾ ॥ ॥ ಜೀಜೀ ॥
ಪ್ರಾಯಕ ಬಂದಾಳ ಹುಡುಗಿ ಮನಗಂಡಾ ॥

॥ ಸಖಿ ॥

ಬೀಸಿ ಒಗುತೀವ ತಗೊಂಡು ಹೋಗಾಕೊ ನಿನ್ನ ಉತ್ತರ

ಇಂದ್ರ ಸಭಾ ಚಂದ್ರನಂತ ಜನರು ।
ಹಾಡ ಹಾಡಿದಕ ಹೌದ ಹೌದ ಅನಬೇಕ ಕುತ್ತ ಕೇಳಿದರ ॥ ಜೀಜೀ ॥

ಆ ಬಿಟ್ಟ ಕುಬಸ ಅವರು ಈ ಸೃಷ್ಠಿ ತೊಡುವುದಿಲ್ಲ ।
ವಡ್ಡರ ಮತದವರು ॥ ॥ ಜೀಜೀ ॥

ಓಸುವಿಲ್ಲ ಪ್ಯಾನಿಸಿ ತಾಂಡೇದವರು ।
ಧರ್ಮಭ್ರಷ್ಟ ಮಾಡಲಿಲ್ಲ ಚೊಕ್ಕ ಲಮಾಣ್ಯಾರ ॥ ॥ ಜೀಜೀ ॥

ಸತ್ಯ ಜನರ ಉತ್ತಮ ಶೀಲದವರು ।
ಹೆಣ್ಣ ಅವರು ಇಸ್ಟ ಪಟ್ಟ ಆಳುದಿಲ್ಲತಮ್ಮ ತಂಗಿ ಅಂತಾ ತಿಳಿದವರು ॥
॥ ಜೀಜೀ ॥

ಇಟ್ಟ ಗುರಿ ಪೆಟ್ಟ ತಪ್ಪಿದವರು
ಮತದವಳನ ಮಾರುತಿ ರಾಯನ ಮದಲಿನ ಸೇವಕರೂ ॥ ಜೀಜೀ ॥

ಕಳ್ಳರಂತೆ ಅಡವಿ ಚಂಚರ ಜನರೊ ।
ಮನಿಮಾರೆಲ್ಲ ಮಾಡಿ ಹುಲ್ಲಿನ ಗ್ವಾಡ್ಯಾಗ ಮಲಗುವರೊ ।
ಇದರ ಕೇಳಿದರ ಮಗಾ ತಾಯಿ ಹೆದರುವರೊ
ವಸ್ತಾದ ಅಮೀನ ನಮ್ಮ ಉತ್ರ ಕೊಟ್ಟ ಹೋಗೊ
ಅಂದ ಧನ್ಯಾಳದ ದುಂಡಪ್ಪಗೌಡಾ ॥ ॥ ಜೀಜೀ ॥

॥ ಖ್ಯಾಲಿ ॥

ನಿನ್ನಹಣಿ ಮ್ಯಾಲ ಹಂಚಿ ಬಟ್ಟ ಚುಚ್ಚಿ ಕೊಳಮ್ಮಾ ।
ಹಾಳ ಹಣಿಲೆ ಇರಬ್ಯಾಡ ಮಗಳೆ
ಬಾಳ ಕಳಿಯತಾಳ ದೀರರ್ಗಕ ಗೋದಿಕಾಳಷ್ಟೇನೇಮಾ
ಬಾಳ ಈ ಎಮಪುರ ಗೋಳಮ್ಮಾ ।
ಅಲ್ಲಿ ತಾಳದಿ ತಂಗಿ ಜನನ ಮರಣ ಬೈಗಳ ನಿನಗಮ್ಮಾ॥ ॥ ಜೀಜೀ ॥

ನಾನ್ಯಾರೆಂಬುದು ತಿಳಿ ಲಕ್ಷ ಚೌರ್‍ಯಾಂಶಿ ಅಳಿ
ಸತ್ತ ಹುಟ್ಟ ಬಾರದತ್ತ ಗುರುತ ನುಡಿಯಬೇಕಮ್ಮಾ॥
ಒಂಬತ್ತ ಬಾಗಿಲ ನೋಡಮ್ಮಾ ।
ವಿಡಾ ಪಿಂಗಳಾ ದಾಟಿ ಸೌಮಾರ್ಗದಾರಿ ಹಿಡಿಯಮ್ಮಾ॥ ॥ ಜೀಜೀ ॥

ದೇಟ ಪೂರ್ವಕವಾಗಿ ಮುದ್ರ ಹಚ್ಚಿ ನೋಡ ಮಗಳೆ
ಸಾಮಿಪ ದಾಟಿ ಇರಬೇಕ ಮಗಳೆ
ಅದರ ಸ್ವಾದಿಟಿ ನೋಡಮ್ಮಾ ।
ಈಟ್ಟು ನಿಷ್ಠರ ದಾಟಿ ಆನಂದದ ಧ್ವನಿಗಳ ಕೇಳಮ್ಮಾ ॥ ॥ ಜೀಜೀ ॥

ಬೈಲಿಗಿ ಬೈಲನಾಗಿ ಬೈಲಬ್ರಹ್ಮನಾಗಿ
ತೋರಿನಿ ಸತ್ತುಳ್ಯ ಧನ್ಯಾಳ ಹಳ್ಳಿ ದುಂಡಪ್ಪನ
ನೆನಿಬೇಕಮ್ಮಾ
ಹಂಚಿಬಿಟ್ಟ ಚುಚ್ಚಿ ಕೋರಮ್ಮಾ ॥ ॥ ಜೀಜೀ ॥

॥ ಖ್ಯಾಲಿ ॥

ಅಂತರಂಗ ಸಂತಿಯೊಳ ಎಂಥ ಗುದಮುರಗಿ ।
ಸಂತಿ ಮುಗಿದು ನಿಶ್ಚಿಂತಾತು ಹೋಗೋಣ ತಿರುಗಿ ॥ ॥ ಜೀಜೀ ॥

ಭಾರಿ ಪಿತಾಂಬರ ಬೆಲಿ ದೂರೈತಿ ಕೇಳಿನಿ ವ್ಯಾಪಾರಿಗಿ ।
ಸಾವಿರದೆಂಟ ಸಾರಿ ಹೇಳಿದ ಒಂದೇ ಸೀರಿಗಿ ।
ಕೊಟ್ಯಾದೀಶ ರೂಪಾಯಿಟ್ಟು ಹೋಗಂದರು ಮೂರುವರಿ ಮೋರಿಗಿ ॥
॥ ಜೀಜೀ ॥ ೧ ॥

ತಂದ ಗಂಟ ಒಂದು ಉಳಿಲಿಲ್ಲ ಹೇಳುದು ಯಾರಿಗಿ ।
ನೂರಾಎಂಟು ಗಂಟು ಹೇಳಿದರು ಮಕಮಲ ಧೋತರಗಿ ।
ಉಟ್ಟು ತೊಟ್ಟು ಹೊಂಟು ಹೋಗೂದ ಐತಿ ರಾಮಲಿಂಗನ ಜಾತ್ರಿಗಿ ॥
॥ ಜೀಜೀ ॥ ೨ ॥

ಮೂನ್ನರದಾರವತ್ತು ರೂಪಾಯಿ ಬಿದ್ದಿರು ಬಾಕಿ ಬಟ್ಟಿಗಿ ।
ಇನ್ನೂರದ ಹದಿನಾರು ಒಮ್ಮೆ ಕೊಟ್ಟಿದ್ದೆ ಕೋಟ ಸೂಟ ಪ್ಯಾಂಟಿಗೆ ।
ಕಡಿಗಾಗಿ ತಂದ ರೂಪಾಯಿ ಅಡಗಿ ಮಾಡುವ ಗಡಗಿ ಹುಟ್ಟೀಗಿ ॥
॥ ಜೀಜೀ ॥ ೩ ॥

ಹವೇಜ ಮಸಾಲಿ ಅರಿಷಿಣ ಬಳ್ಳೊಳ್ಳಿ ಇದು ಒಂದು ಕಡಿಗಿ ।
ಆರು ರೂಪಾಯಿ ಬೇರೆ ಕೊಟ್ಟೇನೊ ಕಾರದ ಪುಡಿಗಿ ।
ಅಟ್ಟಿದ್ದೆಲ್ಲಾ ಹುಟ್ಟ ನುಂಗಿ ಬಿಟ್ಟೈತಿ ಕುಂತೇನು ಗೋಡಿಗಿ ॥ ಜೀಜೀ ॥ ೪ ॥

ಧರಿಯೊಳು ಮೆರೆವ ವರಪುರ ಅನಿಸಿತೊ ಧನ್ಯಾಳ
ಕವಿಗಾರ ದುಂಡಪ್ಪಗೌಡ ಮರಿಮಾಡಿ ಉಣಸಿದಾನ ಜೋಳಗಿ ಹೋಳಿಗಿ
ಸಂತಿ ಮುಗದು ನಿಶ್ಚಿಂತಾಯಿತೊ ಹೋಗೋಣ ತಿರುಗಿ ॥ ॥ ಜೀಜೀ ॥

॥ ಖ್ಯಾಲಿ ॥

ಬಾರಾವ್ವಾ ನೀನು ಯ್ಯಾರೆವ್ವಾ ತಂಗಿಬಾಳ ದಿನಕ ಬಂದಿದಿ
ಬಾಬಾ ಭವ ದೂರವ್ವಾ ॥ ॥ ಜೀಜೀ ॥ ಪಲ್ಲ ॥

ಶೂನ್ಯ ನಿರ್ಶೂನ್ಯ ಮಹಾಶೂನ್ಯೂ ದಾಟಿ ।
ನಿರ್ವಾಕಾರ ವ್ವಾ ಏನೂ ಇಲ್ಲದಲ್ಲಿ ನಿನ್ನ ಯಾವೂರವ್ವಾ।
ತಾಯಿ ತಂದಿ ಬಂಧು ಬಳಗೆರು ಚಂದದಿ ಉಸರಾಡವ್ವಾ ॥ ॥ ಜೀಜೀ ॥

ನಿನಗ ಯಾವೂರಿಗಿ ಕೊಟ್ಟಾರ ಹೇಳವ್ವಾ
ಗಂಡನ ಹೆಸರೇನವ್ವಾ ।
ಗುಂಡ ಗುರಳ ದಂಡಿ ಕಟ್ಟಿದ ಮುಂಡರು ಅದಾರೆವ್ವಾ
ಗಂಡುಗಲಿ ಗಂಡನಲ್ಲಿಗಿ ಧಾರಿಯೆರದಾರೆವ್ವಾ॥ ॥ ಜೀಜೀ ೨ ॥

ಒಂಬತ್ತ ದ್ವಾರ ಬಂಧಿಸಿ ತುಂಬಿಕೊಂಡಿನಿಸೇರವ್ವಾ
ಅಂಬುಜಮುಖಿಯಾಗಿ ಅರ್ಪಿಸುವ ಜಲಪಲ ಹಾರೆವ್ವಾ
ಕೊಡಾ ತುಳುಕಿ ಸೋರ್‍ಯಾಡಿತು ನವದ್ವಾರೆವ್ವಾ ॥ ॥ ಜೀಜೀ ॥ ೩ ॥

ದಿಗಂಬರ ರೂಪ ಬಿಂಚಿಲ್ಲದವನ ಗಾಂಭೀರ್ಯ ಬೀರೆವ್ವಾ ।
ನಮ್ರತ್ವದಿ ನಮಿಸಿ ಸೇವಿಸು ಅಂಬ್ರತ ಸಾರೆವ್ವಾ ।
ಅಮರಾಗಿ ಅಮರೇಶನ ಆಲಿಸು ಶಿವಪೂರ ಶಿಖರೆವ್ವಾ॥ ॥ ಜೀಜೀ ॥ ೪ ॥

ಮಂಗಳಕರ ಕಂಗೊಳಿಸುವ ಇಂಗಳೇಶ್ವರೆವ್ವಾ
ಪಿಂಗಳಾಕ್ಷ ನೆನದಾ ರೇವಣಸಿದ್ಧೇಶ್ವರೆವ್ವಾ ।
ಬೆಟ್ಟಾ ಏರಿ ಬೆಟ್ಟ್ಯಾಗಿ ಇರುವಾ ಇಷ್ಟಕ ಗೋರವ್ವಾ ।
ಬಾರವ್ವಾ ನೀನು ಯಾರವ್ವಾ ತಂಗಿ ಬಾಳದಿನಕ ಬಂದಿದಿ
ಬಾಬಾ ಭವದೂರವ್ವಾ ॥ ॥ ಜೀಜೀ ॥ ೫ ॥

॥ ಖ್ಯಾಲಿ ॥

ತೌರಮನಿ ನಾದ ಬಿಂದು ಕಳಾ ಮುಂದ ಕೇಳಾ ।
ಹಿಂದಿನ ಸುಕೃತ ಬಂದವಳಾ ॥ ॥ ಜೀಜೀ ॥ ಪಲ್ಲ ॥

ಶೂನ್ಯ ನಿಶೂನ್ಯ ನಿನ್ನೆ ಮನ್ನೆ ಮಹಾಶೂನ್ಯ ಆಕಳಕನ್ಯೆ
ನಿರ್ವಿಕಾರ ಆಕಳಿದ್ದಿತು
ಆರು ಆಕಾರ ಕರು ಆದೀತು
ಗುರುಕೃಪಾ ಹಾಲಗರದಿತು

ತುಂಬಿಕೊಂಡು ಹದಿನಾಲ್ಕ ಸ್ಥಳಗಳಾ ।
ಅರು ಕರವಿಗಿ ಬಾಯಿ ಇಲ್ಲೆಳ ನೆರಿಹೊರಿ ಜನಾ ಉಂಡ
ಇಚ್ಛಾ ಶಕ್ತಿ ನಾದುನಿ ನಿವಳಾ
ತಿಂದು ತಿಂದು ತಗೆಕ್ಕಿ ಜಗಳಾ ॥ ॥ ಜೀಜೀ ॥

ಕ್ರಿಯಾಶಕ್ತಿ ನೆಗೆನ್ನಿ ನಿನಗ ।
ಜ್ಞಾನಶಕ್ತಿ ಅತ್ತಿಗಿ ಭಾಗ ಅರಿಷಡ್ವರ್ಗಗಳು
ಆರಗಿಂಡಿ ಅತ್ತಿ ಉಂಡಾಳಂದಿ ಚ್ಯಾಮುಂಡಿ ।
ಮೂರ ಗಿಂಡಿಗಿ ಜಪ್ಪಸುದು ಕಂಡಿ ।
ಆರು ಮೂರು ಒಂಬತ್ತ ಗುಣಗಳಾ
ಭಾವಮೈದುನ ಭ್ರಷ್ಟ ಬ್ರಮಿಗಳಾ
ಕೆಟ್ಟ ಬೆರಕಿ ಕೊಟ್ಟಿ ಕರ್ಮಿಗಳಾ ।
ಅವರು ಮನಿಗ್ಯಾರ ನಿಪ್ಪಳಾ ।
ನೀ ಮಾಡ ಬ್ಯಾಡ ಸಪ್ಪಳಾ ॥ ॥ ಜೀಜೀ ॥

ಒಬ್ಬಕ್ಕಿ ಕುಂತಿ ಎಟಕಿ ಬಾಕಿಲ ಹಿಕ್ಕಿ ಪಾಟಕ
ಅಂತಿದಿ ರುಚಿ ಹೆಚ್ಚಿಂದು
ಭಕ್ತಿ ಪ್ರೇಮಾಂಬು ವ್ರತಾ ಹೆಚ್ಚಿಂದು
ಗುರುಪುತ್ರರಿಗೆ ಮೆಚ್ಚಿಂದು
ಬಾಯಿ ಇಲ್ಲದ ಉಂಡ್ರೊ ಬಕ್ಕಳಾ ।
ನೀ ಏನಬಲ್ಲಿ ಚಿಕ್ಕವಳಾ ।
ರುಚಿಗಾಗಿ ಬಂದು ಸಿಕ್ಕವಳಾ ।
ಗುರು ಕರುಣಾ ಗಿಣ್ಣಾ ಉನ್ನೇಳಾ ।
ಚಿಂತಿಭ್ರಾಂತಿ ತಗಿಯ ಮೂಳಾ ॥ ॥ ಜೀಜೀ ॥

ಕರಾ ಹುಟ್ಟಿ ಮಡದೆ ಇಲ್ಲಾ ।
ಮಾಯದ ಮಲಿ ಕುಡದೆಯಿಲ್ಲಾ ।
ಇಪ್ಪತ್ತೊಂದು ಸ್ವರ್ಗ ಅದರ ಕಾಲಾ ।
ಯೋಗದಿಂದ ಹೋಗುದು ಅದು ಮೇಲಾ ।
ಹಿಂಗ ಸಂಚರಿಸುದು ಅದು ಮೇಲಾ ।
ಸ್ವರ್ಗದ ಶಿಖರ ಕೊಡಗಳಾ ।
ಮೂಲಾಧಾರ ಬಾಲ ಅದು ಸರಳಾ ।
ಗಂಗಿ ತೊಗಲ ವೀಡಾ ಪಿಂಗಳಾ ।
ಹಣಿ ಮೇಲೆ ಇಣಿಯ ಹರಳಾ ।
ಜ್ಯೋತಿ ಪ್ರಕಾಶ ತಳ ತಳಾ ॥ ॥ ಜೀಜೀ ॥

ಸತ್ತ್ಯ ಎತ್ತಿ ಹಿಡಿರಿ ಹೊಡದೀತು ।
ಮೂರಲೋಕ ಬೊರ ಹಿಡಿದಿತ
ಸಪ್ತವ್ಯಸನ ಸಪ್ತ ಸಾಗರಾ
ನೀರ ಕುಡದ ನಿಂತಿತು ನಿರಹಾರಾ ।
ಐದು ಹೊಟ್ಟಿ ಮೈದು ಬರಪೂರಾ ।
ಪಂಚಭೂತ ತುಂಬಿ ತತ್ವಗಳಾ ।
ಮೂವತಾರು ಬಣ್ಣ ನಿಚ್ಚಳಾ ।
ಏಂಟಮಾರಿ ಅದಕ ಅಷ್ಟದಳಾ ।
ಒಂಬತ್ತ ಕಣ್ಣ ನೇವ ನಳಾ ।
ನೋಡೋ ಲಿಂಗ ಅಂಗದ ಸ್ಥಳಾ
ನೂರಾವಂದು ಸ್ಥಳಗಳ ಕುರುಹಾ
ಬೈಲ ಸೀಮಿ ತಿರುಗುದು ಕರುವಾ ।
ಕರಸ್ಥಲದಲ್ಲಿ ಕರಾ ತೋರುವದು
ಮಹಾಕಾರಣ ಸ್ಥಳಕ ಮೆರೆಯುವದು
ಯೋಗ ಜಪಾತಪಾದಲ್ಲಿ ಚರಿಸುವುದು
ಏಂಬತ್ತೆಂಟು ಆಸನಾ ಚುಕ್ಕೆಳಾ
ಅಂತಿದಿ ಅದರ ಮಕ್ಕಳಾ
ಅದರ ತಾಯಿ ನಯಸ್ವರ್ಗ ನಿಸ್ಕಳಾ
ಇಂಗಳೇಶ್ವರ ಕಂದಗೊರಳಾ
ಬಲ್ಲಂವಾ ಅದರಕಳಾ
ತೌರಮನಿ ನಾದಬಿಂದು ಕಳಾ ॥ ॥ ಜೀಜೀ ॥

ಯಥಾ ಬ್ರಹ್ಮಾಂಡ ತಥಾ ಪಿಂಡಾಂಡ
(ಹತ್ತರ್ಕಾಳ)

ಮಹಾಜ್ಞಾನ ಪಂಡಿತ ಅಂತಿದಿ ತಿಳಿದರ ಸ್ವತಾ ।
ನಾ ಬುರಡಿ ಹಾಡಾಂವ ಅಲ್ಲಾ ಕತಾ ॥
ಅಲ್ಲಿ ಇಲ್ಲಿ ಯಾತಕ ತಿರಗತಿದಿ ನಿನ್ನಲ್ಲಿ ಆದ ಪರ್ವತಾ ॥ ॥ ಗೀಗಿ ॥

ಎಥಾ ಬ್ರಹ್ಮಾಂಡ ತತಾ ಪಿಂಡಾಂಡ ಎರಡು ಒಂದೆ ಸವನಾ
ನೀ ಓದಿ ನೊಡ ಪುರಾಣಾ
ಬ್ರಹ್ಮಾಂಡದೊಳಗಿನ ಆಕಾರ ಎಲ್ಲಾ ಈ ಪಿಂಡಾಂಡದೊಳಗ ಇಟ್ಟಾನಾ ॥
॥ ಗೀಗೀ ॥

ಸೂರ್ಯನ ಕಣ್ಣಿಗಿ ಅಂತಾರೊ ಹಿಂಗ ಕೆದರ ಹಿಡಿಯಣಾ ।
ಈ ತೊಡಕ ಬಿಡೊ ಕಡಿತಾನಾ
ಶಿಖರ ಅಂತ ಈ ಶಿರಕ ಅಂತಾರೊ ಜ್ಞಾನದ ಬೆಳಿ ಇಟ್ಟಾನ ॥ ಗೀಗೀ ॥

ಹೆಚ್ಚಿನ ಶ್ರೀಶೈಲ ಇದರೊಳಗ ಅದೊ
ಮರಿಯ ಬ್ಯಾಡೊ ಅಜ್ಞಾನಾ ನೀ ಜ್ಞಾನದಿಂದ ನೋಡಣ್ಣಾ ।
ರುದ್ರ ಪಾದ ದಾವಲ್ಲಿ ಮೂಡಿದಾವ ಮಲ್ಲಿಕಾರ್ಜುನನಾ ।

ಚ್ಯಾಲ ಆ ಸಿದ್ಧಾಪುರ ಹಣಮಂತ ದೇವರ ।
ಕರೆ ಮಲ್ಲಮ್ಮನ ಊರಾ ।
ಆ ಕಡಿ ಬಾಗಿಲಕ ಕರೆ ವೀರಭದ್ರಾ ತರಕ ಮಾಡೊ ಶಾವೀರಾ ।
ಆಕಳ ಕಲ್ಲ ಅಲ್ಲೊಂದು ನಿಂತದ
ಬಾಯಿಲೆ ಬೀಳತಾವ ನೀರಾ ।
ಅಲ್ಲೊಂದ ಅಂಬಲಿಹಳ್ಳ ಭೀಮನಕೊಳ್ಳ ಅದು ನಿವುಳಾ ।
ಇದರಿಗಿ ಕಾಣುದು ನೋಡರಿ ಭೀಮನಕೊಳ್ಳ ॥ ಗೀಗೀ ॥

ಅಲ್ಲಿಂದ ಕೈಲಾಸ ಬಾಗಿಲಕ ಅಡಕೇಶ್ವರಾ ।
ಈ ತನುವಿನಲ್ಲಿ ಇರುವುದು ಶಿಕರೇಶ್ವರಾ ।
ಇವು ಎರಡರ ನಡುವ ಪಂಚಾಧಾರಿ ಪರಭಾರಾ ॥ ॥ ಗೀಗೀ ॥

ಆ ಪಲ್ಲಧಾರಿ ಅದ ನಿವುಳಾ ಈ ಮಾತ ತಿಳಿಯ ಬ್ಯಾಡಗೊಳ್ಳು ।
ಈ ಆತ್ಮ ವಿಚಾರ ಮಾಡಿಕೋರ ಜಳಜಳಾ ॥ ಗೀಗೀ ॥

ಅಲ್ಲಿಂದ ಕಾಣತದ ಮಲ್ಲಪ್ಪನ ಗುಡಿ ಕಾಣತದ ಸದರಾ ।
ಚತುರ ಮುಖದ ಬಾಗಿಲ ಕಾಣತದ ನೋಡ ನೌವದ್ವಾರಾ ।

ಆ ಗುಡಿಯ ಮ್ಯಾಲಿನ ಕಳಸ ಅದೋ ಬಂಗಾರಾ ।
ಇದರ ಜವಾಬ ತಿಳಿಸೊ ಜಳಜಳಾ ।
ಈ ಪರ್ವತ ಮೂರುವರೆ ಮಳಾ
ಸಂಜೀವದ ಕಡ್ಡಿ ಅದ ಜೀವಾಳಾ

ಕೂಡಪಲ್ಲ ಓದಿದರೇನು ದಾರಿ ಓದಿದರೇನಾತ ದಾರಿ ಸಿಗುವುದಿಲ್ಲ ॥

ತಿಳಿಲಿ ಇದರ ಅರ್ಥ ಇದು ಆಗುದಿಲ್ಲ ಅನರ್ಥಾ
ಅಲ್ಲಿ ಇಲ್ಲಿ ಯಾತಕ ತಿರಗತಿದಿ ನಿನ್ನಲ್ಲಿ ಅದಪರ್ವತಾ ॥ ಗೀಗೀ ॥

ಏರು ಇದರಿಗಿ ಕಾಣುದು ಪಾತಾಳ ಗಂಗಾ ।
ಗುಪ್ತ ಗಂಗಾ ಇದರಲ್ಲಿ ತಿಳದಿಲ್ಲ ಪರ್ವತದ ನೆಲಿ
ಪರ್ವತ ಮತಕ ಹೋಗುವರು ಹೋಗಿ ಬರತಾರ
ಬೆಳ್ಳಗಾಯೀತು ಅವರ ತೆಲಿ ॥ ॥ ಗೀಗೀ ॥

ಯ್ಯಾಕ ತಂಗಿ ಇಷ್ಟ್ಯಾಕ ಸೊರಗಿದಿ

॥ ಖ್ಯಾಲಿ ॥

ಯ್ಯಾಕs ತಂಗಿ ಇಷ್ಟ್ಯಾಕ ಸೊರಗಿದಿ ಪರಿಬಂದಂಗಾಗಿ ।
ಯ್ಯಾಕs ತಂಗಿ ಇಷ್ಟ್ಯಾಕ ಸೊರಗಿದಿ ॥ ॥ ಜೀಜೀ ॥ ಪಲ್ಲ ॥

ನಿನ್ನ ಅತ್ತಿ ಮಾವಂದಿರು । ತುತ್ತಿಗೊಂಡು ಬೈಗಳ ಬೈದು ।
ಕತ್ತ ಕುಸಿತು ಕಣ್ಣಗೊರಡಿ ಒಳಗ ಸೇರಿ ಆಗ್ಯಾವ ಮುದುಡಿ ।
ಯಾಕs ತಂಗಿ ಇಷ್ಟ್ಯಾಕ ಸೊರಗಿದಿ । ಪರಿ ಬಂದಂಗಾಗಿ ॥ ಜೀಜೀ ॥

ಹಲ್ಲ ಹೋಗಿ ಮಾರಿಯ ಚಿನ್ನಾ ಟೊಂಕಬಾಗಿ ನಡುವ ಸಣ್ಣಾ ।
ಕೈಕಾಲ ಆಗ್ಯಾವ ಸಣ್ಣಾ ನಿನ್ನ ಶರೀರ ಆಗೇದ ಹೆಣಾ ।
ಯ್ಯಾಕs ತಂಗಿ ಇಷ್ಟ್ಯಾಕ ಸೊರಗಿದಿ । ಪರಿಬಂದಂಗಾಗಿ ॥ ಜೀಜೀ ॥

ಎಂಟು ಹೆಣ್ಣ ಮಕ್ಕಳ ನನಗ । ಗಂಡ ಮೂರ ಹಡದಿ ನಿಮ್ಯಾಗ ।
ಬಂಟಗಂಡಾ ಮಾಡ್ಯಾನ ಹಿಂಗ । ದುಡಿಯದಂಗ ಆಗೇದ ನನಗ ॥
ಯ್ಯಾಕs ತಂಗಿ ಇಟ್ಯಾಕ ಸೊರಗಿದಿ । ಪರಿ ಬಂದಂಗಾಗಿ ॥ ಜೀಜೀ ॥

ಮೂರು ಆದನಂತರ ಸಾಕು ಅಂದಾ । ಬರಗೊಡಲಿಲ್ಲಾ ನಾ ಮಾಡಿನಿ ಬಂದಾ ।
ಸಿರಿಗೇಡಿ ಗಂಡಾ ಕೇಳಲಿಲ್ಲಾ ನಂದಾ । ಹಂಗs ರಾತ್ರ್ಯಾಗ ಬರತಿದ್ದ ಎದ್ದ
ಯ್ಯಾತಕ ॥ ॥ ಜೀಜೀ ॥

ತಿಲ್ಲಾಕ ಇಲ್ಲಾ ಮನಿಯಾಗ ಜ್ವಾಳಾ । ಮಕ್ಕಳ ನೋವ ನನಗ ಆಗೇವ ಬಾಳ ।
ನನ್ನ ಪ್ರಪಂಚ ಹಿಡದದ ಗೋಳಾ । ನನ್ನ ಗಂಡಗ ನನಗ ತಪ್ಪೇದ ಮೇಳಾ ॥
ಯ್ಯಾಕs ತಂಗಿ ಇಟ್ಯಾಕ ಸೊರಗಿದಿ । ಪರಿಬಂದಂಗಾಗಿ ॥ ಜೀಜೀ ॥

ಬಾಳ ಹಡೆದು ನಾ ಆಗೀನಿ ಹಿಂಗ । ಮುಂದಿನವರು ಆಗಬ್ಯಾಡ್ರಿ ನನ್ನಂಗ ।
ದವಾಖಾನಿಗಿ ಹೋಗರಿ ಬೇಗ । ಹಡಿಯಲಾರದಂಗ ಮಾಡತಾರ ನಿಮಗ ।
ಯ್ಯಾಕs ತಂಗಿ ಇಟ್ಯಾಕ ಸೊರಗಿದಿ । ಪರಿಬಂದಂಗಾಗಿ ॥ ॥ ಜೀಜೀ ॥

ಸಾಲೋಟಗಿ ಊರ ಮೋಜಿಂದಾ । ಶಿವಯೋಗಿ ಅಲ್ಲಿ ನೆನದಾನ ಚಂದಾ ।
ರೇಣೂ ಬಸಯ್ಯ ಹಾಡ್ಯಾರ ಇಂದಾ । ಬಾಳ ಮಕ್ಕಳನ ಹಡಿಬ್ಯಾಡಂತ ।
ಯ್ಯಾಕsತಂಗಿ ಇಟ್ಯಾಕ ಸೊರಗಿದಿ । ಪರಿಬಂದಂಗಾಗಿ ॥ ॥ ಜೀಜೀ ॥

ಪರದೇವರ ಮ್ಯಾಲ ಭಕ್ತಿ ನಮ್ಮದು

॥ ಸಖಿ ॥

ವರಗೇಡಿ ವಗತಾನ ಸಿರಿಗೇಡಿ ಬೀಗತಾನ
ಮೂರು ಕೂಡಿದ ಮೇಲೆ ಚಿಂತಿಸಿ ಫಲವೇನೊ ಮನದಾಗ ॥ ಜೀಜೀ ॥

ಮಂದಿ ಮನಿಯಾಗ ಮಾನಪಾನ ।
ತನ್ನ ಮನಿಯಾಗ ಜೀನತಾನ ।
ರೊಕ್ಕ ಉಳಿಸುವದು ಶಾನೆತನಾ ।
ಬಾಯಿಲೆ ಹ್ಯಾಂಗ ಹೇಳಬೇಕೊ ಹಿಂತಾಂವಗ ॥ ॥ ಜೀಜೀ ॥

ಊರಾಗ ಘಟಿಂಗತಾನ ಕಳುವ ಮಾಡಿದಂವಗ ।
ಭೀಮ ಬಸಯ್ಯ ಅಂದರು ನಂಬಬಾರದು ಹಿಂತಾಂವಗ ॥ ಜೀಜೀ ॥

॥ ಪದಾ ॥

ಹತ್ತು ಮಂದಿ ದೈವಕೆಲ್ಲಾ ಕೈ ಮುಗಿದು ಹೇಳತಿನು ।
ದೈವ ಇದ್ದಲ್ಲಿ ದೇವರಂತು ಇದ್ದೇ ಇರತಾನಾ ।
ಅಪ್ಪಾ ದೇವರಿದ್ದು ಇಲ್ಲದಂಗಾಗಿ ಸುಮ್ಮನೆ ಕುಳಿತಾನಾ ।
ಗುರುವೆ ದೇವರಂತು ನಡಕೊಂಡವರಿಗೆ ಸಿಕ್ಕ ಸಿಗತಾನಾ ।
ದೇವರ ಸಿಕ್ಕಾ ಸಿಗಲಾರದಿರಲಿ ಇದ್ರು ಇರಲಿ
ಪರದೇವರ ಮ್ಯಾಲ ಭಕ್ತಿ ನಮ್ಮದು ಜಲ್ಮ ಇರುತಾನಾಗಿ ॥ ॥ ಜೀಜೀ ॥

ದೇವರಂದ್ರ ಗಟ ಮೂಟ ಹಾನ ದೇವರಮ್ಯಾಲ ಬೊಜ್ಯಾ ನಮ್ಮದು
ದೇವರಿಗೆ ಹತ್ತಿದ ಮಾತೈತಿ ಕಟ್ಟ ಕಡಿತಾನಾ ।
ಆ ದೇವರಂತು ಸರ್ವರಲ್ಲಿ ತುಂಬಿ ಕೊಂಡಾನಾ ।
ಆ ದೇವರಂತು ಮಾಡಿದ ಮಾತಿಗಿ ಮನವೆ ಸಾಕ್ಷಿ ಇರತಾನಾ ।
ದೇವರಿಂದಾ ನಾವು ನೀವು ದೇವರ ಬಿಟ್ಟ ಗತಿಯಿಲ್ಲಾ
ಗರ್ತ್ಯಾರಿಗಿ ಗಂಡ ಇದ್ದಾಂಗ ದೇವರ ಇರತಾನಾ ॥ ॥ ಜೀಜೀ ॥

ಮರ್ತ್ಯಲೋಕದವರಿಗೆಲ್ಲಾ ಒಬ್ಬನೆ ದೇವರ ಒಬ್ಬನೆ ಗಂಡಾ
ಪೃಥ್ವಿ ಗಂಡ ಬೇರೆ ಹಾನ ಸೂರ್ಯನಾರಾಯಣಾ ।
ಚಿಕ್ಕ ಗಂಡ ಚಂದ್ರಾಮಹಾನ ಮುತ್ತೈದ್ಯಾರ ಕೂನಾ ।
ಇವರು ಮುತ್ತೈದಿತನಕ ಉಂಡ ಬರತಾರ ಹೋಗಿ ಅಲ್ಲಿತನಾ ।
ಐದ ಮಂದಿ ಮುತ್ತೈದಾರು ಒಂದೆ ಅಗಲಾಗ ಊಟ ಮಾಡ್ಯಾರ
ಒಬ್ಬವನೆ ಐದ ಮಂದಿನ ಕೃಷ್ಣ ಸಲುವ್ಯಾನಾ ॥ ॥ ಜೀಜೀ ॥

ಇಳುವು ಇಲ್ಲಿಗಿ ಹತ್ತ್ಯೆತಿ ಈ ಮಾತಾ ।
ಹತ್ತ ವಲ್ದ ಗುರ್ತಾ ಮಾಡಿಕೊಡ್ರಿ ಅರ್ಥಾ
ತಿಳಿಯವಲ್ದೊ ನನಗ ಕೇಳತೀನಿ ಹೆಣ್ಣ ಹಾಡಾಂವಗ ॥ ॥ ಜೀಜೀ ॥

ಮದವಿಗಂಡ ದೇವರ ಸರಿ । ದೇವರಿಗೆ ಬಿಡತಿರಿ ।
ದೇವರಿದ್ದು ಹೋಗತೀರಿ ಪ್ರತಿ ದೇವರಿಗ ।
ಸುಳ್ಳ ಹೇಳತೀರಿ ಮನಿ ದೇವರಿಗ ॥ ॥ ಜೀಜೀ ॥

ಹಿಂಗಾಗಿ ಕೆಟ್ಟಾವ ನಮ್ಮ ನಡಿ ಬದಲ ಬಿದ್ದು ನುಡಿ
ಕೂಸಗಳು ಸಿಕ್ಕ ಕೆಟ್ಟಾವ ಮಗ್ಗಲಾಗ ।
ಬಿಡೇಕ ಬಿದ್ದು ಹಡಿಯಲಾರದೆ ಸತ್ರ ಒಬ್ಬರ ಬಗಲಾಗ ॥ ಜೀಜೀ ॥

ಏರು ನಡೆಯಂತೆ ನುಡಿಯಿಲ್ಲಾ ನುಡಿದಂತೆ ನಡಿಯಿಲ್ಲಾ
ನಡಿ ನುಡಿ ತಪ್ಪಿದ ಮೇಲೆ ದೇವರೇನ ಮಾಡತಾನಾ ॥ ಜೀಜೀ ॥

ದೇವರಂತು ಕೇಳಲಿಕ್ಕೆ ಹೆಣ್ಣು ಗಂಡ ಹೋಗತಿರಿ
ಬಾಯಿ ಮಾಡಿ ಭಾಟರಂಗ ಬಂಡ ಮಾಡ ಬ್ಯಾಡ್ರಿ
ನಾವೇನ ಕೊಂಡ ತಂದ ಜ್ವಾಳಾ ಅಲ್ಲಾ ಭಿತ್ತಿ ಬೆಳದೇವರಿ ।
ನಾವೇ ಮುಕಳಿ ತುಂಬಿ ಎತ್ತಿ ಕೊಟ್ಟರ ಒತ್ತಿ ಎಳಿತಾರಿ ।
ಭಿತ್ತಿ ಬೆಳೆಯುವ ಶರಣರಿಗೆಲ್ಲಾ ಕೈಮುಗದ ಹೇಳುವೆನು
ಹತ್ತಿ ಹಿಡಿರಿ ಹ್ಯಾಳೆದಾಗ ಹೊಲಾಕಳದಿರಿ ॥ ॥ ಜೀಜೀ ॥

ಹೊಳ್ಳಿ ಚಿತ್ತು ಮನಿಸಾಲ ಬೆಳಸಾಲದಾಗ ಶುದ್ಧ ಇಲ್ಲಾ ।
ತೆಲಿ ಸಾಲ ಜರಾ ಸರಿಸಿ ಹಿಡಿದು ವರಿಸಿ ಹೊಡಿರಿ ।
ವರಸಾಲ ಇರಸಾಲದಾಗ ಮನಿ ಹೊಲಾ ಕರಿಸಾಲಾ ಕೆಡವಿರಿ
ಅಪ್ಪಾ ಭರಿಸಾಲ ಬಂತೊ ಈ ವರುಷ ಯಾರಿಗೆ ಹೇಳುನ್ರಿ
ವರುಷವ ಬೆಳಿ ವರುಷಕಿಲ್ಲಾ ಬಿರಸ ಭೂಮಿ ಬೆಳಿಲಿಲ್ಲಾ ।
ಬರುಮಳಿ ಯಾಕ ಬರಲಿಲ್ಲ ದೇವರ ಕೇಳುನ್ರಿ ॥ ॥ ಜೀಜೀ ॥

ದೇವರಿಗಂದ್ರ ಹೆಸರಿಗಾಯಿತು ನಾವು ಮಾಡುದು ಬಸರಿಗಾಯಿತು
ಕಸರ ಸೇರಿ ಕೀಂವ ಆಗಿ ನೆಳ್ಳಲಿಕ್ಕೆ ಹತ್ತೇವರಿ
ಮದಲೆ ಹಳಿ ಹುಣ್ಣಿಗಿ ಬಿದ್ದು ಅದು ಘಾಳಿವಂಡದರಿ
ಅಪ್ಪಾ ತಾಳಿ ಬಿದ್ದು ವಾಸರಾಡಿ ಸೋರಲಿಕ್ಕೆ ಹತ್ತ್ಯದರಿ
ತಾಳಿ ಬಿತ್ತೊ ಕಂಟಲ ಎತ್ತಾ ಏಳೂರ ಶೀಮ್ಯಾಗ ಸತ್ಯಬಿತ್ತು
ಏಳೂರ ಕಾಗಿ ಎಬ್ಬಿಸಲಿಕ್ಕೆ ಭೀರಯ್ಯಾ ಹೋತ್ಯಾನ್ರಿ ॥ ಜೀಜೀ ॥

ಇಳುವು ಇನ್ನ್ಯಾರಿಗಿ ಕೇಳುನ ದೇವಾ –
– ದೇವರ ಹೇಳವರಾ
ಎಲ್ಲಾರೂ ಹೋದರೊ ತಮ್ಮ ತಮ್ಮ ಕಾಣೇಕಾ
ನಾವು ಸುಮ್ಮನೆ ಅತ್ತಂಗದೊ ಒಣಾ ಗುಡ್ಡದಾರ್‍ಯಾಣಾಕಾ ॥ ॥ ಜೀಜೀ ॥
ಖರೆ ಇತ್ರಿ ದೇವರ ಹೇಳವರಾ । ಕೇಳ್ರಿ ಹಿರಿಯರಾ ।
ಬದಲ ಬಿದ್ದಾರಪ್ಪಾ ಈಗಿನ ಕಲಿಯುಗಕ ।
ನಾವು ಸುಮ್ಮನೆ ಬಳಲಿ ಸಾಯುದ ಬಂತೊ ನಮ್ಮ ಭೋಗಕಾ ॥
॥ ಜೀಜೀ ॥

ನಾವು ಇದ್ದಾಂಗ ಇರತಾನ ದೇವರಾ ನಾವೇ ಯಾರಕ್ಯಾರಾ
ನಮ್ಮಲ್ಲೆ ಸುದ್ಧ ಇಲ್ಲರಿ ನಾವೇ ನಮ್ಮ ಮನಕ
ನಾವು ಸುಮ್ಮನೆ ವಿನಾಕಾರಣ ದೇವರಿಗಿ ಅನ್ನುದ ಯ್ಯಾತಕ ॥ ಜೀಜೀ ॥

ಏರು ಒಬ್ಬರ ವಿಶ್ವಾಸ ಒಬ್ಬರಿಗಿಲ್ಲಾ ದೇವರ ವಿಶ್ವಾಸ ಗಂಡಸರಿಗಲ್ಲಾ ।
ಗಂಡಸರ ವಿಶ್ವಾಸ ಹೆಂಗಸರಿಗಿಲ್ಲಾ ಹಿಂಗ ಅಂತಾನ ॥ ॥ ಜೀಜೀ ॥

ದೇವರಂದ್ರ ಸರ್ವರಲ್ಲಿ ಭಕ್ತಿ ಇದ್ದಾಂಗ ಇರತಾನ
ಈ ನರ ಮನುಷ್ಯರಿಗಿ ಬಂದು ತಾಯಿ ತಂದೆನೇ ದೇವರಾ ।
ಅಪ್ಪಾ! ತಂದಿಲಿಂದ ತಾಯಿ ಬಂದಾಳೊ ಮೊದಲಿನ ಆಕಾರಾ ।
ತಂದಿ ತಾಯಿಲಿಂದ ಹುಟ್ಟಿ ಬಂದೊ ಮೊದಲಿನ ಆಕಾರಾ ।
ಹುಟ್ಟಿ ಸತ್ತವರೆಲ್ಲಾ ದೇವರೆಂದು ಆಗುದಿಲ್ಲಾ
ಹುಟ್ಟಿ ಸಾವೂದು ತಪ್ಪಲಿಲ್ಲ ನಮ್ಮ ಹಣಿ ಬಾರಾ ॥ ॥ ಜೀಜೀ ॥

ಹುಟ್ಟಿ ಸತ್ತ ಮಹಿನಿರೆಲ್ಲಾ ಜಗಾ ಹುಟ್ಟಿಸಿ ಸಾಯುದಿಲ್ಲಾ
ಎಷ್ಟೊ ಮಂದಿ ಹುಟ್ಟಿ ಸತ್ತಾರ ಯಾರಿಗಿ ಉಪಕಾರಾ ।
ಈ ಸ್ಥೂಲ ದೇಹದವರಿಗೆ ಮರಣ ತಪ್ಪಿಸುವರ್‍ಯಾರ ।
ಅಪ್ಪಾ! ಜನ ಮರಣ ದೇವರಿಗಿಲ್ಲಾ ಕೇಳ್ರಿ ಹಿರಿಯರಾ ।
ಗುಡ್ಡದೊಳಗ ಹುಟ್ಟಿದಂಥ ದೊಡ್ಡ ದೊಡ್ಡ ಮರಿಗಳಿಗೆಲ್ಲಾ
ಕಟ್ಟಿ ನೀರ ಹಾಕತಾನ ಸೃಷ್ಟಿ ಈಶ್ವರಾ ॥ ॥ ಜೀಜೀ ॥

ನಮ್ಮ ಸಿದ್ಧ ಸಾಧಕರಿಗೆ ಇದ್ದ ದೇವರ ಇದ್ದಂತೆ
ಬುದ್ಧಿಗೇಡಿಗಳಿಗೆ ಇದ್ದದ್ದು ಯಾವೂರಾ ।
ನಾವು ನಿದ್ದಿ ಗಣ್ಣಿನ್ಯಾಗ ಇದ್ದೇವು ನಮಗ ಸಿಕ್ಕಿಲ್ಲಾ ಆ ಊರಾ ।
ನಾನು ಖುದ್ದ ಇರುವ ಊರ ಹಿಂದುದೇಶ ಧನ್ಯಾಳ ಊರಾ ।
ಭಕ್ತಾವರ ಮಾಡಿದ ಕವಿ ಬಲ್ಲವರಿಗೆ ಬಾಳ ಸವಿ
ಅಲ್ಲದಂತಾ ಅಜ್ಞಾನಿಗಳ ಬಾಳ ದುಸ್ತರಾ ।

ಇಳುವು ಎಳ ಮೇಲಿ ಊರ ಜಾಹೀರಾ ಗಾಲಿಬಸಾಬ ದೇವರಾ ।
ಆ ತಂದೆ ಆಶೀರ್ವಾದ ನಮಗ ಶ್ರೀಗುರುವನೆ ಸಿದ್ಧಿಗಿ ॥ ॥ ಜೀಜೀ ॥

ಭೀಮ ಬಸವಯ್ಯ ಜೋಡಿಲೆ ಹಾಡವರಾ । ಗಿರಮಲ್ಲ ಕವಿಗಾರಾ ।
ಬಾಬಣ್ಣ ವೇದ ಓದಾಂವ ಗಾದಿಗಿ । ಎದಿ ಸೀಳಿ ಮೂರಕ್ಷರ ಓದಿ
ಹೇಳಿದ ವಾದಿಗಿ ॥

ಏರು ಕಂದರಾಮಸಿಂಗ ಬಂದು ವಂದನ ಮಾಡಿ ಹೇಳತಾನ ।
ಕೂಡಪಲ್ಲ ದೇವರ ಸಿಕ್ಕಾ ಸಿಗಲಾಗದಿರಲಿ ಇದ್ರು ಇರಲಿ
ಪರದೇವರ ಮ್ಯಾಲ ಭಕ್ತಿ ನಮ್ಮದು ಜಲ್ಮ ಇರತಾನ ॥ ॥ ಜೀಜೀ ॥
॥ ಚೌಕ ೩ ॥

॥ ಖ್ಯಾಲಿ ॥

ಶ್ರೀ ಗಣರಾಜಾ ಸದಾ ನಿನ್ನ ಪೂಜಾ ॥ ಕಾಲ ಗೆಜ್ಜಿ ಹಾಲಗಡಗಾ ಕಂಕಣಾ
ತೋಳಬಂಧಿ ಬಿಂದುಲಿ ವಡ್ಯಾನಾ । ಧಿಮಿಧಿಮಿ ಮದ್ದಳಿ ನುಡಿಸುತ
ವಾದ್ಯೆದಲ್ಲಿ ಬಾರೊ ॥

ಅಷ್ಟಗಂಧ ಮಹಾನಿಷ್ಟಿಲಿ ಧರಿಸಿ । ಮುಟ್ಟಿಪೂಜಾ ಮಾಡುವೆ ಮನಾಸ್ಮರಿಸಿ ।
ಮುರಗಿ ಸೊಂಡಿ ಮುರಲಿಧರನೇ ಮುಕುಂದ ನೀ ಬಾರೊ ॥ ಶ್ರೀ
ಕಾಯಿ ಕರ್ಪೂರ ಊದಿನ ಹೊಗಿ । ಕರಕಿ ಕರಣಗಿಲ ಹೂವ ನಿನಗಾಗಿ ।
ಕಳಸ ತಂಬಿಗಿ ಕಂಚಿಣಾರತಿ ಬೆಳಗುವೇನು ಬಾರೊ ॥ ಶ್ರೀ

ದೇಶದೊಳು ಲೇಸಾದ ಆಲಮೇಲಾ । ವಾಸ ಮಾಡಿಕೊಂಡಿದಿ ನೀನು ಅಲ್ಲಿ ।
ಭೀಮಬಸಯ್ಯನ ಮುಂಬಾಗದಲ್ಲಿ । ಬರೋ ॥ ಶ್ರೀ

॥ ಸಖಿ ॥

ಕುದುರಿಯೊಂದ ಕಂಡ ಬಂದಿನಲ್ಲಾ ।
ಏಂಟಕಾಲಾ ಒಂದೇ ಬಾಲಾ ಇತ್ತೊ ಮುಕಳಿಮ್ಯಾಲಾ ॥ ॥ ಜೀಜೀ ॥

ಮೂರ ಮೋತಿ ಇದ್ದಾವರಿ ಅಸಲಾ ।
ಲಗಾಮ ಒಂದ ಹೆಚ್ಚಕಿ ಹಾಕಿಲ್ಲಾ ।
ಹಿಂತಾ ಸವಾಲ ಗುರುಪುತ್ರ ಆದಾಂವಗದರ್ಜೆ ಇಲ್ಲಾ ।
ಧನ್ಯಾಳ ಊರ ಜಾಹೀರಾ ದೇಶದ ಮ್ಯಾಲಾ ।
ಘನಸೈಧ ಪೀರಾನ ನೆನದನಲ್ಲಾ ।
ವಸ್ತಾದ ಅಮೀನಸಾಬ ಸವಾಲ ಹೇಳತಾನ
ಬಿಟ್ಟಾಂಗಾತೊ ಮುಗಿಲಾ ॥ ಜೀಜೀ ॥

ಬಾಳ ದಿವಸ ನಾ ಮರತ ಕುತ್ತೀನ

॥ ಸಖಿ ॥

ನನಗೊಂದ ಮಾತ ನೆನಪಾಯಿತೊ ।
ನಿನಗೊಂದ ಮಾತ ಕೇಳೂದೈಯಿತೊ
ಬಾಳ ದಿವಸ ನಾ ಮರತ ಕುತ್ತೀನ ನಿನ್ನಿಂದ ನೆನಪಾಯಿತೊ ॥ ಗೀಗೀ ೧ ॥

ಸಣ್ಣದೊಂದ ರಾಕ್ಷಿಯ ಮರಿಯಿತ್ತೊ ।
ಜಗತ್ತೆಲ್ಲಾ ಬಾಯಾಗ ಹಿಡದಿತ್ತೊ ।
ಏಳು ಸಮುದ್ರದ ನೀರ ಕುಡದ ಮ್ಯಾಲಿ ಉಪವಾಸ ಅಂತಿತ್ತೊ ॥ ಜೀಜೀ ೨ ॥

ದಾರಿ ಮ್ಯಾಗ ನೊರಜೊಂದ ಕುಂತಿತ್ತೊ ।
ರಾಕ್ಷಿ ಗೂಡಾ ತಗದಿತೊ ।
ಅದೇ ರಾಕ್ಷಿನ ನೊರಜ ನುಂಗಿ ಯವ ದಿಕ್ಕಿಗಿ ಹಾರಿ ಹೋಯಿತೊ ॥
॥ ಜೀಜೀ ೩ ॥

ಸಭಾದಾಗ ಜವಾಬ ಹೇಳುದಾಯಿತೊ ।
ಹೇಳದಿದ್ದರ ನಿಮ್ಮನೆಲ್ಲಿ ಬಿಡತಿತೊ ।
ಸುಳ್ಳ ಅಂದೆ ನಿನಗ ಆಗದಿದ್ದರ ತೋರಿಸ ಕೊಡತೈತಿ ॥ ॥ ಜೀಜೀ ೪ ॥

ಡೋಣಿ ಸಾಲ ದಂಡೀಲೆ ಧನ್ಯಾಳ ಊರ ಐತಿ ।
ಕುಮಾರ ಗನಸೈದ ಸತ್ಯೆವಂತ
ಶೇಖ ಹುಸೇನ ಸಾಬ ಸವಾಲ ಕೇಳತಾನ ಜವಾಬ ಹೇಳುದಾಯಿತೊ ॥
॥ ಜೀಜೀ ೫ ॥

॥ ಪದಾ ॥

ಮುತ್ತೈದಿ ತನ ಕಳಕೋ ಬ್ಯಾಡಾ ತಿಳಕೊ ತಂಗೆಮ್ಮಾ ।
ಗಂಡಗಂಜಿ ಬದಕ ಮಾಡು
ಕಂಡ ಪುರುಷರ ಮೆಚ್ಚ ಬೇಡಾ
ಆರು ಮೂರು ಮಂದಿ ನಿನಗ ಸುತ್ತ ಪಾರೆ ಕಾಯ್ತಾರಾ ॥ ॥ ಜೀಜೀ ॥

ಮೇಲಾದ ಮಂಟಪಕ ಕೀಲಿ ತಗೆದು ನೋಡಮ್ಮಾ
ಮುತ್ತೈದಿನ ಕಳಕೋ ಬ್ಯಾಡಾ ।
ತಿಳಕೊ ತಂಗೆಮ್ಮಾ ॥ ॥ ಜೀಜೀ ॥

ಆರು ಮೊಳದ ಸೀರಿಯನ್ನುಟ್ಟು

ಹೂವಿನ ಕುಬಸ ತೊಟ್ಟು
ದೊಡ್ಡ ಕುಂಕುಮ ಹಚ್ಚಿ ಮುತ್ತೈದಿತನಾ ಪಡಿಯಮ್ಮಾ ॥ ಜೀಜೀ ॥
ಕಸನ ಹೊಡೆದು ಮನ ಹಸನ ಮಾಡಿಡು ನೀನು
ತಂಗಿಪತಿಯ ಪಾದ ಪೂಜೆಯನ್ನು ದಿನ ದಿನ ತೊಳಿಯ ತಂಗೆಮ್ಮಾ॥
॥ ಜೀಜೀ ॥

॥ ಖ್ಯಾಲಿ ॥

ಎಷ್ಟ ಕರಿಯಲಿ ನಿನ್ನs ಎಷ್ಟ ಒದರಲಿ ನಿನ್ನs ।
ಬಾಲಕ ಪರುಶುರಾಮಾ ।
ಅವತಾರದವನೊ ರಾಮಚಂದ್ರ ಸೇನಾ ॥ ಪಲ್ಲ ॥ ಜೀಜೀ ॥
ಜಮದಗ್ನಿ ಹೊಟ್ಟಿಲೆ ಹುಟ್ಟಿ ಜನಿಸಿ ಬಂದ್ಯೊ ದೇವಾ ನೀನು ।
ತಂದಿ ವಚನ ಮೀರಲಾರದೆ ಹೊಡದ್ಯೊ ನೀ ರೇಣುಕಾನ್ನಾ ॥ ಜೀಜೀ ॥
ರಾಮ ಅವತಾರ ತಾಳಿ ಆಳಿದೋ ಸೀತಾನ್ನ
ಲಂಕಾಪತಿ ರಾವಣ ವೈದಾ ।
ಹೊಡಿಯಲಿಲ್ಲ್ಯಾಕ ದೇವಿಯನ್ನು ॥ ॥ ಜೀಜೀ ॥
ನಮ್ಮ ಪರಶುರಾಮ ಹೊಡದೊ ನಿಮ್ಮ ರೇಣುಕಾನ್ನs ।
ಬಾಲ ಸಕಲ ಕಾರ್ತಿಕ ವೀರ್ಯಾ ಕಾಡತಿದ್ದೊ ರೇಣುಕಾನ್ನ
ನಿಮ್ಮ ಮಾಯಿ ಕರೆ ಇದ್ರ ಹೊಡಿಲಿಲಾಲ್ಲಾಕ ರಾಜನ್ನ ॥ ॥ ಜೀಜೀ ॥
ಸುತ್ತ ದೇಶದೊಳಗ ಧನ್ಯಾಳ ಊರ ಖಡಕಾ
ಸಣ್ಣ ಬಾಲಕ ಅರ್ಜುಣಾ ಸಭಾಕ ಮಾಡುವ ಶರಣಾ ।
ಬಾಲಕ ಪರಶುರಾಮಾ ॥ ॥ ಜೀಜೀ ॥

ಪಕ್ಷಿ ಒಂದ ಕಂಡೆನು

॥ ಪದಾ ॥

ಪಕ್ಷಿ ಒಂದ ಕಂಡೆನು ಬರುವಾಗ ।
ಕುತ್ತಿತಪ್ಪಾ ನಾ ಬರುದಾರ್‍ಯಾಗ ।
ಇಪ್ಪತ್ತಾರ ಕಣ್ಣ ಮೂರ ಮೂಗ ಇದ್ದವು ಕೇಳರಿ ಪಕ್ಷೀಗ ।
ಸವಾಲ ಬಾಳ ಕೇಳಿಲ್ಲ ನಿನಗ ।
ಮೂಗಂ ಸಂಕ್ಷಿಪ್ತದೊಳಗ ।
ಬಂದ್ರ ಹೇಳ ಹೇಳಬೇಗ ಬರಲಿಕ್ಕ ಬಿಡ ತಂಗಿ ಜುಲುಮಿಲ್ಲಾ ।
ಧನ್ಯಾಳ ಊರ ಜಾಹೀರ ದೇಶದಮ್ಯಾಗ ನಿನಗ ॥

ಮಳಿಸ್ವಾಮಿ ಧಯಾ ನಮ್ಮ ಮ್ಯಾಗ ।
ವಸ್ತಾದ ಅಮೀನಸಾಬನ ಸವಾಲ ಕೇಳತಾನ ಬಂದು ಸಭಾದಾಗ ॥ ಜೀಜೀ ॥

॥ ಖ್ಯಾಲಿ ॥

ಬರದ ಇಟ್ಟಾರೊ ಲೆಖ್ಖಾ ಓದಿ ಹೇಳ ಪಕ್ಕಾ॥ ॥ ಪಲ್ಲ ॥ ಜೀಜೀ ॥

ಇಲ್ಲಿಂದ ಸ್ವರ್ಗಕ ಹೋಗುವ ಲೆಖ್ಖಾ ।
ಮೂರವಸ್ತಿ ಆಗತಾವೊ ಇದನ ಹೇಳಬೇಕೊ॥ ॥ ಜೀಜೀ ॥

ಚ್ಯಾರಣೆಕ ಹನ್ನೊಂದು ಸಿಗರೇಟ ಡಬ್ಬಿಲೆ ಲೆಖ್ಖಾ ।
ಒಂದು ಡಬ್ಬಿ ಬೇಕ ನನಗ ಏನು ಕೊಡಬೇಕೊ ಲೆಖ್ಖಾ ।
ನೂರಾ ವಂದ ವಂದ ಮಂದಿ ಕೌರವರ ಲೆಖ್ಖಾ ।
ಖ್ಯಾರಿ ಬ್ಯಾರಿ ಒಬ್ಬರ ಹೆಸರಾ ತಿಳಿಸಿ ಹೇಳಬೇಕಾ ।
ಸುತ್ತ ದೇಶದೊಳಗ ಧನ್ಯಾಳ ಊರ ಖಡಕಾ ।
ಹರದೇಶಿ ಹಾಡವ ವರಕವಿಗಳ ತೊಡಕೊ ॥ ॥ ಜೀಜೀ ॥

॥ ಸಖಿ ॥

ಓದಿಕೊಂಡಿನ ಲೆಖ್ಖಾ ।
ನಾಹೇಳತೀನ ಪಕ್ಕಾ ।
ಇಲ್ಲಿಂದ ಸ್ವರ್ಗಕ ಹೋಗುವ ಲೆಖ್ಖಾ ।
ಮೂರವಸ್ತಿ ಆಗ್ಯಾವ ತಿಳಿ ಏನೊ ಮೂರ್ಖಾ॥ ॥ ಜೀಜೀ ॥

ಚಾರಣೆಕ ಹನ್ನೊಂದ ಸಿಕ್ರಟ ಡೆಬ್ಬಿಯ ಲೆಖ್ಖಾ ।
ಹನ್ನೊಂದ ಸಿಕ್ರೇಟಾದು ಹೆಣ್ಣಿನ ಅವತಾರ॥ ॥ ಜೀಜೀ ॥

ನೂರಾವಂದ ಮಂದಿಯ ಕೌರವರ ಲೆಖ್ಖಾ ।
ನೂರಾವಂದ ಸ್ಥಳ ಆವೊ ತಿಳಿ ಏನ ಮುರ್ಖಾ
ಸುತ್ತ ದೇಶದೊಳಗಿ ಧನ್ಯಾಳ ಊರ ಖಡಕಾ
ಹರದೇಶಿ ಹಾಡಾವರ ಬಿಚ್ಚಾರೊ ತೊಡಕಾ॥ ॥ ಜೀಜೀ ॥

॥ ಸಖಿ ॥

ಬಿತ್ತವರಿಗೆ ಉಡಿ ಚಂದಾ । ಉತ್ತಮರಿಗೆ ನಡಿ ಚೆಂದಾ ।
ಭಕ್ತರಿಗೆ ಎಡಿ ಚಂದಾ । ದೇವರಿಗೆ ನೀಡುದಕಾ
ಪೂಜಾರಿಗಿ ಚಂದಾ ಭಾನಾ ಹಿಡಿಯುದಕಾ ॥ ॥ ಜೀಜೀ ॥

ಗಸ್ತಿಯವರಿಗಿ ಛಡಿಚಂದ । ಕುಸ್ತಿಯವರಿಗಿ ಗಡಿ ಚಂದಾ
ವಸ್ತಿ ಮಾಡವರಿಗಿ ಗುಡಿಚಂದಾ । ವಿಶ್ರಾಂತಿ ಪಡಿಯುದಕಾ ।
ವಿಶ್ವಾಸ ಚೆಂದ ಈಶ್ವರಗ ದುಡಿಯುದಕಾ ॥ ॥ ಜೀಜೀ ॥

ಗಂಗಾಧರಗ ಜೆಡಿ ಚಂದ । ಜಂಗಮರಿಗಿ ಮಡಿಚಂದ
ಅಂಗನಿಯರಿಗೆ ಮುಡಿಚಂದ । ಮಲ್ಲಿಗಿ ಮುಡಿಯುದಕಾ ।
ಬಾಲಾ ಚಂದ ಬಾಲಿಮುದ್ದಾಡುದಕ ॥ ॥ ಜೀಜೀ ॥

ಕುರ್ಪಿಗಿ ಹಿಡಿ ಚಂದ । ಸರ್ಪಿಗಿ ಹೆಡಿ ಚಂದ ।
ಕರ್ಪೂರದ ವಡಿ ಚಂದ ಸುವಾಸ ಕೊಡುವದಕ ।
ಸಜ್ಜನರ ಸಭಾ ಚಂದ ಕೂಡುವದಕಾ ॥ ॥ ಜೀಜೀ ॥

ಇಂಗಳೇಶ್ವರ ಈಶಾನ್ಯ ಸಿಡಿಚಂದ ಮೇಲೆ ಮುತ್ತಿನ ಕೊಡಿ ಚಂದ
ಶಿವಸ್ಥಾನ ನೋಡುದಕ । ಕೂಸ ಲಾಲಸಾನ ಕವಿಬೇಧ ಹಾಡುದಕ ॥
॥ ಜೀಜೀ ॥

॥ ಪದಾ ॥ (ಸವಾಲ)

ಕಡಬಿಂದ ಸವಾಲ ಕೇಳಿದಿ ನಮಗ । ತಿಳಿಸಿ ನಾ ಹೇಳತೀನಿ ಇನ್ನಮ್ಯಾಗ ।
ಶಾಂತದಿಂದ ನೀವು ಕುಂತ ಕೇಳರಿ ತಿಳಿಸುವೆ ಇದರ ಭಾಗ ॥ ಜೀಜೀ ॥

ಎಂಬತ್ತೊಂದ ಕಡಬಾ ಮಾಡ್ಯಾರ ಮದಲೀಗ ।
ಮೂರ ಭಾಗ ಮಾಡಿದಾರೊ ಅದರಾಗ ।
ಇಪ್ಪತ್ತೇಳು ತಿಂದು ಐವತ್ತ ನಾಲ್ಕು ಇಟ್ಟಾನ ಅವರ ಪಾಲಿಗ ॥ ॥ ಜೀಜೀ ॥

ಎರಡನೆದಾಂವ ಎದ್ದಾನ ಆಮ್ಯಾಗಾ ।
ಮೂರ ಪಾಲ ಮಾಡ್ಯಾನ ಅದರಾಗ ।
ತನ್ನ ಪಾಲದ್ದು ಹದಿನೆಂಟು ತಿಂದ ಮೂವತ್ತಾರು ಬಿಟ್ಟಾನ ಅದರಾಗ ।
ಹನ್ನೆರಡು ತಿಂದು ಇಪ್ಪತ್ತನಾಲ್ಕು ಇಟ್ಟ ಮೂರಪಾಲಿಗ ॥ ॥ ಜೀಜೀ ॥

ಮೂರು ಮಂದಿ ಎದ್ದಾರು ಆಗ ಬೇಗ । ಮೂರಪಾಲ ಮಾಡ್ಯಾರ ಅದರಾಗ ।
ಮನುಷ್ಯಾಗ ಎಂಟರಂತೆ ಹಂಚಿಕೊಂಡ ತಿಂದರೊ ಕಡಿಗ ॥ ಜೀಜೀ ॥

ಬೇರ ಹಾರ ನೋಡಿಕೊಳ್ಳಿರೊ ನಿನ್ನೊಳಗ
ಸತ್ಯ ರಜ ತಮ ಮಂದಿ ಬಾವಗಳೊ ಆದಾರ ಇದೆ ಹಾಡ್ಯೊಳಗ ॥ ಜೀಜೀ ॥

ಧನ್ಯಾಳ ಊರ ಜಾಹಿರಾ ದೇಶದ ಮ್ಯಾಗ ।
ಮಳಿಸ್ವಾಮಿ ನೆನದಾನ ಬೈಲಾಗ । ಕೂಸ ದುಂಡಪ್ಪಗೌಡ ಸವಾಲ
ಹೇಳತಾನ ಬಂದು ಸಭಾದಾಗ ॥ ಜೀಜೀ ॥

ಬೀಬೀ ಫಾತಿಮಾ

॥ ಸಖಿ ॥

ಸ್ಮರಣಿ ಮಾಡುವೆ ಗಣಪತಿ ।
ಧರುಣಿಮ್ಯಾಗ ನಿನ್ನ ಕೀರ್ತಿ ॥ ॥ ಜೀಜೀ ॥

ತರುಣಗ ಕೊಡು ಮುಕ್ತಿ ಕರುಣಾಮೃತ ಕಂಡಿಸಿ ।
ಪವಿತ್ರ ಮಾಡೊ ಪುತ್ರನ್ನ ತೃಪ್ತಿಪಡಿಸಿ ॥ ಜೀಜೀ ॥

ಮಾಡುವೆನು ಪಾದಪೂಜಿ । ಪುಷ್ಪ ಪನ್ನೀರದ ಹೂಜಿ ।
ಭಜಿಸುವೆನೊ ಬಾರಿಸಿ । ಬಾಜಿ ನಿನ್ನ ಸೇವಾ ನಡಸಿ ।
ಅರ್ಪಿಸುವೆ ಕಾಯಿ ಕರ್ಪೂರ ಸುಡಿಸಿ ॥ ॥ ಜೀಜೀ ॥

ಕಂಠ ಶಬ್ದ ಕನನಾನಾ । ತಂತಿನಾದ ತನನಾನಾ ।
ಜ್ಯಾಂಜ ನುಡಿಸಿ ಜನನಾನಾ । ಜೈಯ್ ಬೇರಿಯ ಹೊಡಿಸಿ ।
ಹಿಂಬಾಲಿರು ರಂಬಿರಣಗಂಬಿ ಹುಡಸಿ ॥ ॥ ಜೀಜೀ ॥

ಇಂಗಳೇಶ್ವರ ಸಿಂಗಾರಮಸ್ತ । ಸಿಕಂದ್ರ ಪೀರ ಬಂಗಾರ ವಸ್ತ್ರಾ
ಬೃಂಗಲಾಲಸಾನಕವಿ ಸಿಸ್ತಾ । ಅಕ್ಷರಕ ಅಕ್ಷರ ಕೂಡಿಸಿ
ಪಳಿಯೊಳು ಪ್ರಾರ್ಥಿಸುವೆ ಕೈ ಜೋಡಿಸಿ ॥ ॥ ಜೀಜೀ ॥

॥ ಪದಾ ॥

ಸತ್ಯೆ ಶರಣರ ಭಕ್ತಿ ನೋಡುದಕ । ಮಹಾದೇವ ಬಂದಾನೊ ಮರ್ತ್ಯಕ ।
ಸನ್ಯಾಶಿರೂಪ ತೊಟ್ಟ ಬಂದಾನೊ ಬೈರಂಗ ತೋರ್‍ಯಾನೊ ಕವತೂಕಾ ॥
॥ ಜೀಜೀ ॥

ಶಿವನ ಮನಿ ಹುಲಿ ಅನಿಸಿದಾ ಮೌಲಾಲಿ ಹೆಸರ ಆದಿತ ಮೂರಲೋಕಕಾ।
ಹಂತವನ ಮಡದಿ ಬಿಬಿ ಫಾತಿಮಾ ಭಕ್ತಳಿದ್ದಾಳ ಪತಿ ಸೇವಕಾ ॥ ಜೀಜೀ ॥

ಅವರ ಮನಿಗೊಬ್ಬ ಭಾವಾ ಬಂದಾನೊ । ಜೋಳಿಗೆ ಹಾಕಿಕೊಂಡ ಭಿಕ್ಷಾ ಬೇಡುದಕ।
ಅನೇಕ ತರದಿಂದ ಹಲಬುತ ನಿಂತಾನ ಬಂದ ಅವರ ತೊಲಬಾಗಿಲಕ॥
॥ ಜೀಜೀ ॥

ಬಂದ ಭಾವಾನ ನೋಡಿ ಮೌಲಾಲಿ ಕರದಾರ ಬಿಬಿ ಎಲ್ರಿ ನೀವು ಹೋರಿಯಾಕ
ಯಾವೊಬ್ಬ ಭಾವಾ ಭಿಕ್ಷುಕ ಬಂದ । ನೀಡ ಕಳುರಿ ಹೋಗಲಿ ಮುಂದಕ॥
॥ ಜೀಜೀ ॥

ಚ್ಯಾಲ ಪತಿ ಶಬ್ದ ಕೇಳಿ ಕುಶಿಯಾಗಿದಾರೊ ಮನದಾಗ
ಒಳಗಿದ್ರೊ ಅಡಿಗಿ ಮನಿಯಾಗ ॥ ॥ ಜೀಜೀ ॥

ಮುತ್ತು ರತ್ನ ತಗೊಂಡ ಬಂದಾಳೊ ನೋಡ್ರಿ ಹೊರಗ ।
ನೀಡುದಕ ಬಂದಾಳೊ ಭಾವಾಗ ॥ ॥ ಜೀಜೀ ॥

ಮುತ್ತು ರತ್ನ ನೋಡಿ ವಲ್ಲಿ ಅಂತಾನೊ ಸನ್ಯಾಸಿ ಆಗ ।
ಅನ್ನಾ ಹಾಕ ತಾಯಿ ಹೊಟ್ಟೀದ ॥ ॥ ಜೀಜೀ ॥

ಏರು ಮೂರ ದಿವಸವಾಯಿತ ಉಪವಾಸ ಇದ್ದೀನಿ ವಚನ ಕೊಡು ತಾಯಿ ಉಣಿಸುದಕ ।

ಕೂಡಪಲ್ಲ ಸನ್ಯಾಶಿರೂಪ ತೊಟ್ಟ ಬಂದಾನೊ ಬೈರಂಗ ತೋರ್‍ಯಾನೊಕವ ತೂಕಾ ॥ ಜೀಜೀ ॥ ಚೌಕ ೧ ॥

ಬೇಡಿದವರಿಗೆ ಬೇಡಿದ ಕೊಟ್ಟು ಶಾಂತ ಮಾಡಿದಂತ ಅವರಿಗ ।
ಸುದ್ದಿ ಕೇಳಿ ನಿಮ್ಮಲ್ಲಿ ಬಂದೀನಿ ಅನ್ನಾ ಹಾಕತಾಯಿ ಹೊಟ್ಟಿಗ ॥
॥ ಜೀಜೀ ॥

ಸುಸ್ತ ಮಾಡಲಿಲ್ಲ ಶಿಸ್ತಿನ ಪ್ರಕಾರ ಅಡಿಗಿ ಸಾಹಿತ್ಯ ನಡಿಶ್ಯಾರ ಆಗ ।
ಮೀನ ಒಂದನಾಲ್ಕ ಹಿಡಿದ ತರಸ್ಯಾರಾ ರೂಪಾಯಿಕೊಟ್ಟ ಅವರು ಜ್ಯಾಲಗಾರನ ॥ ॥ ಜೀಜೀ ॥

ರೆಕ್ಕಿ ಪುಚ್ಚ ಕಿತ್ತಿ ಚೊಕ್ಕ ಚಿನ್ನ ಮಾಡಿ ಉಪ್ಪಕಾರ ಅಳತಿಯ ಮ್ಯಾಗ।
ಬತ್ತೀಸ ಮಸಾಲಿ ಹಾಕಿ ಅಡಿಗಿ ನಾಜೂಕ ಮಾಡಿ ಪಾನಿ ಕೊಟ್ಟಾಳು ತುಪ್ಪದೊಳಗ ॥ ॥ ಜೀಜೀ ॥

ಚ್ಯಾಲ ಊಟಕ ಕುಂದ್ರಶ್ಯಾರ ಕರದ ದೇವರ ಮನಿಯಾಗ
ಮೀನಿನ ಅಡಗಿ ನೀಡಾ ಅಗಲಾಗ ॥ ॥ ಜೀಜೀ ೧ ॥

ಇದು ಯಾರಿಗೆ ಬೇಕು ಬೇಕಾಗಿಲ್ಲವ್ವಾ ನನಗ ।
ಮಗ ಇದ್ದರ ಕೊಯಿರಿ ಮನಿಯಾಗ ॥ ॥ ಜೀಜೀ ೨ ॥

ಹಂಬಲಾಗೇದ ಮಕ್ಕಳ ಮಾಂಸದ ಮ್ಯಾಗ ।
ಅದಕಾಗಿ ಬಂದಿನರಿ ಮನಿಗಿ ॥ ॥ ಜೀಜೀ ೩ ॥

ಬಿಬಿ ಪಾತಿಮಾ ಮನಸಾಕ್ಷಿ ಹೇಳತಾರ ಸಾಹೇಬರ ಸರೀರಿ ನೀವು ಶೋಕಾ ॥ ॥ ಜೀಜೀ ॥

ಕೂಡಪಲ್ಲ ಸನ್ಯಾಸಿರೂಪ ತೊಟ್ಟ ಬಂದಾನೊ ಬೈರಂಗ ತೋರ್‍ಯಾನೊ ಕವತೂಕಾ ॥ ॥ ಜೀಜೀ ಚೌಕ ೨ ॥

ಬೀಬಿ ಘಾತಿಮಾ ಮಾಸಾಪ್ತಿ ಹೋದಾರೊ ಮೌಲಾಲಿ ಸಾಹೇಬರ ಹತ್ಯಾಕ।
ಪತಿಯ ಮುಂದ ಈ ವೃತ್ತಾಂತ ಹೇಳತಾರ ಗಟ್ಟಿ ಧೈರ್ಯ ಮಾಡಿ ತನ್ನ ಮನಕ।
ಆಗ ಮೌಲಾಲಿ ಸಾಹೇಬರು ಮಡದೀಗಿ ಹೇಳತಾರ

ಹುಟ್ಟಿ ಬಂದಿದಿ ಪರ ಉಪಕಾರಕ ।
ಕೊಟ್ಟ ವಚನ ಭ್ರಷ್ಟ ಆದರ ಆಗತದ ಅಘೋರ ನರಕಾ ॥ ಜೀಜೀ ॥

ಮಕ್ಕಳ ಸತ್ತರ ಮಕ್ಕಳ ಹುಟ್ಟತಾರೊ ಮುಂದ ದೇವರ ಕೊಡುವ ಕಾಲಕ।
ಭಾವಾ ಸೆಟಗೊಂಡ ಹೋದರ ಮತ್ತ್ಯಾರ ಬರಬೇಕ
ನಮ್ಮ ಮನಿ ಭಿಕ್ಷಾ ಬೇಡುದಕ ॥ ॥ ಜೀಜೀ ॥

ಚಿಂತಿಯೊಳಗ ತಾಯಿ ಹಂಚಿಕಿ ಹಾಕತಾಳೊ
ಬಿದ್ದಂಗಾತ ಮಾಯದ ಮನಕ ।
ಅಷ್ಟರೊಳಗ ಸಾಲಿ ಬಿಟ್ಟ ಮಾಸ್ತರ ಮಗಾ ಬಂದ ಮನಿಗಿ ಊಟಕ ॥
॥ ಜೀಜೀ ॥

ಚ್ಯಾಲ ತಾಯಿ ಮಾರಿ ನೋಡತಾನ ಪಾಟಿ ಪುಸಕ ಬಗಲಾಗ
ಹಾಗೆ ಹೋಗಿ ಕೂತಾನ ತಾಯಿ ಉಡಿಯಾಗ ॥ ॥ ಜೀಜೀ ॥

ಸಣ್ಣ ಮಾರಿ ಮಾಡಿಕೊಂಡ ಕುಂತಿದೆವ್ವಾ ಚಿಂತ್ಯಾಗ ।
ಕಾರಣ ಎದರ ಸಲುವಾಗಿ ॥ ॥ ಜೀಜೀ ॥

ನಿನ್ನ ಚಿಂತಿ ಬೈಲ ಮಾಡದಿದ್ದರ ಈ ಜಗದೊಳಗ ।
ಮಮ್ಮಗ ಅಲ್ಲ ನಬಿ ಸಾಹೇಬಗ ॥ ॥ ಜೀಜೀ ॥

ಏರು ನುಡಿದಂತೆ ನಾವು ನಡಿಯದಿದ್ದರ ಕಲಿ ಹತ್ತುವುದು
ತಾಯಿ ನಮ್ಮ ಕುಲಕ ॥

ಕೂಡಪಲ್ಲ ಸನ್ಯಾಸಿ ರೂಪ ತೊಟ್ಟ ಬಂದಾನೊ ಬೈರಂಗ ತೋರ್‍ಯಾನೊ
ಕವತೂಕಾ ॥ ॥ ಜೀಜೀ ॥ ಚೌಕ ೧ ॥

ಕಣ್ಣೀರ ತಂದು ತಾಯಿ ಹೇಳುತಾಳು ತನ್ನ ಮೋಹದ ಮಗನಿಗ ।
ನಡು ಮಧ್ಯಾನದಾಗ ಹೊತ್ತ ಮುನಗಿತ್ತೊ ರಿಣಾ ಕಡಿತೊ ನಮ್ಮ
ನಿಮಗ ॥ ॥ ಜೀಜೀ ॥

ಮಕ್ಕಳ ಮಾಂಸಾ ಬೇಡಿ ಒಬ್ಬ ಭಾವಾ ಬಂದು ಹಸಗೊಂಡ
ಕೂತಾನ ಮನಿಯಾಗ ।
ಉಣಸ್ತೀನಂತಾ ವಚನ ಕೊಟ್ಟೇನ ಮಾಡುದು ಮಗನ ಇನ್ನೆಂಗ ॥
॥ ಜೀಜೀ ॥

ಮಗಾ ಹೇಳತಾನ ತನ್ನ ತಾಯಿಗಿ ಕೊಯ್ದು ಉಣಸರಿ ಭಾವಾ ಬೈರಾಗಿಗ।
ಸಾಯಲಿಕ್ಕೆ ಇದು ಹುಟ್ಟಿ ಬಂದದ ಸುಳ್ಳೆ ಕೊಳಸಬ್ಯಾಡ್ರಿ ಮಣ್ಣಾಗ ॥
॥ ಜೀಜೀ ॥

ಆಗ ಮಗನ ಕಣ್ಣ ಕಟ್ಟಿ ತೊಡಿಯ ಮ್ಯಾಗ ಹಾಕೊಂಡು
ಹತಿಯಾರ ಹಿಡದಾಳ ಕೈಯಾಗ ।
ಮಗನ ಉಳಿಸಲು ಯಾರು ಇಲ್ಲಂತ ಬೊರ್‍ಯಾಡಿ ಬಿದ್ದಳೊ ಧರಣೀಗ ॥
॥ ಜೀಜೀ ॥

ಚ್ಯಾಲ ಇನ್ನೊಮ್ಮೆ ಕುಡಿತಿದಿಯೆನು ಕುಡಿಯಪ್ಪಾ ಸಕ್ರಿ ಹಾಲಾ ।
ತುಂಬಿ ತಂದ ಇಟ್ಟಿನ ಬಟ್ಟಲಾ ॥ ॥ ಜೀಜೀ ॥

ನೀ ಆಡಿದ ತೊಟ್ಟಿಲ ಇನ್ನಾ ಬಿಚ್ಚಿಟ್ಟಿಲ್ಲಾ ।
ನನ್ನ ಉಡಿಯಾಗ ಬಿದ್ದಂಗ ಕಲ್ಲಾ ॥ ॥ ಜೀಜೀ ॥

ನಿನ್ನ ಅಂಗಿ ಟೊಪ್ಪಿಗಿ ಜರತಾರ ಹೊರುವ ಶಾಲಾ ।
ಯಾರಿಗಿ ಕೊಡಲಿ ಇವು ಎಲ್ಲಾ ॥ ॥ ಜೀಜೀ ॥

ಏರು ಪತಿಯ ಹೆಸರು ತಗೊಂಡು ಕತ್ತಿ ಹಿರದಾಳೊ
ಶಿರಾ ಮಾಡ್ಯಾಳ ಕಡಿಯಾಕ ।

ಕೂಡಪಲ್ಲ ಸನ್ಯಾಸಿ ರೂಪ ತೊಟ್ಟ ಬಂದಾನೊ ಬೈರಂಗ ತೋರ್‍ಯಾನೊ
ಕವತೂಕಾ ॥ ॥ ಜೀಜೀ ॥ ಚೌಕ ೪ ॥

ಪತಿಯ ಹೆಸರು ತಗೊಂಡು ಹತಿಯಾರಲೆ ಹೊಡದು
ಶಿರಾ ಮಾಡಿದಾಳಾ ಹತ್ತೆಂಟ ತುಣಕಾ ।
ಆಗ ಭೂಮಿ ಆಕಾಶ ಘೋರ ಗರಿಯತಿತ್ತು
ಪಶು ಪಕ್ಷಿ ಮಾಡತಾವ ದುಃಖಾ ॥ ॥ ಜೀಜೀ ॥

ಸ್ವಚ್ಛವಾಗಿ ತೊಳದ ಬಾಳ ವೆಚ್ಚಾ ಹಾಕಿ
ಹೆಚ್ಚಿನ ಅಡಿಗಿ ಮಾಡ್ಯಾಳ ಕಡಕಾ ।
ಊಟಕ ಕರದರ ಒಲ್ಲೆಂದ ಭಾವಾ ನಿಮ್ಮ ಪುತ್ರ ಬರುವ ತನಕಾ ॥
॥ ಜೀಜೀ ॥

ಆಗ ಸಿಟ್ಟಿಗೇರಿ ಬಿಬಿಪಾತಿಮಾ ಹೇಳತಾಳು
ಕೂಸ ಹೋಗೇದ ನಂದ ಕೈಲಾಸಕ ।
ಆಗ ಭಾವಾ ಕೂತು ಆವ ಭೇಟಾ ಅಂದಾನೊ
ಮಗಾ ಬಂದ ಮನಿಗಿ ಊಟಕ ॥ ॥ ಜೀಜೀ ॥

ತಾಯಿ ತಂದಿ ಮಗಾ ಮೂವರು ಕೂಡಿ
ಬಿದ್ದಾರ ಆತನ ಪಾದಕ ।
ಭಾವಾ ಬಿಬಿಮಾತಿಮಾಗ ಅಂದಾನೊ ಬಂದಿನಿ ಭಕ್ತಿ ನೋಡುದಕ ॥
॥ ಜೀಜೀ ॥

ಚ್ಯಾಲಗ ಇವರ ಸಲುವಾಗಿ ಜ್ಯಾಗಾ ತಯ್ಯಾರ ಮಾಡಿದಾರ ಮ್ಯಾಗ ।
ಆ ಅಲ್ಲಾನ ಅರಮನಿಯೊಳಗ ॥ ॥ ಜೀಜೀ ॥

ಇವರ ಸಲುವಾಗಿ ಕಳಿಸ್ಯಾರ ನೋಡರಿ ಶಿವಧೂತರಗ ।
ತರುವುದಕ ಮ್ಯಾನೆದೊಳಗ ॥ ॥ ಜೀಜೀ ॥

ಸುತ್ತ ದೇಶದೊಳಗ ಸಾರವಾಡ ಊರ ಜಾಹೀರ ದೇಶದ ಮ್ಯಾಗ ।
ಮೆರೆಯುವುದು ಡೋಣಿ ದಂಡಿಗ ॥ ॥ ಜೀಜೀ ॥

ಏರು ವಸ್ತಾದ ಮೋದಿನ ಸೋಸಿ ಹೇಳತಾನ
ನಡಿಯ ಬೇಕರಿ ಏಕನಿಷ್ಠಿ ಕಡಿತನಕಾ ॥

ಕೂಡಪಲ್ಲ ಸನ್ಯಾಸಿ ರೂಪತೊಟ್ಟ ಬಂದಾನೊ ಬೈರಂಗ ತೋರ್ಯಾನೊ ಕೌತುಕಾ॥
॥ ಜೀಜೀ ಚೌಕ ೫ ॥

॥ ಖ್ಯಾಲಿ ॥

ಹಗರ ಕಾಲವು ಜನಕ ಬತ್ತಣ್ಣಾ । ಈ ಹಗರ ಕೋಪವು ಜಗದ ಪ್ರಾಣಿ ಮೇಲಣ್ಣ
ಜನಕ ಜನನೆ ಸೇರಲಿಲ್ಲಾ । ಮನಕ ನಾಚಿಕಿ ಹುಟ್ಟಲಿಲ್ಲಾ । ಕನಕ ಹೆಣ್ಣು ಮಣ್ಣು
ಸ್ವಾನಿನಂತೆ ಬೆನ್ನ ಹತ್ತುವದನ್ನಾ
ಅಂಜುವ ಜನರಿಗೆ ಸುಖವಿಲ್ಲಣ್ಣಾ ಸೆರಿ ಗಂಜಿ ಕಾಣದೆ ಮುಂದೆ ಮನಿ ಮನಿ
ತಿರುಗತಾರನ್ನಾ ।
ಮಂಜಿಮಳಿಯ ಮಾಯನಾಗಿ ಬಂಜಿನಾದಳೊ ಭೂಮಿ ತಾಯಿ ಎಂಜಲ
ಪತ್ರೊಳಿಗಾಳಿಗಿ ಹಾರಿದಂತೆ
ಈ ಜಗವು ಹಾರುವದಣಾ ॥ ಜೀಜೀ ॥ ಕಲ್ಲಕೋಳಿ ಕೂಗತದಣ್ಣಾ । ಬಲ್ಲಿದ
ಶರಣರ ಉಳಿವಿ ಬಿಟ್ಟ ಇನ್ನ ಓಡತಾಣ್ಣಾ ।
ಅಲ್ಲಮಪ್ರಭು ಚನ್ನಬಸವ ಕಲ್ಲತೇರವ ಎಳಸತಾನ । ಅಲ್ಲಿ ಬಾದಿ ಭಂಡಾರ
ಒಡೆದ ಎಲ್ಲ ರಾಜರು
ಮಡಿಯುವನ್ನಾ ॥ ಜೀಜೀ ॥ ಹಿಂದಿನ ಸುಖವು ಮುಂದ ಇಲ್ಲನ್ನಾ । ವಂದನ
ದಿನಗಳು ಬಂದು ನಿಮಗಿನ್ನು
ಒದಗತಾವಣ್ಣಾ । ಎಂದೇನ ಅನ್ನ ಬೇಡಿರಿ ಕಂದ ಚಿಕ್ಕಯ್ಯನ ಧ್ಯಾನ ಮಾಡರಿ
ತಂದಿ ಸದಾಶಿವನ ಹೊಂದಿದವಂಗೆ ಮುಂದೆ ಮೋಕ್ಷ ದೊರೆಯುವನ್ನಾ॥
॥ ಜೀಜೀ ॥

ಭಾಗ – ೪

೧) ಇಂಗಳೇಶ್ವರ

೨) ಖ್ಯಾಡಗಿ
ಚಡಚಣ, ಕಡಣಿ, ಹತ್ತರಕಿಹಾಳ

ಪರಿವಿಡಿ

೧)	ಅಣ್ಣ ತಮ್ಮರು	೨೦೬
೨)	ನೀಲಾವತಿ	೨೧೪
೩)	ಖ್ಯಾಲಿ	೨೨೬
೪)	ಖ್ಯಾಲಿ	೨೨೭
೫)	ಖ್ಯಾಲಿ	೨೨೭
೬)	ತಾಯಿಕಿನ್ನಾ ತಂದಿ ಹೆಚ್ಚಿನಂವಾ	೨೩೦
೭)	೧) ಸಖಿ ೨) ಸಖಿ	೨೩೨–೨೩೩
೮)	ದೈವದ ದಯಾ ಇರಬೇಕು	೨೩೪
೯)	ಹೈನದ ಹೈರಾಣ	೨೩೭
೧೦)	ಅವರಿ ಹೂವಿನಂಥಾ ನಾರಿ	೨೪೦
೧೧)	ಚಂದ್ರಮುಖಿ	೨೪೮
೧೨)	ಅಕ್ಬರ ಬಾದಶಾ	೨೫೨
೧೩)	ಪಂಡಿತರ ಹೌದಂತಾರ	೨೫೬
೧೪)	೧. ಖ್ಯಾಲಿ ೨. ಖ್ಯಾಲಿ	೨೬೩
೧೫)	ಕೋಳೂರ ಕೊಡಗೂಸು	೨೬೫
೧೬)	ಮಣ್ಣಿನ ಪದದ ಜವಾಬ	೨೬೯
೧೭)	ಹೆಣ್ಣಿನ ಜವಾಬ	೨೭೨
೧೮)	ಗುರುವಿನ ಪುತ್ರನಾಗಿ	೨೭೫
೧೯)	ಬಡವನನ್ನ ಅಳಿಯ ಮಾಡಿಕೊಳ್ಳುವ ಮೋಸ	೨೭೯
೨೦)	(ಸಖಿ) ಲಗಳಿ ಮೂಲಕ್ವಾಣಿ – ಬಸವೇಶ್ವರ ಪದಾ	೨೮೫

೨೧)	ನಾಚಿಕಿಲ್ಲ ನಾಗೇಶಿ ಬಸವೇಶ್ವರ ಪದಾ	೨೯೦
೨೨)	ಆರಿದ್ರಾ ಮಳಿ ಆಯ್ತು ಆರ ಅಂತಸ್ತಿನ ಮನೆ ಹೊಯ್ತು	೨೯೨
೨೩)	ಸಾಕ್ಷಾತ ಇಳದ ಬಂದ ಶಂಕರಾ	೨೯೪
೨೪)	ಗುಣಾಕಾರದ ಲೆಖ್ಖ	೨೯೮
೨೫)	ಸೋಸಿ ಸವಾಲ ಹೇಳು	೩೦೧
೨೬)	ಸೂಳ್ಯಾರ ಚಲ್ಲಾಟ	೩೦೪
೨೭)	ಶಕ್ತಿ ಪದಾ	೩೦೬
೨೮)	ಅಲ್ಲದ ಕೆಲಸ	೩೦೯
೨೯)	ಶಿವಸ್ತುತಿ	೩೧೨
೩೦)	ನೀರಾ ಗಂಡ್ಯೆತಿ	೩೧೪
೩೧)	ಶರೀರ ಪದಾ	೩೧೭
೩೨)	ಬುದ್ಧಿಗೇಡಿ ಹೆಂಗಸ	೩೨೦
೩೩)	ಓದಿ ನೋಡು ಹುಡುಗಾಟಲ್ಲ	೩೨೪
೩೪)	ಬಬಲಾದ ಸಿದ್ರಾಮಪ್ಪ ಗೌಡ ಪಾಟೀಲ	೩೨೭
೩೫)	ಮಹಾರಾಷ್ಟ್ರದ ಮಹಾರಾಜ	೩೩೦
೩೬)	ಶರೀರ ಶೋಧದ ಹಾಡು	೩೩೫
೩೭)	ಭಗೀರಥ	೩೩೯
೩೮)	ಮಾನುವ ಜನ್ಮಕ ಯಾಕ ಬರತಿ	೩೪೨
೩೯)	(ಖ್ಯಾಲಿ) ಆರುವೆಂಬ ಅರವಿನಾ ಮಗದೆ	೩೪೭
೪೦)	ನಿನಗ ಆಗಬೇಕು ಡಂಬರ ಕತ್ತಿ	೩೫೦
೪೧)	ಗಡೆಗ್ಯಾನ ಅಡಿಗಿ ನೀ ಉಂಡಿ ಹ್ಯೆವಾನಾ	೩೫೩

ಅಣ್ಣ ತಮ್ಮರು

ಒಂದ ಊರಾಗ ಚೆಂದ ಸುಂದರ ಶ್ರೀಮಂತರು ತೊಂದ್ರೆ ಇಲ್ಲದೆ
ನಡಿಸಿದ ಚಂದ್ರಶೇಖರಾ ।
ರಾಮಲಕ್ಷ್ಮಣರಂಗ ಜೋಡಿ ಅಣ್ಣ ತಮ್ಮರಾ ।
ಒಸಗೂಡಿ ನಡಿತಿದ್ರೊ ಭೇದ ಇಲ್ಲದೆ ಜರಾ ।
ಮುಂದ ಬ್ಯಾರೆ ಆದರೊ ಬಂದ ಮ್ಯಾಗ ಹೆಂಡರಾ ।
ಪಾಲಕ ಬಂದಂಗ ಪಾವ ಆಣೆ ಬಿಡದೆ ಹಂಚಿಕೊಂಡ್ರೊ ಬೆಳ್ಳಿ ಬಂಗಾರಾ ॥
॥ ಜೀಜೀ ॥

ಏರು ದೈವದ ದಯಾ ಯ್ಯಾರ್‍ಯರಿಗಿ ಹೇಳಲಿಕ್ಕೆ ಬರುದಿಲ್ಲಾ ।
ಬ್ಯಾರೆ ನಡಿತೊ ಅವರವರ ಸಿಕ್ಕ ಪಾಲಾ ।
ಅಣ್ಣ ಅನ್ನುವವಾ ಪುಣ್ಯೆ ತಾನಾ ಚಾತುರಾ ।
ಧರ್ಮ ರಾಜ್ಯಾನಂಗ ದಯಾಳಿದ್ದ ಧೀರಾ ।
ಹಸ್ತ ಬಂದವರಿಗೆ ನೀಡತಿದ್ದಾ ಅನ್ನಾ ನೀರಾ
ಅಣ್ಣನ ಭಾವಕ ಮುಕ್ಕಣ್ಣ ಮೆಚ್ಚಿ ಹೆಚ್ಚಿನ ಭಾಗ್ಯ ಕೊಟ್ಟ ಭಯಂಕರಾ ॥
॥ ಜೀಜೀ ॥

ಯಾವ ಮಾತಿಲೆ ಏನೂ ಕೊರತಿ ಇದ್ದಿದಿಲ್ಲಾ ।
ಭರತಿ ಏರಾಟ ನಡಿತೊ ಸಂಸಾರಾ ।
ಇಡೀ ಊರಿಗೆ ಆದ ತಾನು ಸಾವುಕಾರಾ ।
ಅಂವಗ ಮಕ್ಕಳು ಬಾಳ ಇದ್ದಿಲ ಕೇಳ್ರಿ ಪೂರಾ ।
ಆರುತಿಗೊಂದು ಮಗಳು ಕೀರ್ತಿಗಿ ಒಬ್ಬ ಮಗಾ
ಹೆಚ್ಚಿಗಿ ಕೊಟ್ಟಿದ್ದಿಲ್ಲ ಈಶ್ವರಾ ॥ ॥ ಜೀಜೀ ॥

ಇಳುವು ಇವರು ಬ್ಯಾರಿ ಆದ ಬಳಿಕ
ತಮ್ಮಂದ ಉಳಿಯಲಿಲ್ಲಾ ಸಿಲಕೊ ।
ತಮ್ಮನ ಹೊಟ್ಟಿಲೆ ಮಕ್ಕಳು ಹದಿನಾಲ್ಕೊ ॥ ಜೀಜೀ ॥

ಅನ್ನಾ ಆಹಾರ ಸಾಲಲಿಲ್ಲಾ ಹೊಲಾ ಮನಿ ಹೋದು ತಂದ ಸಾಲಕೂ
ಮುಂದು ಏನೊಂದು ಹುಟ್ಟಲಿಲ್ಲಾ ಆ ಕಾಲಕ್ಕೊ॥ ॥ ಜೀಜೀ ॥

ಎಷ್ಟು ದುಡದರ ಸಾಲವಲ್ಲದು
ಅಳತಾವ ಸಣ್ಣ ಸಣ್ಣ ಬಾಲಕೋ
ಎಷ್ಟು ತಾಳೂನು ಹೊಟ್ಟಿ ಸುಟ್ಟು
ಸಾವುದು ಬಂತು ನಮ್ಮ ಭೋಗಕೊ ॥ ॥ ಜೀಜೀ ॥

ಏರು ಮಕ್ಕಳ ಗೋಳ ನೋಡಿ ಮಡದಿ ಅಂತಾಳ ತಾನು
ಗಂಡನ ಮುಂದ ಸುರಸಿ ಕಣ್ಣೀರಾ ।
ನಮ್ಮ ಮಕ್ಕಳ ಅದಾರ ಬಹಳ ಸಣ್ಣವರಾ ।
ಆಡ್ಯಾಡಿ ಮನಿಗಿ ಬಂದು ಉಣ್ಣುವರಾ ॥ ॥ ಜೀಜೀ ॥

ಕೂಡಪಲ್ಲ ಪಾಲಕ ಬಂದಂಗ ಪಾವ ಆಣೆ ಬಿಡದೆ ಹಂಚಿಕೊಡ್ರೊ ಬೆಳ್ಳಿ ಬಂಗಾರಾ ॥
॥ ಜೀಜೀ ॥ ಚೌಕ ೧ ॥

ಏರು ಮಕ್ಕಳ ಬಾಳಾಗಿ ಕೂಳಿಗಿ ಪಿರಿಯ್ಯಾಗಿ । ತಮ್ಮಾ ಹಂಚಿಕಿ ತಗದಾ
ತನ್ನ ಮನದಾಗ ।
ಹಣಾ ಬಹಳ ಆದ ಅಣ್ಣನ ಮನಿಯಾಗ ।
ಅಂವಗ ಮೋಸ ಮಾಡಿ ಹಣಾ ತರಬೇಕೊ ಬೇಗ ।
ಕಪಟ ತಮ್ಮ ತಡಾ ಮಾಡಲಿಲ್ಲಾ ತಾನು
ತೈಯ್ಯಾರಾದ ಆರ ತಾಸ ರಾತ್ರ್ಯಾಗ ॥ ॥ ಜೀಜೀ ॥
ಅಣ್ಣನ ಮನಿಗಿ ಹೋಗಿ ತಮ್ಮಾ ಅಣ್ಣಗ ಎಬ್ಬಿಶ್ಯಾನು
ಏಳೊ ಯಣ್ಣಾ ನನ್ನ ಮಾತ ಕೇಳೋ ಈಗ ।
ಮುತ್ತಿನ ಮುತ್ತಿನ ವ್ಯಾಪಾರ ಸೊಸ್ತಾ ಅಂತ ಶ್ಯಾರದಾಗ ।
ಮಸ್ತ ಪಾಯಿದಾ ಮಾಡಿ ತೋರಸ್ತೀನಿ ಅದರಾಗ
ಆಲಶ್ಯ ಮಾಡಿ ಕೇಡಾ ತಕ್ಷಣ ತೈಯ್ಯಾರಾಗು
ಲಕ್ಷಾಂತರ ರೊಖ್ಖಾ ತಗೊ ಪದರಾಗ ॥ ॥ ಜೀಜೀ ॥
ತಮ್ಮನ ಮಾತಿಗಿ ಅಣ್ಣಾ ನಂಬಿಗಿ ಇಟ್ಟು ತಾನು
ತರತೂನ ಹಣಾ ತಗೊಂಡ ತೈಯಾರಾದ ಕೈಯಾಗ
ಅಣ್ಣ ತಮ್ಮರು ನಡದರೊ ನಬ್ಬ ರಾತ್ರ್ಯಾಗ
ತಮ್ಮಾ ಅಣ್ಣನ ಕರದೊಯ್ದಿ ಆರ್ಯಾಣದಾಗ
ಹಕ್ಕಿ ಗುಬ್ಬಿ ಅಲ್ಲಿ ಒಬ್ಬರ ಸುಳು ಇಲ್ಲಾ ಕರದೊಯ್ದ ಹಂತಾ
ಕಾಂತಾರದಾಗ ॥ ॥ ಜೀಜೀ ॥
ಮುಂದ ಮುಂದು ಅಣ್ಣಾ ಇದ್ದ ಹಿಂದ ಹಿಂದ ತಮ್ಮ ಇದ್ದಾ
ಹಂಚಿಕಿ ಹಾಕತಾನ ಮನದಾಗ ।
ಅಣ್ಣನ ಕಣ್ಣ ಕಳದು ಹಣಾ ವೈಯಬೇಕು ಊರಿಗ
ಎರಡು ಕ್ಯಾರಿ ಮುಳ್ಳ ತಗೊಂಡ ತನ್ನ ಕೈಯಾಗ ।
ತಮ್ಮನ ಮೋಸತಾನ ಅಣ್ಣಗ ತಿಳಿಯಲಿಲ್ಲಾ
ಸುಮ್ಮನೆ ಹೋಗ ತಿದ್ದಾ ಹೋಗಂಗಾ ॥ ॥ ಜೀಜೀ ॥

ಇಳುವು ಸಹಜ ಹೋಗಾಂವಗ ಎತ್ತಿ ವಗದು
ಎದಿಮ್ಯಾಗ ಕುತ್ತ ತಮ್ಮ ಕಳ್ಳಾ ।
ಖಚ್ಚನೆ ಕಣ್ಣಾಗ ಚುಚ್ಚಿದ ಕಾರಿ ಮುಳ್ಳಾ ॥ ॥ ಜೀಜೀ ॥

ಅಣ್ಣನ ಕಣ್ಣ ಕಳದು ಹಣಾ ತಗೊಂಡ ನಡದಾನೊ ದುರುಳಾ ।
ಕಟೀನಾ ಹೃದಯ ಕರಗಲಿಲ್ಲ ಕರುಳಾ ॥ ॥ ಜೀಜೀ ॥

ಅಣ್ಣಽ ಬಾದಾಗಿ ಬಿದ್ದು ಅಳತಾನ ಗಳಾಗಳಾ
ಅಲ್ಲ್ಯಾರ ಕೇಳಬೇಕ ಅಣ್ಣನ ಗೋಳಾ ॥ ॥ ಜೀಜೀ ॥

ಏರು ಅದೇ ಅಡಿವ್ಯಾಗ ಒಂದು ಹಾಳ ಭಾಂವಿ ಇತ್ತು ಕೇಳ್ರಿ
ಅದರ ದಂಡಿಲೆ ಬೆಳದಿತ್ತು ಒಂದು ಮರಾ
ಇವನ ಸನೇದಾಗ ಇತ್ತು ಹತ್ತಿಪ್ಪತ್ತ ಮಾರಾ
ಅಣ್ಣ ಬಳಲತಿದ್ದ ಬಿದ್ದಲ್ಲೆ ಮರಾಮರಾ

ಕೂಡಪಲ್ಲ ಪಾಲಕ ಬಂದಂಗ ಪಾವ ಆಣೆ ಬಿಡದೆ ಹಂಚಿಕೊಂಡ್ರೊ ಬೆಳ್ಳಿ ಬಂಗಾರ ॥
॥ ಜೀಜೀ ॥ ಚೌಕ ೨ ॥

ಏರು ಭಾಂವಿ ದಡದಮ್ಯಾಗ ಇದ್ದಂತಾ ಗಿಡದಾಗ ನೋಡ್ರಿ
ಹೆಣ್ಣ ಗಂಡ ಗಿಳಿ ಗೂಡ ಕಟ್ಟಿ ಗೆಳೆತಾನಾ
ಅವು ಕೂತ ಮಾತಾಡತಿದ್ದು ಬೆಳತಾನಾ ।
ಸ್ವಚ್ಛ ನುಡಿತಿದ್ದು ಇಲ್ಲ ತುಸು ಸುಳ್ಳತಾನಾ ।
ಮೈಸೂರ ಅರಸನ ಮಗಳ ಕಣ್ಣ ಹೋಗ್ಯಾವಂತ
ಅದಕಾಗಿ ಅರಸಷ ಹಿಂಗ ಹೇಳತಾನಾ
ಕಣ್ಣ ತಂದವರಿಗಿ ತನ್ನ ಮಗಳನ್ನ ಕೊಟ್ಟು
ರಾಜಕೀನ ಹಚ್ಚತೀನಂತ ಸಾರ್ಯಾನಾ
ಆಕಿ ಕಣ್ಣ ತರಾಂವ ಇಲ್ಲೇನು ಪುಣ್ಯವಾನಾ ।
ಹೆಣ್ಣ ಗಿಳಿ ಕೇಳತಿತ್ತು ಹಿಂಗ ಗಂಡ ಗಿಳಿಗಿನಾ
ಗಂಡ ಗಿಳಿ ಹೇಳತದ ನಾವು ಕೂತ ಗಿಡದಾಗ
ಮಹತ್ವ ಐತಿ ತಪ್ಪಲ ರಸಾ ಇನ್ನಾ ॥ ॥ ಜೀಜೀ ॥

ಇದೇ ಗಿಡದ ತಪ್ಪಲಾ ತಿಕ್ಕಿಕಣ್ಣಾಗ ಹಾಕಿದರ
ಕಣ್ಣ ಬರತಾವ ನಿಕ್ಕಾ ಚೊಕ್ಕ ಚೆನ್ನಾ
ಇಕಾಡಿ ಅಡಿವ್ಯಾಗ ಯ್ಯಾರು ಬರಬೇಕ ಇನ್ನಾ
ಆಕಿ ಬೇಡಿ ಬಂದಿಲ್ಲ ದೇವರ ಮುನ್ನಾ
ಗಿಳಿ ಮಾತ ಕೇಳಿ ಅಣ್ಣ ಮನದಾಗಿ ಅಂತಾನಾ
ಗಿಳಿ ಮಾತ ಸುಳ್ಳಲ್ಲ ಸತ್ಯ ವಚನಾ ॥ ॥ ಜೀಜೀ ॥

ಇಳುವು ಸೋತವರಿಗಿ ಶಿವಾ ಇರತಾನನ್ನುದ ಸುಳ್ಳಲ್ಲಾ ।
ಗಿಡದ ಕಡಿ ನಡದ ರವ್ವಿನ ಮ್ಯಾಲಾ ॥ ॥ ಜೀಜೀ ॥

ಅವನ ಕೈಗೆ ಗಿಡಾ ಸಿಕ್ಕಿತು ಏರಿ ಹರಕೊಂಡ ತಪ್ಪಲಾ ।
ಇಳದ ಕಣ್ಣಾಗ ಹಾಕೊಂಡ ತಾತ್ಕಾಲಾ ॥ ॥ ಜೀಜೀ ॥

ಅಣ್ಣನ ಕಣ್ಣ ಬಂದು ಕನಡಿಹಂಗ ಒಳೆ ಆಸಲಾ
ಮೈಸೂರಕ ಹೋಗಬೇಕಂತ ತಗದಾನ ಖೂಲಾ ॥ ॥ ಜೀಜೀ ॥

ಏರು ಪುನಾಃ ಹಿಡಿ ತಪ್ಪಲಾ ಕೈಯಾಗ ಹಿಡಿಕೊಂಡು
ಮೈಸೂರ ದಾರಿ ಹಿಡದೇ ಅಂವಸರಾ
ಅರಸನ ಮಗಳ ಕಣ್ಣ ತರಬೇಕಂತ ಸಸಾರಾ
ಹಗಲ ರಾತ್ರಿ ನಡದ ಇಲ್ಲ ಬ್ಯಾಸರಾ ॥ ॥ ಜೀಜೀ ॥

ಕೂಡಪಲ್ಲ ಪಾಲಕ ಬಂದಂಗ ಪಾವ ಆಣೆ ಬಿಡದೆ ಹಂಚಿಕೊಂಡ್ರೊ ಬೆಳ್ಳಿ
ಬಂಗಾರಾ ॥ ॥ ಜೀಜೀ ಚೌಕ ೩ ॥

ಏರು ಮೈಸೂರಕ ಹೋಗಿ ಅರಸನ ದರ್ಶಣಾಗಿ
ನಿಮ್ಮ ಮಗಳ ಕಣ್ಣಾ ತರತಿನಂದಾ ಆ ಕ್ಷಣಕ
ಹರುಷದಿಂದ ಅರಸ ನುಡಿದ ಆ ಕ್ಷಣಕ
ಕಣ್ಣ ತಂದ್ರ ಕನ್ಯಾ ಕೊಡುವೆ ರಕ್ಷಣಕ
ಮಗಳನ ಕೊಟ್ಟು ನಿನ್ನ ಮದುವಿಯ ಮಾಡಿ
ರಾಜಕೀನ ಹಚ್ಚುವೆ ವರದಕ್ಷಣಕಾ ॥ ॥ ಜೀಜೀ ॥

ಆಗ ತಪ್ಪಲ ಹಿಂಡಿದಾನು ಅರಸನ ಮಗಳ ಕಣ್ಣ ಬಂದು
ಹರುಷದಿಂದ ನೇಮಿಸಿದಾರು ಲಗ್ನಕಾ
ಅಕ್ಷತ ಹಾಕಿ ರಾಜಕೀಯ ಹಚ್ಚಿ ಉಪಜೀವನಕಾ
ಅಣ್ಣ ಅರಸಕಿ ಮಾಡತಿದ್ದ ಮೈಸೂರಕಾ ।
ಅಣ್ಣನ ಹಣಾವೈದ ತಮ್ಮನ ಹಕಿಕತಾ
ಚನ್ನಾಗಿ ಕೇಳರಿ ಮನಪೂರ್ವಕಾ ॥ ॥ ಜೀಜೀ ॥

ಕಪಟ ತಮ್ಮಾ ತಂದ ಹಣಾ ಕ್ಷಣ ನಿಲ್ಲಲಿಲ್ಲಾ
ಕಟಗಿ ಮಾರತಿದ್ದ ಹೊಟ್ಟಿ ತಿಪಲಕಾ
ಊರೂರ ತಿರಗತಿದ್ದ ಕಟಿಗಿ ಸಪ್ಲಾಯಕಾ
ಹಾಗೆ ಮಾರುತ ಬಂದ ಮೈಸೂರ ಸ್ಥಳಕಾ
ಓಣಿ ಓಣಿ ತಿರಗ್ಯಾಡಿ ಮಾರಾಟ ಮಾಡತಿದ್ದಾ
ಅಣ್ಣ ಕುತ್ತಿದ್ದ ಗಾದಿ ಮಾಲಕಾ ॥ ॥ ಜೀಜೀ ॥

ಇಳುವು ತಮ್ಮನ ಧ್ವನಿ ಕೂನಾ ಹಿಡದು ಅಣ್ಣಾ ಅವನಿಗಿ ಕರಸಿದಾ ।
ಅಣ್ಣ ಅನ್ನುದ ತಮ್ಮಗ ಗುರ್ತ ಹತ್ತಲಿಲ್ಲ ಶೋಧಾ ॥ ॥ ಜೀಜೀ ॥

ಅಣ್ಣ ಸಿಂಹಾಸನ ಇಳದ ತಮ್ಮನ ತೆಕ್ಕಿಗಿ ಬಿದ್ದಿದಾ
ನಿನಗ ಹೆಂತಾ ಹೊತ್ತ ಬಂತೊ ಅಂತಿದ್ದಾ ॥ ॥ ಜೀಜೀ ॥

ನನಗ ಕಣ್ಣ ಕಳದ ಪುಣ್ಯದಿಂದ ಪೂರಾ ರಾಜಕೀಯ ಸಿಕ್ಕದ
ನಿನ್ನ ಉಪಕಾರ ಮರಿಲಾರೆ ತಮ್ಮಾ ನೆನಸುವದಾ ॥
॥ ಜೀಜೀ ॥

ಏರು
ಅಡಿವ್ಯಾಗ ನೀ ನನಗ ಕಣ್ಣ ಕಳಲಿಕ
ಹಿಂತಾ ರಾಜಕಿ ಸಿಗತಿದ್ದಿಲ್ಲ ಜರಾ ।
ಅಣ್ಣ ಆದದ್ದು ಹೇಳಿದಾನ ಮಜಕೂರಾ ।
ಆಗ ತಮ್ಮಗ ತರ್ಕಾಯಿತು ಅದು ಮುಜರಾ ॥ ॥ ಜೀಜೀ ॥

ಕೂಡಪಲ್ಲ
ಪಾಲಕ ಬಂದಂಗ ಪವ ಆಣಿ ಬಿಡದೆ ಹಂಚಿಕೊಂಡ್ರೊ ಬೆಳ್ಳಿ ಬಂಗಾರ ॥
॥ ಜೀಜೀ ॥ ಚೌಕ ೪ ॥

ಏರು
ಅಂತಃಕರುಣದಿ ಅಣ್ಣಾ ತಮ್ಮಗ ಅಂತಾನು
ನಿನ್ನ ಪುಣ್ಯದಿಂದ ರಾಜಕಿ ದೊರದದ ನಮಗ
ಕಟಗಿ ಮಾರು ಕಷ್ಟ ಯ್ಯಾಕೊ ಇನ್ನ ನಿನಗ
ನಿನ್ನ ಅಣ್ಣ ನೀನು ಉಣ್ಣು ಇನ್ನ ಮ್ಯಾಗ
ಗಾದಿ ಮ್ಯಾಲ ಕುತ್ತ ರಾಜಕಿ ಮಾಡ ತಮ್ಮಾ
ಪ್ರಧಾನಿ ಆಗತಿನೊ ನಾನು ನಿನಗ ॥ ॥ ಜೀಜೀ ॥

ಅಣ್ಣನ ಮಾತಕೇಳಿ ತಮ್ಮ ಅಂತಾನು
ನಿನ್ನ ಕಣ್ಣ ಕಳದು ಹೋಗಿದ್ದೆ ಅಡಿವ್ಯಾಗ
ಅಣ್ಣಾ ಕಣ್ಣ ಹ್ಯಾಂಗ ಬಂದು ಇದು ಹೇಳ ನನಗ
ಆಗ ಅಣ್ಣ ತಿಳಿಸಿದಾ ತಮ್ಮಗ ।
ನಾನು ಬಿದ್ದಲ್ಲಿ ಭಾಂವಿ ಇತ್ತು ಅಲ್ಲಿ ಒಂದು
ಮರಾ ಬೆಳದದ ಭಾಂವಿ ದಂಡಿಮ್ಯಾಗ ॥ ॥ ಜೀಜೀ ॥

ಅದೇ ಗಿಡದಾಗ ಹೆಣ್ಣು ಗಂಡು ಗಿಳಿಗಳು
ಗೂಡ ಕಟಗೊಂಡಾ ಸಂಸಾರ ಸುದ್ದಿ ಮಾತಾಡಾಗ
ಮೈಸೂರ ಸುದ್ದಿ ತಗದಿದ್ದು ಮಾತಿನ್ಯಾಗ
ಅವು ಮೈಲಿಕ್ಕ ಹೋಗಿದ್ದು ಅಂತ ಮೈಸೂರದಾಗ
ಮೈಸೂರ ಅರಸನ ಮಗಳ ಕಣ್ಣ ಹೋಗ್ಯಾವಂತ
ಹೆಣ್ಣ ಗಿಳಿ ಕೇಳತಿತ್ತು ಗಂಡ ಗಿಳಿಯಿಗಾ ॥ ॥ ಜೀಜೀ ॥

ಹೆಣ್ಣ ಗಿಳಿ ಮಾತಿಗಿ ಗಂಡ ಗಿಳಿ ಅಂದಿತ
ಹೌದು ಹಂತಾ ಪುಣ್ಯಾತ್ಮರ ಇಲ್ಲ ಅಡವಿವಳಗ
ನಾವೂ ಕೂತಿವಿ ಅಡವಿ ಗಿಡದಾಗ ॥ ॥ ಜೀಜೀ ॥

ಇಳುವು
ಅದೇ ತಪ್ಪಲ ಹಿಂಡಿಕೊಂಡು ನನ್ನ ಕಣ್ಣ ಕಂಡು ಜಳಜಳಾ
ಪುನಃ ತಪ್ಪಲತಗೊಂಡು ಮೈಸೂರಕ ಬಂದೆ ನಾನು ಸರಳಾ ॥ ಜೀಜೀ ॥

ಅರಸನ ಮಗಳ ಕಣ್ಣಾಗ ಸಣ್ಣ ಮಾಡಿ ಹಿಂಡಿದೆ ನಿವಳಾ
ನನ್ನ ಕಣ್ಣ ಬಂದು ಅಂದ್ಯೊ ಹೆಣ್ಣ ಮಗಳಾ ॥ ॥ ಜೀಜೀ ॥

ಮಗಳ ಕಣ್ಣ ಕಂಡದ್ದು ನೋಡಿ ಅರಸಗ ಹರುಷಾತ ಬಹಳಾ ।
ಮಗಳ ಕೊಟ್ಟು ಹಾಕಿದ ಅಕ್ಕಿಕಾಳಾ ॥ ॥ ಜೀಜೀ ॥

ಏರು ಇನ್ನೇನ ಹೇಳಲಿ ತಮ್ಮಾ ನಿನ್ನ ಪುಣ್ಯ ಹೆಚ್ಚೆಂದಾ
ನಿನ್ನಿಂದೆ ಐಶ್ವರಿ ಕೊಟ್ಟ ದೇವರಾ
ನಿನ್ನಂತಾ ಪುಣ್ಯಾತ್ಮರು ಇಲ್ಲ ಯಾರ್‍ಯಾರಾ ।
ನಮ್ಮಂಥವರಿಗೆ ಹಾಕಾಂವ ನೀನೇ ಅನ್ನಾ ನೀರಾ ॥ ॥ ಜೀಜೀ ॥

ಕೂಡಪಲ್ಲ ಪಾಲಕ ಬಂದಂಗ ಪಾವ ಆಣೆ ಬಿಡದೆ ಹಂಚಕೊಂಡ್ರೊ ಬೆಳ್ಳಿ ಬಂಗಾರಾ ॥
॥ ಜೀಜೀ ॥ ಚೌಕ ೫ ॥

ಏರು ಅಣ್ಣನ ಮಾತಿಗಿ ತಮ್ಮ ಅಂತಾನು । ನನಗ ಅಡಿವ್ಯಾನ ಗಿಡದ್ದು
ಐತೇಳೊ ಗುರ್ತಾ ।
ಅದೇ ಕಾಂತಾರಕ ನಾನು ಹೋಗುವೆ ಪರ್ತಾ ।
ಆ ತಪ್ಪಲ ಹರದ ತರುವೇನು ತುರ್ತಾ
ಕೈಲಾಕ ಮಂದಿ ಕಣ್ಣಾ ಹೋದವರು ಹಾರ ।
ಏಸೋ ರಾಜಕಿ ಗಳಿಸುವೆ ಇರ ಇರ್ತಾ ॥ ॥ ಜೀಜೀ ॥

ಒಂದ ರಾಜಕಿ ಗಳಿಸಿದಿ ನೀನು ಹನ್ನೊಂದ ರಾಜಕಿ ಗಳಿಸುವೆ ನಾನು ।
ಮಂದಮತಿ ಮುಂದ ನಡದಾ ನಿಂದಿಸುತ್ತಾ ।
ಆಕಾಂತಾರಕ ಹೋದ ತಪ್ಪಲ ಶೋಧಿಸುತಾ ।
ಅಣ್ಣ ಸುಳ್ಳಗಿಳ್ಳ ಹೇಳ್ಯಾನೇಣೊ ತಗದ ಬೇತಾ ।
ಪ್ರತ್ಯಕ್ಷ ಆದರೂ ಸಹಿತ ಪ್ರಮಾಣಿಸಿ ನೋಡಬೇಕಂತಾ ।
ಕಾರಿಮುಳ್ಳ ತಗೊಂಡಾನು ಮಜಬೂತಾ ॥ ॥ ಜೀಜೀ ॥

ಕಾರಿ ಮುಳ್ಳ ಕಿಸೇಕ ಹಾಕಿ ಗಿಡಾ ಏರಿ ತಪ್ಪಲ ಹರಿದಾ ।
ಇಳದ ಬಂದು ತಪ್ಪಲ ನೆಲಕಿಟ್ಟು ಕುಂತಾ ।
ಮೊದಲ ಕಣ್ಣಾಗ ಮುಳ್ಳ ಚುಚ್ಚಿಕೊಂಡ ನೋಡುನಂತಾ ।
ಕಳ್ಳಾss ಕಣ್ಣ ಕಳಕೊಂಡೊ ಸುಳ್ಳೆ ಹಾಕಿ ಪಂತಾ ।
ಕತ್ತಲಗೈದಿತು ತಪ್ಪಲ ಹುಡುಕತಾನ ತಿಪ್ಪಲ ಮಾಡಿದ ಭಗವಂತಾ ॥
॥ ಜೀಜೀ ॥

ಹರದಿಟ್ಟ ತಪ್ಪಲ ಹಾರಿ ಹೋದಿತಾ ।
ಈ ಕುರಡ ಕೈಯ್ಯಾಡಸ್ತಾನ ಸುತ್ತಾ ಮುತ್ತಾ ।
ಬದ್ನೆಕಿ ಮುಂಡಿಮಗ್ಗ ಭಗವಾನ ಮೆಚ್ಚಲಿಲ್ಲ
ಹಾಳ ಭಾಂವ್ಯಾಗ ಬಿದ್ದು ಸತ್ತಿತಾ ॥ ॥ ಜೀಜೀ ॥

ಇಳುವು ತಮ್ಮ ಬಿದ್ದು ಸತ್ತಿದ್ದ ಅಣ್ಣಗ ಸ್ವಪ್ನ ಬಿತ್ತೊ ಪೂರಾ
ಅಣ್ಣ ಕಣ್ಣ ತುಂಬ ತಂದಾನು ನೀರಾ ॥ ॥ ಜೀಜೀ ॥

ಆಗಿಂದಾಗ ಅಂತ್ರ ವಿಮಾನ ಮಾಡಿದತ್ಯೆಯಾರಾ ।
ಅದೇ ಕಾಂತಾರಕ ಬಿಟ್ಟ ಬರಾ ರರಾ ॥ ॥ ಜೀಜೀ ॥

ತನ್ನ ತಮ್ಮನ ಕೂಡಾ ತಾನು ಕೊಡಬೇಕಂದ ಟಾರಾ
ಭಾಂವಿ ಜಿಗಿಲಿಕ್ಕೆ ನಿಂತ್ರ ನಿರ್ಧಾರಾ ॥ ॥ ಜೀಜೀ ॥

ಏರು ಕಣ್ಣ ಮುಚ್ಚಿ ಅಣ್ಣಾ ಭಾಂವಿ ಹಾರುದರಾಗ ಪ್ರತ್ಯಕ್ಷ ಆದಾನು ದೇವರಾ।
ಅಣ್ಣನ ಅಂಗೈಯಾಗ ಹಿಡದಾನು ಅಂತರಾ
ಅಂತಃಕರುಣದಿ ಅಂತಾ ಕಂತುಹರಾ ॥ ॥ ಜೀಜೀ ॥

ಕೂಡಪಲ್ಲ ಪಾಲಕ ಬಂದಂಗ ಪಾವ ಆಣೆ ಬಿಡದೆ ಹಂಚಿಕೊಂಡ್ರೊ ಬೆಳ್ಳಿ
ಬಂಗಾರಾ ॥ ॥ ಜೀಜೀ ॥ ಚೌಕ ೬ ॥

ಏರು ಮುಕ್ಕಣ್ಣ ಹಿಡದಾಗ ಅಣ್ಣ ನುಡದಾನು ।
ಯಾರೊ ನೀನು ನನಗ ಹಿಡದಿದಿ ಏನ ಕಾರಣಾ
ನನ್ನ ತಮ್ಮನ ಪ್ರಾಣ ಆಗೇದ ಹೆಣಾ ।
ಅವನ ಗುಡಾ ನಂದು ಆಗಲಿ ಮರಣಾ
ತನ್ನ ಕರ್ಮಕ ನಿನ್ನ ತಮ್ಮ ಸತ್ತಾನು
ನೀ ಯಾಕ ಸಾಯಿತಿ ಅಂದ ನಾಗಭೂಷಣಾ ॥ ॥ ಜೀಜೀ ॥

ಅಣ್ಣ ಅಂದ ತಮ್ಮನ ಅಗಲಿ ನಾನು ಇನ್ನು ಇರಲಾರೆ
ದೇವರಂದ ಕೇಳೋ ಧರ್ಮದ ದುರಣಾ
ಏನ ಬೇಡತಿ ಬೇಡೊ ವರಾ ಕೊಡುವೆನೊ ಪೂರ್ಣಾ
ಆಗ ಅಣ್ಣ ಬೇಡತಾನ ವರ ಕರುಣ
ಬೇಡಿದ್ದ ಕುಡುದು ಸತ್ಯೆ ವಚನ ಕೊಟ್ಟಿ
ಸದ್ಯೆ ಪಡಿಯೋ ತಮ್ಮನ ಪ್ರಾಣಾ ॥ ॥ ಜೀಜೀ ॥

ಸತ್ಯ ವಚನ ಕೊಟ್ಟ ಸಾಕ್ಷಾತ ಶಿವ ತಾನು ತಮ್ಮನ ಪ್ರಾಣ ಪಡದಾ ಆ ಕ್ಷಣಾ।
ಅಣ್ಣನಿಂದ ತಮ್ಮ ಆದ ಉದ್ಧಾರಣಾ ಅಣ್ಣ ತಮ್ಮರು ಕೂಡಿ
ಹಿಡದರೊ ಶಿವನ ಚರಣಾ
ಆಶೀರ್ವಾದ ಮಾಡಿ ಮಾಯಾದ ಮಹಾದೇವ
ಅಣ್ಣ ತಮ್ಮರು ಸೇರಿದರೊ ತಮ್ಮ ಪಟ್ಟಣ ॥ ॥ ಜೀಜೀ ॥

ಇಳು ತಮ್ಮನ ಮಕ್ಕಳು ಬಾಳಾಗಿ ಆಯಿತೊ ಹಿಂತಾ ತ್ರಾಸಾ ।
ಕಾಸ ಅಣ್ಣಗ ಮಾಡಿದ ಮೋಸಾ ॥ ॥ ಜೀಜೀ ॥

ಮೋಸ ಮಾಡಿದರು ಬಿಡಲಿಲ್ಲ ಅಣ್ಣ ಧರ್ಮವಂತ ಅರಸಾ
ಮುಂದ ಕಂಡರೊ ಮುಕ್ತಿ ಕೈಲಾಸಾ ॥ ॥ ಜೀಜೀ ॥

ಸುತ್ತ ದೇಶದೊಳು ಧನ್ಯಾಳ ಊರ ನಮ್ಮ ಕಾಸಾ
ಅಲ್ಲ ನೆನೆದಾನೊ ಪೀರ ಗಣಸ್ಯೆಯದಸಾ ॥ ॥ ಜೀಜೀ ॥

ಏರು ಸೃಷ್ಠಿಯೊಳಗ ಶ್ರೇಷ್ಟ ಇಂಗಳೇಶ್ವರ ಗ್ರಾಮಾ
ಪ್ರೇಮದಿಂದ ಪೇಳುವೆ ಸಣ್ಣ ಕುವರಾ
ಹೆಣ್ಣು ಗಂಡು ಕೂಡಿರಿ ಇಲ್ಲಿ ಬಲ್ಲವರಾ
ಅಣ್ಣ ತಮ್ಮರಂತೆ ನಮಗ ಸಲ್ಲವರಾ ॥ ॥ ಜೀಜೀ ॥

ಕೂಡಪಲ್ಲ ಪಾಲಕ ಬಂದಂಗ ಪಾವ ಆಣೆ ಬಿಡದೆ ಹಂಚಿಕೊಂಡ್ರೊ ಬೆಳ್ಳಿ
ಬಂಗಾರ ॥ ॥ ಜೀಜೀ ॥ ಚೌಕ ೭ ॥

ನೀಲಾವತಿ

ಪುಣ್ಯವಂತರ ಪುರಾಣ ಇದು ಪರಿಪೂರ್ಣ ಕೇಳರಿ
ಶರಣ ಮಾಡಿ ಪೇಳುವೇನು ಆದ ಕತಿ।
ಪತಿವ್ರತೆಯರ ಪ್ರಭಾವ ಪ್ರಖ್ಯಾತಿ ।
ಅತಿ ಮುದದಿಂದ ಜಗಾ ಸಾರತೈತಿ ।
ಮರ್ತ್ಯದೊಳಗ ಮಹಾ ಮೀರಿದ ಶರಣೆ
ಪತಿವ್ರತಾ ಅನಿಸಿ ನಮ್ಮ ನೀಲಾವತಿ ॥ ॥ ಜೀಜೀ ॥ ಪಲ್ಲ ॥

ಸದ್ಗುಣ ಸಂಪಣ್ಣಿ ಲಗ್ನ ಆದ ಮ್ಯಾಗ ಪತಿ ಸೇವೆಯಲ್ಲಿ ಉತ್ತಮ ತೊತ್ತಿ ।
ಐದ ಹೊತ್ತ ಪೂಜಾ ಕೈ ಕಾಲಾವತಿ ।
ಬೇಡಿ ಬಿಕಾರಿಗಿ ಭಿಕ್ಷಾ ನೀಡಾಕ್ಕಿ ಕೈಯೆತ್ತಿ।
ನೀಲಾವತಿ ನಡತಿ ನೋಡಿ ಕಡು ಕೋಪ ಆದಾಳೊ ಕೃಪಣಬುದ್ಧಿಯಕ್ಕಿ
ಅವರತ್ತಿ॥ ॥ ಜೀಜೀ ॥

ಮುಸರಿ ಕೈಲೆ ಕಾಗಿ ಹೊಡಿಲಾರದ ಜೀನಿ ತಾನು।
ಈ ಮನಿತನಕ ನಾನೇ ಇದ್ದಕ್ಕಿ ವಡತಿ ।
ನೀನು ಕೊಟ್ಟ ಕೊಟ್ಟು ಮನಿ ಹಾಳ ಮಾಡತಿ ।
ಅತ್ತಿ ನೆತ್ತನೆತ್ತಿ ಹೊಡಿತದೊ ಎತ್ತಿ ಕೊಡತಿ ॥ ॥ ಜೀಜೀ ॥

ಅತ್ತ ಬಡಿದರ ದೃಢ ಭಕ್ತಿ ಬಿಟ್ಟಿದ್ದಿಲ್ಲಾ ನೀಲಾವತಿ
ನಿತ್ಯ ಕೊಡತಿದ್ಲೊ ಜಡತಿ ॥ ॥ ಜೀಜೀ ॥

ಇಳ ನೀಲಾವತಿ ನಗಿ ಮುಖದಿಂದ ಅತ್ತೀಗಿ ಮಾಡಿ ನಮಸ್ಕಾರಾ ।
ಅತ್ತೀ ಆಶೀರ್ವಾದ ಉಪಕಾರಾ ॥ ॥ ಜೀಜೀ ॥

ನೀಲಾವತಿ ಭಕ್ತಿಗಾಗಿ ಯುಕ್ತಿ ತಗದ ಈಶ್ವರಾ ।
ಜಂಗಮಾಗಿ ಬಂದ ಜಗದೇಶ್ವರಾ ॥ ॥ ಜೀಜೀ ॥

ಅತ್ತಿ ಮನಿಯಲ್ಲಿಲ್ಲ ಮಾರಲಿಕ್ಕೆ ಹೋಗಿದಾಳ ಮಸರಾ ।
ಇಂವಾ ಬಾಗಿಲಕ ಹೋಗಿ ಭಿಕ್ಷಾಂದೇಹೀ ಅಂದ ಸಣ್ಣರಾಗ ॥ ಜೀಜೀ ॥

ಶಬ್ದ ಕೇಳಿ ಶರಣೆ ಎದ್ದು ಹಿಟ್ಟ ನೀಡಿ ಅಂವಸರಾ ।
ಕೈ ಜ್ಯಾಡಿಸಿ ಮಾಡಿ ನಮಸ್ಕಾರಾ॥ ॥ ಜೀಜೀ ॥

ಏರು ಪರೀಕ್ಷೆ ಮಾಡುದಕ ಪರಮೇಶ್ವರ ತಾನು।
ಕಣ್ಣೀರ ಸುರಸ್ತಾನ ಇಲ್ಲ ಅಳತಿ ।
ನೀಲಾವತಿ ಅಂತಾಳ ಗುರುವೆ ಯ್ಯಾಕ ಅಳತಿ ।
ಜಂಗಮಂದ ತಾಯಿ ತನ್ನ ಕಣ್ಣ ಕಳಿತಿ ।

ಕೂಡಪಲ್ಲ ಮರ್ತ್ಯದೊಳಗ ಮಹಾ ಮೀರಿದ ಶರಣೆ
ಪತಿವ್ರತಾ ಅನಿಸಿ ನಮ್ಮ ನೀಲಾವತಿ ॥ ॥ ಜೀಜೀ ॥ ಚೌಕ ೧ ॥

ಅಮ್ಮ ಜೋಳಗ್ಯಾಗ ಹಿಟ್ಟ ನೀಡಾಗ ಜೋರಿಲೆ ಕೈಯ ಜ್ಯಾಡಿಸಿ ಬಿಟ್ಟ।
ಹಿಟ್ಟನ್ಯಾಣ ಹೊಟ್ಟ ಹಾರಿ ನಟ್ಟಿತ ನನ್ನ ಕಣ್ಣಾಗ
ಅದರ ಬಾದೆಕಾಗಿ ನೀರ ಸುರುತಾವ ಸಣ್ಣಗ
ನನ್ನ ಕಣ್ಣ ಕಳದರ ಎಲ್ಲಿ ಹುಡಕಲಿ ಮಣ್ಣಾಗ ॥
ನೀಲಾವತಿ ಅಂತಾಳ ಸಂತಾಪ ಸೈರಿಸರಿ ಕಸರ ತಗಿಯುವೆ
ಊದಿಕಣ್ಣಾಗ ॥ ॥ ಜೀಜೀ ॥

ಅವ್ವಾ ಬರೇ ಊದಿದರ ಹೊಟ್ಟ ಹೊರಗ ಬರುವದಿಲ್ಲಾ
ನಟ್ಟ ಹೊಟ್ಟ ಶಕ್ತಿ ಬರುವುದು ಹೊರಗ ।
ಅಚ್ಚ ಗರತ್ಯಾರು ಅದಾರಿಲ್ಲಿ ಈ ಊರಾಗ ।
ಪತಿವ್ರತಿ ನಾಲಗಿ ಆಡಿಸಬೇಕ ನನ್ನ ಕಣ್ಣಿರಾಗ ।
ನಾಲಗಿ ಪೆಟ್ಟನಿಂದ ನಟ್ಟ ಹೊಟ್ಟ ಬರತೈತಿ
ಶಾಂತಾಗಲಾರದು ತಾಯಿ ಅಲ್ಲಿವರೀಗ ॥ ॥ ಜೀಜೀ ॥

ಇಷ್ಟ ಕೇಳಿ ನೀಲಾವತಿ ಆತ್ಮದೊಳಗ
ಅಂತಾಳ ನಾನೇ ನಾಲಗಿ ಆಡಿಸಬೇಕ ಇವನ ಕಣ್ಣಿನಾಗ ।
ಕಣ್ಣ ಹಗಽರಾದರ ಪುಣ್ಯ ಬರುವುದು ನನಗ
ಹಿಂಗ ತಿಳದು ಅಂದಳೊ ಬಾರೋ ನಾಲಗಿ ಆಡಿಸುವೆ ನಿನಗ ।
ಬೇಧ ಭಾವ ಇಲ್ಲದೆ ನಿರ್ಭಾವದಿ ನೀಲಾವತಿ
ತೊಡಿಮ್ಯಾಲ ಕೊಂಡಳೊ ಕರದ ನಿರಂಜನಗ ॥ ಜೀಜೀ ॥

ತೊಡಿಮ್ಯಾಲ ಹಾಕೊಂಡ ಕಣ್ಣಾಗ ನಾಲಗಿ ಆಡಸ್ತಾಳೊ
ಬ್ಯಾಸಿಗಿ ದಿವಸ ಬೆಂವರ ಭಾರಿ ಮಾರಿ ಮ್ಯಾಗ
ಸತತ ಕುಂಕಮ ಇರತಿತ್ತೊ ನೀಲಾವತಿ ಹಣಿಮ್ಯಾಗ ।
ಈಕಿ ಕುಂಕುಮ ಹತ್ತಿತೊ ಜಂಗಮನ ಪಣಿಮ್ಯಾಗ
ಮುಖಕ ಮುಖಾ ಹತ್ತಿತು ಕುಂಕಮ ಟಿಳಕಾ ಕುತ್ತಿತು
ಜಂಗಮ ಅಂದಾ ಬಿಡು ತಾಯಿ ಹಗರಾತು ನನಗ ॥ ॥ ಜೀಜೀ ॥

ಇಳು ನಿನಗ ಪುಣ್ಯ ಬರಲಿ ತಾಯಿ ಕಣ್ಣ ಹಗರಾದು ಬ್ಯಾನಿ ಹೋಗಿ ।
ಅಚ್ಚ ಪತಿ ವ್ರತಿ ನೀನೇ ನಿಜವಾಗಿ ॥ ॥ ಜೀಜೀ ॥

ಪೋಗಿ ಬರುವೆ ಅಪ್ಪಣಿ ಕೊಡು ಅಂತಾ ನಡದ ಬೈಲಿಗಿ ।
ಅತ್ತಿ ಮಸರಮಾರಿ ಬಂದಳೊ ಬಾಕಲಗಿ ॥ ॥ ಜೀಜೀ ॥

ನಡು ಹೊಸ್ತಲ ಮ್ಯಾಲ ಬೆಟ್ಟಿ ಆಯಿತೊ ಇವರಿಬ್ಬರಗಿ
ಆಕಿ ಹಿಟ್ಟ ಹಾಕಾಕ್ಕಿ ಅಲ್ಲ ಒಬ್ಬರಿಗೆ ॥ ॥ ಜೀಜೀ ॥

ಅತ್ತಿ ನೋಡಿ ಬೈಯತಾಳ ಇಲ್ಲ್ಯಾಕ ಬಂದಿದ್ದೊ ಹಾಳಾಗಿ ।
ಎಷ್ಟೊ ಹಿಟ್ಟಾ ತಂದಿದಿ ಒಳಗ ಹೋಗಿ ॥ ॥ ಜೀಜೀ ॥

ಏರು ನಾನು ಇಲ್ಲದಾಗ ನೀನು ಎಷ್ಟ ಹಿಟ್ಟ ವೈದಿದೇನೊ
ಎಲ್ಲಿತಾನ ನಿನ್ನ ತುಡುಗ ಮುಚ್ಚತೈತಿ ।
ತುಡುಗ ಮೆಯು ದನಾ ಕೈಗೊಮ್ಮಿ ಸಿಗತೈತಿ ।
ನನ್ನ ಹಿಟ್ಟ ಕೊಡುವಂತ ಗಂಟ ಬಿದ್ದಳು ಅತ್ತಿ ॥
ಕೂಡಪಲ್ಲ ಮರ್ತ್ಯದೊಳಗ ಮಹಾಮೀರಿದ ಶರಣೆ ಪತಿವ್ರತಾ ಅನಿಸಿ ನಮ್ಮ
ನೀಲಾವತಿ ॥ ॥ ಜೀಜೀ ॥ ಚೌಕ ೨ ॥

ಜಂಗಮ ಅಂದಾ ಎಂದೊ ಬಂದಿಲ್ಲಾ ಇಂದ ಬಂದಿದ್ದು ಕೇಳ ನೀನೊ
ಒಂದ ಹಿಡಿ ಹಿಟ್ಟ ತಂದು ತಿಂದಿಲ್ಲ ನಿನ್ನ ಮನೀದು ।
ಮುಂದ ಹಿಟ್ಟೀಗಿ ಹೊರಟಿದ್ದೆ ಇಲ್ಲಿಂದ ಹಾಯ್ದು
ಈ ಮನಿ ಹೆಣ್ಣ ಮಗಳ ನನಗ ಕರದಿದ್ಲು
ಕೊಟ್ರ್ಯಾಗ ಎಳದು ಒಳೇ ಇಕ್ಕಟ್ಟಗಿ ಹಾಕಿ
ಲಟಾಲಟಾ ಮುದ್ದ ಕೊಟ್ಳು ನಾಲ್ಕೈದು ॥ ॥ ಜೀಜೀ ॥

ಅಲ್ಲಿಂದ ಕೊಸರಿಸಿ ಬರುದು ಕಡು ಕಷ್ಟಾಯಿತು ನನಗ ।
ಸುಳ್ಳಲ್ಲಾ ಕೇಳೊ ನಾನು ಹೇಳುವದು ।
ಮುದ್ದಾಡುವಾಗ ಮುಖಕ ಮುಖಾ ಕೊಡುವದು ।
ನನ್ನ ಹಣಿಗಿ ಆಕಿ ಕುಂಕಮ ಹತ್ತಿರ ಬೌದು ಜಂಗಮನ ಹಣಿಯಮ್ಯಾಗ।
ಕುಂಕುಮ ಗುಂಡ ಕಂಡು ಕೆಂಡದಂತೆ ಅತ್ತಿ ಒಡಲ ಕುದಿಯುವದು ॥
॥ ಜೀಜೀ ॥

ಜಂಗಮ ಆಡುಮಾತ ಕರೆ ಎಳ್ಳಷ್ಟು ಸುಳ್ಳಲ್ಲಾ ।
ಅತ್ತಿ ನೋಡಿ ಅಂತಾಳ ಹಾ ತೊರೆದು।
ಈಕಿ ಜಂಗಮಗ ಸೋಬತಿ ಮಾಡತಾಳ ಕರ ಕರೆದು।
ನನ್ನ ಮನಿತಾನದ ಕಿಮ್ಮತೆಲ್ಲಾ ಮಾರುವದು ।
ಅಡಗಿ ಮನ್ಯಾಗ ಹೋಗಿ ಮಸರ ಗಡಗಿ ಒಗದು ।
ಹುಟ್ಟ ಹಿಡದಾಳ ಕೈಯಾಗ ಹಿರಿದು ॥ ॥ ಜೀಜೀ ॥

ಹುಟ್ಟಿಲೆ ಹೊಡೆದು ಅತ್ತಿ ಕೆಟ್ಟ ಬೈಗಳಾ ಬೈತಾಳೊ
ಹಿಟ್ಟಿನ ಅಪ್ಪನವರ ಇಟಗೊಂಡಿ ಗಂಡನ ಮರೆದು ।
ಕಂಡಂಗ ಕಾಡತಾಳ ಅತ್ತಿ ಕಳ್ಳ ಕುದಿದು ।
ನಿನ್ನ ಹಾದರ ಹಬ್ಬಿತವ್ವಾ ಊರ ತುಂಬಾ ಮೆರದು ।
ಶರಣೆ ಅಂತಾಳ ಅತ್ತೀ ಆಶೀರ್ವಾದ ನಿತ್ಯ ಬೇಕೊ
ಇದರ ಮುಂದ ಪುಣ್ಯಯಿಲ್ಲಾ ಯಾರ್‍ಯಾರದು ॥ ॥ ಜೀಜೀ ॥

ಇಳು ಅಷ್ಟರೊಳಗ ನೀಲಾವತಿ ಗಂಡ ಬಂದ ಮನಿಕಡಿ ।
ನಿಂತ ಅಂತಾನ ತಾಯಿಗಿ ನೋಡಿ ॥ ॥ ಜೀಜೀ ॥

ನನ್ನ ಮಡದಿಗಿ ದಿನಂಪ್ರತಿ ಹೀಗೆ ಮಾಡ್ತಿ ಹೊಡಿ ಬಡಿ
ಏನ ತಪ್ಪಾದ ತಾಯಿ ಆಕಿ ಕಡಿ ॥ ॥ ಜೀಜೀ ॥

ಮಗನ ಮಾತ ಕೇಳಿ ತಾಯಿ ಮತ್ತ ಆದಳೊ ಕಿಡಿ ಕಿಡಿ ।
ಕಟ್ಟಿ ಕಟ್ಟಿ ಹಲ್ಲ ತಿಂತಾಳ ಧವಡಿ ॥ ॥ ಜೀಜೀ ॥

ನನ್ನ ಮಡದಿದು ಹೇಳಬ್ಯಾಡೊ ಈಕಿ ಬಲ್ಲಿ ಏನ ಆದ ಹುಡಿ ।
ಅನ್ನಯ್ಯನ ಗುಡಾ ಕೆಟ್ಟಾಳ ಹಾದರ ಮಾಡಿ ॥ ॥ ಜೀಜೀ ॥

ಏರು ಮುಂಜೇನೆ ಮಸರ ಮಾರಿ ಮನಿಗಿ ನಾನು ಬರುದರಾಗ
ಜಂಗಮನ ಕೂಡಾ ಮಲಗಿದ್ದಲೋ ಇಲ್ಲ ಭೀತಿ ।
ಕಣ್ಣಾರೆ ನೋಡಿ ನನಗ ಹೆಂಗ ತಡಿತೈತಿ ।
ಮಳ್ಳ ಗಂಡಸಗ ಹೆಂಗಸರ ಪಂದ ಹ್ಯಾಂಗ ತಿಳಿತೈತಿ ॥ ॥ ಜೀಜೀ ॥

ಕೂಡಪಲ್ಲ ಮರ್ತ್ಯದೊಳಗ ಮಹಾ ಮೀರಿದ ಶರಣೆ
ಪತಿವ್ರತಾ ಅನಿಸಿ ನಮ್ಮ ನೀಲಾವತಿ ॥ ॥ ಜೀಜೀ ॥ ಚೌಕ ೩ ॥

ಏರು ಅಲ್ಲದ ಸಲ್ಲದ ಮಾತ ಹೇಳಿ ಮಗನ ತೆಲಿ ತುಂಬಿಸಿದಾಳೊ ।
ಹೇಳಿಕಿ ಮಾತ ಕೇಳಿದ ಧರ್ಮರಾಜ ಮನದಂಗ ।
ಮಡದಿನ್ನ ಬಡಿದು ಕೊಲ್ಲಬೇಕಂತ ಬಡದಿತೊ ಗುಂಗ ।
ಬಡಗಿ ತಗೊಂಡು ಬಂದಾನೊ ಡೊನ್ನಿ ಸರಿಹಂಗ ।
ತಾಯಿ ಕೈಯಾಗ ಹುಟ್ಟಿ ಇತ್ತು ತನ್ನ ಕೈಯಾಗ ಬಡಿಗಿ ಬಂತು
ನಿಂತು ಬಡದಾರೊ ಇದರಾ ಬದರಾ ಕುಸುಬಿ ಬಡದಂಗ ॥ ಜೀಜೀ ॥

ಬಡದು ಬ್ಯಾಸೊತ್ತು ತಾವೇ ಬಿಟ್ರೊ ಕೈ ಸೋತು
ತಾಯಿ ಅಂತಾಳ ಮಗನಿಗ ।
ಈಕಿನ್ನ ಬಿಟ್ಟ ಬಿಡೋ ಇನ್ನೊಂದ ಕನ್ಯೆ ಮಾಡುವೆ ನಿನಗ ।
ಈಕಿ ಹಾದರ ಊರ ತುಂಬಾ ನಾರುದು ಗುಣಗ ।
ಬೆಳ್ಳಿ ಬಂಗಾರಗುಂಡ ಗುಳ್ಳಾ ವಸ್ತಾವಡವಿ ಬಿಡಬ್ಯಾಡಾ
ಸೀರಿ ಕುಪ್ಪಸ ಕಳಕೊಂಡ ಕಳಿಸೊ ಮನಿ ಹೊರಗ ॥ ॥ ಜೀಜೀ ॥

ತಾಯಿ ಮಾತ ಕೇಳಿ ವಡವಿ ಮಾಂಗಲ್ಯ ಮೊದಲ ಮಾಡಿ ತಗದಾ ।
ನಿಜ ಬತ್ತಲೆ ನಿಲ್ಲಶ್ಯಾನ ನೀಲಾವತಿಗ ।
ತಾಯಿ ನೋಡಿ ನಾಚಿ ಅಂತಾಳ ಸುತಗ ।
ರಗಟಿ ಗಿಗಟಿ ಸುತ್ತೊ ಮುಕಳಿಗೆ ಮರ್ಯಾದಿ ಸಲುವಾಗಿ
ಜಪ್ಪಿಸಿ ಉಪ್ಪರಿಗಿ ಚೆಪ್ಪರ ಮ್ಯಾಗ ನೋಡಿ
ಕರಿ ಕಂಬಳಿ ಕಣ್ಣಿಗಿ ಬಿತ್ತೊ ಆತಗ ॥ ॥ ಜೀಜೀ ॥

ಕಂಬಳಿ ಕೋರಿ ಕುಂಡಿಗಿ ಸುತ್ತಿ ಮುಂಡಿ ಹಿಡದು ನೂಕಿದಾನ
ಗಂಡಗ ನಮಸ್ಕಾರ ಮಾಡಿ ನಿಂತಳೊ ಹೊರಗ ।
ನನ್ನ ಗಂಡ ಹೆಚ್ಚಿನ ಉಪಕಾರ ಮಾಡಿದ ಇದು ನನಗ ।
ಹಿಂತಾ ಉಪಕಾರ ಮರಿಯಲಾರೆ ಸಾಯುವರಿಗ
ಮೈಲಿಗಿ ಅರಬಿ ಕಳದು ಮಡಚಿಟ್ಟು ಇಲ್ಲದ ವಡವಿ ತಿಳಿದು
ಕಂಬಳಿ ಮಡಿ ಉಡಿಸಿದ ಪತಿ ನನಗ ॥ ॥ ಜೀಜೀ ॥

ಇಳು ಗಂಡ ಬಿಟ್ಟಾವರಿಗ ಎರುವಾದ ತವರ ಮನಿ ದಾರಿ ।
ಕೊಟ್ಟ ಹೆಣ್ಣ ಕುಲಕ ಹೊರ್ತ ಹ್ಯಾಂಗ ತೋರಿಸಬೇಕ ಮಾರಿ ॥
॥ ಜೀಜೀ ॥

ನನ್ನ ಗಂಡನ ಊರಾಗ ತಿರಿದುಂಡು ಸಾವುದು ಸರಿ ।
ಬದಕ ಬೇಕ ಕುಟ್ಟಿ ಬೀಸಿಕೇರಿ ॥ ॥ ಜೀಜೀ ॥

ಜೀವದ ಗೆಳತ್ಯಾರ ಇದ್ದರೊ ಜ್ಯಾಗ ಕೇಳಬೇಕ ಪರಬಾರಿ ।
ನೀಲಾವತಿ ನಡದ್ಲೊ ನಿರಾಭಾರಿ ॥ ॥ ಜೀಜೀ ॥

ಗೆಳತೆರಿಗಿ ಕೇಳತಾಳ ತುಸು ಜ್ಯಾಗ ಕುಡ್ರಿ ಜರೂರಿ ।
ನಾನು ಇರುವೆ ನಿಮ್ಮ ಮಗಳಸರಿ ॥ ॥ ಜೀಜೀ ॥

ಏರು ನೀಲಾವತಿ ಸುದ್ದಿ ಕೆಳಿ ಗೆಳತ್ಯಾರೆಲ್ಲ ಬೈತಾರ
ಎಲೇ ನಿಮ್ಮಂತವರಿಗಿ ಜ್ಯಾಗ ಹೆಂಗ ಸಿಗತೈತಿ
ಜ್ಯಾರ ಕರ್ಮ ಮಾಡಿದವಳೊ ನೀ ಯ್ಯಾವ ದೊಡ್ಡ ಗರ್ತಿ ।
ಗೆಳತ್ಯರ ಬೈದು ದಬ್ಯಾರ ಹೋಗ ಹಾದರಗಿತ್ತಿ ॥ ॥ ಜೀಜೀ ॥

ಕೂಡಪಲ್ಲ ಮರ್ತ್ಯದೊಳಗ ಮಹಾ ಮೀರಿದ ಶರಣೆ
ಪತಿವ್ರತಾ ಅನಿಸಿ ನಮ್ಮ ನೀಲಾವತಿ ॥ ॥ ಜೀಜೀ ಚೌಕ ೪ ॥

ಏರು ನೀಲಾವತಿ ಶರಣೆಗಿ ನಿರ್ವಾವಿಲ್ಲದದಂಗಾಯಿತು ।
ಎಲ್ಲೇರ ಇರಬೇಕಂತ ಮೆಲ್ಲಕ ನಡೆದು ಸಾಗಿ ॥ ॥ ಜೀಜೀ ॥

ಜ್ಯಾಗಾ ಶೋಧಿಸಿ ಬರುವದೊರಳಗ ।
ಸ್ವಗಸಾಗಿ ಒಂದು ಬೀಳಕ ಮುರಕ ಮಳಗಿ ಇತ್ತೊ ಅಗಸಿಗಿ ।
ನನಗಾಗಿ ಜಗದೇಶ್ಯಾ ಜ್ಯಾಗಾ ಕಾಲೆ ಕೆಡವ್ಯಾನ ಆ ಮಳಗ್ಯಾಗ
ಇಳದಾಳ ತಿಳದು ಅಗಸೀಗಿ ॥ ॥ ಜೀಜೀ ॥

ಆ ಊರ ಪದ್ದತಿ ಇದ್ದದು ಕೇಳರಿ ಹಕಿಕತಿ
ಸುತ್ತ ಶಿಸ್ತಿನ ಕ್ವಾಟಿ ಬಂದುಬಸ್ತ ಇತ್ತ ಊರೀಗಿ ।
ಅಗಸಿ ಹೊರ್ತ ಪರ್ತ ರಸ್ತಾ ಇಲ್ಲ ಯಾರ್‍ಯಾರಿಗಿ ।
ಅಗಸಿ ಮುಚ್ಚಿ ಕೀಲಿಹಾಕಿ ಮಲಗತಿದ್ರೊ ರಾತ್ರೀಗಿ ।
ಅಂದಿನ ದಿನಾ ಮಂದಿ ಕೀಲಿ ಹಾಕಿ ಮಲಗ್ಯಾರ
ಪರಮೇಶ್ವರ ನೋಡಿದಾನೊ ಎಚ್ಚರಾಗಿ ॥ ॥ ಜೀಜೀ ॥

ಪಾಪಿಗಳಿಗೆ ಪರಮೇಶ್ವರ ಪ್ರಾಯಶ್ಚಿತ್ತು ಪಡಸುದಕ
ಪರಮೇಶ್ವರ ಇಳದ ಅದೇ ಅಗಸೀಗಿ ॥
ನಿಂತು ಅಂತಾನ ಕಂತುಹರಾ ತ್ರಾಸೀಗಿ ।
ಸಲುವಾಂವ ಸರ್ವ ಜೀವಾಶಿಗಿ ।
ಮುಚ್ಚಿದ ಕದಾಗಳಿಗಿಗಚ್ಚಿ ಮಂತ್ರ ಹಾಕಿದಾನು
ಬಿಚ್ಚಬಾರದು ಬೀಳಬೇಕೋ ಬಿರಸೀಗಿ ॥ ॥ ಜೀಜೀ ॥

ನೀಲಾವತಿ ಹೊರ್ತ ಬಾಕಿಲ ಯಾರ್‍ಯಾರಿಗಿ ತೆರಿಬಾರದು
ಹಿಂತಾ ಮಂತ್ರ ಹಾಕಿ ಮಾಯವಾದ ಶಿವಯೋಗಿ ।
ಬೆಳಗಿನ ಜಾವ ಊರ ಜನ ಎಚ್ಚರಾಗಿ ।
ಆಳ ಮಕ್ಕಳು ನಿಂತ್ರು ಹೆಂಡಿ ಕಸದ ಕೆಲಸೀಗಿ ।
ಗಸಾನೆ ಊರ ಹೊರಗೆ ಹೋಗಿ ಕಸಾ ಚೆಲ್ಲಿ ಬರಬೇಕಂದ್ರ
ಅಂವಸರಲೆ ಬಂದ್ರೊ ಅಗಸಿ ಬಾಗಿಲಿಗಿ ॥ ॥ ಜೀಜೀ ॥

ಇಳು ಮುಚ್ಚಿದ ಅಗಸಿ ತೆರದಿದ್ದಿಲ್ಲಾ ಕೋತವಾಲಗ ಬೈತಾರ ನಿಂತೊ ।
ಬಿಸಲ ಬಿದ್ದದ ಮುಕುಳಿ ಮ್ಯಾಗ ಬಾಗಿಲ ತೆರಿ ಏಳಂತೊ ॥ ಜೀಜೀ ॥

ನಿದ್ರಿಗಣ್ಯಾಗ ಕೋತವಾಲ ಕೀಲಿ ತೆರಿಬೇಕಂತ ಹೊಯಿತೊ ।
ಕೀಲಿ ತೆರಿಲಿಲ್ಲಾ ಕೋತವಾಲಗ ಬಂದು ಬಸ್ತ ಕುತ್ತಿತೊ ಬಿಗತಾ ॥
॥ ಜೀಜೀ ॥

ಕೀಲಿ ಕೆಟ್ಟಂಗ ಕಾಣಸ್ತದ ಕಲ್ಲಿಲೆ ಹೆಬ್ಬು ಹಾರಿ ತರಿ ತುರುತೊ
ಇದು ಮುರಿಯಲಾರದು ಹಾರಿಯ ಹೊರ್ತ ॥ ॥ ಜೀಜೀ ॥

ಹಾರಿ ಹಾಕಿ ಮುರಿಯ ಬೇಕಂದೊ ಹಾರೀನೆ ಮುರದು ತುಣಕ
ಆಯಿತೊ ।
ಕೀಲಿ ಮುರಿಯಲಿಲ್ಲಾ ಮೀರಿತೊ ಸೂರ್‍ಯಾನ ಮಾರಿ ತೋರಿತೊ ॥
॥ ಜೀಜೀ ॥

ಏರು ಅಷ್ಟರೊಳಗ ಊರ ಮಂದಿ ಅಷ್ಟುರು ಎಚ್ಚರಾಗಿ
ಹಾಸಗ್ಯಾಂದ ಎದ್ದ ಕೊಡ್ಲೆ ಹೇಸಗಿ ಕೆಲಸಾ ಇರತೈತಿ
ತಂಬಿಗಿ ತೊಗೊಂಡ ಹೋಗಬೇಕು ಬೈಲ ಕಡಿ ಬಹಳೆ ಬಂತರಿ
ತಂಬಿಗಿ ತಗೊಂಡು ಮಂದಿ ಅಗಸಿಗಿ ನೆರದೈತಿ ॥ ॥ ಜೀಜೀ ॥

ಕೂಡಪಲ್ಲ ಮರ್ತ್ಯದೊಳಗ ಮಹಾ ಮೀರಿದ ಶರಣೆ
ಪತಿವ್ರತಾ ಅನಸಿ ನಮ್ಮ ನೀಲಾವತಿ ॥ ॥ ಜೀಜೀ ॥ ಚೌಕ ೫ ॥

ಏರು ಅಗಸ್ಯಾಗ ನಿಂತಾರ ಕೊತವಾಲಗ ಅಂತಾರ ಕುರಸಾಲ್ಯಾ ಬಾಗಿಲ
ತಗಿಯೋ
ಬೈಲ ಕಡಿ ಬಂದದ ಮೈಮ್ಯಾಗ ।

ಸ್ವಲ್ಪ ತಡಿರಿಯೆಂದ ಕೋತವಾಲ ಕೀಲಿ ತೆರೆಯುದರೊಳಗ ।
ನಿಮ್ಮ ನಿಮ್ಮ ಮುಕಳಿ ಬಿಗಿ ಹಿಡಿರಿ ಸ್ವಲ್ಪ ಬಿಡಬ್ಯಾಡ್ರಿ ಕೆಳಗ ।
ಸಾಲಗಾರ ಕೇಳಿದರ ಹೇಲಗಾರ ಕೇಳ್ಯಾನೇನೊ ತಾಳದವರು
ಹೇತಗೊಂಡ್ರೊ
ತಮ್ಮ ತಮ್ಮ ದೋತರ ಸೀರ್‍ಯಾಗ॥ ॥ ಜೀಜೀ ॥
ಹೇತ ನಾತ ದುರಗಂಧ ಹಿಡದಿತ ಊರ ಮಂದೀಗಿ ದಿಂಗ ಬಡಿತು
ಏನಗತಿ ಮಾಡುನೊ ಹೆಂಗ ಹೋಗಬೇಕ ಹೊರಗ ।
ಸುತ್ತಾ ಸೀಶಿನ ಕ್ವಾಟಿ ಬಂದು ಬಸ್ತಾ ರಸ್ತಾ ಇಲ್ಲದಂಗ ।
ಅಗಸಿ ತೆರಿಲಾರದೆ ನಿರ್ವಾ ಇಲ್ಲ ಮಾಡುದ ಇನ್ನೆ ಹಂಗ ।
ಅವರೊಳಗೊಬ್ಬ ಪುಡಾರಿ ಮನುಷ್ಯಾ ಹಂಚಿಕಿ ತಗದು ಹೇಳತಾನ
ನೂರಾರ ಗಾಡಿ ಕಟಗಿ ವಟ್ಟುನು ನಡು ಅಗಸ್ಯಾಗ ॥ ॥ ಜೀಜೀ ॥
ಕಟಗಿ ವಟ್ಟಿ ಪುಟಾ ಮಾಡಿ ಅಗಸಿಗಿ ಬೆಂಕಿ ಹಚ್ಚಬೇಕೊ
ಕಟಗಿ ಪಡಕಾ ಸುಟ್ಟ ಹೋಗಿ ಬೂದಿ ಆದಾಗ ।
ಹಾದಿ ತಾನೇ ಆಗತೈತಿ ಹೋಗುದಕ ಹೊರಗ ।
ಕಟಿಗಿ ವಟ್ಟಿ ಪುಟಾ ಕೊಟ್ಟು ಬೆಂಕಿ ಹಚ್ಚಾರ ಅಗಸ್ಯಾರ ।
ಭಯಂಕಾರ ಬೆಂಕಿ ಆಯಿತು ಲಂಕಾ ಸುಟ್ಟಾಂಗ ।
ಕಾಣಸತ್ತಿತ್ತು ಕಟಿಗಿ ಸದಾ ಹೋಗಿ ಉಕ್ಕಿನ ಆದು ಉರಿಯೊಳಗ॥
॥ ಜೀಜೀ ॥
ಕಟಗಿ ಪೂರ್ತಿ ಸುಟ್ಟ ಬೂದಾಗ ತೆಳಗ ಬಿತ್ತು
ಉಕ್ಕಿನ ಕದಗಳ ಕಾಣಲಾಕ ಹತ್ಯಾವ ಕೆಂಡ ಕಂಡಂಗ ।
ಅದನ ನೋಡಿ ಇಡೀ ಊರ ಮಂದಿ ಆದರು ದಂಗ ।
ನಮಗ ಹೆಂತಾ ಹೊತ್ತ ಬಂತೊ ಸತ್ತ ಹೋಗು ಪ್ರಸಂಗ ।
ಚಿಂತಿ ಮಾಡುತ ಕುಂತಾರ ಕಂತುಹರ ಪರಮೇಶ್ವರ ತೊಟ್ಟ
ಸೋಂಗ ॥ ॥ ಜೀಜೀ ॥

ಇಳುವು ತಂತ್ರ ತಿಳಿಯದಂತೆ ಉಪಧ್ಯಾನ ರೂಪ ತಾಳಿ ಪಂಚಾಂಗ ಬಗಲಾಗ
ಹಿಡದಾನು ।
ಆ ಅಗಸಿ ಕಡೇನ ನಡದಾನ॥ ॥ ಜೀಜೀ ॥
ಅಗಸಿ ಯಾಕ ಮುಚ್ಚಿರಿ ಹೇಳ್ರಿ ಇದನಾ ।
ಪಂಚರ ಕೇಳತಾರ ಆ ಪಂಚ್ಯಾಂಗದವನಾ ॥ ಜೀಜೀ ॥
ಅಗಸಿ ತೆರೆಯುದಕಾಗಿ ಪ್ರಯತ್ನ ಪಟ್ಟಿವಿ ಇಲ್ಲಿ ತಾನಾ ।
ದ್ವಾರ ತೆರೆ ವಲ್ಲದು ನಿಂತದ ಇಲ್ಲಿ ತನಾ ॥ ॥ ಜೀಜೀ ॥
ನೀನರೆ ಪಂಚ್ಯಾಂಗ ಬಿಚ್ಚಿಗಟ್ಟಿ ಹೋಳೊ ನೋಡುನ
ತೋಟಕಾ ಹೊರಟರ ಹೇಳೋ ಮಾಡುನಾ॥ ॥ ಜೀಜೀ ॥

ಏರು ಆಗ ಪಂಚ್ಯಾಂಗ ಬಿಚ್ಚಿ ಉಪಧ್ಯಾ ಹೇಳತಾನ ।
ಅಚ್ಚಗರತ್ಯಾರು ಬಂದು ಬೆಳಗಬೇಕು ಆರುತಿ ।
ಅಂದರ ಅಗಸಿ ದ್ವಾರ ತೆರಿತೈತಿ ।
ನನ್ನ ಪಂಚ್ಯಾಂಗದಾಗ ಹಿಂಗ ಹೊರಟೈತಿ ॥

ಕೂಡಪಲ್ಲ ಮರ್ತ್ಯದೊಳಗ ಮಹಾಮೀರಿದ ಶರಣೆ ಪತಿವ್ರತಾ ಅನಿಸಿ ನಮ್ಮ
ನೀಲಾವತಿ ॥ ॥ ಜೀಜೀ ॥ ಚೌಕ ೬ ॥

ನಿಮ್ಮ ಊರ ಹಕಿಕದಾ ನಿಮಗ ಇರತದ ಗುರ್ತಾ
ತುರ್ತ ಗರತ್ಯಾರಿಗಿ ತಗೊಂಡ ಬರ್‍ರಿ ತೆರಿಯುದಕ ।
ನಮ್ಮ ಬೆನ್ನ ನಮಗ ಕಾಣುದಿಲ್ಲ ತಿಳಿಯಲಾರದಕ ।
ಪಂಚರ ಮಾತಾಡತಾರ ಊರ ತುಂಬ ಡಂಗುರ ಹೊಡಸುದಕ ।
ಅಗಸಿ ಬಾಗಿಲ ತೆರೆದವರಿಗಿ ತೂಕಾತುಕ ಬಂಗಾರ ಕೊಡುನೊ
ಬೇಕಾದಕ್ಕಿ ಬಂದು ತೆರೆದು ವೈಲಿ ಬದಕಾ ॥ ಜೀಜೀ ॥
ಊರ ತುಂಬ ಡಂಗುರ ಸಾರಿ ಹೆಂಗಸರು ಮಾತಾಡತಾರ ಖಾತ್ರಿ
ಮಾಡಿ ಮನಕಾ ।
ನಾನು ಅಚ್ಚ ಗರತ್ಯಾರನ ಯಾರಿಗೂ ನೋಡಿಲ್ಲ ಇಲ್ಲಿ ತನಕಾ ।
ನನಗ ಕ್ವಿಂಟಲ ಮ್ಯಾಲ ಬಂಗಾರ ಬರತೈತಿ ಅದಿನಿ ಬಲು ಚೊಕ್ಕ ।
ಒಬ್ಬಕ್ಕಿ ಬಡವಿ ಕರದು ಗಂಡನ ಮುಂದು ಹೇಳತಾಳ
ನಾನು ತವರಮನಿಯಾಗ ಗುಂಜಿ ಬಂಗಾರ ಕಂಡಿಲ್ಲವ್ವ ತಟಕ ॥
॥ ಜೀಜೀ ॥

ಗಂಡನ ಮನಿಗಿ ಬಂದ್ರು ಸಹಿತ ಗುಂಡಗುಳ್ಳ ಕೊರಳಿಗಿಲ್ಲ
ಬೆಂಕಿ ಹಚ್ಚಲೆವ್ವಾ ನನ್ನ ಬಡತನಕ ।
ನನ್ನ ಪತಿವ್ರತಾ ಕೆಡಿಸಿಕೊಂಡಿಲ್ಲ ಕಡಿತನಕ ।
ಬಾಗಿಲ ತೆರಿತೀವಿ ಬಂಗಾರ ಬರುವದು ಒಡಿತನಕ ।
ತಡ ಮಾಡಬ್ಯಾಡ ತುರ್ತ ಹೇಳಿ ಪತ್ತಾರಂವಗ
ತಾಕೀತ ಕೊಡು ವಸ್ತಾ ಮಾಡಿಸುವೆ ಸಾವುತನಕಾ ॥ ಜೀಜೀ ॥
ನಾ ಗರ್ತಿ ನೀ ಗರ್ತಿ ಅಂಥಾ ಆರ್ತಿ ತಗೊಂಡು ಬಂದೆ ಬಿಟ್ಟರು
ಅಗಸ್ಯಾಗ ನುಗಸ್ಯಾಡತಾರ ಬೆಳಗುದಕ ।
ಅವರವರ ಗಂಡದೇರಲ್ಲ ಮಾತಾಡತಾರ ಬೆಳಸುದಕ ।
ಅಂತಾರ ನಮ್ಮ ಕಿನೆ ತೆರದರ ಪಾಡಾಗತೈತಿ ಗಳಸುದಕ
ಗಂಡದೇರ ನೋಡತಾರ ಹೆಂಡರ ಆರ್ತಿ ಬೆಳಗತಾರ
ಒಬ್ಬರು ತೆರಿಲಿಲ್ಲ ಆಸೆ ಹೆಚ್ಚಿದ್ದರ ॥ ಜೀಜೀ ॥

ಇಳುವು ನೋಡಿ ಗಂಡದೇರು ಎದಿ ಒಡದು ಹುಚ್ಚ ಹಿಡಿದು ಮಾತಾಡತಾರ ।
ನಮ್ಮಕ್ಕಿನು ಮಾಡ್ಯಾಳ ಹಾದರಾ ॥ ॥ ಜೀಜೀ ॥

ಇಕಿ ಗರ್ತಿ ಇದ್ದರ ತುರ್ತ ತೆರಿಯುವುದು ಅಗಸಿ ದ್ವಾರಾ ।
ಕೆಲಸಾ ಹೊಲಸ ಮಾಡಿದೆ ಮುಡದಾರಾ ॥ ॥ ಜೀಜೀ ॥

ಒಬ್ಬ ಮೀರಿದ ಸೋಟಂದ ಊರಿಗಿ ನಾ ಬಲು ಚೆದುರಾ ।
ನಮ್ಮಕ್ಕಿ ಯಾರಿಗಿ ಹಾಸಿರಬೇಕು ಪದರಾ ॥ ॥ ಜೀಜೀ ॥

ಮನಿ ಕಡೆ ಬರಲಿ ಲೇವಡಿ ಕಡದ ಹಾಕತೀನಿ ಠಾರಾ ।
ಎಲ್ಲಾರಿಗಿ ಸಿಟ್ಟ ಬಯಂಕರಾ ॥ ॥ ಜೀಜೀ ॥

ಹೆಂಗಸರು ಅಂತಾರ ಅಗಸ್ಯಾಗ ಬಿತ್ತಿದಂಗಾಯಿತು ಹಾದರಾ ।
ಹೆಂಗ ನಂಬಬೇಕು ನಮ್ಮ ಗಂಡದೇರಾ ॥ ॥ ಜೀಜೀ ॥

ಏರು ತಮ್ಮ ತಮ್ಮ ಮನಸಿಗಿ ಖಿನ್ನಾಗಿ ಕುತ್ತಾರು
ಇನ್ನ ನನ್ನ ಗತಿ ಮಾಡುತ್ತೈತಿ ಬಂತು ಗ್ವೊತ್ತಿ ।
ಬಿಚ್ಚಿ ಇಟ್ಟಾಂಗಾತ ಪಾಪದ ಬುತ್ತಿ ।
ಅವರವರ ಚಿಂತಿ ಅವರಿಗಿ ಹತ್ತೈತಿ ॥ ॥ ಜೀಜೀ ॥

ಕೂಡಪಲ್ಲ ಮರ್ತ್ಯದೊಳಗ ಮಹಾ ಮೀರಿದ ಶರಣೆ
ಪತಿವ್ರತಾ ಅನಿಸಿ ನಮ್ಮ ನೀಲಾವತಿ ॥ ಜೀಜೀ ॥ ಚೌಕ ೭ ॥

ಒಬ್ಬ ಹುಡಗಾ ಹುಚ್ಚಿಲಿಂದ ಗೆಳ್ಯಾರ ಮುಂದ ಹೇಳತಾನ
ನನ್ನ ಮಡದಿಗಿ ಮಾತ್ರ ಇಂದೇ ಬೀರಿಸಿ ಕರಕೊಂಡ ಬಂದಾರ ।
ನಾನು ಇನ್ನೂವರಿಗಿ ಮುಟ್ಟಿಲ್ಲ ಆಕಿ ಕೆಟ್ಟಿಲ್ಲ ಸುಂದರಾ ।
ಆಕಿ ಬ್ರಹ್ಮಚಾರಿ ಬಾಗಿಲ ತೆರಿತಾಳ ಇಲ್ಲ ತೊಂದರಾ ।
ಬಂಗಾರಂತು ಬೌಮಾನ ಬರತದ ನಮಗ ।
ಅದರಾಗ ಅರ್ಧಾ ಕೊಡುವೆ ನಿಮಗ ।
ಆಕಿನೂ ಬಂದು ಬೆಳಗಿದರ ಬಾಗಿಲ ತೆರಿಲಿಲ್ಲ ಬಂಧೂರಾ ॥ ಜೀಜೀ ॥

ಬಾಗಿಲ ತೆರಿಲಾರದು ನೋಡಿ ಗೆಳ್ಯಾರು ಗೆಳ್ಯಾಳ ಬೈತಾರ ।
ನಿನ್ನ ಮಡದಿದೆಷ್ಟ ಪೌರುಷ ಮಾಡತಿದ್ದೋ ಘಾಮಾರಾ ।
ನಾ ಮುಟ್ಟಿಲ್ಲ ಆಕಿ ಕೆಟ್ಟಿಲ್ಲ ಅಂತದಿ ಜರಾ ।
ನಿನ್ನ ಮಡದಿ ಮೊದಲೆ ತೌರ ಮನಿಯಾಗ ಕೆಟ್ಟಾಳೊ ಪೂರಾ ।
ಈಕಿ ಗರ್ತಿಯಿದ್ರ ತುರ್ತ ಅಗಸಿ ದ್ವಾರ ತೆರಿತಿತ್ತು
ಹಿಂತಾ ಹಾದರ ಗಿತ್ತಿಗಿ ಆಳಾಂವ ನೀ ಹೆಂತಾ ಸುಮಾರಾ ॥ ಜೀಜೀ ॥

ನಮ್ಮ ಮಾತ ಕೇಳೊ ನೀನು ಹಿಂತಾಕಿನ ಹೆಂಗ ಆಳತಿ ಇನ್ನು
ಈಕಿನ್ನ ಬಿಟ್ಟು ಇನ್ನೊಂದಾಗಿ ಮಾಡೋ ಮನಿ ಸಂಸಾರಾ ।
ನಾ ಹೆಂಗ ಬಿಡ್ಲಿ ವರದಕ್ಷಣ ಒಂದ ಲಕ್ಷ ರೂಪಾಯಿ ಎಣಸ್ಯಾರ ।
ಮನಿಮುದಕಂದ್ರ ನಿಮ್ಮತವರೆ ಒಗಿತಾನ ಹರಸವರಾ ।

ಊರಿಗಿ ಸೀಳ ಬಂದ್ರ ನನಗೊಂದ ಎಳಿ ಬರತೀಬೇ ಬೌದು
ಊರ ಮಂದಿಯೆಲ್ಲಾ ಬಿಟ್ರ ನಾನು ಬಿಡತಿನಿ ಅಂದ ಸರದಾರ ॥
॥ ಜೀಜೀ ॥

ತಮ್ಮ ಹಾದರ ಮುಚ್ಚಿಟ್ಟು ಮಂದಿಗಿ ಆಚ್ಯಾರ ಹರೆವರು ಬಾಳ ।
ನಿಮ್ಮ ನಿಮ್ಮ ಹೆಂಡರು ಅಗಸ್ಯಾಗ ಬಂದಿದ್ದು ನಿಮಗೆಲ್ಲ ಎಚ್ಚರಾ ।
ನಿಮ್ಮ ಅಗ್ಗ ಮರಿತು ಮಂದಿ ಅಗ್ಗಲ ನೋಡು ನೀ ಚರಾ ।
ಬಿಡಬಾರದೇನೊ ಹೇಳವರೆಲ್ಲಾ ಕೇಳಿ ನಾಚ್ಯಾರಾ ।
ಇವನ ಮಾತ ಖರೇ ಆದ ನಮ್ಮದು ಹೊಲಸ ಹಿಡದದ
ಅಗಸಿ ತೆರೆಯವರು । ಇಲ್ಲದಂಗಾಯಿತು ಹೆಂತಾ ಆಶ್ಚರ್ಯ ॥
॥ ಜೀಜೀ ॥

ಇಳುವು ಒಬ್ಬ ಮುಪ್ಪಾನ ಮುದಕ ನೆಪ್ಪ ತಗದ ಆವಾಗ ।
ನೀಲಾವತಿ ಬಂದಿದುದ್ದಿಲ್ಲ ಅಗಸ್ಯಾಗ ॥ ॥ ಜೀಜೀ ॥

ಇದನ್ನ ಕೇಳಿ ಮತ್ತೊಬ್ಬಂವಾ ಬೈತಾನ ಆ ಮುದುಕಗ ।
ಮುಂಡೆ ಮಗನೆ ಮುದಕಾದಿ ಮುಕಳಿಗಿ ಬುದ್ದಿಲ್ಲ ನಿನಗ ॥ ಜೀಜೀ ॥

ನೀಲಾವತಿ ಯ್ಯಾವ ಗರ್ತಿ ಮೊದಲೆ ಕೆಟ್ಟಾಳ ಜಂಗಮಗ ।
ಆಕಿನ ತಗೊಂಡೇನ ಮಾಡುದ ಅದs ನಮಗ ॥ ॥ ಜೀಜೀ ॥

ನಮ್ಮ ಸಂಶೆ ಕಳಕೊಳ್ಳುದಕ ಕರಕೊಂಡ ಬರಬೇಕೋ ಬೇಗ ।
ಕೇಳತಾರ ನೀಲಾವತಿನ್ನ ತೆರಿಯವ್ವಾ ಬಾಗಿಲಬೇಗ ॥ ಜೀಜೀ ॥

ಏರು ಆ ಪಂಚರ ಮಾತಿಗಿ ಪತಿವ್ರತಿ ಅಂತಾಳ ।
ಏನ ಮಾಡುದು ನನ್ನ ದೈವ ಕಡಿಮಿ ಐತಿ ।
ಅಚ್ಚ ಮುತ್ತೈದೆರಿಗಿ ಆರುತಿಸಲ್ಲಿತೈತಿ ।
ನನ್ನ ಕೊರಳಾಗ ಮಾಂಗಲ್ಯಯಿಲ್ಲಾ ಹೆಂಗ ಬರತೈತಿ ॥ ॥ ಜೀಜೀ ॥

ಕೂಡಪಲ್ಲ ಮರ್ತ್ಯದೊಳಗ ಮಹಾಮೀರಿದ ಶರಣೆ
ಪತಿವ್ರತಾ ಅನಿಸಿ ನಮ್ಮ ನೀಲಾವತಿ ॥ ॥ ಜೀಜೀ ॥ ಚೌಕ ೮ ॥

ಏರು ಬಿಟ್ಟ ಗಂಡನ ಕೂಡಿಸಿ ನನಗ ಮಾಂಗಲ್ಯ ಕಟ್ರಿ ಕೊರಳಿಗಿ ।
ಆರುತಿ ಬೆಳಗಿ ನೋಡುವೆ ಆ ಮ್ಯಾಲ ।
ಇದು ಖರೇ ಅಂತ ಕರಿಲಿಕ್ಕೆ ಹೋದ್ರೊ ಆಕಿ ಗಂಡಗ ತಾತ್ಕಾಲಾ ।
ಅಂದ್ರೊ ಮಡದಿ ಕೈಯ ಹಿಡಿದು ಮಾಂಗಲ್ಯ ಕಟ್ಟೊ ಅಸಲಾ ।
ಪಂಚರ ಮಾತ ಕೇಳಿ ಮುಂಡಗಂಡಾ ಕಂಡಾಂಗ ಮಾತಾಡತಾನ
ನಿಮ್ಮ ಹೆಂಡ್ರು ಕೆಟ್ರ ಕರಕೋತಿರೇನೊ ಹೆಂತಾ ಅಕಲಾ ॥ ಜೀಜೀ ॥

ಸಮ ಉಪಾಯ ಸಮ್ಮತ ಹೇಳಿ ಕರಕೊಂಡು ನಡದಾರ ಮಡದಿನ್ನಾ।
ಕೂಡಿಸಿ ಮಾಂಗಲ್ಯ ಧರಿಸಿ ನೆರದಾರ ಸುತ್ತೆಲ್ಲಾ ।

ಶರಣೆ ಸಾಗರ ಬಿದ್ದು ಶರಣ ಮಾಡಿ ಪತಿಗತ್ತಿಲ್ಲಾ ।
ಪತಿಪಾದ ತೊಳದು ತೀರ್ಥ ಕುಡದಳೊ ಸತ್ಯ ಸತ್ತಿಲ್ಲಾ
ಆರುತಿ ಎತ್ತಿ ಗಂಡಗ ಬೆಳಗಿ ನಮಸ್ಕಾರ ಮಾಡಿ ನಡದಳೊ
ಹರಕ ಕೋರಿ ನೀಲಾವತಿ ಲೀಲಾ ತಿಳಿದಿಲ್ಲಾ ॥ ಜೀಜೀ ॥

ನೀಲಾವತಿ ಬರು ದಾರಿ ನೀಲಕಂಠ ನೋಡತಿದ್ದಾ ।
ಸ್ತೋತ್ರ ಗೈಯುತ ಅಗಸ್ಯಾಗ ಇಟ್ಟಲೋ ಕಾಲಾ ।
ತಂತ್ರ ತಿಳಿಯದಂತೆ ತನ್ನ ಮಂತ್ರ ತಕ್ಕೊಂಡ ಕೇವಲಾ ।
ಆರುತಿ ಬೆಳಗತಾಳ ಪತಿಗಿ ಸ್ಮರಿಸಿ ಪಾಲಿಸೊ ಭೂಪಾಲಾ ।
ಸಿಸ್ತ ಬೆಳಗಿ ಹಸ್ತಾ ಹಚ್ಚಿ ನಮಸ್ಕಾರ ಮಾಡಿದಾಳೊ
ಕಟ್ಟಿ ಕಟ್ಟ ಕಡಲ್ ತಂತ್ರ ಕಡಿಯಾಕ ಆದು ಎರಡು ಬಾಕೀಲಾ ॥ ಜೀಜೀ ॥

ಅಗಸಿ ದ್ವಾರ ತೆರದುನೋಡಿ ಇಡೀ ಊರಿಗೆ ಅಗಾದಾಯಿತು
ಈಕಿ ಒಬ್ಬಕ್ಕಿನೆ ಗರ್ತಿ ಇಕಿ ಸರಿ ಯಾರಿಲ್ಲಾ ।
ನಾವು ನಿಂದಾ ಮಾಡಿ ಪಾಸಿ ಬಿದ್ದೇವು ತಪ್ಪದು ಯಮಶೂಲಾ ॥
ತಪ್ಪ ಕ್ಷಮಿಸಂತ ಹಿಡದಾರ ಶರಣೆ ಚರಣ ಕಮಲಾ
ಬೆರಳ ಕಚ್ಚಿ ಬೆರಗಾಗಿ ಬೇಡಿಕೊಂಡ್ರು ಶಿರಬಾಗಿ
ಉದ್ಧಾರ ಮಾಡಿದಿ ತಾಯಿ ನಮ್ಮ ಊರಿಗಿ ಅನುಕೂಲಾ ॥ ಜೀಜೀ ॥

ಇಳುವು ಅಗಸಿ ದ್ವಾರಾ ತೆರದ ಸುದ್ದಿ ಕೇಳ ಅತ್ತಿ ಕುಣಿತಾಳಾ ।
ಸೊಶಿ ಬಂಗಾರ ಗಳಿಶ್ಯಾಳಂತ ಮನಸಿನ್ಯಾಗ ಹರುಷ ಆದಾಳಾ ॥
॥ ಜೀಜೀ ॥

ತಾನು ಬಂಗಾರ ತರಬೇಕಂತ ಬುಟ್ಟಿ ಬಗಲಾಗ ಹಿಡದಾಳು ।
ಬಂಗಾರ ಬಂಗಾರ ಅಂಥ ಬಡಬಡಿಸುತ ನಡದಾಳಾ ॥ ॥ ಜೀಜೀ ॥

ಅಂವಸರಲೆ ಅಗಸಿಗಿ ಬಂದು ನೀಲಾವತಿನ ನೋಡ್ಯಾಳಾ ।
ಮಂದಿ ಮಾಡುದು ನೋಡಿ ತಾನೂ ಶರಣ ಮಾಡ್ಯಾಳಾ ॥ ಜೀಜೀ ॥

ಅತ್ತಿನ್ನ ಕಂಡು ನೀಲಾವತಿ ಹೇಳತಾಳ ಕೇಳಾ ।
ನೀನು ನನ್ನ ಕಾಲಿಗಿ ಬೀಳಬಾರದು ತಾಯಿ ಸರಿ ಮನುಷಾಳಾ ॥
॥ ಜೀಜೀ ॥

ಏರು ಸೊಸಿಯ ಪಾದಕ ಬೀಳಬಾರದು ಪಾಪದಾಗ ಹಾಕಬಾರದು
ಪುನಃ ಶರಣಮಾಡಿ ಶರಣಿ ಹಣಿ ಹಚ್ಚಿ ಇದ್ದರ ಇರಬೇಕು ನನಗ
ನಿನ್ನಂಥ ಅತ್ತಿ ।
ಪತಿಸೇವಾ ಮಾಡುವಾಕಿ ನಿತ್ಯ ನಿನ್ನ ತೊತ್ತಿ ॥ ॥ ಜೀಜೀ ॥

ಕೂಡಪಲ್ಲ ಮರ್ತ್ಯದೊಳಗ ಮಹಾಮೀರಿದ ಶರಣೆ
ಪತಿವ್ರತಾ ಅನಿಸಿ ನಮ್ಮ ನೀಲಾವತಿ ॥ ॥ ಜೀಜೀ ॥ ಚೌಕ ೯ ॥

ಏರು ನಡುದಂತೆ ನಡಿಬೇಕು ಬಕ್ಷಿಷ ಕೊಡಬೇಕು
ಬಂಗಾರ ಹೇರಿಕೊಂಡು ತಂದ್ರೊ ಚಕ್ಕಡ್ಯಾಗ ।
ನೀಲಾವತಿನ ಕುಂಡ್ರಶ್ಯಾರ ತಕ್ಕಡ್ಯಾಗ
ತಡಾ ಯಾಕ ತೂಗಿ ಕೊಡೂನು ರೋಕಡಾಗ
ನೀಲಾವತಿ ಹೇಳತಾಳ ಮುತ್ತೈತನಾ ಕೇಳತಾಳ
ತೂಕಾ ಮಾಡಿ ಕೊಡ್ರಿ ನನ್ನ ಪತಿನ್ನ ಪಕಡ್ಯಾಗ ॥ ॥ ಜೀಜೀ ॥

ನಿಮ್ಮ ಬಂಗಾರ ಬೇಕಾಗಿಲ್ಲ ಗಂಡನ ಬಂಗಾರ ಬೇಕು ಮೊದಲಾ
ಒಲ್ಲೆಂಥ ಇಳದಾಳ ತಾನು ತಕ್ಕಡಿ ತೆಳಗ ।
ಬಂಗಾರ ನೋಡಿ ಆಶಾ ಮಾಡಿ ಎಸೊ ಮಂದಿಯೊಳಗ ।
ಹಿಂತಾ ನಿರಾಶಿಕಳನ್ನು ನೋಡಿಲ್ಲ ಲೋಕದೊಳಗ ।
ಸತಿ ಪತಿನ್ನ ಕೈ ಕೂಡಿಸಿ, ಕುದುರಿ ಮ್ಯಾಗ ಕುಂಡರಸಿ
ಮೆರವಣಿಗಿ ತಗದಾರ ತಮ್ಮ ಊರವೊಳಗ ॥ ಜೀಜೀ ॥

ಪುನರಃ ವಿವಾಹ ಆದಂಗ ಆಯೇರಿ ಮಾಡಿ ಹರುಷದಿಂದ
ನೀಲಾವತಿನ ಕೊಂಡಾಡತಾರ ತಮ್ಮ ತಮ್ಮೊಳಗ ।
ಹಿಂತಾವರು ಲೋಕದಾಗಿದ್ರ ಆಗುದು ಬೇಗು ಬೆಳಗ
ಶರಣಿ ವರ್ಣನೆ ಮಾಡಿ ಹೆಣ್ಣಲ್ಲ ಗಂಡು ಬಳಗ ॥ ॥ ಜೀಜೀ ॥

ನೀವು ಮಾಡಿದುಪಕಾರ ಮರಿಲಾರೆ ಅಪರಂಪಾರಾ ।
ನೀಲಾವತಿ ಅಂದಳೊ ತಾಯಿ ತಂದೆಗಳಿಗ ॥ ॥ ಜೀಜೀ ॥

ಇಳುವು ಆ ಶರಣೆ ಹೇಳತಾಳ ಕೂಡಕೋರಿ ನಿಮ್ಮ ಒಗತಾನಾ ।
ನಿಮ್ಮ ಹೆಂಡರ ಕಡೆ ತಪ್ಪಿಲ್ಲ ಏನೇನಾ ॥ ॥ ಜೀಜೀ ॥

ನೀಲಾವತಿಯ ಲೀಲಾ ನೋಡಿ ಮ್ಯಾಲಾಮ್ಯಾಲ ಮಾಡಿ ಬೌಮಾನಾ ।
ನೀಲಾವತೀನೆ ಕಾಯ್ದಳೊ ನಮ್ಮ ಮಾನಾ ॥ ॥ ಜೀಜೀ ॥

ಅದಕಾಗಿ ಅಕ್ಕ ತಂಗಿ ತಾಯಿದೇರೀಗೆ ಹೇಳುವೆನು ನಾನಾ ।
ಪತಿವ್ರತಾ ಮಾಡಿರಿ ಪಾಲನಾ ॥ ॥ ಜೀಜೀ ॥

ಎಷ್ಟು ಹೇಳಿದರ ತೀರಲಾರದು ಶರಣೆ ವರ್ಣನಾ ।
ಸಂಕ್ಷಿಪ್ತ ಮುಗಿಸಿದೆ ಕೀರ್ತನಾ ॥ ॥ ಜೀಜೀ ॥

ಏರು ದೇಶದೊಳು ಲೇಸ ಇಂಗಳೇಶ್ವರ ಸಿಕಂದರ ಪೀರ ನೆನದ ಗುರುಮೂರ್ತಿ
ಕವಿ ಲಾಲಸಾಬ ಹಾಡಿ ಮಾಡಿದಾ ಶರಣಾರ್ತಿ
ನಬಿಲಾಲ ಸೂರ ಹಾಕುದು ಬಲು ಭರ್ತಿ ॥ ॥ ಜೀಜೀ ॥

ಕೂಡಪಲ್ಲ ಮರ್ತ್ಯದೊಳಗ ಮಹಾಮೀರಿದ ಶರಣೆ
ಪತಿವ್ರತಾ ಅನಿಸಿ ನಮ್ಮ ನೀಲಾವತಿ ॥ ॥ ಜೀಜೀ ॥ ಚೌಕ ೧೦ ॥

ಖ್ಯಾಲಿ

ನಾಗರ ಪಂಚಮಿಗಿ ಮಿಂಚಿನ ವಸ್ತ್ರಾ ತರುನು।
ಮುಂಚೆ ನಾಗಪ್ಪಗ ಹಾಲ ನಾವು ಎರೂನಾ ॥ ಪಲ್ಲ ॥

ಸಂಚಿತ ಕರ್ಮವ್ಹೊಂದರ ಅರಳ ಹುರುನು
ಕಿಂಚಿತ ಕಿರುಕುಳ ಕರ್ಚಿಕಾಯ ಕರುನು
ನಿಬಬಾಬ ಗುಣಾಯೆಂಬು ಕೊಬ್ರಿ ಕುಬ್ಬುಕರುನು ॥ ೧ ॥

ಸಿಟ್ಟ ಹಿಟ್ಟಿ ಕುಟ್ಟಿ ತಂಬಿಟದ ಉಂಡಿ ಕಟ್ಟುನು
ಮಾಯಾ ಮಮಕಾರ ಮೈದಾನಾದಿ ಲಟ್ಟುನು
ಸುರಳಿ ಹೋಳಿಗಿ ಸರಳ ಶಂಡಿಗಿ ಸುಟ್ಟ ಎಟ್ಟುನು ॥ ೨ ॥

ಅಂದ ಚಂದ ವಡಿ ಬಾಬು ಬಿಂದ ಬಿಂದುಲಿ ಉಡುನು
ಯುಕ್ತಯೆಂಬ ಸೀರಿ ಕುಪ್ಪಸ ಭರತಿ ತೊಡುನು
ನೇಮ ನಿಷ್ಠಿ ನೈವಧ್ಯನಾಗಿ ಇಂದ್ರಗ ನೀಡುನು ॥ ೩ ॥

ಆರು ಮೂರುಮಂದಿ ಮರಿದ್ದಂಗ ಗೆಳೆತೆರು ಬರುನು
ನೀಲವ್ವಾ ನಿಂಬೆವ್ವ ಅಂಬವನ ಹಿಂಬಾಲ ಇರುನು
ರುದ್ರವ್ವ ಭದ್ರವ್ವಾ ಅದೃಶ್ಯವ ಇದ್ದವರನ ಕರನು ॥ ೪ ॥

ಲಿಂಗದ ಹಂಗ ತೊರೆದು ಭಜಂಗಗ ಹಂಗನೂಲ ಹಾಕುನು
ಶಿವ ಸ್ಮರಣೆ ಅರಿಷಣ ಬಣ್ಣ ಇಡುನು
ಬಣ್ ಭಸ್ಮದೊಳು ಮುಳುಗಿ ಅವಗುಣಾ ನೂಕುನು ॥ ೫ ॥

ನಾಗ್ಯೆಗ ಬಾಗಿ ಬೇಗ ಹೋಗಿ ಕೂಡುನು
ಯೋಗದ ಜೋಕಾಲಿ ತೂಗಿ ಆಡುನು
ಕಾಯ ಜೀವನಿಗಿ ನಿಜ ಆನಂದ ನೋಡೂನು ॥ ೬ ॥

ಅದಲಿಂಗ ಇಂಗಳೇಶ್ವರ ಯಾತ್ರಾ ಮಾಡುನು
ಪವಿತ್ರ ಪಂಚಮಿ ಪಂಚಪನಿವಾರ ನೀಡುನು
ತರುಣ ಲಾಲಸಾ ಅಂದಾ ಪ್ರಣಾಮ ಶ್ರವಣ ಪಾಡುನು ॥ ೭ ॥

ಖ್ಯಾಲಿ

ಬರದಿಟ್ಟಾಗ ಲೆಖ್ಖಾ ಓದಿ ಹೇಳುವೆ ಪಕ್ಕಾ ॥ ॥ ಪಲ್ಲ ॥ ಜೀಜೀ ॥

ಇಲ್ಲಿಲಿಂದ ಸ್ವರ್ಗಕ ಪೆವಟಣಿಗಿ ಲೆಕ್ಕಾ ।
ಸ್ತೂಲ ಸೂಕ್ಷ್ಮ ಕಾರಣ ಮೂರು ಸೋಪಾನ ಸ್ವರ್ಗಕ್ಕಾ ।
ಜ್ಯಾಗ್ರ ಸ್ವಪ್ನ ಸುಷುಪ್ತಾ ವಸ್ತಿ ಮೂರವಸ್ತಿ ಮಾಡಬೇಕಾ ॥ ಜೀಜೀ ॥

ನೂರವಂದ ಮಂದಿ ಅಂದಿನೂರಾವಂದ ಸ್ಥಲಕಾ ।
ಶೋಧ ಮಾಡಿ ನೊಡಿಕೊರೊ ಅಧ್ಯಾತ್ಮಾದ ಲೆಕ್ಕಾ ।
ಸಹಭಾವದಿ ಸದಾಶಿವನ ಕೂಡಿ ಸೇವೆ ಮಾಡಬೇಕೊ । ಬರದಿ ॥ ಜೀಜೀ ॥

ನಾಲ್ಕಾಣಿ ರೊಖ್ಖಕ ಹನ್ನೊಂದು ಸಿಗರೇಟ ಪ್ಯಾಕ ।
ಒಂದ ಸಿಗರೇಟ ಬೇಕು ನಿನಗ ಬಾಯಿಲೆ ಸೇದುದಕಾ
ಏಸ ಜೊರಕಿ ಜಗ್ಗತಿದಿ ಆಸಪೈಸೆ ರೊಕ್ಕಾ । ಬರದಿ ॥ ॥ ಜೀಜೀ ॥

ಚ್ಯಾರಾಣಿ ರೊಕ್ಕ ಅಂದಿ ಹನ್ನೊಂದು ಸಿಗರೇಟಕ
ಒಂದೇ ಸಿಗರೇಟ ಬೇಕು ನಿನಗ ಲೆಖ್ಖಾ ।
ಕೇಳತಿ ಅದಕ । ನಾಲ್ಕಾ ದಮಡಿ ಆಗತಾವ ಒಂದೊಂದ ಸಿಗರೇಟಕ ॥
। ಬರದಿ । ॥ ಜೀಜೀ ॥

ದೇಶದೊಳು ಹೆಸರಾಗಿ ಇಂಗಳೇಶ್ವರ ಖಡಕ ।
ಸಿಕಂದರ ಬಾದಾಶಾಹಾ ನೆನದಾ ಗುಡ್ಡದ ಧಡಕ ।
ಕಾಶಿಮ ಲಾಲಸಾ ಹೇಳತಾರ ಬಿಚ್ಚಿ ಸಿನ್ನ ತೊಡಕ ।
ಬರದಿಟ್ಟಾರ ಲೆಖ್ಖಾ ಓದಿ ಹೇಳುವೆ ಪಕ್ಕಾ ॥ ॥ ಜೀಜೀ ॥

ಖ್ಯಾಲಿ

ಇಂವಾ ಜೀವಯೆಂಬುವ ಜೋಗ್ಯಾ ಜಗದೊಡಿಯಾ ನೋಡಽ ಜ್ಯಾಣೆ
ಜ್ಯಾಣನ ॥ ॥ ಜೀಜೀ ॥

ತನುವಿನಲ್ಲಿ ಘನ ವಸ್ತು ತಾನಾ । ನೆಲವಿನಲ್ಲಿ ನೆಲೆ ನಿಂತಾನಾ ।
ಮನವಿನಲ್ಲಿ ಮಾಯಾ ತೂರ್ಯಾನಾ ।
ಅನವಿನಲ್ಲಿ ಅರಿಬೇರಿ ಅವನಾ ।
ಸುಗಮಾಡಿಡಾತಾನಾ । ಆಟಾಡತಾನಾ ।
ಹೆಣ್ಣಿನ ನರ್ತನಾ ನಿನಗ ತೋರತಾನಾ ।
ಅವನ ಧ್ಯಾನಿ ಸಿಗಡತಾನಾವನದೆ ಅವನದೇನೀನಾ ।
ನೋಡೋ ಜಾಣಿ ಜಾಣನಽಽ ॥ ॥ ಜೀಜೀ ॥

ಶೆಂಡ ಅಲ್ಲಾ ಪುಂಡ ಪುರುಷನ್ನಾ ।
ಪಿಂಡದೊಳು ಗಂಡ ಅನಶ್ಯಾನಾ ।
ಮಂಡಲ ನಾಯಕನ ಹೆಂಡತಿ ನೀನಾ
ಹೆಂಡಿ ಹಿಡಿಲಿಕ್ಕೆ ಹಚ್ಚ್ಯಾನಾ ।
ನೀತಿ ತ್ವರದರ । ಪ್ರೀತಿ ಮುರದರ
ಜಗದೊಡಿಯಾ ನೋಡೊ ಜ್ಯಾಣಿ ಜ್ಯಾಣಿನ ॥ ॥ ಜೀಜೀ ॥

ಜ್ಯಾತ ಸುಜ್ಯಾತ ಜೋಗೆರಪ್ಪಾರಾ ತಂದಾನ ಕರಮಣಿಸರಾ ।
ಹಣಿಗಿ ಕನಡಿ ಮಾಡಕೊ ವ್ಯಾಪಾರಾ
ತಗೋ ಬಿಡಬ್ಯಾಡ ಸೂಜಿದಾರಾ ।
ಕೌದಿ ಹೊಲಕೊರಾ । ಮೇಲೆ ಮಲಕೋರಾ
ನಿದ್ರಿ ಸುಲಕೋರ । ಮುದ್ರಿಕಲ–ಕೋರಾ ।
ನಿನ್ನ ಕಿವಿ ಮೂಗು ಚುಚ್ಚಂವ ಇವನಾ ।
ನೋಡೊ ಜ್ಯಾಣಿ ಜ್ಯಾಣನ ॥ ॥ ಜೀಜೀ ॥

ಊಟಕ ನೀಡಂತ ಅಂತಿದೇ ನೀನಾ ।
ಜಗತ್ತೆಕ ಸಾಕಿ ಸಲುವಿ ನಾವೇನಾ ।
ಅವನಿಂದ ನಾರಿ ನೀರ ಅನ್ನಾ ।
ನಿನಗ ನೀಡಿ ಮಾಡಿ ಜೋಪಾನಾ ।
ಅಂವಾ ಇರಲಿಕ । ತಿಲ್ಲಾಕ ತರಲಿಕ
ಸಂಕಟ ಹೊರಲಾಕ ಮುಖಾ ಮೂರಲೋಕ
ಒಂಬತ್ತ ದ್ವಾರದಿ ಪಾರಾದ ತಾನಾ
ಜಗದೊಡಿಯಾ ನೋಡs ಜಾಣಿ ಜಾಣನ ॥ ॥ ಜೀಜೀ ॥

ಅವನಿಂದ ಮೆರದಿದ್ದ ನೀನಾ
ಸಿರಿ ಸಂಪತ ಸವಿದು ದರದಿನಾ
ನಿನಗ ನೀಡಿ ಮಾಡಿ ಜೋಪಾನಾ
ಇರುದಿಲ್ಲಾ ಹೋದ ಮರದಿನಾ
ಜೋಗ್ಯಾ ಜಿಗದಾನಾ । ನಿನಗ ಹುಗದಾನಾ
ಅವಗುಣಾ ಹುಗದಾನಾ ಮುಸಕಿ ಬಿಗದಾನ ।
ಮಂಗಳ ಮೂರ್ತಿ ಇಂಗಳೇಶ್ವರ ಈಶ್ಯಾನಾ ।
ನೋಡs ಜ್ಯಾಣಿ ಜ್ಯಾಣನ ॥ ॥ ಜೀಜೀ ॥

ಅನುಭಾವ ಲಾಲಾಸಾನ ಕವನಾ
ಸವಿದಂಗ ಅಮೃತ ಜೇನಾ
ಜ್ಞಾನಿಗೆ ಸುಖ ಬೋಜನಾ

ಸುಶಾಂತಿ ಪಡದು ಬಹುಜನಾ ಮುಕ್ತ ಮಂದಿರಾ
ಸುಗುಣ ಸುಂದರಾ ಅವನೇ ಚಂದಿರಾ ।
ಜೋಗ್ಯಾ ಅಂದರ ಬಿಂಬದಲ್ಲಿ ತುಂಬಿದಾ ಸಾಂಬ ಶಿವನಾ
ಜಗದೊಡಿಯಾ ನೋಡs ಜ್ಯಾಣಿ ಜ್ಯಾಣನಾ ॥ ॥ ಜೀಜೀ ॥

ಅವನಿಂದ ಮೆರದಿದ್ದಿ ನೀನಾ
ಸಿರಿ ಸಂಪತ ಸವಿದು ದರದಿನಾ
ನಿನಗ ನೀಡಿ ಮಾಡಿ ಜೋಪಾನಾ
ಇರುದಿಲ್ಲಾ ಹೋದ ಮರುದಿನಾ
ಜೋಗ್ಯಾ ಜಿಗದಾನಾ । ನಿನಗ ಹುಗದಾನಾ
ಅವಗುಣಾ ಹುಗದಾನಾ ಮುಸಕಿ ಬಿಗದಾನಾ ।
ಮಂಗಳ ಮೂರ್ತಿ ಇಂಗಳೇಶ್ವರ ಈಶ್ಯಾನಾ ।
ನೋಡs ಜ್ಯಾಣಿ ಜ್ಯಾಣನ ॥ ॥ ಜೀಜೀ ॥

ಅನುಭಾವ ಲಾಲಸಾನ ಕವನಾ
ಸವಿದಂಗ ಅಮೃತ ಜೇನಾ
ಜ್ಞಾನಿಗಿ ಸುಖ ಬೋಜನಾ
ಸುಶಾಂತಿ ಪಡದು ಬಹುಜನಾ ಮುಕ್ತ ಮಂದಿರಾ
ಸುಗುಣ ಸುಂದರಾ ಅವನೇ ಚಂದಿರಾ ।
ಜೋಗ್ಯಾ ಅಂದರ ಬಿಂಬದಲ್ಲಿ ತುಂಬಿದಾ ಸಾಂಬಶಿವನಾ
ಜಗದೊಡಿಯಾ ನೋಡs ಜ್ಯಾಣಿ ಜ್ಯಾಣನಾ ॥ ॥ ಜೀಜೀ ॥

ತಾಯಿಕಿನ್ನ ತಂದಿ ಹೆಚ್ಚಿನವಾ

॥ ಸಖಿ ॥

ಕುಣಿಯಬ್ಯಾಡ ಟಣ್ ಟಣ್ ।
ಡಪ್ಪ ಬಾರಿಸಿ ಡಣ್ ಡಣ್ ।
ಸಪ್ಪಳ ಮಾಡತಿದಿ ಚಣ್ ಚಣಾ ।
ಹಾಡುದಕ ಬಂದಿದಿ ಭೇಸಿ
ತುಂತಿಣಿ ಕುಲಾ ನಿರತ ಹಿಡಿ ಹೋದಿತೊ ಯ್ಯಾಂಸಿ ॥ ಜೀಜೀ ॥

ನಡಿಯಲ್ಲಿಯವ್ವಾ ಹಾಡಿಕಿ । ನಾಳಿಗಿ ಬಿದ್ದ ಬಿದ್ದ ದಯಬೇಡಕಿ ।
ಪಂಚರಚನ ಕಾಡರೆ । ಹಾಡಬೇಡ ಹಸಿಬಿಸಿ
ಕುಂತವರಿಗೆಲ್ಲ ಆಗತದ ಕಸಿಬಿಸಿ ॥ ॥ ಜೀಜೀ ॥

ಹೇಳತೀನಿ ನಿನಗ ಹಾಡಿ । ಹೋಗಬ್ಯಾಡ ಪೋರಿ ಓಡಿ
ಸಾಯಿಬ್ಯಾಡ ಒದ್ಯಾಡಿ । ಹೇಳತೀನಿ ಹೇಳತೀನಿ ನಿನ್ನ ಕುಶಿ
ಮಾಮಾದೇರ ಕುಂತಾರ ಕಂಬಳಿ ಹಾಸಿ ॥ ॥ ಜೀಜೀ ॥

ಕಡಣಿ ಊರಾಗ ಇರಾಂವಾ । ಸದಾ ಕವಿತಾ ಬರಿಯಾಂವಾ ।
ಭೋಗೇಶ್ವರನಲ್ಲಿ ದುಡಿಯಾಂವ । ಆತನ ಪಾದಕ ಸ್ಮರಣೀ ।
ಆತನ ಪದಕ ಸ್ಮರಣೀ । ನಿಮ್ಮಂತವರ ಬೂದಾನ ಕೊಡಾಂವಾಕಾರಾ ॥
॥ ಜೀಜೀ ॥

॥ ಪದಾ ॥

ತಾಯಿಕಿನ್ನऽ ತಂದಿ ಕಮ್ಮ ಇದ್ದಾನಾ
ನಾಯ್ಯಾಕ ಆದೇನ ಕಮ್ಮ ಜ್ಯಾತಿ ।
ಒಂಬತ್ತು ತಿಂಗಳ ನನಗ ಹೊತ್ತ್ಯೇನಂತಿದಿ
ನಿನಗ ಅನಬೇಕು ಡಂಬರಕऽತ್ತಿ ॥ ॥ ಜೀಜೀ ॥

ನಮ್ಮ ತಂದಿ ನಿನಗ ಕೊಂಡ ತಂದಾನಾ
ತಿಂದುಂಡು ಸುಮ್ಮನऽ ಹ್ಯಾಂಗ ಇರತಿ
ಸಲಿಗಿ ಕೊಟ್ಟ ನಾಯಿ ತೆಲಿಗೆರಿತಂತ ಮನ್ಯಾಗ ಕುತ್ತನೀ ಗುರುಡತಿ ॥ ಜೀಜೀ ॥

ಮೈನಾರದ ಮ್ಯಾಗ ನೀನು ಮನ್ಮತಕಾಗಿ ನಮ್ಮ ತಂದಿಗಿ ಮಾಡಿದಿ ಪ್ರೀತಿ ।
ನಮ್ಮ ತಂದಿ ನಿನ್ನ ಬಲ್ಲಿ ಬಂದರ ಭ್ರಾಂತಿ ತೀರಶ್ಯಾನ ಬಿಂದು ಬೀಜಾಬಿತ್ತಿ ॥
॥ ಜೀಜೀ ॥

ಇಳು ನಮ್ಮ ತಂದಿ ನಿನ್ನ ಬಲ್ಲಿ ಇಟ್ಟಾ ತನ್ನ ರತನಾ ।
ನಿನಗ ಮಾಡಂತ ಹೇಳಿದಾ ಜತನಾ ॥ ॥ ಜೀಜೀ ॥

ಆ ರತ್ನದೊಳಗ ಗುಪ್ತ ನಾನು ಇದ್ದೆನಾ । ॥ ಜೀಜೀ ॥

ನಿನಗ ಬಂಕಿ ಕಾಡತಿದ್ದು ತಿನ್ನುದುಬಿಟ್ಟಿ ಏನೇನಾ ।
ಬೂದಿ ಮಣ್ಣಾ ಸೈತ ತಿಂದಿಲ್ಲೇನಾ ॥ ॥ ಜೀಜೀ ॥

ಏರು ಹುಳಿ ಏಣ್ಣಿ ಬದನಿಕಾಯಿ ಬಿಟ್ಟೆನಂತ ಹೇಳತಿದಿ
ಸುಳ್ಳ ಯ್ಯಾತಕ ಹೇಳತಿದಿ ಕತ್ತಿss

ಕೂಡಪಲ್ಲ ಒಂಬತ್ತು ತಿಂಗಳ ನನಗ ಹೊತ್ತೇನಂತಿದಿ
ನಿನಗ ಅನಬೇಕು ಡಂಬರಕsತ್ತಿ ॥ ॥ ಜೀಜೀ ಚೌಕ ೧ ॥

ಏರು ನವಮಾಸ ತುಂಬಿ ಬ್ಯಾನಿ ತಿನ್ನುವಾಗ ಬಾಳ ಸಂಕಟಾಗಿ ನೆಳ್ಳೀದಿ ।
ನಿನ್ನ ತಿಂಡಿಗಾಗಿ ಮಾಡಕೊಂಡಿದ್ದು
ಇದು ಉಪಕಾರ ಯಾರಿಗಿ ಹೇಳತಿದಿ ॥ ॥ ಜೀಜೀ ॥

ನಾನು ಹುಟ್ಟಿದ ಮ್ಯಾಗ ಹೊರಸಲ ಏರಿ ನೀನು ಖೊಬ್ಬರಿ ಬೆಲ್ಲಾ ತಿಂದಿದಿ ।
ಇದು ಅಲ್ಲದ ಸಕ್ಕರಿ ಶ್ಯಾಂವಿಗಿ ತುಪ್ಪ ಸಾಕಾಗುತನಾ ತಿಂದಿ ಬಿದ್ದಿದಿ ॥
॥ ಜೀಜೀ ॥

ಬಾಣಂತಾನಾ ಎಲ್ಲಾ ಚೊಕ್ಕ ಮುಗಿಯುವದರೊಳಗ
ತಿಂದು ತಿಂದು ಮನಿ ಹಾಳ ಮಾಡಿದಿ ।
ಜೀವಕ ಬೇಡಿದ್ದು ನಮ್ಮ ತಂದಿ ತಿನಶ್ಯಾನ
ಅವನ ಉಪಕಾರ ನೀನು ಮರತಿದಿ ॥ ॥ ಜೀಜೀ ॥

ಇಳುವು ನಮ್ಮ ತಂದಿದಿಂದ ನನಗ ಹಡದು ತಿಂದಿ ಇಷ್ಟೆಲ್ಲಾ ।
ತಂದಿ ಇರಲಿಕ ನೀ ಏನ ತಿಂತಿದಿ ಹೇಳೊ ಅಟಗೋಲಾ ॥ ಜೀಜೀ ॥

ನನಗ ಮಲಿ ಇಡಸಿನಂತ ಹೇಳತಿದಿ ಹಗಲೆಲ್ಲಾ
ತಂದಿ ಬಿಂದುದಿಂದ ನಿನ್ನ ಮಲಿಯಾಗ ಬಿದ್ದಾವ ಹಾಲಾ ॥ ಜೀಜೀ ॥

ನಮ್ಮ ತಂದಿದಿಂದ ನಾ ದೊಡ್ಡಾಂವ ಆದೆs ಪ್ರಭಲಾ ।
ನಿಂದು ಏನೂ ಇಲ್ಲಾ ಅದರಾಗ ಪಾಲಿಲ್ಲಾ ॥ ॥ ಜೀಜೀ ॥

ಏರು ಮಲಿ ಬಿಗದು ನನಗ ಹಾಲ ಕುಡುಸುತ ।
ಮನಿ ಕೆಲಸಾ ಮಾಡುದು ಮರತಿ ।

ಕೂಡಪಲ್ಲ ಒಂಬತ್ತು ತಿಂಗಳ ನನಗ ಹೊತ್ತೇನಂತಿದಿ ನಿನಗ ಅನಬೇಕು ಡಂಬಕಾತ್ತಿ॥
॥ ಜೀಜೀ ॥ ಚೌಕ ೨ ॥

ಏರು ತಂದಿಲಿಂದ ಸರ್ವಶ್ರಿಂಗಾರ ಕಂಡಿದಿ ।
ಕೈತುಂಬಾ ಇಟಗೊಂಡಿ ಕಾಜಿನ ಬಳಿ ।

ಮುತ್ತೈದಿ ತನಕ ಮೂಗುತಿ ಇಟ್ಟದಿ
ಚಂದ ಕಾಣೋದ ಮೂಗಿನ ಸೊಳ್ಳಿ ॥ ಜೀಜೀ ॥

ಗಂಡನಿಂದ ಕಂಡಿದಿ ಮುತ್ತೈತನಾ ಕಟಗೊಂಡಿದಿ ಅವನ ಗುಳದಾಳಿ ।
ಗಂಡಯಿಲ್ಲದೇ ರಂಡ್ಯಾಗಿ ಇದ್ದರ ನಿನಗ ಅಂತಾರ ಕೇಳs ಗೈಯಾಳಿ ॥
॥ ಜೀಜೀ ॥

ತಾಯಿಕಿನ್ನs ತಂದಿ ಹೆಚ್ಚಿದ್ದಾನಂತ ಲೋಕದೊಳಗ ಹಿಡದೈತಿ ಕಾಳಿ ।
ತಂದಿ ತಮ್ಮಂದ ಕದನ ಮಾಡತಿದಿ
ಚಲೋದಿಲ್ಲೇಳ ತಾಯಿ ನಿನ್ನ ಚ್ಯಾಳಿ ॥ ॥ ಜೀಜೀ ॥

ಇಳುವು ತಂದಿ ಸೇವಾ ಮಾಡಿದರ ಮುಂದ ಮುಕ್ತಿ ಸಾಧನಾ ।
ಏನೇನೂ ಇಲ್ಲಾ ಬಂದ ನಾ ॥ ॥ ಜೀಜೀ ॥

ಹೆಣ್ಣಿನ ಸೇವಾ ಮಾಡಿ ಯಾಂವ ಮುಕ್ತೀಗಿ ಹೊಂದ್ಯಾನಾ ।
ಹೇಳ ತಾಯಿ ಮಾಡುವೆ ವಂದನಾ ॥ ॥ ಜೀಜೀ ॥

ಇಂಗಳೇಶ್ವರ ಈಶ್ಯಾನ ಸೇವೆ ಮಾಡುವೆ ದರದಿನಾ ।
ನುಡಿಯು ನೌಬತ್ತ ಶಬ್ದದರ ಜನಾ ॥ ॥ ಜೀಜೀ ॥

ಏರು ತಂದಿಲಿಂದ ಬಂದಾನ ಹರಿಯುವದು
ನಿಂದಾ ಮಾಡತಿದಿ ಮಂದಮತಿ

ಕೂಡಪಲ್ಲ ಒಂಬತ್ತ ತಿಂಗಳ ಹೊತ್ತೇನಂತಿದಿ ನಿನಗ ಅನಬೇಕ ಡಂಬರಕತ್ತಿ ॥
॥ ಜೀಜೀ ॥ ಚೌಕ ೩ ॥

॥ ಸಖಿ ॥

ಹರದಾಸ ಸವಾಲ ಬಂತು ಕಡಕ ।
ಬಲ್ಲವಂಗ ಭಯಾ ಇಲ್ಲ ತೊಡಕ ।
ಬರುವಾಗ ನಾ ಒಂದು ಮೊಲಾ ಕಂಡೆ
ಕಣ್ಣ ಇದ್ದು ಇಪ್ಪತ್ತನಾಲ್ಕು ॥ ॥ ಜೀಜೀ ॥

ಎರಡ ತಲಿ ಮೂರು ಮೂಗ ಆ ಮೊಲಕ ।
ಎರಡ ಹಣಿ ನೋಡಿನಿ ತಕ್ಷಣಕ
ಶಾಹೀರಂತ ನಿಮ್ಮ ಸ್ಮೃತಿ ಸಾರತದ ಬಂದಿರಿ ಹಾಡುದಕ ॥ ಜೀಜೀ ॥

ಜನಾ ಇಲ್ಲಿ ನೆರದದ ಕೇಳುದಕಾ
ಐದು ತುದಿ ಇರತಾವ ವ್ಯವಸ್ತಾಕ
ಕುಬಂಡ ಮಾತ ಅಲ್ಲ ಕಂಡ್ರ ಹೇಳೊ
ಬೀಳಬ್ಯಾಡ ಮಳ್ಳತನಕ ॥ ॥ ಜೀಜೀ ॥

ಧರಿಗಿರಿ ಭದ್ರಗಿರಿ ಗುರು ಚಾಲಕ
ಸಿಕ್ಕಂದ್ರ ಭಾಶಾ ನೆನದಾನ ಬಂಗಾರ ಟಳಕ
ನಬಿಲಾಲ ಹಿಂಗ ಸವಾಲ ಕೇಳಿ ಹಚ್ಚಿದಾರು ಅಧ್ಯಾಯಕ ॥ ॥ ಜೀಜೀ ॥

॥ ಸಖಿ ॥

ಶಾಹೀರ ಸವಾಲ ಕೇಳದನಲ್ಲಾ ।
ದೇಹದ ದಿಲ್ಲಿ ದರ್ಭಾರ ಮಿಗಿಲಾ ।
ಅರುಹೆಂಬು ಅರಬರ ಮುರವೆಂಬು ಮೊಮ್ಮದ ಬುದ್ದಿನೆ ಬೀರಬಲ್ಲಾ ॥
॥ ಜೀಜೀ ॥

ನಾ ಅನ್ನುವನೆ ನಾಯಿದರ ಮಲ್ಲಾ ।
ಸುಟ್ಟು ನಷ್ಟ ಆದಾನು ಉಳಿಲಿಲ್ಲಾ ।
ಬೀಜದ ಲೆಖ್ಖ ಸಹಜ ಹೇಳತೀನಿ ಗೋಜ ಇಡುದಿಲ್ಲಾ ॥ ॥ ಜೀಜೀ ॥

ಹಿಡಿ ಕಡ್ಲಿ ಐದ ಬೆರಳಿಲೆ ಹಿಡದೆಲ್ಲಾ ।
ಐದೆ ಬೀಜಾ ಖುದ್ದ ಇದ್ದು ಮದಲಾ
ಐದರಿಂದ ಇಪ್ಪತ್ತೈದೈತಿ ಆದು ಬೆಳದು ಕಡ್ಲಿ ಚೀಲಾ ॥ ॥ ಜೀಜೀ ॥

ಗುಪ್ತ ಗವಿ ಹೊಡಸಿದ್ದು ಸುಳ್ಳಲ್ಲಾ ।
ಮಣ್ಣ ಎಲ್ಲಿ ಚೆಲ್ಲ್ಯಾದ ಎದರ ಮ್ಯಾಲಾ ।
ಆರ ತಿಂಗಳ ತನಾ ಹಡ್ಡಸಿದ ಮಣ್ಣಿನ ಡಿಗ್ಗಿ ಹೆಂಗ ಕಾಣಲಿಲ್ಲಾ ॥ ಜೀಜೀ ॥

ಕಡ್ಯಾಕ ತಗೊ ಕೊಡಮಾತ್ರ ಅವದಿಲ್ಲಾ
ಅದೆ ಎಣ್ಣಾ ಕೊಡಾ ತಂದು ಮಣ್ಣಾಗ ಮುಚ್ಚಿನೀರ ಹಾಕ್ಯಾರ ಮ್ಯಾಲಾ
ನೀರ ಎಣ್ಣಿ ಕೊಡದಾಗ ಸೇರಿತಲ್ಲಾ ॥ ॥ ಜೀಜೀ ॥

ಕಾಯಿ ಕೊಳೆತ ಬೇಧಿಸಿ ಬೀಜೆಲ್ಲಾ
ಬಲ್ತ ಭೀಜ ಮಲ್ತು ಮಳಿಕ್ಯಾಗಿ ಮುಂದ ಬೆಳ್ಯಾಗ ಉಳಿತಲ್ಲಾ ॥ ಜೀಜೀ ॥

ಬೆಳ್ಳಿ ಬೈಲಿಗಿ ಬಿತ್ತಲ್ಲಾ ।
ಕೊಯಿಲಾಕ ಕಾಯಿ ಆಗ್ಯಾವ ಅಳತಿಲ್ಲಾ
ಕಾಯಿನು ಕೊಯಿಲಿಲ್ಲಾ ।
ಕೊಡಾನು ಒಡಿಲಿಲ್ಲಾ ಕೊಡುವೆನು ಸವಾಲಾ ॥ ॥ ಜೀಜೀ ॥

ಇಂಗಳೇಶ್ವರ ಊರ ಅದsರಂಗ ಲಾಲಾ ।
ಸಂಕ್ಷಿಪ್ತದಲ್ಲಿ ತಿಳಿಸಿದ ಕವಿ ಲಾಲಾss ।
ಸುಳ್ಳ ಅನಬ್ಯಾಡೊ ಕಳ್ಳಾ ಮಳ್ಳ ತನದಿಂದ ನೆಳ್ಳುದು ನಡಿತಲ್ಲಾ ॥ ಜೀಜೀ ॥

ದೈವದ ದಯಾ ಇರಬೇಕು

ಸುರವೀಗಿ ಬಂದು ಶಿರಬಾಗಿ ಹೇಳುವೆನೊ ಕರವ ಮುಗಿದು ಸುರುವರಿಗೆಲ್ಲಾ।
ಸೂರ ತಾಳ ನನಗ ಏನೇನೂ ಗುರುತಿಲ್ಲಾ ಎರಡು ಅರಿಯದ ಅಜ್ಞಾನಿ
ಬಾಲಾ ॥ ॥ ಜೀಜೀ ॥

ಸಭಾ ನೋಡಿ ಭಯಾ ಬರತದ ಎನಗs ಅಭಯ ನೀಡಬೇಕೊ ತಾವೆಲ್ಲಾ ।
ವಿನಯದಿಂದ ನಿಮ್ಮ ತನಯ ಬೇಡುವೇ ದೈವದ ಧಯಾ ಇರಬೇಕ
ಮದಲಾ ॥ ॥ ಜೀಜೀ ॥

ಮಹಾನಮಹಾ ಪಂಡಿತರು ಬಂದು ಹಿಂಡಗಟ್ಟಿ ಕೂತಿರಿ ಸಾಲಾ ।
ಕೂಸಿನ ದೋಷಾ ದೆಸೆಕತರದೆ ಸಭಾದಾಗ ಮಾಡಬೇಕೊ ಸೇಲಾ ॥ ಜೀಜೀ ॥

ಇಳುವು ಬದಲಾದರೂ ಸೈತ ತೊದಲ ನಾಲಗಿ ಅಕ್ಷರಾ ।
ಕ್ಷಮಾ ಮಾಡರಿ ಗುರು ಹಿರಿಯರಾ ॥ ॥ ಜೀಜೀ ೧ ॥

ಸಭಾ ನೋಡಿ ನನಗ ನಡಗ ಹುಟ್ಟಿತೊ ತರತರಾ ।
ವಾಣಿ ಪೂರ್ಣ ಬರುವುದಿಲ್ಲ ಸಸಾರಾ ॥ ॥ ಜೀಜೀ ೨ ॥

ದೈವ ದೇವರೆಂದು ಭಾವಿಸಿ ಮಾಡುವೆ ನಮಸ್ಕಾರಾ ।
ಎನಗ ಮಾಡಬ್ಯಾಡರಿ ತಿರಸ್ಕಾರಾ ॥ ॥ ಜೀಜೀ ೩ ॥

ಏರು ಅಡಿ ನುಡಿ ಹೋದರು ಭಪ್ಪಾರ ಗುಡಿಯೆಂದು
ಹುರುಪ ಮಾಡಿ ತುಂಬಸರಿ ಮಜಲಾ ॥

ಕೂಡಪಲ್ಲ ಸೂರತಾಳ ನನಗ ಏನೇನ ಗುರುತ ಇಲ್ಲಾ
ಎರಡು ಅರಿಯದ ಅಜ್ಞಾನಿ ಬಾಲಾ ॥ ॥ ಜೀಜೀ ಚೌಕ ೧ ॥

ಹೆಂತಾವು ಹಾಡಿದರ ಕುಂತ ಕೇಳರಿ ಸಂತೋಷಲಿಂದ ಕೂಸಿನ ನುಡಿ।
ಹಾಡಿದಂಗ ಒಳೇ ಹರುಷ ಮಾಡಿಕೊಂಡು ಚುನ ಮುರಿ ಹಾರಸರಿ
ಹಿಡಿ ಹಿಡಿ ॥ ॥ ಜೀಜೀ ॥

ಹಾಲಿಗಿ ಹೆಪ್ಪ ಹಾಕಿದಂಗ ಗಪ್ಪ ಕೂತ ಕೇಳಬೇಕು
ಗದ್ದಲ ಮಾಡಬಾರದು ಮಾತಾಡಿ ।
ನಿಮ್ಮ ಮಾತಿನ್ಯಾಗ ನಮ್ಮನ್ನs ಮರಿಬ್ಯಾಡರಿ ಕಸ್ತಕಿಂತ ಕನಿಷ್ಟ ಮಾಡಿ ॥
॥ ಜೀಜೀ ॥

ತಪ್ಪಿ ಮ್ಯಾಲ ಬಿದ್ದಾವರನ ವೈದ ಉಪ್ಪರಿಗಿ ಮ್ಯಾಲೆ ಇಟ್ಟು ।
ಉಚ್ಚ ಮಾಡೂದ ಇದು ನಿಮ್ಮ ಕಡಿ ॥ ॥ ಜೀಜೀ ॥

ಇಳುವು ಸಭಾ ಸನ್ಮತ ಮಾಡುದು ಆಗುದಿಲ್ಲಾ ಸುಮ್ಮನಾ ।
ಎಂಥವಗಾದರೂ ಬರತದ ಅನುಮಾನಾ ॥ ॥ ಜೀಜೀ ॥

ನಾಲ್ಕು ವ್ಯಾಳೇ ಸರಿಯಾಗಿ ಇರುವದಿಲ್ಲಾ ಒಂದೇ ಸವನಾ ।
ಸೂಟಿ ವ್ಯಾಳೆ ಹತ್ತಿದರ ಹಾಡಕಿ ಆಗುದಿಲ್ಲಾ ರಚನಾ ॥ ॥ ಜೀಜೀ ॥

ಎಂಥಾ ಬೆಳದ ಹಾಡವಗ ಆಗತದ ಅಪಮಾನಾ ।
ಅದಕs ಮತ್ತಷ್ಟ ಕೊಡಬೇಕರಿ ಉತ್ತೇಜನಾ ॥ ॥ ಜೀಜೀ ॥

ಏರು ತರುಣ ಬಂದು ನಿಮಗ ಶರಣ ಮಾಡಿ ಹೇಳತೀನಿ
ಅಂಥಾ ಕರುಣಾ ಇರಲ್ಲಿ ನನ್ನ ಮೇಲಿ ಪುರಾಣಾ ॥ ॥ ಜೀಜೀ ॥

ಎಳಿಲಾರದೆತ್ತೀಗಿ ಹುರಪಲೆ ಬಾಯಿಮಾಡಿ
ಹಳಿ ದಾಟಿಸಿ ಬಿಟ್ಟಂಗ ಬಂಡಿ ।
ಅದರಂತೆ ಹಾಡಾಂವಗ ಟೀಕಂತ ಟಾಳಿಕೊಟ್ಟರ ಮುತ್ತೀಟು
ಮತ್ತೀಟು ಬರತದ ಗಮಂಡಿ ॥ ॥ ಜೀಜೀ ॥

ಹಾಡು ಮನುಷ್ಯಾಗ ಮದಲೇ ತರಕೀಲೇ ಬರತದ ।
ಅದರಾಗ ಕೂತವರು ಅಲ್ಲೇನು ಹಾಡತದಂದರ ಮತ್ತಷ್ಟ ಒಣಗತಾವ
ನಮ್ಮ ಸೊಂಡಿ ॥ ॥ ಜೀಜೀ ॥

ಗಂಟಲ ಬತ್ತಿ ಅವನ ಸ್ವರಾ ಬರುವದಿಲ್ಲಾ
ಬಡದ್ಯಾಡತಿರ ಎದಿಗುಂಡಿ ಹಿಂತಾದರ ಸಲುವಾಗಿ ನಾನು ಬೇಡುವೇನೊ
ಪ್ರೇಮವೆಂಬ ಪುಣ್ಯದ ಪೆಂಡಿ ॥ ॥ ಜೀಜೀ ॥

ಇಳುವು ನಿಮ್ಮ ಹತ್ತು ಮಂದಿದು ಆಶೀರ್ವಾದ ಬೇಡುವೇ
ದೈವದ ಸೇವಾ ಮಾಡುವೇ ॥ ॥ ಜೀಜೀ ॥

ನನ್ನ ಪತ್ತಾ ಕೇಳರಿ ಇಂಗಳೇಶ್ವರದಾಗ ಇರುವೇ ।
ನೀವು ಕರಿಸಿದಾಗ ನಾನು ಬರುವೇ ॥ ॥ ಜೀಜೀ ॥

ಕಾಸಿಮ ಲಾಲಸಾನ ಹಾಡಿಕಿ ಮಳಿಸುರಿದಂಗ ಒಂದ ಸರುವೇ ।
ಸಿಕಂದರ ಪೀರಾ ಆದ ಅವರೀಗಿ ವರವೇ ॥ ॥ ಜೀಜೀ ॥

ಏರು ಇಂಗಳೇಶ್ವರದಾಗ ವಿಚಿತ್ರ ಕವಿಗಳು ಹುಟ್ಟತಾವ ಹೊಸಾ ಹೊಸಾ ಕಪಿಲಾ
ಕೂಡಪಲ್ಲ ಸ್ವರಾ ತಾಳ ನನಗ ಗುರ್ತಿಲ್ಲಾ ಎರಡು ಅರಿಯದ
ಅಜ್ಞಾನಿ ಬಾಲಾ ॥ ॥ ಜೀಜೀ ಚೌಕ ೩ ॥

॥ ಸಖಿ ॥

ಒಕ್ಕಲಗ್ಯಾರಗಿ ಚಕ್ಕಡಿ ಬೇಕೊ । ನೂಲವರಿಗಿ ಕುಕ್ಕಡಿ ಬೇಕೊ ।
ತೂಗವರಿಗಿ ತಕ್ಕಡಿ ಬೇಕೊದರವೊಂದ ವ್ಯಾಪರಕ
ಮಾಪ ಹೋಗಿ ತೂಕ ಬಂತೊ ತಿನ್ನು ಆಹಾರಕ ॥ ॥ ಜೀಜೀ ॥

ಕೂಲಿಯಂವಗ ಗುದ್ದಲಿ ಬೇಕು । ಕಂಬಾರಂವಗ ಇದ್ದಲಿ ಬೇಕು ।
ಕಲಾವಂತಗ ಮದ್ದಲಿಬೇಕು ತಾಳಿಗತ ಸಪ್ತಸ್ವುರಕ ।
ಸತಿ ಪತಿ ಸವಿಬೇಕು ಸಂಸಾರಕ ॥ ॥ ಜೀಜೀ ॥

ಸೌಧಾಗಾರಗ ಪ್ಯಾಟಿಬೇಕು । ಸಾಲಿ ಹುಡಗರಿಗೆ ಪಾಟಿ ಬೇಕು
ಸೋಟರ ಕೈಯಲ್ಲಿ ಲಾಟಿ ಬೇಕು ದುಷ್ಟರ ಸಂಹಾರಕ
ಶಿಷ್ಟರಲಿ ಪಾಸಾಯಿತು ಸರಕಾರಕ ॥ ॥ ಜೀಜೀ ॥

ಮಳಿ ಬಂದ್ರ ಗೊಂಗಡಿಬೇಕು । ಹೊಳಿಬಂದ್ರ ಸಿಂಗಡಿಬೇಕು
ಅಳಿಯಾ ಬಂದರ ಅಂಗಡಿಬೇಕು ಚಹಾ ಕಾಫಿ ಫರಾಳಕಾ ।
ಅಮಲದಾರ ಬಂದ್ರ ಹಳಬರಬೇಕು ಸರಕಾರಕ ॥ ॥ ಜೀಜೀ ॥

ಹಾಡಾವರಲ್ಲಿ ಕವಿಬೇಕು ಕೇಳವರಲ್ಲಿ ಸವಿ ಬೇಕು
ರಾಜ ತುಂಬಾ ರವಿ ಬೇಕು । ಬೆಳಗುದು ಇಂಗಳೇಶ್ವರಕ
ಕಾಸಿಮ ಲಾಲಸಾ ದುಡಿ ಅಂದಾ ಶಿವಾಚಾರಕ ॥ ॥ ಜೀಜೀ ॥

ಹೈನದ ಹೈರಾಣ

ಪ್ರಾಂತ ದೇಶದೊಳು ಇಬ್ಬರು ಸತಿಪತಿ ಇದ್ದರು ।
ಸಂಸಾರ ಮಾಡುದಕ ಶಾಣ್ಯಾರಾ ।
ಕೂಡಿದ ಮಂದ್ಯಾಗ ಕೂಗಿಹೇಳತೀನಿ ಆಕಿಯ ಗಂಡ ಇದ್ದ ಅಡತಾರಾ ॥
॥ ಜೀಜೀ ೧ ॥

ಹೇ ಸತಿ ಹೇಳತಾಳ ತನ್ನ ಪತಿದೇವರಿಗಿ ಪ್ರಪಂಚ ಮಾಡುದ ಹುನ್ನಾರಾ ।
ಹೈನಾ ಮಾಡಲಾಕ ಎಮ್ಮಿ ತಗೊಂಡು ಬರಿ ಮಾಡೂನು ತುಪ್ಪದ
ವ್ಯಾಪಾರಾ ॥ ॥ ಜೀಜೀ ೨ ॥

ಮಡದಿ ಮಾತಕೇಳಿ ಗಂಡ ಹೇಳತಾನ
ಎಮ್ಮಿ ತರುದಕ ಇಲ್ಲ ತಕರಾರಾ ।
ಹೈನ ಮಾಡಿದ ಮ್ಯಾಗ ನಿಮ್ಮ ಅವ್ವ ಬರತಾಳ
ಕೊಟ್ಟಗಿಟ್ಟಿ ಆಕಿಗಿ ಹಾಲ ಮೊಸರಾ ॥ ॥ ಜೀಜೀ ೩ ॥

ಪುರುಷನ ಮಾತಿಗಿ ಸ್ತ್ರೀಯಳ ನಕ್ಕಾಳು
ಇಂಥಾ ಮಾತ ಯ್ಯಾತಕ ಆಡಾವರಾ
ಅಣ್ಣನ ಮಕ್ಕಳು ಮನಿತಾನಕ ಬಂದಗಾ
ಹಾಕಿದರ ಬಂದಿತು ಸ್ವಲ್ಪ ಮಸರಾ ॥ ॥ ಜೀಜೀ ೪ ॥

ಇಳುವು ಇಷ್ಟ ಕೇಳಿದ ಕೂಡಲೆ ಸಿಟ್ಟ ಬಂದಿತ ಅವನಿಗಿ ।
ಅವಸರಲೆ ಹೋದಾ ಮೂಲಿಗಿ ॥ ॥ ಜೀಜೀ ॥

ಅತ್ತಿತ್ತs ನೋಡುದರಾಗ ಒಣಕಿ ಸಿಕ್ಕೀತು ಅವನ ಕೈಗಿ ।
ಹಂಗs ಎತ್ತಿ ಇಟ್ಟ ಬೆನ್ನೀಗಿ ॥ ॥ ಜೀಜೀ ॥

ತನ್ನ ಮಡದೀಗಿ ಬೈತಾನ ಸಲಗಿ ಕೊಡಬಾರದು ಹೆಂಗಸರಿಗಿ ।
ನನ್ನ ಮನಿ ಹೊಯ್ತು ಹಾಳಾಗಿ ॥ ॥ ಜೀಜೀ ॥

ಎಮ್ಮಿ ಕಟ್ಟಿದ ಮ್ಯಾಗ ಹೈನಾ ಕಂಡಿಲ್ಲಾ ಹೊಟ್ಟೀಗಿ ।
ಎಲ್ಲಾ ಕೊಟ್ಟ ಬಿಟ್ಟಾಳ ತವುರ ಮನೀಗಿ ॥ ॥ ಜೀಜೀ ॥

ಏರ ಪೆಟ್ಟ ತಾಳಲಾರದಕ ನಾರಿ ಹೊಂಟಾಳ ತವರ ಮನಿಗೆ
ಹೋದಾಳೊ ಬರರರಾ ।

ಕೂಡಪಲ್ಲ ಕೂಡಿದ ಮಂದ್ಯಾಗ ಕೂಗಿ ಹೇಳತೀನಿ ಆಕಿ ಗಂಡ ಇದ್ದ ಅಡತಾರಾ ॥
॥ ಜೀಜೀ ಚೌಕ ೧ ॥

ಅಣ್ಣಾ ತಮ್ಮದೇರ ಮುಂದ ಕಣ್ಣೀರ ಸುರಸಿ
ಅತ್ತತ್ತ ಹೇಳಿದಳೊ ಹಕ್ಕಿಕತ ।

ಕಣಿಕರ ಇಲ್ದೆ ಕಂಡಂಗ ಹೊಡದಿದಾ ।
ಮೈಯಂತಾ ಮೈ ಹಸರೇರಿತ್ತಾ॥ ॥ ಜೀಜೀ ॥

ನಾಲ್ವರು ಅಣ್ಣ ತಮ್ಮದೇರು ಕೂಡಿ ಮಾತಾಡತಾರ ।
ಅವನ ಸೊಕ್ಕ ಎಷ್ಟ ಇದ್ದೀತಾ ।
ಎಮ್ಮಿ ಕಟ್ಟಲಾರದೆ ಮಸರ್ಹಂಗ ಕೊಡತಾಳ
ಅವರಿಗೆ ಸಿಟ್ಟ ಬಾಳ ಬಂದೀತಾ ॥ ॥ ಜೀಜೀ ॥

ವದಾ ಮಾಡದೆ ಬಿಡಬಾರದು ಅವುಂಗ
ಉಪದೇಶ ಕೊಡಬೇಕು ಕರಾಕರಾ ಹಲ್ಲ ತಿನ್ನುತಾ ।

....

ಅವರು ನಾಲ್ವರು ಮನಿ ಹೊಕ್ಕ ತಗೊಂಡಾರ ತಮ್ಮ ಬಡಿಗಿ ।
ಸುರು ಆದಿತ್ತ ನೋಡರಿ ಹುದಗಿ (ಗಿ) ॥ ॥ ಜೀಜೀ ೧ ॥

ಜೀವಕ ಅಂಜಿ ಉಚ್ಚಿ ಹೊಯ್ಕೊಂಡಿತು ತರತರ ನಡುಗಿ ।
ಧೋತರದಾಗ ಹೋಯಿತು ಹೊರಕಡಿಗಿ ॥ ॥ ಜೀಜೀ ೨ ॥

ಅತ್ತ ಇತ್ತ ಹಾರ್‍ಯಡತಾನ ಏನ ಹೇಳಲಿ ಅವನ ಸುಡಗಿ ।
ಹೋಗಿ ಮ್ಯಾಲ ಬಿದ್ದಿತು ವಲಿದ ಅಡಕಲ್ಲಗಡಿಗಿ ॥ ॥ ಜೀಜೀ ೩ ॥

ಈ ಸುದ್ದಿ ಹೋಗಿ ಮುಟ್ಟಿತೊ ತನ್ನ ಮಡದೀಗಿ ।
ಆಕಿ ಬಂದು ಬಿಡಿಸಿಕೊಂಡಾಳು ತಡೀರಿ ॥ ॥ ಜೀಜೀ ೪ ॥

ಏರ ಮಡದಿಂದ ಆ ಮೂಢಾ ಉಳದಾನು ವ್ಯರ್ಥ ಪ್ರಾಣ ಹೋಗತಿತ್ತೊ ಟಾರಾ ।

ಕೂಡಪಲ್ಲ ಕೂಡಿದ ಮಂದ್ಯಾಗ ಕೂಗಿ ಹೇಳತೀನ ಆಕಿ ಗಂಡಾ ಇದ್ದ ಅಡತಾರಾ ॥
॥ ಜೀಜೀ ಚೌಕ ೨ ॥

ಹಿರಿ ಅಣ್ಣಾ ಅವನಿಗಿ ಕಣ್ಣ ಕಿಸ್ತ ಕೇಳತಾನ
ಎಮ್ಮಿ ಹೆಂಗ ಬಿಟ್ಟಿದೆಲೆ ಅಡಮುಟ್ಟಾ ।
ನಿನ್ನೆ ರಾತ್ರ್ಯಾಗ ಹರಕೊಂಡು ಬಂದು ಹಾಳ ಮಾಡಿಬಿಟ್ಟತ ನಮ್ಮತ್ವಾಟಾ ॥
ಮಾವನ ಮಾತಿಗೆ ಮಳ್ಳಾ ಹೇಳತಾನ ವಿಚಾರ ಮಾಡಿ ಹೊಡಿಬೇಕ ಬೇಕಾದಟ್ಟ

ಎಮ್ಮಿಕ ಸಹೀತ ತಂದಿಲ್ಲಾ ತ್ವಾಟಕ ಹ್ಯಾಂಗ ಬರತೈತಿ
ಸುಳ್ಳೆ ಹೊಡಿತೀರಿ ಪುಕ್ಕಟ್ಟಾ॥ ॥ ಜೀಜೀ ॥

ಎಮ್ಮಿ ಕಟ್ಟಲಾರದೆ ನಮ್ಮ ತಂಗಿ ಹಾಲ ಮಸರಹೆಂಗ ಕೊಟ್ಟಾಳೊ
ಒಣಕಿ ತಗೊಂಡು ಹೊಡದಿದಿ ದುಷ್ಟಾ ।
ನಿನ್ನ ಒಣಕಿ ಹೈನಾ ನಿನಗೆ ಉಣಸತೀವಿ ಇದು ಯಾರ ಮನಿಗಂಟಾ ॥
॥ ಜೀಜೀ ॥

ಇಳುವು ನನ್ನ ಕಡಿ ತಪ್ಪಾತೆಂದು ಹೋಗಿ ಹಿಡಕೊಂಡಾ ಅವರ ಕಾಲಾ ।
ನಾಲ್ವರು ಆದರು ಕುಸಿಯಾಲಾ ॥ ॥ ಜೀಜೀ ॥

ಗಂಡಾ ಹೆಂಡತಿನ ಕುಂಡರಸಿ ಹೇಳಿ ಹೋದರು ಅಕಲಾ ।
ಸತಿ ಪತಿ ಹಿತದಿಂದ ಸಂಸಾರ ಮಾಡಿದಾರ ಆಮ್ಯಾಲಾ ॥ ಜೀಜೀ ॥

ಸುತ್ತ ದೇಶದೊಳು ಇಂಗಳೇಶ್ವರ ರಂಗಲಾಲಾ ।
ಸಿಕಂದರ ಪೀರಾಂದ ನಡದದ ಅಲ್ಲಿ ಪ್ರಬಲಾ ॥ ॥ ಜೀಜೀ ॥

ಏರು ಕಾಸೀಮ ಲಾಲಸಾ ಹಿಂಗ ಕವಿ ಮಾಡಿ ಹೇಳತಾರ
ಕೂಡಪಲ್ಲ ಕೂಡಿದ ಮಂದ್ಯಾಗ ಕೂಗಿ ಹೇಳತೀನಿ ಆಕಿಯ
ಗಂಡ ಇದ್ದ ಅಡತಾರಾ ॥ ॥ ಜೀಜೀ ॥ ಚೌಕ ೩ ॥

ಅವರಿ ಹೂವಿನಂಥಾ ನಾರಿ

ಅವರಿ ಹೂವಿನಂಥಾ ನಾರಿ ದಾರಿ ಹಿಡದು ನಡದಾಳ ಗೌರಿ ।
ನಲಿದಾಡಿದಂಗ ನವಿಲ ಗರೀಗಾ–ಬರ‍್ಯಾದೆ ನೋಡಿ ಕಣ್ಣೀಲಿ ।
ಎಳಿ ಬಾಳಿ ಸುಳ್ಯಾಂದು ಬೆಳದಂಗ ಸಣ್ಣೀಲಿ ।
ಬಾಲಿ ಬಂದ್ರ ಬಂಗಾರದ ವರಣ ಬಣ್ಣೀಲಿ ।
ಅಂದ ಚಂದದಿ ಆ ನಂದಿ ಮುಂದ ಹಾಯ್ದು ಹೋದರ ಸುಗಂಧವಾಸ
ಎಲ್ಲೇಲಿ ॥ ॥ ಜೀಜೀ ॥

ಝುಗ ಝುಗಿಸುದ ಜರದ ಮಡಿ ಉದರಿದಂಗ ರತ್ನದ ಕಿಡಿ ।
ಕುತನಿ ಕುಪ್ಪಸ ರೆಶ್ಮಿ ಕುಡಿ ಮುಡಿದಂಗ ಚಂದ್ರ ಹುಣ್ವೀಲಿ ।
ಖಡ್ಗ ಝುಳಪಿಸಿದಂಗ ಹಿಡಿದಿ ಸಾಣೀಲಿ
ಈಕಿ ಬೆಳಕ ಬೀರುದು ಪೂರ ಓಣೀಲಿ ।
ಆಂಬಲ ಮೈಯು ತುಂಬ್ಯಾದ ಪಚ್ಚೆ ರಂಬಿ ಚಿತ್ರ ಗೊಂಬಿ ಸಾಬಾ
ನೋಡಿ ಬಡದಂಗಾಯಿತೊ ಬಾಣೀಲಿ ॥ ॥ ಜೀಜೀ ॥

ತೋಳ ತೊಡಿ ತಿದ್ದಿ ತೀಡಿ ಮಾಡಿದಾನು ಬ್ರಹ್ಮ ನೋಡಿ
ನಡಾ ಸಣ್ಣ ಸಿಂಹನ ಜೋಡಿ ।
ಜೋಕ ಜೆಮಕನಾರಿ ವರಣೀಲಿ ।
ಮುತ್ತ ಉದರಿದಂಗ ಮಾತ್ರ ವಾಣೀಲಿ ।
ತುಟಿ ತೊಂಡಿ ಹಣ್ಣಿನ ತೊರಣೀಲಿ ।
ದಂತ ದಾಳಿಂಬ್ರ ಡೌಲಾ ಕಣ್ಣ ಹುಬ್ಬಾ ಕಾಮನಬಿಲ್ಲಾ
ಹಾಲ ಗಲ್ಲಾ ಗೋಲ ತರುಣೀಲಿ ॥ ॥ ಜೀಜೀ ೩ ॥

ಇಳು ಕಳೆಯುಳ್ಳ ಕಾಮಿನಿ । ಮೂಗ ಸಂಪಿಗಿ ತೆನಿ ।
ಕಣ್ಣ ಕೊರದ ನಿಂಬಿ ಬದನಿ । ಕುಂಬಿನಿಯೊಳು ಅಂಬುಜಾಕ್ಷಿ
ಸಂಭ್ರಮದಿ ಧರಸಿ ಆಭರಣಾ
ಹಿಕ್ಕಿ ತಿಕ್ಕಿ ತೀಡಿರದ ತುರಬಾ
ಕಟ್ಯಾಳ ನಾಗರ ಹೆಡಿ ಬೆರ್ತ ನಿಂತಾ ಹುಡುಗ ನೋಡಿ ।
ಕನ್ನಡಿಯೆಂತಾ ದರ್ಪಣಾ ।
ದೇವಲೋಕದ ದೇವತಿಯೇನ್ನು ಪಾದಕ ಬಿದ್ದು
ಬೇಡಿಕೊಳ್ಳೇನೊ ಪಾರ್ವತಿನೇ ಹೌದು ಪರಿಪೂರ್ಣಾ ॥ ಜೀಜೀ ॥

ಹೊಸಾ ಯೌವ್ವನಾ ಹಸನಮುಖಿ
ವೇಶ್ಯಾಂಗನಿ ಅಪ್ಸರಾಕಿ ತುಸು ಕಸರ ಇಲ್ಲದಕಿ

ಸೂರ್ಯನಂತೆ ಕಣ್ಣುಕುಕ್ಕಿ ಸುರಸುಂದ್ರಿಯೆನಸು ವರಣಾ
ಏಸ ಕಾಲ ಆದ್ರೂ ಹಿಂತಾ ರೂಪ ನಾನು ನೋಡಿದಿಲ್ಲಾ
ಜಾಕೀಟ ಪಾಕೀಟ ಲಾಕಿಟಾ ಲುಚ್ಯಾಗ ಲಲಾಗಟ್ಲೆ ಹೋಗಲಿ
ಹಣಾ ಹರಣಾ
ಮನ್ಮಥಾ ಮಿತಿಮೀರಿ ಮಾತಾಡಿಸಿ ನೋಡ್ಲೇನೊ
ಮಾಡ್ಯಾಳೇನೊ ಯಾವ ಅಂತಃಕರಣಾ ॥ ॥ ಜೀಜೀ ॥

ಸುಳ್ಳ ಸಂಸಾರ ಯಾರಿಗಿ ಬೇಕು ಹಿಂತಾ ನಾರಿ ಸಿಕ್ಕರ ಸಾಕು ।
ಸುರ ಸುಖಾ ಸವಿಬೇಕು ವಃರು ಕಸಾಯಿಬೇಕು ।
ಮಲ್ಲಿಗಿ ಹೂವಿನಂತಾ ನಾರಿ ಬೆಲ್ಲಾ ಹಚ್ಚಿ ನುಂಗಲೇನೋ ನಲ್ಲಾ
ನುಡಿ ನಿಲ್ಲದೆ ಎಲ್ಲಾ ಬಿಟ್ಟು ನಡದಾನೊ ಈಕಿ ಕಾಲಾಗಿ
ಹೋಗಲೆಂತ ಪ್ರಾಣ
ಚಿಗರಿ ಯಗರಿದಂಗ ಚೆದರಿ ಬಿದರಸ್ವಾಟಿ ಸೇರಿದಾಳೆ
ನೆದರ ಹಚ್ಚಿ ನಡದಾ ಸುಖಜಾಣಾ ॥ ॥ ಜೀಜೀ ॥

ಏರ ಬಿದರ ಕ್ವಾಟಿ ಪ್ಯಾಟಿಯಲ್ಲಿ ತಪ್ಪಿಸಿಕೊಂಡು ತಿರಗತಾನ ।
ತಪಾಸಾಗಲಿಲ್ಲಾ ಮೌನ । ವಾಪಸ ಉಪವಾಸ । ಹೊರಟಾನ ।
ರಪಾಟಿ ಕಾಸ ಸ್ವಣ್ಣಿಲಿ । ಕಲ್ಯಾಣ ಕಲಬುರ್ಗಿ ತಿರುಗಿ ನುಣ್ಣಿಲಿ ।
ಹುಮನಾಬಾದಕ ಹೋದಾ ಹೆಣ್ಣ ಹುಟ್ಟಲಿ ॥

ಕೂಡಪಲ್ಲ ಆಂದ ॥ ಚಂದದಿ ಆ ನಂದಿ ಮುಂದು ಹಾಯದಿ ಹೋದರ ಸುಗಂಧವಾಸ
॥ ಜೀಜೀ ॥ ಚೌಕ ೧ ॥
ಶಾಬಾದ ಔರಾದ ಔರಂಗಾಬಾದ ಹೈದ್ರಾಬಾದ ಹಂಗ ಹರದು
ತಿರಗಿದಾನು ।

ತಿರಗಿ ಹಂಗೇ ಬಂದಾ ಪೈಂಗಿ ಹರಿಹರಾ ।
ಮಸ್ಕಿ ಮಂಗಳೂರು ನೋಡಿ ಬೆಂಗಳೂರಾ ।
ಮೈಸೂರ ಮದ್ರಾಸ ಚಾವಣಿ ಲಿಂಗಸೂರ ॥
ಹಿರಿಮಾನಿವಿ ನಿರಮಾನಿವಿ ನಾರಿ ಅಲ್ಲಿ ಸಿಗಲಿಲ್ಲಾ
ಎಲ್ಲಾ ಹುಡುಕಿ ಜಿಲ್ಲಾ ರಾಯಚೂರ ॥ ॥ ಜೀಜೀ ॥

ಹಾದಗೆಲ್ಲ ಮುದಗಲ್ಲಾ ಗುಂದಕಲ್ಲ ಇಲಕಲ್ಲಾ
ಕರನೂರಲ ಕಾಗಲ್ಲ ನಾಯಿಲ್ಲನೊ ಶಾಪುರಾ ।
ಸಾಗರ ದೊಡ್ಡ ಗುಡ್ಡಾ ತಿರಗಿ ಸುರಪುರಾ
ಹರಣ ಹಾರಿ ನೋಡಿ ನಾರಾಯಣ ಪುರಾ ।
ಜ್ಯಾಗಟಕಲ್ಲ ಮಸರಕಲ್ಲಾ ಕಡೆಕಲ್ಲಾ
ಕೊಡೆಕಲ್ಲ ಹಿಡಕಲಾ ನೋಡಿ ಕೋಲಾಪುರಾ ॥ ॥ ಜೀಜೀ ॥

ನಿಪ್ಪಾಣಿ ಸಂಕೇಶ್ವರ ಲಕ್ಷ್ಮೇಶ್ವರ ರಾಮೇಶ್ವರ ।
ಪಂಡ್ರಾಪುರ ಸೋಲಾಪುರ ಲೋಕಾಪುರ ನೋಡಿ ಶ್ಯಾಕಾಪುರಾ ।
ಕಲ್ಮಿ ಚಾಲ್ಮಿ ನೌಲಿ ಚಿತ್ತಾಪುರ ।
ಚಿಣಗೇರಿ ಚಿತ್ರಗಿ ತುಳಜಾಪುರಾ ।
ನಾರಿ ಮಾರಿ ನೋಡಬೇಕಂತ ನಾಯಿ ಹಂಗ
ತಿರಗತಿತ್ತೊ ಮತ್ತ ಬಂತು ಇತ್ತ ತಿಮ್ಮಾಪುರಾ ॥ ॥ ಜೀಜೀ ॥
ಸಾಂಗಲಿ ಮಿರ್ಜಿ ಸೇರ್‍ಯಾಳ ಅನುಸುದ್ದಿ ಕೇಳಿ ಎದ್ದಾನೊ ।
ಸಿದ್ದಾಪುರ ಮುದ್ದಾಪುರ ಮಮದಾಪುರ ಸಂಗಾಪುರ
ಡಂಗಾಪುರ ಜ್ಯಾಳಗಿ ತಾಜಪುರ ।
ರತ್ನಾಪುರ ತಿಕೋಟಾ ರಾಂಪುರಾ ।
ಮಹಾರಾಷ್ಟ್ರ ಮುಂದ್ರುಪ ಮಕಣಾಪುರ ।
ಹೊನಮುರಗಿ ಮೈದುರಗಿ ತಿರಗಿದರ
ಸಿಗಲಿಲ್ಲಾ ಸಲಗರ ದಾಟಿ ಸರದಾಸದ್ಲಾಪುರಾ ॥ ॥ ಜೀಜೀ ॥

ಇಳು ಸದ್ಲಾಪುರ ಆನಂದಪ್ಪಾ ಕಡ್ಲೆ ಹಿಂಗ ಹೇಳತಾನ
ದುಡೊಗಿದೊ ನಿನ್ನ ಗೆಳತಿ
ದುದ್ನೀಗಿ ಹೋಗಿ ಕೇಳೊ ನೀನು
ಇದ್ದ ಸುದ್ದಿ ತಿಳತದ ಬದ್ದಗೆಟ್ಟು ತಿರಗಬ್ಯಾಡಾ
ಎದ್ದು ಹೋಗೋಸದ್ದೆs ಈಗ ತಯ್ಯಾರಿರಬೇಕು ಮೇಲಗಾಡಿ ।
ಅಷ್ಟರಲ್ಲಿ ಅಂದಾಡ್ಯಾಂವ ಅಲ್ಲೆ ಬಂದು ಅಂದಾನು
ಅಕ್ಕಲ ಕೋಟ್ಯಾಗ ಅದಾಳ ಹೊರಡಿ॥ ॥ ಜೀಜೀ ॥
ಸ್ಟೇಶನಕ ಹೋಗಿ ನೋಡುದರಾಗ ಅಕ್ಕಲಕೋಟೆಗಾಡಿ ಏರಿ
ಬಾಗಲಕೋಟೆಗೆ ಬಂದ್ಕೊ ಬಾಲಿ ।
ಬಳಲತಾನ ಕೂತು ಅಲ್ಲಿ ।
ಪ್ಯಾಲಿ ಆದ ಇಂವಾ ಹುಡಿಕ್ಯಾಡಿ ।
ಅಲ್ಲಿ ಇಲ್ಲಿ ನೋಡಿದರ ಎಲ್ಲಿ ತಪಾಸ ಆಗಲಿಲ್ಲಾ
ಕಲಾಸ ಆದ ಕೆಲಸಗೇಡಿ ।
ಸಿಕ್ಕಂಗ ರೊಕ್ಕ ಖರ್ಚಮಾಡಿ ।
ಕೈಯಾಗ ಉಳಿಲಿಲ್ಲಾ ಕಸಕೇಡಿ ।
ಒಕ್ಕೊಟ್ಟ ಚುಟ್ಟಾ ಸೇದತಿತ್ತೊ
ಪುಕ್ಕಟ ಚಹಾ ಬೇಡತಿತ್ತೊ
ಸಂಗಾಟ ಮಂದಿನ ಕೇಳಿತಿತ್ತೊ ಜ್ಯಾಡಿ ॥ ॥ ಜೀಜೀ ॥

ಹರಟಿ ಮಾಡಿ ಹೊರಟ ಮಂದಿ
ಮೋರಟಗಿಗೆ ಹೋಗಂದ್ರ ಜೇರಟಗಿಗಿ ಬಂದಾ ತಾನು

ಹಗರಟಿ ಹುಡಕಿದಾನು ಹೊರಟಾನು ಹುರಟಿ ಓಡಿ ।
ಬೆದಮಟ್ಟಿ ಬಂಗಾರಹಟ್ಟಿ ಗುಡಗುಂಟೆ ಹೊನಗುಂಟೆ ।
ಮಾನಮಟ್ಟಿ ನಾಗಹಟ್ಟಿ ನಗನೂರ ನೋಡಿ
ನಾಯವಾಡಿ ರದ್ದೆವಾಡಿ ತದ್ದೇವಾಡಿ
ದಂಡೋತಿ ಬಾಗೇವಾಡಿಗ ಬೇಡಕೊಂಡು
ತಿಂತೊ ತಪ್ಲ ತಡಿ ॥ ॥ ಜೀಜೀ ॥

ಏರು ವಚ್ಚೆ ಕೋರವಾರ ತಿರಗಿ ಇದ ಹೆಚ್ಚಿನ ಫಜೀತಿ ನಡದಿತೊ
ನಿಡಗುಂದಿ ನಾಲತವಾಡ ಬಿಜವಾಡ ಜನವಾಡ
ಜುಂಜಲವಾಡ ನೋಡಿ ಡೋಣಿಲಿ ।
ಕಾಣದ ಕಲ್ಲ ಒಗದಂಗಾಯಿತ ಕೌಣಿಲಿ ।
ಹಾಗೇ ಅಳತ ಗೆಳತಿ ಸ್ಮರಣೀಲಿ ।
ಕೂಡಪಲ್ಲ ಅಂದ ಚಂದ ॥ ॥ ಜೀಜೀ ಚೌಕ ೨ ॥

ರ‍್ವಾಡಿಗಿ ರೂಡಿಗಿ ಕುರಡಿ ನೋಡಿ
ಬ್ಯಾಡಗಿ ಕರಡಿ ಹುಡುಕಿದಾನೋ
ಬ್ರಿಮ್ಮಿಯಿಂದ ಮಿಡಕಿದಾನು
ಬಾಡಿಗಿ ಬೂದ್ಯಾಳ ಬಾರಾಮತಿ ।
ಹಾಗೆ ಶೃಂಗೇರಿ ಗಂಗುರ ಗಂಗಾವತಿ ।
ಗದಗ ಹುಬ್ಬಳ್ಳಿ ಧಾರವಾಡ ಭದ್ರಾವತಿ ।
ವಂದುರುಗಾ ರಾಮದುರ್ಗಾ ದೇವದುರ್ಗಾ
.... ॥ ॥ ಜೀಜೀ ॥

ಬೆಣ್ಣೂರ ಗೆಣ್ಣೂರ ಕೊಣ್ಣೂರ ಸಿಣ್ಣೂರ ।
ಬನ್ನೂರ ಚನ್ನೂರ ಕನ್ನೂರ ಹುಡಿಕಿ ಹೊರತಿ
ಅಥಣಿ ಅನಗವಾಡಿ ಚೌಡಿ ಸವದತ್ತಿ
ಸಂದ ಬಿಡದೆ ಹುಡಿಕಿ ಸಂಸ್ಥಾನ ಜತ್ತಿ
ಮುರಗೋಡ ಮುಗುಳಕೋಡ ಬ್ಯಾಕೋಡ ನೋಡಿ ಬಳೂತಿ ॥
॥ ಜೀಜೀ ॥

ಕೋಲಾರ ಕೋಲೂರ ಆಲೂರ ಅಡ್ಯಾಡಿ
ಬೇಲೂರ ಬೈಲೂರ ನಾಲವಾರ ನಿಲೂರ ಮಾಲಗತ್ತಿ
ಮುಂಡಗನೂರ ಮುಂಡರಗಿ ಗುಂಡಗುರತಿ ।
ದೇವತಕಲ್ಲಾ ಕಲ್ಲಯಲ್ಲ ಗುರತಿ
ರಂಗನಪ್ಯಾಟಿ ರುಕುಂಪ್ಯಾಟಿ ಹೊಸಪ್ಯಾಟಿ
ದಾಟಿ ಹೋದ ಟಿಕೀಟ್ಟಾಲ್ದೆ ಷುಕಟ ಗಾಡಿಹತ್ತಿ ॥ ॥ ಜೀಜೀ ॥

ಇಳು ಚೆಕ್ಕಿಂಗಾರ ಚಕ್ಕ ಮಾಡಿ ಸಿಕ್ಕಂಗ ಮಚ್ಚೀಲೇ ಬಡದಾರಿ
ಇವಗ ಮೆತ್ತಗಾಗಿ ಹೋಯಿತೊ ಮತ್ತ
ಮುತ್ತುರ ಕಿತ್ತೂ ಮುಗ್ತುರ ಮರ್ರೂರ ದಾಟಿ
ಸಿಂಧುರ ನಂದೂರ ದಂದರಗಿ ದೇವಣಗಾಂವ
ಸುಂದರಿ ಅಲ್ಲಿ ಸಿಗಲಿಲ್ಲಾ ಬಂದ್ರಾಡಕ ಬಂದಾ
ಉಪರಾಟಿ ಬೂರೆಗಾಂವ ಸೂರೆಗಾಂವ ಸಿಗ್ಗಾಂವಾ
ಮಾಗಾಂವಾ ಮೀರಾ ಸಾಹೇಬನ ಪಾದಕ ಬಿದ್ದಾ ಗಟ್ಟಿ ॥ ಜೀಜೀ ॥

ಮೀರಾಸಬನ ಮುಂದ ಅಳತಾನ ಗೆಳತಿ ಸುದ್ದಿ ಕೇಳತಾನ
ಮೀರಾಸಾಬ ಹೇಳತಾನ ಹೆಂತಾ ಮೂರ್ಖ ಮುಡದಾರ ನೀನು ।
ಮಡದಿನ ಬಿಟ್ಟ ಕಡಿಬಾರ್‍ದೊ ಆಟ್ಟಿ ।
ರಾವಣ ಸತ್ತಾ ಭಸ್ಮಾಗಿ ಸೀತಾಗಾಗಿ ಕೀಚಕ ಮಡದಾ ದ್ರೌಪದಿಗಿ ।
ಭಸ್ಮಾಸರು ಭಸ್ಮಾಗಿ ಪರಸ್ತ್ರೀ ಪಾಪದ ಮಟ್ಟಿ ।
ಸತಿಬಿಟ್ಟ ತಿರಗಿದರ ಮತಿಗೆಟ್ಟು ಮರಗಿದರ
ಮರೆಶ್ಯಾರ ಹೋಗೋ ನಿನಗ ಮುಚ್ಚಿಕಟ್ಟಿ ॥ ॥ ಜೀಜೀ ॥

ಮಾರಿ ಮಾರಿ ಉಗಳಿ ಮಾಗಾಂವ್ರೂ ಬಿಡಸಿ ಓಡಿಸಿದಾನೊ
ಮಾಡಸ ನನ್ನ ಹಾಂಟ್ಯಾ ಹೋಯಿತೊ ಮಡಸನಾಳದಾಟಿ ಅತಾಲಟ್ಟಿ।
ಬಿಜ್ಜರಗಿ ಬಾಬಾನಗರ ಖತಿಜಾಪುರ ಬಿಜಾಪುರ ಸುಳ್ಳೆ ಹೋಯಿತೋ
ಗುಡಿ ಸುಟ್ಟ ಹಟ್ಟಿ ಮುದ್ದರಕಿ ಮದ್ಯಾಳ ಮುದ್ದೇಬಿಹಾಳ ಇದ್ದಲ್ಲಿಗಿ।
ಬುದ್ನಿ ಬಿಟ್ಟು ಬಂದ ಬಳಬಟ್ಟೆ॥ ॥ ಜೀಜೀ ॥

ಏರ ಕೌಡಿ ಮಟ್ಟಿ ಕಡ್ಲಿ ಮಟ್ಟಿ ಆಲಮಟ್ಟಿ ಆಟಗಟ್ಟಿ
ಅಡ್ಡ ಬಿದ್ದ ದೇವಿ ಚರಣೀಲಿ
ತಾಯಿ ಉದ್ದಾರ ಮಾಡು ಅಂತಕಕರಣಣೀಲಿ ।
ಗೆಳತಿ ಕೂಡಿಸಿ ಉಳಿಸೆನ್ನ ಪ್ರಾಣೀಲಿ ॥

ಕೂಡಪಲ್ಲ ಅಂದ ಚಂದ ॥ ॥ ಜೀಜೀ ಚೌಕ ೩ ॥

ಕೊಡಗನೂರ ಕೊಡಗಾನೂರ ಪಡಗಾನೂರ ಪಡೆಕನೂರ ।
ಪ್ಯಾಟಿ ತಿರಗಿದಾನೋ ತೌಳಿಕೋಟಿ ।
ಮುರಡಿ ಮುರಗಾನೂರಾ ನೋಡಿ ಹುಲಕೋಟಿ ।
ಉಡಗಿ ಮಾಡಗಿ ಮಾಡಬಾಳ ಬೌಂದಕೋಟಿ ।
ಗುಡುಲಾಲನ ಕೇಳಿದರ ಗುದ್ದಿ ನಾಯಿಂಗ ಗುದ್ಧರಂದಾ
ಗದಮೀಸಿಕೊಂಡು ದಾಟಿತೋ ದದಾಮಟ್ಟಿ॥ ॥ ಜೀಜೀ ॥

ಹದ್ನೂರ ಮುದ್ನೂರ ಬಿದ್ನೂರ ಬುದನೂರಾ ।
ಬೆಳ್ಳುರ ಬಳ್ಳಾರಿ ಬೂರಟೀ ತಾಂಡುರ ಸೊಂಡೂರ

ಚುಂಡಿದಾ ಚುಟೀ ರಾಣಿ ಬಿನ್ನೂರ ರಬಕವಿ ಬನಹಟ್ಟಿ
ಖದರಖಂಡಿ ಮುಚಕಂಡಿ ಲಕ್ಕುಂಡಿ ತಿಕ್ಕುಂಡಿ
ಜಮಖಂಡಿ ಜಡರಾಮಾ ಕುಂಡ ॥ ॥ ಜೀಜೀ ॥

ಬಂಡೊಳ್ಳಿ ಬಂಡ್ಯಾಪ್ಪನಹಳ್ಳಿ ಮಾಂಡಹಳ್ಳಿ ಗುಂಡಹಳ್ಳಿ
ಬೆಂಡಿಗೇರಿ ಬಂಡಾರಿಕೋಟಿ ಹುನ್ನೂರ ಶಿವನೂರ
ಸಂತಿ ಸಾರಹಟ್ಟಿ ।
ಬಬಲಾದಿ ಒಬಲೇಶ್ವರ ಏಬರಟ್ಟೀ ಸಾರವಾಡ
ಮುಳವಾಡ ತಳೇವಾಡ ನಾಗೋಡ ಬಾಗೇವಾಡಿ
ನೋಡಿ ಬಸುನಹಳ್ಳಿ॥ ॥ ಜೀಜೀ ॥

ಇಳು ಸಂಕನಾಳ ಹುಣಚ್ಯಾಳ ಕರಭಂಟನಾಳ ಕಡಕೋಳ
ಮುಳ್ನಾಳ ನೆಗಿನಾಳ ನಾಗಳನೊಡಿ ಕೊಂಡಗುಳಿ
ಜಾಯವಾಡಗಿ ಸಲ್ಲೂಡಗಿ ಸಾಲೋಡಗಿ ಬೈರೋಡಗಿ
ಐರೊಡಗಿ ಬಿಟ್ಟು ಬಂದು ಬಾಡವಾಳ ಮುಂದ
ಬೊಮ್ಮನಹಳ್ಳಿ ಸಾಸನೂರ ಚಬನೂರ
ತಮದುಡ್ಡಿ ತುಂಬಗಿ ಬೀಬಿ ಇಂಗಳಗಿ
ಬಂದಾ ಮರಳಿ ॥ ॥ ಜೀಜೀ ॥

ಮಲ್ಲ ಹಸನ ಮಚ್ಚಿಲೆ ಬಡದು ಉಚ್ಚಿಲೆ
ಬಾಯಿ ತೊಳಶ್ಯಾರವಗ ಮೆಚ್ಚಿಗಿಡು ಮಡದಿ
ಯೋಗ ಹಚ್ಚಹೋಗೊ ಮನಿಕಡಿಗಿ
ಹೆಚ್ಚಿಗಿಹೇಳುದಿಲ್ಲ ನೀನ ಹೊರಳಿ ಮಲ್ಲ ಹಸನನ ಮಾತಮೀರಿ
ಮತ್ತ ತಿರುಗುತ್ತ ಹೊಯ್ತ ಕತ್ತಿ ಕೋತಿ ಹಾಯಿತೊ
ಮುತ್ತಗಿ ಮುಂದ ಮನಗೂಳಿ ಹತ್ತರಕಾಳ
ನಂದ್ಯಾಳ ಯರನಾಳ ದೆಗಿನಾಳ ತುಂಬಾಳಿ ತಿರಗಿ
ಒಂದಾ ತಾಂಬಾ ಮಸಳಿ ॥ ॥ ಜೀಜೀ ॥

ಬಸನಾಳ ಬಿಸನಾಳ ಮಸಿಬಿನಾಳ ರಬಿನ್ಯಾಳ ಉತ್ನಾಳ
ಸಾತ್ಯಾಳ ಶೋಧ ಮಾಡಿ ಮಾರಕಪನಹಳ್ಳಿ ।
ಕೋರವಾಗ ಯಾಳವಾರ ದಿಂಡವಾರ ಇಂಗಳೇಶ್ವರ
ಮಣೂರ ಡೋಣೂರ ದೇವರ ಹಿಪ್ಪರಗಿ ಕನ್ನೊಳ್ಳಿ ।
ಕುಕನೂರ ಕೊಗಟನೂರ ಭಂಟನೂರ ಬಳಗಾನೂರ
ಆಲಮೇಲ ಮದರಿ ಕೋರಳ್ಳಿ ॥ ॥ ಜೀಜೀ ॥

ಏರು ಸಿಂದಗಿ ಸಂತ್ಯಾಳ ಮಂದ ಮತಿ ಮಂದಿಗೊದರಿ ಕೇಳತಿತ್ತೊ ।
ಹಂದಿಹಂಗ ತಿರಗತಿತ್ತೊ ಸಂದಿಗೊಂದಿ ಓಣೋಣಿಗಿ ।

ಮೀನ ಮಿಡಿಕಿದಂಗ ಬಿದ್ದು ಘಾಣಿಲಿ
ಸೊರಗಿ ಸಣ್ಣಾಯಿತು ಶರೀರ ಕ್ಷೀಣಿಲಿ ।
ಕೂಡಪಲ್ಲ ಅಂದ ಚಂದದ ಆನಂದಿ ಮುಂದ ಹಾಯ್ದು ಹೋದರ
ಸುಗಂಧವಾಸ ಎಣ್ಣೀಲಿ ॥ ॥ ಜೀಜೀ ಚೌಕ ೪ ॥

ಜ್ಯಾಲಗೇರಿ ಗ್ವಾಲಗೇರಿ ಗುಂಡಲಗೇರಿ ನೀಲಗೇರಿ ಕಲಕೇರಿ ।
ಬಿಲಕೇರಿ ಕಲ್ಲಿಕೇರಿ ಜಿಲ್ಲಾ ಕಾರಾವಾರಾ ।
ಹುಕ್ಕೇರಿ ಕಕ್ಕೇರಿ ಅದೊಲ ಗಂವಾರಾ ಅಗ್ಗಣಿ ಅರಕೇರಿ
ಆಸ್ಕಿ ಅಂಬಳ್ನೂರ । ಕಾಮನಕೇರಿ ಕಮಕೇರಿ ಮನ್ನಿಕೇರಿ
ಅಣ್ಣೀಗೇರಿ ಬೆಣ್ಣೆ ಹಳ್ಳ ಮುಂದ ಯಮನೂರಾ ॥ ॥ ಜೀಜೀ ॥

ನವಲಗುಂದ ನರಗುಂದ ಹುನಗುಂದ ಹುಲಕುಂದ
ಮುಳಗುಂದ ಏಳಕುಂದಿ ಕಂದಗಲ್ಲ ಖಾನಾಪುರಾ ।
ಕಗಲಗೊಂಬ ಕುಂದರಗಿ ನಂದೇಶ್ವರ ।
ವಾಂದಲಿ ವಂದಾಲ ಮಂದೊಲಿ ಮಾವುನೂರಾ ।
ಕೆಂಬಾವಿ ಕೆರಬಾಂವಿ ಬಿಳೆಬಾಂವಿ ಬಿಂಜಲಬಾಂವಿ
ಬೆಕಿನಾಳ ಬೀಳಗಿ ಬಗಲೂರಾ ॥ ॥ ಜೀಜೀ ॥

ಚೆಮನಾಳ ಸೋಮನಾಳ ದೇನ್ಯಾಳ ಬೆನ್ನಾಳ
ಕನಾಳ ಕಾಣಕಾಲ ಆಲಕೊಪ್ಪರಾ
ಇಟಗಿ ಹುಟಗಿ ಕುಷ್ಟಗಿ ಕಾಮನೂರ ।
ಹಳ್ಳೂರ ಬೇಂವೂರ ಮಾಳ್ನೂರ ತೊಳ್ನೂರ ಮಳ್ಳಿ
ಕುಳಗೇರಿ ಕೋಲೂರಾ ॥ ॥ ಜೀಜೀ ॥

ಇಳು ಮುನ್ನೊಳ್ಳಿ ಮನ್ನಳ್ಳಿ ಹುನಹಳ್ಳಿ ಹೊನ್ನಳ್ಳಿ ।
ತೆನ್ನಳ್ಳಿ ಸಣ್ಣಳ್ಳಿ ನಡಗಡ್ಡಿ ನಿಂಗಾಪುರ ।
ಶಿರಸಂಗಿ ಗರಸಂಗಿ ಗೊಳಸಂಗಿ ಆಸಂಗಿ
ಯಳಸಂಗಿ ಲಾಳಸಂಗಿ ಸೌಳಸಂಗ ಲವುಗಿಲಾ
ತುರಾ । ಆಲ್ಯಾಳ ಜ್ಯಾಲ್ಯಾಳ ಜಾಳಹಳ್ಳಿ
ಜೆವುಳಗೇರಿ ಝುಳಕಿ ಬಳ್ಳೊಳ್ಳಿ ಬಿಳೂರಾ ॥ ॥ ಜೀಜೀ ॥

ಆನಂದಪುರದೊಳ ಸುಂದ ಆನಂದಿ ದ್ವಾರದೊಳು
ಮುಂದ ಬಂದು ವಂದನೆ ಮಾಡಿ
ಒಂದೇ ಸವನೆ ಸುರಸಿ ಕಣ್ಣೀರಾ
ನಿನ್ನ ರೂಪಕ್ಕಾಗಿ ನಾನು ಛಪ್ಪನ್ನ ದೇಶ ತಿರುಗಿದೆನು
ಒಪ್ಪತ್ತ ಸಹಿತ ಉಂಡಿಲ್ಲ ನಾನು
ಆಪತ್ತ ಸೋಸಿ ಸತ್ತೇನು ಒಂದಾಗೊ ಇಂದ ಸುಂದರಿ ।

ಬಾಯಿ ತೆರದು ಬಾಲಿ ಆಂವಗ ಬಲ್ಲಾಂಗ ಬಡದಾಳು
ಮಡದಿ ಕೂಡಾ ಮಾಡೋ ಸಂಸಾರಾ ॥ ॥ ಜೀಜೀ ॥

ಬಿಟ್ಟ ಇರಲಾರೆನಂತ ಘಟ್ಟಿ ಗಂಟ ಬಿದ್ದಾನ
ಕರಸಿ ಬಿಟ್ಲೊ ಫೌಜದಾರನ ಮಾಡಸ್ಯಾಳ ಮರ್ದನಾ ।
ಬಂದು ಹಿಡದು ಒಯ್ದೊರೊ ಪೋಲಿಸರಾ ।
ಬಂದಿ ಖಾನ್ಯಾಗ ಬಿದ್ದ ಬಾಡ್ಯಾ ಮಂದಿಕೈಲೆ
ಬಿಡಿಸಿಗೊಂಡ ಎದಿ ವಡದು ಅಲ್ಲೆ ಮಡಿತೊ
ಮರ್ಯಾದಿ ಇಲ್ಲ ಮುಡದಾರಾ ।
ಹೆಣ್ಣಿಗಾಗಿ ಕಣ್ಣಿಟ್ಟು ಸುಣ್ಣದ ಸುಟ್ಟ ಸತ್ರು ಗೊತ್ತಿಲ್ದೆ
ಗಂಡ ಹಾಡವರಾ ॥ ॥ ಜೀಜೀ ॥

ಏರು ಇಂಗಳೇಶ್ವರ ಶೃಂಗಾರ ಶಿಖರಾ ಸಿಕಂದರ ಬಾದಶ್ಯಾ
ಬಂಗಾರ ಊರಾ ಭೃಂಗ ಲಾಲಸಾ ಕವಿಗಾರಾ
ಹಿಂಗ ಹೇಳಿ ರಂಗಲಾವುಲಿ ।
ನಿಃಸಂಗ ಇರತಾಣಿ । ಫಲಾಪಡಿಬೇಕ
ಪುಣ್ಯದ ನಾಣಿಲಿ ॥

ಕೂಡಪಲ್ಲ ಅಂದ ಚಂದದಿ ಆನಂದ ಮುಂದ ಹಾಯ್ದು ಹೋದರ
ಸುಗಂಧವಾಸ ಎಣ್ಣೀಲಿ ॥ ॥ ಜೀಜೀ ಚೌಕ ೫ ॥

ಚಂದ್ರಮುಖಿ

ಇಂದ್ರ ಲೋಕದಿಂದ ನಾರಿ ಇಳದ ಬಂದಾಳ ಚಂದ್ರಮುಖಿ
ಏನ ಹೇಳ್ಲಿ ಸುರ್ತ ।
ನನ ಮನಸಿಗಿ ಆಯಿತು ವಿಪರೀತಾ ॥
ಮೂರ ಲೋಕದಾಗ ನಾರಿ ಮೀರಿದಂತಾ ।
ಸ್ತ್ರೀಯಳು ಇದ್ದಳು ಊರ ಮಂದಿ ಸುಮನೆ ಸತ್ರ ಯಾರತ್ತ ॥ ಜೀಜೀ ॥
ಗೌಲ ಪ್ಯಾಟೆವಳಗ ರಂಬಾ ಡೌಲ ಮಾಡುತ ಹೊರಟಾಳ
ಕೋಲಮಿಂಚ ಹೊಡದಂಗ ಆ ಹೆಜ್ಜೆಜ್ಜಿಗಿ ಝುಗಿಝುಗಿಸುತಾ ।
ಪಸ್ತ ವಡವಿ ಮಸ್ತ ಇಟ್ಟಾಳ ವಿಸ್ತಾರೇನ
ರಸ್ತಾ ಹಿಡದ ನಲಗ ಮಾಡುತಾ ॥ ॥ ಜೀಜೀ ॥

ಕೋಲಕಾರ ಹುಡುಗ ಬಾಳ ಪ್ಯಾಲಿ ಸೂಳೆಗಂಡ ಆತು
ಮಾಲ ಕೇಳಿದಾನ ಬಾಲಿ ಬಾಯೆಂದು ಕಾಲ ಹಿಡದ ಕೂತಾ ।
ಬಾಜಾರದಾಗ ಬಾಗವಾನರ ಹುಡಗ ಬಾಳಿ ಅಡಿ ಹಾಳ ಮಾಡಿತೊ
ಬಾಲಿ ಬರಲೆಂತ ಓಸು ಹಾರಿಸಿತೊ ॥ ॥ ಜೀಜೀ ॥

ಜೋಗೇರ ಹುಡುಗ ರೂಪ ನೊಡಿ ಜಿಗಜಿಗದ ಬೀಳತಿತ್ತೊ ।
ಮಜಾ ನೋಡಿ ಜ್ಯಾತ್ರಿ ನೆರದೀತೊ ।
ಆ ಜ್ಯಾತಗಾರ ಹುಡುಗಾ ಓಡಿ ಬಂದಿತೊ
ಚಿಲ್ಲರ ಸೂಳೆಗಂಡ ನೀನು ಸುಳ್ಳೆ ಹಾರ್‍ಯ್ಯಾರಿ ಬೀಳತಿ ಅಂತ
ನಾರಿ ಮುಂದ ಲಾಗಾ ಹೊಡಿತಿತೊ ॥ ॥ ಜೀಜೀ ॥

ಇಳು ಆ ಮೋಡಕಾರರ ಹುಡುಗಾ ನೋಡಿ ಆಕಿ ರೂಪಾ ।
ಬಿಟ್ಟ ನಡದಿದ್ದಾ ಬುಟ್ಯ್ಯಾನ ಸರಪಾ ॥ ॥ ಜೀಜೀ ॥
ಕುಂಚಿ ಕೊರವೇರ ಪಾರಾ ನಿಂತ ಚಿಂತಿ ಮಾಡತಿತ್ತಪ್ಪಾ ॥

ಬಳಗಾರ ಬಾಬ್ಯಾ ಅಂತಾನ ಬಳಿ ತಂದೀನಿ ಅಪರೂಪಾ ।
ಆ ಗೊಂದಲಗ್ಯಾರ ಸುಳ್ಳೆ ತನ್ನ ಸಂಬಾಳ ಹರಕೋತಪ್ಪಾ ॥ ಜೀಜೀ ॥

ಏರು ತಲಿಕೆಟ್ಟು ಮಾಲಗಾರ ಹುಡುಗ ವಿಳ್ಳೇದೆಲಿ ಹಾರಸ್ತಿತ್ತೊ ।
ಬುಕಿಟಗಾರ ಬೆನ್ನ ಹತ್ತಿತ್ತೊ ಪುಕ್ಕಟ ಗುಲಾಲ ಬಕಿಟ ಹಾರಸ್ತಿತೊ ॥
(ಮುರು) ॥ ಜೀಜೀ ॥

ನರ್ತನ ಮಾಡುತ ನಾರಿ ನಾಟಿಕಾರ ಓಣಿ ಹೊಕ್ಕಳೊ ।
ನಾಯಿದಾ ಕಷ್ಟಾ ಮಾಡತಿದ್ದಾ ಕಟ್ಟಿ ಮ್ಯಾಲಿ ।
ಮೂಗನ್ಯಾನ ಕೂದಲಾ ತಗಿತಿದ್ದಾ ಸ್ವಚ್ಛ ಮಾಡಿ ತಲಿ ।
ಅಚ್ಯುತ ರೂಪನೋಡಿ ಹುಚ್ಚ ಹಿಡಿತೊ ನಾಯಿದರವಂಗಾ ।
ಮೂಗ ಹಿಡಕೊಂಡು ಹೊಂಟಾ ಚಿಮಟಿಗೀಲಿ ॥ ॥ ಜೀಜೀ ॥

ಬ್ಯಾಡರ ಹುಡುಗ ಬಿಡ ಬ್ಯಾಡಂತಾ ಒಂದೇ ಸಮನಾ ಬಡಕೋತಿತ್ತು।
ದಿಡಗ ಓಡಿ ಬಂದಾ ರಸ್ತೀಲಿ ।
ಆ ತಳವಾರ ಹುಡಗಂದೆ ನಡಳಲಿ ।
ಬಾರ ಮಾಡಿ ಬರುವಾಗ ಬಡಗ್ಯಾ ಕಟಗಿ ಕೆತ್ತತಿದ್ದಾ
ನೋಡಿ ಕಾಲ ಕಡಕೊಂಡಾ ಬಾಚೀಲಿ ॥ ॥ ಜೀಜೀ ॥

ಮುತ್ತ ಹಚ್ಚಿ ನತ್ತ ಮಾಡುತ ಕೂತಿದ್ದ ಪತ್ತಾರಾ ।
ಚಿತ್ರಾ ತಗದು ಏಕ ಚಿತ್ತೀಲಿ। ಆ ಚಂದ್ರನಂತ ಸುಬದ್ರಿ ಬಂದಳೋ ಅಲ್ಲಿ
ರಂಬಾನ ಜಂಬಾನೋಡಿ ಅಂವ ರುಂಬಾಲ ಹಗ್ಗೆಯದು ಅಗಟ್ಟಿ
ಹೊತ್ತಗೊಂಡ ಯತಾ ತೆಲಿಮೇಲಿ ॥ ॥ ಜೀಜೀ ॥

ಇಳು ಮೈಯೆಲ್ಲಾ ಬೆಂಕಿ ಬಿದ್ದು ಸುಟ್ಟರ ಇದ್ದಿದ್ದಿಲ್ಲಾ ಕಬರಾ ।
ನೆತ್ತs ತಗೋ ಅಂತಾನ ಸುಂದರಾ ॥ ॥ ಜೀಜೀ ॥

ಅಲ್ಲಿ ಗಡಿಗಿ ಮಾಡುತ ಕೂತಿದ್ದಾನೊ ಕುಂಬಾರಾ
ಎದುರಿಗಿ ಬರುವಾಗ ಎಡಿವಿ ತಿಗರ್ಯಾಗೊ ಬಿತ್ತೊ ಪಾಮಾರಾ ॥
॥ ಜೀಜೀ ॥

ಆ ಸುಭದ್ರನಂತಾ ತದ್ರೂಪನೋಡಿ ಕಂಬಾರಾ ।
ಅಂಗಿ ತೋಳಂತ ತಿದಿಯೊಳಗ ಕೈ ಸೇರಿಸಿತ್ತೊ ಪಾಮಾರಾ ॥
॥ ಜೀಜೀ ॥

ಏರು ಮೋಸಗಾರ ಮಾರುತಿ ಮೇಲಮಾಡೇಕ ಹತ್ತಿತೊ ।
ಮಾರಿ ನೋಡಿ ಮೇಲಿಂದ ಬಿದ್ದಿತೊ ।
ಆ ಮುತಗಾರ ಸುಳ್ಳೇ ಕಳಕೋತೊ ಜ್ಯಾತ ಮುತ್ತಾ॥ ॥ ಜೀಜೀ ॥

ಮುರು ಕುರುಬರ ಹುಡಗಾ ಗಾಬರಿಗಿ ಬಿದ್ದು ಗೌರಿ ಮುಂದ ಉರಳ್ಯಾಡತಿತ್ತೊ।
ಸಾವಿರ ಕುರಿ ಹೋಗಲಿ ಗಟ್ಟಿ ಮನಸಾ ।
ಓಡ್ಯಾಡಿ ಹಡದಿ ಹಾಸತಿದ್ದಾ ಅಗಸಾ ।
ಮುಜಾವಾರ ಹುಡಗ ತನ್ನ ಇಜಾರದ ಕಬರಿಲ್ಲಾ
ಚ್ಯಾಜ ಕೇಳಿದ ಕೆತ್ನಾ ಮಾಂಗತಿ ಪೈಸಾ ॥ ॥ ಜೀಜೀ ॥

ಜ್ಯಾಡರ ಹುಡಗ ಜಿಗದ್ಯಾಡಿ ಝುರದ ಮಡಿ ನೈತಿತ್ತೊ ।
ಜಾಣಿನ ನೋಡಿ ಜಲ್ದ ಬಂದಾ ಗಸಾ ।
ಎಲ್ಲಾ ಮೂರಾಬಟ್ಟಿ ಮಾಡಿ ನೈಯು ಕೆಲಸಾ ।
ಎಷ್ಟ ಹಣಾ ಕೊಟ್ಟರ ಈಕಿ ರಿಣಾ ಮುಟ್ಟಲಾರದಂತ
ಸಿಂಪಗೇರ ಹುಡುಗ ತಂದಾ ಕುಪ್ಪಸಾ ॥ ॥ ಜೀಜೀ ॥

ಜಿರಕೊರವೇರ ಕೂಡಿ ಅಲ್ಲಿ ಜಿದ್ದಿಗಿ ಬಿದ್ದಂಗ ಬಾರಸ್ಯಾಡತಿದ್ರು
ಒಬ್ಬ ಕೊಂಬ ತೊಟ್ಟು ಹಿರಸಾ ।
ಆ ನಾರಿ ಮುಂದ ಆಗಬೇಕಂತ ಪಾಸಾ ॥
ಮಡಪತಿ ಐಯ್ಯಾ ಊಗಳಸ್ತದಾ ।
ಮುಲ್ಲಾ ಪಾತೆ ಕೊಡತಿದ್ರು ನೋಡಿ ಲುಂಗಿ ಕಳಕೊಂಡಾ ಭಾವಾಸಾ ॥
॥ ಜೀಜೀ ॥

ಇಳುವು ಆ ಶೆಟ್ಟರ ಹುಡುಗಾ ಕಾಟಾ ಮಾಡತಿದ್ದಾ ಬೆಲ್ಲಾ ।
ತಕಡಿ ತಗೊಂಡ ನಡದಾ ಹಿಂಬಾಲಾ ॥
ಜೋಳ ಮಾಪ ಮಾಡುತ್ತ ಅಂವುಟಗ್ಯಾ ಕೂತಿದ್ದ ರಾಶಿ ಮ್ಯಾಲಾ ।
ಅದು ನೋಡಿ ಕೈಯಾನ ಸೊಲ್ಲಿಗಿ ಹಿಂಬರಕಿ ಹಿಡದಿತ್ತಲ್ಲಾ ॥ ಜೀ ॥

ಆ ಕೂಲಿಕಾರರಂತಾರ ಹಿಂಗ ಅಳೆಯುವದಲ್ಲಾ
ಅವರಿಗಿ ಹೇಳತಾನ ಈ ಜೋಳ ಇನ್ನೂ ಹಗೆ ಬಿದ್ದಿಲ್ಲಾ ॥ ಜೀಜೀ ॥

ಏರು ಕಂಚಗಾರ ಕಾಳೆ ನೋಡಿ ಸಂತೋಷ ಬಿಡತಿತ್ತು
ಚಂತ್ಯಾಕ ಬೆನ್ನ ಹತ್ತಿತೊ
ತನ್ನ ಕಂಚಿನ ಸಾಮಾನೆಲ್ಲಾ ಮರೆತು ॥
ಕೂಡಪಲ್ಲ ಮೂರಲೋಕದಾಗ ನಾರಿ ಮೀರಿದಂತಾ ಸ್ತ್ರೀಯಳಿದ್ದಳು ನೂರ
ಮಂದಿ ಸುಮ್ಮನೆ ಸತ್ತ ವೆರತಾ ॥ ॥ ಜೀಜೀ ಚೌಕ ೨ ॥

ಕಟಬರ ಪಾರ ನೋಡಿ ಕೈಹಿಡಿದು ಕೇಳತಿತ್ತೊ ।
ಹಣಚಿ ಬಟ್ಟ ಹಾಕತೀನಿ ನಿನ್ನ ಕೈಗಿ ।
ದುಷ್ಟಾ ಸರಿ ಅಂತಾ ವದ್ದಾಳೊ ಬಾಯಿಗಿ
ಅವನಿಗಿ ವದ್ದಂಗ ನನಗೂ ಜರಾ ವದಿ ಅಂತಜ್ಯಾಡರ ಹುಡುಗಾ
ಬಂತು ಎದುರಿಗಿ ॥ ॥ ಜೀಜೀ ॥

ಪಿಂಜಾರ ಪಾರ ನೋಡಿ ನೂತಿದ್ದೆಲ್ಲಾ ಹಂಜಿ ಮಾಡಿ
ಅರಳಿ ಹಿಂಜಿ ಹಾಕಿ ಗಾದೀಗಿ ।
ಆಕಿ ಬೆನ್ನಿಂದ ಹೂರನ ಹಾಕೊಂಡ ಹೆಗಲೀಗಿ ।
ಗಾಣಿಗೇರ ಹುಡುಗ ನೋಡಿ ಎಣ್ಣಿಯೆಲ್ಲಾ ಚೆಲ್ಲಿ ।
ಸೊನ್ನಹಾರಿ ಹುಡುಕತಿತ್ತೊ ಹೋಗಿ ॥ ॥ ಜೀಜೀ ॥

ಮಾರೋಡ್ಯಾರ ಹುಡುಗ ಉಡಾಣಿ ಲಾವಣಿ ನೋಡಿ
ಮಾದೆರ ಹುಡುಗ ಬಿದ್ದ ತೆಕ್ಕೀಗಿ ।
ಅಂವ ಮೊದಲೆ ಮರ್ತ ತಂದಿದ್ದಾ ರೆಂಪಿಗಿ ।
ತೆಕ್ಕಿವಲಕ್ಕಿ ಆಡುದರಾಗ ರೆಂಪಿಗಿ ಹತ್ತಿತೊ ।
ಮಾರ್ವಾಡ್ಯಾಗ ಶರೀರ ಕತ್ತರಸಿ ಹೋತೊ ಬಡಿಗಿ ॥ ॥ ಜೀಜೀ ॥

ಇಳು ಆ ವಡ್ಡರ ಪಾರಾ ಡೊಗ್ಗಿ ನೋಡತಿತ್ತು ಅವನಿಗಿ ।
ಆ ರಕ್ತ ಸಿಡಿತು ಮಾರಿಗಿ ॥ ॥ ಜೀಜೀ ॥

ಕೂನ ಮಾಡ್ಯಾನಂತ ಸರಕಾರದವರು ಹಿಡದರೊ ಅವನಿಗಿ ।
ಪುಕ್ಕಟ ಹೋಯಿತೊ ಜೈಲಿಗಿ ॥ ॥ ಜೀಜೀ ॥

ಆ ಮಾಯಾಕಾರ್ತಿ ಹೋಗಿ ಬಿಟ್ಟಳೊ ಮಾಯಾಗಿ ।
ವೋಸು ನಿಂತ ಅಳತಿದ್ದು ಗಾಬರ್‍ಯಾಗಿ ॥ ॥ ಜೀಜೀ ॥

ಸುತ್ತ ದೇಶದೊಳು ಇಂಗಳೇಶ್ವರ ಊರ ಹೆಸರಾಗಿ ।
ಶಿರಾ ಹಚ್ಚುವೆ ಸತ್ಯುಳ್ಳ ಗುರುವಿಗಿ ॥ ॥ ಜೀಜೀ ॥

ಏರು ಕವಿಲಾಲಸಾ ಬಂದು ಹೆಂಗ ಸಭೆಯಲ್ಲಿ ಸಾರಿದಾನು
ಸುರದೆಂಗ ಆಯಿತು ಅಮೃತ ।

ಕೂಡಪಲ್ಲ ನಾನಾ ಗಂಡಸರು ಬ್ಯಾಸೊತ್ತಾ । ॥ (ಮುರು) ಜೀಜೀ ಚೌಕ ೩ ॥

ಅಕ್ಬರ ಬಾದಶಾ

ಅರುವ ಎಂಬಂಥ ಅಕಬರ ಬಾದಶಾ ಅರಸ ಇದ್ದ ಈ ದೇಹದಾಗ ।
ಭಕ್ತಿ ಎಂಬು ಬೀರಬಲ್ಲಾ ಪುಣ್ಯೆ ಎಂಬು ಪ್ರಧಾನಿ
ಕೆಲಸ ಮಾಡತಿದ್ದ ಕೇಳ್ರಿ ಅವನ ಕೈಯಾಗ ॥ ॥ ಜೀಜೀ ॥

ಒಂದೆ ಮತದವರಂತ ಒಂದೇ ಕುಲದವರಂತಾ ಒಂದೇ ಇದ್ರ ಆ ಊರಾಗ ॥
ನಾ ಎಂಬುವಂಥಾ ನಾಯಿದರ ಮಲ್ಲಪ್ಪಾ
ಬೀರಬಲ್ಲನ ಬಿಡಸುದಕಾಗಿ । ಅಂವಾ ಒಬ್ಬನೆ ಇದ್ದ ಆ ಊರಾಗ ॥
ಬೀಕರಲೆ ಎಲ್ಲಾರು ಹೋಗಿ ।
ಹೇಳ್ಯಾರ ಅಕಬರ ಬಾದಶ್ಯಾಗ ।
ಮನಿ ಅಳಿಯಾ ಹಾನ ಅದೇ ಆವರಿಗಿ ಕೊಡ್ರಿ
ಮರುವ ಎಂಬು ಮಹಮ್ಮದ ಈಮಾಮಶ್ಯಾಗ ॥ ॥ ಜೀಜೀ ॥

ಇಳು ಆಗ ಅರಸ ಅಂದ ಅವರಿಗಿ ಇದ ಎಲ್ಲಾಽ ಏನ ಗೊತ್ತ ಇವರೀಗಿಽಽ।
ಆಗ ಅಕಬರ ಬಾದಾಶಾ ಕರಸಿಕೊಂಡ ಇಬ್ಬರಿಗಿ ।
ಹಿಡಿ ಹಿಡಿರೆಂತ ಹಿಡಿ ಬೀಜಾ ಕೊಟ್ಟ ಬಿಟ್ಟ ಇಬ್ಬರಿಗಿ ॥ ಜೀಜೀ ॥

ಏರು ಮರುವ ಎಂಬುವಂಥಾ ಮೊಹಮ್ಮದ ಇಮಾಮಶಾ ಮುಚ್ಚಿಟ್ಟ
ಆ ಹಿಡಿ ಬೀಜ ವೈದಾಗ ।

ಕೂಡಪಲ್ಲ ಕೆಲಸ ಮಾಡತಿದ್ದ ಕೇಳ್ರಿ ಅವನ ಕೈಯಾಗ ॥ ॥ ಜೀಜೀ ॥ ಚೌಕ ೧ ॥

ಭಕ್ತಿಯೆಂಬು ಬೀರಬಲ್ಲಾ ಕೀರ್ತಿಯೆಂಬು ಕಡ್ಡಿ ಬೆಳದಾ
ನೋಡಿ ಅರಸಗ ತಪ್ಪಿತೊ ದಿಕ್ಕಾ ।
ಸಪ್ತ ವ್ಯಸನ ಯೆಂಬ ಏಳ ಮಂದಿ ಮನಿಯರ್ಡ ಮಾಡಿ
ಅಂವಗ ಹೇಳ್ಯಾರ್ರೊ ಲೆಖ್ಖಾ॥ ॥ ಜೀಜೀ ॥

ಮ್ಯಾಲ ಏಳಲೋಕ ತೆಳಗ ಏಳಲೋಕ
ತೆಪ್ಪಿ ಹಚ್ಚುದು ಕಂಡಾನ ಲೆಕ್ಕಾ ।
ಇಂವಗ ಬಿಡಿಸಿ ಈ ಕೆಲಸಾ ಕೊಟ್ಟೈತಿ
ಹಿಂತಾ ಪ್ರಧಾನಿ ನನಗೆ ಹೆಂಗ ಸಿಕ್ಕಾ॥ ॥ ಜೀಜೀ ॥

ಮರು ಎಂಬುವಂತಾ ಮಹಮ್ಮದ ಇಮಾಮಶಾ
ಮನಿಯಾಗ ಕುತ್ತ ಮಾಡ್ತಾನ ದುಃಖಾ ।
ಅಳ್ಳಿಕ ಹತ್ಯಾನ ಅಂಬುದು ಸುದ್ದಿ ಕೇಳಿ
ಅರುವೆಂಬು ಅಕಬರಬಾದಶಾ ನಕ್ಕಾ ॥ ॥ ಜೀಜೀ ॥

ಇಳುವು ಕುಲದವರೆಲ್ಲಾ ಕೊಲಬೇಕಂತಾರ ಬೀರಬಲ್ಲಗ ।
ಹೋಗಿ ಕೇಳತಾರ ನಾಯ್ದಿರ ಮಲ್ಲಗ॥ ॥ ಜೀಜೀ ॥

ಹೆಂಗ ಮಾಡಬೇಕು ನಾವು ಹಂಚಿಕಿ ಹೇಳೋ ಇದಕ ಹ್ಯಾಂಗ ।
ಆ ಮಲ್ಲ ಹೇಳತಾನ ಹಿಂಗ ॥ ॥ ಜೀಜೀ ॥

ನಾಳೆ ನಾನೇ ಹೋಗಿ ಹೇಳತೀನಿ ಅರಸಗ ।
ಕಟ್ಟಕ ಏನಗ ಕರಸಾಗ ॥ ॥ ಜೀಜೀ ॥

ಏರು ಬರಲಾರದ ದಾರಿಗಿ ಕಳಿಸಿ ಬಿಡುವೆನು
ಕೂಡಪಲ್ಲ ಬಂದವರಿಗಿ ಹೋಗಂದಾನ ನಾಯ್ದಿಗ ॥ ॥ ಜೀಜೀ ಚೌಕ ೨ ॥

ನಾ ಎಂಬ ಹೆಂತಾ ನಾಯ್ದಿರ ಮಲ್ಲಾ ಹೇಳಿದ ಕಟ್ಟಕ ಹೋದಾಗ ।
ಕಟ್ಟ ಮುಗುವವರಿಗೆ ಬಾದಶಾ ಕೂತ ಕೇಳಿದಾ ।
ತಿಳಿಯಲಿಲ್ಲ ಮುಂದಿನ ಬೇದ ಆಗ ॥ ॥ ಜೀಜೀ ॥

ಸ್ವರ್ಗಕ ಹೋಗಿ ಬಂದಿನೆಂದು ಸುಳ್ಳ ಹೇಳಿದ
ಖರೆ ಎಂದು ಬಾದಶ್ಯಾ ತಿಳಿದಾನ ಆಗ ।
ಹಿರಿ ಹಿರಿಯರಿಗೆಲ್ಲಾ ಹೋಗಿ ಬರತೀನೆಂದು ಹೇಳಿ
ಬಂದಿನೆಂದು ಸ್ವರ್ಗಲೋಕದೊಳಗ ॥ ॥ ಜೀಜೀ ॥

ನಮ್ಮ ಹಿರಿಯರೆಲ್ಲಾ ನಿನಗೇನು ಹೇಳ್ಯಾರೆಂದು
ಬಾದಶ್ಯಾ ಕೇಳತಾನ ನಾಯ್ದಿರ ಮಲ್ಲಗ ।
ಬಾಳ ಜರೂರ ಬಂದ ಹೋಗಂದಾರೆಂದು
ನಿಮ್ಮ ಬಲ್ಲಿ ಇರುವ ಭಕ್ತಿ ಬೀರಬಲ್ಲಗ ॥ ॥ ಜೀಜೀ ॥

ಸ್ವರ್ಗಕ ಹೋಗುವಂಥಾ ಸೀದಾ ಹಾದಿ ತೋರಸರೆಂದಾ ॥
ಕಟಿಗೆ ಒಟ್ಟಸರೆಂದ ಚೌಕಿ ಮಳದಾಗ ।
ಬೆಂಕಿ ಹಚ್ಚಿ ಬಿಟ್ಟ ಬಿಡರಿ ಹೊಗಿ ಗುಡಾ ಹೋಗತಾನ
ಹೊಗಿ ಸೇರಿ ಅವನ ಗಂಟಲದಾಗ ॥ ॥ ಜೀಜೀ ॥

ಇಳು ಆಗಿಂದಾಗ ಅರಸ ಕರಸಿ ಕೊಂಡ ಬೀರಬಲ್ಲಗ
ಹೋಗಂದಾನ ನಾಯಿದ್ರ ಮಲ್ಲಗ ॥ ॥ ಜೀಜೀ ॥

ಮಲ್ಲನ ಮಾತ ಕೇಳಿ ನಂಬಿ ಅರಸ ಹೇಳಿಬಿಟ್ಟ ಅಂವಗ ।
ಏನೇನು ಗೊತ್ತಿದ್ದಿದಿಲ್ಲ ಇಂವಗ ॥ ॥ ಜೀಜೀ ॥

ಭಕ್ತಿ ಎಂಬು ಬೀರಬಲ್ಲ ಹೋಗಿ ಬರತಿನಂದ ಬಾದಶ್ಯಾಗ ।
ಕುತ್ತ ನೆನಿಯುತಾನ ಈಶ್ವರಗ ॥ ॥ ಜೀಜೀ ॥

ಏರು ಯಾರು ಅರಿಯದಂತ ಅಂತರಂಗ ಗವಿ ನೆಲಮನಿ
ಮಾಡಿಕೊಂಡ ಸೂಯಿದಾಗ ॥
ಕೂಡಪಲ್ಲ ಅರುವವೆಂಬು ॥ ॥ ಜೀಜೀ ಚೌಕ ೩ ॥

ಅಂತರಂಗವೆಂಬು ಗವಿಯಲ್ಲಿ ಅಡಗಿ ಕೂತಕೊಂಡ
ಬೆಂಕಿ ಹಚ್ಚಿ ಬಿಡರೆಂದ ಆ ಮ್ಯಾಲ
ಭಕ್ತಿವೆಂಬ ಬೀರಬಲ್ಲ ಬೆಂಕಿ ಹಚ್ಚಿ ಸುಟ್ಟರೆಂದು
ಸುದ್ದಿ ಹೋಯಿತೊ ದೇಶದ ಮ್ಯಾಲ ॥ ॥ ಜೀಜೀ ॥

ಆರು ಗುಣಾ ಎಂಬುವ ಆರು ಲಕ್ಷ ರೂಪಾಯಿ ಖರ್ಚ ಮಾಡಿದ
ಆತನ ಕೈಯಮ್ಯಾಲ ।
ಶಿವ ನಾಮ ಅಂಬುವ ಸಿಪಾಯಿ ಕೈಯ್ಯಾಗ ।
ತನಗಬೇಕಾದ ತರಸಪ್ಪಾ ಮ್ಯಾಲ ॥
ಭಕ್ತಿ ಎಂಬ ಬೀರಬಲ್ಲನ ಭಯಂಕಾರ ಸುದ್ದಿ ಕೇಳಿ
ಯಮರಾಜ ಕಳಿಸಿದ ಬೆನ್ನಮ್ಯಾಲ
ಕಳಿಸಿದ ಕೊಡಾ ತುಂಬುದಾಗದಿದ್ದರ ಕಾಯಾಪುರ
ಬಿಡರೆಂದ ಇನ್ನ ಮ್ಯಾಲಾ ॥ ॥ ಜೀಜೀ ॥

ಇಳು ಭಕ್ತಿಯೆಂಬು ಬೀರಬಲ್ಲ ಬಂದ
ಸ್ವತಾ ಸ್ವರ್ಗದ ಸುದ್ದಿ ತಂದಾ ॥ ॥ ಜೀಜೀ ॥

ಬಾದಶಾ ಕೇಳತಾನ ಏನೇನ ಹೇಳ್ಯಾರ ನಿನ ಮುಂದ
ಮದಲ ಹೇಳ ನನ್ನ ಮುಂದ ॥
ಕಷ್ಟಾ ಮಾಡವರ ಇಲ್ಲ ಕಳಸರೆಂತಾ ।
ಅದೇ ಮಲ್ಲಗ ಹೇಳಿ ಬಿಡರಂತ ॥ ॥ ಜೀಜೀ ॥

ಏರ ಕರ್ಮಯೆಂಬು ಕಟ್ಟಿಗಿ ವಟ್ಟಿ ಬೋಧಾ ಎಂಬು ಬೆಂಕಿ ಹಚ್ಚಿ ।
ಸುಟ್ಟರೊ ನಾ ಎಂಬು ನಾಯ್ದಿರ ಮಲ್ಲಗ ॥ ॥ ಜೀಜೀ ॥

ಕೊಡಾ ತುಂಬುವದಕೊಂದು ಕಲ್ಪನಾ ತಗದಿದಾ ।
ಕುಂಬಳ ಬೀಜ ಊರಿದ ಆಗ ।
ಮಿಡಿ ಕಾಯಿ ಕೂಡ್ಲೆ ಕೊಡದಾಗ ಇಳಿಬಿಟ್ಟಾ
ಕಾಯಿ ಹರದ ಆ ಕೊಡಾ ತುಂಬಿದಾಗ ॥ ॥ ಜೀಜೀ ॥

ಕೊಡಾ ಕಾಯಾಪುರ ನಾವು ಬಿಟ್ಟ ಹೋಗತೀವ
ಕೊಡಾ ವಡಿಲಾರದೆ ಕಾಯಿ ತಗದ ಕೊಡತೀವ ಈಗ
ಕೊಡಾ ವಡಿಲಾರದೆ ಕಾಯಾಪುರ ತುಂಬಿತು
ಕಾಯಾಪೂರ ಆಗೇದ ಆವಾಗ ॥ ॥ ಜೀಜೀ ॥

ಇಳು ಯಮರಾಜನಿಂದ ಆಗಲಿಲ್ಲ
ಯಾವ ರಾಜ ತಾನೆ ಸೋತಾ
ಭಕ್ತಿ ಎಂಬ ಬೀರಬಲ್ಲನಿಂದ ಆತಾ ॥ ॥ ಜೀಜೀ ॥

ಅಕಬರ ಬೀರಬಲ್ಲ ಇಬ್ಬರು ಗುರುಶಿಷ್ಯನಂತೆ ಜತ್ತಾ ।
ಲಾಲಸಾಹೇಬಗ ಪಕ್ಕಾ ಗೊತ್ತಾ ॥ ॥ ಜೀಜೀ ॥

ಸಣ್ಣ ದೊಡ್ಡವರಿಗಿ ಹೇಳತೀನಿ ಕೇಳ್ರಿ ಕುತ್ತಾ ।
ಕರೆ ಆದದು ವೃತ್ತಾಂತಾ ॥ ॥ ಜೀಜೀ ॥

ಏರು ಇಂಗಳೇಶ್ವರ ಆಚೆ ತುರಾಯೆಗ ಹುಡುಗಾ ।
ಜ್ಞಾಪಿಸಿಕೊಂಡ ತನ್ನ ಒಯ್ದಾಗ ।
ಕೂಡುಪಲ್ಲ ಅರುವ ಎಂಬ ॥ ಜೀಜೀ ಚೌಕ ೪ ॥

॥ ಖ್ಯಾಲಿ ೭ ॥

ಬಾರೋ ಬಾರೋ ಬಾರೋ ಶ್ರೀಗುರುದೇವಾ
ಅಡಿ ಅಡಿಗೆ ನಿಮ್ಮ ನೆನಪಲ್ಲಿ ಇರುವಾ ।
ಮರವಿನ ಪರದಿ ಹರದಿ ಹರಿದು ನೀಡೋ ನಿನ್ನ ಅರುವಾ ॥ ಜೀಜೀ ॥

ಕೆಟ್ಟ ಮನಸು ಕನಸು ಕೆಡಸಿ ಬಿಡಿಸೆನ್ನ ಗರುವಾ ।
ಗಣಮಹಿಮೆ ತೋರಿಬಾರ್ರೈಯಾ ।
ಭವ ಮಾಡಿಸಿ ಎರುವಾ ॥ ॥ ಜೀಜೀ ॥

ನರನ ಹೋಗಿ ಹರನನಾಗಿ। ನಂಬಿ ನಿಮ್ಮ ಬೆರೆವಾ ।
ಸಂಭ್ರಮದಿ ಸಾಯುಜ್ಯ ಕೊಟ್ಟು ಸಲವಿದೊ ಸದ್ಗುರುವಾ ॥ ॥ ಜೀಜೀ ॥

ದೇಶದೊಳು ವಾಸುಳ್ಳ ಇಂಗಳೇಶ್ವರ ಪುರುವಾ ।
ಸಿಕಂದ್ರ ಬಾದಶಾ ನೆನದ ಭಕ್ತರ ಪರವಾ ॥ ॥ ಜೀಜೀ ॥

ಪಂಡಿತರ ಹೌದಂತಾರ

ಪ್ರಾರ್ಥಿಸುವೆ ಪರಮೇಶ್ಯಾ ಪ್ರಥಮಾ ।
ಪಾವನಗೊಳಿಸು ಪ್ರಸನ್ನಾಗಿ ನೇಮಾ ।
ಓಂ ಸೊಹಂ ಸ್ಮರಿಸುವೆನೊ ಮರಿಯದೆ ನಿನ್ನ ನಾಮಾ ॥ ॥ ಜೀಜೀ ೧ ॥

ವರ್ಣಿಸಲಾರೆ ಅಗಣಿತ ನಿನ್ನ ಮಹಿಮಾ ।
ಕರುಣಾ ಕರುಣಿ ಸುಖಯಾಮಾ ।
ಶರಣು ಶರಣು ಶ್ರೀ ಗುರುವೆ ಸರ್ವಶಾ ಗುರು ಚರಣಾ ಕುಸುಮಾ ॥ ಜೀ ೨ ॥

ಭವ ಹರನೇ ಪಾರು ಮಾಡು ಗುರುಯೋಮಾ ।
ವರವ ನೀಡಿ ಸುಡು ಅಹಂಕಾರ ಹೋಮಾ ।
ಆಗಮ ನಿಗಮಗಳಿಗೆ ಮಿಗಿಲಾದವನೆ ನಿಸ್ಸೀಮ ಸಂಯಮಾ ॥ ಜೀ ೩ ॥

ಇಂಗಳೇಶ್ವರ ಕಂಗೊಳಿಸುವ ಗ್ರಾಮಾ ।
ಸಿಕಂದರ ಬಾದಶ್ಯಾ ಭಕ್ತ ಜನಾ ಪ್ರೇಮಾ ।
ಭಕ್ತ ಲಾಲಸಾಬ ಬಂದು ನಿನ್ನ ಬಜಿಸಿದಾ ಜೆಯಾ ಕೊಡು ಓ ಜಗದಾತ್ಮಾ॥
॥ ಜೀಜೀ ॥

ಹಾಡಾ ಹಾಡಬೇಕು ಹಾದಿ ನಡದಂಗ ।
ಹದಗೆಡಿಸು ಹಲಕಟ್ಟ ಪದಾ ಬ್ಯಾಡಾ ।
ಸವಾಲ ಜವಾಬಗಳ ಶೋಧಿಸಿ ಹೇಳಿದರ
ಪಂಡಿತರ ಹೌದಂತಾರ ಘಂಡಾ ॥ ॥ ಜೀಜೀ ॥

ಅಕಲಗೇಡಿ ನಕಲ ನುಡಿಯುದರಿಂದ ಸಕಲರ ಹಸೆ ಆಗೂದು ಬೇಡಾ ।
ಹರಕ ಹರದಾಸಾ ಮುರಕ ಮಾಡಬ್ಯಾಡ
ಸರಕ ಹಾಕುವೆ ತರಕಿಲೆ ನೋಡಾ ॥ ॥ ಜೀಜೀ ॥

ಸೂರ್ಯನಾರಾಯಣ ಶ್ರೇಷ್ಠ ಇದ್ದಾನಾ ।
ಎತ್ತರ ಕಾಣೂರು ತಾ ಅನಜಗಡಾ ।
ಭೂಮಿ ಸೂರ್ಯಗ ಸೂತರದಾರಿ ಆದ
ಲೆಖ್ಖಾ ಮಾಡಿ ಕೊಡಬೇಕ ದೌಡಾ ॥ ॥ ಜೀಜೀ ॥

ಸೂರ್ಯ ಇರುವ ಸ್ಥಾನ ನಿನಗ ಕೇಳತೀನಿ ।
ಮರತ ಕೂತಿ ತಿಳಕೋರ ಮೂಢಾ ।
ಸೂರ್ಯನ ತಂದಿ ಹೆಸರಾ ಹೇಳಿ ನೀನು ಪದಾ ಹಾಡು ।
ಇನ್ನ ಹಾಡಿಕಿ ನಡೀಲಿ ಹಿಂಗ ಗನಮಡಾ ॥ ॥ ಜೀಜೀ ॥

ಇಳುವು ಆ ಸೂರ್ಯನ ಸಾರಥಿ ಯಾಂವಾ ಹೆಸರ ಹೇಳಬೇಕು ಬೇಗಿ ।
ಅವನೇ ರಥಾ ಹೂಡಿ ತಾನಃ ಮುಂದಾಗಿ ॥ ॥ ಜೀಜೀ ೧ ॥

ಏಸ ಕುದರಿ ಹೂಡ್ಯಾರ ಹೇಳಬೇಕು ಸರಿಯಾಗಿ ।
ಈ ಸವಾಲ ನಿನಗ ಗೋರಿಯ್ಯಾಗಿ ॥ ॥ ಜೀಜೀ ೨ ॥

ನಿನಗ ತಿಳಿಯದಿದ್ದರ ಹೋಗಿ ಕೇಳೊ ಕಲಸಿದ ಗುರುವಿಗಿ ।
ಗರ್ವಿಲಿ ಬಿದ್ದಿ ಮರವೀಗಿ ॥ ॥ ಜೀಜೀ ೩ ॥

ಏರು ಸೂರ್ಯನ ರಥ ಯಾವ ಜ್ಯಾಗದಾಗ ನಿಂತದ ।
ತಂತ್ರ ತಿಳಿಸಿ ಕಳಕೋರೋ ಪೀಡಾ ॥

ಕೂಡಪಲ್ಲ ಸವಾಲ ಜವಾಬಗಳ ಶೋಧಿಸಿ ಹೇಳಿದರ ಪಂಡಿತರ ಹೌದಂತಾರ ಫಂಡಾ ॥ ॥ ಜೀಜೀ ಚೌಕ ೧ ॥

ಸವಾಲ ಕೇಳಿದರ ಸ್ವಲ್ಪರೆ ಹೇಳಬೇಕು ಹಿಂಗ ಐತಿ ಹಾಡಾವರದಮ್ಮಾ।
ಒಂದರ್ಧಾ ಪದಾ ಕಲ್ತವರೆಲ್ಲಾ ಡಪ್ಪ ತಗೊಂಡ ಏಳಲಿ ಇಲ್ಲ ಶರ್ಮಾ ॥ ॥ ಜೀಜೀ ॥

ಅಲ್ಪ ಹಾಡಾವರಲ್ಲಿ ಅಹಂಕಾರ ಬಾಳ ಬಂದು ಮಂದ್ಯಾಗ ಹಾಕತಾರ ವರಮಾ।
ಅಡಕೋತಿನೊಳಗ ಅಡಿಕಿ ಸಿಕ್ಕಂಗ ಸಿಕ್ಕು ಸುಳ್ಳೆ ಆಗೂದ ನರಮಾ ॥ ಜೀಜೀ ॥

ಸೂರ್ಯ ಚಂದ್ರರರಿಗೆ ಏಸ ಹರದಾರಿ । ಫರಕ ಅದ ತರಕ ಮಾಡಿ ತಿಳಿಸಬೇಕೊ ಮರಮಾ ॥
ಚಂದ್ರಂಗ ಚಿಕ್ಕೀಗಿ ಎಷ್ಟ ದೂರ ಅದ ।
ಇದನಷ್ಟ ಹೇಳಿ ಕಳಕೋರೊ ಕರಮಾ ॥ ॥ ಜೀಜೀ ॥

ಇಳುವು ಸೂರ್ಯ ಚಂದ್ರ ಚಿಕ್ಕಿ ಹುಟ್ಟಿ ಏಸ ದಿವಸ ಆಯಿತಣ್ಣಾ ।
ದಿವಸ ಗುಣಾಕಾರ ಮಾಡಾಣ್ಣಾ ॥ ॥ ಜೀಜೀ ॥

ಈ ಸವಾಲದೊಳಗ ತಿಳಿಯತೈತಿ ನಿನ್ನ ಬಣ್ಣಾ ।
ಬಾಳ ಮಂದಿ ಮುಕ್ಕ್ಯಾರೊ ಮಣ್ಣಾ ॥ ॥ ಜೀಜೀ ॥

ಯಾವದರೆ ಸುಳ್ಳ ಹೇಳಿ ಸಾರಸಬೇಡ ನೀ ಸುಣ್ಣಾ ।
ಕಲ್ತವರು ಕಿತ್ತ್ಯಾರೊ ನಿನ್ನ ಕಣ್ಣಾ ॥ ॥ ಜೀಜೀ ॥

ಏರು ತೋಡಗಿ ತೋಡಿ ಜೋಡಿ ಹಾಡಿದರ
ಗಾಡಿ ನಡದಂಗ ರೈಲದ ರೋಡಾ

ಕೂಡಪಲ್ಲ ಸವಾಲ ಜವಾಬಗಳ ಶೋಧಿಸಿ ಹೇಳಿದರ ಪಂಡಿತರ ಹೌದಂತಾರ ಫಂಡಾ ॥ ॥ ಜೀಜೀ ॥ ಚೌಕ ೨ ॥

ಇದು ಅಲ್ಲದೆ ಇನ್ನೊಂದು ಕೇಳುವೆ ಬಗಿ ಹರಿಸುವ ಹರಿದಾಸ ಪುಂಡಾ।
ಗುರುತಕ ಹಚ್ಚಿ ನೀನು ಗುರಿ ಒಗಿಯಬೇಕೊ ಹಾರು ಪಕ್ಷಿಗಿ ಬಡದಂಗ ಗುಂಡಾ ॥ ॥ ಜೀಜೀ ೧ ॥

ನಾಡಮ್ಯಾಗ ಹಾಡು ಮಂದಿ ಬಾಳ ಆದೀತೊ ಹರಿದಾಸಾ ನೀ
ಕಟ್ಟೀದ ಘಂಡಾ ।
ಒಬ್ಬ ಮನುಷ್ಯಾನ ಮ್ಯಾಲ ಗಾಳಿ ವಜನಾ ಇರತೈತಿ ಹೇಳೊ ಏಸ
ಪೌಂಡಾ ॥ ॥ ಜೀಜೀ ೨ ॥

ಏಸ ಪೌಂಡ ಏಸನೂರ ಮಣಾ ಆಗತದ ಇದು ಪುರಾಣ
ಹೇಳಬೇಕೊ ತಿಳಕೊಂಡಾ ॥
ಹೇಳುದ ಆಗದಿದ್ದರ ಹಾಡುದ ಬಿಟ್ಟು ಸುಮ್ಮ ಹೋಗಬೇಕ
ಉಳಕೊಂಡಾ ॥ ॥ ಜೀಜೀ ॥

ಇಳುವು ನಾ ಕೇಳಿದ ಮಾತ ಹೇಳಬೇಕು ಉಳದಂಗ
ಶರಣರದ ಶರೀರ ತೊಳದಂಗ ॥ ॥ ಜೀಜೀ ೧ ॥

ಉಪದೇಶದ ಉದಕ ಕುಡಿಯಬೇಕೊ ಹುಚಮಂಗ
ಮಾಡಬೇಕು ಸಾಧುರ ಸಂಗ ॥ ॥ ಜೀಜೀ ೨ ॥

ನಬಿಲಾಲಸಾನ ಕವಿ ಸವಿ ಸಕ್ರಿ ಉಂಡಂಗ । ಪೀರಾನ ಫೌಳಿ
ಕೈಲಾಸ ಕಂಡ ॥ ॥ ಜೀಜೀ ॥

ಏರು ಸಿಕಿಂದರನ ಪೂಜಾ ವ್ಯಾಳೇಕ । ನಿತ್ಯ ನೋಡತಾವ ಚೌಗಡಾ ।
ಕೂಡಪಲ್ಲ ಸವಾಲ ಜವಾಬಗಳ ಶೋಧಿಸಿ ಹೇಳಿದರ ಪಂಡಿತರು ಹೌದಾಂತರ
ಪಾಡಾ ॥ ॥ ಜೀಜೀ ಚೌಕ ೩ ॥

ಬಾಯಿ ಬಿಚ್ಚಲಿಲ್ಲ ಕೇಳಿ ಬೆರಳ ಕಚ್ಚಿದರವರಾ ।
ಆ ಹುಡುಗ ಮತ್ತ ಮುಳುಗಿ ಸೇರಿತೊ ಶಿವದ್ವಾರಾ ।
ಕೂಡಪಲ್ಲ ಇಂಗಳೇಶ್ವರ ಬಾಗೇವಾಡಿಯಲ್ಲಿ ಬಸವಣ್ಣನವರು ಜನಿಸಿ ಬಂದರೊ
ಭುವನ ಪಾವನಗೊಳಿಸಿ ಗಳಿಸಿ ಆದಾರೋ ದೇವರಾ ॥ ॥ ಜೀಜೀ ॥
॥ ಚೌಕ ೪ ॥

ಸತ್ತ ಹುಡುಗನ ತಾಯಿ ತಂದಿ ತಪ್ಪ ತಪ್ಪ ಆತಂತ ಓಡಿ ಬಿದ್ರು ।
ಕ್ಷಮಿಸಿರೆಂತಾ ಪಾದಕ ಬಿದ್ರು ಬಸವಣ್ಣನವರಿಗಿ ।
ಅವರು ತತಾಸ್ತು ಅಂದ್ರು ಬಸವೇಶ್ವರ ಕ್ಷಮಿಸಿ ಅವರಿಗಿ ।
ಈ ದೃಶ್ಯ ನೋಡಿ ಆಶ್ಚರ್ಯವಾಯಿತೊ ।
ಇಡಿ ಊರಿವರಿಗಿ ಚಿಕ್ಕ ಬಾಲಕ ಇದ್ದಾಗ ಬಸವ ಚಿಕ್ಕ ಪವಾಡ
ತೋರಿಸಿದಾನು ।
ನೀನೇ ಅಂತ ನೆನೆದಾ ಸಂಗಮನಾಥಾ ಗುರುವಿಗಿ ॥ ॥ ಜೀಜೀ ॥

ಮುಂದೆ ಕೇಳರಿ ಮತ್ತೊಂದು ಮಾತಾ ಹಿರೇರ ಹಬ್ಬಂತ ಮಾಡೂದ ಬಂತು
ಕುದ್ದ ಬಸವನ ಮನ್ಯಾಗ ಕದ್ದಹಬ್ಬ ಉಣುಸುದು ಎಲ್ಲಾರಿಗಿ ।
ಮೋದ ಕ್ಷೀರಮಾಡಿ ನೀಡುತಿದ್ರು ಬ್ರಾಹ್ಮಣ ಮತದವರಿಗಿ

ಅದಕ ಹಾಲಾತೊಗಳಬೇಕಾಗತದ ತಾವು ಸಾಕಷ್ಟು ಸರವರಗಿ ।
ಹಾಲ ತರಬೇಕಂತ ಬಾಲಬಸುವಾ ಬಿಂದಿಗಿ ತಗೊಂಡು
ನಡದಾ ಆಕಳೊಂದು ಸತ್ತು ಬಿದ್ದಿತು ತಿಪ್ಪಿಮ್ಯಾಲ ಮರೀಗಿ ॥ ॥ ಜೀಜೀ ॥

ಸತ್ತ ಆಕಳಾಗಿ ನಿಂತು ನೋಡಿ ಹಸ್ತ ಇಟ್ಟು ಎಬ್ಬಿಸಿ ಬಿಟ್ಟಾ ಬುರು ಬುರು
ಹಾಲ ಹಿಂಡಿತು ಹತ್ಯಾನ ಬಿಂದಿಗಿ ಬರೋಬರಿಗಿ । ಬ್ರಾಹ್ಮಣರ ಯಂಕಣ್ಣಾ
ತಂಬಿಗಿ ತಗೊಂಡ ಕೂತಿದ್ದಾ ಕಂಟಿಕೊನರಿಗಿ ।
ಕುಂತ ಅಂತಾನ ನೋಡಿ ಕೋಡಿ ಬಸವಾ ಕೆಡಸ್ಯಾನ ಕುಲದವರಿಗಿ ।
ಸತ್ತ ಆಕಳ ಹಾಲ ಉಂಡ್ರ ಶೀಲ ಸುಟ್ಟು ಹೋಗೂದು ಕೆಟ್ಟವಟ್ಟ ಇವನ ಮನೀಗಿ
ಬೈಸ್ಕಾರ ಇಡಬೇಕು ಕಡೀ ವರೀಗಿ ॥ ॥ ಜೀಜೀ ॥

ಇಳುವು ವಂಕಗೋಣದ ಯಂಕಣ್ಣಾ ಹಿಂಗ ಹೆಣಕೊಂಡ ಹೋದಾ
ಅವಸರಾ । ತಮ್ಮ ಮತದವರಿಗಿ ತಿಳಿಸಿದಾ ಸಸಾರಾ ॥ ಜೀಜೀ ॥

ಬಸವನ ಮನಿ ಭಿನ್ನ ಬಿಡ್ರಿ ಕುಲ್ದ ಹೊರಗ ಇಡೂನು ಬೈಸ್ಕಾರಾ ।
ಸತ್ತ ಆಕಳ ಹಾಲ ಮಾಡ್ಯಾನ ದೂದಕ್ಷೀರಾ ॥ ಜೀಜೀ ॥

ಮುಡದಾರ ಹಾಲ ಉಣಿಸಿ ಕುಲಾ ಕೆಡಸ್ತಾನ ಮೋಸಗಾರಾ ।
ಅಂವಾ ದುರಾಚಾರ ಆಗ್ಯಾನ ಮೋಸಗಾರಾ ॥ ॥ ಜೀಜೀ ॥

ಏರು ದೂದಕ್ಷೀರ ಮಾಡಿಸಿ ಬಸವಾ ಭಿನ್ನ ಹೇಳಲಿಕ್ಕೆ ಹೋದಾನೊ
ನಿನ್ನ ಬಿನ್ನsಕ ಬರೂದಿಲ್ಲಾಂತ ಹೀಂಗ ನುಡದಾರಾ ।
ಸತ್ತ ಆಕಳ ಹಾಲ ತಂದಿದಿ ಮುಡದಾರಾ ।
ನಿನ್ನ ಮನಿ ಬೈಸ್ಕಾರ ಕೊಟ್ಟವೆಂದ್ರು ಕೂಡಿದವರಾ ।

ಕೂಡಪಲ್ಲ ಇಂಗಳೇಶ್ವರ ಬಾಗೇವಾಡಿಯಲ್ಲಿ ಬಸವಣ್ಣನವರು ಜನಿಸಿ ಬಂದರೊ
ಭುವನ ಪಾವನಗೊಳಿಸಿ ಗಳಿಸಿ ಆದಾರೊ ದೇವರಾ ॥ ॥ ಜೀಜೀ ॥

॥ ಚೌಕ ೫ ॥

ಏರು ನಮ್ಮ ಮನಿ ಎತ್ತಿ ಇಟ್ಟಾರಂತಾ ಪೆಟ್ಟ ಆಯಿತೊ ಇವರೀಗಿ
ತಾಯಿ ತಂದಿ ಬಲ್ಲಂಗ ಬೈದಾರ ಬಸವಣ್ಣನವರಿಗಿ ।
ಹೆಂತಾ ಹುಚ್ಚ ಮಗಾ ಹುಟ್ಟಿದಿ ಬ್ರಾಹ್ಮಣ ಬೆಣ್ಣಿಯವರಿಗ ।
ಕುಲಕ ಕುಂದ ತಂದಿಟ್ಟಿ ಮಂದಿ ಮಕ್ಕಳಿಗಿ ।
ಅದೆ ವಕ್ಕೊಟ್ಟ ಲಂಚರಾ ಕೊಡ್ಲೆಲ್ಲಿ ಮುಂಚೆ ಯಂಕಣ್ಣನವರಿಗಿ ॥
॥ ಜೀಜೀ ॥

ತಾಯಿ ತಂದಿ ಮಾತಕೇಳಿ ಕೊಂಡ ಬಸವಾ ಅಂದಾನೋ ।
ಸದ್ಯೆ ಹಬ್ಬಾ ಮಾಡಿವಿ ನಾವು ಸತ್ತವರಿಗಿ ಅವರಿಗಿ ಸತ್ತ ಆಕಳ ಹಾಲೇ
ಬೇಕು ಅಂದಾನ್ರಿ ಹಂತವರಿಗ ।
ಸತ್ತವರನ್ನ ಬಿಟ್ಟಾ ಯ್ಯಾಕ ಕರಿಬೇಕು ಇದ್ದವರಿಗ ।

ಸತ್ತವರ ಸಲುವಾಗಿ ಮಾಡೀವಿಯಂದ್ರ ಸತ್ತವರನ್ನೆ ತಂದು ಉಣಸ್ತೀನಂದು
ಸ್ಮಶ್ಯಾನಕ ಹೋಗಿ ಕೂಗಿ ಬಿಟ್ಟ ಸಗಟಿ ಸತ್ತವರಿಗ ॥ ॥ ಜೀಜೀ ॥

ಬಸವೇಶ್ವರನ ಕೂಗಕೇಳಿ ಕೈಲಾಕ ಹೆಣಗಳು ಬಂದು ನಿಂತು
ಯಾಕ ಕರೆದ್ಯೆಂತ ಕೇಳತಾವ ಬಸವೇಶ್ವರಗ ।
ನಾನು ಭಿನ್ನ ಹೇಳಾಕ ಬಂದೀನಿ ಬರ್ರಿ ಊಣಸುವೆ ಓಸೂರಿಗಿ ।
ನಮಗ ಉಣ್ಣಿಸುವರು ಸಿಕ್ಕಿಲ್ಲಾಂತಾರ ಇಲ್ಲಿ ವರೀಗ ।
ಬಸವನ ಬೆನ್ನಿಂದ ಬಿನ್ನಕ್ಕs ಬಂದು ಮನಿ ಹಿಡಸಲಾರದೇ ಕೂತ್ರು
ಗಾಬರಿ ಆದಾರೊ ತಾಯಿ ತಂದಿ ನೋಡಿ ಇವರೀಗಿ ॥ ಜೀಜೀ ॥

ಇಳುವಾ ಸಂದಿಲ್ಲದಂಗ ಮಂದಿ ಕೂತಿತ್ತ ಚಂದಾಗಿ ।
ಬಸವಾ ನಿಂತು ನೋಡತಿದ್ದಾ ಲಗಿಬಿಗಿ ॥ ॥ ಜೀಜೀ ॥

ವಂಕಗೋಣದ ಯಂಕಣ ಹಿಂಗ ಅಂತಾನ ಕಾಣ್ಯಾ ಆಗಿ
ಯ್ಯಾರೇರು ಉಣತಾರಾರೆನೋ ನೋಡಬೇಕು ಅಲ್ಲೀಗಿ ಹೋಗಿ ॥
॥ ಜೀಜೀ ॥

ಪರೀಕ್ಷ ಮಾಡೂದಕ ಪುರುಮಾನಿಸಿ ಬಂದಾನ ಬಸವನ ಮನೀಗಿ ।
ಜನಾ ಮನ ತುಂಬಿ ಕೂತಿತ್ತೂ ಕೂನಿಗೀ ॥ ॥ ಜೀಜೀ ॥

ಏರು ಯಂಕಣ್ಣ ನೋಡಿ ಅಂತಾನ ಇದು ಯಾವೂರ ಮಂದಿ ಬಂದಿರಬೇಕು
ಪಕ್ಕಾ ನೋಡೂನು ಬಂದಾರೇನು ಬೀಗಬಿಜ್ಜರಾ ।
ಅತ್ತಿತ್ತಾ ನೋಡತಾನ ಕೂತವರನಾ ದೂರಾದೂರಾ ।
ಭಯಂಕಾರಾ ಜನಾ ಇದ್ದಾರೊ ಗುರ್ತ ಇಲ್ಲದವರಾ ॥ ॥ ಜೀಜೀ ॥

ಕೂಡಪಲ್ಲ ಇಂಗಳೇಶ್ವರ ಬಾಗೇವಾಡಿಯಲ್ಲಿ ಬಸವಣ್ಣನವರು
ಜನಿಸಿ ಬಂದರೊ ಭುವನ ಪಾವನಗೊಳಿಸಿ ಗಳಿಸಿ ಆದಾರೋ
ದೇವರಾ ॥ ॥ ಜೀಜೀ ಚೌಕ ೬ ॥

ಪಂತಿಹೌರ ಕೂತವರಿಗಿ ನಿಂತು ನೋಡ ತಾನ ತಾನು ।
ಓಬ್ಬರಗುರ್ತೆ ಹತ್ತವಲ್ದ ಆ ವಾಗ ತಟಕ ।
ಒಳಗೆ ಬ್ಯಾರೆಬ್ಯಾರೆ ಮಂದಿ ತೋರಿತೊ ನೋಟಕ ।
ಬೆರಗಾಗಿ ನಿಂತ ಬಸವಣ್ಣನ ಲೀಲಾಟಕ ।
ಯಂಕಣ್ಣನ ಆಯಿ ಸತ್ತ ಆರು ತಿಂಗಳಾಗಿತ್ತೊ ।
ಆಗ ಆಕೀನೋ ಕೂತಿದ್ಯೊಳೊ ಊಟಕ್ಕೊ ॥ ॥ ಜೀಜೀ ॥

ಯಂಕಣ್ಣ ತನ್ನ ಆಯೀಗಿ ನೊಡಿ ಬಾಯಿ ಬಾಯಿ ಬಡಕೋತಾನೋ
ಅವರ ಮುತ್ಯಾನ ಕೂತಿದ್ದಾ ಅಮ್ಮನ ಮಗ್ಗಲಕಾ ।
ತಾಯಿ ತಂದಿ ಬಂಧು ಬಳಗಾ ಇತ್ತ ಎಡಬಲಕಾ ।
ತಲಿಬಾಗಿ ಉಣ್ಣತಾರ ಮಾರಿ ಮಾಡ್ವಲ್ರು ಮ್ಯಾಕ ।

ಯಂಕಣ್ಣ ಕಂಡ ಕೂಡ್ಲೆ ಕುಂಡಿ ಕುಂಡಿ ಬಡಕೊತಾನದಂಡಾ ಕೊಡುವುದು
ಬಂತು ಇನ್ನ ನನ್ನ ಪಾಲಕ ॥ ॥ ಜೀಜೀ ॥

ಯಾರ ಮುಂದ ಹೇಳಬಾರದು ಮಾರಿ ನಾನು ತೋರಿಸಬಾರದು
ಜೋಡಗಚ್ಚಿ ಹಾಕಿ ಓಡ್ಲಾಕಹತ್ತಿದಾ ಮನಿ ಕಡಿಮೇಲಕ ।
ಬ್ರಾಹ್ಮಣರು ಅಂತಾರ ಯಾಕ ಯಂಕಣ್ಣಾ ಓಡಿತಿದಿ ಗೂವಾಗದ್ದಲಕ
ಬಸವನ ಮನಿಗಿ ಹೋಗಿ ನೋಡ್ರೊ ಗದ್ದಲ ತಿಳಿತದ ಮಲಕ
ಇಡೀ ಬ್ರಾಹ್ಮಣರ ಮಂದಿ ಬಂದು ಬಸವನ ಮನಿಗಿ ಹೋಗಿ
ನೋಡತಾರ ಬಂಧು ಬಳಗ ಮಂದಿ ಮಕ್ಕಳು ಇದ್ರ ಕೈಲಾಕ ॥
॥ ಜೀಜೀ ॥

ಇಳುವಾ ತಮ್ಮ ತಮ್ಮ ಮಂದಿಗಿ ನೋಡಿ ಮನಷ್ಯನ್ಯಾಗ ಮರಗ್ಯಾರ
ನನ್ನ ಮಡದಿನೆ ಬಂದಾಳ ಎಪ್ಪಾ ಹ್ಯಾಂಗ ಮಾಡಲೆಂತಾ
ಕೊರಗ್ಯಾರಾ ॥ ॥ ಜೀಜೀ ॥

ನಮ್ಮ ಹಿರಿಯರ ಕೂಡಾ ಉಣತಿದ್ದೇವು ಯಂಕ್ಯಾನೆ ಮಾಡ್ಯಾನ
ಅಡತಾರಾ । ಯಂಕಣ್ಣಗ ಸಿಕ್ಕಾಂಗ ಮಾತಾಡತಾರ ॥ ॥ ಜೀಜೀ ॥

ನನ್ನ ಅಣ್ಣ ತಮ್ಮರು ನನಗ ಆಸ್ತಿ ಸರಿಯಾಗಿ ಕೊಟ್ಟಿಲ್ಲೊ ದುಷ್ಟರಾ
ನಮ್ಮ ಅಪ್ಪನ ಕೇಳತಿದ್ದೆ ನಿಷ್ಟುರಾ ॥ ॥ ಜೀಜೀ ॥

ಏಸು ವಂಕಗೋಣದ ಯಂಕ್ಯಾನ ಕೇಳಿ ಮಳ್ಳಯಂತ ಆದೇವು
ನಾವು ಕ್ಷೇಮ ಸಮಾಚಾರಾ ।
ತಿಳಿತಿತ್ತ ಹಿರಿಯರನ ಕೇಳಿದರಾ ।
ಹಿರಿಯರಸ ಉಣಿಸಿ ಬಸವಾ ಕಳಿಸಿ ಬಿಟ್ಟಾ ಮಾಯಾಗಿ ಹೋದರಾ।
ಬಸವಗ ನೋಡಿ ದಂಗಾಗಿ ಆವಾಗ ಸಾಷ್ಟಾಂಗ ಎರಗಿದರಾ ॥

ಕೂಡಪಲ್ಲ ಇಂಗಳೇಶ್ವರ ಬಾಗೇವಾಡಿಯಲ್ಲಿ ಬಸವಣ್ಣನವರು ಜನಿಸಿ ಬಂದರೊ
ಭುವನ ಪಾವನಗೊಳಿಸಿ ಗಳಿಸಿ ಆದರೋ ದೇವರಾ ॥ ಜೀಜೀ ॥
॥ ಚೌಕ ೭ ॥

ಶರಣ ಬಂದು ಬ್ರಾಹ್ಮಣರಿಗೆ ಬಸವಣ್ಣನವರು ಕೇಳತಾರೋ ।
ನೀವು ಎಲ್ಲಾರು ನಮ್ಮನ ಇಟ್ಟೀರಿ ಕುಲ್ದ ಹೊರಗ ಎತ್ತಿ ।
ಇಂಥಾ ಕುಲಗೇಡಿ ಬದಿಗಿ ಯಾಕ ಬಂದಿರಿ ಹಾಯಬಾರದು ಹತ್ತಿ
ನಾವು ಏನೂ ಮಾಡಿಲ್ರಿ ಎಲ್ಲಾ ಮಾಡಿದಾವಾ ಯಂಕ್ಯಾನs ಕತ್ತಿ
ಬಿಂಕ ಬಿಟ್ಟು ಯಂಕಣ್ಣ ಬಂದು ಕಿಂಕರಾಗಿ ಪಾದಕ ಬಿದ್ದಾ
ಸಾಕ್ಷಾತ ಬಸವ ಕೊಡುವವಾ ನಮಗ ಭುವಿಪಾದಭಕ್ತಿ ॥ ಜೀಜೀ ॥

ತಪ್ಪ ಕ್ಷಮಿಸಿ ಬಸವಪ್ಪ ಅಪ್ಪಿ ಕಳಿಸಿದಾನು ತಾನು ಬಸವನ ಭಜಿಸುತ
ಹೋಗ್ರೋ ಬಿಟ್ಟು ಆಮ್ತಿ

ಇಂವಾ ಶಿವನ ಸರಿ ಶ್ರೇಷ್ಠ ಅಂತಾ ಇಟ್ಟ ಮಮತಿ ।
ಶಾಂತಮೂರ್ತಿ ಬಸವ ಗುರು ಪಾದಾಸೇವೆ ಸುಮತಿ ।
ಶ್ರೀಗುರು ಸಂಗಮನಾಥನ ಸರ್ವರಿಗೆ ಸಲುವಾವಾನೆ
ಮನಿತಾನ ನಡಿಸಿ ಆತು ಹುಕುಮತಿ ॥ ॥ ಜೀಜೀ ॥

ಗುರು ಕುಲ ಆಶ್ರಮದಲ್ಲಿದ್ದ ಸರ್ವವಿದ್ಯೆ ಮುಗಿಸಿದಾನು
ಬಸವೇಶ್ವರ ಅನಿಸಿಕೊಂಡಾ ಜಗಜ್ಯೋತಿ ।
ವೀರಶೈವ ಧರ್ಮದ ಧ್ವಜಾ ಎತ್ತಿದಾನೊ ಸುಜ್ಯಾತಿ ।
ಅರು ಗುರು ಆದ ಮರು ಇದು ಕಮ್ಮಜ್ಯಾತಿ ।
ಧರ್ಮ ಉದ್ದಾರಕ್ಕಾಗಿ ಬಸವ ಧರಿಗಿ ಉದಯ ಆದಾನೊ
ಸದಾ ಸಂಗಮನಾಥಗ ನಿಜಪೂಜೆ ಎತ್ತಿ ॥ ॥ ಜೀಜೀ ॥

ಇಳುವು ಬಾಲ ಲೀಲೆಯಲ್ಲಿ ಭವ್ಯ ಭವ್ಯ ಪವಾಡ ತೋರಿಸಿದಾನೊ ಬಸವಣ್ಣಾ।
ಮುಂದೆ ಕೈಲಾಸ ಮಾಡಿದಾನೊ ಕಲ್ಯಾಣ ॥ ॥ ಜೀಜೀ ॥

ಅಲ್ಲಿ ಅಲ್ಲಮಪ್ರಭು ಸರ್ವ ಶರಣರು ಚನ್ನಬಸವಣ್ಣಾ।
ತ್ರಿಪುರಾಂತಕೇಶ್ವರನೇ ಮುಕ್ಕಣ್ಣಾ ॥ ॥ ಜೀಜೀ ॥

ಕಡಿಕಾಲಕ ಕ್ರಾಂತಿಯಾಗಿ ಕಟಕರಕೇರಿ ಆಯ್ತೋ ಕಲ್ಯಾಣ
ಹಿಂಗ ಶ್ಯಾಪಕೊಟ್ಟ ಬಂದಾ ಬಸವಣ್ಣಾ ॥ ॥ ಜೀಜೀ ॥

ಏರು ಸಂಗಮನಾಥನ ಅಂಗದಲ್ಲಿ ಐಕ್ಯ ಆದ ಬಸವಣ್ಣ ।
ಭಕ್ತಿ ಬಾಂಡಾರಿ ಭಾಗ್ಯ ಗಳಿಸಿದಾ ಭಕ್ತ ಉದ್ದಾರ ।
ಬಸವ ಪುರಾಣ ಮುಗಿಯಲಾರದ್ದು ಮೂರು ತಿಂಗಳ ಓದಿದರಾ ।
ಒಂದೇ ಸಂಧಿ ತಿಳಿಸಿ ಕವಿ ಲಾಲಸಾ ಕೈ ಮುಗಿದರಾ ॥

ಕೂಡಪಲ್ಲ ಇಂಗಳೇಶ್ವರ ಬಾಗೇವಾಡಿಯಲ್ಲಿ ಬಸವಣ್ಣನವರು ಜನಿಸ ಬಂದರೊ
ಭುವನ ಪಾವನಗೊಳಿಸಿ ಗಳಿಸಿ ಆದರೋ ದೇವರಾ ॥
॥ ಜೀಜೀ ॥ ಚೌಕ ೧ ॥

ಖ್ಯಾಲಿ ೧

ತಿಳಿಯಣ್ಣಾ ಆರೆ ತಿಳಿಯಣ್ಣಾ ।
ಉಳಿಯಣ್ಣಾ ನೀನು ಬೆಳೆಯಣ್ಣಾ ॥ ॥ ಜೀಜೀ ॥

ಮಕ್ಕ ಮರಳಾಗಿ ಮುಕ್ಕುದುಮಣ್ಣಾ ।
ಹೆಣ್ಣ ಹೊನ್ನು ಮಣ್ಣಿಗಾಗಿ ಇಡಬೇಕಾ ಕಣ್ಣಾ
ಬಣ್ಣಕ ಮೆಚ್ಚಿ ಬಾರಿ ಹುಚ್ಚಾದೆಣ್ಣಾ ॥ ॥ ಜೀಜೀ ॥

ಅರವಿನ ಜನ್ಮ ಇದು ಅರಿ ಬೇಕಣ್ಣಾ ।
ಗುರು ಶಾಲೆಯಲ್ಲಿ ದುಡದು ಪಡಿಯಬೇಕು ಹಣ್ಣಾ ।
ಹಂತಾ ಹಣ್ಣ ತಿಂದವಗೆಂದೂ ಹಸುವಿಲ್ಲಣ್ಣಾ ॥ ॥ ಜೀಜೀ ॥

ಬಾರದು ಬಯಸಿದಲ್ಲಿ ಬರುದಿಲ್ಲಾ ಮುಕ್ಕಣ್ಣಾ
ದೃಢಭಕ್ತನಡಿ ನುಡಿಯಲ್ಲಿ ಮೃಢ ಹರನ ನೋಡಣ್ಣ ।
ಜನನ ಮರಣಗಳು ನೀಗಿ ಜೈಬೇರಿ ಹೊಡಸಣ್ಣಾ ॥ ॥ ಜೀಜೀ ॥

ಶರಣರ ಸಂಘ ಶಿವ ಕ್ಷೇತ್ರ ನೋಡಣ್ಣ ।
ಮಂಗಲಾಂಗ ಇಂಗಳೇಶ್ವರ ಯಾತ್ರಾ ಮಾಡಣ್ಣಾ ।
ಖಾತ್ರಿಯಿಂದ ಕಾಸಿಮ ಲಾಲಸಾ ಕಾಯ್ಕೊಂಡ ಗುರು ಚರಣಾ ॥ ಜೀಜೀ ॥

ಖ್ಯಾಲಿ ೨

ಪತಿಪಾದ ಸೇವೆಯೊಳು ಸತತ ದುಡಿರೆವ್ವಾ
ಪತಿಲಿಂದ ಸತಿಗೆ ಸದ್ಗತಿ ಸ್ತುತಿ ಸಾರಿತವ್ವಾ ॥ ॥ ಜೀಜೀ ॥

ಹೆತ್ತ ತಾಯಿ ತಂದೆಯಂತೆ ಅತ್ತಿ ಮಾಂವಾ ತಿಳಿರೆವ್ವಾ ।
ಭಾವಾ ಮೈದುನದೆರಿಗಿ ಭಾವಿಸಿ ನಡಿರೆವ್ವಾ ।
ಭಾವ ಮೈದುನದೆರಿಗಿ ಪಾದಾ ಹಿಡಿರೆವಾ ॥ ॥ ಜೀಜೀ ॥

ಪತಿವ್ರತಾ ಎಂಬುವುದು ಅತಿ ಹಿತರೆವ್ವಾ ।
ಪತಿತ ಪಾವನಗೊಳಿಸಿ ಪವಿತ್ರ ಆಗರೆವ್ವಾ ।
ಪರಮಾರ್ಥಕ್ಕಾಗಿ ನೀವು ಪರಿ ಪರಿ ದುಡಿರೇವ್ವಾ ।
ಪತಿಪಾದ ಸೇವೆಯೊಳು ಸತತ ದುಡಿರೆವ್ವಾ ॥ ॥ ಜೀಜೀ ॥

ಪರೋಪಕಾರ ಎಂಬುದು ಪುಣ್ಯದ ಫಲರೆವ್ವಾ ।
ಅನ್ಯರಿಗೆ ಅರಿತು ನೀವು ಧನ್ಯರಾಗಿರೆವ್ವಾ ।
ಧಾನಾ ಧರ್ಮ ಮಾಡಿ ನೀವು ಮಹಾ ಸ್ಥಿರವಾಗಿರೆವ್ವಾ ॥ ॥ ಜೀಜೀ ॥

ಧರಿಯೊಳು ಇಂಗಳೇಶ್ವರ ಮೀರಿದ ಜಾಗವ್ವಾ
ಅಲ್ಲಿ ನೆನದಾನ ರೇವಣಸಿದ್ಧೇಶ್ವರವ್ವಾ
ಅಲ್ಲಿ ಕವಿ ಹುಟ್ಟತಾವ ಅನುಭಾವ ಸಮಾಜಕವ್ವಾ
ಪತಿಲಿಂದ ಸತಿ ಸದ್ಗತಿ ಸ್ತುತಿ ಸಾರಿತವ್ವಾ ॥ ॥ ಜೀಜೀ ॥

ಖ್ಯಾಲಿ ೩

ಅಲಾಬ ಬಂತು ಅನುಮಾನ ಯಾಕ ।
ನಡೀಲಿ ಬೆಳತನಕೂ
ದಿನಮಾನ ಕೆಟ್ಟಾವ ದಿನ ಹೊಡಿರಿ ಹೋಗೂನು ಕಳ್ಳತನಕಾ ॥
॥ ಜೀಜೀ ॥ ಪಲ್ಲ ॥

ಕಲ್ಲ ಮಸೂತ್ಯಾಗ ಕಳ್ಳಪಿರನ ಕರಕೊಂಡು ಬರುವುದಕ ।
ತನವಿನ ಮಸೂತ್ಯಾಗ ಪಂಚತತ್ವದ ಪಂಜಿ ಕೊಡ್ರಸಬೇಕು ।
ಹಸನ ಹುಸೇನಿ ದೇವ್ರ ಇದ್ದಾವು ಸೇವೆ ಮಾಡಬೇಕು ॥
ದಿನಮಾನ ಕೆಟ್ಟಾವು ದಿನ ಹೊಡಿರಿ ಹೋಗೂನು ಕಳ್ಳತನಕಾ ॥ ಜೀಜೀ ೧ ॥

ಸೇವೆ ಮಾಡಿದರ ಮುಗಿಲಿಲ್ಲಾ ತಮ್ಮಾ ಮುಲ್ಲಾ ಅದಕ ಬೇಕೋ ।
ಮುಲ್ಲಾ ಅಂದ್ರೆ ಸುಮ್ಮನೆ ಅಲ್ಲಾ ತಮ್ಮಾ ಮುಂಜಿವಿ ಮಾಡಬೇಕೊ ।
ಮುಂಜಿವೀ ಆದ ಮೇಲೆ ಮುಲ್ಲಾ ಆಗುದಿಲ್ಲಾ ಗಡ್ಡಾಕಾಯಬೇಕೋ ॥
॥ ಜೀಜೀ ॥

ಗಡ್ಡಾ ಕಾಯ್ದರ ದಡಾ ಆದಿ ನೀನಿತ್ತ ಕಲಿಬೇಕೊ। ಅಲ್ಲಾ ಹೊಕಬರ
ಅನ್ನುವಾಗ।
ಕಿವಿಯಾಗ ಬಟ್ಟ ಹಾಕೋಬೇಕೋ ನಮಾಜ ಮಾಡು ಮುಂದ
ಅನುಮಾನ ಯಾಕ।
ಕಚ್ಚಿ ಕಳಿಯಬೇಕೊ। ದಿನಾ ॥ ॥ ಜೀಜೀ ॥

ನಡಿ ನುಡಿ ಎಂಬುವ ಲಾಡಿ ಮಾಡಿ ನಿನ್ನ ಕೊರಳಲ್ಲಿ ಹಾಕೋ ।
ಎಲ್ಲಾ ಕಲ್ತನಂತ ಬಲ್ಲಾಂವಾ ಆಗಬೇಡ ಕಂದೂರಿ ಮಾಡಬೇಕೊ ।
ಫಕೀರನ ಉಣಸಿ ಪವಿತ್ರ ಆಗಿ ಪಾವನ ಆಗಬೇಕೋ ॥ ದಿನಾವಾ ॥ ಜೀಜೀ ॥

ಮುಲ್ಲಾ ಆಗುತಾನ ಅಲ್ಲಾ ಸಿಗುವದಿಲ್ಲಾ ಗುರ್ತದ ಮೂರಲೋಕೊ ।
ಏಕ ಅಲ್ಲಾ ಹಜಾರನಾಮ ಮೂಹರಮ್ಮ ಮುಗದ ಬಳಿಕೋ ।
ಕಡಕೊಳದೀಶ್ಯಾನ ಹೋಗಿ ಕೂಡಕೋ ಇಂಗಳೇಶ್ವರ ಲಾಲಸಾನ ನೀ
ಮಾಡಕೋ ॥
ದಿನಮಾನ ಕೆಟ್ಟಾವು ದಿನಾ ತುಡಿಗಿ ಹೋಗೂನು ಕಳತನಕೋ ॥

ಕೋಳೂರು ಕೊಡಗೂಸು

ಸತ್ಯವಂತರ ಕಥಿ ಕುಂತ ಕೇಳರಿ ನಿಂತ ಹೇಳುವೆ ಆದ ಮಾತಾ ।
ಈ ಹಾಡಿನ ಮೇಲೆ ಇಡಬೇಕೊ ಮಮತಾ ।
ಕುಡದಂಗಾಗುವುದು ಅಮೃತಾ ।
ಕೋಳೂರೆಂಬ ಒಳ್ಳೆಯ ಗ್ರಾಮದೊಳಗ ಕೊಡಗೂಸೆಂಬ ಶಿಶು ಇದ್ದೀತಾ
ಹೆಸರಾದೀತಾ ॥ ॥ ಜೀಜೀ ೧ ॥

ತಾಯಿ ತಂದಿಗೆ ಒಂದೇ ಮಗಳು ಕಂಡೇವಂತಾರ ಜ್ಯಾತಮುತ್ತಾ
ತಾಯಿ ತಂದಿಗಿ ಉಮ್ಮೇದ ತುಂಬಿತಾ
ಹರುಷದಿ ತೊಟ್ಟಿಲಕ ಹಾಕಿ ತೂಗುತಾ
ಕೊಡಗೂಸಂತ ಅದಕ ಹೆಸರ ಇಟ್ಟಾರ ಮೈಬಣ್ಣ ಬಂಗಾರ ಹೊಳಿತಾ
ಕೂಸು ಬೆಳಿಯುತಾ ॥ ॥ ಜೀಜೀ ೨ ॥

ನಾಲ್ಕಾರ ವರುಷ ದೊಡ್ಡಕ್ಕಿ ಆದಾಳ ಮಗಳು ಶಾಲಿಗಿ ಹಾಕಿ ವಿದ್ಯೆ ಕಲಿಸುತಾ
ಅವರ ತಂದಿ ಅಂದರ ಶಿವಭಕ್ತಾ । ಅವರ ಮನೆದೇವರಿದ್ದ ಕಲ್ಲಿನಾಥಾ
ಸ್ನಾನ ಮುಗಿಸಿಕೊಂಡು ಧ್ಯಾನ ಮಾಡುತ್ತಾ
ಪೂಜಾ ನಡಸಿತಿದ್ದೊ ಎರಡು ಹೊತ್ತಾ । ನಾಮಭಜಿಸುತ್ತಾ ॥ ಜೀಜೀ ೩ ॥

ಇಳುವು ನಿತ್ಯ ಹೋಗತಿದ್ದ ದೇವರಿಗಿ
ಪೂಜಿ ಯ್ಯಾಳೇಗಿ ।
ನೈವೇದ್ಯ ಸರಿಯಾಗಿ ಸಕ್ಕರಿ ಹಾಲಾ ।
ಪೂಜೆ ಮಾಡಿ ಹಾಲ ಹಾಕಾಂವ ಕಲ್ಲಿನ ಮ್ಯಾಲಾ ॥ ॥ ಜೀಜೀ ॥

ತ್ವಾಡೆ ಹಾಲ ಹಾಕಿ ದೇವರಿಗಿ । ತರತಿದ್ದ ಹಾಗೆ ತಿರಗಿ ।
ತನ್ನ ಮನಿಗಿ ಅರ್ಧಬಟ್ಟಲಾ
ಮಗಳಿಗಿ ಗುರ್ತ ಇದ್ದಿದ್ದಿಲ್ಲಾ ॥ ॥ ಜೀಜೀ ೨ ॥

ಒಂದಿವಸ ಅಂತಾನ ಮಗಳಿಗಿ ಹೋಗುವೆ ಊರಿಗಿ ।
ದೇವರಪೂಜಿಗಿ ವೈಯಬೇಕವ್ವಾ ಹಾಲಾ ।
ನಾ ಬರುವವರೆಗೆ ಪೂಜೆ ಮಾಡಂತ ಹೇಳಿದನಲ್ಲಾ ॥ ಜೀಜೀ ೩ ॥

ಏರು ಮಗಳಂತಾಳಾಗ ತಂದಿ ಮಾತಿಗಿ ದೇವರ ಗುಡಿ ಇಲ್ಲಪ್ಪ ಗುರ್ತ
ತಂದಿ ಕರಕೊಂಡು ಹೋಗಿ ತೋರಿಸಿದ ತುರ್ತ
ಅಂವಾ ಊರಿಗಿ ಹೋದ ದಾರಿ ದೂರಿತ್ತಾ।

ಕೂಡಪಲ್ಲ ಕೋಳೂರೆಂಬ ಒಳ್ಳೆಯ ಗ್ರಾಮದೊಳಗ ಕೊಡಗೂಸೆಂಬ ಶಿಶು
ಇದ್ದೀತಾ । ಹೆಸರಾದೀತಾ ॥ ॥ ಜೀಜೀ ಚೌಕ ೧ ॥

ಏರು ತಂದಿ ಹೋದ ಬಳಿಕ ಸಣ್ಣ ಮಗಳು ತಾನು । ಮುಂಜಾನೆದ್ದು
ಜಳಕಾ ಮಾಡಿದಳಲ್ಲಾ ।
ಬಟ್ಟಲ ತುಂಬಿ ಇಟ್ಟಾಳ ಸಕ್ಕರಿ ಹಾಲಾ ।
ಕಲ್ಲಿನಾಥನ ಪೂಜೇಕ ಹೊರಟಾಳ ಆಮ್ಯಾಲಾ ।
ಗುಡಿಗಿ ಹೋಗಿ ಸ್ವಚ್ಛ ದೇವರ ತೊಳೆದು ಪೂಜಾ ಮಾಡಿ
ನಿಂತಾಳಲ್ಲ ಇಟ್ಟಾಳ ಹಾಲಾ ॥ ॥ ಜೀಜೀ ॥

ದೂರ ನಿಂತ ದೇವರಿಗೆ ಅಂತಾಳು ಕುಡಿಯೊ ಕಲ್ಲಿನಾಥಾ ತಂದಂತಾ ಹಾಲಾ ।
ನಿನ್ನ ಮುಂದ ಇಟ್ಟೀನಿ ಬಟ್ಟಲಾ । ಹಾಲಹ್ಯಾಗ ಕುಡಿತದ ಭರಿಕಲ್ಲಾ ।
ನನ್ನ ಎದುರಿಗಿ ದೇವರ ಹಾಲ ಕುಡಿಯುವದಿಲ್ಲಂತಾ ಮರೀಗಿ ಹೋಗಿ
ಅಲ್ಲೆ ಅರ್ಧ ತಾಸ ನಿಂತು ಮತ್ತೆ ಬಂದಳು ಅವು ಹಾಗೇ ಇದ್ದಾವು
ಇಟ್ಟಂತಹಾಲಾ ।
ಅಂತಾಳ ಇನ್ನೂ ಯ್ಯಾಕ ಕುಡಿದಿಲ್ಲಾ । ನೀ ಕುಡಿಯುವ ತನಕಾ ನಾ
ಬಿಡುವುದಿಲ್ಲ ।
ನಮ್ಮ ತಂದಿ ತಂದ ಹಾಲ ಹ್ಯಾಂಗ ಕುಡಿತಿದ್ದಿ । ನಾ ಏನ ವಿಷಾ
ತಂದಿಲ್ಲಾ । ಕೊಂದಿಲ್ಲಾ ॥ ॥ ಜೀಜೀ ॥

ನಮ್ಮ ತಂದಿ ಬೆಂಡಭತ್ತಾಸ ತರತಾನು । ನಿನಗ ಅರ್ಧಾ ಕೊಡುವೆ
ಅದರಾಗ ಪಾಲಾ ।
ಕುಡಿಯೋ ಕಲ್ಲಿನಾಥಾ ತಂದ ಸಕ್ಕರಿ ಹಾಲಾ ।
ಹಾಲ ಕುಡಿಯದಿದ್ರ ನಾನು ಪ್ರಾಣ ಬಿಡತೀನಿ
ಹಾಗೆ ನನ್ನ ಮನೆಗೆ ಹೋಗುದಿಲ್ಲಾ । ಅಂತಾಳ ಕುಲ್ಲಾ ॥ ॥ ಜೀಜೀ ॥

ಇಳುವು ಕಲ್ಲದೇವರ ಕುತ್ತಿತ್ತೊ ಗಪ್ಪಾ । ಮಾತಾಡಲಿಲ್ಲ ಸಲ್ಪ ।
ಕೂಸಿಗ ಆಯಿತೊ ತಾಪಾ । ಹೊಟ್ಟಿ ಹಸಿವೀಗಿ ।
ಹೊತ್ತ ಬಂದಿತ್ತೊ ಆರ ತಾಸೀಗಿ ॥ ॥ ಜೀಜೀ ॥

ಮತ್ತ ಅಂತಾಳ ಯ್ಯಾಕ ಕಲ್ಲಪ್ಪಾ । ಹಾಲ ಕುಡಿಯಪ್ಪಾ
ತೋರಸಬ್ಯಾಡ ರೂಪಾ ನನ್ನಂತ ಹೇಸೀಗಿ ।
ಕಣ್ಣ ಮುಚಗೋತಿನಿ ಕುಡಿದ ಬಟ್ಟಲ ಕೊಡು ಕೂಸೀಗಿ ॥ ಜೀಜೀ ॥

ಹಾಲ ಕುಡಿಸದೆ ಹೋದರ ತಪ್ಪಾ । ನನ್ನ ಮ್ಯಾಲ ಕೋಪಾ
ಆದಾಂಗೋ ನಮ್ಮಪ್ಪಾ । ಅಂತಾಳ ಮನಸಿಗಿ ।

ಏರು ಈ ಕಲ್ಲಿಗಿ ಹಾಯ್ದು ಇಲ್ಲೆ ಪ್ರಾಣ ಕೊಡಬೇಕಂತಾ ।
ತನ್ನ ಮನಸಿಗಿ ಮಾಡಿಕೊಂಡ್ಲು ಖಚಿತಾ
ದೇವರ ಕೇಳೋ ನನ್ನ ಮಾತಾ । ನಾಳೆ ಅಪ್ಪ ಬಂದು
ಬೈತಾನ ಮತ್ತಾ । ಸಿಟ್ಟಿಗೇರಿ ಕಟ್ಟನೆ ಹಲ್ಲತಿಂದು

ಓಡಿ ಹೋಗಿ ಕಲ್ಲಿಗಿ ಹಾಯದಾಳಾ ಕಲ್ಲಾಂದ ಬಂದು ಹಿಡದು
ಕಂದು ಗೊರಳಾ ।
ನಿನ್ನ ಭಕ್ತಿಗಿ ಮೆಚ್ಚಿನಿ ಅಗಬೇಡ ಮಂಗಳಾ ।

ಕೂಡಪಲ್ಲ ಕೊಡಗೂಸು ಅಂಥದ ಆಗ ಬೇಡಿದ್ದ ಕೊಡಾಕಂತ ಮದಲ ಹಾಲ
ಕುಡಿಯೋ ಜಳಾ ಜಳಾ।
ದೇವರಾದ ಮರುಳಾ॥ ॥ಜೀಜೀ॥
ಆಗ ಹಾಲ ಕುಡಿದು ಮಗಳಿಗಿ ಅಂತಾನು ನಿನಗ ಏನ ಬೇಕ
ಬೇಡವಾ ವರಗಳ ॥
ಆ ಕೊಡಗೂಸ ಅಂತಾಳಾ ನಾನು ನೆನಸಿದಾಗ ಬರಬೇಕು ಸರಳಾ ।
ತಂದಿ ಬರುತಾನಾ ಹಾಲ ಕುಡಿಬೇಕಂತಾ ಬೇಡಿಕೊಂಡ
ಜೋಡಿಸ್ಯಾಳ ಕರಗಳಾ । ಇವೆ ವರಗಳಾ॥ ॥ಜೀಜೀ॥
ಆಶೀರ್ವಾದ ಮಾಡಿ ಅದೃಶ್ಯ ಆದ ತನ್ನ ಮನಿಗೆ ಹೊರಟಾಳ
ಹೊಳ್ಳಿ ಸಣ್ಣ ಮಗಳಾ ।
ಹಿಂಗ ಹಾಲ ಕುಡಿಸತಿದ್ಲೊ ಹಗಲಾ ಇರುಳಾ ।
ಏಳ ವರುಷದಕಿ ಮನಸ ಎಷ್ಟ ಸರಳಾ ।
ನಾಲ್ಕಾರ ದಿವಸಕ ಅವರ ತಂದಿ ಬಂದಾನು
ಎಲ್ಲಾ ವಿಸ್ತಾರ ಅಂವಗ ತಿಳಿಸ್ಯಾಳು ಪೂಜಿ ಬೆಳಸ್ಯಾಳಾ ॥ಜೀಜೀ॥

ಇಳುವು ಎರಡು ಹೊತ್ತು ಪೂಜಿ ಮಾಡಿ
ಹಚ್ಚಿ ಕರಪೂರ ವಡಿ ಇಲ್ಲದೆ ಬಿಡಗಡಿ ಕುಡಸತಿದ್ಲ ಹಾಲಾ ।
ತಂದಿ ಮುಂದ ಹೇಳ್ಯಾಳ ಇದು ಎಲ್ಲಾ ॥ಜೀಜೀ॥
ತಂದಿ ಆದ ಬೆಂಕಿ ಕಿಡೀ ಹೆಂತಾಕಿ ಕೋಡಿ
ಹಾಲಿನವಡಿ ಹ್ಯಾಂಗ ಕುಡಿತದ ಬರೆಕಲ್ಲಾ
ಎಷ್ಟು ದಿವಸ ಪೂಜೆ ಮಾಡಿನಿ ಎಂದೂ ಕುಡಿದಿಲ್ಲಾ॥ ॥ಜೀಜೀ॥
ಸುಳ್ಳ ಹೇಳಾಕಿ ಅಲ್ಲಾ ನಾ ಬುರಡಿ । ತೋರಸ್ತೀನಿ ನಡಿ ।
ಸಂತೋಷ ಪಡಿ । ನೋಡಿದ ಮ್ಯಾಲಾ ।
ಕಲ್ಲಿನಾಥನ ತನ್ನ ರೂಪಕ ಬೆಲಿ ಇಲ್ಲಾ ॥ ॥ಜೀಜೀ॥

ಏರು ಮಗಳು ಹೇಳಿದಳು ತಂದಿ ಮುಂದಾ
ಆಗ ಭಕ್ತಗ ಆದೀತೋ ವಿಪರೀತಾ ।
ಅಂತಾನು ಇದೆಂತಾ ಅಗಾದ ಮಾತಾ
ನಾಳೆ ನೋಡೂನಂತಾ ನಾಳೆ ಹೊರಡಲಿ ಹೊತ್ತs

ಕೂಡಪಲ್ಲ ಕೊಡಗೂಸ ಅಂತದ ಆಗ ಬೇಡಿದ್ದ ಕೊಡಾಕಂತ ಮದಲಹಾಲ
ಕುಡಿಯೋ ಜಳ ಜಳಾ । ದೇವರಾದ ಮರುಳಾ ॥ಜೀಜೀ ಚೌಕ ೩॥

ಮುಂಜಾನೆ ಎದ್ದು ತಂದಿ ಮಗಳಿಗಿ ಅಂತಾನು
ನಡಿಯೆವ್ವಾ ಗುಡಿಗಿ ಹೋಗಿ ನೋಡೂನು
ನಿನ್ನ ಮಾತ ಪರೀಕ್ಷೆ ಮಾಡೂನು
ತಂದಿನ ಕರಕೊಂಡು ಹೊರಟಾಳು ತಾನು
ಗುಡಿಗಿ ಹೋಗಿ ಧ್ವನಿ ಮಾಡಿ ಕರುತಾಳು
ಕಲ್ಲಿನಾಥ ಎಲ್ಲಿ ಆದಿಯೋ ಬಾರೋ ನೀನಾ । ತೋರಿಸೊ
ಮುಖವನ್ನು ॥ ॥ ಜೀಜೀ ॥

ಮದಲಿನ ಭಕ್ತಾ ಬಂದಾನಂತ ಆ ಕಲ್ಲಿನಾಥ ಸ್ವಲ್ಪ ತಡದಾನು
ಇವರ ತಂದಿ ಒಂದೇ ಹಟಾ ಹಿಡದಾನು
ತೋರಿಸದಿದ್ದರ ಹೊಡದೇನು । ಕಲ್ಲಿನಾಥನು ಕರದಾಗ ಬರತೀನಂತಾ
ವಚನ ಕೊಟ್ಟ ಹ್ಯಾಂಗ ಬಿಡತಾನು । ಇದು ನಡತೇನು ॥ ಜೀಜೀ ॥

ನೀ ಬಾರೋ ಕಲ್ಲಿನಾಥ ಅಪ್ಪ ಬಂದಾನು
ನಿನಗ ತೋರಿಸುದಕ್ಕಾಗಿ ಕರೆ ತಂದೇನು ।
ಕಲ್ಲಿನಾಥ ಪ್ರತ್ಯೇಕ ಬಂದಾನು ಇವರ ತಂದಿ ಪಾದ ಹೋದಾನು
ಧನ್ಯನಾದೆ ದೇವಾ ಮಗಳ ಪುಣ್ಯದಿಂದ
ಇಂದ ತಪ್ಪು ಕ್ಷಮಾ ಮಾಡಂದಾನು । ನಿನಕಂದಾ ।
ನಿನ ಕಂದ

ಇಳುವು ತಂದಿ ಮಗಳಿಗಿ ಆಶೀರ್ವಾದ ಪುನಾಃ ಮಾಡಿದಾ
ತಿಳಿಸಿ ಹೇಳಿದ ವಿಷಯ ಅವರಿಗೂ ನಿಮ್ಮ ಕೀರ್ತಿ ಉಳಿಸುವೆ
ಮರಳಿಂದೆ ತಂದಿ ಮೋಕ್ಷ ಪಡದಾ ।
ಕೈಲಾಸಕ್ಕೆ ಹೋದರು ನಡದಾ । ಭಕ್ತಿಯಿಂದ ದುಡಿದಾ ।
ಅವರಿಗ ಆವಾಗ ಕೈಲಾಸದಾಗ ಸಿಕ್ಕಿತೊ ಜ್ಯಾಗಾ ॥ ಜೀಜೀ ॥

ಇಂಥಾ ಕೀರ್ತಿ ಗಳಿಸಬೇಕೊ ಒಂದಾ । ಮಾನವ ಆದಿಂದಾ ।
ವ್ಯಾಪಾರ ಭವದಿಂದಾ । ಮಾಡಿಕೋರಿ ಭೇದಾ ॥
ಈ ಅಂತ್ರಭಾಗದ ಸಂತ್ಯಾಗ ॥ ॥ ಜೀಜೀ ॥

ಏರು ವಸದಿಯೊಳು ಹೆಸರಾಂತ ಗ್ರಾಮಾ । ಇಂಗಳೇಶ್ವರ ಅಂದ್ರ ಬಂಗಾರ ನತ್ತಾ
ಪೀರಾನ ಪೌಳಿ ಝುಗಿ ಝುಗಿಸುತ
ಲೈನದಾರಿ ನಡದಂಗ ಲಾಲಸಾನ ಕವಿತಾ

ಕೂಡಪಲ್ಲ ಕೊಡಗೂಸು ಅಂಥದ ಆಗ ಬೇಡಿದ್ದ ಕೊಡಿರಂತ ಮದಲ
ಹಾಲ ಕುಡಿಯೋ
ಜಳಾ ಜಳಾ । ದೇವರಾದ ಮರುಳಾ ॥ ॥ ಜೀಜೀ ಚೌಕ ೪ ॥

ಖ್ಯಾಲಿ

ನನ್ನ ನಡತಿಯೇನ ಸುಡತಿ । ಮಾತಿನ್ಯಾಗ ಕೆಡತಿ ।
ಸುಳ್ಳೆ ಹೊಟ್ಟಿಕಿಚ್ಚ ಬಿಡತಿ । ನನ್ನ ನಡತಿಯೇನ ಸುಡತಿ ॥ ಪಲ್ಲ ॥ ಜೀಜೀ ॥

ನಮ್ಮ ಊರಾಗ ನಾ ಬೆಳದು ಹಾಡಕಿ ಅಂತಾ ನಿನಗೇಲ್ಲಿ ಅಂದಿನೊ ಖೋತಿ।
ದೋನಾಣಿ ಓಣಿಯೊಳಗ ನಿಶ್ಯಾಣ್ಯನಾಗಿ ಹಾಡತಿ ।
ನನ್ನ ನಡತಿಯೇನ ಸುಡತಿ ॥ ॥ ಜೀಜೀ ॥

ವಾಸಲೇನ ಪಾವಡರ ಬಿಡದೆ ಹಚ್ಚುವ ಸೂಳಿವ್ಯಾಳೆವಳಗಿರತಿ ।
ಸೇರಲಾರದ ಸೂಳೆಗಂಡ ನಿನ್ನಂತಾಂವಾ ಅಂದ್ರೇನು ಆಗತೈತಿ ॥ ಜೀಜೀ ॥

ಗಾದಿ ಲೇಪೊ ಲೋಡ ಮಂಚದ ಮ್ಯಾಗ ನನ್ನ ಆಸನ ಆಯಿತಿ
ನೆಟ್ಟ ಕಡದ ಹೆಂಟ್ಯಾಗ ಬೀಳೂದು ನಿನ್ನ ಭೋಗದಾಗ ಐತಿ ॥ ಜೀಜೀ ॥

ಹಾದರ ಮಾಡತಾಳ ಹಗಲೆಲ್ಲಾ ಹಾಡಿ ಹಾಡಿ ಹೇಳತಿ।
ಇನ್ನಮ್ಯಾಗ ನೀನು ಕುಂಡಿ ಹಡಸುದ ಕಲಿಯುದ ಖರಚ ಹೋಗತೈತಿ ॥
॥ ಜೀಜೀ ॥

ನಾನು ಗರ್ಭಿಣಿ ಆದರ ನಿನ್ನಹಂತಾ ತುಣ್ಯಪ್ಪ ಆಗಿದ್ದು ಉತ್ಪತ್ತಿ
ತಾಯಿ ಸರಿ ಹೆಣ್ಣ ಮಕ್ಕಳಿಗಿ ಅಂದರ ತಿಂದಹ್ವಾದಿ ಮೂಲತಿ ।
ನನ್ನ ನಡತೆಯೇನ ಸುಡತಿ ॥ ॥ ಜೀಜೀ ॥

ಸುತ್ತ ದೇಶದೊಳಗ ಇಂಗಳೇಶ್ವರ ಊರ ಐತಿ ಭರತಿ ।
ಕೂಸ ಲಾಲಸಾ ಹಾಡಿ ಹೇಳತಾನ ಹಾಕಿ ಹೊಸಾ ದರತಿ ॥ ಜೀಜೀ ॥
ನನ್ನ ನಡತಿಯೇ ಸುಪತಿ ॥ ॥ ಜೀಜೀ ॥

ಮಣ್ಣಿನ ಪದದ ಜವಾಬ

ಮಾಯ ಮಣ್ಣಿಗಿ ಬೆಳಸಿ ಹಾಡಬ್ಯಾಡಾ । ಮಾಯ ಕಟ್ಟೈತಿ ನಮ್ಮ ಜಗದಾಗ।
ಮಣ್ಣಾ ಮಣ್ಣಾ ಅಂತ ಹಕಾ ಹೊಡಿಬ್ಯಾಡ ಮಣ್ಣ ಹುಟ್ಟೇದ ನಮ್ಮ
ನೀರಾಗ ॥ ॥ ಜೀಜೀ ॥

ನಿತ್ಯ ನಿರಂಜನ ಹಿಡದು ನೋಡ ನೀನು । ಯಾರು ಇದ್ದಿದಿಲ್ಲಾ ಆವಾಗ ।
ಬ್ರಹ್ಮಾಂಡ ತತ್ತಿ ಹುಟ್ಟಿ ಬಂದದ್ದ ಅನಂತ ನಾಮ ಯುಗದಾಗ ॥ ಜೀಜೀ ॥

ಐತೀ ಕಡಿ ನಿನ್ನ ಭೂಮಿ ಹುಟ್ಟೇದ ಈಗ ।
ಮಣ್ಣ ರಾಜೆನೆ ಭೂ ಯುಗದಾಗ ।
ಬಸವೇಶ್ವರರು ಹೆಪ್ಪ ಕೊಟ್ಟಾರು ನಿಂತ ನೀರಿನ ತೆರಿಮ್ಯಾಗ ॥ ॥ ಜೀಜೀ ॥

ಇಳುವು ತ್ರೇತಾಯುಗದಾಗ ದೇವ ದೇವತೇರು ಮಾಡ್ಯಾರ ಸೃಷ್ಠಿ ।
ಇವರ‍್ಯಾರು ಜಲದೊಳು ಪುಟ್ಟಿ ॥ ॥ ಜೀಜೀ ॥

ಆ ತ್ರೇತಾಯುಗದಾಗ ಹಣಮಾ ಜಲಕ ಸೇತುವೆ ಕಟ್ಟಿ ।
ಲಂಕಾ ಪಟ್ಟಣ ಮಾಡಿದಾನೊ ಲೂಟಿ ॥ ॥ ಜೀಜೀ ॥

ಆ ದ್ವಾಪರಾದಾಗ ಕೌರವರು ಮಾಡಿದಾರು ಕಪಟ ।
ಧರ್ಮ ವನವಾಸಕ್ಕ ಹೋದಾನ ನಡಕಟ್ಟಿ ॥ ॥ ಜೀಜೀ ॥

ಏರು ಕರ್ಣನ ಹಿಡದು ಆರಮಂದಿ ಪಾಂಡವರು
ಹುಟ್ಟಿದ್ದಿಲ್ಲಾ ನಿನ್ನ ಮಣ್ಣಾಗ ।

ಕೂಡಪಲ್ಲ ಮಣ್ಣಾ ಮಣ್ಣಾ ಅಂತ ಹಕಾಹೊಡಿಬ್ಯಾಡೊ ಮಣ್ಣ ಹುಟ್ಟೇದ
ನಮ್ಮ ನೀರಾಗ ॥ ॥ ಜೀಜೀ ॥ ಚೌಕ ೧ ॥

ಬ್ರಹ್ಮ ವಿಷ್ಣು ಮಯಸಾಸೂರರು ಹುಟ್ಟಿ ಬಂದಿಲ್ಲಾ ನಿನ್ನ ಮಣ್ಣಾಗ ।
ಜಲದೊಳು ಅವರು ಜನಿಸಿ ಬಂದರು ಕೇಳಿಬಾರೊ ನಿನ್ನ ಗುರುವೀಗಿ ॥
ಶರಣ ಸಂತತಿ ಮಣ್ಣ ಕೊಡರೆಂತ ಹೇಳತಿದಿ ॥ ॥ ಜೀಜೀ ॥

ಬಗಳ ಬ್ಯಾಡ ನೀನು ಬಲ್ಲಂಗ ॥
ಭಕ್ತಿಲಿಂದ ದ್ರವ್ಯಸಹಿತ ವೈದರು ಮರಣಾ ತಟ್ಟಿತೊ ಮಾರ್ಕಂಡೇಗ ॥
॥ ಜೀಜೀ ॥

ಭೂಮಿ ಗಂಡ ಸೆರತ ಮಾಡಿ ಮೌಲಾಲಿ ಹಿಚಕಿದಾನೊ ತೆಕ್ಯಾಗ ।
ಮಣ್ಣ ಕೊಡಲಿಲ್ಲಾ ನಮ್ಮ ಮೌಲಾಲ ಶರಣಗ ।
ಕೊಟ್ಟಾರ ಒಂಟಿ ತೊರಬತ್ತನ್ಯಾಗ ॥ ॥ ಜೀಜೀ ॥

ಇಳುವು ಅಂಡಜಾ ಪಿಂಡಜಾ ಉದಜ್ಯಾವಿ ಕೇಳ ಹೆಸರಾ ।
ಜಲವಿಜ್ಯಾ ಅಂದರೆ ನೀರಾ ॥ ॥ ಜೀಜೀ ॥

ಇರಬಿ ಎಂಬತ್ತು ಕೋಟಿ ಇದರಾಗ ಆದು ತೈಯಾರಾ ।
ಬಿಂದು ಅಂದರ ತಿಳಿಬೇಕ ನೀರಾ ॥ ॥ ಜೀಜೀ ॥
ಲಕ್ಷದ ಮ್ಯಾಲ ತೊಂಬತ್ತಾರು ಸಾವಿರ ಜಂಗಮರಾ ।
ಅವರು ನಿರಂಜನ ಕೂಡಿದಾರಾ ॥ ॥ ಜೀಜೀ ॥

ಏರು ಹೆಣ್ಣ ಹೊನ್ನ ಮಣ್ಣಾ ತನಗ ತಿಳಿದವಾ ಹುಟ್ಟಿ ಬಂದಿಲ್ಲಾ ನಿನ್ನ ಮಣ್ಣಾಗ ।

ಕೂಡಪಲ್ಲ ಮಣ್ಣಾ ಮಣ್ಣಾ ಅಂತ ಹಕಾ ಹೊಡಿಬ್ಯಾಡ ಮಣ್ಣ ಹೆಟ್ಟೇದ ನಮ್ಮ
ನೀರಾಗ ॥ ॥ ಜೀಜೀ ॥ ಚೌಕ ೨ ॥

ಜೀವ ಶಿವಾಜ್ಞನ ಮೂವರು ಮನಸ ಕೂತದ ನೆದರಿನ ಮ್ಯಾಗ
ಹಿಂತಾ ದೀನಸಾ ಹೆಂಗ ಮಣ್ಣಾಗ ಇರತದ
ಹೆಂತಾ ಗುರು ಕಲಿಸ್ಯಾನ ನಿನಗ ॥ ॥ ಜೀಜೀ ॥

ಬ್ರಹ್ಮಜ್ಞನಯೆಂಬು ಬೆಳ್ಳಿ ಬಂಗಾರ । ಗಳಿಸಿಕೇರಿ ನೀವು ಜಗದಾಗ
ಗುರುಸ್ಮರಣೆಯೆಂಬುವ ವಾಸಾ ಊದಿನ ಕಡ್ಡಿ ಬಸ್ಮಮ್ಮ ಇರಬೇಕು
ನಿಮ್ಮ ಮಾವಾಗ ॥ ॥ ಜೀಜೀ ॥

ಇಪ್ಪತ್ತೊಂದ ಸಾವಿರದಾ ಆರನೂರ ಜಪ ತಪಗಳು
ಹುಟ್ಟಿ ಬಂದಿತಾ ನಿನ್ನ ಮಣ್ಣಾಗ ।
ಗಾಳಿಮ್ಯಾಗ ಸವಾರಿ ಆಗೇದ ರುದ್ರಾಕ್ಷಿ ಜಪ ಮಣ್ಣಾದಾರಾಗ ॥ ಜೀಜೀ ॥

ಇಳುವು ಡೋಣಿ ಸಾಲದಾಗ ಹತ್ತರಕಿಹಾಳ ಹೆಸರಾತು ದೇಶದ ಮ್ಯಾಗು
ಅಲ್ಲಿ ಅಕಬರ ಸಾಹಿಬಾ ನೆನದಾ ಅಸಲ ಕರೆ ಅವನ ಜಾಗ
ಅವರು ಇರತಾರು ನಮ್ಮ ಹಿಂಬಾಗ ॥ ॥ ಜೀಜೀ ॥

ವಸ್ತಾದ ಮೊದಿನಾಥಗದು ಹೇಳಿನ ಈ ಭಾಗ
ಒಂದಿನಾ ಆಗುದು ನಿರಬಲ್ಲಿಗ ॥ ॥ ಜೀಜೀ ॥

ಡಪ್ಪ ಝಾಂಜ ಸುರತಿ ನಾದಾ ಸ್ಮರಣಿ ಮಾಡತಾವ ಈಶ್ಯಾಗ ।
ಮಣ್ಣಾ ಮಣ್ಣಾ ಅಂತ ಹಕಾ ಹೊಡಿ ಬ್ಯಾಡ ಮಣ್ಣ ಹುಟ್ಟೇದ ನಮ್ಮ
ನೀರಾಗ ॥ ॥ ಜೀಜೀ ॥ ಚೌಕ ೩ ॥

ಹೆಣ್ಣಿನ ಜವಾಬ

ಕೂಡಿದಂತಾ ಸಭಾದಾಗ ಹಾಡಿ ನಾನು ಹೇಳತಿನಿ
ದೈವ ಇದ್ದಲ್ಲಿ ದೇವರ ಅಂವಾ ಹೆಂಗ ಇರುತಾನಾ ।
ಒಬ್ಬ ದೈವ ಉಳ್ಳವನ ದೈವದಲ್ಲಿ ದೇವರ ಇದ್ದಾನಾ ।
ಇರಲಾರದ ಧರಿದ್ರನ ದೈವದಲ್ಲಿ ದೇವರೆಲ್ಲಿ ಹಾನಾ ।
ಪ್ರಯತ್ನ ಪಡಿಯದ ಹೊರತು ಪರವಸ್ತು ಸಿಗುದಿಲ್ಲಾ
ಅರವಿನೊಳು ಗುರ ಐಕ್ಯ ಆಗ್ಯಾನಾ ॥ ॥ ಜೀಜೀ ॥

ಭೂಮಿ ಗಂಡಾ ಮಳಿರಾಜಂತ ಮೇಳ ಮಾಡಿ ಹೇಳತೀರಿ
ಗಂಡ ಅಂತ ತಿಳಿದಿರೇನೊ ಗಂಗಾದೇವಿನಾ ।
ಸೂರ್ಯ ಚಂದ್ರ ಚಿಕ್ಕಿ ಅಚ್ಚ ಹೆಣ್ಣಿನ ಚಿನ್ನಾ
ಪಂಚಭೂತಗಳೇ ಪ್ರಥಮದಲ್ಲಿ ಹೆಣ್ಣಿನ ಸಮಾನಾ
ಐದು ಮಂದಿ ಮುತ್ತೈದೇರ ನಿತ್ಯ ನಿನಗ ಉಣಸ್ತಾರ
ಪತ್ತ ಕಳಕೊ ಬ್ಯಾಡ ಗೊತ್ತಿರಲೊ ಸ್ವಾನಾ ॥ ॥ ಜೀಜೀ ॥
ಮುತ್ತೈದಿ ಮುಂಡಿ ಮ್ಯಾಲಿನ ಸೆರಗಾ
ಕುಂಡಿಮ್ಯಾಲ ಬಂದೈತಂತ ।
ಕಂಡ ಕಂಡಂಗ ಹೇಳತೀರೊ ಭಂಡತಾನಾ ।
ಉಂಡ ಮನಿ ತುಂಡ ಅನ್ನು ಗಂಡಸಗ ಏನ ಕೂನಾ ।
ದಂಡಿ ತೊಂಡಲ ಕಟ್ಯಾಳ ಮಾಂಗಲ್ಯವತಿ ಇಲ್ಲಾ ಅನುಮನಾ ।
ಗರತ್ಯಾರಿಗಿ ಗುರು ಇಲ್ಲಾ ಪತಿವ್ರತ್ಯಾರಿಗಿ ಪಾಪಿಲ್ಲಾ ।
ನೀಚ ಗಂಡಸರಿಗಿ ನಾಚಿಕಿಲ್ಲೊ ನರಕ ಮಲೀನಾ ।
ಮನವಿನ ಧೂಳಗ ಮನಾ ಸಿಲ್ಕಿ ನೆಲಿ ನಿಮಗ ಸಿಕ್ಕಿಲ್ಲಾ
ಉಲಿವುದಕಿತೆಲ್ಲಿ ಹಿಡೆವರ ಚ್ಯಾಲ ಹೌದೇನಾ ।
ಕಡಿಲಾರದೆ ಸತ್ತಾರಂದಿ ಬಿಡೇಕ ಬಿದ್ದು ಬೆಳತಾನಾ ।
ಸತೀನ ಬಿಟ್ಟು ಪರಸತಿಗಿ ಹೋಗಾಂವ ಪಶುವಿನ ಸಮಾನಾ ।
ಗಂಡಸರು ಹಾದಿಮ್ಯಾಗ ಇದ್ರ ಹಾದರ ಹ್ಯಾಂಗಾಗತಾವ
ಹೋಗಾವರ ಹೋಗದಿದ್ದರ ಮಾಡುದು ಮಾಡುದು ಮತ್ತೇನಾ ॥ ಜೀಜೀ ॥

ಇಳುವು ಸರಿಯಾಗಿ ನಡದರ ಸಾಯುಜ್ಯ ಪದವಿ ಸುಖಾಲಾ ।
ಯಾಕ ಕಮ್ಮಿ ಆದಿತೊ ಮಳಿಗಾಲಾ ॥ ॥ ಜೀಜೀ ॥
ಅತ್ತೀ ಹಿತದಿಂದ ಸ್ವತಾ ನಿನ್ನ ಹೊಲ್ದಾಗ ದುಡಿಬೇಕೊತೋಲಾ ।
ಮಂದಿ ಹೊಲಕ ಮನಸಿಟ್ಟು ನಿಂದೇ ಕೆಡುಕೊಂಡ ಕಡಿಸಾಲಾ ॥ ಜೀ ॥
ಮಂದಿ ಹೊಲಾ ಮಾಡಿದರ ಮನಿತಾನಕ ಎಂದು ಹಿಂಗುದಿಲ್ಲಾ ।
ಮಂದಿ ಹೊಲ್ದಾಂದು ಮಂದಿಗಾಯಿತು ನಿಂದ ದೀಪಕ ದಿಕ್ಕಿಲ್ಲಾ ॥ ಜೀ ॥

ಏರು ಪಾಳೆದಾಗ ಹೊಲ ಉಳಿತು ಗಳೆ ನೆಟ್ಟಗಾಗಲಿಲ್ಲಾ
ಪಳೆ ಹೊಡೆದೆಂ ಒಳೇ ಬೆಳೆ ಬರುವುದ ಘನ್ನಗನಾ
ಸತ್ಯಾತ್ಮ ಶರಣ ಭಿತ್ತಿದಂತಾ ಕೂನಾ ।
ಉಪದೇಶವೆಂಬ ಭೀಜಾ ಬಿತ್ತಿ ಭಕ್ತಿಸ್ತನಾ ॥ ॥ ಜೀಜೀ ॥
ಕೂಡಪಲ್ಲ ಪ್ರಯತ್ನ ಪಡಿಯದ ಹೊರತು ಪರವಸ್ತು ಸಿಗುವದಿಲ್ಲಾ ॥
॥ ಜೀಜೀ ॥ ಚೌಕ ೧ ॥

ಅರುಯೆಂಬ ಗುರು ನಿಮ್ಮ ಮನಿದೇವರ ಇದ್ದಾನು
ಅವಗ ಬಿಟ್ಟು ಮರ್ತ ಹಿಡದ್ರಿ ಮಂದಿ ಕಾಲಾ ।
ಹಿಂಗ ಅಗ್ಗ ಇಲ್ದ ನಡದು ಅಗ್ಗಾದು ನಡಿಯಲ ।
ಮಂದಿಗಿ ನಿಂದಾ ಆಡಿ ಅಡಿ ಕೆಟ್ಟಿತು ನಡಿ ಬರಲಿಲ್ಲ ।
ಅಡಿ ಉಡಿ ಇಲ್ದ ಮೃಢ ಹರನ ನೋಡದೆ
ಬಾಡಿಗಿ ಎತ್ತಾಗಿ ದುಡದು ಭೂಮಿ ಮೇಲಾ ॥ ॥ ಜೀಜೀ ॥

ಏಳ ಜನ್ಮ ತಿರಗಿ ಮತ್ತ ಮಾನವ ಜನ್ಮಕ ಬಂದಮ್ಯಾಗ
ಇದು ಏಳೂರು ಸೀಮಿ ತಿಳಿಬೇಕು ಕಡಿ ಕೌಲಾ
ಮಾಯಾ ಎಂಬುವ ಗಾಯ ಮಾಯಲಿಲ್ಲಾ –
– ಸೋರಿತ್ತು ಸದಾ ಕಾಲಾ ।
ಕಾಕ ಗುಣಾ ಎಂಬ ಕಾಗಿ ಕಚ್ಚುದು ಮ್ಯಾಲಾ ಮೇಲಾ ।
ತಾಳಿ ಬಿದ್ದು ಗೋಳ ನಡಿತು ಹೇಳಲಾರದೆ ನೆಲಕ ಬಿತ್ತು
ಹೇಳ್ಲಾರ್ದೆ ಹಾಳಿಗಿ ಹೊಯಿತು ಕಾಳ ಬಿಡಲಿಲ್ಲಾ ॥ ಜೀಜೀ ॥

ಮಾನವ ಜನ್ಮಕ ಬಂದು ಏಳೂರ ಕಾಗಿ ಎಬ್ಬಿಸುತ ನಡದ ಬೀರತಾನ
ತಿರಗಿ ಮಾನವ ಜನ್ಮಕ ಬರುದು ಬರೋಸಾ ಉಳ್ಳಿಲಿಲ್ಲಾ ।
ಮಾಯದ ಗಾಯ ಮಾಯಿಸಿಕೊಂಡ್ರು ಕಾಗಿಸುಳು ಇಲ್ಲಾ
ಇದನ್ನರಿತು ಮಹಾತ್ಮರು ಮಾನವ ಜನ್ಮ ಕಳಿಲಿಲ್ಲಾ
ಜನನ ಮರಣಗಳು ನೀಗಿ ಮನಿಜರನ್ನ ಗಮನ ಇಟ್ಟು
ಅಕ್ಕಮಹಾದೇವಿ ಮುಕ್ತಿ ಪಡದಾಳ ಜಾಹೀರ ಜಗವೆಲ್ಲಾ ॥ ಜೀಜೀ ॥
ಇಳುವು ಅಂಗ ಸತಿ ಪ್ರಾಣಲಿಂಗ ಪತಿ ಶರಣರ ಒಗಿತಾನಾ ।
ಮುಂದ ಪಡದು ಮೋಕ್ಷದ ಸಂತಾನ ॥ ॥ ಜೀಜೀ ॥

ಹುಟ್ಟಿ ಬಂದು ಸತ್ತ ಹೋದ್ರು ಅಂದಿಗಿ ಇಂದಿಗಿ ಎಷ್ಟ ಜನಾ ।
ಸೃಷ್ಟಿ ಈಶ್ವರ ಸಲವೇನಂತಿ ದುಡದಷ್ಟ ಪಗಾರ ಕೊಟ್ಟಾನಾ ॥ ಜೀಜೀ ॥

ಕಷ್ಟದಂತೆ ಫಲಾ ದೊರಿಯುವದು ಭೋಗದ ಬೋಜನಾ ।
ಮಾಡಿದ್ದುನ್ನೊ ಮಾರಾಯ ಉಪಕಾರ ಯಾರಿಗಿ ಹೇಳತಿ ಇದನಾ ॥
॥ ಜೀಜೀ ॥

ಏರು ಉಪಕಾರ–ಗೇಡಿಗಿ ನೆಪ್ಪ ಇಲ್ಲಾ ಅಪ್ಪಾ ಅನ್ನುದು ಮರೆಯಲಿಲ್ಲಾ ।
ಆದಿ ಮಾಯಿ ತಾಯಿದಿಂದ ತಂದಿ ಬಂದಾನಾ ।
ನಿನಗ ಗೊತ್ತೆಮಂದಿ ಹುಟ್ಟಿದ ಕಂದಾ ನಿನ್ನಾ ॥
ತಾಯಿತಂದಿಲಿಂದ ಬಂದು ಕೂಡಿದಿ ಮಂದಿ ಮಕ್ಕಳನಾ ॥ ಜೀಜೀ ॥
ಕೂಡಪಲ್ಲ ಪ್ರಯತ್ನ ಪಡಯದ ಹೊರತು ಪರವಸ್ತು ಸಿಗುದಿಲ್ಲಾ ॥ ॥ ಜೀಜೀ ॥
॥ ಚೌಕ ೨ ॥

ಏರು ನಿರಾಕಾರನೀಗಿ ನೀನು ಆಕಾರಕ ಸಾಗಿ ಬಂದಿ
ಸಾವಕಾರ ಅನಿಸಿಕೊಂಡು ಸಂಸಾರದಾಗ ।
ವಿಷ್ಣುನ ಸತಿ ಶ್ರೇಷ್ಠ ಅಲ್ಲೇನೊ ಲಕ್ಷ ನಿನಗಾ ।
ಆ ಲಕ್ಷದಿಂದ ಲಕ್ಷ್ಯಾದಿಶ್ಯಾ ಅನಿಸಿ ಲೋಕದಾಗ ।
ಗಂಟ ಮಾಡಿ ಮಾಡಿ ಬ್ರಮಿಗೆಟ್ಟೊ ಬರಿದಾಯಿತೋ
ನಾ ಯ್ಯಾರು ಅನ್ನುದ ಲಿಲಾವಳಗ ॥ ॥ ಜೀಜೀ ॥
ಅನ್ನ ಹಾಕಿ ಪುಣ್ಯ ಪಡದ ಏನನಾದೇನಂತಿದಿ
ಅನ್ನಾ ನೀರ ಕೊಟ್ಟವರನ ಮರತಿ ಮದಲೀಗಿ ।
ನಂದು ನಂದು ಅಂತ ನಡದಿ ಒಂದ ದಿನಾ ನರಕದಾಗ ।
ನೀನು ಗಳಿಸಿಟ್ಟ ಗಂಟಾ ಬರಲಿಲ್ಲಾ ನೀನು ಹೊಂಟ ಹೋಗಾಗ ।
ಎಷ್ಟ ಮಂದಿ ಬಂಧು ಬಳಗಾ ಬೆನ್ನ ಹಿಂದ ಯಾರು ಬರಲಿಲ್ಲಾ
ಒಂದೇ ಹೋಗುದಾತ ನೀನು ಬಂದಂಗಾ ॥ ॥ ಜೀಜೀ ॥
ಬುದ್ದಿಗೇಡಿ ಮಂದಿಗಿ ಅಂತೂ ಗೂದಿ ಮಾವುತಾನಾ ।
ಒದ್ದ್ಯಾಡಿದರೂ ಬಿಡುವದಿಲ್ಲಾ ನಿದ್ರಿ ಗಣ್ಣ್ಯಾಗ ।
ಮುದ್ದಿ ಮಾಡಿ ಒಗಿತಾನ ಬಿದ್ದು ಸುಡುವ ಬೆಂಕ್ಯಾಗ ।
ಎದ್ದು ಹೋದೇನಂದ್ರ ಸಾಧ್ಯ ಇಲ್ಲಾ ಮದ್ದಿನ ಮನಿಯಾಗ ।
ಆಕಾರಕ ಬಂದ ಮ್ಯಾಲ ಮೋಕ್ಷ ಪಡಿಬೇಕು
ಶಿಕ್ಷಾ ಕೊಡುವದಿಲ್ಲ ಯಮಾ ನಿಮಗ ॥ ॥ ಜೀಜೀ ॥
ಇಳುವು ನೀತಿವಂತರಾಗಿ ನಡಿರೆಂದು ಹೇಳುವೆ ಈ ಮಾತಾ ।
ಮಾತಾ ಕೇಳಿರಿ ಮುತ್ತಿನ ಕಿಮ್ಮತ್ತಾ ॥ ॥ ಜೀಜೀ ॥
ಆತ್ಮ ಪರಮಾತ್ಮ ನಮ್ಮಲ್ಲೇ ಇರತಾನ ಬೆರತಾ ।
ಮರವಿಗಿಬಿದ್ರು ಸತ್ತರಿ ಅವನ ಮರತಾ ॥ ॥ ಜೀಜೀ ॥
ಇಳೆಯೊಳು ಇಂಗಳೇಶ್ವರ ಈಶ್ಯಾನ ನಾಮ ಭಜಿಸುತಾ ।
ಕೂಸ ಲಾಲ ಮಾಡಾಂವ ಹಿಂತಾ ಕವಿತಾ ॥ ಜೀಜೀ ॥
ಏರು ಸಿಕಂದ್ರ ಬಾದಾಶಾನ ಚರಣಕ ಎರಗಿ ಭಕ್ತಿ ಇಟ್ಟ ನಡಿಬೇಕ ಕಡಿತಾನಾ
ಹಂತಾ ನಿನ ಭಕ್ತರಿಗಿ ಸಹಜ ಕೊಡತಾನಾ ।
ಅವರಿಗೆಂದೆಂದಿಗೂ ಬರಲಾರದು ಬಡತಾನಾ ॥ ॥ ಜೀಜೀ ॥
ಕೂಡಪಲ್ಲ ಪ್ರಯತ್ನ ಪಡಿಯದ ಹೊರತ ಪರವಸ್ತು ಸಿಗುದಿಲ್ಲಾ ॥ ಜೀ ಚೌ ೩ ॥

ಗುರುವಿನ ಪುತ್ರನಾಗಿ ಉತ್ರ ಸರಿಯಾಗಿ ಹೇಳತೀನಿ

॥ ಸಖಿ ॥

ಬಡದು ಕಲಸಿದರ ಎಂದಿಗೂ ಬರಲಾರದು
ಪಡದು ಬಂದ್ರ ಎಂದಿಗೂ ಸರಿಲಾರದು
ಹಿಡದುಬಿಟ್ಟು ಹಡಬಿಟ್ಟಿ ಗಳಿಗಿ ಯಾವ ಸುಖಾದೊರಿಲಾರದು ॥ ಗೀಗೀ ॥

ಬುದ್ಧಿಗೇಡಿಗಿ ಬದಿಲೆ ಇದ್ರುತೋರಲಾರದು
ಅದು ಅಲ್ಲಿಗೆ ಪೈಲೇ ಮಾರಲಾರದು
ಸದ್ಗುರುನಾಥ ಬಂದು ಸನ್ಮಾರ್ಗ ತೋರಿಸಿದರ ಉಪಕಾರ ಮರಿಲಾರದು ॥
॥ ಗೀಗೀ ॥

ಬಳಿಇದ್ರ ಗುರು ಭಯ ಭೀತಿ ಇರಲಾರದು
ಮರಣ ರಹಿತಗ ಮಾಯಾ ಸೇರಲಾರದು
ಗುರುಸ್ಥಳ ಇಂಗಳೇಶ್ವರ ಲಾಲಸಾಹೇಬಗ ಕೋಟಿ ಶತಕೋಟಿ ಆನಿ
ಹೊರಲಾರದು ॥

॥ ಪದಾ ॥

ಒಂದೂರಲ್ಲಿ ಒಬ್ಬ ಬ್ರಾಹ್ಮಣ ಇದ್ದಾನು ।
ಅವರ ಕುಲದಲ್ಲಿ ಹೆಚ್ಚೀನ ಶೀಲಾ ।
ಅವನ ಹೊಟ್ಟೀಲೇ ಹೆಣ್ಣ ಮಗಳೊಬ್ಬಳು ಇದ್ದಾಳು ।
ಆಕಿ ನಿಷ್ಟಾ ದೇವರ ಮ್ಯಾಲಾ ॥ ॥ ಗೀಗೀ ॥

ಬ್ರಾಹ್ಮಣರ ಮನಿಸುತ್ತ ಮುಸಲ್ಮಾನರ ಮನಿ ಇತ್ತು ।
ಲಿಂಗವಂತರು ಅಲ್ಲಿ ಇದ್ದಿದ್ದಿಲ್ಲಾ ।
ಮುಸಲ್ಮಾನ ಹೆಣ್ಣ ಹುಡುಗಿಯರ ಕೂಡಾ ಬ್ರಾಹ್ಮಣ ಹುಡಿಗಿ
ಗೆಳತಾನಾ ॥
ಮುಸಲ್ಮಾನ ಹುಡುಗರ ಪದ್ಧತಿ ಮಾತಿಗೊಮ್ಮಿ ॥ ಗೀಗೀ ॥

ಅನ್ನುದು ಬಿಸ್ಮಿಲ್ಲಾ ।
ಬಿಸ್ಮಿಲ್ಲಾ ಅನ್ನುವ ಶಬ್ದಕೇಳಿ ಆ ಬ್ರಾಹ್ಮಣರ ಹುಡಿಗಿ ಕಲ್ತಾಳಲಾ ॥ ಗೀಗೀ ॥

ಚ್ಯಾಲ ಬಿಸ್ಮಿಲ್ಲಾ ಅನ್ನುವ ಶಬ್ದ ಮಾಡಿಕೊಂಡಾಳ ಮುಖಪುಟ
ಆ ಅಲ್ಲಾನ ಮ್ಯಾಲ ದೃಢಾ ಇಟ್ಟಾ॥ ॥ ಗೀಗೀ ॥

ತನ್ನ ಮನ್ಯಾಗ ಹೋಗಿ ನಮಾಜ ನಡಿಶ್ಯಾಳ ಐಟಾ ।
ಆಕಿ ತಂದಿಗಿ ಬಂದಿತ್ತು ಸಿಟ್ಟಾ ॥ ॥ ಗೀಗೀ ॥

ಬ್ರಾಹ್ಮಣರೆಂದರೆ ನಮ್ಮ ಕುಲಾ ಬಾಳ ಶ್ರೇಷ್ಟ ।
ಈಕಿ ಮಾಡುದು ಹೀನ ಕೃತಿ ಭ್ರಷ್ಟಾ॥ ॥ ಗೀಗೀ ॥

ಏರು ಬ್ರಾಹ್ಮಣ ಆಗ ತನ್ನ ಮಗಳಿಗಿ ಕಟ್ಟಿ ಹೊಡದ ಕೈಕಾಲಾ
ಕೂಡಪಲ್ಲ ಬ್ರಾಹ್ಮಣರ ಓಣ್ಯಾಗ ಹಾರುರ ಹುಡಿಗಿ ಅಂದಿತೊ ಬಿಸ್ಮಿಲ್ಲಾ॥ ಗೀಗೀ ॥
॥ ಚೌಕ ೧ ॥

ಏರು ಬಿಸ್ಮಿಲ್ಲಾ ಅನ್ನುತ ಮುಕ್ಕ ಹಾಕತಾಳು। ತಾನೇ ತಿರಗುವದು ಬೀಸುಕಲ್ಲಾ।
ಇಮ್ಮಣ ಜೋಳಾ ಒಂದೇ ಘಳಿಗ್ಯಾಗ ಬೀಸಿ ।
ತುಂಬಿ ಇಟ್ಟಾಳು ಅಂದs ಬಿಸ್ಮಿಲ್ಲಾ ॥ ॥ ಗೀಗೀ ॥

ಮಗಳು ಆಗ ಕಾಲಬಿದ್ದು ಹೇಳತಾಳ
ಅಲ್ಲಾನ ಹೊರ್ತ ದೇವರಿಲ್ಲಾ ॥ ॥ ಗೀಗೀ ॥

ಚ್ಯಾಲ ಇಷ್ಟ ಕೇಳಿ ತಂದಿ ಆದ ಉನ್ಮತ್ತಾ ।
ಕುಂತ್ರ ನಿಂತ್ರ ಬಿಸ್ಮಿಲ್ಲಾ ಅನ್ನುತಾ ॥ ॥ ಗೀಗೀ ॥

ಬ್ರಾಹ್ಮಣ ತನ್ನ ಮನದಾಗ ತಗದಿದ್ದೊಂದ ಬೇತಾ ।
ವಿಷಾ ಹಾಕಿ ಮಗಳಿಗಿ ಕೊಲ್ಲಬೇಕಂತಾ ॥ ॥ ಗೀಗೀ ॥

ಬಟ್ಟಲ ತುಂಬಿ ವಿಷಾಹಾಕಿ ಕೊಟ್ಟಾ ಕುಡಿಯಂತಾ ।
ಬಿಸ್ಮಿಲ್ಲಾ ಅನ್ನುತ ಕುಡದಾಳು ಆದಿತೊ ಅಂಬ್ರುತಾ ॥ ॥ ಗೀಗೀ ॥

ಏರು ವಿಷಾ ಹಾಕಿದರು ಸಹಿತ ಏನೂ ಆಗಲಿಲ್ಲಾ ।
ಅಲ್ಲಾ ಇದ್ದಾನು ಆಕಿ ತಲಿಮ್ಯಾಲಾ ।
ಕೂಡಪಲ್ಲ ಬ್ರಾಹ್ಮಣರ ಓಣ್ಯಾಗ ಹಾರೂರ ಹುಡಿಗಿ ಅಂದಿತೋ ಬಿಸ್ಮಿಲ್ಲಾ ॥
॥ ಗೀಗೀ ॥ ಚೌಕ ೨ ॥

ಏರು ಬ್ರಾಹ್ಮಣs ಆಗ ಮಂದಿ ಮುಂದ ಅಂತಾನರಿ ।
ವಿಷಾ ಹಾಕಿನಿ ಇನ್ನ ಮ್ಯಾಲ ಉಳಿಯುವದಿಲ್ಲಾ ।
ಬ್ರಾಹ್ಮಣ ಅಂತಿರಿ ನಾನು ಕಂಡೆ ಮಗಳಿಗಿ
ಸಾವಬರವಲ್ಲು ಮಾಡಬೇಕ ಹ್ಯಾಂಗ ॥ ॥ ಗೀಗೀ ॥

ಅದೇ ಉರಾಗೊಬ್ಬ ಹಾಂವಗಾರ ಬಂದಿದ್ದಾ ।
ಹಾಂವಗಾರಗ ಹೇಳತಾನ ಆವಾಗ ।
ಒಂದ ಜ್ಯಾತ ನಾಗರ ಹಾಂವ ತಂದ ಕೊಟ್ರ
ಬಹುಮಾನ ಕುಡತೇನ ನಾನು ನಿನಗ ॥ ॥ ಗೀಗೀ ॥

ಆಗ ಹಾಂವಗಾರ ಅಡವಿಯಲ್ಲಿ ಹೋಗಿ
ಹಾಂವ ಹಿಡದಾನ ಒಂದ ಅಡಿವ್ಯಾಗಾ
ಹಾಂವ ತಗೊಂಡು ಮನಿಗಿ ಬರುದರೊಳಗ
ಮಗಳು ಇದ್ದಿದ್ದಿಲ್ಲ ಮನಿಯ್ಯಾಗ॥ ॥ ಗೀಗೀ ॥

ಹಾಂವ ತಂದು ಪಟಿಗ್ಯಾಗ ಇಡಿಸಿ
ಕೀಲಿ ಜಡಿಸಿ ಬಿಟ್ಟಾನು ಬೇಗ ।
ಹಾಂವಗಾರ ರಕುಮ ತಗೊಂಡು ಹೋಗುದರೊಳಗ
ಮಗಳು ಬಂದಾಳು ಅದೇ ಕ್ಷಣದೊಳಗ ॥ ॥ ಗೀಗೀ ॥

ಚೌಕ ಮಗಳಿಗಿ ಕರದ ಹೇಳ್ಯಾನ ಆಕಿಯ ಹುಜರಾ
ನಿನಗ ಮಾಡಿಸಿನಿ ವಸ್ತಾ ವಜ್ಜರಾ ॥ ॥ ಗೀಗೀ ೧ ॥
ಪ್ರೇಮದಿಂದ ನೋಡಬೇಕಂತಾಳ ಜರೂರಾ ।
ಆಗ ಕೇಳರಿ ಅಲ್ಲಾನದು ಆಸರಾ ॥ ॥ ಗೀಗೀ ೨ ॥
ಬಿಸ್ಮಿಲ್ಲಾ ಅನ್ನುತ ಕೈ ಹಾಕ್ಯಾಳು ಮುಜರಾ ।
ಹಾಂವ ಹೋಗಿ ಕೈಯಾಗ ಬಂದಿತೋ ಬಂಗಾರದ ಗಜರಾ ॥
॥ ಗೀಗೀ ॥ ಚೌಕ ೩ ॥

ಏರು ಬಿಸ್ಮಿಲ್ಲಾ ಅನ್ನುತ ಬಂಗಾರ ಮಾಲಿ ।
ಕೊರಳಲ್ಲಿ ಹಾಕಿಕೊಂಡಾಳೋ ಅಸಲಾ ॥

ಕೂಡಪಲ್ಲ ಬ್ರಾಹ್ಮನರ ಓಣ್ಯಾಗ ಹಾರೂರ ಹುಡಿಗಿ ಅಂದೀತೋ ಬಿಸ್ಮಿಲ್ಲಾ ॥
॥ ಗೀಗೀ ॥ ಚೌಕ ೩ ॥

ಏರು ಮಗಳ ಮಹಿಮಾ ನೋಡಿ ತಂದಿ ಧಂಗಾ ಆದಾ ।
ಗಲ್ಲ ಗಲ್ಲಾ ತಾ ಬಡಕೊಂಡಾ ।
ತಪ್ಪ ಆಗೇದ ತಾಯಿ ಕ್ಷಮಿಸಬೇಕಂತಽ ।
ಮಗಳ ಕಾಲ ಹಿಡದಾನಲ್ಲಾ ॥ ॥ ಗೀಗೀ ॥
ಮಗಳು ತಂದೀಗಿ ಬುದ್ದಿ ಹಿಂಗ ಹೇಳತಾಳು ।
ಬೇಧ ಮಾಡಬಾರದಪ್ಪಾ ಭ್ರಮಿಗೊಂಡಾ ।
ಹಿಂದು ಮುಸಲ್ಮಾನರ ಒಂದೇ ಮಾತೃವ್ರ ಎಂದ ಏರಿಶ್ಯಾರ ಜೆಂಡಾ ॥
॥ ಗೀಗೀ ॥

ಚ್ಯಾಲ ತಂದಿ ಮಗಳು ಕೂಡಿಕೊಂಡು ಕಲ್ಮಾ ಓದ್ಯಾರೋ ಅಂದೀಗಿ ।
ಕಂಡಾರು ಅವರು ಜಿಂದಗೀ ॥ ॥ ಗೀಗೀ ॥
ಇಂಗಳೇಶ್ವರ ಗ್ರಾಮದಲ್ಲಿ ಈಶಾ ನೆನದಾನ ಚೆಂದಾಗಿ ।
ಸಿಕಂದರ ಪೀರನಾ ಗಂಧ ಮುಂದಾಗಿ ॥ ॥ ಗೀಗೀ ॥
ಡೋಣಿಸಾಲ ದಂಡೀಲೆ ಧನ್ಯಾಳ ಊರ ಹೆಸರಾಗಿ ।
ಮಳಿಸ್ವಾಮಿ ನೆನದ ಬೈಲಿಗಿ ॥ ॥ ಗೀಗೀ ॥

ಏರು ಕಾಸಿಮಲಾಲಸಾ ಇವರು ಸೋಸಿ ಹೇಳತಾರ
ಉಂಡಂಗಾತು ಸಕ್ಕರಿ ಹಾಲಾ ॥

ಕೂಡಪಲ್ಲ ಮುಸಲ್ಮಾನರ ಓಣ್ಯಾಗ ಬ್ರಾಹ್ಮಣರ ಹುಡಿಗಿ ಅಂತಿದ್ರೊ ಬಿಸ್ಮಿಲ್ಲಾ ॥
॥ ಗೀಗೀ ॥ ಚೌಕ ೪ ॥

॥ ಖ್ಯಾಲಿ ॥

ಛೀ ಬಿಡು ಬಿಡು ಬ್ಯಾಡ ನೀಸೋಂಗ ।
ನಾಳೆ ಎಮ್ಮ ಬಂದು ಜಡಿತಾನ ಮ್ಯಾಗ ಮ್ಯಾಗ ॥ ॥ ಗೀಗೀ ॥ ಪಲ್ಲ ॥

ವಾದ ಹಾಕಾಕಿ ಬೈದಾಡಿ ಪತಿ ದೇವಗ ।
ಭಾವಭಕ್ತಿ ಇಡಲಿಲ್ಲ ಮನಿ ಮಹಾದೇವಗಾ ।
ಗುಳ್ಳ ಕಟ್ಟಿ ಸುಳ್ಳ ನಡದಿ ಗುರುದೇವಗ ॥ ॥ ಗೀಗೀ ॥ ನಾಳೆ ॥

ಹಿತಾ ತೊತ್ತಾಗಿ ಇರಬೇಕೋ ಪತಿ ಕೈಕೆಗಳ
ಶಿವಾ ಸಾಕ್ಷಾತ ಎತ್ತತಾನ ಉಡಿಯೊಳಗ ।
ತುಚ್ಛೆ ಮಾಡಿ ತುಳಿಬ್ಯಾಡ ಅತ್ತಿs ಮಾವಾಗ ॥ ನಾಳೆ ॥ ॥ ಗೀಗೀ ॥

ಮನಾ ಮೆಚ್ಚಾಗಿರಬೇಕು ಹುಚ್ಚ ಪುರುಷನಿಗ ।
ಅಚ್ಚ ಗರ್ತ್ಯಾಗಿ ಅರ್ಚಿಸು ಅಚ್ಚುತಗ ।
ಕಚಿಪಿಚಿ ತುಳಿಬೇಡ ಇಚ್ಛಾದೊಳಗ ॥ ನಾಳೆ ॥ ॥ ಗೀಗೀ ॥

ಪತಿವ್ರತಾ ಸತ್ತ್ಯೆ ಸಾವಿತ್ರಿ ಕ್ಷಿತಿಯೊಳಗ ।
ಪತಿ ಪ್ರಾಣ ಪಡದಾಳೊ ಮುತ್ತೈದಿ ತಾನಾ ರತಿವಳಗ ।
ಗಂಡ ಇದ್ದು ರಂಡಿ ಆಗಬಾರದೊ ಇನ್ನೊಬ್ಬಗ ॥ ನಾಳೆ॥ ॥ ಗೀಗೀ ॥

ನಂಬಿಗಿ ಇಡಬೇಕೊ ಇಂಗಳೇಶ್ವರ ಈಶ್ಯಾನಿಗಿ ।
ತುಂಬಿ ತುಳಕತಾನ ಸಾಂಬಶಿವಾ ಬಿಂಬದೊಳಗ ।
ಕಾಸಿಮಲಾಲಾಸಾ ಹೇಳುದು ಕುಲ್ಲಾ ಗುಣದವರಿಗ ॥ ॥ ಗೀಗೀ ॥

ಬಡವನನ್ನು ಅಳಿಯ ಮಾಡಿಕೊಳ್ಳುವ ಮೋಸ

ಸಾಹುಕಾರ ಅತ್ತಿ ಮಾವರಿಗೆ ಅಳಿಯ ಬಡವ ಇದ್ದಾ ।
ಈ ಕಥಿ ಕಡೆತನಕ ನೋಡಿದರ ಅನುಭವ ಸಿದ್ದಾ ॥ ॥ ಗೀಗೀ ॥ ಪಲ್ಲ ॥

ತಂದಿ ತಾಯಿ ಅಣ್ಣ ತಮ್ಮರು ಯಾರೂ ಇಲ್ಲ ಬಡವನ ಬೆನ್ನಾ ।
ಮಗಳ ಕೊಟ್ಟು ಮದುವಿ ಮಾಡಬೇಕಂತ ಅಳಿಯಾನ ಇಟ್ಟಕೊಂಡಿದ್ದರ ವನಾ ॥
॥ ಗೀಗೀ ॥

ಅವರ ಮಗಳಿಗೆ ಮೈಯಾಗ ಹರೇಬಂದು ಭಾರಿ ಜಾಣಾ ।
ಮತ್ತ ಹೊರಗ ಕೊಡಬೇಕಂತ ಅತ್ತಿಽ ಮಸಲತ್ತ ಮಾಡ್ಯಾಳೊ ಹೀನಾ ॥
॥ ಗೀಗೀ ॥

ಸಂಶಯವಿಲ್ಲದೆ ಹರಗಾಕ ಅವ ಹೋಗತ್ತಿದ್ದ ದಿನಾ ।
ಮಿಣಿಯೊಳಗಿನ ಜತ್ತಗಿ ತಗದಾಳೋ ಹತ್ತದಂಗ ಖೂನಾ ।
ನಾಲ್ಕು ದಿನ ಹೊಡಿಯುವ ಹೊಲಾ ಹೊಡಿಯಬೇಕು ಇವತ್ತು ನೀನಾ ॥
॥ ಗೀಗೀ ॥

ಹೊಡಿಯದಿದ್ದರ ನಿನಗೆ ಕೊಡುವುದಿಲ್ಲ ನಮ್ಮ ಮಗಳನಾ ।
ಪುನಃ ಪುನಃ ಇದರಂತೆ ಹೇಳಿ ಕಳಿಸ್ಯಾಳೊ ಅವನ್ನಾ ॥ ॥ ಗೀಗೀ ॥

ಇಳುವು ಹೊಲಕ ಹೋಗಿ ಬಿಚ್ಚಿತಾನೋ ಮಿಣಿಯನ್ನಾ ।
ಅದರೊಳಗಿದ್ದಿಲ್ಲ ಜತ್ತೆಗಿ ॥ ॥ ಗೀಗೀ ॥

ಅಂವ ಕುಂತಾನೊ ಬಾಳ ಚಿಂತ್ಯಾಗಿ ।
ಮನಸಿಗಿ ಬಾಳ ದುಃಖವಾಗಿ ॥ ॥ ಗೀಗೀ ॥

ಶಿವ ಒಲಿದ ಬಂದ ಭಕ್ತಿಗಿ ।
ಕೇಳತಾನ ಇಷ್ಟ್ಯಾಕ ನೀ ಸೊರಗಿ ॥ ॥ ಗೀಗೀ ॥

ಆಗ ಹೇಳತಾನ ಚಿಂತಿಯ ಬಗಿ ।
ಮೆಚ್ಚ್ಯಾನೊ ಅವನ ಭಕ್ತೀಗಿ ॥ ॥ ಗೀಗೀ ॥

ಶಿವಮಂತ್ರ ಕಲಿಸಿದ ಅವನಿಗಾಗಿ ।
ಹತ್ತಂಡಿ ಆಗಲೆಂದು ನಗಾ ಹೆಗಲ ಮೇಲಿಟ್ಟ ।
ಹೊಡಿ ನೀನು ಲಗುಬಗಿ ॥ ॥ ಗೀಗೀ ॥

ಇದರಂತೆ ಮಾಡಿ ಹೊಡೆದಾನು ಹೊತ್ತಾ ಆತರಿ
ತುರ್ತ ನಾಲ್ಕು ತಿರುವ ತಿರುವದರೊಳಗಾಗಿ
ಆಗ ಕೇಳತಾನ ಇದನ್ನ ಬಿಚ್ಚುವ ಬಗಿ ಹ್ಯಾಂಗ ಯೋಗಿ ।
ಬಿಟ್ಟಂಡಿ ಅಂದ ಕೊಳ್ಳ ಹರಿಯೋ ನೀ ಬಾಗಿ ।
ಹೊಲಾ ಆತ ಆರ ತಾಸಿಗಿ ॥ ॥ ಗೀಗೀ ॥

ಅಂವ ಮನಿಗೆ ಬಂದ ಲಗುಬಗಿ
ಅವರತ್ತಿ ಬಂದಳು ಎದುರಿಗೆ
ನೋಡ್ಯಾಳೋ ಪುರಮಾಸಿ ಅವನಿಗಿ ॥ ॥ ಗೀಗೀ ॥

ಏರು ಬಿತ್ತೋ ಅವಳಿಗೆ ಬ್ರಹ್ಮಾಂಡಕ ಬೆಂಕಿ ।
ಕೊಡಬಾರದೊ ಈ ಮೂಳಗ ನನ್ನ ಮಗಳನ್ನ
ಎಂದು ಮಾಡ್ಯಾಳೊ ಪಂಥ ॥

ಕೂಡಪಲ್ಲ ಸಾಹುಕಾರ ಅತ್ತಿ ಮಾವರಿಗೆ ಅಳಿಯ ಬಡವ ಇದ್ದಾ
ಈ ಕಥಿ ಕಡೆತನಕ ನೋಡಿದರ ಅನುಭವ ಸಿದ್ದಾ ॥ ಗೀಗೀ ಚೌಕ ೧ ॥

ಏರು ದಿನ ದಿನಕ ಕೊಟ್ಟಳೊ ತ್ರಾಸ ಅವನಿಗೆ ।
ಕೂತರ ಬೈಯುತ ನಿಂತರ ಬೈಯುತ ಕೊಟ್ಟಳೊ ಕಾಟಾ ಹೆಚ್ಚಿಗಿ
ಕೂಳು ಅಂಬುದು ಬೇವು ಆಗಿ ಹೋತರಿ ಅವನಿಗಿ ॥ ॥ ಗೀಗೀ ॥

ಮಗಳೇ ಒಲ್ಲೆಂದು ಹೇಳಬೇಕು ನೀನ ನಾಲ್ಕು ಮಂದ್ಯಾಗ ಗಟ್ಯಾಗಿ ।
ಬಲಾ ಇಲ್ಲದಾಗ ನೆಲಾ ಎದ್ದು ಬಡಿದಂತೆ ಆತರಿ ಅವನಿಗೆ ॥ ಗೀಗೀ ॥

ಭಕ್ತಿ ಭಾವ ಶುದ್ಧ ಇತ್ತರಿ ಅಂವಾ ಹೇಸಲಿಲ್ಲ ಯಾರ್ಯಾರಿಗಿ ।
ವ್ಯಾಳೆ ವ್ಯಾಳೇಕ ಮನದೊಳಗೆ ನೆನೆಯುತ್ತಿದ್ದ ಶಿವನಿಗೆ ॥ ॥ ಗೀಗೀ ॥

ಇಳುವು ಇತ್ತ ಅವನಿಗೆ ಪರಮೇಶ್ವರನ ಕರುಣಾ
ಹಿಡದ ಹಟಾ ಬಿಡಲಿಲ್ರಿ ಜಾಣಾ ।
ಧೈರ್ಯವೆಂಬುದು ಸರಾಸ್ತ್ರ ಬಾಣಾ ॥

ಏರು ಅತ್ತಿ ಮಾವಾ ಕೂಡಿ ಮಾಡ್ಯಾರೋ ಮಸಲತ್ತ
ನಮ್ಮ ಮಗಳನ್ನು ಕೊಡಬೇಕು ಚಲೋ ಮನೆತನ ನೋಡಿ
ಅತ್ತ ವಗತನ ನೋಡಿ ಮಗಳ ಕೋಟ್ಟಾರೋ ಮಾಡಿ ಮಸಲತ್ತ
ಬಡವ ಕುಂತಾನೊ ಯಾರಿಲ್ಲದವನಂತೆ
ಅತ್ತ ಲಕ್ಷಕೊಡಲಿಲ್ಲರಿ
ಅತ್ತಿ ಮಾವ ಇವನ ಮೇಲೆತ್ತ ಮಾಡ್ಯಾರೋ ಗತ್ತ ॥ ॥ ಗೀಗೀ ॥

ಕೂಡಪಲ್ಲ ಸಾಹುಕಾರ ಅತ್ತಿ ಮಾವರಿಗೆ ಅಳಿಯ ಬಡವ ಇದ್ದ ।
ಈ ಕಥಿ ಕಡೆತನಕ ನೋಡಿದರ ಅನುಭವ ಸಿದ್ದಾ ॥
॥ ಗೀಗೀ ॥ ಚೌಕ ೨ ॥

ಏರು ಯಾರ ಕೇಳತಾರ ಇವನ ಅರ್ಜಿ ಬಡತನಾ ಕೆಟ್ಟ ಹೇಡಿ ।
ಅತ್ತಿ ಕೊಟ್ಟಾಳೋ ತನ್ನ ಮಗಳನಾ ವಗತಾನ ಚಲೋದ ನೋಡಿ
ಮದುವೆ ಮಾಡಲಾಕ ನಿಬ್ಬಣ ಬಂತರಿ ಭರದಾಂಡಿ
ಭೆಂಡ ಬತ್ತಾಸ ಸನಾದಿ ಸಮ್ಮಾಳ ಸಂಭ್ರಮ ಕೂಡಿ

ನಾಲ್ಕು ಕಡೆಯು ಮಂದಿ ಇದರಗೊಳ್ಳಲಿಕ್ಕೆ ನಡದೀತರಿ ಊರ
ಮಂದಿಕೂಡಿ ।
ಒಬ್ಬರಿಗೊಬ್ಬರು ಶರಣ ಮಾಡಿ ।
ಹಾಸತಾರೋ ಜ್ಯಾಡಿ ॥ ॥ ಗೀಗೀ ॥

ಬಡುವ ನಿಂತ ನಡುಬರಕ ಸುಮ್ಮನೆ
ಯಾರೂ ಇಲ್ಲ ಅವನ ಕಡಿ ॥ ॥ ಗೀಗೀ ॥
ಶಿವ ಕಲಿಸಿದ ಮಂತ್ರ ಇಟ್ಟಿದ್ದ ಮನಸಿನ್ಯಾಗ ಘಟ್ಟಿಮಾಡಿ ॥ ಗೀಗೀ ॥

ಇಳುವು ಆ ಬಡವ ಒಂದೇ ನಿಷ್ಠಾ ಹತ್ತಂಡಿ ।
ಆಗಲೆಂದಾ ಘಟ್ಟಿ ॥ ॥ ಗೀಗೀ ॥

ಒಬ್ಬರಿಗೊಬ್ಬರು ಜಗ್ಗ್ಯಾಡತಾರ ಮೀಟಿ ಮೀಟಿ ।
ಜರಾ ಬಿಡಲಿಲ್ಲರಿ ಸೂಚಿ ನಾಯಿ ನಾಯಿಗೆ ಸಿಕ್ಕಂಗ ಆತ್ರಿಪೀಟಿ॥ ಗೀಗೀ ॥

ಸನಾದಿ ಸಮ್ಮಾಳ ಬಂದ ಅದವರಿ ಸ್ವರಾಕಟ್ಟಿ ।
ಮ್ಯಾಲ್ಕ ಏಳಲಿಲ್ಲರಿ ಒಬ್ಬರರಟ್ಟಿ॥ ॥ ಗೀಗೀ ॥

ಹಿಂಗಾದೀತ್ರಿ ಮೂರಾಬಟ್ಟಿ ।
ನಿಂತ ಬಿಟ್ರೊ ಉಪರಾಟಿ ॥ ॥ ಗೀಗೀ ॥

ಸನಾದಿ ಬಿಡಲಿಲಿ ಅವರ ತುಟಿ ।
ಸಮ್ಮಾಳ ನಿಂತಿತು ತಾಳಗೆಟ್ಟು ॥ ॥ ಗೀಗೀ ॥

ಅಳಿಯ ಮಾವನ ಕಾಲಿಗೆ ಮುಟ್ಟಿ
ಶಿರಬಾಗಿ ಬಿದ್ದಾಂಗಾತರಿ ಘಟ್ಟಿ
ಮಾವ ಅಂತಾನೋ ತಾನು ಯಾಕೊ ಯಟ್ಟಿ॥ ॥ ಗೀಗೀ ॥

ಪಾದವ ಬಿಡು ನೀನು ಯಾಕ ಹಿಡದೀದಿ ಉಪರಾಟಿ
ಮಾಡಿಲ್ಲ ಯಾರಿಗೂ ಕೆಟ್ಟ ನಾ ಹುಟ್ಟಿ ॥ ॥ ಗೀಗೀ ॥

ಏರು ಕೂಡಪಲ್ಲ ಜೆಗ್ಗ್ಯಾಡತಾರ ಬಿಡವಲ್ಲರು ಕೈಯ್ ಅವರಿಬ್ಬರು ತೆಕ್ಕಿ ಬಿದ್ದ ।
ಸಾಹುಕಾರ ಅತ್ತಿ ಮಾವರಿಗೆ ಅಳಿಯ ಬಡವ ಇದ್ದಾ
ಈ ಕಥಿ ಕಡೆತನಕ ನೋಡಿದರ ಅನುಭವಸಿದ್ದಾ॥ ॥ ಗೀಗೀ ॥
॥ ಚೌಕ ೩ ॥

ಭರಮ ದೇವರಿಗೆ ಅನ್ನ ನೈವಿದ್ಯ ವೈದಿದ್ದಳವರತ್ತಿ ।
ಬೇಡಿಕೊಂಡು ಪೂಜಾರಿ ಕೈಯಾಗ ಕೊಡತಿದ್ದಳು ಎತ್ತಿ ।
ಕೈಯ್ಯ ಕೈಗೆ ಹತ್ತಂಡಿಯಾಯಿತು ಮೈಗೆ ಮೈ ಹತ್ತಿ ॥ ॥ ಗೀಗೀ ॥

ಹೇಳತಾಳ ಈಗ್ಯಾಕ ಹಿಡದಿ ಬಿಡ ನಿನ್ನ ತಲಿ ಮಾಸೈತಿ
ನಾಲ್ಕು ದಿವಸ ಮಾಡಿ ಮನ್ಯಾಗ ಈಗ ಗದ್ದಲ ಐತಿ
ನಿನ್ನ ಮನಸಿನ್ಯಾಗ ಇದ್ದರೆ ಬರತೇನಿ ಅಂದಳು ಅತಿ ಪ್ರೀತಿ ।
ಕಿವುಡ ಪೂಜಾರಿಗೆ ಕೇಳ ಬರಲಿಲ್ಲ ಹಿಂಗ್ಯಾಕ ಜಗ್ಯಾಡತಿ ।
ನಮ್ಮ ದೇವರ ಗುಡಿಯಾಗ ಬರಬ್ಯಾಡ ಪಾದಗಟ್ಟಿ ಹತ್ತಿ ॥ ಗೀಗೀ ॥

ಇಳುವು ಬಿಡವಲ್ಲದು ಕೈ ಇಬ್ಬರಿಗಿ ।
ಗುಡಿ ಒಳಗ ನಡದೀತು ಗುದಮುರಗಿ ॥ ॥ ಗೀಗೀ॥

ಮತ್ತೊಬ್ಬವ ಹೋಗುವರಿಗಿ ।
ಅವಹಣಿಕಿ ನೋಡಿದಾನು ಬಾಗಿ ॥ ॥ ಗೀಗೀ ॥

ಇವರು ಕಡಿದಾಡತಾರ ಏನು ಬಗಿ ।
ಗುಡಿ ಹೊಕ್ಕು ಬಿಡಸಾಕ ಹೋಗಿ ॥ ॥ ಗೀಗೀ ॥

ಹಿಡದೀತು ಅವನ ಕೈಯಿಗಿ ।
ಹತ್ತಂಡಿ ಮೂರು ಮಂದಿ ಬಿದ್ದಾರೋ ತೆಕ್ಕಿ ತೆಕ್ಕಿಗಿ ॥ ॥ ಗೀಗೀ ॥

ಬಂದಾವ ಅಂತಾನೋ ಪೂಜಾರಿಗಿ ।
ನಾ ಹೇಳುದಿಲ್ಲೊ ಯಾರ್‍ಯಾರಿಗಿ ॥ ॥ ಗೀಗೀ ॥

ಬಿಡು ಹೋಗತೀನಿ ಗಪ್ಪಾಗಿ ।
ಈಕಿ ಬಂದಾಳ ನನ್ನ ಸಲುವಾಗಿ ॥ ॥ ಗೀಗೀ ॥

ನಾ ಜುಲ್ಮಿ ಮಾಡಿಲ್ಲ ಈಕಿಗಿ ।
ಮತ್ತ ನೋಡು ನೀನು ನಾಳೀಗಿ ॥ ॥ ಗೀಗೀ ॥

ಏರು ಇಬ್ಬರಾಗೊಬ್ಬರು ತಗೀರೀಗ ನನ್ನ ಬಿಡರಿ ಈ ವ್ಯಾಳೆದಾಗ ।
ಕೂಡಪಲ್ಲ ಸಾಹುಕಾರ ಅತ್ತಿ ಮಾವರಿಗೆ ಅಳಿಯ ಬಡವ ಇದ್ದಾ
ಈ ಕಥಿ ಕಡಿತನಕ ನೋಡಿದರ ಅನುಭವ ಸಿದ್ದಾ॥ ॥ ಗೀಗೀ ಚೌಕ ೪ ॥

ಏರು ಎಲ್ಲರಿಗೆ ಬಿತ್ತು ಗೂಡಾರ್ಥ ತಿಳಿಲಿಲ್ರಿ ಅದರಾಟ ।
ಆ ಊರ ಸನೇದಾಗ ಮತ್ತೊಂದು ಊರು ಇತ್ತು ದೊಡ್ಡ ಮೆಟ್ಟ ।
ಬಡವಗ ಹೇಳ್ಯಾರೋ ಕರಕೊಂಡು ಬಾರೋ ಅವನ್ನ ಕೇಳೂನಷ್ಟ
ಬಡವ ಕರದನೊ ಲಗ್ನಕ ನೀವು ಹೊಂಟ ।
ವ್ಯಾಳ್ಯೆ ಮೀರುವದೆಂತು ಉಪಾಧ್ಯಾಚರಿಗಿ ಮರತ ಹೊಂಟಾ ॥
॥ ಗೀಗೀ ॥

ಗಡಿಬಿಡಿಯಿಂದ ನಡಿದಾರೋ ಇಬ್ಬರು ಶೌಚಕ ಬಾಳಕೆಟ್ಟ
ಬಂದು ಉಪದ್ಯಾಗ ಮುಂದಕ ಹೆಜ್ಜಿ ಇಡಗೊಡಲಿಲ್ಲ ಚಟಾಚಟಾ ।
ಬಡವಗಂತಾನೊ ನಡೀ ಮುಂದಕ ನೀನು ಸ್ವಲ್ಪ ಅಷ್ಟ॥ ॥ ಗೀಗೀ ॥

ಬಡವಂತಾನೋ ಎಂಥಾ ಲೆಖ್ಖ ನೀರು ಇಲ್ಲದ ಕುಂದುರುದು ಶೌಚಕ।
ಅಂವ ಮರಿಗಿ ಕುಂತ ನೋಡುದಕ ।
ಅಲ್ಲಿ ಎಲ್ಲಿ ಇಲ್ಲ ನೀರು ಒಂದು ಮುಕ್ಕ ।
ಸಿಗಲಿಲ್ಲ ಅವನ ವ್ಯಾಳ್ಯಕ ।
ಸುತ್ತ ಮುತ್ತ ನೋಡ್ಯಾನ ಟಕ್ಕಾಮುಕ್ಕ॥ ॥ ಗೀಗೀ ॥

ಒಂದು ದನದ ಕೋಡು ಸಮೀಪ ಬಿದ್ದಿತ್ತು
ಅಂವ ಹತ್ತರ ತಗೊಂಡ ಮುಕಳಿ ಒರಸುದಕ ।
ಕೋಡಿಗಿ ಮುಕಳಿಗೆ ಹತ್ತಂಡಿಯಾಗಲೆಂದ
ಇಳುವು ನಿರಕ ಆ ಕೋಡ ಸಿಕ್ಕಿತು ನಡಬರಕ
ಅಂವಾ ಎದ್ದು ಜ್ಯಾಡಸ್ಯಾನೋ ಮ್ಯಾಲಕ ॥ ॥ ಗೀಗೀ ॥

ಉಬ್ಬಿ ಬೀಳಲಿಲ್ಲ ತೆಳ್ಳಾಕ ।
ಮನ್ಯಾಗ ಅಂತಾನ ಇರಲಿ ಅನಕಾ ॥ ॥ ಗೀಗೀ ॥

ಧೋತರ ಹೊಚ್ಚಿ ಮುಚ್ಯಾನ ಕೂನ ।
ಅದು ಇತ್ತು ಒತ್ತಾಳುದ್ದ ।
ಕೂಡ್ರಲಿಕ್ಕೆ ಬರಲಿಲ್ಲ ಉಪಾಧ್ಯಾಗ
ಹೋದ ಲಗುಮಾಡಿ ನಿಂತಕೊಂಡ ।
ತಗದ ಹೊತ್ತಿಗಿ ಹಾಕಬರ್‍ರಿ ಕಡ್ಡಿ ॥ ॥ ಗೀಗೀ ॥

ಕುಂತ ಮಂದಿಗಿ ನಿನ್ನಲಿಂದ ಆಗ್ಯೆತಿ ಹತ್ತಂಡಿ
ಏನ ಸೋಜಿಗ ನಮಗೆ ಹೇಳರಿ
ಬಾಳ ಸೋಸಿ ನೋಡಿ ॥ ॥ ಗೀಗೀ ॥

ಹೇಳತಾನೊ ಉಪಾಧ್ಯ ಇನ್ನ ಉಳದೈತಿ ಯಾರ ಕಡಿ ।
ನಮ್ಮ ಭಂಡ ಇನ್ನೇನ ಹೇಳಲಿ
ನಿಮ್ಮ ಶಾಖಾ ಕೊಡಿ॥ ॥ ಗೀಗೀ ॥

ನಿಂತ ಉಪಾಧ್ಯಾ ಯಾರಿಗೆ ಹೇಳತಾನ
ಮಾರಿ ಸಣ್ಣ ಮಾಡಿ ॥ ॥ ಗೀಗೀ ॥

ಏರು ಇದ್ದಿದಿಲ್ಲ ಒಬ್ಬರು ಖಾಲಿ ಬಡವ ಮಾಡತಿದ್ದ ಒಬ್ಬ ಗಡಿಬಿಡಿ ।
ಇವರೆಲ್ಲರು ತಿಳಿದರು ಪೂರಾ
ಈ ಬಡವಗ ಇರುವನು ದೇವರಾ
ಇವನ ಹೊರ್ತ ಇಲ್ಲ ಯಾರ್‍ಯಾರು
ಕೈ ಮುಗಿದು ಅಂತಾರೊ ಎಲ್ಲಾರು
ನಮ್ಮನ್ನು ಮಾಡೊ ಮಾಡೊ ಪರಿಹಾರಾ॥ ॥ ಗೀಗೀ ॥

ನಿನ್ನ ಮದವಿ ಮಾಡುದು ಕರಾರಾ ।
ಬಿಟ್ಟಂಡಿ ಅಂದ ಬಡವ ಜ್ಯಾರಾ ।
ಮೋಕಳಿಕ ಆತು ಎಲ್ಲರಿಗೆ ಸಾರಾ
ಬಡವನ ಮದವಿ ತಯ್ಯಾರಾ
ಅವನಿಗಿದ್ದನು ಪರಮೇಶ್ವರಾ ಕಲಿಸಿದ್ದನೋ ಮಂತರಾ ।
ಕೂಡ್ಯಾರಾ ಗಂಡ ಹೆಂಡರಾ ॥ ॥ ಗೀಗೀ ॥

ಕೂಡಪಲ್ಲ ಇರುವುದು ಇಂಗಳೇಶ್ವರಾ ಊರ ಪ್ರಸಿದ್ದಾ
ಕವಿ ಲಾಲಸಾಹೇಬ ಹಾಡಿ ಮಾಡಿದ ಗಂಡಿನ ಪದಾ
ಸಾಹುಕಾರ ಅತ್ತಿ ಮಾವರಿಗೆ ಅಳಿಯ ಬಡವ ಇದ್ದಾ
ಈ ಕಥಿ ಕಡೆತನಕ ನೋಡಿದರ ಅನುಭವ ಸಿದ್ಧಾ ॥ ॥ ಗೀಗೀ ॥
॥ ಚೌಕ ೫ ॥

ಬಸವೇಶ್ವರ ಪದಾ

ಸಖಿ

ಲಗಳಿ ಮೂಲ ಕ್ವಾಣಿಗಿ । ಅಗಳಿ ಮೂಲ ಕೋಲಿಗಿ ।
ಜಗಳ ಮೂಲ ಜ್ಯಾಣಿಗಿ । ಜಗಪತ್ತಿ ಮಡದಿಗಿ ।
ಗರತೇರು ಗೈರ ಇರುದಿಲ್ಲ ಹುಡದಿಗಿ ॥ ॥ ಜೀಜೀ ॥

ಇಗಳಿ ಮೂಲ ಅರಣಿಗಿ । ಲೈಗಳಾ ಮೂಲಾ ಜ್ಯಾರಣಿಗಿ
ಕಗಳಿ ಮೂಲಾ ಹರಣಿಗಿ । ಮಾರಣಾಯಿತೊ ನಿಡದಿಗಿ ।
ಚರ್ಮ ಇತ್ತೊ ಶೆರಣರ ಹಡದಿಗಿ ॥ ॥ ಜೀಜೀ ॥

ರಾಗಳಿ ಮೂಲ ಓಣಿಗಿ । ಉಗಳ ಮೂಲ ವಾಣಿಗಿ
ಚಗಳ ಮೂಲ ಚೌಣಿಗಿ । ಇಳಿಲಾರ್ದ್ದು ಗಡದಿಗಿ ।
ಇಂಗಳೇಶ್ವರನ ಈಶ್ಯಾನ ಸೋಪಾನೇರು ಕಡದೀಗಿ ॥ ॥ ಜೀಜೀ ॥

ಪದಾ

ಪಂಡಿತ ಪೂಜ್ಯರ ಪಾದ ಕಮಲಕ ಫಣಿ ಪಾತ್ರಾಗಿ ಪೇಳುವೇನೊ ।
ಕ್ಷಮಿಸಬೇಕು ನಮಿಸುವೇನೊ ನೇಮಪೂರವಕ ।
ತಮ್ಮ ಪ್ರೋತ್ಸಾ ಇರಲಿ ಪೂರ್ತ ಪೇಳುವೆ ಪ್ರವಚನಕ ।
ಪರಮ ಪುರುಷರ ಪುರಾಣ ಪ್ರೇಮಾಮೃತ ಸರುವ ಜನಕ ।
ಮಂಗಳಾಕ್ಷನ ಕೃಪೆಯಿಂದ ಕಂಗೊಳಿಸುತ ಬಸವಣ್ಣನವರು
ಇಂಗಳೇಶ್ವರದಲ್ಲಿ ಜನಸಿ ಉದ್ದಾರಕ ॥ ॥ ಜೀಜೀ ॥

ಪ್ರತ್ಮ ಪರುವುತ ಬದ್ರಚಲ ಇಂಗಳೇಶ್ವರ ಕ್ಷೇತ್ರ ।
ರೇಣುಕಾಚಾರ್ಯರ ವಾಸಸ್ಥಾನ ಮದಲೇಕ ।
ಅವರ ಶಿಷ್ಯ ರೇವಣಸಿದ್ಧೇಶ್ವರ ಇದ್ದಾ ಅದೇ ಸ್ಥಳಕ ।
ಸೋಮೇಶ್ವರಲಿಂಗ ದೈವದಂತೆ ಜಗಪಾಲಕ ।
ಪವಿತ್ರವಾದ ಪೂರ ಇಂಗಳೇಶ್ವರ ಅಮೌಲ್ಯವಾದ ಅಗ್ರಹಾರಕ
ಬಲದೇವ ಬಲದೇವನ ತಂಗಿ ಇದ್ರು ಮಾದಲಾಂಬಿಕಾ ॥ ॥ ಜೀಜೀ ॥

ಇಂಗಳೇಶ್ವರದಿಂದ ಬಾಗೇವಾಡಿ ಆರು ಮೈಲ ಅಂತರದಲ್ಲಿ ।
ಅಲ್ಲಿ ಜಿಬ್ಬ ಅರಸ ಅಂಬವಾನಿದ್ದಾ ಅಗ್ರಹಾರದ ಮೂಲಕ
ಬಲದೇವನ ತಂಗಿ ಕೊಟ್ಟು ಅಗ್ರಹಾರ ಇದ್ದಾ ಮೂಲಕ ।
ಮಾದರಸಾ ಮಾದಲಾಂಬಿಕಿ ವಿವಾಹ ಮುಗಿಸಿ ಶುಭಕುಲಕ ।
ಮಾದರಸಾ ಮಾದಲಾಂಬಿಕಿ ಸತಿಪತಿ ಅಕ್ಕರತಿ ಅಕ್ಕನಾಗಮ್ಮಾ
ಜನಿಸಿ ಶಿವನ ಅನುಕೂಲಕ ॥ ॥ ಜೀಜೀ ॥

ಇಳುವು ಮುಂದು ಮಕ್ಕಳಾಗಲಿಲ್ಲ ಏಸೋ ದಿನಾ?
ಇಲ್ಲ ಸಮಾಧಾನ ।
ಗಂಡ ಸಂತಾನಕ್ಕಾಗಿ ಚಿಂತಿ ಅವರಿಗಿ ।
ಹರಕಿ ಹೊತ್ತರೊ ಹನ್ನೆರಡ ದೇವರಿಗಿ ॥ ॥ ಜೀಜೀ ॥
ಬ್ಯಾಸೊತ್ತು ಮಲಗ್ಯಾರೊ ಒಂದಿನಾ
ನೆನಸುತ ಕಂದನಾ । ಸ್ವಪ್ನದಾಗ ಬಂದಾನಾ
ಹೇಳಿದಾ ಶಿವಯೋಗಿ । ಪುತ್ರನ ಪಡಕೋರಿ ಇಂಗಳೇಶ್ವರಕ
ಹೋಗಿ ॥ ॥ ಜೀಜೀ ॥

ಇಂಗಳೇಶ್ವರ ಪವಿತ್ರಸ್ಥಾನಾ ।
ರೇವಣಸಿದ್ಧೇಶ್ವರನ ತೀರ್ಥಗುಂಡ ಸ್ನಾನಾ ಮಾಡಿ ನಿಜವಾಗಿ ।
ನಂದಿವ್ರತ್ತಾಗ್ಯೆದರ ಸುತ್ತ ನಿಮಗ ಖಚಿತ ಹುಟ್ಟತಾನ ರಾಜಯೋಗಿ ॥
॥ ಜೀಜೀ ॥

ಏರು ಇಷ್ಟ ಹೇಳಿ ಈಶ್ವರ ಹೋದಾ ಎಚ್ಚರಾಯಿತೊ ಇರ್ವರಿಗಿ ।
ಸತಿಪತಿ ಹೋದರೊ ಉದಯಾದಿ ಇಂಗಳೇಶ್ವರಕ ।
ತೀರ್ಥ ಮಿಂದು ನಂದಿ ವ್ರತಾ ಗೈದರೋ ನೇಮನಿರ್ಕ ।
ಹನ್ನಂದನೂರದ ಮೂವತೊಂದರಲ್ಲಿ ಜನಿಸಿ ಬಸವಣ್ಣ ಅನತೂರಿಕ ।
ಕೂಡಪಲ್ಲ ಮಂಗಳಾಕ್ಷನ ಕೃಪೆಯಿಂದ ಕಂಗೊಳಿಸುತ ಬಸವಣ್ಣನವರು
ಇಂಗಳೇಶ್ವರದಲ್ಲಿ ಜನಿಸಿ ಉದ್ಧಾರಕ ॥ ॥ ಜೀಜೀ ॥ ಚೌಕ ೧ ॥

ಏರು ಪ್ರತಮ ಪರವುತ ಬದ್ರಚಲ ಇಂಗಳೇಶ್ವರ ಕ್ಷೇತ್ರಾ
ಹುಟ್ಟಿದ ಏಳ ದಿವಸಕ ಲಿಂಗಕಟ್ಟಿ ಸಂಗಮ ಶಿವಯೋಗಿಗಳು ಬಂದು ।
ಭಸ್ಮಧರಿಸಿ ಮಹಾಮಂತ್ರವ ಊದಿದರಾ ।
ಅಲ್ಲಿವರಿಗಿ ಮಲಿ ಕುಡದಿದ್ದಲ್ಲಾ ಕೂಸಾ ಕುಡಿತೊ ಜೋರಾ ಜೋರಾ ।
ತಂದಿ ತಾಯಿಗಿ ಉಮೇದ್ವಾರತುಂಬಿ ಆನಂದ ಸಾಗರಾ ।
ಗುರುಗಳು ಹೇಳಿದ ಪ್ರಕಾರಾ ಇವರು ಪ್ರೇಮದಿಂದ ಪುತ್ರನ
ನಾಮಕರಣ ಬಸವಣ್ಣನೆಂದು ಕರದಾರಾ ॥ ॥ ಜೀಜೀ ॥
ಪುಸವೇಶ್ವರ ಅನಂತರ ಬಸವೇಶ್ವರ ಇಂಗಳೇಶ್ವರದಲ್ಲಿ ಪುಟ್ಟಿ ।
ಬಾಗೇವಾಡಿಯಲ್ಲಿ ಬೆಳದಾರೊ ತಂದಿ ಇಚ್ಛಾ ಪ್ರಕಾರಾ ।
ಅಕ್ಕನಾಗಮ್ಮನ ಪತಿ ಶಿವದೇವ ಇದ್ದದ್ದು ಇಂಗಳೇಶ್ವರಾ
ಇವರ ಗರ್ಭ ೧೧೪೪ರಲ್ಲಿ ಜನಸಿದರು ಜ್ಞಾನಿ ಚನ್ನಬಸವೇಶ್ವರಾ ॥
॥ ಜೀಜೀ ॥

ಬಸವಣ್ಣನವರು ಚಿಕ್ಕವರಿದ್ದಾಗ ಜೋಕ ಪಾವಡ ಮಾಡಿತೋರಿಸಿದಾರಾ ।
ಸತ್ತ ಪ್ರಾಣ ಪಡೆದು ಶಿಸ್ತ ಮಾತಾಡಿಸಿದವರಾ
ಮುಂದ ಸಂಗಮಕ್ಕೆ ಹೋಗಿ ವಿದ್ಯೆ ಕಲ್ತಿ ಓದಿದರಾ ।

ಕ್ರಿ.ಶ. ೧೧೫೬ ದೇವರಿಗೆ ಸ್ತುತಿಸಿದರಾ
ವೇದಾಗಮ ಅನುಭಾವ ಶಾಸ್ತ್ರ ಜಾತವೇದ ಶಿವಯೋಗಿಗಳು
ಆಶೀರ್ವದಿಸಿ ಬಸವಣ್ಣನವರಿಗೆ ನೀಡಿದರಾ ॥ ॥ ಜೀಜೀ ॥

ಇಳುವು ಚ್ಯಾಲುಕ್ಯರ ರಾಜಧಾನಿ ಶಿಂಹಾಸನಾ ।
ಕಳಚೂರಿರ್ಯ ಬಿಜ್ಜಳತಾನಾ ।
ತಗೊಂಡರು ಸ್ವಾದೀನಾ ।
ಆಳತಿದ್ದ ಕಲ್ಯಾಣಾ ।
ಬಸವಣ್ಣನ ಸ್ವಾದರ ಮಾಂವಾ
ಬಲದೇವಾ ಮಂತ್ರಿ ಇದ್ದ ಜಾಣ ॥ ॥ ಜೀಜೀ ॥

ಬಸವಣ್ಣ ಕಲ್ಯಾಣಕ ಹೋದನಾ ।
ಅಧಿಕಾರ ಆಗ್ಯಾನಾ ।
ಗಂಗಾಂಬಿಕಿಯನ ಆದರು ಲಗ್ನ
ಬಲದೇವ ಮಗಳ ಕೊಟ್ಟ
ದಾರಿ ಎರಸಿ ಹಾತಾದುರಿಣಾ ॥ ॥ ಜೀಜೀ ॥

ಮಂತ್ರಿ ಸಿದ್ಧಣ್ಣನ ಮಗಳು ನೀಲಾಂಬಿಕಾನಾ ।
ವಿವಾಹ ಮಾಡಿ ಬಸವಣ್ಣ ।
ನೀಲಾಂಬಿಕಿ ಶರಣ ತಾನಾ ।
ಪತಿಸೇವೆ ಪತಿಪೂರ್ಣ ।
ಬಾಲ ಸಂಗಯ್ಯಾಯೆಂಬ ಮಗ ಹುಟ್ಟಿ
ಕೆಲವುದಿಂದಾಗ ಹೊಂದಿದಾನೊ ಮರಣಾ ॥ ॥ ಜೀಜೀ ॥

ಏರು ಕಪ್ಪಡಿ ಕ್ಷೇತ್ರ ಬಿಟ್ಟು ಬಸವಣ್ಣನವರು ಕಲ್ಯಾಣದಲ್ಲಿ ಇದ್ದಾರೋ ।
ಮಹಾ ಮಂಡಲಾದೀಶನಾದಾ ಬಿಜ್ಜಳನ ಆಸ್ಥಾನಕಾ
ಕರಣಕ ವೃತ್ತಿ ಕೈಕೊಂಡು ಪಂಡಿತ್ಯೆದಿ ಸತ್ಯವಿಸ್ವಾಸಕ ।
ಅಧಿಕಾರಿಗಳಿಗಿ ಬಿಜ್ಜಳರಸನ ಬೊಕ್ಕಸಕ ॥ ॥ ಜೀಜೀ ॥
ಕೂಡಪಲ್ಲ ಮಂಗಳಾಕ್ಷನ ಕೃಪೆಯಿಂದ ಕಂಗೊಳಿಸುತ
ಬಸವಣ್ಣನವರು ಇಂಗಳೇಶ್ವರದಲ್ಲಿ ಜನಿಸಿ ಉದ್ದಾರಕ ॥ ॥ ಜೀಜೀ ॥
॥ ಚೌಕ ೨ ॥

ಏರು ಮಂತ್ರಿಯಾಗಿ ಬಸವಣ್ಣನವರು ಸದಾಚಾರ ಬೀರಿದರು ।
ಧಾರ್ಮಿಕ ಸಾಮಾಜಿಕ ಅರತ್ತಿಗಳು ನೆರಳಾಗಿ ।
ಅವರು ಮಾಡಿದ ಕ್ರಾಂತಿ ಇಲ್ಲಿ ಮಹಾಮೂರ್ತಿಗಳಾಗಿ ।
ಕೃತಿವೀರ ಅನಿಸಿ ಸ್ವತಂತ್ರ ಶಿಲವಿಗಳಾಗಿ ।
ಸರ್ವರಿಗಿ ಸಮಬಾಲೆಳುಸನ ತತ್ವಬಿತ್ತರಿಸಿದರೋ
ಧಯ್ಯಾನಿಧಿಗಳಾಗಿ ॥ ॥ ಜೀಜೀ ॥

ಬಚ್ಚವರ್ಣಗಳ ಸೂತ್ರ ಧರ್ಮದ್ವಾರಗಳನು ತೆರದಿಟ್ಟರೊ
ಶೋಧಿಸಿಕೊಳುವುದಕ್ಕಾಗಿ ಸರವರಿಗಿ ।
ಸವನ ಭಾವದಿ ಆತ್ಮ ಅರಿಯುದಕ್ಕಾಗಿ
ಇಂಥಾ ಸ್ವತಂತ್ರ ತೋರಿಸಿ ಸಕಲ ಸಾಧಕರಿಗೆ ।
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರೆಂಬ ಅಭಿಯಾನ ನೀಡಿ
ಬಸವಣ್ಣನವರು ನಿಜವಾಗಿ ॥ ॥ ಜೀಜೀ ॥
ಕೊಲ್ಲುವವನೆ ಮಾದಿಗಾ ಹೊಲಸು ತಿನ್ನುವವನೇ ಹೊಲೆಯ
ಕೂಡಲಸಂಗಯ್ಯನ ಒಲಸಿದಾ ಕುಲಜಾತಕ ಶಿವಚ್ಯಾಗಿ ।
ಸಮಗಾರ ಹರಳಯ್ಯ ಡುರಶಯ್ಯಾ ಕುಲಕ ಹೆಚ್ಚಾಗಿ ।
ಬಸವಣ್ಣನವರು ತತ್ವ ಬೋಧ ತತ್ವಕ ಬಲೊಮೆ ಹೆಚ್ಚಾಗಿ ।
ಕಾಸಿಕಮ್ಮಾರನಾದ ಬೀಸಿ ಮಡಿವಾಳನಾದ ನಡಿ ನೋಡಿ
ಮಡಿ ಇವರು ಸ್ವಚ್ಛಾಗಿ ॥ ॥ ಜೀಜೀ ॥

ಇಳುವು ನೋಡಿ ನುಡಿದು ನಡಿ ತಪ್ಪಿದಲ್ಲಿ ।
ಹಿಡಿದಿಪ್ಪ ಲಿಂಗ ಕರಿಲಿ
ಸರ್ಪಿನ ತೆಲಿ ಮೇಲೆ ಕೈಯಾ ಇಟ್ಟಂತೊ ।
ಅರಿತಿರಬೇಕು ಅಂತರಂಗ ಆಚಾರ ಮಾಡಿ ಬಿಟ್ಟಂತೋ ॥ ಜೀಜೀ ॥
ಸತ್ಯ ನುಡಿಯುವದು ದೇವಲೋಕ ಇಲ್ಲಿ ।
ಮೃದುವ ಜನದಲ್ಲಿ ತಪ ಜಪದ ಮಾಲಿ
ಪಟಿಸಿ ಜಪಿಸಂತೆ ।
ಬಸವಣ್ಣನವರು ವಚನಧಯಾ ಧರ್ಮದ ಕಳಸಿಟ್ಟಂತೆ ॥ ಜೀಜೀ ॥
ಶುದ್ಧ ಕಾಯಕವೇ ಕೈಲಾಸದ ಕೀಲಿ ।
ದಂಡಿರಿ ದಾಸೋಹದಲ್ಲಿ ।
ಜರಾಗ ಮಾರ ಪಿತಕ್ಕಾಗಲಿ
ನೈವಿಧ್ಯ ನೀಡುವಂತೆ
ಆಗಿಂದಾಗ ಅರ್ಪಿತವಾಗಬೇಕು ಮೀಸಲಾಗಿ ಇಟ್ಟಂತೆ ॥ ॥ ಜೀಜೀ ॥

ಏರು ಗುರುವಾಗಲ್ಲಿ ಭಕ್ತಾಗಲ್ಲಿ ಮುಕ್ತಾ ತ್ಯೆಗಿ ನಡಿಬೇಕು ।
ಬಸವಣ್ಣನವರು ಸಾರಿ ಸದೋ ಸದ್ಬುದಕ ಹಿಂಗ ಹೇಳಿದರು ।
ಸಾಧಕರಿಗಿ ಶೋಧಕ । ಹಾಗೇ ಸಾಯುಗತಾ ಸಾಧಿಸಿ
ಅರ್ಥಿತಿಕ ಕ್ರಾಂತಿಕ ॥

ಕೂಡಪಲ್ಲ ಮಂಗಳಾಕ್ಷನ ಕೃಪೆಯಿಂದ ಕಂಗೊಳಿಸುತ ಬಸವಣ್ಣನವರು
ಇಂಗಳೇಶ್ವರದಲ್ಲಿ ಜನಿಸಿ ಉದ್ದಾರಕ ॥ ॥ ಜೀಜೀ ॥ ಚೌಕ ೩ ॥

ಏರು ಅನುಭಾವ ಮಂಟಪ ಮಾಡಿ ಬಸವಣ್ಣನವರು
ಅನೇಕ ಕಾರ್ಯಗೈದಾರು ।
ಮಾನವರ ಮರು ಹೋಗಲಾಡಿಸಿ ಅಜ್ಞಾನಾ ।

ತಮ್ಮ ಅರವಿನ ಅಂಕುರ ಉರಿದಾರೋ ಸುಜ್ಞಾನಾ ।
ಬಹುಮುಖ್ಯ ಕ್ರಾಂತಿ ಹೂಡಿ ಹೋದರು ಯಜ್ಞ ನಯನಾ ।
ಅಲ್ಲಮಪ್ರಭು ಚಾಲುಕ್ಯ ಶಕ್ತಿ ಚನ್ನಬಸವಣ್ಣನ ಕ್ರಿಯಾಶಕ್ತಿ
ವಹಿಸಿ ನಡಿಸಿ ಬಸವಣ್ಣನವರ ಆಜ್ಞೆಯನಾ ॥ ॥ ಜೀಜೀ ॥
ಹಡಪದ ಹಂಪಣ್ಣ ಸಿದ್ಧರಾಮ ಮಡಿವಾಳ ಮಂಚದೇವನಾ ।
ಗಂಗಾಂಬಿಕಿ ನೀಲಾಂಬಿಕಿ ಇವರ ಆಧೀನಾ ।
ಮಹಾದೇವಿ ಅಕ್ಕನಾಗಮ್ಮ ಕಾರ್ಯದಲ್ಲಿ ಸಾಧನಾ
ಅಸಂಖ್ಯಾತ ಶರಣರು ಬೆಂಬಲಾಗಿ ಅನುದಿನಾ ।
ಕಲ್ಯಾಣಪೂರ ಹೋಗಿ ಕೈಲಾಸ ಕೈಲಾಸ ಮಾಡಿದಾರೋ
ಶಿವನಾಮ ಭಜನಾ ।
ಜಯ ಜಯಕಾರ ಪ್ರತಿದಿನಾ ॥ ॥ ಜೀಜೀ ॥

ಇಳುವು ಕಲ್ಯಾಣಪುರ ಪ್ರಣತಿಯಾಗಿ ।
ಬಸವಣ್ಣನವರು ತೈಲಾಗಿ ।
ಚನ್ನಬಸವಣ್ಣ ಬತ್ತಿಯಾಗಿ ।
ಪ್ರಭುದೇವಾದರೊ ಜ್ಯೋತಿಲಿ ಥಳಿ ಥಳಿಸಿ
ಷಟಸ್ಥಲೊಳು ಪ್ರಭೆತೊಳಗಿ ಬೆಳಗೇತಿ ॥ ॥ ಜೀಜೀ ॥
ಇಂಥಾ ಸುಧಾರಣೆ ಶೋಭಿಸಲಾಗಿ ।
ಮತಾ ಭೇದ ಬಂತೊ ಅಲ್ಲೀಗಿ ।
ವಿಘ್ನ ನಡಿತೊ ಕೊನಿಗಿ
ಪ್ರಣತಿ ಒಡದೈತಿ ।
ತೈಲವರೆದು ಜ್ಯೋತಿ ಬಯಲಾಗಿ ।
ಕಲ್ಯಾಣಕ ತರಲಕವಿದೈತಿ ॥ ॥ ಜೀಜೀ ॥
ಹನ್ನೆರಡು ವರುಷ ಮಂತ್ರಿ ಕೆಲಸ ಮಾಡಿ ನೀಗಿ ।
ಬಸವಣ್ಣನವರು ಬಂದ್ರೊ ತಿರಿಗಿ ।
ಸಂಗಮದಲ್ಲಿ ಐಕ್ಯನಾಗಿ ತೋರಿಸಿ ತಮ್ಮ ಘನತಿ ।
ಹುಟ್ಟಿ ಮೂವತ್ತಾರು ವರುಷದಲ್ಲಿ
ಅಜರಾಮರ ಉಳಸ್ಯಾರೋ ಕೀರ್ತಿ ॥ ॥ ಜೀಜೀ ॥

ಏರು ಬಸವಣ್ಣನವರು ಅನುಭಾವ ಮಂಟಪಾ ಪರಿವಾರ ಮಂದಿ
ಮಹಾಸಭೆಯಲ್ಲಿ
ವಿಬಾಜಿಸುವುದು ಆಗ ಕನ್ನಡ ನಾಡಕ
ಈಗ ಬಸವ ಜ್ಯೋತಿ ಮೂಡಿ ಪುನಾಃ ಬೆಳಕ ಬೆಳಗುದಕ ।
ಇಂಗಳೇಶ್ವರ ಲಾಲಸಾ ಜಂಬಗಿ ಕವನ ರಚಿಸಿದ್ದಕ

ಕೂಡಪಲ್ಲ ಮಂಗಳಾಕ್ಷನ ಕೃಪೆಯಿಂದ ಕಂಗೊಳಿಸುತ ಬಸವಣ್ಣನವರ
ಇಂಗಳೇಶ್ವರದಲ್ಲಿ ಜನಿಸಿ ಉದ್ಧಾರಕ ॥ ॥ ಜೀಜೀ ॥ ಚೌಕ ೪ ॥

ಬಸವಣ್ಣನವರ ಪದಾ

ಸಖಿ

ನಾಚಿಕಿಲ್ಲಾ ನಾಗೇಶಿ ಹುಡಗಿಗಿ ।
ಹುಟ್ಟಿಸಿದವರ್‍ಯಾರು ಮಣ್ಣಿನ ಮಡಿಕಿಗಿ ।
ಬ್ರಹ್ಮವೆಂಬು ಕುಂಬಾರ ಕೈಯಾಗ ।
ಹುಟ್ಟಿದ ಮಡಿಕಿ ಬೆಳಸಬ್ಯಾಡ ಬಿಡಕಿಗಿ ॥ ॥ ಜೀಜೀ ॥

ತೂರ್‍ಯಾ ತಿತ್ತತಾತನ ಉಡಕಿಗಿ
ನಿಮ್ಮ ಅವ್ವಾ ಬಂದ್ಲಳೊ ಕಾಮದ ಕುಡಿಕಿಗಿ
ತಂದಿ ತೂರ್‍ಯದೊಳು ವೀರ್ಯ ತಯ್ಯಾರಾಗಿತ್ತು
ಆಕಿ ತೊಡಕಿಗಿ ॥ ॥ ಜೀಜೀ ॥

ಬುದ್ದಿ ಹೋಗಿ ಬಿದ್ದಿ ಭೂಡ ಭುಡಕಿಗಿ
ವದ್ದ್ಯಾಡಿ ಹರಕೊಂಡಿ ನಿನ್ನ ಪಡಕಿಗಿ ।
ಸುರವಕು ಶ್ರೇಷ್ಠ ಪರ ವಸ್ತಪ್ಪ ಅಲಕಾ ಪೃಥ್ವಿಯಾ ಗೌಡಕಿಗಿ ॥ ಜೀಜೀ ॥

ಬದರಿಗಿರಿ ಇಂಗಳೇಶ್ವರ ವಾಡಕಿಗಿ
ರೇವಣ ಸಿದ್ಧರಗವಿ ಚವ್ರ ವೈ ನೋಡಿಕಿಗಿ
ಸಿಕಂದರ ಬಾದಶ್ಯಾನ ಭಜಿಸುತ
ನಬಿಲಾಲ ನಿಂತಿದಾ ಹಾಡಕಿಗಿ ॥ ॥ ಜೀಜೀ ॥

॥ ಖ್ಯಾಲಿ ॥

ಯಾಕೋ ತಮ್ಮಾ ಬಂದಿದ್ದಿ ಇಲ್ಲಿ
ತಿಳಿದದೇನೊ ಗುರುವಿನ ನೆಲಿ
ಗುರು ಇರತಾನ ಇಂಗಳೇಶ್ವರದಲ್ಲಿ
ಬಿಚ್ಚಿಲ್ಲಾ ಅವರು ಹಾಕಿದ ಬಲಿ ॥ ॥ ಜೀಜೀ ॥

ಸತ್ಯೆ ಭಾಮಾನ ತೌರೂರ ಮನಿ ಎಲ್ಲಿ
ಅವರ ತಾಯಿತಂದಿ ಹೆಸರ ಹೇಳೋ ಇಲ್ಲಿ ।
ಹತ್ತು ಮಕ್ಕಳು ಅವರಿಗಿ ಆಗ್ಯಾವ ಪ್ಯಾಲಿ ।
ಸುಳ್ಳ ಅಂದ್ರ ಒಗದೇನೊ ಹೆಂಡೀಲಿ ॥ ॥ ಜೀಜೀ ॥

ಆಲದ ಮರಾ ಸುಟ್ಟೀತ್ಯಾವಲ್ಲಿ
ಯಾರು ಶ್ಯಾಪ ಕೊಟ್ಟಾರೋ ಅಲ್ಲಿ ।
ಋಷಿ ನೇಮ ಹೇಳೋ ಸಭಾದಲ್ಲಿ ।
ಬೇರ ಯಾಕ ಇರತಾವ ಗಿಡದಲ್ಲಿ ॥ ॥ ಜೀಜೀ ॥

ರಾಮ ಅನ್ನು ಶಬ್ದ ಬಂತೋ ಅದು ಯಾವಲ್ಲಿ ।
ಏಳನೇ ಅವತಾರಾ ತೊಟ್ಟಾನ ಎಲ್ಲಿ ।
ಗಿಡಾ ಇತ್ತೊ ಜಂಬೂಗಾಡಿಯಲ್ಲಿ ।
ಸಪ್ತ ದೇವತೇರ ಹೆಸರ ಹೇಳೊ ಪೈಲಿ ॥ ॥ ಜೀಜೀ ॥
ಪಂಚಮುಖದ ಆದಿಶಕ್ತ ಭೂಮಿಯ ಮ್ಯಾಲಿ
ಒಂದೊಂದ ಮುಖದ ಹೆಸರ ಹೇಳೋ ಪೈಲಿ ।
ರಫೀಕ ಕೇಳ್ಯಾನ ಸಭಾದಲ್ಲಿ
ಲಾಲಸಾ ಒದ್ದಾ ಮುಕಳಿ ಮ್ಯಾಲಿ
ಇಂಗಳೇಶ್ವರ ಗ್ರಾಮ ಸಿಸ್ತೀಲಿ
ಸಿಕಂದರ ಬಾದಾಶಾ ಬಂಗಾರ ಮಾಲಿ
ನಬೀಲಾಲ ಹಾಕ್ಯಾರೊ ಈ ಕಿಲಿ
ಹೋಗಿ ಬಿದ್ದೇವು ಅವರ ಪಾದಮ್ಯಾಲಿ ॥ ॥ ಜೀಜೀ ॥

ಆರಿದ್ರಾ ಮಳಿ ಆಯ್ತು ಆರ ಅಂತಸ್ತಿನ ಮನೆ ಹೊಯ್ತು

ಪದಾ

ಆರಿದ್ರಾ ಮಳಗಾಲದಲ್ಲಿ ಅಗಾಧ ಆಯಿತ್ತೆಣ್ಣಾ
ಆಸೂರೆಲ್ಲ ಕೂಡಿಕೇಳ್ರಿ ದೈವೆಲ್ಲಾ ।
ತಾರೀಖ ಹನ್ನೆರಡು ಅಗಷ್ಟ ತಿಂಗಳದಲ್ಲಿ ಆಯ್ತು ಘಾಲಮೇಲಾ ।
ಮೃಗ ಆರಿದ್ರಾ ಮಳಿ ಸುರದಿತ್ತು ಜಗವೆಲ್ಲಾ ।
ಪುಣೆ ಬಿಟ್ಟ ಪಶ್ಚಿಮಕ್ಕೆ ಹನ್ನೆರಡು ಮೈಲ ಅಂತರದ ಮೇಲೆ
ಕೆರಿ ತುಂಬಿ ತುಳಕತ್ತಿತ್ತು ನೀರ ನೀರೆಲ್ಲಾ ।
ಕೆರೆ ಒಡೆದು ಪುಣೆ ಆಗಿ ಹೊಯ್ತು ಅಳಗಾಲಾ ॥ ॥ ಗೀಗೀ ॥

ಗವರಮೆಂಟ ಸರಕಾರದವರು ಘಾಬರ್‍ಯಾಗಿ ನೋಡಿ
ಅವರು ಟೆಲಿಫೋನ ಮಾಡಿದಾರು ತಾತ್ಕಾಲಾ ।
ಕೆರಿ ಒಡೆದು ಪುಣ್ಯ ಹರಿದು ಹೋಗೂದು ಉಳುದಿಲ್ಲಾ ।
ಈಗಿಂದೀಗ ಖಾಲೆ ಮಾಡಂದ್ರ ಸರುವೆಲ್ಲಾ ।
ಮಾತಕೇಳಿ ಮಂದಿ ಎಲ್ಲಾ ಘಾಬರಾಗಿ ಕೂತಬಿಡ್ತು
ಆಗಿಂದಾಗ ನೀರ ಬಂದು ತಡಾ ಮಾಡಲಿಲ್ಲಾ ।
ನೀರ ನೋಡಿ ಮಂದಿ ಒಬ್ಬರದೊಬ್ಬರ ಮಾರೀ ನೋಡಲಿಲ್ಲಾ ॥ ಗೀಗೀ ॥

ನೀರ ಹೊಕ್ಕ ತಾಸಿನ ಮೇಲೆ ನೀರೆ ನೀರಂಕಾರಾತು
ಸಾಂಬಶಿವಾ ಮಾಡಿದ ಮಾತಾ ದೇವರೇ ಬಲ್ಲಾ ।
ಪಾಪ ತುಂಬಿ ತುಳಕಿದಂಗ ಇಡೀ ಊರೆಲ್ಲಾ ।
ಗ್ವಾಡಿ ಹೊಡೆ ಬಿಲ್ಡಿಂಗೆಲ್ಲಾ ಬಲ್ಲಂಗ ಬೀಳತಾವರಿ
ಕೂಸಗಳಿಗೆ ಕುಂಡ್ರಿಸಿಕೊಂಡ ಹೆಗಲಿನ ಮ್ಯಾಲಾ ।
ಘಳಿಸಿದ ಇಷ್ಟಂತೆಲ್ಲಾ ಬಿಟ್ಟ ನಿಂತಾರ ನಿರಬೈಲಾ ।
ದುಮಾಲಿ ಒಂದು ತಾಸ ಕೇಳರಿ ಚಿತ್ತಿಟ್ಟ । ಆಗಿದಂತಾ ಆಟಾ ।
ತಮ್ಮ ತಮ್ಮ ಖರೆ ವೈಕುಂಟಾ । ನೋಡಿ ಕಣ್ಮುಟ್ಟಾ ।
ಈ ಮಂದೀದು ಎಲ್ಲಾ ಗೋಳಾಟಾ ॥ ॥ ಗೀಗೀ ॥

ಇದರಂತೆ ಮಂದಿ ಒಕ್ಕಟ್ಟಾ । ಸಿಟ್ಟ ಎಲ್ಲಾ ಸುಟ್ಟ ।
ತಮ್ಮ ತಮ್ಮ ಕಪಟಾ । ಮಾಸಿ ಬಿಟ್ಟಕೊಟ್ಟ
ನಿಂತ ನೀರಾಗ । ದೇವರ ಮುನದ ಅವರ ಮ್ಯಾಗ ॥ ॥ ಗೀಗೀ ॥
(ಒಬ್ಬರ ಸೆರಗೀಗಿ ಮತ್ತೊಬ್ಬರ ಗಂಟಾ)

ಏರು ಒಬ್ಬರ ಮುಖಾ ಒಬ್ಬರ ನೋಡಿ ಮನಸ್ಸಿನಲ್ಲಿ ಒದ್ದಾಡಿ
ದರವೊಬ್ಬರ ಮುಖಾ ಕಪ್ಪಾಯ್ತು ಖಳಿ ಉಳಿಲಿಲ್ಲಾ ।
ನಾವು ಘಳಿಸಿ ಇಷ್ಟಂತ ಆಗಿ ಹೊಯ್ತು ಮಣ್ಣಪಾಲಾ ।
ಕಟ್ಟಿದ ಬಿಲ್ಡಿಂಗ ಮಾಡೆ ಬಿದ್ದು ಬಿಟ್ಟು ಒಂದೂ ಉಳಿಲಿಲ್ಲಾ ।

ಪುಣೆ ಬಿಟ್ಟು ಹನ್ನೆರಡು ಮೈಲು ಅಂತರದಲ್ಲಿ ಪಾನಕೆರಿತುಂಬಿ
ತುಳಕೀತು ತೊಲಾ ।
ಕೆರಿ ಒಡೆದು ಪುಣೆ ಆಗಿ ಹೊಯ್ತು ಅಳಿಗಾಲಾ ॥ ಗೀಗಿ ॥ ಚೌಕ ೧ ॥

ಮೂರು ಲೋಕಕ ಆಯ್ತೋ ಜಾಹೀರಾ ।
ದೇವಾದಿ ದೇವತೆಯರು ತಗಿಯಲಿಲ್ಲಾ ಹೆಸರಾ ।
ಸಾಕ್ಷಾತ ಕೃಷ್ಣ ಸಾರಥಿ ಆದಾರಾ ।
ಒಂದೇ ಬಾಣಕ ಜಿಗದು ನೂರಾರಾ ॥ ಯುದ್ಧ ॥
ಬೆಳಿಸಿದ್ರ ಬೆಳಯುದ ಬಹಳ ಕಥಿಸಾರಾ ।
ಖುದ್ಧ ಚಡಚಣ ಗ್ರಾಮದ ಹೆಸರಾ ।
ಹಣಮಂತ ಹೀಂಗ ಕವಿಗಾರಾ ।
ಯಾರ್‍ಯಾರು ನಿಂದ್ರಲಿಲ್ಲಾ ಆತನ ಎದರಾ ॥ ಯುದ್ದ ॥

ಖ್ಯಾಲಿ

ಬಂದಿತ್ತು ಬ್ಯಾಸರಾ । ಈ ಸಂಸಾರಾ ॥
ದುಡಿದು ದುಡಿದು ನಾವು ಸಾವುದು ಸೊರಗಿ ।
ತುಡಗ ಮಾಡುದು ರಂಡ್ಯಾರಿಗಾಗಿ ।
ತಂದು ಕೊಡತಾರೊ ಇವರ ಮನಿಗಿ ।
ಇವರು ನೋಡತಾರ ಮತ್ತೊಬ್ಬರೀಗಿ ॥ ಬಂದಿತ್ತು ॥

ತೋಡೆ ಪೈಜನ ಕಾಲುಂಗ್ರ ಬೆರಳೀಗಿ ।
ಟಿಕ್ಕೆ ಪುತಳಿಸರಾ ಕಟ್ಟಿ ಕೊರಳಿಗಿ ।
ಗೆಜ್ಜೆ ಡಾಬ ಬೇಡ್ತಾರ ಟೊಂಕಿಗಿ ।
ಕೊಟ್ಟರ ನೋಡ್ತಾರ ಮತ್ತೊಬ್ಬರೀಗಿ ॥ ಬಂದಿತ್ತು ॥

ಪೈಲಿ ಊಟ ಬೇಕಪ್ಪಾ ಇವರೀಗಿ ।
ಚಹಾ ಚಪಾತಿ ಹೊತ್ತ ಹೊತ್ತಿಗಿ ।
ತಿಂದು ಬಂದಾರೊ ಇವರು ಸೊಕ್ಕಿಗಿ ।
ಗುರಕಾಸಿ ನೋಡ್ತಾರ ಮತ್ತೊಬ್ಬರೀಗಿ ॥ ಬಂದಿತ್ತು ॥

ಕೊಡುದು ಬಿಟ್ಟರ ನಾವೇ ಇವರೀಗಿ ।
ಯಾರೂ ಹಚ್ಚುದಿಲ್ಲಾ ಇವುಕ ಕೂಲೀಗಿ ।
ಆ ಮ್ಯಾಲ ತಿಳಿತಾದ ಈ ಬಸವ್ಯಾರೀಗಿ ।
ಚಂತ್ಯಾನ ದುಡಿತಾರ ನಾಲ್ಕು ದುಡ್ಡೀಗಿ ॥ ಬಂದಿತ್ತು ॥

ಅಲ್ಲಿಂದ ಅರುವು ಆಗೂದು ಇವರೀಗಿ ।
ಕಾಲ ಬೀಳುವರು ಭಾವ ಮೈದುನದೆರೀಗಿ ।
ಆ ಮ್ಯಾಲ ನೋಡ್ತಾರ ತಮಮ್ಮ ಗಂಡದ್ಯೊರಿಗಿ ।
ಬಂದಿತ್ತು ಬ್ಯಾಸರಾ । ಈ ಸಂಸಾರಾ ॥ ॥ ಗೀಗೀ ॥

ಸಾಕ್ಷಾತ ಇಳದ ಬಂದ ಶಂಕರಾ

ಬಲ್ಲಂತಾ ಜ್ಞಾನಿಗಳು ಬಹಳ ಮಂದಿ ಕೂಡಿರಿ
ಬಿಚ್ಚಿ ಹೇಳುವೆನು ಮಜಕೂರಾ ।
ಹನ್ನೆರಡು ವರ್ಷ ವನದಲ್ಲಿದ್ದರು ಪಾಂಡವರಾ ।
ಗುಪ್ತ ರೀತಿ ಮಾಡತಿದ್ದರು ಸಂಚಾರಾ ।
ಅರ್ಜುನ ಮಾಡಿದ ತಪಕ್ಕ ಸಾಕ್ಷಾತ ಇಳದ ಬಂದ ಶಂಕರಾ ॥ ॥ ಗೀಗೀ ॥

ಅರಣ್ಯದಲ್ಲಿ ಇದ್ದ ಅರ್ಜುನಾ ಕುಂತು ತಪೇಶ್ವರ ನಡಶ್ಯಾರಾ
ಅನ್ನ ನೀರ ಅಂಬುದು ಮರ್ತರಾ ।
ಕ್ಷತ್ರಿ ವಂಶ ಜೀವತನಕ ಶರ್ತಾರಾ ।
ಒಂದಾನೊಂದು ದಿವಸ ವ್ಯಾಸ ಋಷಿಯು
ಸುದ್ದಿ ಕೇಳಿ ಅಲ್ಲಿ ಹೋದಾರಾ ॥ ॥ ಗೀಗೀ ॥

ಗುರುಗಳು ಬಂದರೆಂದು ಗುರುವಿನ ಚರಣಕ್ಕೆ
ಎದ್ದ ಮಾಡಿದಾನೊ ನಮಸ್ಕಾರಾ ।
ಕವರವರಂಗ ಮಾಡಲಿಲ್ಲಾ ತಿರಸ್ಕಾರಾ ।
ಹಮ್ಮದಮ್ಮ ಅಳದಿದ್ದರು ಅಹಂಕಾರಾ ।
ಯುದ್ಧಕ್ಕೆ ನಿಂತಾಗ ಬಾಣ ತೊಟ್ಟರೆ
ಹಿಂದ ಮುಂದ ನೋಡಲಿಲ್ಲ ಗಂಭೀರಾ ॥ ॥ ಗೀಗೀ ॥

ದುಮಾಲಿ ಬರೇ ಕ್ಷತ್ರಿ ಧರ್ಮ ಹಿಡದ ಹಟಾ ಬಿಡವಲ್ಲಾ ।
ಕೊಟ್ಟ ವಚನ ಎಂದು ತಪ್ಪವಲ್ಲಾ ॥ ॥ ಗೀಗೀ ॥

ಒಂದನೊಂದಿವಸದಲ್ಲಿ ನೋಡಬೇಕೆಂದಾ ಕೇವಲಾ ।
ಬ್ಯಾಡನ ಜಾತಾರ ತೊಟ್ಟಾ ತಾತ್ಕಾಲಾ ॥ ॥ ಗೀಗೀ ॥

ಏರು ಕಾಡ ಹಂದಿ ಒಂದು ಕಾಟ ನಡಸಿತ್ತು ದಂಡ ಮಾಡಿದ ತಯ್ಯಾರಾ ।
ಮಾಯದಾಟ ಹೂಡಿದಾನೊ ಶಂಕರಾ ।
ಯಾರಿಗಿ ತಿಳಿಲಿಲ್ಲಾ ಮುಂದಿನ ಹುನ್ನಾರಾ ॥
ಕೂಡಪಲ್ಲ ಅರ್ಜುನ ಮಾಡಿದ ತಪಕ್ಕ ಸಾಕ್ಷಾತ ಇಳದಬಂದ ಶಂಕರಾ ॥
॥ ಗೀಗೀ ॥ ಚೌಕ ೧ ॥

ಬಿಲ್ಲ ಬಾಣ ಸಾಹಿತ್ಯ ತಕ್ಕೊಂಡು ಕುಂತ ಬಿಟ್ಟಿದ್ದಾ ಇಂದ್ರಕೀಲದಾಗ ।
ಹಕ್ಕಿ ಪಕ್ಕಿ ಸುಳುವಾ ಯಾರದು ಇಲ್ದಂಗ ।
ಶಬರ ಶಂಕರ ಹೊಂಟೀದಾ ಅಲ್ಲೀಗ ।
ಹಂಗೆ ಹೋದರೆ ಅನ್ಯ ಆಗೂದು
ಯೋಚನೆ ಮಾಡಿದಾ ಮನದಾಗ ॥ ॥ ಗೀಗೀ ॥

ತಪೇಶ್ವರ ಧೈರ್ಯ ನೋಡಬೇಕಂದು ಮಾಯಲಿಂದ ಹೊಡಿದಿದ್ದಾ
ಹಂದೀಗ ।
ಮುಂದ ಕಳಿವಿ ಬಿಟ್ಟಿದ್ದಾನ ಮಂದೀಗ ।
ಅರಜೀವ ಆದಿತ್ತು ಘಳಿಗ್ಯಾಗ ।
ಬಾಣಿನ ಹೊಡೆತಕ್ಕ ಅರ್ಜುನ ಬಲ್ಲಿ ಹೋಗಿ ಬಿದ್ದ ಬಿಟ್ಟೀತು
ಎದರೀಗ ॥ ॥ ಗೀಗೀ ॥

ಸಪ್ಪಳ ಕೇಳಿ ಅರ್ಜುನ ಆಗ ಕಣ್ಣ ತೆರದಾ ಅದೇ ಕ್ಷಣದಾಗ ।
ಒಂದು ಬಾಣ ಬಿಟ್ಟಾ ಆ ಹಂದೀಗ ।
ಆ ಏಟೀಗಿ ಪ್ರಾಣ ಹೋಯ್ತು ಘಳಗ್ಯಾಗ ।
ಮಾಯರೂಪದಿಂದ ಮಂದೀನ ಕಳಸಿದಾ ಏರಿ ಹೋದರು ಅವನ
ಮೈಮ್ಯಾಗ ॥

ದುಮಾಲಿ ಅರ್ಜುನಗ ಅಂತಾರ ನಾವು ಹೊಡದಿದೆವು ಹಂದಿ ।
ಹೀಂಗ ಅಂತಾರ ನೆರದಂತಾ ಮಂದಿ ॥ ॥ ಗೀಗೀ ॥

ತಪೇಶ್ವರ ಬಿಟ್ಟು ನಾ ನಾನು ಹೊಡದಿದೆನು ಹಂದಿ ।
ಸುಳ್ಳೆ ನಡಸಬ್ಯಾಡರಿ ನೀವು ಹುಡದಿ ॥ ॥ ಗೀಗೀ ॥

ಏರು ನಾ ಹೊಡದ ನೀ ಹೊಡದ ತಂಟೆ ನಡದಿತ್ತು ಅಷ್ಟರಲ್ಲಿ ಬಂದು
ಬಿಟ್ಟಾ ಶಂಕರಾ ।
ಬ್ಯಾಡನ ವೇಷ ತಗೊಂಡಿದಾ ಅವತಾರಾ ।
ಮಾಯಾದಾಟ ತಿಳಿಯಲಿಲ್ಲಾ ಹುನ್ನಾರಾ ।
ಕೂಡಪಲ್ಲ ಅರ್ಜುನ ಮಾಡಿದ ತಪೇಶ್ವರಕ್ಕೆ ಸಾಕ್ಷಾತ ಇಳದಬಂದಾ ಶಂಕರಾ ॥
॥ ಗೀಗೀ ॥ ಚೌಕ ೨ ॥

ಅರ್ಜುನ ಅಂತಾನ ಎಲ್ಲಾ ಮಂದೀಗಿ ಸುಮ್ಮನೆ ಮಾಡಬ್ಯಾಡ್ರರಿ
ಬಡಿವಾರಾ ।
ನಿಮಗ ಎಲ್ಲಾರಿಗಿ ಆಗುದಿಲ್ಲ ಅಡವ್ಯಾರಾ ।
ಬಂದ ಹಾದೀಗಿ ತಿರುಗಿ ಹೋಗರಿ ಎಲ್ಲಾರಾ ।
ನಾ ಹೊಡದ ಹರಿವೀಗಿ ನೀವು ಹೊಡದವಿ ಅಂತೀರಿ
ನಾಚಿಕೀರೆ ಬರತೈತಿಲ್ಲೊ ಮುಡದಾರಾ ॥ ॥ ಗೀಗೀ ॥

ಮಾತಿಗಿ ಮಾತ ಬೆಳದು ಜಗಳ ಹತ್ತಿತು ಜೀವದಾನ ಬೇಡಂದಾ ಶಂಕರಾ ।
ಅಷ್ಟ ಕೇಳಿ ಅರ್ಜುನ ಹಲ್ಲ ತಿಂತಾರಾ ।
ಮೂರು ಲೋಕದೊಳಗೆ ಇಲ್ಲೊ ಯಾರ್‍ಯಾರಾ ।
ಖೊಟ್ಟೆ ಬ್ಯಾಡಾ ನೀನ ಘಟ್ಯಾಗಿ ನಿಂತಿದಿ
ಏಟೀಗಿ ಆಗಿ ಹೋದಿ ಚೂರ ಚೂರಾ ॥ ॥ ಗೀಗೀ ॥

ಮಹಾದೇವ ಅಂಬುದು ಅರ್ಜುನಗ ತಿಳಿಲಿಲ್ಲಾ
ಮಾಯಾದರಣಗಂಬಾ ಹೂಡ್ಯಾರಾ ।
ದೇವಾದಿ ದೇವತೆಯರು ಕೂಡ್ಯಾರಾ ।
ಸ್ವರ್ಗದಲ್ಲಿ ನಿಂಗಂತು ಅವಗ ನೋಡ್ಯಾರಾ ॥
ಎದರೀಗಿ ಎದರ ನಿಂತು ಬಾಣ ಹೊಡಿತಾರ
ಬಾಣೀಗಿ ಅಂಜಲಿಲ್ಲಾ ಗಂಭೀರಾ ॥ ॥ ಗೀಗೀ ॥

ದುಮಾಲಿ ರಾತ್ರಿ ಹಗಲ ಕೂಡಿಕೇರಿ ಯುದ್ಧ ನಡೀತೊ ಅನುವ್ಯಾರಾ ।
ಬುದ್ದಿಯಲ್ಲಿ ಇದ್ದೊ ಚ್ಯಾತೂರಾ ॥ ॥ ಗೀಗೀ ॥

ನರ ಮನುಜಾನ ಯುದ್ಧ ನೋಡಿ ದೇವಾದಿಗಳು ನಗತಾರಾ ।
ಮೂರ ಲೋಕಕ ಇದ್ದಂಗ ಅಧೀಕಾರಾ ॥ ॥ ಗೀಗೀ ॥

ಏರು ಐದು ದಿವಸ ಹೀಂಗ ಯುದ್ದ ನಡದಿತ್ತು ಮುದ್ದಾಮ ಮಾಡಿದ ಶಂಕರಾ ।
ಇವರ ಧೈರ್ಯದ್ದು ತಿಳದಿತ್ತು ಮಜಕೂರಾ ।
ಮುಂದಿಂದ ತಿಳಿಯಲಿಲ್ಲಾ ಹುನ್ನಾರಾ ।
ಕೂಡಪಲ್ಲ ಅರ್ಜುನ ಮಾಡಿದ ತಪಶ್ವರಕ್ಕೆ ಸಾಕ್ಷಾತ ಇಳದ ಬಂದಾ ಶಂಕರಾ ॥
॥ ಗೀಗೀ ॥ ಚೌಕ ೩ ॥

ಐದು ದಿವಸದ ಮೇಲೆ ಅರ್ಜುನ ಸೋತಾ ಶರಣ ಹೋಗಿದಾನೊ ಬ್ಯಾಡಗ ।
ಒಂದು ತಾಸ ವ್ಯಾಳೆ ಕೂಡು ನನ್ನಗ ।
ಪುನಾಃ ಯುದ್ಧ ಮಾಡೂನು ರಣದಾಗ ।
ಶಂಕರ ಅಂತಾನ ಸೆಬ್ಬಾಸ್ರೆ ಗಬರು ಒಪ್ಪತ್ತೇನೊ ನಿನ್ನ ಮಾತೀಗ ॥ ಗೀ ॥

ಮೂರು ಲೋಕದೊಳಗ ಯಾರೂ ಸೋಲಲಿಲ್ಲಾ ಚಿಂತಿ ಆಯ್ತು ಅರ್ಜುನನ ಮನದಾಗ ।
ಲಿಂಗ ಪೂಜೇಕ ಕುಂತಿದ್ದಾ ಆವಾಗ ।
ಹೂವಾ ತಂದ ಇಟ್ಟ ಲಿಂಗಿನ ಮ್ಯಾಗ ।
ಏಕ ಮನಸ್ಸಿನಿಂದ ಧ್ಯಾನ ಮಾಡಿದಾ ಕೈಯ್ಯ ಮುಗಿತಾನ ದೇವರೀಗ ॥
॥ ಗೀಗೀ ॥

ಕಣ್ಣ ಮುಚ್ಚಿ ಪೂಜೇಕ್ಕ ಕುಂತಾರ ಬ್ಯಾಡ ಬಂದು ನಿಂತಾ ಎದರೀಗ ।
ಆಗ ಒದರಿ ಹೇಳತಾನ ಇವನೀಗ ।
ಬಹಳ ಹೊತ್ತ ಆಯ್ತು ಕುಂತಿದಿ ಪೂಜಿಗ ।
ಲಿಂಗದ ಮೇಲೆ ಇಟ್ಟ ಹೂವುಗಳು ಹೋಗಿದ್ದು ಬ್ಯಾಡನ ತೆಲಿಮ್ಯಾಗ ॥

ಘಾಬರ್ಯಾಗಿ ಅರ್ಜುನಾ ಹೂಗಳ ನೋಡತಾನ ಒಂದೇ ಒಂದು
ಹೂವು ಇಲ್ಲ ಲಿಂಗಿನಲ್ಲಿ
ಹೋಗಿ ಕುಂತುದು ನೋಡತಾನ ತೆಲಿಮ್ಯಾಗ ।
ಸಾಕ್ಷಾತ ದೇವರೆಂದು ತಿಳದಾನ ಮನದಾಗ ।
ಗುರ್ತು ಹಿಡಿದು ಹೋಗಿ ಚರಣಕ್ಕೆ ಎರಗ್ಯಾನ
ಕ್ಷಮಾ ಬೇಡುವೆ ಸ್ವಾಮಿ ನಿಮಗ ॥ ॥ ಗೀಗೀ ॥

ದುಮಾಲಿ ಅವನ ಧೈರ್ಯಕ ಬಿಲ್ಲ ಬಾಣ ಕೊಟ್ಟಾನಾ ।
ಸಾಕ್ಷಾತ್ ಭೆಟ್ಟಿ ಆದ ಭಗವಾನಾ ॥ ॥ ಗೀಗೀ ॥

ಗುರುವರ ಪಡಕೊಂಡು ಮುಂದ ಬೆಳದಾ ಶಂಕರಾ ।
ಎಷ್ಟರs ಹೇಳಲಿ ವರ್ಣನಾ ॥ ॥ ಗೀಗೀ ॥

ಭಕ್ತಿ ಇಟ್ಟ ನಡದರೆ ಬಂದ ಒಲಿತಾನ ಭಗವಾನಾ ।
ಯಾವತ್ತು ಮಾಡರಿ ಅವನ ಧ್ಯಾನಾ ॥ ॥ ಗೀಗೀ ॥

ಏರು ಕೂಸ ಹಣಮಂತಾ ಸೋಸಿ ಹೇಳಿದಾ ಒಂದೇ ಸಂದದ ಮಜಕೂರಾ।
ಅವರ ವರ್ಣನಾ ಬೆಳೆಯುವರು ಭಯಂಕಾರಾ ।
ಖುದ್ದ ಚಡಚ್ಯಾಣ ಗ್ರಾಮ ಐತಿ ನಮ್ಮ ಊರಾ ।
ಅರ್ಜುನ ಮಾಡಿದ ತಪೇಶ್ವಕ್ಕ ಸಾಕ್ಷಾತ ಇಳದಬಂದ ಶಂಕರಾ ॥
॥ ಗೀಗೀ ॥ ಚೌಕ ೪ ॥

ಗುಣಾಕಾರ ಲೆಖ್ಖದ ಸವಾಲ

ಕೆರಿ ಸವಾಲ ಕಾಲಾಗ ಕಡದ್ಯಾಡುದು ಯಾಕ
ಕಡಿತನಕ ಕೇಳವ್ವಾ ನಾಗೇಶಿ ।
ಸುಳ್ಳೆ ಇಲ್ಲದೊಂದು ಕೇಳತೆವ್ವಾ ಬೆಳ ಬೆಳಸಿ ।
ಇಂದ ಮಾಡು ಅಡಿಗಿ ನಾಳೇ ಆಗಿ ಹೋಗುದ ಹಳಸಿ ।
ಗುಣಾಕಾರ ಲೆಕ್ಕಾ ಚಂದಾಗಿ ಕೇಳಕ್ಕಾ ಹೇಳತೇನು ನಾನು
ಗುಣಗುಣಿಸಿ ॥ ॥ ಗೀಗೀ ॥

ಕಾಯಾಪುರದಲ್ಲಿ ಕೆರಿಕಟ್ಟಲಿಕ್ಕೆ ಕಂಟ್ರಾಟ ಕೊಟ್ಟಿದರು
ಗೌಂಡ್ಯಾನ ಕರಸಿ ।
ಏಳು ಕೆರಿಗಳು ಕಟ್ಟುದಿತ್ತು ಎತ್ತರಿಸಿ ।
ಹೆಚ್ಚಾದರ ತಗದಿತ್ತು ಕತ್ತರಿಸಿ ।
ಕೆರಿ ಕಟ್ಟಲಿಕ್ಕೆ ಸ್ವತಾ ಬ್ರಹ್ಮ ತಾ ಗೌಂಡ್ಯಾ ಆಗಿ ಬಂದಾ ರೂಪಧರಿಸಿ ॥

ಶರೀರದಲ್ಲಿ ಕೆರಿ ಹುಟ್ಟಿತು ೨೧ ಬಾಗೀಲ ಮಾಡ್ಯಾನ ಬೇಸಿ ।
ಒಂದೊಂದು ಬಾಗಿಲಕ ೭ ಮಂದಿ ನಿಲ್ಲಿಸಿ ।
ಕಾವಲ ಮಾಡೂತ ರಾತ್ರಿ ಹೊಡಿತಿದ್ದರು ಗಸ್ತಿ ।
ಸುಸ್ತ ಮಾಡಲಾರದೆ ಮಸ್ತ ಗಸ್ತಿ ತಿರಿಗಿ ಕಾವಲ ಮಾಡವರು ಜೇತಾರಿ

ದುಮಾಲಿ ಮದಲೀನ ಬಾಗೀಲಗಿ ೭ ಮಂದಿಗಿ ನಿಲಶ್ಯಾನ ।
೨೧ ಬಾಗೀಲ ಮುಗಸ್ಯಾನ ॥ ॥ ಗೀಗೀ ॥

೨೧ ಗುಣಲೆ ೭ ಇಟ್ಟು ಗುಣಶ್ಯಾನ ।
೧೪೭ ಅಂದಾನ ॥ ॥ ಗೀಗೀ ॥

ಏರು ಇದರಂತೆ ಶರೀರ ಸುರಳಿ ಸುತ್ತಿ ಅವಾ ಸ್ನಾಯುಗಳನ್ನೆಲ್ಲಾ ತೊಡಿಸಿ ।
ಬಂದೋ ಬಸ್ತ ಅವಾ ಎಲ್ಲಾ ಮಾಡಿಸಿ ।
೧೪೭ ಮಂದಿ ನಿಲ್ಲಿಸಿ ।

ಕೂಡಪಲ್ಲ ಗುಣಾಕಾರ ಲೆಕ್ಕಾ ಚಂದಾಗಿ ಕೇಳಕ್ಕಾ ಹೇಳತೇನು ನಾನು ಗುಣ
ಗುಣಿಸಿ ॥ ॥ ಗೀಗೀ ॥ ಚೌಕ ೧ ॥

ಒಬ್ಬೊಬ್ಬನ ಕೈಯಾಗ ಒಂಬತ್ತು ಮಂದಿ ೧೪೭ ಮಂದಿ ಮೆಂಬರಾ ।
ಚ್ಯಾರ ಆಟಾಣಿ ಮಾಡ್ಯಾರ ಪಗಾರಾ ।
ಎಷ್ಟು ಲೆಖ್ಖ ಐತು ಅಂತಿ ಶಾಹೀರಾ ।
೧೪೭ x ೯ ಅಂಕೀಗಿ ಗುಣಿಸಿ ಹೇಳತೇನು ಗುಣಾಕಾರಾ ॥ ಗೀಗೀ ॥

ಗುಣಿಸಿ ಹೇಳತೇನು ಗುರ್ತ ಮಾಡಿಕೊ ೨೩ ಹದಿಮೂರ ನೂರಾ।
ಇದು ಗುಣಿಸಿದರ ಬುರುವುದು ಗುಣಾಕಾರಾ ।
ಇದರಂತೆ ೭-೭- ಕೊಟ್ಟಾರಂತಿ ಮ್ಹೋರಾ ।
ಮ್ಹೋರದ ಲೆಕ್ಕಾ ಸಾರಿ ಹೇಳತೇನು ನೆರದು ಕುಂತೀರಿ ಪಂಡೀತರ ॥
॥ ಗೀಗೀ ॥

ಹದಿಮೂರ ನೂರ ೨೩ ಮಂದಿ ಒಬ್ಬೊಬ್ಬರಿಗಿ ಕೊಟ್ಟಾರ ಏಳೇಳುಮ್ಹೋರ
ಅದಕ ಗುಣಿಸಿ ಮಾಡಿ ನೋಡ್ರಿ ಗುಣಾಕಾರಾ ।
ದೋನಸೆ ಎಕ್ಕಸಷ್ಟ ಒಂಬತ್ತು ಸಾವೀರಾ ।
ಸರ್ವಜನರು ನೀವು ಸರಿಯಾಗಿ ನೋಡಿದರ ಎಳ್ಳಷ್ಟು ಬರುದಿಲ್ಲಾ
ಹೇರಾಫೇರಾ ॥ ॥ ಗೀಗೀ ॥

ದುಮಾಲಿ ಕಡದ್ಯಾಡಿ ಕಚ್ಯಾಡಿ ಕದನ ಯಾಕ ಇದರಾಗ ।
ಭೇದ ಬರುದಿಲ್ಲಾ ತಿಳದಂವಗ ॥ ॥ ಗೀಗೀ ॥

ವೇದ ಮೂರ್ತಿ ಪಂಡೀತರು ಕುಂತೀರಿ ನೀವು ಸಭಾದಾಗ ।
ಖರೇ ಸುಳ್ಳ ಹೇಳರಿ ಇವರೀಗ ॥ ॥ ಗೀಗೀ ॥

ಏರು ಪಾವ ನವಟಾಕ ಸೇರಾ ಅಚ್ಚೇರಾ ಮಣಾ ಹೇಳತೇನು
ಲೆಕ್ಕಾ ತಗೋ ತಂಗಿ ಎಣ ಎಣಿಸಿ । ಗುಣ ಗುಣಿಸಿ ।
ಸುಳ್ಳೆ ದಣಕೋ ಬ್ಯಾಡಾ ಸುರ್ತಿ ಕುಣಿ ಕುಣಿಸಿ ।

ಕೂಡಪಲ್ಲ ಗುಣಾಕಾರ ಲೆಕ್ಕಾ ಚಂದಾಗಿ ಕೇಳಕ್ಕಾ ಹೇಳತೇನು
ನಾನು ಗುಣಗುಣಿಸಿ ॥ ॥ ಗೀಗೀ ॥ ಚೌಕ ೨ ॥

ದೋನಸೆ ಎಕ್ಕಸಷ್ಟ ಒಂಬತ್ತು ಸಾವೀರಾ
ಜನಾ ಕೂಡಿತು ಕೆರಿ ಪಾಳ್ಯಾದ ಮ್ಯಾಗ ।
ಬ್ರಹ್ಮ ಅವತಾರ ಧರಿಸಿ ನಿಂತಾ ಎದರೀಗ ।
ಪಾವ ನವಟಾಕ ಸೇರ ಕೊಟ್ಟಾ ಒಬ್ಬೊಬ್ರಿಗ ।
ಏಕಸೇ ಬಾಣೆ ಮಣಾ ಮೂರ ಧಡೆ
ಒಂಬತ್ತ ಸೇರ ಕೊಟ್ಟಾ ಆಸೂರೀಗ ॥ ॥ ಗೀಗೀ ॥

ಜಕಾತಿ ಕಟ್ಟಿಯ ಲೆಕ್ಕಾ ಜಾಗೃದಿಂದ ಕೇಳತಂಗಿ
ಜಾಣತನದಿಂದ ಹೇಳತೇನು ನಿನಗ ।
ಪಾಸ್ಸೆ ಮಂದಿ ಕುಂತೀತು ಒಂದೊಂದು ಗಾಡ್ಯಾಗ ।
ಗಾಡಿ ನಿಂತೀತು ಮಾರೋರಿ ಮಳದ ಮ್ಯಾಗ ।
೪೬೩೦೫೦೦ ಮಂದಿ ಇತ್ತು ಗಾಡ್ಯಾಗ ॥ ॥ ಗೀಗೀ ॥

ಏಟೀಗೆ ಬಂದ ಮೇಲೆ ರೋಕ ರೂಪಾಯಿ
ಕೊಟ್ಟ ಕಡದ್ಯಾಡುದ್ಯಾಕವ್ವಾ ಇದರಾಗ ।
ಒಟ್ಟ ರೂಪಾಯಿ ಲೆಕ್ಕ ತಗೋ ಕ್ಷಣದಾಗ ।
ಬಹಳ ಬಿರಿ ಇಲ್ಲಾ ಬಲ್ಲಂತಾ ಜ್ಞಾನಿಗ ।
ಮೂರು ಕೋಟಿ ೨೪ ಲಕ್ಷ ೧೩ ಸಾವಿರ ೫೫೦ ಕೊಟ್ಟಾ ಪದರಾಗ ॥
॥ ಗೀಗೀ ॥

ದುಮಾಲಿ ಇದರಂತೆ ಕಡಿತನಾ ಸವಾಲ ಮಾಡ ತಂಗಿ ಪಾಡಾ ।
ಮಂದಿ ಕುಂತಾದ ಕೇಳುದಕ್ಹಾಡಾ ॥ ॥ ಗೀಗೀ ॥

ಅಪಶಬ್ದದ ಹಾಡಾ ಹಾಡಬ್ಯಾಡಾ ನೀ ಧೀಡಾ ।
ಸೋರತಾದ ಗಟ್ಟಿಲ್ಲಾ ನಿನ್ನ ಕೊಡಾ ॥ ॥ ಗೀಗೀ ॥

ಏರು ಚಡಚಣ ಹುಡುಗರು ದಿಡಗಲಿಂದ ಬಂದು ಸವಾಲ ಹೇಳಿದಾರ ಸಭಾಕ
ಕೂಸ ಹಣಮಂತಾ ಹುರಿ ಹೊಡದು ನಿಂತಾನ ಮೀಸಿ ।
ತಿರಗಿ ತಿರಗಿ ಮಾಡಿನೋಡ ಚವಕಾಸೀ ।

ಕೂಡಪಲ್ಲ ಗುಣಾಕಾರ ಲೆಕ್ಕ ಚಂದಾಗಿ ಕೇಳಕ್ಕಾ ಹೇಳತೇನು ನಾನು
ಗುಣಗುಣಸಿ ॥ ॥ ಗೀಗೀ ॥ ಚೌಕ ೩ ॥

ಸೋಸಿ ಸವಾಲ ಹೇಳು

ಸೋಸಿ ಸೋಸಿ ಸವಾಲ ಹೇಳಂತಿ ಹೂಡಿನಿಂತೇನಂತಿ ಲಗ್ಗೋರಿ।
ಬಳಿ ಕುಬಸಾ ತಂದೇನಂತಿ ಆಯೇರಿ ।
ನಿನ್ನ ಸವಾಲ ಕೂತು ಕೇಳೀನಿ ಚೆದರಿ ।
ಹುಸಿ ಇಲ್ದೆ ಗುಂಡಾ ನಾನು ಹೊಡಿತೇನು ಓಡಿಗೀಡಿ ಹ್ವಾದಿನೀ॥
॥ ಗೀಗೀ ॥

ಕಾಮಕ್ರೋಧ ಮಧಾ ಮೂರು ಮಂದಿ ಅಣ್ಣ ತಮ್ಮರು
ಯಾರ್‍ಯರು ಇದ್ದಿತ್ತಿಲ್ಲಾ ಅವರ ಸರಿ ।
ಮೂರ ಲೋಕಕ ಮೂರ ಮಂದಿ ನಿಂತಾರ
ಅದರೊಳಗ ಕಾಮ ಅಂಬಾವಾ ಧೈರಿ ।
ಮನಾ ಅಂಬುದು ಮಾಯಲಿಂದ ಹೋಗಿ ಆಗಿ ನಿಂತಿತೊ ಚಿಗರಿ॥
ಕ್ರೋಧನ ಕೈಯೊಳು ಬಾಣ ಹಿಡಿದು ತಾ ಜನರ ಇಟ್ಟು ಇಟಿದಾ ಗುರಿ।
ಕಾಮಮದಾ ಇದ್ದಿದಿಲ್ಲಾ ಅವನ ಸರಿ ।
ಮಾತ ಮೀರಿ ಬಾಣಬಿಟ್ಟಾ ತರಾತುರಿ ।
ಬಾಣಿನ ಏಟಿಗಿ ಬಹಳ ಚಿಗರಿ ಬಿದ್ದು ಪಟ್ಟಣ ಆಗಿಹೋಯ್ತು
ಹಾಳೋರಿ॥ ॥ ಗೀಗೀ ॥

ಪಟ್ಟಣದೊಳಗೊಬ್ಬ ಪಟ್ಟ ಶೆಟ್ಟಿ ಇದ್ದಾ ಸುಟ್ಟ ಬಿಟ್ಟಿದಾನೊ ಆ ಚಿಗರಿ।
ಆಗ ಆರ ಮಂದಿ ಓಡಿ ಬಂದ್ರು ಹವ್ವಾರಿ ।
ಸತ್ವ ಅಂಬೊ ಶೆಟ್ಟಿ ಹೆಸರಾ ಜಾಹೀರಿ ।
ಸತ್ವ ಹೆಚ್ಚಾದ ಮೇಲೆ ಕಾಮಕ್ರೋಧ ಮದಾ ಆಗಿ ಕುಂತು ಇವು ಘಾರಿ।
॥ ಗೀಗೀ ॥

ಶ್ಲೋಕ ಕೇಳರಿ ಕೇಳ ಶಾವೀರಾ । ಮನಸ್ಸ ಅಂಬುದು ಚಿಗರಿಯ ಹೆಸರಾ ।
ಸಿಟ್ಟಿ ಅಂಬುದು ತೊಟ್ಟು ಅವತಾರಾ । ಮಧಾ ಅಂಬುದು ಅಹಂಕಾರಾ
ಕಾಮ ಅಂಬುದು ಇಟ್ಟಾ ಪ್ರಕಾರಾ । ಮೂರ ಮಂದಿ ಅಣ್ಣ ತಮ್ಮ ಹೆಸರಾ ।

ಏರು ಮುಂದ ಮತಿಯ ಹೆಣ್ಣಾ ಮುಂದೀನ ಸವಾಲ ಕೇಳು ಬಲ್ಲಂತಾ
ಜ್ಞಾನಿಕರು ಕೂಡಿರಿ ।
ಹಿಂತಾ ಹಾಡೋ ಮಂದಿಗೆಲ್ಲಾ ನೋಡಿರಿ ।
ಒಳೇ ಸವಾಲ ಕೇಳ್ತಾವ ನಿಗ ನಿಗರಿ ॥

ಕೂಡಪಲ್ಲ ಹುಸಿ ಇಲ್ದೆ ಗುಂಡಾ ನಾನು ಹೊಡಿತೇನು ಓಡಿಗೀಡಿ ಹ್ವಾದಿನೀ ಬೆ।
॥ ಗೀಗೀ ॥ ಚೌಕ ೧ ॥

ಗಡಿಗಿ ತಗೊಂಡು ನೀ ಅಡಿಗಿ ಮಾಡಿದಿ ಮುಡದಾರಾ ಕುಂತ
ಕೇಳು ಜನದಾಗ
ಮೂರು ಮಂದೀಗಿ ಮಾಡೇನಂತಿ ಸಾಲಂಗ ॥
ಆಗ ಮಂದೀಗಿ ಮಾಡೇನಂತಿ ಸಾಲಂಗ ।
ಆರ ಮಂದಿ ಬಂದಾರಂತಿ ಉಂಡ ಮ್ಯಾಗ ।
ಆರು ಮೂರಕ್ಕ ಒಂಬತ್ತು ಮಂದಿದು ಕತಿ ಕೇಳ ತಂಗಿ ಜನದಾಗ ॥
ಕಾಯಾಪೂರದೊಳಗ ಅಷ್ಟಮದಗಳು ಆದಿ ಹಿಡಿದು ಇದ್ದು ದೇಹದಾಗ ॥
ಸತ್ವ ಅಂಬೊ ರಾಜಾ ಇದ್ದ ಸನಿದಾಗ ।
ಮೀರಿ ನಿಂತ ಮೇಲೆ ಹೇಳಲಿಲ್ಲಾ ಯಾರ‍್ಯಾರೀಗ
ಅಷ್ಟ ಮಧಗಳಂಬೊ ಅರಿದು ಸಣ್ಣ ಮಾಡಿ ಅಡಗಿ ಮಾಡ
ತಂಗಿ ಗಡಗ್ಯಾಗಽ ॥ ॥ ಗೀಗೀ ॥
ಅಷ್ಟ ಮದಗಳಂಬೊ ಅಡಗಿ ಮಾಡಿದ ಮೇಲೆ
ಸತ್ವ ಅಂಬೊ ರಾಜಾ ಇದ್ದ ಗಡಗ್ಯಾಗ ।
ಅವನ ಸೇವಾ ಮಾಡಿದಿ ನೀನು ಹೆಜ್ಜೆಜ್ಜಿಗ ।
ದುರ್ಗುಣಗಳು ದೂರಾದು ಕ್ಷಣದಾಗ ।
ದುರ್ಗುಣಾ ದೂರ ಮಾಡಿ ಶಿವಗುಣಾ ಕಲ್ತಮೇಲೆ
ಬೋಧಾ ಹೇಳು ತಂತಿ ಎಲ್ಲಾರೀಗ ॥
ಹೇಳಿದರ ಕೇಳತಾರ ಎಲ್ಲಾರು ॥ ಗೀಗೀ ॥

ಶ್ಲೋಕ ಕೇಳರಿ ಕೇಳ ಸಾ ವೀರಾ । ೬–೩–೯ ಮಂದಿಯ ಹೆಸರಾ ।
ಇದರೊಳು ಕಾಯುದಿಲ್ಲಾ ಕಸರಾ ।
ಅಷ್ಟಮದಗಳೆಂಬೊ ಅಡಗಿಯ ಹೆಸರಾ ।
ಸೂರ ಮಾಡಿದರ ಚ್ಯಾತೂರಾ ।
ಶಿವಗುಣ ಸತ್ವ ಉಳಿಯದಾ ನಿನ್ನ ಹತ್ತರ ।
ಬೋಧಾ ಹೇಳಿದ್ರ ಕೇಳ್ತಾರ ಎಲ್ಲಾರಾ ।
೬–೩–೯ ಮಂದಿ ಇಷ್ಟೇ ಯಾಕ ಚ್ಯಾತೂರಾ ।
ಶಿವನಾಮ ಹೇಳಿದರೆ ಕೇಳವರು ಜನಾ ಸಾವೀರಾರಾ ।
ಖರೇ ಸುಳ್ಳೊ ಹೇಳು ನೀ ಶಾವೀರಾ ॥ ॥ ಗೀಗೀ ॥

ಏರು ನಾ ಒಂದು ಸವಾಲ ನಿನಗ ಕೇಳ್ತೆನು
ಖೋಡಿ ಮೂಳಾ ಓಡಬ್ಯಾಡ ಹವ್ವಹಾರಿ ।
ನೀ ಹೇಳಲಿಕ್ಕೆ ಕಳದಿಡು ನಿನ್ನ ಸೀರಿ ।
ರಂಡ್ಯಾಗಿ ಇದ್ದರ ಬಿಡತನ ಛೀಮಾರಿ ।

ಕೂಡಪಲ್ಲ ಹುಸಿ ಇಲ್ದೆ ಗುಂಡ ನಾನು ಹೊಡಿತೇನು ಓಡಿ ಗೀಡಿ ಹ್ವಾದಿನೀ ಬೆದ।
॥ ಗೀಗೀ ॥ ಚೌಕ ೨ ॥

ಹಾದಿ ಹಿಡಿದು ನಾ ಹಾಡುದಕ ಹೊಂಟಿದ್ದೆ ಹಾದ್ಯಗ ಗಂಟ ಬಿತ್ತು
ಒಂದು ಮಿಕಾ ।
ನೋಡಿ ಮಾತಾಡಿಸಿದರ ಮಾತಾಡಲಿಲ್ಲಾ ಇತ್ತು ಮೂಕಾ ।
ನವ ಮಣಾ ಚರಬಿ ಇತ್ತು ಮೈಯಾಗ ಸೊಕ್ಕ ।
ನಾಲ್ವತ್ತು ಹೊಟ್ಟಿ ೬೦ ತುಟಿಗಳು ಎಣಿಸಿ ನೋಡಿದರ ಹತ್ತಲಿಲ್ಲ ಲೆಕ್ಕ।
॥ ಗೀಗೀ ॥

ಹಂತಾ ಮಿಕಾ ಇದು ಊರಾಗ ಸೇರಿತು ನೋಡಿ ಮಂದೀಗಿ
ಬಿದ್ದಿತು ಧಾಕ।
ನುಂಗಿ ನೀರ ಕುಡದಿತ್ತು ಎಲ್ಲಾ ಜನಕಾ ।
ಅದು ಎಂಥಾದ್ದು ಇತ್ತವ್ವಾ ಹೇಳು ಮಿಕ್ಕಾ ।
ಸವಾಲ ಮಾಡುವ ಶಾವೀರಾಗಿರಿ ಸರಿಯಾಗಿ ಬರಲೆವ್ವಾ ಕಡಿತನಕ ॥
॥ ಗೀಗೀ ॥

ಕೂಡಿದಂತಾ ಅಣ್ಣದ್ಯಾರೀಗಿ ಕೈಮುಗಿದು ಹೇಳ್ತೇನಾ
ಕೇಳಲಾರದೆ ಬಿಡಬ್ಯಾಡ್ರಿ ಕಡಿತನಕಾ ।
ಬಲ್ಲರಾದವರ ಹೇಳಿ ಹಾಡಿರಿ ತುರ್ತಕಾ ।
ಹೇಳಲಿಕ್ಕ ಶರ್ತ ಹಾಕುದ್ಯಾಕ ।
ಹದಗೇಡಿ ಮೂಳಾ ಹದಾ ಅಂದಾರು ಹಾರ್‍ಯರಿ ಒದ್ದಾರು ಸುಮ್ಮ
ಸುಮ್ಮಕಾ ॥ ॥ ಗೀಗೀ ॥

ದುಮಾಲಿ ಈ ಶರೀರಕ ಬಿಟ್ಟು ಬ್ಯಾರೆ ಏಳು ಭೂಮಿ ಮ್ಯಾಗ ।
ಬಹಳ ಮಂದಿ ಹೋದರು ಕೈಮ್ಯಾಗ ॥ ॥ ಗೀಗೀ ॥

ಶಾಹೀರಾಗಿ ಸಭಾದಾಗ ಸವಾಲ ಮಾಡ್ತಿ ನಮ್ಮ ಮ್ಯಾಗ ।
ಯಾರಂತ ತಿಳದಿದಿ ನನಗ ॥ ॥ ಗೀಗೀ ॥

ಏರು ಕೂಸ ಹಣಮಂತ ಸೋಸಿ ಹೇಳಿದಾ ಸವಾಲ ಹೇಳಿದಾ ಬರೋಬರಿ।
ಕೇಳಿ ಗಪ್ಪ ಆಗಿ ಹೋಯ್ತು ಈ ವೈರಿ ।
ಇದು ಹೋಗೂದು ನಡಿಸೀತು ಕೈಯಾಂದು ಜಾರಿ ।

ಕೂಡಪಲ್ಲ ಹುಸಿ ಇಲ್ದೆ ಗುಂಡಾ ನಾನು ಹೊಡಿತೇನು ಓಡಿಗೀಡಿ ಹ್ವಾದಿನೀ ಬೆದರಿ ॥
॥ ಗೀಗೀ ॥ ಚೌಕ ೩ ॥

ಸೂಳ್ಯಾರ ಚೆಲ್ಲಾಟ

ನಾಡ ಮೇಲೆ ನಾ ನೋಡೂತ ಬಂದೆನು ನಡದಾದ ಸೂಳ್ಯಾರ ಚೆಲ್ಲಾಟಾ ।
ಇವರ ನಡತಿ ನೋಡಿ ಅನಿಸಿತು ನನಗ ಬಹು ಕೆಟ್ಟಾ ।
ಅಬ್ರು ಅಂಬುದು ಇಲ್ಲ ಇವುಕ ಎಳ್ಳಷ್ಟ ।
ಹಗಮಲತಾನ ಗೊತ್ತ ಇಲ್ದೆ ಹಾದರತಾನ ಮಾಡ್ತಾಳ
ಜೋಗತಿ ಮಗಳ ಈಕಿ ಕಣಗಟ್ಟಾ ।
ಕಡಿಗಿ ಜೋಗಾ ಬೇಡುದು ತಪ್ಪಲಿಲ್ಲಾ ಅದೃಷ್ಟಾ॥ ॥ ಗೀಗೀ ॥

ಬಾಯಿ ಚಟಕ್ಕಾಗಿ ಇವಳು ಭಯಾ ಹಾರಿ ಕೂತಿದಾಳು
ಬುಂದೆ ಲಾಡು ಬಿಸ್ಕೀಟು ತಿನ್ನುದಕ ।
ಹಾದರ ಕಲಿಸಿದಾಳು ತಾಯಿ ಭಾಡ ತಿನ್ನದಕ ।
ಎಲ್ಲವ್ವನ ತಾಳೀ ಕಟ್ಟಿ ಬಿಟ್ಟಾರ ಇಕೀನ ಅಡ್ಯಾಡುದಕ ।
ದೇವರಕ್ಕಿ ಅಂತ ಹೇಳಿ ದೇವರ ಹೆಸರ ಮ್ಯಾಲ ಇವರು
ಅಭಿಚಾರ ಕೆಲಸಗಳು ಮಾಡ್ತಾರ ಬೇಲ್ಸೇಕ ।
ಮುಂದ ಭಗವಂತಾ ಮಾಡವ ಇವರ ಪಾಪದ ತೂಕ॥ ॥ ಗೀಗೀ ॥

ಮಳ್ಳ ವಯಸ್ಸಿನ ಹುಡಗರೀಗಿ ಮರಳ ಮಾಡಿ ಬಿಟ್ಟಾರು
ಬಾಳ್ವೆಯು ಕೆಡಸುದಕ ।
ಹೊಲಾ ಮನಿಯೆಲ್ಲಾ ಚೈನೀಗಿ ಹೊಯ್ತು ।
ಸೂಳಿಸೋಗ ಮಾಡಿ ಸೆಳಕೋತಾಳ ಕೈಯ್ಯಾನ ರೊಕ್ಕ ।
ಸೂಳಿ ಯರಕೊಂಡತಿಂದ ಗೆಣ್ಯಾ ತಿರಕೊಂಡು ತಿಂದನಂತ
ಗಾದಿ ಮಾತ ಹೇಳತಾರ ಆಧಾರ ಪೂರ್ವಕ ।
ನೀವು ತಿಳಿದು ನೋಡಿ ಸೂಳ್ಯಾರು ಮಾಡುದು ಬಿಟ್ಟಬಿಡಬೇಕ ॥ ಗೀಗೀ ॥

ದುಮಾಲಿ ಸತಿ ಕೂಡ ಮಾಡರಿ ಸಂಸಾರಾ । ಸೂಳ್ಯಾರ ಕೂಡಾ ಬ್ಯಾಡರಿ
ವ್ಯಾಪಾರಾ॥ ॥ ಗೀಗೀ ॥

ಹಿಂಡುತನಕ ಹಿಂಡತಾರ ಅವರಾ ।
ಹಿಂಡುದಾದ ಮ್ಯಾಗ ಕುಂಡಿಗಿ ಹೊಡಿತಾರ ॥ ॥ ಗೀಗೀ ॥

ಏರು ಹಣಾ ಹೋಗಿ ಗುಣಹೋಗಿ ಹೆಣದಂಗ ಮಾರಿ ಆಗಿ ಸ್ವಾನಿನಂಗ
ತೀರಿಗಿ ಮನಿಗಿ ಹೊಂಟಾ ।
ನೀವು ತಿಳಿದು ನೋಡಿ ಬಿಡಬೇಕು ಸೂಳ್ಯಾರ ಚಟಾ
ಅಲ್ಲಿಂದ ಕಳ್ಳ ನಾಯಿಯಂಗ ತಿರಗತಾವ ತಮ್ಮ ತಲಿಕೆಟ್ಟಾ ।

ಕೂಡಪಲ್ಲ ಕಡಿಗಿ ಜೋಗಾ ಬೇಡುದು ತಪ್ಪಲಿಲ್ಲಾ ಅದೃಷ್ಟಾ॥ ॥ ಗೀ ॥ ॥ ಚೌ ೧ ॥

ರೊಕ್ಕದಾಸೆಕ ಸೂಳ್ಯಾರು ಸಿಕ್ಕವರ ಬಲ್ಲಿ ಹೋಗಿ ಮಲಗಿ
ಕೆಡಸಿಕೊಂಡವ ತಮ್ಮ ಶರೀರಾ।
ಹುಳಾ ಬಿದ್ದು ಹೊಯ್ತು ಕೇಳಿರೆಣ್ಣಾ ಯೋನಿ ದ್ವಾರಾ।
ಹೊಲಸ ಹಿಡದಲೆ ಕರಿನಾಯಿ ಸಹಿತ ಹಾಯ್ತದ ದೂರಾ ।
ಮಾಡಿದ ಕರ್ಮ ತಟ್ಟಿತು ಅನ್ಯಾಯ ಹೋದಿತು ಸಾವುತಾನ
ಅಳೂದು ಐತಿ ಇವರ ಹಣಿಬರಾ ।
ಮುಂದ ಪಂತೆದಾಗ ಬುಂದೆ ಬೇಸನ ತಿನ್ನುದು ಮರತಾರಾ ॥
॥ ಗೀಗೀ ॥

ಗಳಿಸಿದ ಗಂಟ ಎಲ್ಲಾ ದವಾಖಾನಿಗಿ ಹಾಕಿದರು ಸೂಜಿ ಚುಚ್ಚಿ
ಕಳಿಸಿದಾರು ಡಾಕ್ಟರರಾ ।
ಗ್ವಾಡ್ಯಾಗ ಹೆಗ್ಗಣ ಇಟ್ಟು ಮ್ಯಾಲ ಗ್ವಾಡಿ ಸಾರಸ್ಯಾರಾ ।
ಎಂಟು ದಿವಸಕೊಮ್ಮಿ ಸೂಜಿ ಬೇಕ್ರಿ ತಯ್ಯಾರಾ ।
ಹಿರಿದ ಬ್ಯಾನಿ ಹತ್ತಿತು ಸತ್ತುಳ್ಳ ದೇವರ ಸತ್ತನ ನಿಂತು
ದುರಗವ್ವಾ ಮರಗವ್ವಾ ಎಲ್ಲವ್ವನ ಅಂಗಾರ ಹಚ್ಯಾರಾ ।
ಕುಂಡಿಗಿ ಪಡಿಕಿ ಕಾಣದೆ ಕೈಯಾಗ ಎಲ್ಲವನ ಪರಡಿ ಹಿಡದಾರಾ ॥
॥ ಗೀಗೀ ॥

ಸಣ್ಣ ನೂಲಿನ ಸೀರಿ ಉಟ್ಟು ಬಣ್ಣದ ಚಪ್ಪಲ ಕಾಲಾಗ ಮೆಟ್ಟು
ಐಟದಿಂದ ಅಡ್ಯಾಡುದು ಮರ್ತ ಬಿಟ್ಟಾರಾ ।
ಗಾದಿ ಲೇಪ ಎಲ್ಲಾ ಮಾಯವಾಗಿ ಹೋತು ಜರತರಾ ।
ಅಧರ ಗುಲಾಬದೆಣ್ಣೆ ಸಿಗದಕ್ಕೆ ಇವರು ಗಾಸಲೇಟ ಹಚ್ಯಾರಾ ।
ಜ್ಯಾಜ ಮಲ್ಲೀಗಿ ಜೂಜಮಲ್ಲಿಗಿ ಇರವಂತಿ ಶ್ಯಾವಂತಿಗಿ
ತುರಬಿನೊಳಗ ಹಾಕತಿದ್ದಳು ಹೂವಿನ ಹಾರಾ ।
ಇವರ ತಲಿ ಬೋಳ್ಸುದಕ ನಾಯ್ದು ಸಹಿತ ಸಿಗಂದಾಗ್ಯಾರಾ ॥ ಗೀಗೀ ॥

ದುಮಾಲಿ ನೀ ಗಳಿಸಿದ್ದು ನಿನಗ ಆಗಲಿಲ್ಲಾ ।
ಹಾಳಾಗಿ ಹೊಯ್ತು ಮಂದಿ ಪಾಲಾ ॥ ॥ ಗೀಗೀ
ದುಡದು ದುಃಖ ಪಡದಿ ರಾತ್ರಿ ಹಗಲಾ ।
ಅನ್ಯಾಯ ಗಂಟ ನಿಂದ್ರಲಿಲ್ಲಾ ॥ ॥ ಗೀಗೀ ॥

ಏರು ದೇಶದೊಳಗ ವಾಸುಳ್ಳ ಖೇಡಗಿ ಈಶ್ಯಾನ ಗುಡಿ ಐತಿ ಆರ್ಭಾಟಾ ।
ಬಿಂದು ಬೇಡಿಕೋರೆ ಪಾಪಲ್ಲೇ ಹೋಗುದು ಸುಟ್ಟಾ ।
ಖಾಜಾ ಸಾಹೇಬ ಹೇಳ್ತಾನ ಅಲ್ಲಿ ಹೋಗಿ ಹೊಂಟಾ ।

ಕೂಡಪಲ್ಲ ಕಡಿಗಿ ಜೋಗಾ ಬೇಡುದು ತಪ್ಪಲಿಲ್ಲಾ ಅದೃಷ್ಟಾ॥ ॥ ಗೀಗೀ ॥
॥ ಚೌಕ ೨ ॥

ಶಕ್ತಿ ಪದಾ

ನಿರ್ಮಾಯ ಶಕ್ತಿ ತಾ ಕುಂತು ಇಚ್ಛಾ ಶಕ್ತೀಗಿ ಹೇಳ್ಯಾಳಂತಿ
ನಿರಾಕಾರ ಮುರದು ಮಾಡ್ಯಾಳಂತಿ ನಿರ್ಮಾಣಾ ।
ಖರೇ ಮಳ್ಳನಂಗ ಒದರಬ್ಯಾಡ ಮುಕಳೀ ಮ್ಯಾಗ ಒದ್ದೇನಾ ।
ತನ್ನ ಇಚ್ಛಾ ಪ್ರಕಾರ ಹ್ಯಾಂಗ ಪುಟಶ್ಯಾಳ ಲೋಕನಾಥನ್ನಾ ।
ಲೋಕ ಹುಟ್ಟುಸುದಕ್ಕಾಗಿ ಅಂವಗ ಲೋಕನಾಥ ಹೆಸರಬಂತು
ಶಕ್ತಿಲಿಂದ ಶಿವಾ ಆಗ್ಯಾನಂತಿ ಉತ್ಪನ್ನಾ ।
ಮಾಯಿ ಮಲಿ ಕುಡಿಲಿಕ್ಕೆ ಮನುಷ್ಯ ಅಲ್ಲ ಹೈವಾನಾ ॥ ॥ ಗೀಗೀ ॥

ಶೆಟವಿ ತಾಯಿ ಹೆಚ್ಚಂತ ಸೆಟೆದು ನಿಂತು ಹೇಳತಿ
ತಪ್ಪುದಿಲ್ಲ ಅಂತಿರಿ ಅಕಿ ಬರೆದ ಪ್ರಕರಣಾ ।
ತನ್ನ ಮಕ್ಕಳ ಆಯುಷ್ಯ ಬರೆಯುವುದು ತನಗ ವಿಚಾರ ಇಲ್ಲೇನಾ ।
ಮೆಚ್ಚಿ ಮರಳ ಆಗಿ ಹೋಗಿದಾಳು ಸಮಗಾರನ್ನಾ ।
ಅಚ್ಯಾ ಉಚ್ಯಾ ಹೆಂಗಸದಕ ಮೆಚ್ಚಿಕಿಲ್ಲ ಮಸ್ತಕ
ದಾರ್‍ಯಾಗ ಉಚ್ಚಿ ಹೊಯ್ಯುವ ಈ ಹುಡಿಗಿ ಇನ್ನಾ ।
ಶೆಟವಿಗಿ ಏನೆ ಬರಿಬೇಕೆಂಬುದು ಇಲ್ಲರಿ ಜ್ಞಾನಾ ॥ ॥ ಗೀಗೀ ॥

ಚಂದ್ರಗುತ್ತಿ ಅರಸ ಮಗಳ ಮೇಲೆ ಮನಸ ಮಾಡಿ
ದೋಷಲಿಂದ ಆಗ್ಯಾನಂತಿ ಕಲ್ಲ ಪಾಷ್ಯಾಣಾ ।
ಗೌತಮ ಋಷಿ ಹೆಂಡ್ತಿ ಕಲ್ಲ ಆದದ್ದು ಕೇಳಿಲ್ಲೇನಾ ।
ರಾಮನ ಪಾದದಿಂದ ಹೊಂದಿದಾಳು ಪುನರ್ವಜನ್ಮವನಾ ।
ಭಕ್ತರ ಪಾಲನ ಮಾಡುದಕ ಅವತಾರ ಈ ಭವಕ
ಅಹಿಲ್ಯಾ ಯಾಕ ಆಗಿದಾಳು ಕಲ್ಲ ಪಾಷಾಣಾ ।
ಈಗ ಗಂಡನ ಕೂತು ಮುರದಂಗಾತು ಹೆಂಗ್ಸರ ಗೋಣಾ ॥ ॥ ಗೀಗೀ ॥

ದುಮಾಲಿ ಹ್ಯಾಂಗ ಹೆಚ್ಚಂತಿ ಹೆಂಗಸಾ ।
ತೊಟ್ಟ ತಿರಗಕ್ಕಿ ಸೀರಿ ಕುಬ್ಬಸಾ ॥ ॥ ಗೀಗೀ ॥
ದುಂಡ ಕುಚಾ ಹಿಡಿದು ಗಂಡಸಾ ।
ತಿಂಡಿ ಕಡಿಮಿ ಮಾಡಿದಾ ರಾಜಹಂಸಾ ॥ ॥ ಗೀಗೀ ॥

ಏರು ಆದಿ ಅನಾದಿ ಹಿಡಿದು ಶೋಧ ಮಾಡಿ ನೋಡ ನೀನು
ಬೇಧ ಭಾವನಾ ಬೆಳಸಬ್ಯಾಡಾ ಬೈಮಾನಾ ।
ನಿನಗೇನು ತಿಳಿಯುದಿಲ್ಲಲೇ ಸ್ವಾನಾ ।
ಎಲ್ಲಾ ಅವನಿಂದ ಆಗೈತಿ ತ್ರಿಭುವನಾ ।

ಕೂಡಪಲ್ಲ ಮಾಯಿ ಮಲಿ ಕುಡಿಲಿಕ್ಕಿ ಮನುಷ್ಯ ಅಲ್ಲ ಹೈವಾನಾ ॥ ಗೀ ॥ ॥ ಚೌ ೧ ॥

ಗಂಡ ಜೋಗ್ಯಾ ಸೀರಿ ಉಟ್ಟು ಗಂಡಸರ ಮಾನ ಕಳದಾನಂತಿ
ಮೂರಲಿಂಗಗಳು ಕೇಳ ಈಗ ದೇವರ ಹುಟಸ್ಯಾನಾ ।
ಪುಲ್ಲಿಂಗ ಸ್ತ್ರೀಲಿಂಗ ನಪುಸಂಕ ಲಿಂಗನ್ನಾ ।
ಮೂರು ಬಿಂದು ಇವು ಮನುಷ್ಯನಲ್ಲಿ ಆದು ಉತ್ಪನ್ನಾ ।
ಪುಲ್ಲಿಂಗ ಬಿಂದು ಸ್ತ್ರೀಲಿಂಗ ಬಿಂದು ಸವನ ಆಗಿ
ಎರಡು ಬಿಂದು ಸುಗಡಿ ಹುಟ್ಟಿ ಬಂದದ್ದು ಮಾತ ಸುಳ್ಳೇನಾ ।
ಈಗ ಯಾವನ ಬಡ್ಯಾಗ ಡೊಗ್ಗಸ್ತ್ರೀರಿ ಸುಗಡಿ ಹೆಂಗ್ಸನ್ನಾ ॥ ಗೀಗೀ ॥

ಮಾಯಿ ಹೊಟ್ಟಿಲೆ ಹುಟ್ಟಿಲ್ಲಾ ಎಷ್ಟು ಜನರು ಭೂಮಿ ಮ್ಯಾಲ
ಹೇಳತೀರಿ ಕೇಳ ಈಗ ಬರೆದ ಪ್ರಕರಣಾ ।
ಶಿಖಿ ಮುನಿ ಜಡಿಯಲ್ಲಿ ಹುಟ್ಟಿ ಬಂದಿಲ್ಲೇನ ಬಸವಣ್ಣಾ ।
ಮಹಾದೇವ ಕೋಪದಿಂದಾ ಹುಟ್ಟಿಸಿದಾನೋ ವೀರಭದ್ರನ್ನ ।
ವಿಷ್ಣು ನಾಭಿ ಕಮಲದಲ್ಲಿ ಬ್ರಹ್ಮ ದೇವರು ಹುಟ್ಟಿ ಬಂದ್ರು
ಮುಕ್ಕಾಲ ಭೃಂಗಿ ತೋರ್ಸಿಲ್ಲೇನು ಗಂಡಿsನ ಖೂನಾ ।
ಇದರಾಗ ಹೆಣ್ಣಿನ ಶಿಫಾರಸ ಕೇಳು ಉಳದಿಲ್ಲಾ ಏನೇನಾ ॥ ಗೀಗೀ ॥

ಮಹಾದೇವ ಯಾಕ ಇಟ್ಟಾನಂತಿ ಜಡಿಯೊಳಗ ಗಂಗಾನ
ಕೇಳ ಕೋತಿಕಾಳಕೂಟ ವಿಷದಿಂದ ಸುಡಿತಿತ್ತು ಜಗವನ್ನಾ ।
ಈ ಜಗಾ ಸುಟ್ರ ನೀ ಎಲ್ಲಿ ಇರತಿದ್ದಿ ಹೈವಾನಾ ।
ಆ ಕಾಳಕೂಟ ವಿಷಾ ಕುಡಿದಾ ನಮ್ಮ ಭಗವಾನಾ ।
ವಿಷ್ಣುನ ಪಾದದಲ್ಲಿ ಗಂಗಾ ಹುಟ್ಟಿ ಬಂದಿಲ್ಲೇನು ಮಂಗಾ
ಝುಳಕಾ ಮಾಡುದಕ ಇಟಕೊಂಡಾ ಜಡಿಯೊಳು ಗಂಗನ್ನಾ ।
ಇದು ಸುಳ್ಳ ಅಂದ್ರ ಮಚ್ಚಿಲೇ ಹೊಡೆದು ಮಣ್ಣ ಕೊಟ್ಟೇನಾ ॥ ಗೀಗೀ ॥

ದುಮಾಲಿ ವಿಷ್ಣು ದೇವರು ಸೀರಿ ಉಟ್ಟಿಲ್ಲಾ ।
ಮಾಯಾದ ಲೀಲಾ ।
ಪಾರ್ವತಿ ಅಂತೆ ಡೌಲಾ । ಮಾಡಿ ತೋರ್ಸಿದಾ ।
ಭಸ್ಮಸೂರ ಸುಟ್ಟ ಭಸ್ಮಾದಾ ॥ ॥ ಗೀಗೀ ॥

ಮಾಯಾಕಾರ ಕೃಷ್ಣ ಅವತಾರಾ । ಕೊರವಂಜಿ ವೇಶಧಾರಾ ।
ಸೋಳಾ ಸಾವೀರಾ । ಗೋಪ್ಯಾರನ ಆಳೀದಾ ।
ಬಾಲ ಬ್ರಹ್ಮಚಾರಿ ಅನಸೀದಾ ॥ ॥ ಗೀಗೀ ॥

ಏರು ಹಮ್ಮ ಬ್ಯಾಡ ಮನದಾಗ ಗುಮ್ಮಿಯಂತಾ ಸೂಳಿ ನೀನು
ಎಮ್ಮಿ ಮಗಳು ಆಗಬ್ಯಾಡ ಕಡಿಗಿ ದನಾ ।
ಗಿಡಾ ಏರಿದವರು ತೆಳಗ ಇಳಿತಾರ ಕಡಿಗಿ ಒಂದಿನಾ

ಕೂಡಪಲ್ಲ ಮಾಯಿ ಮಲಿ ಕುಡಿಲಿಕ್ಕೆ ಮನುಷ್ಯ ಅಲ್ಲ ಹೈವಾನಾ ॥ ಗೀ ॥ ॥ ಚೌ ೨ ॥

ಅನುಸೂಯಾ ದೇವಿ ಮಗಳು ಅನುಲಯ್ಯಾ ಅಂಬುವವಳು
ಸೂರ್ಯಾಗ ಆಣಿ ಹಾಕಿ ಕತ್ತಲ ಕೆಡವ್ಯಾಳಂತಿ ।
ತನ್ನ ಗಂಡನ ಪ್ರಾಣಾ ಉಳುಸುದಕ್ಕ ಮಾಡ್ಯಾಳ ಹಿಕಮತಿ ।
ತಾ ಹೆಚ್ಚ ಆದರ ಗಂಡನ ಸೇವಾದ್ದು ಕಾರಣೇನ ಐತಿ ।
ತಮ್ಮ ದೋಷ ಒಯ್ದು ಅನ್ಯರ ಮ್ಯಾಲ ಇಡುವುದ್ಯಾಕ ।
ಸೂರ್ಯಾಗ ಆಣಿ ಹಾಕುದಿದು ಹೌದೇನ ರೀತಿ ।
ನಮ್ಮ ದೇವರಲಿಂದ ಅಕಿದು ಮುತ್ತೈದತಾನ ಉಳದೈತಿ ॥ ಗೀಗೀ ॥

ಮಹಾದೇವನ ಕಾಮ ಸುಟ್ಟಾದಂತ ।
ಗಂಡಸ್ತಾನ ಹೋಗ್ಯಾದಂತಿ ಮಹಾದೇವನಲ್ಲಿದು
ಪಾರ್ವತಿಗ್ಯಾಂಗ ತಿಳಿತೈತಿ ।
ಆಕಿ ಮುಂದ ತಾ ಮಾಡಿ ತೋರ್ಸಿದಾ ರೀತಿ ।
ಸುಟ್ಟ ಕಾಮನ ಬೂದ್ಯಾಗ ಗಂಡಸ್ತಾನ ಎಲ್ಲಿ ಇರತೈತಿ ।
ಹೇಳು ಹೇಳ ಯ್ಯಾವನ ಬಲ್ಲಿ ಬೂದಿ ಒಗೆದು ತರುದು
ಬುಲ್ಲಿ ಎಂಥಾ ಗುರು ಕಲಿಸಿದಾನ ನಿನಗ ಅಡಜ್ಯಾತಿ ।
ಬರೇ ಬುದ್ದಿ ಇಲ್ದೆ ಬೊಗಳಬ್ಯಾಡ ಅಲ್ಲ ನಿನ್ನ ರೀತಿ ॥ ಗೀಗೀ ॥

ದುಮಾಲಿ ಹೆಣ್ಣ ಹೆಚ್ಚ ಮಾಡಿ ಹಾಡತಿ ।
ಎಲ್ಲಿ ಬೆಳದೈತಿ ।
ಮಾಯಿ ನಾ ಒತ್ತಿ । ನೆಲಕ ತುಳದಾನೋ ।
ಶ್ರೀ ರೇವಣ ಸಿದ್ಧೇಶ್ವರನೋ ॥ ॥ ಗೀಗೀ ॥

ಸುಳ್ಳಂದ್ರ ಹಲ್ಲ ಮುರದೇನೋ । ಬಲ್ಲಂತವರನ್ನ ।
ಹೋಗಿ ಕೇಳು ನೀನು । ಬರೆದು ಕೊಡತೇನ ।
ನಮ್ಮ ಗಜ್ಜಿನಾಗ ಸಿಕ್ಕರ ಹುಗದೇನು ॥ ॥ ಗೀಗೀ ॥

ಏರು ನಾಡೀಗಿ ಖೇಡಗಿ ದೇಶದೊಳು ಹೆಸರಾಗಿ ಸೈಯ್ಯದ ಪೀರ
ನೆನೆದಾನ ಭಗವಾನ ।
ಖಾಜಾ ಸಾಹೇಬನ ಕವಿಗಿ ಕಸರ ಇಲ್ಲ ಕೇಳು ಏನೇನಾ ।
ಬಲ್ಲವಗ ಉಂಡಂಗ ಆಗೂದು ಅಮೃತ ಭೋಜನಾ ॥
॥ ಗೀಗೀ ॥ ಚೌಕ ೩ ॥

ಅಲ್ಲದ ಕೆಲಸ

ಅಗ್ಗದ ಹೆಂಗ್ಸರೆಲ್ಲಾರು ಕೂಡಿ ಹಿಗ್ಗಲಿಂದ ಹಾಡ ಕಲ್ತು
ಮುಗ್ಗ ಜ್ವಾಳನಕ್ಕಿನ್ನ ನೀವು ಕಡಿಗಿ ಆದಿರೆ ।
ನಿಮ್ಮ ನಡಿ ನುಡಿ ಚಲೋ ಇಲ್ಲಾ ಬಡಿವೇರ ಸಾಕರೆ ।
ಬುಡಾ ಒಡೆದು ಈಗ ನಡಬರಕ ಭೋಕ ಬಿದ್ದದರೆ ।
ಗಡಾನೇ ಇಲ್ಲಿದು ಎದ್ದ ಏಳೊ ಏರ್ಗಿ ಚಡಾವ್ರ ಮಾಡ್ಯಾರು
ಹುರುದುಣ್ಣಿ ಹುಡುಗುರೆಲ್ಲ ಬಹಳ ಕೂಡ್ಯಾರೆ ।
ಅಲ್ಲದ ಕೆಲಸ ನಿಮದು ಎಲ್ಲವನೆ ತಾಳಿs ಕಟ್ಟೀರೆ ॥ ॥ ಗೀಗೀ ॥

ಎಲ್ಲವ್ವನ ಜೋಗತಿ ನೀನು ಎಲ್ಲಾರಿಗಿ ಹೋಗತಿ
ಮುಂದೀನ ಹರ್ಕಿ ಹಾಕಿ ।
ಮಾನ ಅಭಿಮಾನ ಎಲ್ಲಾ ಬಿಟ್ಟು ನೀಂತಿ ನಾಚಿಕಿ ।
ಬಹಳ ತಿನ್ನುವ ಮಂದಿ ಈಗ ನಾಡಿನೊಳು ಹೆಚ್ಚಾಗಿ
ಸುಟ್ಟ ಸುಣ್ಣ ಆದರ ಹುಣ್ಣದ ಮಡವಿಗಿ ಸಿಕ್ಕಿ ।
ಸೂಳಿವಾಸ ನಿಂದು ಸರ್ವ ಮಂದಿಗೆ ಸುತ್ತ ಹಾಕಿ ॥ ಗೀಗೀ ॥

ಅಬುರ ಗೇಡಿ ಮಂದಿ ನೀವು ಖಬರಿಲ್ದೆ ಅಡ್ಡಾಡಿ
ಸಿಂಗಲ ಚಹಾಕಸ್ಯೆತೆ ನೀನು ಪಿರಿಯಾದಕ್ಕಿ ।
ಕಂಡ ಮಂದಿಗೆಲ್ಲಾ ಕೈಮಾಡಿ ಕರದು ನೋಡಕ್ಕಿ ।
ಹಾದರೆಂಬುದು ಹಳಿಸಿ ಕೂತು ಸೂಳಿಗಾರಕ್ಕಿ ।
ಉಟ್ಟೇನಂದ್ರ ಸೀರಿ ಇಲ್ಲಾ ತೊಟ್ಟೆನಂದ್ರ ಕುಬಸ ಇಲ್ಲಾ
ಒಂದೇ ಉಟ್ಟು ಒಂದೇ ತೊಟ್ಟು ಬಾಳ್ವೆ ಮಾಡಕ್ಕಿ ।
ಈಗ ಹಾಡು ಪುರ್ತೆ ಮಂದಿ ಸೀರಿ ಕಡಾ ತಂದಕ್ಕಿ ॥ ಗೀಗೀ ॥

ರುಮಾಲಿ ಗಳಸೇನಂದೆ ಖಾತೆದ ಹೊಲಾ । ಆರಸಕ್ಕಿ ಹಕ್ಕಲಾ ।
ಅಗ್ಗ ಮಂದಿಯೆಲ್ಲಾ । ಹೊತ್ತ ನೀವು ಜಡಾ ।
ಜೋಳಗಿ ಹಾಕಿ ಬೇಡಕ್ಕಿ ನೀ ಜೋಗಾ ॥ ॥ ಗೀಗೀ ॥

ಕಂಡ ಮಂದಿಗಿ ಕೈಯ್ಯ ಚ್ಯಾಚಕ್ಕಿ । ಭಂಡಾರ ಹಚ್ಚಕ್ಕಿ ।
ಕುಂಡಿ ಕುಣಿಸಕ್ಕಿ । ತಿರವ್ಯಾಡಿ ಧಿಡಾ ।
ನನ್ನ ಮುಂದ ನಡಿಯಲಾರ್ದು ಸೋಂಗಾ ॥ ॥ ಗೀಗೀ ॥

ಏರು ಸೂಳ್ಯಾರ್ಯಾ ನಿಮ್ಮ ಜೀವಾ ಸೂಲ ಮೇಲೆ ಇದ್ದಂತೆ
ಒಬ್ಬರಗಿ ಬಿಟ್ಟು ಒಬ್ಬರೀಗಿ ಸೆರಗ ಹಾಸತೀರೇ ।
ಮಾವನ ಗೆಜ್ಜಿನೊಳು ಒಂದು ದಿನಾ ಗಜ್ಜಿಗಿ ಹಾಯಿತೀರೇ ।
ಬಂದು ಒದಗಿದಾಗ ಅಂದ ನೀವು ಕಂದಾ ಒಗಿತೀರೆ ।

ಕೂಡಪಲ್ಲ ಅಲ್ಲದ ಕೆಲಸ ನಿಮದು ಎಲ್ಲವ್ವನ ತಾಳಿ ಕಟ್ಟೀರೇ ॥ ಗೀಗೀ ಚೌಕ ೧ ॥
ನವಬ್ಯಾನಿ ಹತ್ತಿ ನೀವು ನಾರಕೋತ ಕೂಡತೀರೇ ನಾಯೀ ಸಹಿತ ದೂರ
ಹಾಯತಾವ ಎಂಥಾ ಭೋಗ ।
ಮೂರ ದಿವಸ ಸಹಿತ ನಡೆಯುವದಿಲ್ಲಾ ನಿಮ್ಮ ಸೂಳೀ ಸೋಗ ।
ನಿನ್ನ ಹರೆ ಬಗ್ಗ ಬಡದ ಮೇಲೆ ಬೀಳೂದು ತೆಗ್ಗ ।
ಮಾರಿ ಚಿನ್ನ ಹೋದ ಮೇಲೆ ಯಾರು ನಿಮಗ ಕೇಳುದಿಲ್ಲಾ
ಮಾರಿಕೊಂಡು ತಿಂದಿ ಗಳಿಸಿದ ಗಂಟ ಆವಾಗ ।
ಹಂದಿ ಮರಿ ಆದರ ಚಂದ ಕಾಣೂದು ಹರೇದ ಕಾಲದಾಗ ॥ ಗೀ ॥

ಬಗರಿ ಮಾಟದಂತೆ ಕುಚ್ಯಾ ನಿಗರಿ ಬಂದು ತೋರತಿದ್ದು
ಹಗರ ಹುಡುಗರ ಮನಸ್ಸಿನೊಳು ಕಂಡು ನಟ್ಟಂಗ ।
ಕಾಮನಾಟದೊಳು ಸಾಮತಗದರ ಬೆವರ ಬಿಟ್ಟಂಗ ।
ಅಕ್ಕರಲೀಲೆ ಅವನ ಅವಚಿಕೊಂಡಿ ತೆಕ್ಕಿ ಒಳಗ ।
ಮಕ್ಕರ ಹರಿಯದ ಹೆಣ್ಣ ನೀನು ಸಕ್ರಿಯಂಗ ಸವಿತೋರಿ
ನಕರಿ ಆಡೂದರೊಳಗ ಹೊಗತಿದ್ದಾ ಇಲ್ದಂಗ ।
ಹದಾ ತೀರಿದ ಮೇಲೆ ಆತು ರಂಡಿಗಿ ಒದಿರಿ ಅಂದಂಗ ॥ ಗೀಗೀ ॥

ಸತ್ತ ಹೋದರ ಸಹಿತ ನಿನ್ನ ನಾಯಿs ಸಹಿತ ಹೊರುದಿಲ್ಲಾ
ಯಾರು ಹೋಗಿ ಹೇಳಬೇಕ ನಿಮ್ಮ ಎಲ್ಲವ್ವಗ ।
ಮುನಸಿ ಪಾಲ್ಟಿಯವರು ಒಯ್ದು ಒಗಿತಾರ ಗಟಾರದೊಳಗ
ಎಲ್ಲವ್ವನ ತಾಳೀ ಕಟ್ಟಿದ್ದರ ನರಕ ಮಾತ್ರ ತಪ್ಪದು ಎಂದೀಗ ।
ದೇವರಕ್ಕಿ ಅನ್ನುವದು ಹಿಂತಾ ಕೆಲಸ ಮಾಡುದು ಯಾವ ಸೂಳಿ
ಕಲಿಸಿ ಇಟ್ಟಾಳ ಖೋಡಿ ರಂಡೀಗ ।
ಏನು ಮಾಡಿದರೆ ಹೋದಿತು ಸಿಟ್ಟ ನನ್ನಗ ॥ ॥ ಗೀಗೀ ॥

ದುಮಾಲಿ ನೀ ಗಳಿಸಿದ್ದು ನಿಂದ ಆದ ಯರ್ತಾ।
ಇಲ್ಲ ಅದು ಸ್ವಾರ್ಥಾ । ಬಿಟ್ಟು ಅದನ್ನ ತೀರ್ಥಾ
ಗಂಡನ ಮಾಡಿಕೊಳ್ಳ । ಸೂಳ್ಯಾರ ಬಾಳ್ವೆ ಎಲ್ಲಾ ಹಾಳಾ ॥ ಗೀಗೀ ॥

ನಿನ್ನ ಹೊಟ್ಟಿಲೆ ಹುಟ್ಟಿದವರನ್ನಾ । ಅವರಿಗೂ ಅಪಮಾನಾ ।
ಜನಾ ಅನ್ನುವನಾಗಿ ಸೂಳಿ ಮಕ್ಕಳಾ ।
ಮಕ್ಕಳಿಗಾದ್ರು ಇಟ್ಟಿ ನೀ ಗೋಳ ॥ ॥ ಗೀಗೀ ॥

ಏರು ಮಾನವ ಜಲ್ಮಕ ಹುಟ್ಟಿದಿ ಬಟ್ಟಿ ಉಟ್ಟಿದಿ ಮರಿಯಾದಿ
ಕೈ ಮುಗಿತೇನು ಕೆಟ್ಟ ಕೆಲಸ ಬ್ಯಾಡ್ರೆ ।
ಗಂಡನ ಮಾಡಿಕೊಂಡು ಆತನ ಸೇವೆಯಲ್ಲಿ ದುಡಿರೇ ।
ಇಂತಾ ಹುಚ್ಚುಚ್ಚಾರ ಕೆಲಸದೆಗಳಿಗೆ ಮಚ್ಚೀಲೆ ಹೊಡೀರೇ ॥

ಕೂಡಪಲ್ಲ ಅಲ್ಲದ ಕೆಲಸ ನಿಮದು ಎಲ್ಲವ್ವನ ತಾಳೀ ಕಟ್ಟೀರೇ ॥ ಗೀ ॥ ಚೌ ೨ ॥
ಮುದ್ದಾಮ ಈಗ ಸರಕಾರದವರು ಸದ್ಯೆ ಈಗ ನಿಮ್ಮನ್ನ ಒಯ್ಯತಾರ
ಗಂಡನ ಮಾಡಿ ಕೊಡತಾರ ಕೇಳ ಬಿದ್ದೋಡಿ ।
ಗಂಡನ ಮಾಡಿಕೊಂಡು ಗತಿಗಿ ಹೊಂದ ಗೈಯ್ಯಾಳರಂಡಿ ।
ಬ್ಯಾಜ ಮಾನ ಮರಿಯಾದಿ ಮಾತ್ರ ಗಂಡನಿಂದೇ ಕಂಡಿ ।
ಬಾಳ್ವೆ ವಂತಳು ಆಗಬೇಕು ಬಹಳ ಹೇಳುದು ಏನೈತಿ
ಎಲ್ಲಾ ಗಂಡ್ಸರ ಬಲ್ಲಿ ಇರುದು ಅದೇ ಗೆಂಡಿ ।
ಒಬ್ಬ ಗಂಡನ್ನಾಗಿ ತೀರಿಸಕೋರ ನಿನ ತಿಂಡಿ ॥ ॥ ಗೀಗೀ ॥
ಕೆಟ್ಟ ಚಟಕ್ಕಾಗಿ ಎಲ್ಲಾರು ಕೆಟ್ಟು ಹೋಗುವರಂತ ಹೇಳಿ
ಒಟ್ಟಿಗೆ ಇದ್ನ ಸರಕಾರದವರು ಕಾಯ್ದೆ ಮಾಡಿ ।
ನಿಮ್ಮನ್ನ ಹೆಟ್ಟಿ ಹಿರಿದು ಖಟ್ಲೆ ಹಾಕ್ತಾರ ದಮ್ಮ ಹಿಡಿ ।
ಇಷ್ಟ ಆದರ ಸಹಿತ ಬಿಡುದಿಲ್ಲ ನಿನ್ನ ಕೆಟ್ಟ ನಡಿ ।
ವೀರಬಸವಂತನ ಅವತಾರದವರು ಹುಟ್ಟಿ ಬಂದರು
ಅಂಬೇಡಕರರು ಸನಿ ಬಂತು ಸೂಳ್ಯಾರ ಸಾವಾ ಇದೇ ಕಡಿ ।
ನಿಮ್ಮ ಸೂಳಿ ಸೋಂಗಿಗಿ ಬೆಂಕಿ ಹಚ್ಚರಿ ಕೊರೆದು ಕಡ್ಡಿ ॥ ಗೀಗೀ ॥
ಆಸು ಎಲ್ಲಾ ತಿಳಿಯಬೇಕು ಬ್ಯಾರೇ ವೇಷ ಹಾಕಬೇಕ
ಸದ್ಗತಿ ಹೊಂದು ಸದ್ಗುರವೀನ ಕೂಡಿ ।
ವ್ಯರ್ಥ ಕಾಲಹರಣ ಕಳಿಯಬ್ಯಾಡಲೇ ಖೋಡಿ ।
ಎಂಬತ್ತು ನಾಲ್ಕು ಲಕ್ಷ ಜನ್ಮದೊಳು ಇದೇ ಕಡಿ ।
ನಡಿ ನುಡಿ ತೊಡಿಯು ಕಡಿತನಕ ಪಾಲಿಸಿದರ
ಯಾರೂ ಇಲ್ಲಾ ನಿಮ್ಮ ಜೋಡಿ ।
ಬಂಗಾರ ಒರಿಗಿ ಹಚ್ಚದಂಗ ಆಗೂದು ಪತ್ತಾರ ನೋಡಿ ॥ ಗೀಗೀ ॥
ದುಮಾಲಿ ಪತಿ ಕೂಡ ಮಾಡರಿ ಸಂಸಾರಾ ।
ಯಾತರದಿಲ್ಲಾ ಘೋರಾ ।
ನೀತಿವಂತರಾ । ಜ್ಯಾತಿಗಿಲ್ಲಾ ಬೇಧಾ ।
ಖಾಜಾ ಸಾಹೇಬ ಕರೆದು ಹೇಳಿದಾ ॥ ॥ ಗೀಗೀ ॥
ಅವರ ಮಾತ ಕೇಳಿದರ ಪಾಡಾ ।
ಸೇರಬ್ಯಾಡ ಸುಡಗಾಡಾ । ಆಗೂದು ಕೇಡಾ ।
ಬೈದು ಹೇಳುದಾ । ಬುದ್ಧಿ ಮಾತಾ ನಿಮಗ ಬೈಯುದಾ ॥ ಗೀಗೀ ॥
ಏರು ನಾಡಿನೊಳು ಖೇಡಗಿ ನೋಡಿ ಪದಾ ಮಾಡಿ ಅವರು
ಹಾಡಿ ಹಾಡಿ ಸಭಾದೊಳು ಲೆಕ್ಚರ್ ಕೊಡತಾರೆ ।
ಖೋಡಿ ಊಟಕ ಕುತ್ತಾಕ್ರ ಹೈರಾಣ ಒಡದಂಗ ಮಾಡಬ್ಯಾಡರೆ ॥
ಅಲ್ಲದ ಕೆಲಸಾ ನಿಮ್ಮದುಎಲ್ಲವನ ತಾಳಿ ಕಟ್ಟೀರೇ ॥ ಗೀ ॥ ಚೌ ೩ ॥

ದಮ್ಮ = ತಡೆ **ಆಸು = ಅಷ್ಟು**

ಶಿವಸ್ತುತಿ

ಹಾಡಿ ಹರಸುವೆನು ನಿನ್ನ ಪದ್ಯ । ಓದುವೆನು ಅಧ್ಯಾ ।
ವರವ ಆಗೊ ಸಧ್ಯೆ । ಸಾಂಬ ನಿನ್ನ ಸ್ಮರಿಸುವೇನು ದೇವಾ ।
ಅಂಬಾರಿ ಕೆಳನೀ ಆದಿ । ಚರ್ಮಾಂಬರ ಹೊತ್ತಿದಿ ।
ಬುದ್ಧಿ ಧರಿಸಿದ । ರಕ್ಷುಸುವಾ ನೀನೇ ಸದಾಶಿವಾ ॥ ॥ ಗೀಗೀ ॥

ಬಾಗ್ಯೇದ ನೀನೇ ಭಗವಂತಾ । ಜನನ ಮರಣ ರಹಿತಾ ।
ಭಕ್ತರ ಪಿತಾ । ಧರಣೀ ಕೇಶಿ ಕರಣೀಸುವಾ ।
ನೀರಾಕಾರಾ ನಿಜರೂಪ ತೋರಿದಿ । ಮಾಯಾಕಾರನಾದಿ ।
ಸಿಂಧುಭಕ್ತೀವಾನ ಸಿರಿಯಾಳ । ಆದ ನಿನ್ನ ಆಳಾ ।
ಕೊಯ್ದು ಮಗನ ಕೊರಳಾ ।
ಎಡಿಯ ಮಾಡಿ ತಂದು ನಿನಗ ಇಟ್ಟವಾ ।
ಚಾಂಗುಣಿ ಪತಿವ್ರತಿ ಕೂಡಿಸತಿ ಪತಿ ।
ಹೊಂದಾರ ಸದ್ಗಗಿ ಚಿಲ್ಲಾಳನ ಪ್ರಾಣ ವೈದಂಥವಾ ॥ ॥ ಗೀಗೀ ॥

ದುಮಾಲಿ ಸಕಲ ಲೋಕಕ್ಕೆ ಸರ್ವೇಶಾ । ಜಗತುಂಬಿ ತುಳಕವಾ ಜಗದೀಶಾ ॥
॥ ಗೀಗೀ ॥

ನಂಬಿ ನಡದವರೀಗಿ ಆಗಾವ ನೀನು ವಶಾ ।
ಭಕ್ತರೀಗೆ ಬಿಡಿಸದ ಪಾಶಾ ॥ ॥ ಗೀಗೀ ॥

ಏರು ಕೂಡಪಲ್ಲ ಬೇಡಿದವರಿಗೆ ಬೇಡಿದ್ದು ಕೊಟ್ಟ । ನೋಡಿ ಅವರ ನಿಷ್ಠಿ
ವಿಷಾ ಕಳಕೊಂಡವಾ ಕುಡದೀದಿ ನೀನೆ ಮಾನುಭಾವಾ ॥
॥ ಅಂ ॥ ಗೀಗೀ ॥ ಚೌಕ ೧ ॥

ಗಂಗೀನ ಧರಿಸಿ ಗಂಗಾಧರಾ । ಗೌರಿಯ ವರಾ ।
ಚಂದ್ರಶೇಖರಾ । ಸರ್ಪಭೂಷಣ ಅಲಂಕಾರಾ ।
ರುದ್ರಾಕ್ಷಿಮಾಲಿ ಕೊರಳಲ್ಲಿ । ಜಟಾ ಶಿರದಲ್ಲಿ ।
ಡಮರಿ ಕೈಯಲ್ಲಿ । ತ್ರಿಶೂಲ ಪಿಡಿದಿ ತ್ರಿಶೂಲಧರಾ ॥ ॥ ಗೀಗೀ ॥

ಪಾರ್ವತಿ ಪತಿ ಶಿವಾ ಹರಾ । ನಂದೀಶ್ವರಾ ।
ತ್ರಿಪುರ ಸಂಹಾರಾ । ಮಾಡಿ ಸಕಲ ಸುಂದರಾ ।
ಗಜಾಸೂರಂದ ಮುರಿದೀದಿ ಗರ್ವಾ ।
ಮಾಡಿದಿ ಹರವಾ । ಕೊಯ್ದು ಅವನ ಶಿರವಾ ।
ದೇವತರ ಕಷ್ಟ ಮಾಡೀರಿ ದೂರಾ ॥ ॥ ಗೀಗೀ ॥

ಭಕ್ತರೀಗೆ ಪರಿಪಾಲಕ । ದುಷ್ಟರೀಗಿ ಶಿಕ್ಷಕಾ ।
ನಿನ್ನ ಕಾಯಕಾ । ಕಾಯ ಕೈಲಾಸದ ಶಿಖರಾ ।

ಭೃಂಗಿನಾಟ್ಯ ಕುಣದಾನೊ ಚಂದಾ । ದೇವಾ ನಿನ್ನ ಮುಂದ
ಷಣ್ಮುಖಕಂದಾ । ಓದುವವ ಕುಂತ ಸಕಲ ಶಾಸ್ತ್ರ॥ ॥ ಗೀಗೀ ॥

ದುಮಾಲಿ ಆ ಬಡವಿ ನಿಂಬೆಕ್ಕಗ । ನಂಬೆಣ್ಣನ ಪ್ರಾಣ ಪಡದೀರಿ ॥ ಗೀಗೀ ॥
ಚನ್ನ್ವನ ಆಳ ಆಗೀದಿ । ಡೊಂಬರ ಮನ್ಯಾಗ ದುಡದಿದಿ ॥ ಗೀಗೀ ॥

ಏರು ನಿನ್ನ ಭಕ್ತರು ನಿನಕ್ಕಿಂತಾ ಶ್ರೇಷ್ಟಾ । ಉತ್ತೇಜನ ಕೊಟ್ಟ ।
ಕೂಡಪಲ್ಲ ತಿಳಿಯದಂಗ ಆಟಾ । ಒಲಿಸಿಕೊಂಡಿ ಭಕ್ತರ ಮನವಾ ॥
॥ ೬೦ ॥ ಗೀಗೀ ॥ ಚೌಕ ೨ ॥

ಮೂರು ಲೋಕದ ಗಂಡ ಅನಸೀದಾ । ಪುಂಡ ಪಾರ್ಥಂದಾ ।
ಬಿರ್ದ ಸಾರುದಾ । ಬೇಡ ಆಗಿ ಕಾಡ ಹಂದಿನ ಒಗದ ।
ತಂಟೆ ಹತ್ತಿತಾಗ ಇಬ್ಬರಿಗಾ । ಮೆಚ್ಚಿ ಅವನೀಗ ।
ಒಂದು ಭಕ್ತೀಗ । ಪಾಶುಪತಾಸ್ತ್ರವ ಕೊಟ್ಟಿದಿ ॥ ॥ ಗೀಗೀ ॥

ಮಾರಬಂಡ್ಯಾ ಮಾಡಿದಿ ನಿನ್ನ ಪೂಜಿ । ಮುಗದಿತ ವನಗಂಜಿ ।
ಮರಣಕ್ಕೆ ಅಂಜಿ ತಾಳಲಾರದೆ ಮನಬಾದಿ ।
ಆ ಶಿವಲಿಂಗದೊಳು ಉದ್ಭವಿಸಿ । ಬಿಡಿಸಿದಿ ಯಮನ ಫಾಸಿ ।
ಮಾರಖಂಡೇನವಿಸಿ । ಚಿರಂಜೀವರವವನ್ನು ನೀಡಿದಿ ॥ ॥ ಗೀಗೀ ॥

ಹಿಮಾಲಯ ಪರ್ವತದೊಳಗ । ಭಕ್ತ ನಿನ್ನ ಗಿರಿಗ ।
ಬರತಾರ ಭೆಟ್ಟಿಗ । ದಾರಿ ತಪ್ಪಿದವರಿಗೆ ।
ಶ್ರೀ ಸಿದ್ಧರಾಮಗ ಬೆರ್ತಿ । ನೋಡಿ ಅವನ ಭಕ್ತಿ ।
ಕಮರಿಯೊಳು ಎತ್ತಿ । ತತ್ಕಾಲ ಬಂದು ತೆಕ್ಕಾಗ ಹಿಡಿದು ॥ ಗೀಗೀ ॥

ದುಮಾಲಿ ಹೆಮರೆಡ್ಡಿ ಮಲ್ಲಮ್ಮಗ ವರವಾದಿ ।
ಹಳಸಿದ ಅಂಬಲಿ ಕುಡದಿ ॥ ಗೀಗೀ ॥

ಭಕ್ತರ ಮನಸ ನೋಡಿದಿ ।
ದಾಸನ ದಾಸ ಆಗೀದಿ ॥ ॥ ಗೀಗೀ ॥

ಏರು ದೇಶದೊಳು ಖ್ಯಾಡಿಗಿ ಊರಾ । ನೆನದ ಸಯ್ಯದಪೀರಾ ।
ಖಾಜೇ ಸಾಹೇಬರಾ ಮಾಡುವೆನುದೇವಾ ನಿಮ್ಮ ಸೇವಾ ॥
॥ ೭೦ ॥ ಗೀಗೀ ॥ ಚೌಕ ೩ ॥

ನೀರಾ ಗಂಡೈತಿ

ಕೇಳ ನೀ ಸಾರಿ ಹೇಳತೇನಿ ಜ್ಯಾರಿ ಹೋದೇನಂದಿ ಈಗ ।
ದಾರಿ ತಪ್ಪಿ ಹಾಯಬೇಡ ಮುಳ್ಳಾಗ ।
ಬಹಳ ಶ್ಯಾಣ್ಯಾರಾಗಿರಿ ನೀವು ಹಳ್ಳಾಗ ।
ಆಗಮ ನಿಗಮ ಓದಿ ನಿಗರ್ರ್ಯಾಡ ಬ್ಯಾಡ ತಂಗಿ ನೀರಾ ಗಂಡ ಇತ್ತು
ಈ ಕಲ್ಲ ಮಣ್ಣ ಎಲ್ಲಾ ಹುಟ್ಟಾದ ನೀರಾಗ ॥ ॥ ಗೀಗೀ ॥

ಶ್ಲೋಕ ವಾಯು ಆಕಾಶ ಆಪ ತೇಜ ಅಗ್ನಿ ಈ ಪಂಚ ತತ್ವ ಹುಟ್ಯಾವ ನೀರಾಗ ।
ಇಪ್ಪತ್ತೆಂಟು ಯುಗಾ ಆದು ನೀರಾಗ ।
ಸಪ್ತೇಳು ಸಮುದ್ರಗಳು ನೀರಾಗ ।
ಅಂಡಜಾ ಪಿಂಡಜಾ ಜಲಜಾ ಉದ್ವಿಜಾ ಬುವಿ ಎಂಬತ್ತು ಕೋಟಿ ನೀರಾಗ ।
ಸರ್ವೆಲ್ಲಾ ಜೀವರಾಗಿಶೀರಾಗ ॥
ನಾಲ್ಕು ವೇದ ಆರು ಶಾಸ್ತ್ರ ಹದಿನೆಂಟು ಪುರಾಣ ಹುಟ್ಯಾವ ನೀರಾಗ ।
ಜಪತಪಾ ಮಾಡ್ತಾರ ನೀರಾಗ ।
ಅಂತ ಇಲ್ಲ ಭಗವಂತನ ಕವತೂಕ ತಂತ್ರ ತಿಳಿಯದು ನೀರಾಗ ।
ಕುಲುದೀಪಗಡ್ಡಿ ಆದ ನೀರಾಗ ॥ ॥ ಗೀಗೀ ॥

ದುಮಾಲಿ ಆದಿ ನಾರಾಯಣ ನೀರಾಗ ।
ಮಚ್ಛ ಅವತಾರ ತಾಳಿದಾ ನೀರಾಗ ॥ ॥ ಗೀಗೀ ॥

ಸೀತಾನ ತರುದಕ ನೀರಾಗ ।
ಸೇತು ಕಟ್ಟಿದಾರೊ ನೀರಾಗ ॥ ॥ ಗೀಗೀ ॥

ಏರು ಇಪ್ಪತ್ತೇಳ ನಕ್ಷತ್ರ ಸೂರ್ಯಚಂದರಾ ನವಗ್ರಹಗಳು ನೀರಾಗ ।
ಏಳು ಪಾತಾಳ ಲೋಕ ಮೃತ್ಯು ನೀರಾಗ ।
ನವಖಾಂಡ ಪೃಥ್ವಿ ಎಲ್ಲಾ ನೀರಾಗ ।
ಕೂಡಪಲ್ಲ ಈ ಕಲ್ಲ ಮಣ್ಣ ಎಲ್ಲಾ ಹುಟ್ಟಾದ ನೀರಾಗ ॥ ॥ ಗೀಗೀ ಚೌಕ ೧ ॥

ಭೂಮಿ ಬಿಚ್ಚಿ ಎರಬೀಡಿ ಸೀಳಿತು ಮೇಘರಾಜ ಇಳದ ಬಂದಾ ನೀರಾಗ ।
ನೆಲಾ ಹಸಿಯಾಗಿ ಮಡಿ ಕಟ್ಟಿ ನೀರಾಗ ।
ಬಿತ್ತಿ ಬೆಳದಾರ ಭತ್ತಗಳು ನೀರಾಗ ।
ಪೊಡವಿಯೊಳಗ ಮೃಢನ ಸ್ಮರಿಸುತಾ ಲಿಂಗಕ್ಕ ಮಜ್ಜನ ಮಾಡಿ ನೀರಾಗ ।
ಧೂಳಪಾದಕ ಹೊಡಿತಾರ ನೀರಾಗ ॥ ॥ ಗೀಗೀ ॥

ಬಡಿವಾರದಕ್ಕಿ ನಿನ್ನ ಬುಡಾ ಬೆದರಿದಾಗ ಕಡಿಗಿ ಆದಾಗ ಈ ನೀರಾಗ ।
ಕೂಡಿ ತೊಳಕೊಂಡ ಕೂತೆಲ್ಲಾ ನೀರಾಗ ।

ನಿನ್ನ ಮುಡಚಟ್ಟು ತೊಳದಿತ್ತು ನೀರಾಗ ।
ಹಾಕಬೇಡಾ ಭೂರ್ಸ ಹೆಂಗಸ ನಿನ್ನ ಹೊಲಸ ತೊಳಕೊಳ್ಳ ನೀರಾಗ।
ಎಲೆ ಹೊಲಸಬಾಯಿಯವಳ ನೀರಾಗ॥ ॥ ಗೀಗೀ ॥
ಮಡಿ ಆಗಿ ನೀ ಅಡಗಿ ಮಾಡಬೇಕ ದೇವರಿಗಿ ಮೀಸಲ ನೀರಾಗ ।
ಶ್ರೀ ಮಲ್ಲಿನಾಥನ ಪೂಜಿ ನೀರಾಗ ।
ಕೂಟದಲ್ಲಿ ನಿಜಲಿಂಗ ಹುಟ್ಟಿ ನೀರಾಗ ।
ಕಾಣ ಪರ್ವತ ಗಿರಿ ಒಂಬತ್ತು ಬಾಗಿಲ ಸೇರಿ ಚಿದಾನಂದ ಸ್ವರೂಪ
ಬೆಳದಾ ನೀರಾಗ ।
ಚಿನ್ಮಯ ರೂಪಗೆತ್ತಿ ಆಡೀನು ಎರೆದು ನೀರಾಗ॥ ॥ ಗೀಗೀ ॥

ದುಮಾಲಿ ಅಂಬಿಗ್ಯಾ ಆಡಿದಾ ಹರಗೋಲ ಹಾಕಿ ನೀರಾಗ ।
ಜಂಜಾಟ ದಾಟಿಸುವಾ ನಂಬಿಗಿಂದ ನೀರಾಗ ॥ ॥ ಗೀಗೀ ॥
ನಂಬಿಗಿಲ್ಲದ ಹೆಂಗಸಗ ತಲಿ ತೊಯಿಸಿದಾ ನೀರಾಗ ।
ಬುಡಮೇಲೆ ಮಾಡವಳಿಕ್ಕಿ ಹರಗೋಲ ನೀರಾಗ ॥ ॥ ಗೀಗೀ ॥

ಏರು ಹಿಮಾಲಯಪರ್ವತ ಕಡಗೋಲ ಮಾಡಿ ಮಥನ ಮಾಡಿದಾರು ನೀರಾಗ।
ಇಂದ್ರನ ಐಶ್ವರ್ಯ ಮುಳುಗಿತ್ತ ನೀರಾಗ ।
ಚೌದಾ ರತ್ನಗಳು ತಗೆದರು ನೀರಾಗ ।

ಕೂಡಪಲ್ಲ ಈ ಕಲ್ಲ ಮಣ್ಣ ಎಲ್ಲಾ ಹುಟ್ಯಾರ ನೀರಾಗ ॥ ॥ ಗೀಗೀ ಚೌಕ ೨ ॥
ಮಣ್ಣಿಲಿಂದ ಕುಂಬಾರ ಮಡಕಿ ಮಾಡಿದಾ ಕೆಸರ ಕಲಸಿ ಈ ನೀರಾಗ।
ಗೋಪ್ಯಾನ ಆಟ ಆಡುವಾಗ ನೀರಾಗ ।
ಹಿಂದ ಮುಂದ ಕೈಯ್ಯ ಹಚ್ಚಿ ನೀರಾಗ ।
ಮಾಯದ ಪದ ಕೃಷ್ಣ ಸೀರಿ ಮಾಯ ಮಾಡಿದಾ ಕೈ ಮುಗಿದು
ಬೇಡಿಕೊಂಡಾರ ನೀರಾಗ ।
ಲಲ್ಲಾಟ ಆಡಿದ ಕೃಷ್ಣ ನೀರಾಗ ॥ ॥ ಗೀಗೀ ॥
ಬಂಧಿ ಖಾನಿಯಿಂದಾ ಪಾರ ಆದ ಕೃಷ್ಣಾ ವಸುದೇವ ಹೊತ್ತ
ಒಯ್ದಾ ನೀರಾಗ ।
ನದಿ ತುಂಬಿ ಹರಿಯತಿತ್ತು ನೀರಾಗ ।
ಕೃಷ್ಣನ ಪಾದ ತೊಯ್ದಿತು ನೀರಾಗ ।
ದಾರಿ ಆತು ಹೋಗಿ ಘೋರನದಿ ಆಗಿ ವಸುದೇವ ದಾಟಿದಾ ನೀರಾಗ।
ಶೇಷಾ ಸೇರಗ ಹಿಡಿದಿದ್ದಾಗ ನೀರಾಗ ॥ ॥ ಗೀಗೀ ॥
ಗೋವ ಕಾಯುವಾಗ ಗೋಪಾಲ ಆಡತಿದ್ದ ಚೆಂಡ ಬಿತ್ತು ಕಾಳಿಂಗ
ಮಡುನೀರಾಗ ।

ಶೇಷ ಒಯ್ದು ಮುಚ್ಚಿ ಇಟ್ಟಿದಾನೊ ನೀರಾಗ ।
ಕೃಷ್ಣಾ ಜಿಗಿದು ಹಾರಿದಾ ನೀರಾಗ ।
ಬಾಲ ಹಿಡಿದು ಶೇಷನ ಮ್ಯಾಲ ತಂದಾನೊ ಹೆಡಿಮ್ಯಾಲ ನಿಂತ
ಕೃಷ್ಣಾ ನೀರಾಗ ।
ಶೇಷನ ಜೀವದಾನ ಬಿಟ್ಟ ಕೊಟ್ಟ ನೀರಾಗ ॥ ॥ ಗೀಗೀ ॥

ದುಮಾಲಿ ಸರ್ವೆಲ್ಲಾಕ ತಂತ್ರ ಆಗಿದ್ದು ಕೇಳ ನೀರಾಗ ।
ಅಭಿಮನ್ಯು ಸತ್ತಾನೆಂದು ಕೃಷ್ಣಾ ಹೇಳಿದಾ ನೀರಾಗ ॥ ॥ ಗೀಗೀ ॥

ಸುಕ್ರಾಚಾರ್ಯ ಕಣ್ಣ ಕಳಕೊಂಡು ಕೂತಾ ನೀರಾಗ ।
ಒಂಟಿ ಆನಿ ಗರ್ಭ ಆಗತಾವ ಕೇಳ್ರಿ ನೀರಾಗ ॥ ॥ ಗೀಗೀ ॥

ಏರು ಆದಿ ನಾರಾಯಣ ಅಂತರಲೇ ಮಲಗಿದಾ ಆಲದೆಲಿ ಮ್ಯಾಗ ನೀರಾಗ।
ಖ್ಯಾಡಗಿ ಊರ ಹುಟ್ಟಿತು ನೀರಾಗ ।
ಜನ್ಮ ಪವಿತ್ರ ಆಗೂದು ನೀರಾಗ ।
ಕೂಡಪಲ್ಲ ಈ ಕಲ್ಲ ಮಣ್ಣ ಎಲ್ಲಾ ಹುಟ್ಯಾದ ನೀರಾಗ ॥ ॥ ಗೀಗೀ ಚೌಕ ೩ ॥

ಶರೀರ ಪದಾ

ಅಂಗ ಲಿಂಗ ಜಂಗಮ ಮಾನ್ಯರೆ ಮಾತಾಡತಾರು ಇವರು ಬಲ್ಲಂಗ।
ಈಡಾ ಪಿಂಗಳಾ ಸುಷಮ್ನ ನಾಡಿ ಶರೀರದಾಗ ।
ಸಹಸ್ರ ದಳಾ ಇರೂದು ನೋಡರಿ ಮಸ್ತಕದಾಗ ।
ಓಂ ಎಂಬೊ ನಾದ ದಳದಲ್ಲಿ ಪುಟ್ಟಿತು ಲಿಂಗ ಹುಟ್ಟಿ ಬಂದು
ಅದರಾಗ ॥ ॥ ಗೀಗೀ ॥

ಆಚಾರಲಿಂಗ ಗುರುಲಿಂಗ ಶಿವಲಿಂಗ ಐತಿ ಶರೀರದಾಗ ।
ಪ್ರಸಾದಲಿಂಗ ಮಹಾಲಿಂಗ ಅದರಾಗ ।
ಇಷ್ಟಲಿಂಗ ಪ್ರಾಣಲಿಂಗ ಮತ್ತು ಆಗ ।
ಭಾವಲಿಂಗದಿಂದ ಬಯಲೀಗಿ ಬಿದ್ದಿತ್ತು ಭಕ್ತಿ ಇಡರಿ ಈ ಭವದಾಗ ॥
॥ ಗೀಗೀ ॥

ಆಚಾರಲಿಂಗ ಅಂದ್ರ ಪ್ರಥ್ವಿಯ ಅಂಗಾ ಪೀತ ವರ್ಣಾ ಅದು ಜಗದಾಗ।
ಗುರುಲಿಂಗ ಶ್ವೇತವಣ್ಣ ಆಫದಾಗ ।
ಹರಿತವರ್ಣ ಜಂಗಮಲಿಂಗ ವಾಯುದಾಗ ।
ಪ್ರಸಾದಲಿಂಗ ಆಕಾಶಾ ಅಂಗಾ ನೀಳವರ್ಣ ನೋಡಲಿ
ನಿಜರೂಪದಾಗ ॥ ಗೀಗೀ ॥

ಮಹಾಲಿಂಗ ಅಂದರ ಆತ್ಮದ ಅಂಗಾ ಮಾಣಿಕ್ಯ ವರ್ಣ ನೋಡರಿ
ಮಾತಿನಾಗ।
ಇಷ್ಟಲಿಂಗ ತ್ಯಾಗಂಗ ಲಿಂಗ ಅದರಾಗ ।
ಜ್ಯೋತಿ ವರ್ಣ ಕಾಣುವದು ಅದು ಕಣ್ಣಿಗ ।
ಪ್ರಾಣಲಿಂಗ ನಿರಂಜನ ಭೋಗಾಂಗ ಮಹಾಜ್ಯೋತಿ ಅದು
ಜಗದಾಗ ॥ ಗೀಗೀ ॥

ದುಮಾಲಿ ಭಾವಲಿಂಗ ನಿಃಶೂನ್ಯ ಯೋಗಾಂಗದ ಮಾಹಿತಿ ।
ಅಗಣೀತ ಜಗತ್ಯದಲ್ಲಿ ಜ್ಯೋತಿ ।
ನವಲಿಂಗ ಸಕೀಲದಲ್ಲಿ ಬರದೈತಿ । ಇದರ ಮಾಹಿತಿ ।
ಓದಿದರ ತಿಳಿತಾದ ಹಕೀಕತಿ ॥ ॥ ಗೀಗೀ ॥

ಏರು ಸಕಾರ ಮಕಾರ ಶಿಕಾರ ವಕಾರ ಮಕಾರ ಓಂಕಾರ ಅದರಾಗ ।
ಅಕಾರ ಉಕಾರ ಮಕಾರ ಮತ್ತು ಇದರಾಗ ।
ಇವು ಹಿಡಿದು ಹಾಡ ಇನ್ನ ಸಭಾದಾಗ ।

ಕೂಡಪಲ್ಲ ಅಂಗಲಿಂಗ ಜಂಗಮ ಮಾನ್ಯರೆ ಮಾತಾಡತಾರು ಇವರು ಬಲ್ಲಂಗ ॥
॥ ಗೀಗೀ ಚೌಕ ೧ ॥

ಆ ಚಕ್ರ ಈ ಚಕ್ರ ಸುದರಶನ ಚಕ್ರ ಮಹಾ ಚಕ್ರದ ಕೇಳ ಮಜಕೂರಾ ।
ಆಧಾರಚಕ್ರ ಭಕ್ತಿ ಜ್ಯಾಗದಲ್ಲಿ ಪೂರಾ ।
ನಾಲ್ಕು ದಳಾ ಇರುದು ಅದು ಸಕಾರಾ ।
ಸಭಾದೊಳಗ ಇನ್ನ ಸಾರಿ ಹೇಳ್ತೇನು ಸರಿಯಾಗಿ ಕೇಳಿರಿ ಪಂಡಿತರಾ ॥
॥ ಗೀಗೀ ॥

ಸ್ವಾದಿಷ್ಟಾನ ಚಕ್ರ ಚಮತ್ಕಾರ ಕೇಳು ಆರುದಳಾ ಅದು ಮಕರಾ ।
ಮಣಿಪೂರ ಚಕ್ರ ಅದು ಶಿಕರಾ ।
ಹತ್ತು ದಳಾ ಇರೂದು ಅದಕ ಭರಪೂರಾ ।
ಡಢಣ ತಥ ಬಭನ ಪಫ ಹತ್ತು ಬರೆದಿದಾರು ಅಕ್ಷರಾ ॥ ॥ ಗೀಗೀ ॥

ಅನಾಹುತ ಚಕ್ರ ಚಂದಾಗಿ ಕೇಳ ಹನ್ನೆರಡು ದಳಾ ಅದು ಪಕರಾ ।
ವಿಶುಧಿ ಚಕ್ರ ದಳಾ ಅದಕ ಹದಿನಾರಾ ।
ಅದು ಆಗಿ ಇರುದು ಕೇಳು ಮಕರಾ ।
ಅಗ್ನಿ ಚಕ್ರ ಎರಡು ದಳಾ ಇರತಾ ಹಂ ಕ್ಷಂ ಎಂಬೊ ಓಂಕಾರಾ ॥
॥ ಗೀಗೀ ॥

ದುಮಾಲಿ ಬ್ರಹ್ಮರಂಧ್ರ ಚಕ್ರ ಸಹಸ್ರ ದಳಾ ಇರುದು ಪಂಡಿತರಾ ।
ಸೋಹಂ ಅದು ಅಕಾರಾ ॥ ॥ ಗೀಗೀ ॥

ಶಿಖಾ ಚಕ್ರ ಮೂರ ದಳಾ ಮೂರು ಇರುವ ಅಕ್ಷರಾ ।
ಅದು ಆಗಿ ಇರೂದು ಊಕಾರಾ ॥ ॥ ಗೀಗೀ ॥

ಪಶ್ಚಿಮ ಚಕ್ರ ಏಕದಳಾ ಓಂ ಅಕ್ಷರಾ ।
ಅದು ಆಗಿ ಇರುದು ಮಕಾರಾ ॥ ॥ ಗೀಗೀ ॥

ಏರು ನಿರಂಜನ ನಿಃಶೂನ್ಯ ಸ್ಥಲದಲ್ಲಿ ಮತ್ತ ಕೆಳ ಇನ್ನ ಸಭಾದಾಗ ।
ಇಲ್ಲಿಂದ ಮತ್ತ ಈ ಶರೀರದಾಗ । ಮತ್ತ ತಿಳಿಸಿ ಹೇಳ್ತೆನು ನಿಮಗ ।
ಕೂಡಪಲ್ಲ ಓಂ ಎಂಬ ನಾದದಳದಲ್ಲಿ ಪುಟ್ಟಿತು ಲಿಂಗ ಹುಟ್ಟಿ ಬಂದು
ಅದರಾಗ ॥ ॥ ಗೀಗೀ ॥

ಕ್ರಿಯಾಶಕ್ತಿ ಮತ್ತು ಗಂಧ ಪ್ರಸಾದ ಬ್ರಹ್ಮ ದೇವರ ಹಾನ ಅವರ ಮ್ಯಾಗ ।
ಇಚ್ಛಾಶಕ್ತಿ ರಸ ಪ್ರಸಾದಾ ವಿಷ್ಣು ವಡಿಯಾ ಹಾನ ಅದರಾಗ ।
ಜ್ಞಾನಶಕ್ತಿ ಸಾವುದಾನ ನಿರಂಕುಶ್ರತ ರುದ್ರ ದೇವರಹಾನ ಅವರ ಮ್ಯಾಗ ।
ಅಧೀಶಕ್ತಿ ಅನುಭವ ಸುಮನ ಈಶ್ವರ ಇರತಾನ ಅವರ ಮ್ಯಾಗ ॥
॥ ಗೀಗೀ ॥

ಪರಾಶಕ್ತಿ ಆನಂದ ಸುಜ್ಞಾನ ಸದಾಶಿವನು ತಂಗಿ ನಿಮ್ಯಾಗ ।
ಚಿಚ್ಛಶಕ್ತಿ ಸಮರಸ ಸದ್ಭಾವಾ ಮಹೇಶ್ವರ ಹೆಚ್ಚಿಗಿ ಅದರಾಗ ॥ ಗೀಗಿ ॥

ಆನಂದ ಮಯಶಕ್ತಿಗಿ ವಡಿಯಾ ಆಗಿದಾ ಪರಶಿವನು ಆ ಜಾಗದಾಗ।
ನಿಬ್ರಾಂತ ಶಕ್ತಿ ನಿರಂಜನ ನಿರಾಳ ಸರ್ವೇಶ್ವರ ಹಾನ ನಿಮ್ಯಾಗ॥ ಗೀ ॥

ನಿರಮಾಶಕ್ತಿ ಅಪ್ರಾದರ್ಶನ ಮಹಾದೇವ ಹಾನತಂಗಿ ನಿಮ್ಯಾಗ ।
ಮಾನ್ಯಮಾನ್ಯರಲ್ಲಿ ಮಾತಿಗಿ ಬರತಾದ ಅನುಭಾವ ಬಲ್ಲಂತಾಜ್ಞಾನೀಗ॥
॥ ಗೀಗೀ ॥

ದುಮಾಲಿ ಆಚಾರಲಿಂಗ ಗುರುಲಿಂಗ ಎರಡೂ ಕೂಡಿದ್ದು ।
ಜಂಗಮಲಿಂಗ ಶಿವಲಿಂಗ ಬಂದಾದು॥ ॥ ಗೀಗೀ ॥

ಪ್ರಸಾದಲಿಂಗ ಮಹಾಲಿಂಗದಲ್ಲಿ ಹೋಗಿದ್ದು ।
ಭಾವಲಿಂಗದಲ್ಲಿ ಕೂಡಿದ್ದು ॥ ॥ ಗೀಗೀ ॥

ಏರು ಹಸಿ ಕೂಸ ಹಣಮಂತ ಹರದೇಶಿ ಹುಸಿ ಇಲ್ಲದೆ ಹೇಳಿದಾ ಸಭಾದಾಗ।
ಹೀಂಗ ಒಡೆದು ಹೇಳು ಶರೀರದಾಗ ।
ಬಲ್ಲಂತಾ ಜ್ಞಾನಿ ತುಪ್ಪ ಸುರದಂಗ ।

ಕೂಡಪಲ್ಲ ಓಂ ಎಂಬೊ ನಾದದಳದಲ್ಲಿ ಪುಟ್ಟಿತು ಲಿಂಗ ಹುಟ್ಟಿ ಬಂದು
ಅದರಾಗ॥ ॥ ಗೀಗಿ॥ ಚೌಕ ೩ ॥

ಬುದ್ದಿಗೇಡಿ ಹೆಂಗಸ

ಬ್ಯಾನಿ ಬಡಕ ಹೆಂಗಸರದ್ದು ಬಡಿವ್ಯಾರ ಏನ ಹೇಳಲಿ
ಬಡ್ಡಿಲಿಂದ ಕೇಳರೆಣ್ಣಾ ಮಜಕೂರಾ ।
ತಂದಕೊಡ್ರಿ ಮನಸಿನೊಳಗ ಉಮೇದ್ವಾರಾ ।
ತಂದ ಕೊಡದಿದ್ದರ ಮಾಡತಾರ ಹಾದರಾ ।
ಗಂಡುಳ್ಳ ಗರತ್ಯಾರು ಅಬ್ರುದೊಳಗ ಬೇಕು
ಖಬರಹಾರಿ ಸುಟಕೋತಾವ ಮನಿಮಾರಾ ॥ ॥ ಗೀಗೀ ॥

ಊರೊಳಗ ಒಬ್ಬ ಶ್ರೀಮಂತ ಸಾವುಕಾರಿದ್ದಾ
ಯಾವತ್ತು ಮಾಡತಿದ್ದಾ ವ್ಯಾಪಾರಾ ।
ಬುದ್ದಿಯಲ್ಲಿ ಇದ್ದ ಅವಾ ಚ್ಯಾತೂರಾ ।
ಅವಾ ರೂಪಿನಲ್ಲಿ ಇದ್ದಾ ಒಳೆ ಶ್ರೀಗಾಂರಾ ।
ಮುತ್ತ ಮಾಣಿಕಾ ವಸ್ತು ವಡವಿ ಬೆಳ್ಳಿ ಯಾವತ್ತು
ಮಾರಾವಾ ಬಂಗಾರಾ ॥ ॥ ಗೀಗೀ ॥

ಅವರ ಮನೆಯ ಬಾಜು ಬಡವನ ಮನೆಯಿತ್ತು
ಸತಿ ಪತಿ ಇದ್ದರು ಅವರು ಸುಂದರಾ ।
ಕೆಟ್ಟ ಬಡತಾನ ಇಟ್ಟಿದ್ದಾ ಶಂಕರಾ ।
ಅವರ ಬ್ರಹ್ಮ ಬರೆದ ಕೇಳ ಹಣೆಭಾರಾ ।
ಸಾವಕಾರನ ಮನೆಯೊಳಗಿನ ಥಾಗಿಣ ನೋಡಿ
ಯಾವತ್ತು ಮರಗುವರು ಮರಾ ಮರಾ ॥ ॥ ಗೀಗೀ ॥

ದುಮಾಲಿ ಬಡವನ ಹೆಂಡತಿ ಅಂತಾಳ ತನ್ನ ಪತೀಗ ।
ಥಾಗೀಣಾ ತಂದು ಕೊಡರಿ ನನಗ ॥ ॥ ಗೀಗೀ ॥

ನನ್ನ ಗೆಳದ್ಯರು ಎಲ್ಲಾ ಉಟಕೋತಾರ ಹಬ್ಬದೊಳಗ ।
ಶ್ರಿಂಗಾರಾ ಸರಾ ಟೆಕ್ಕ ಕೊರಳಾಗ ॥ ॥ ಗೀಗೀ ॥

ಏರು ಗಂಡಗ ಅಂತಾಳ ಬಾಲಿ ಬಾಜು ಮನಿಯಲ್ಲಿ
ನಾನಾ ತರದಿಂದ ಆಗ್ಯರ ಶ್ರಿಂಗಾರಾ ।
ಅವರ ಮೈಮ್ಯಾಗ ಬಾಹಳ ಬೆಳ್ಳಿ ಬಂಗಾರಾ ।
ಬಾಹಳ ಶೃಂಗಾರ ಆಗ್ಯಾರ ನನ್ನ ಗೆಳೆದಾರಾ ॥

ಕೂಡಪಲ್ಲ ಗಂಡುಳ್ಳ ಗರತ್ಯಾರು ಅಬರುದೊಳಗಿರಬೇಕು
ಖಬರ ಹಾರಿ ಸುಟಕೊತಾವ ಮನಿಮಾರಾ ॥ ॥ ಗೀಗೀ ॥ ಚೌಕ ೧ ॥

ಬಡವ ಹೇಳತಾನ ತನ್ನ ಸತಿಗಿ ಬಡತಾನ ಅಂಬುದು ತಿಳದಿಲ್ಲಾ ।
ಹೆರವರ ಥಾಗೀಣ ಬೇಡುದು ಚಲೋದಲ್ಲಾ ।
ನಮಗ ಬಡತಾನ ಇಟ್ಟಾನ ಕೇವಲಾ ।
ಬಡವರ ಮಕ್ಕಳು ನಾವು ಬಡಿವ್ಯಾರ ನಮಗ್ಯಾಕ
ಬೇಡಿ ಹಿಂಗ ಕಾಡುದಲ್ಲಾ ॥ ॥ ಗೀಗೀ ॥

ಕಟಗಿ ತಂದು ನಾವು ಮಾರಿ ಬರಲಾರ್ದೆ ಅಲ್ಲಿತನಕ ಪ್ರಪಂಚ ಸಾಗುದಿಲ್ಲ
ಅದರ ಹೊರ್ತ ಮತ್ತೊಂದು ಕೆಲಸಾ ನೀಗುದಿಲ್ಲಾ ।
ಗುರ್ತಿದ್ದು ಬೇಡತಿ ಹಗಲೆಲ್ಲಾ ।
ಥಾಗೀಣ ಸಲ್ವಾಗಿ ನಾನು ತುಡಗೇಗಿ ಹೋದರ
ಸಿಕ್ಕರೆ ನನಗೇನು ಬಿಡುದಿಲ್ಲಾ ॥ ॥ ಗೀಗೀ ॥

ನಾನಾ ಪರಿಲಿಂದ ತಿಳಿಸಿ ಹೇಳಿದರೆ ಬುದ್ದಿಗೇಡಿ ಹೆಂಗಸಿದು ಕೇಳಿಲ್ಲಾ।
ತಿರಗಿ ಮತ್ತು ಗಂಡನ ಮುಂದ ಹೇಳತಲ್ಲಾ ।
ಸಾವುಕಾರನ ಮ್ಯಾಲ ಮನಸ ಮಾಡ್ಯಾಳ ಖ್ಯಾಲಾ ।
ಮದಲೆ ಸಾವುಕಾರಾ ರೂಪಕ್ಕೆ ಮೆಚ್ಚಿ ಮನಸ್ಸ
ಮನಸ್ಸ ಮಾಡಿದಾ ಈಕಿ ಮ್ಯಾಲಾ ॥ ॥ ಗೀಗೀ ॥

ದುಮಾಲಿ ಸಾವುಕಾರಗ ಅಂತಾಳ ತವರ ಮನಿಗಿ ಹೋಗತೇನು ।
ತಂದಿ ತಾಯಿ ಹೆಸರ ಹೇಳತೇನು ॥ ॥ ಗೀಗೀ ॥

ನನ್ನ ಕೊರಳಾಗ ಟಕ್ಕೆ ತಂದ ಕಟ್ಟಬೇಕೊ ನೀನು ।
ಅಂದರ ಚಿಂತಿ ದೂರ ಮಾಡುವೆನು ॥ ॥ ಗೀಗೀ ॥

ಏರು ಎಷ್ಟು ಮಸಲತ ಮಾಡಿ ಹೇಳ್ಯಾಳ ಮನಸಿನೊಳಗ
ಅಂತಾನ ಸಾವುಕಾರಾ ।
ಒಂದು ಟಕ್ಕೆದ್ದು ನನಗಿಲ್ಲಾ ದರಕಾರಾ ।
ನನ್ನ ಮನಸ್ಸಿನೊಳಗಿಂದು ತೀರಲೆಂದಾ ಉಮೇದ್ವಾರಾ ।
ಕೂಡಪಲ್ಲ ಗಂಡುಳ್ಳ ಗರತ್ಯಾರ ಅಬರುದೊಳಗಿರಬೇಕು
ಖಬರ ಹಾರಿ ಸುಟಕೋತಾವ ಮನಿಮಾರಾ ॥ ॥ ಗೀಗೀ ಚೌಕ ೨ ॥

ಕದ್ದಮುಚ್ಚಿ ಅದು ಹಂಗೆ ನಡದಿತ್ತು ಕೊಟ್ಟರೆ ಇರತಾರ ಹೆಂಗ್ಸರಾ ।
ಇವರ ಮನಸ ಇರುದಿಲ್ಲಾ ಥಿರಾರಾ ।
ಟಕ್ಕೆ ತಗೊಂಡು ಸೇರ್ಯಾಳ ಆಕಿ ತವರೂರಾ ।
ತವರ ಮನಿಯಲಿಂದ ತಿರಗಿ ಬಂದಾಳ
ಗಂಡಗಂತಾಳ ತಾಯಿತಂದಿ ಹೆಸರಾ ॥ ॥ ಗೀಗೀ ॥

ಟಕ್ಕೆ ಕಟಗೊಂಡು ಮನಿ ಮನಿ ತಿರಗಿದರ
ಯಾರೂ ತಗಿಲಿಲ್ಲ ಟಕ್ಕೇದ ಹೆಸರಾ ।
ಚಲೊ ಕೆಟ್ಟ ಕೇಳಲಿಲ್ಲ। ಈಕಿ ಗೆಳದ್ಯಾರಾ
ಮಾರಿ ಸಣ್ಣ ಮಾಡ್ಯಾಳ ಅನಿವಾರ್ಯ ।
ಸಿಟ್ಟಿಗೇರಿ ನಾರಿ ಹಂಗೆ ಹೋದಾಳ
ಸುಡಬೇಕಂತಾಳ ತನ್ನ ಮನಿ ಮಾರಾ ॥ ॥ ಗೀಗೀ ॥

ಗಂಡ ಇದ್ದಾವ ಅಡವೀಗಿ ಹೋಗಿದ್ದಾ
ಬೆಂಕಿ ಹಚ್ಯಾಳ ಇಲ್ಲ ದರಕಾರಾ ।
ಎದಿ ಎದಿ ಬಡಕೋತಾಳ ಊರಾನ ಗೆಳದ್ಯಾರಾ ।
ಓಡಿ ಬಂದು ತಂಗಿss ಎದಿಗಿ ಬಡಕೋಬ್ಯಾಡಾ
ಟಿಕ್ಕೆದ್ದು ನೆಗ್ಗಿತು ಬಂಗಾರಾ ॥ ॥ ಗೀಗೀ ॥

ಅಳೂದು ಬಿಟ್ಟು ಬಾಲಿ ನಿಂತ ಹೇಳತಾಳ
ಮದಲ ಕೇಳಲಿಲ್ಲಾ ಯಾರ್ಯಾರಾ ।
ಮನಿ ಮನಿ ತಿರುಗಿ ಬಂತು ಬ್ಯಾಸರಾ ।
ಈಗ ಬಂದು ತಗೀತಿರಿ ಟಿಕ್ಕೇದ ಹೆಸರಾ ।
ಹತ್ತ ನನ್ನ ಸವತ್ಯಾರಾ ಮದಲೆ ನನಗ ಕೇಳಿದರೆ
ನಾ ಯ್ಯಾಕ ಸುಡತಿದ್ದ್ಯಾ ಮನಿ ಮಾರಾ ॥ ॥ ಗೀಗೀ ॥

ದುಮಾಲಿ ಯಾರೂ ಕೇಳಿಲ್ಲೆಂದು ತನ್ನ ಮನಿ ಯಾರರೇ ಸುಟ್ಟಾರೇನು ।
ಇಂಥಾ ಹೆಂಗ್ಸರೀಗಿ ಮನ್ಯಾಗ ಇಟ್ಟರೇನು ।
ಎಂಥಾ ಬಡತಾನ ಇದ್ದರು ಕಾರಭಾರ ಇವರಿಗಿ ಕೊಟ್ಟಾರೇನು ।
ಹಾದರ ಮಾಡುದು ಇಂತಾವರು ಬಿಟ್ಟಾರೇನು ॥ ॥ ಗೀಗೀ ॥

ಏರು ಕವಿ ಹಣಮಂತಾ ಕವಿತಾ ಹೇಳಿದಾ ಟಿಕ್ಕೆದ ಸಲುವಾಗಿ
ಸುಟ್ಟ ಮನಿಮಾರಾ ।
ತಾವು ಮದಲೆ ಇದ್ದರು ಅವರು ಬಡವರಾ ।
ಬುದ್ದಿಗೇಡಿ ಹೆಂಗಸರೀಗಿ ತುಂಬ್ಯಾರಾ ।
ಕೂಡಪಲ್ಲ ಗಂಡುಳ್ಳ ಗರತ್ಯಾರ ಅಬುರುದೊಳಗಿರಬೇಕು
ಖಬರ ಹಾರಿ ಸುಟಕೋತಾವ ಮನಿಮಾರಾ ॥ ॥ ಗೀಗೀ ॥ ಚೌಕ ೩ ॥

ಖ್ಯಾಲಿ

ಅಹಂಕಾರ ಕೆಟ್ಟಾ ಮಗುವೆ ನಿನಗೆ ನಾ ಎಂಬೊ ಅಕ್ಷರಾ ಮಾಡಿತು ನಷ್ಟಾ
ಕೌರವರು ಪಾಂಡವರು ಹೂಡಿದರು ಪಗಡಿಯ ಆಟಾ ।
ಅರ್ಜುನ ನಾ ಎಂಬೊ ಅಹಂಕಾರ ತೊಟ್ಟಾ ।
ಅದರೊಳು ಧರ್ಮರಾಜ ರಾಜಕಿ ಕೊಟ್ಟಾ ॥ ಅಹಂಕಾರಾ ॥
ದಶಮುಖ ರಾವಣಾ ಅವತಾರ ತೊಟ್ಟಾ ।
ಸೀತಾನ ಕಾಯಲಿಕ್ಕೆ ರಾಕ್ಷಸರಿಗೆ ಇಟ್ಟಾ ।
ಹನುಮಂತ ಹಾರಿ ಹೋಗಿ ಲಂಕಾ ಸುಟ್ಟಬಿಟ್ಟಾ ॥ ಅಹಂಕಾರ ॥
ಅರಗಿನ ಮನಿಯೊಳಗ ಪಾಂಡವರ ಮೆಟ್ಟಾ ।
ಬೆಂಕಿ ಹಚ್ಚಿ ದುರ್ಯೋಧನಾ ಅವರಿಗೆ ಸುಟ್ಟಾ ।
ಭೀಮನ ಹೊಡತಕ್ಕೆ ಭೂಮಿ ಸೀಳಿ ಇಟ್ಟಾ ॥ ಅಹಂಕಾರ ॥
ಹನಮಂತ ತಂದಾನ ಸೀತಾಗ ಕೈ ಮುಟ್ಟಾ ।
ಯುದ್ಧದ ಆರಂಭ ಇಂದ ಮಾಡಿಟ್ಟಾ ।
ದಶಮುಖನ ಚಂಡಕ್ಕೆ ಬಿತ್ತು ಬಾಣಿನ ಏಟಾ ॥
ಚಡಚಣ ಗ್ರಾಮದಲ್ಲಿ ದಾವಲ ಮಲಿಕ ಥೇಟಾ ।
ಯಾರೀಗಿ ತಿಳದಿಲ್ಲಾ ಆತನ ಗುಟ್ಟಾ ।
ಕೂಸ ಹಣಮಂತ ಅಹಂಕಾರ ತಗದಿಟ್ಟಾ ॥ ಅಹಂಕಾರಾ ॥
ದ್ರೌಪತಿ ಸಲುವಾಗಿ ಭೀಮ ಆದ ಸಟ್ಟಾ ।
ನೀಚ ಕೀಚಕನಿಗೆ ಕೊಂದು ಬಿಟ್ಟಾ ।
ಮಾನಭಂಗ ಹೊತ್ತಿನಲ್ಲಿ ಕೃಷ್ಣ ವರವ ಕೊಟ್ಟಾ ॥

ಓದಿ ನೋಡು ಹುಡುಗಾಟಲ್ಲ

ಚಿತ್ತವಿಟ್ಟು ಕೇಳಬೇಕು ಚಿನ್ಮಯ ಮೂರ್ತಿ ಚೆನ್ನಿಯರೆ
ಚೊಕ್ಕ ಚ್ಯಾಂದಿ ಶಬ್ದ ತಿಳಿರಿ ತಾವು ಸರುವೆಲ್ಲಾ ।
ನಾ ನೀ ಎಂದೂ ಬಡದಾಡಿದರೆ ಫಾಯ್ದೆ ಸಿಗುದಿಲ್ಲಾ ।
ಕಾಯ್ದೆಕ್ಕನುಸರಿಸಿ ಹೇಳಬೇಕು ಬರೆದಂತಾ ಲೀಲಾ ।
ಆದಿ ಅನಾದಿ ಹಿಡಿದು ವೇದಗಳು ಸಾರತಾವ ಓದಿನೋಡಿ
ಹುಡಗಾಟಿಲ್ಲಾ ಮದಲೀನ ಕೀಲಾ ।
ಅದು ಓದಿಕೊಂಡು ತಿಳದ ಜ್ಞಾನಿ ಬಲ್ಲವನೇ ಬಲ್ಲಾ ॥ ॥ ಗೀಗೀ ॥

ಜಾಲಗಾರನ ಬಲ್ಲಿ ತಂಗಿ ಜ್ಯಾರಿ ಬಿದ್ದಿ ಹುಡುಗಾಟಲ್ಲಾ
ಜ್ಯಾಣತನ ಜ್ಯಾಗಿರದಾರದ ಹೊಟ್ಟಿಲೆ ಹುಟ್ಟಿಲ್ಲಾ ।
ಶ್ರೇಷ್ಠ ಪದವಿ ಗಳಿಸುವ ಜ್ಞಾನ ನಿಮಗ ಇನ್ನೂ ಹುಟ್ಟಿಲಾ ।
ಸಾಕ್ಷಾತ ಬ್ರಹ್ಮನಿಗೆ ಬೈಗಳ ಬೈಯುವದು ಇನ್ನೂ ಬಿಟ್ಟಿಲ್ಲಾ ।
ಜೀವಾತ್ಮ ಕುರಿತು ತಮ್ಮ ಜೀವಾತ್ಮಕ್ಕೆ ಬೈದಾಡಿದರೆ
ಅಂತರಾತ್ಮದಲ್ಲಿ ಇದ್ದಾವಾ ತಾನೇ ಕೇವಲಾ ।
ನಿಮ್ಮ ಶರೀರ ಕಾಯಕಸದೋ ಅತನ ಕಾವಲಾ ॥ ಗೀಗೀ ॥

ಅಂತರಾತ್ಮದ ಪರಮಾತ್ಮನು ಬಾಯ ಬಿಟ್ಟು ಹೋದ ಮೇಲೆ
ಕಾಲೆದೇಹ ಸುತ್ತಿ ಬೀಳುವುದು ಭೂಮಿಯ ಮ್ಯಾಲಾ ।
ಕೊಳತು ಕೊಳತು ಆಗಿ ಹೋಗುದು ಕೇಳ್ರಿ ಮಣ್ಣಿನ ಪಾಲಾ ।
ತಿಳದ ನೋಡಿದರೆ ಇದರೊಳು ಏನೂ ಹಾಸೀಲಿಲ್ಲಾ ।
ಸಾವುತನಕ ತಂಗಿ ನೀನು ಸವಿಲಾರದೆ ಗಂಟ ಗಳಿಸುವ
ಸತ್ತರೇ ಸಂಗತೀಲೆ ಎಲ್ಲಾ ಬರುದಿಲ್ಲಾ
ನಿನ್ನ ಹೆಣ್ಣ ದೇಹಾ ಚಿರಂಜಿವಿ ಎಂದೂ ಇರುದಿಲ್ಲಾ ॥ ಗೀಗೀ ॥

ದುಮಾಲಿ ರಕ್ತ ಮಾಂಸ ಚರ್ಮ ನಂದ ಅಂತಿ ।
ಆದಿಯ ಶಕ್ತಿ ।
ಶರೀರದ ಭರ್ತಿ । ನಿನ್ನಿಂದ ಸರವೆಲ್ಲಾ ।
ಬಾಯಿ ಬಹಳ ಬಿಟ್ಟಿದಿ ಆರು ಇಲ್ಲಾ ॥ ಗೀಗೀ ॥

ನಿನ್ನ ದೇಹಕ ನೀನೇ ಇದ್ದಿ ಗೆಳತಿ ।
ಜೋಡಿ ಯಾಕ ಬೇಡ್ತಿ ।
ಹೋದರ ಯಾಕ ಅಳತಿ । ಆತನ ಮ್ಯಾಲಾ ।
ಯಾಕ ಬೀಳ್ತಿ ಹೇಳು ಅವನ ಕಾಲಾ ॥ ॥ ಗೀಗೀ ॥

ಏರು ಅಸ್ತಿ ಎಂಬೋ ಎಲವಿನ ಪಂಜರ ತುಂಬಿರತನಾ ಈಶ್ವರಾ
ಇದ್ದು ಇಲ್ಲಂಗ ಇರಾವಾ ನೋಡು ತಾನೇ ಕೇವಲಾ ।
ರಕ್ತ ಮಾಂಸ ಚರ್ಮಿಗಿ ಬೇಕಾಗುವುದು ಎಲವಿನ ಕಾವಲಾ ।
ಎಲ್ಲಾಕ್ಕೂ ಹೊತ್ತಿ ನಿಂತು ನಡದಾಡತಾನ ಎಂತಾವಾ ಪ್ರಭಲಾ ॥

ಕೂಡಪಲ್ಲ ಆದಿ ಅನಾದಿ ಹಿಡಿದು ವೇದಗಳು ಸಾರತಾವ ಓದಿನೋಡು
ಹುಡುಗಾಟಲ್ಲ ಮದನ ॥ ಗೀಗೀ ॥ ಚೌಕ ೧ ॥
ಓದಿಕೊಂಡು ತಿಳದ ಜ್ಞಾನಿ ಬಲ್ಲವಲ್ಲನೇ ಬಲ್ಲಾ ॥
ಎಂಟು ಮಂದಿ ನೆಂಟರು ಒಂಟಿ ಒಂದೇ ಸಾಕಿರುವರು
ಅಂಟಾ ಹಾಕಿ ಹೊಲದ ಒಳಗ ನಿಂತಾರ ಕಾವಲಕ ।
ಖರೇ ಆರುಮಂದಿ ಜೋರ ಹಾರ ಪಾರಾ ಮಾಡುದಕ ।
ಮೂರು ಮಂದಿ ಮುದಕರು ಕುಂತಿರುವರು ಕೆಲಸ ನೋಡುದಕ ।
ಮೂರು ಮುದ್ದತ್ತಿನಲ್ಲಿ ನೀನು ಪಾರಾಗಿ ಹೋದರೆ
ಪಾರಮಾರ್ಥ ಅಂಬುದು ನೋಡು ನಿನ್ನ ಬೆಳಕ ।
ಈ ಕಾಯಾ ಎಂಬೊ ಕಡಿತಾನ ಮಾಡಲಿ ಝುಳಕ ॥ ಗೀಗೀ ॥
ಪಂಚಮುಖ ಪರಮಾತ್ಮಾರೆ ಮುಂಚಲಿಂದಾ ಕೇಳಿರಿ
ಪಕ್ಷಿಗಳು ಬಂದು ಕುಂತು ಧಾನ್ಯ ತಿನ್ನುದಕ ।
ಚಾತೂರಾ ಕಲ್ಪನೆಯಿಂದಾ ಕವಣಿ ಮಾಡಿದಾ ಪಕ್ಷಿಗಿ ಹೊಡೆಯುದಕ।
ಅಂಟಾ ಏರಿ ನಿಂತು ನೋಡಿ ಅಂದಾ ತನ್ನ ಮನಕ ।
ನೋಡಿ ನಾನು ಬಿಟ್ಟರೆ ಬೆಳೆ ಎಂದು ಬರುದಿಲ್ಲಾ ಹೊಲದ ಒಡಿಯಾ
ಹಚ್ಚಾಕಿಲ್ಲಾ ನಾಳೆ ಕೆಲಸಕ್ಕ ।
ಒಂದೇ ಸವನೆ ಕಲ್ಲಹಾಕಿ ಹೊಡದಾ ಹಕ್ಕಿ ಗೂಡಕ್ಕ ॥ ಗೀ ಚೌ ೨ ॥
ಒಂದು ಎರಡು ವ್ಯಾಳದಲ್ಲಿ ಕಾಳು ಸಹಿತ ಮುಟ್ಟಲಿಲ್ಲ
ಗೋಳ ಹಿಡಿತು ಹಕ್ಕಿಗಳಿಗೆ ಬರಲಿಲ್ಲಾ ಹೊಲಕ್ಕ ।
ಹೀಂಗ ದೇಹದಲ್ಲಿ ಸೋಸಿ ನೋಡ್ರಿ ನೀವು ಕಡಿತನಕ ।
ಅಂತರಾತ್ಮನ ಪರಮಾತ್ಮನ ಗಾದಿ ಕಾಯುದಕ ।
ಆರು ಮೂರು ಏಳರಲ್ಲಿ ತತ್ವಜ್ಞಾನ ಇರುವುದಲ್ಲಿ
ಸುತ್ತಿ ಸುತ್ತಿ ಶೋಧ ಮಾಡ್ರಿ ಶರೀರ ಭಾಗಕ ।
ಇವರೀಗ ತಿಳಿಯದಿದ್ರ ಕಳಿಸಿಕೊಡ್ರ ನಮ್ಮ ಜ್ಯಾಗಕ್ಕ ॥ ಗೀ ಚೌ ೩ ॥

ದುಮಾಲಿ ಇದರಂತೆ ದೇಹದ ಒಳಗ ।
ಈಶ್ವರನ ಜಾಗ ।
ಇಲ್ಲಂತಿ ಎದರಾಗ । ನಿನಗ ಸಿಕ್ಕಿಲ್ಲಾ ।
ಆತನ ಗುಟ್ಟು ತಿಳಿಯಲಿಲ್ಲಾ ॥ ॥ ಗೀಗೀ ॥

ನಿಜರೂಪ ನಿರಂಕಾರದೊಳಗ ।
ಎಲ್ಲರೊಳಗೆ ।
ತುಂಬಿದ ಆಗ ಜ್ಯಾಗ ಸಿಲಕಿಲ್ಲಾ ।
ಎಲ್ಲಾರೊಳು ಇರುವ ಕೇವಲಾ ॥ ॥ ಗೀಗೀ ॥

ಏರು ಸರ್ವಯಾಪಿ ಆದಂತಾ ಜಗದ್ಗುರು ಜಗನಾಥ ಜ್ಯಾಗ ಜ್ಯಾಗಕ್ಕೆ
ಇರತಾನ ಕೇಳು ನಿಮ್ಮ ಹಿಂಬಾಲಾ ।
ಭಕ್ತಿ ಇಟ್ಟು ನಡದರೆ ನಿಮ್ಮ ಮೇಲೆ ಮಾಡುವ ಹಂಬಲಾ ।
ನಾ ಹೇಳುವ ಮಾತಾ ಇನಾ ನಿನ್ನ ತಲ್ಯಾಗ ತುಂಬಿಲ್ಲಾ ॥

ಕೂಡಪಲ್ಲ ಆದಿ ಅನಾದಿ ಹಿಡಿದು ವೇದಗಳು ಸಾರತಾವ
ಓದಿನೋಡ ಹುಡಗಾಟಲ್ಲ ಮದಲಿನ ಕೀಲಾ ।
ಅದು ಓದಿಕೊಂಡ ತಿಳಿದ ಜ್ಞಾನಿ ಬಲ್ಲವನೇ ಬಲ್ಲಾ ॥ ಗೀಗೀ ॥
॥ ಚೌಕ ೨ ॥ (ಅಪೂರ್ಣ)

ಬಬಲಾದ ಸಿದ್ರಾಮಪ್ಪಗೌಡ ಪಾಟೀಲ

ಬಾಂಧವರ ಮುಂದ ನಾನು ವಂದನೆ ಮಾಡಿ ಹೇಳುವೆನು, ಚಂದದಿಂದಾ
ಕೇಳಿರೆಣ್ಣಾ ಆದ ವಿಸ್ತಾರಾ ।
ಜತ್ತಿ ಸಂಸ್ಥಾನಾ ಪೈಕಿ ಕಡಿ ಹಳ್ಳಿ ಬಬಲಾದ ಊರಾ ।
ಖುದ್ಧ ಮುದ್ದಾಮ ಬಂದು ಹೇಳ್ತೇನು ಆದ ಕತಿಸಾರಾ ।
ಶ್ರೀಯುತ ಮಾನ್ಯರಾದ ಸಿದ್ರಾಮಪ್ಪಾ ಪಾಟೀಲ ಇವರು
ವೀರಶೈವ ಮತದಲ್ಲಿ ಉದ್ಭವಿಸ್ಯಾರಾ ।
ಒಳೆ ಚಿತ್ತವಿಟ್ಟು ಕೇಳಿರೆಣ್ಣಾ ಆದ ಕತಿಸಾರಾ ॥ ॥ ಗೀಗೀ ॥

ಪ್ರಥಮದಲ್ಲಿ ಬಂದು ನಾನು ಪಂಚರ ಮುಂದ ಪೇಳುವೆನು
ಪೈಲೆ ಪ್ರಥಮದಲ್ಲಿ ಬಡತಾನ ಘೋರಾ ।
ಶ್ರೀಯುತ ಚನ್ನಪ್ಪಾ ಪಾಟೀಲ ಇವರು ಅಣ್ಣ ತಮ್ಮರಾ ।
ಒಂದೇ ತಾಯಿಯ ಉದರದಿಂದು ಹುಟ್ಟಿ ಬಂದರಾ ।
ಹೊಟ್ಟೆಯ ತಾಪಿಗಾಗಿ ಕಷ್ಟದಿಂದಾ ಕಾಲ ಕಳೆದರು
ಎಷ್ಟು ಹೇಳಿದರೆ ತೀರಲಾರದು ಆದ ಮಜಕೂರಾ ।
ರಾಮಲಕ್ಷ್ಮಣನಂಗ ರೂಪ ಮಾತ್ರ ಒಳೇ ಅನಿವಾರ್ಯ ॥ ॥ ಗೀಗೀ ॥

ಮಂದಿಯ ಮನೆಯಲ್ಲಿ ನಕ್ರಿಯ ಮಾಡತಿದ್ರು
ಬಡತಾನ ಅಂದ್ರ ಬಾಹಳ ಕೆಟ್ಟ ಬಲು ಘೋರಾ ।
ದುಡಿದುಡಿದು ಕಷ್ಟ ಮಾಡಿದರೆ ಇಲ್ಲೊ ಬ್ಯಾಸರಾ ।
ಆಗಿನ ವ್ಯಾಳೇಕ್ಕ ಯಾರದು ಇಲ್ಲಾ ಇವರೀಗಿ ಆಸರಾ ।
ಮನಸ್ಸ ನೋಡಿ ಸ್ವರ್ಗದಲ್ಲಿ ಮಹಾದೇವ ಸಿಗತಿದ್ದ
ಸಾಕ್ಷಾತ್ ಇಳದು ಬಂದಾ ಕೇವಲ ಶಂಕರಾ ।
ಇವರ ಭಕ್ತಿಗಿ ಮೆಚ್ಚಿ ವರವ ಆದಾ ತ್ರಿಶೂಲ ಧಾರಾ ॥ ॥ ಗೀಗೀ ॥

ದುಮಾಲಿ ಭಾವ ಭಕ್ತಿಯಲ್ಲಿ ಶುದ್ಧಾ ।
ದಿನಂಪ್ರತಿ ಎದ್ದಾ ।
ನೀರ ತಂದ ತಂದಾ । ಮನಿ ಮನಿಗಿ ಹಾಕುವರು ।
ಓಂ ಶಿವಾ ಬಾಯಿಲೆ ಅನ್ನುವರು ॥ ॥ ಗೀಗೀ ॥

ತಾಯಿ ತಂದಿ ಮನದಲ್ಲಿ ತಿಳಿದು ।
ಮಕ್ಕಳನು ಕರೆದು ।
ಬಡತಾನ ಅಂಬುದು ಆದ ಒಳೇ ಘೋರಾ ।
ಮಾರಿನೋಡಿ ತಗ್ಯಾವರು ಕಣ್ಣಾನ ನೀರಾ ॥ ॥ ಗೀಗೀ ॥

ಏರು ತಾಯಿ ತಂದಿ ಮನಸಿನ್ಯಾಗ ಹ್ಯಾಂಗ ಮಾಡುದು ಅಂತಾರ
ಈಗ ಮಕ್ಕಳ ಕಷ್ಟ ನೋಡಿ ಬಾಹಳಕಣ್ಣ ನೀರ ಸುರುವ್ಯಾರಾ ।
ಮುಖಾ ಬಾಡುದು ನೋಡಿ ಮನಸ್ಸಿನಲ್ಲಿ ಬಹಳ ಬಳಲುವರಾ ।
ಕುಂತ್ರ ನಿಂತ್ರ ಓಂ ಶಿವಾ ಎಂಬೊ ಶಬ್ದ ಉಚ್ಚಾರಾ ।

ಕೂಡಪಲ್ಲ ಶ್ರೀಯುತ ಮಾನ್ಯರಾದ ಸಿದ್ರಾಮಪ್ಪಗೌಡ ಪಾಟೀಲ ಇವರು
ವೀರಶೈವ ಮತದಲ್ಲಿ ಉದ್ಭವಿಸ್ಯಾರಾ ॥ ॥ ಗೀಗೀ ಚೌಕ ೧ ॥

ದಯಾನಿಧಿ ಆದ ಗುರುಜ್ಞಾನ ದೃಷ್ಟಿ ನೋಡಿಕೊಂಡು
ಬಡತಾನ ಕಷ್ಟಾ ಬಯಲ ಮಾಡಬೇಕಂದ ಮನದಾಗ ।
ಬಹಳ ದುಃಖಪಟ್ಟು ಘೋರ ಬಿಡತಾರ ತಮ್ಮ ಮನಿಯಾಗ ।
ಹಗಲ ಇರುಳು ನನ್ನ ಸ್ಮರಣಿ ನಡಶ್ಯಾರ ತಮ್ಮ ಮುಖದಾಗ ।
ಮಧ್ಯರಾತ್ರಿಯಲ್ಲಿ ಸಾಂಬಾ ಎದ್ದು ಅವತಾರ ತೊಟ್ಟು
ನಿಂತಾ ರುದ್ರಾಕ್ಷಿ ಕೊರಳಾಗ ಹಾಕಿ ತ್ರಿಶೂಲ ಕೈಯಾಗ ।
ಅವತಾರ ಧರಿಸಿ ಸಾಂಬಾ ಎದರ ನಿಂತಾ ಕನಸಿನೊಳಗ ॥ ಗೀಗೀ ॥

ಮುಪ್ಪಿನವರ ಕನಸ್ಸಿನಲ್ಲಿ ಮಹಾದೇವ ಬಂದು ನಿಂತಾ
ಯಾರ ಘೋರ ಬಿಡತೀರಿ ನೀವು ಇನ್ನ ಮ್ಯಾಗ ।
ಬಡತಾನ ಶ್ರೀಮಂತ ಮಾಡುದು ನನ್ನ ಕೈಯಾಗ ।
ಘೋರ ಬಿಡುವುದ್ಯಾಕ ವರವ ಕೊಡುದಕ ಬಂದೀದ ಈಗ ।
ಆಘಾದ ಐತು ಕನಸಿನಲ್ಲಿ ಎದ್ದು ಕುಂತ್ರು
ಹಾಸ್ಗಿಯ ಮ್ಯಾಲಿ ಹೇಳಿ ಮಾಯಾ ಆಗಿ ಹೋದಾ ಅದೇ ಕ್ಷಣದಾಗ।
ಯಾರೀಗಿ ತಿಳಿಯಲಾರದು ಸಾಂಬ ತಾನು ಮಾಡಿದ ಮನದಾಗ॥
॥ ಗೀಗೀ ॥

ವರವ ಕೊಟ್ಟು ಹೊಂಟು ಹೋದ ಮರುದೀನಾ ಸುರು ಹಿಡಿತು
ಲಕ್ಷ್ಮೀ ಹ್ವಾರ್‍ಯಾ ಗುರುವಿನ ಹಾದಿ ತಿಳಿಯುವದಿಲ್ಲಾ ಯಾರಾರೀಗ ।
ಒಳೆ ಗುರ್ತ ಹಿಡಿದು ದಿಡಾ ಇಡ್ರಿ ಗುರುವಿನ ಮ್ಯಾಗ ।
ಮಾನವ ಜಲ್ಮಿಕ ಹುಟ್ಟಿಬಂದೇವಿ ಈ ಜಗದಾಗ ।
ಒಳಗೊಂದು ಹೊರಗೊಂದು ಹೊರಗೊಂದು ಒಳಗೊಂದು
ಇಂಥಾ ಬುದ್ದಿ ಬ್ಯಾಡಿರೆಣ್ಣಾ ನಮ್ಮ ಮನದಾಗ ।
ಮಾನವ ಜಲ್ಮ ಅಂದ್ರ ಶ್ರೇಷ್ಠ ಐತಿ ಈ ಜಗದಾಗ ॥ ॥ ಗೀಗೀ ॥

ದುಮಾಲಿ ಮನಸ್ಸಿನಂತೆ ಇರತಾನ ಮಹಾದೇವಾ ।
ಇನ್ನ ಮೇಲೆ ಸುರುವಾ ।
ಅವನೇ ನಮ್ಮ ಗುರುವಾ ।
ಖರೇ ನಿಜವಾಗಿ । ಮರಿಬ್ಯಾಡ್ರಿ ಅಂತಾ ಗುರವೀಗಿ ॥ ಗೀಗೀ ॥

ಇನ್ನ ಮುಂದ ಕೇಳರಿ ತಾವಾ ।
ಖರೇ ಗುರುದೇವಾ ।
ಮಾಡಿದಂತಾ ಸೇವಾ ।
ಇವರ ಭಕ್ತಿಗಿ । ಗುರುಗಳು ಮಾಡೀದ ಮುಕ್ತೀಗಿ ॥ ॥ ಗೀಗೀ ॥

ಏರು ಏಕ ಮನಸ್ಸ ಭಕ್ತನಿಗೆ ಬೇಕಾದ್ದು ಕೊಡುವವನು
ನಂಬಿಗಿಟ್ಟು ನಡದವರಿಗೆ ಕರೇ ಶಂಕರಾ
ನಾಳೆ ಸ್ವರ್ಗದಲ್ಲಿ ಮುಕ್ತೀ ಮಾರ್ಗ ದೊರೆಯುವದು ಪೂರಾ ।
ವೇದ ಪುರಾಣಗಳಲ್ಲಿ ಬರೆದಿರುವರು ಇಂತಾ ಸಾರಾ ।

ಕೂಡಪಲ್ಲ ಶ್ರೀಯುತ ಮಾನ್ಯರಾದ ಸಿದ್ರಾಮಪ್ಪ ಪಾಟೀಲ ಇವರು
ವೀರಶೈವ ಮತದಲ್ಲಿ ಉದ್ಭವಿಶಾರಾ ॥ ॥ ಗೀಗೀ ॥ ಚೌಕ ೨ ॥
ಲಕ್ಷ್ಮಿ ಹ್ವಾರೆ, ಬಂತೆಂದು ಲೆಕ್ಕಿಸಲಾರದೆ ನಡೆಯುವದಿಲ್ಲಾ
ಬಡಬಗ್ಗರಿಗೆ ನೋಡಿ ಬಹಳ ಮನದಲ್ಲಿ ಮರಗುವರು ।
ಮಾನ್ಯ ಮಾನ್ಯರಲ್ಲಾ ಕುಂತೀರಿ ನೀವು ಕರೇ ತಿಳದವರು ।
ಊರ ತಾಯಿತಂದಿ ಅಂದರೆ ಕೇಳ್ರಿ ಕರೇ ಗೌಡರು ।
ಎಷ್ಟೋ ಮಂದಿ ಬಡಬಗ್ಗರು ಕಷ್ಟಬಂದರೆ ಕೇಳುವರು
ಬಂದ ಕಷ್ಟ ಬಡವರೀಗೆ ಬಯಲ ಮಾಡವರು ।
ಕರೇ ಯಾವತ್ತು ಬಡಬಗ್ಗರೀಗೇ ಸದಾ ನೋಡುವರು ॥ ॥ ಗೀಗೀ ॥
(ಅಪೂರ್ಣ)

ಖ್ಯಾಲಿ

ಬಾರಃ ಹಡಸಿ, ಬಂದಿದಿ ಬೇಸಿ ।
ಇಲ್ಲಿ ಆಗಲಿ ಚವ ಕಾಃಸಿ ॥
ಪಕ್ಕಡಿ ಒಳಗ ಕೈಹಾಕಿ ಹೊಡದರ ।
ತತ್ತರಸಿ ಮುಂದ ಬಿದ್ದಿ ॥
ಚಡಚಣ ಊರಿಗಿ ನೀ ಬಂದಿದಿ ।
ಕಲ್ಲಣ್ಣನ ಬಡ್ಯಾಗ ಬಿದ್ದಿದಿ ॥

ಮಹಾರಾಷ್ಟ್ರದ ಮಹಾರಾಜ

ಸೃಷ್ಟಿಯಲ್ಲಿ ಆದ ಕೀರ್ತಿ ಶ್ರೇಷ್ಠರಾಗಿ ಕೇಳಿರೆಣ್ಣಾ
ಸರ್ವರಿಗೆ ಮಾಡುವೆ ವಂದನಾ ।
ಸಂತೋಷಲಿಂದ ಎತ್ತಿಕೊಳ್ರಿ ಕಂದಾನಾ ।
ಸಭಾದಲ್ಲಿ ಹೇಳಂತ ಗುರು ಅಂದಾನಾ ।
ಮಹಾರಾಷ್ಟ್ರ ದೇಶದಲ್ಲಿ ಮಹಾರಾಜರ ಕತಿಯನ್ನು
ಚಿತ್ತಿಟ್ಟು ಕೇಳ್ರಿ ಅವರ ಕೀರ್ತನಾ ॥ ॥ ಗೀಗೀ ॥

ರಾಜರು ಅಂದ್ರ ಅವರು ಸಾಮಾನ್ಯ ಇದ್ದಿದ್ದಿಲ್ಲಾ
ರಾಜಾಧಿರಾಜರಲ್ಲಿ ಅವರ ವರಣನ್ನಾ ।
ತೇಟರೂಪದಲ್ಲಿ ಇದ್ದಂಗ ಸೂರ್ಯನ ಕಿರಣಾ ।
ಅವರ ಹೊಟ್ಟೆಲೆ ಇದ್ರು ಪುತ್ರ ಸಂತಾನಾ ।
ದಂಡ ದರ್ಬಾರ ದಾನ್ಯ ದ್ರವ್ಯ ಅಂತು
ಕೊಟ್ಟ ಮರ್ತಿದ್ದಾ ಭಗವಾನಾ ॥ ॥ ಗೀಗೀ ॥

ಮಕ್ಕಳಂತೆ ಅವಾ ಮಮತಾ ಇಟ್ಟದಾ
ಎಲ್ಲಾ ಪ್ರಜೆಗಳು ಸಮಾನಾ ।
ಅಹಂಕಾರ ಅಂಬುದು ಇಲ್ಲರಿ ಏನೇನಾ ।
ಲಕ್ಷ್ಮಿವಾಸ ಇತ್ತು ಅವನ ಬಲ್ಲಿ ಪೂರ್ಣಾ ।
ಭಾಗ್ಯಲಕ್ಷ್ಮಿ ಬಲಾ ಕೊಡುವಳು ಯಾವತ್ತು ಇದ್ದಂಗ ಸ್ಥಾಪನಾ ॥
॥ ಗೀಗೀ ॥

ದುಮಾಲಿ ಒಂದನೊಂದು ದಿವಸದಲ್ಲಿ ಇದಿ ಲಕ್ಷ್ಮಿ ಹೋದಾಳು ।
ಜೈ ಬಿಕ್ಷಾನ್ನ ದೇವಿ ಅಂದಾಳು ॥
ದನಿ ಕೇಳಿ ಭಾಗ್ಯದ ಲಕ್ಷ್ಮಿ ಉತ್ತರ ಕೊಟ್ಟಾಳು ।
ಅಲ್ಲಿಂದೆ ನಿಂತು ಹೆಟ್ಟಾಳು ॥

ಏರು ಕಾಡೋ ಕಾಲಕ ಕಂಟಕ ತಟ್ಟಿತು ಕೂತ ಕೇಳಿರೆಣ್ಣಾ ಕತನಾ ।
ಭಾಗ್ಯದ ಲಕ್ಷ್ಮಿಯ ವಚನಾ ।
ಇಬ್ಬರ ಜಗಳ ಒಂದೇ ಸವನಾ ।
ಕೂಡಪಲ್ಲ ಮಹಾರಾಷ್ಟ್ರ ದೇಶದಲ್ಲಿ ಮಹಾರಾಜರ ಕತಿಯನ್ನು
ಚಿತ್ತಿಟ್ಟು ಕೇಳ್ರಿ ಅವರ ಕೀರ್ತನಾ ॥ ॥ ಗೀಗೀ ॥ ಚೌಕ ೧ ॥

ಅಷ್ಟ ಕೇಳಿ ಇದಿ ಲಕ್ಷ್ಮೀ ಅಂತಾಳ ಜ್ವಾಕಿ ರಾಜ್ಯ ನಿಮ್ಮ ರಾಜವಾಡಾ।
ನಾಳೆ ಹೇಳಿಲ್ಲಂದಿ ಹರದಿತ್ತು ಜಡಾ ।
ಈ ಹೊತ್ತ ಆಗೂದು ಬಂತಪ್ಪಾ ಕೇಡಾ
ಭಿಕ್ಷಾಕ ಬಂದ್ರ ಭಾಗ್ಯದ ಲಕ್ಷ್ಮಿ ಬಡದ ಕಳವ್ಯಾಳ ಅನಗಡಾ ॥ ಗೀಗೀ ॥

ಕೈಯ ಮುಗಿದು ರಾಜಾ ಬಾಯಿ ತೆರಿತಾನಾ
ಬೈಮಾನಾ ಅಂಬೂದು ಮಾಡಬ್ಯಾಡಾ ।
ಇಂತಾ ಕೇಡದ ಮಾತ ತಂಗಿ ಆಡಬ್ಯಾಡಾ ।
ನೀವು ಇಬ್ರು ಅಷ್ಟೇ ಇದ್ದಂಗ ಜೋಡಾ ।
ಅಷ್ಟ ಕೇಳಿ ಇದಿ ಲಕ್ಷ್ಮಿ ಅಂತಾ ಜೋಡ ಹ್ಯಾಂಗ ಮಾಡಿದಿ ಮೋಘಾ ॥
॥ ಗೀಗೀ ॥

ಇಷ್ಟ ಕೇಳಿ ಇದಿ ಲಕ್ಷ್ಮಿ ಅಂತಾಳ ನಾವು ಇಬ್ರು ಅಂತಿ ನೀಬಳೆ ಜೋಡಾ।
ಭಾಗ್ಯದ ಲಕ್ಷ್ಮಿ ಇದ್ದಂಗ ಆಡಾ ।
ಇನ್ನ ತಗೊರೊ ರಾಜ್ಯತಗಿತೇನಿ ಸೇಡಾ ।
ಬಹಳ ಜ್ವಾಕಿಲಿಂದ ಭಾಗ್ಯದ ಲಕ್ಷ್ಮೀಗಿ ಮನಿಯೊಳಗ ಇಟಕೋರೊ
ಮೋಘಾ ॥

ದುಮಾಲಿ ಆರತಾಸ ರಾತ್ರಿಯ ಸಮಯದಲ್ಲಿ ಬರತೇನು ।
ರಾಜವಾಡೆಯಲ್ಲಿ ಇರತೇನು ॥ ॥ ಗೀಗೀ ॥

ಧಾನ್ಯ ದ್ರವ್ಯ ದಂಡ ದರ್ಭಾರ ಜ್ವಾಕಿ ಮಾಡು ನೀನು ।
ಸುಟ್ಟು ಬೂದಿ ಮಾಡುವೆನು ನಾನು ॥ ॥ ಗೀಗೀ ॥

ಏರು ಮಹಾರಾಷ್ಟ್ರ ರಾಜ್ಯರಿಗೆ ಕಾಡುವ ಕಾಲ ಬೆನ್ನ ಹತ್ತ್ಯ
ಏನ ಹೇಳಲೆಣ್ಣಾ ವರ್ತ್ಮಾನಾ ।
ಬ್ರಹ್ಮ ಬರೆದ ಹಣೀ ಬರ ಕತನಾ ।
ಇನ್ನ ಕೂತ ಕೇಳಿರೆಣ್ಣಾ ಅವರ ಕೀರ್ತನಾ ।

ಕೂಡಪಲ್ಲ ಮಹಾರಾಷ್ಟ್ರ ದೇಶದಲ್ಲಿ ಮಹಾರಾಜರ ಕತಿಯನ್ನು
ಚಿತ್ತಿಟ್ಟು ಕೇಳ್ರಿ ಅವರ ಕೀರ್ತನಾ ॥ ॥ ಗೀಗೀ ॥ ಚೌಕ ೨ ॥

ಭರ್ತಿ ಆರು ತಾಸ ರಾತ್ರಿ ಸಮಯದಲ್ಲಿ ಇದಿ ಲಕ್ಷ್ಮಿ ಹೊಂಟಾಳಣ್ಣಾ
ಅವಸರಾ ।
ರಾಜರಿsಗಿ ಚಿಂತಿಯಾಯ್ತು ಅನಿವಾರಾ ।
ಎಷ್ಟೋ ಮಂದಿ ಬಂದು ಕೂತ್ರು ಜನರಾ ।
ರಾಜಾ ಅಂತಾನ ಎಲ್ಲಾ ಪ್ರಜೆಗಳಿಗೆ ದುಃಖ ಮಾಡುದು ಬಂತಪ್ಪಾ
ಘೋರಾ ॥ ॥ ಗೀಗೀ ॥

ದಾನ್ಯ ದ್ರವ್ಯ ಮೇಲೆ ಭಾಗ್ಯದ ಲಕ್ಷ್ಮಿ ಮನಿಯೊಳಗ ಕುಂತಾಳ ಭಾರಾ ।
ಹೋಗಿ ಇದಿ ಲಕ್ಷ್ಮಿ ನಡಶ್ಯಾಳ ಜೋರಾ ।
ಒಳಹೊಕ್ಕು ಎಳದಾಳ ಧರರರಾರಾ ।
ಕೂದಲ ಹಿಡಿದು ಹೊರಗ ತಂದಾಳ ತಾರ ಮಾಡ್ಯಾಳ ಇಲ್ಲ
ದರಕಾರಾ ॥ ॥ ಗೀಗೀ ॥

ಆನಿ ಕುದರಿ ಒಂಟಿ ದರಬಾರ ಎಲ್ಲಾ ಒಂದು ತಾಸಿನಲ್ಲಿ ಸತ್ತುಬಿದ್ದು
ಅನಿವ್ಯಾರಾ ।
ಮಣ್ಣ ಪಾಲ ಮಾಡ್ಯಾಳ ಬೆಳ್ಳಿ ಬಂಗಾರಾ ।
ತುತ್ತ ರೊಟ್ಟಿ ಇಲ್ದಂಗಾತು ಆಧಾರಾ ।
ಮಹಾರಾಷ್ಟ್ರ ದೇಶಕ್ಕೆ ಮಹಾರಾಜರು ಅನಿಸಿಕೊಂಡು ಸಿಗಲಾರದಂಗ
ಐತು ಅನ್ನ ನೀರ ॥

ದುಮಾಲಿ ರಾಜಾ ಹೇಳತಾನ ಆಗ ತನ್ನ ಸತಿಯಳ ಮುಂದ ।
ನಾವ ಇರೂನು ಬ್ಯಾಡ ನಾಳಿಂದ ॥ ॥ ಗೀಗೀ ॥

ಆರತಾಸ ರಾತ್ರಿಯ ಭರ್ತಿ ರಾತ್ರಿ ಮುಂದ ।
ಮಾರಿ ತೋರ್ಸೂನುಬ್ಯಾಡಾ ಯಾರ ಮುಂದ ॥ ॥ ಗೀಗೀ ॥

ಏರು ಸತಿಪತಿ ಇಬ್ರು ಕೂಡಿ ಹೊಂಟಾರು ಅವರ ಮೇಲೆ ಮುನದಾನ ಭಗವಾನಾ ।
ವಿಶ್ವಾಸಲಿಂದ ಹೊಡದಂಗ ಪ್ರಾಣಾ ।
ದುಃಖ ಆದ ಮಾತ ಕೇಳ್ರಿ ಮುಂದ ಒಂದೇ ಸವನಾ ।
ಕೂಡಪಲ್ಲ ಮಹಾರಾಷ್ಟ್ರ ದೇಶದಲ್ಲಿ ಮಹಾರಾಜರ ಕತಿಯನ್ನ
ಚಿತ್ತಿಟ್ಟು ಕೇಳ್ರಿ ಅವರ ಕೀರ್ತನಾ ॥ ॥ ಗೀಗೀ ॥ ಚೌಕ ೩ ॥

ಊರೂರ ತಿರಗೂತ ಭಿಕ್ಷಾ ಬೇಡೂತ ಸತಿಪತಿ ಕೂಡಿ ಹೊಂಟಾರಾ ।
ಕೆಟ್ಟ ಬ್ಯಾಸಗಿ ಬಿಸಿಲ ಇತ್ತು ಅನಿವಾರ್ಯಾ ।
ಹೆಗಲ ಮೇಲೆ ಮಕ್ಕಳ್ನ ಹೊತ್ತಾರಾ ।
ರಾಜಧಾನಿ ಬಿಟ್ಟು ಹೊರಗ ಬರವರಲ್ಲಾ ಕಂಡಂಗೆ ಬಿಡತಿದ್ದು
ಸಂಕಟ ನೀರಾ ॥ ॥ ಗೀಗೀ ॥

ಹೆಗಲ ಮೇಲೆ ಕುಂತು ಮಕ್ಕಳಂತಾವ ಅವ್ವಾ ಅಪ್ಪಾ ತಂದು ಕಡು ನೀರಾ ।
ಗಂಟಲ ಒಣಗ್ಯೆತಿ ಅನಿವಾರ್ಯಾ ।
ನೀರ ತಂದ ಹಾಕ್ರಿ ನೀವು ಅವಸರಾ ।
ಹಾದಿ ನಡೆಯುದು ರಾಜರಿಗೇನು ಗುರ್ತಾ ದಾರಿ ನಡೆದು ಬಂತ್ರಿ
ಬ್ಯಾಸರಾ ॥ ॥ ಗೀಗೀ ॥

ಮುತ್ತಿನಂಥಾ ಮಕ್ಕಳು ಬಾಯಿ ತೆರಿತಾವ ಸತಿ ಪತಿ ನೋಡತಾರ ಕಣ್ಣಾರಾ ।
ದಾರಿಕಾರು ಯಾರ್‍ಯಾರಿಲ್ಲ ಅಣ್ಣಗಳಿರಾ ।

ಬಾವಿ ಕೆರಿ ಮುಂದ ಉಳದಾವ ದೂರಾ ।
ಬ್ಯಾಸ್ಗಿ ಬಿಸಿಲಿನಲ್ಲಿ ಕೂಸಿಗಿ ಇಟಗೊಂಡು ದುಃಖ ನಡಶಾರ
ಅನಿವಾರ್ಯಾ॥ ॥ ಗೀಗೀ ॥

ಅನ್ನ ನೀರ ಅಂತ ಒದರ್ಯಾಡ ತಾವ ನಾನಾ ಪರಿ ತಿಳದ್ರು ರಾಜರಾ ।
ಎಂತಾ ಹೊತ್ತ ತಂದ ನನಗ ಶಂಕರಾ ।
ಇದಿಲಕ್ಷ್ಮಿ ಕಾಡುವ ಹುನ್ನಾರಾ ।
ಕುಂತಗಾದಿ ಬಿಟ್ಟು ಎದ್ದ ಹೋಗವನಲ್ಲಾ ಕುಂತಾವರು ಮಾಡರೆಣ್ಣಾ
ವಿಚಾರಾ ॥ ॥ ಗೀಗೀ ॥

ದುಮಾಲಿ ಸತಿ ಪತಿ ಮಾರಿ ಚಿನ್ನ ರೂಪ ಬದಲಾಯಿತು ।
ರಾಜಾ ರಾಣಿ ಅವತಾರ ತಪ್ಪಿತು ॥ ॥ ಗೀಗೀ ॥

ರಾಜ್ಯ ಆಳು ಕಾಲಽಕ ಹಿಂದಿಂದ ನೆನಪ ಬರತಿತ್ತು ।
ಕಣ್ಣಾಽನ ನೀರ ಸುರಿತಿತ್ತು ॥ ॥ ಗೀಗೀ ॥

ಏರು ಕೂಸ ಅಳೂದು ಕಂಡು ಓಡಿ ಹೋದ ರಾಜಾ ಬಾವಿ ಮೇಲೆ
ಹೋಗಿ ನಿಂತಾನಾ ।

ಬಾವಿ ತುಳಕತಿತ್ತು ಇಲ್ಲ ಅನ್ಮಾನಾ ।
ಇದಿಲಕ್ಷ್ಮಿ ಕಾಡುದು ವರಣನಾ ।

ಕೂಡಪಲ್ಲ ಮಹಾರಾಷ್ಟ್ರ ದೇಶದಲ್ಲಿ ಮಹಾರಾಜರ ಕತಿಯನ್ನು
ಚಿತ್ತಿಟ್ಟು ಕೇಳ್ರಿ ಅವರ ಕೀರ್ತನಾ ॥ ॥ ಗೀಗೀ ॥ ಚೌಕ ೪ ॥

ಬಲಗೈಯಲ್ಲಿ ಗಿಂಡಿ ಹಿಡಕೊಂಡು ಹೋಗಿ ನಿಂತಾ ರಾಜಾ ಬಾವಿ
ಮ್ಯಾಗ ।

ನೀರ ಅಟ್ಟಿಸಿ ಹೋದುರೆಣ್ಣಾ ಒಳಗ ।
ರಾಜಾ ಹಂಗೆ ಇಳಿತಾನ ಬಾವಿ ಒಳಗ ।
ಬಾವಿ ಬಾರಿ ಮೇಲೆ ಕೂಸಿನ್ನ ಇಟ್ಟಾರು ನೀರ ಬೇಡಿ ಅಳತಾವ ಆಗ ॥
॥ ಗೀಗೀ ॥

ತುಂಬಿದ ಬಾವಿ ಒಣಗಿ ಹೋದಿತ್ತು ಇದಿ ಲಕ್ಷ್ಮಿ ಬೆನ್ನ ಹತ್ಯಾಳ ಅವಗ ।
ರಾಜಾ ಅಂತಾನ ಆಗ ತನ್ನ ಮನದಾಗ ।
ಇನಾಽ ಬೆನ್ನ ಹತ್ತಿದಿ ತಾಯಿ ನನಗ ।
ಮುತ್ತಿನಂತಾ ಮಕ್ಕಳು ಒಂದೇ ಸವನೆ ಅಳತಾವ ಮಾರಿ ನೋಡಿ
ಕರುಣ ಬರಲಿ ನಿನಗ ॥ ॥ ಗೀಗೀ ॥

ಸತಿ ಪತಿ ಅವರು ದುಃಖ ಮಾಡೂತ ಹೊಂಟು ಹೋದಾರು
ಒಂದು ಊರೀಗ ।

ಕೂಸು ಹಸ್ತು ನೋಡತಾದ ಮಾರೀಗ ।

ರೊಟ್ಟಿ ಅಂತಾ ಬೇಡತಾವ ಅವರೀಗ ।
ಓಣ್ಯಾಗ ಹುಡುಗುರು ತಿನ್ನುದ ನೋಡಿ ನೋಡಿ ಅಳತಾವ
ಎದರೀಗ ॥ ॥ ಗೀಗೀ ॥

ದುಃಖ ನೋಡಿ ಮಂದಿ ರೊಟ್ಟ ಕೊಟ್ಟರೆ ತಿನಕೊಂತ ಕುಂತಿದು
ಗುಡಿಯಾಗ ।
ಇದಿ ಲಕ್ಷ್ಮಿ ಅವತಾರ ತೊಟ್ಟಾಳ ಆಗ ।
ಬೆಕ್ಕಾಽಗಿ ರೊಟ್ಟಿ ಒಯ್ದುಳು ಘಳಗ್ಯಾಗ ।
ರೊಟ್ಟಿ ಒಯ್ದ ಮೆಲೆ ಕೂಸ ಅಳತಾವ ಸಂಕಟ ಬಂದ ಕುಂತ್ಯ
ರಾಜ್ಯಾಗಽ ॥ ॥ ಗೀಗೀ ॥

ದುಮಾಲಿ ದುಃಖದಿಂದ ಸತಿ ಪತಿ ಅಳತಾರಣ್ಣಾ ಬೋರ್‍ಯಾಡಿ ।
ಕೂಸುಗಳ ಮಾರಿಯ ನೋಡಿ ॥ ॥ ಗೀಗೀ ॥

ದನಿ ಕೇಳಿ ಊರಾನ ಜನಾ ಬಂತ್ರಿ ಒಳೆ ಓಡಿ ।
ದುಃಖ ಮಾಡ್ತಾರ ಮಕ್ಕಳಿಗಿ ನೋಡಿ ॥ ॥ ಗೀಗೀ ॥

ಏರು ಊರಾನ ಮಂದಿಯೆಲ್ಲಾ ದುಃಖದಿಂದ ಕೇಳ್ತಾರು
ಯಾವ ಊರ ಐತಿ ಹೇಳ್ರಿ ನಿಮ್ಮ ವತನಾ ।
ಹೀಂಗ ದುಃಖದಿಂದ ಕೇಳ್ತಾರ ಎಲ್ಲಾ ಜನಾ ।
ಏನ ಹೇಳಲೆಣ್ಣಾ ರಾಜಾ ಅಂತಾನಾ ।

ಕೂಡಪಲ್ಲ ಮಹಾರಾಷ್ಟ್ರ ದೇಶದಲ್ಲಿ ಮಹಾರಾಜರ ಕತಿಯನ್ನು
ಕೇಳ್ರಿ ಅವರ ಕೀರ್ತನಾ ॥ ॥ ಗೀಗೀ ॥ ಚೌಕ ೫ ॥

(ಅಪೂರ್ಣ)

ಶರೀರ ಶೋಧದ ಹಾಡು

ಶರೀರ ಶೋಧದ ವರ್ತ್ಮಾನಾ ಕೇಳಿದ್ದಿ ನೀನು ನನ್ನಽ
ಹೇಳತೆಽನು ಕೇಳ ಇನ್ನಾ ಬಿಚ್ಚಿ ಪುರಾಣಾ ।
ನಮ್ಮ ದೇಹದಲ್ಲಿ ಮೂರ ಬಾಗ ಮಾಡೇದಾ ಭಗವಾನಾ ।
ಸ್ವಲ್ಪು ಲಕ್ಷವಿಟ್ಟು ಕೂತ ಕೇಳ್ರಿ ಕೂತಂತ ಜನಾ ।
ಶರೀರದಲ್ಲಿ ಏಕಾಂತಾ ಯಂತ್ರ ಇಟ್ಟಿದ್ದಾ ಭಗವಂತಾ
ರುಂಡ ಧಡಾ ಮುಂಡಾ ಅಂಬುವದು ಮೂರು ಪುರಾಣಾ ।
ನಾನು ಸುಳ್ಳ ಅಂದ್ರ ಓದಿ ನೋಡ್ರಿ ಶಾಸ್ತ್ರ ಪುರಾಣ ॥ ॥ ಗೀಗೀ ॥

ಅಸ್ಥೀರ ಪಂಜರದಲ್ಲಿ ನಾನು ಎಲವುಗಳನ್ನು ಹೇಳುವೆನು
ತಲೆ ಬುರುಡೆ ಬೆನ್ನ ಎಲವು ಹೇಳುವೆ ಇನ್ನು ।
ಇದೇ ಪ್ರಕಾರದಿಂದ ಎಲುವಿನ ಬೆರಳು ತಯ್ಯಾರ ಮಾಡ್ಯಾನಾ ।
ಮೇಲೆ ಸ್ನಾಯು ಅಂಬುವ ನರಗಳಿಂದ ಹೊರಳಿಸಿ ಕಟ್ಟ್ಯಾನಾ ।
ದೇಹದಲ್ಲಿ ನರಗಳು ಕೂಡಿ ಒಂದಕ್ಕೊಂದು ತೊಡಕ ಮಾಡಿ
ರಕ್ತ ಹರದಾಡಲಿಕ್ಕೆ ಹಾದಿ ಮಾಡ್ಯಾನಾ ।
ಇದೇ ನರಗಳದಿಂದಾ ಎಲ್ಲಾ ಕಡಿಗೆ ಆಗೂರು ಭೋಜನ್ನಾ ॥ ॥ ಗೀಗೀ ॥

ತಲೆಯ ಬುರಡಿಯು ಎಲವಿನ ಲೆಕ್ಕ ಚಂದದಿಂದ ಕೇಳ ಅಕ್ಕಾ
ಎಂಟು ಎಲುವು ಕೂಡಿಸಿ ಪಕ್ಕಾ ತಲೆಬುರುಡೆ ಮಾಡ್ಯಾನಾ ।
ನಮಗೆ ಜ್ಞಾನಕೊಡುವಂತಾ ಮಿದಳು ಒಳಗೆ ಇಟ್ಟ್ಯಾನಾ ।
ಆತನ ಚಲನ ವಲನ ಇದ್ರೆ ನಮಗೆ ಸಾಗೂದು ಜೀವನ್ನಾ ।
ಜ್ಞಾನ ತಂತು ಕೊಡುವಂತಾ ಒಳಗ ಇಟ್ಟ್ಯಾನ ಭಗವಂತಾ
ಎಂಟೂ ಎಲುವು ಕೂಡಿಸಿ ಆತ ತಲೆಬುರುಡೆ ಮಾಡ್ಯಾನಾ ।
ಅಂತಾ ಮನುಷ್ಯಾನ ಒಯ್ದು ಒಳಗ ಇಟ್ಟ್ಯಾನ ಎಂಥಾವ ಭಗವಾನಾ ॥ ಗೀ ॥

ದುಮಾಲಿ ಪಚೇಂದ್ರಿ ಲೆಕ್ಕಾ ಹೇಳ್ತೇನು । ಕೇಳ ತಂಗಿಽ ನೀನು ।
ಬಾಯಿಯಿಂದಾ ನೀನು ಭೋಜನ್ನ ಮಾಡೂದು ।
ಹೊಟ್ಟಿಗೆ ಅನ್ನ ಹಾಕೂದು ॥ ॥ ಗೀಗೀ ॥

ಜಠರ ಅಂಬುವ ಚೀಲನ್ನಾ । ತಿನ್ನುವಂತಾ ಅನ್ನಾ ।
ಒಳಗ ಹೋಗುದಣ್ಣಾ । ಹೋಗಿ ಇರುವುದು ।
ಕರುಳ ಅಂಬುದು ಪಚನ ಮಾಡೂದು ॥ ॥ ಗೀಗೀ ॥

ಏರು ಪುಪ್ಪುಸ ರಕ್ತಾಶಯದ ಎಲ್ಲಾ ಬಿಚ್ಚಿ ನಾನು ಹೇಳುವೆ ಖುಲ್ಲಾ
ಎದೆ ಎಂಬು ಪಿಂಜರ ಮಾಡಿ ಒಳಗ ಇಟ್ಟ್ಯಾನಾ ।
ಶುದ್ಧ ಅಶುದ್ಧ ರಕ್ತಾ ಪುಪ್ಪುಸಗಳಿಂದ ತಯ್ಯಾರ ಮಾಡ್ಯಾನಾ ।
ಆ ಪುಪ್ಪುಸ ಬಳಿಯಲ್ಲಿ ಶುದ್ಧ ರಕ್ತದ ಚೀಲ ಇಟ್ಟ್ಯಾನಾ ।

ಕೂಡಪಲ್ಲ ಶರೀರದಲ್ಲಿ ಏಕಾಂತ ಯಂತ್ರ ಇಟ್ಟ ಇಟ್ಟಿದ್ದಾ ಭಗವಂತಾ ।
ರುಂಡ, ದಡಾ, ಮುಂಡಾ ಅಂಬುವದು ಮೂರು ಪುರಾಣಾ ।
ನಾಮ ಸುಳ್ಳ ಅಂದ್ರ ಓದಿ ನೋಡ್ರಿ ಶಾಸ್ತ್ರ ಪುರಾಣ ॥ ಗೀಗೀ ॥ ಚೌಕ ೧ ॥

ತ್ವಚೆ ಅಂಬುವದು ತೊಗಲು ಅದು ಶರೀರ ಮೇಲೆ ಇದ್ದದ್ದು
ಇಡೀ ದೇಹ ತುಂಬಾ ಶರ್ಟ್‌ಮಾಡಿ ಹೊಚ್ಚಿ ಬಿಟ್ಟಾನಾ ।
ಒಳಗಿನ ಪುಪ್ಪಸ ಕರಳುಗಳು ಎಲ್ಲಾ ಕಾಯ್ದು ಇಟ್ಟಾನಾ ।
ಅದೇ ಶರೀರದ ಪಂಚಮುಖಿಗಳ ಹುಟ್ಟಿಸಿ ಬಿಟ್ಟಾ ನಾ ।
ಕಣ್ಣು ಕಿವಿ ಮೂಗು ನಾಲಿಗೆ ಅಂಬುವದೊಂದು ಮಾಡಿ ಇಟ್ಟ
ತೊಗಲ ಮಾತ್ರ ಕೈ ಮುಟ್ಟ ಶರ್ಟ ಹಾಕ್ಯಾನಾ ।
ಈ ತೊಗಲ ಹಿಡಿದು ಪಂಚ ತತ್ವಗಳು ಹುಟ್ಟಶ್ಯಾನಾ ॥ ॥ ಗೀಗೀ ॥

ಅಸ್ಥೀರ ಪಂಜರ ಎಲವುಗಳಲ್ಲಿ ಆಕಾರ ಮಾತ್ರ ಹೇಳುವೆ ಇಲ್ಲಿ
ನಾಲ್ಕು ತರದ ಆಕಾರ ಎಲವು ಮಾಡಿ ಇಟ್ಟಾನಾ ।
ಉದ್ದ ಚಪ್ಪಟೆ ಹಲಬಿ ಗೋಲಾ ಕರದ್ದು ನಾಲ್ಕು ಬೇಧಣ್ಣಾ ।
ಒಂದೊಂದು ಎಲವಿನ ಸ್ಥಾನ ಹೇಳತೇನ ಕೇಳ ನೀ ಹೆಣ್ಣಾ ।
ಕೈಕಾಲು ಎಲವು ಪಕ್ಕೆಯ ಎಲವು ನೀಟಾಗಿ ಇರುವವು
ಚಪ್ಪಟೆ ಎಲವು ಹೆಗಲದಲ್ಲಿ ಇಟ್ಟ ಬಿಟ್ಟಾನಾ ।
ಕಾಲೀನ ಹಿಮ್ಮಡದಲ್ಲಿ ಗೋಲ ಎಲವು ತಯ್ಯಾರ ಮಾಡ್ಯಾನಾ ॥
॥ ಗೀಗೀ ॥

ಶರೀರದಲ್ಲಿ ಶೋಧ ಮಾಡಿ ಎಲವುಗಳು ಹುಡಿಕ್ಯಾಡಿ
ಆರೋಗ್ಯಶಾಸ್ತ್ರ ಓದಿ ನೋಡಿ ತಯ್ಯಾರ ಮಾಡ್ಯಾನಾ ।
ಒಟ್ಟು ಶರೀರದಲ್ಲಿ ಎರಡನೂರು ಎಲವು ಅಂತಾನಾ ।
ಇದು ಸುಳ್ಳ ಇದ್ದರೆ ಹೇಳಿರೆಣ್ಣ ಕೂತಂತ ಜನಾ ।
ದೊಡ್ಡವರ ಎಲವುಗಳು ನೋಡಿರೆಣ್ಣಾ ಶಿಶು ಮಕ್ಕಳು
ಕೂಸಿನ ಎಲವು ಎಷ್ಟು ಮೆತ್ತಗೆ ಇರುದರೆಣ್ಣಾ ।
ಮೂರು ತಿಂಗಳವರೆಗೆ ಕೂಡೂದಿಲ್ಲಾ ಕೂಸಿನ ಗೋಣಾ ॥ ಗೀಗೀ ॥

ದುಮಾಲಿ ಬಾಯಿ ಎಲವು ಹದಿನಾಲ್ಕು ನೋಡಣ್ಣಾ ।
ದವಡೆದು ಎರಡಣ್ಣಾ । ತಿಳಿದ ನೋಡ ಹೆಣ್ಣಾ ।
ಮಾಡಬ್ಯಾಡವಾ । ಇಪ್ಪತ್ತನಾಲ್ಕ ಪಕ್ಕೆಯ ಎಲುವಾ ॥ ಗೀಗೀ ॥

ಬೆನ್ನ ಎಲವು ಮಾಡಿ ಇಟ್ಟಾನಾ ।
ಸಂದಿಸಂದೆಣ್ಣಾ । ತಿಳಿ ಅದರ ಕೂನಾ ।
ಮೂವತ್ತಮೂರ ಮಿವಾ । ಬರೇ ಸುಳ್ಳ ಹೇಳ ನಿನ್ನ ಗುರುವಾ ॥
॥ ಗೀಗೀ ॥

ಏರು ಮುಂಗೈದಲ್ಲಿ ಎಂಟು ಎಲವು ಹಸ್ತದ ಹದಿನಾಲ್ಕು ಎಲವು
ಇದರಂತೆ ಮತ್ತೊಂದು ಕೈದು ತಿಳಕೋ ಕೂನಾ ।
ಒಂದೊಂದು ಕಾಲಿನಲ್ಲಿ ಎರಡು ಎಲವು ಟೊಂಕಿಗಿ ಜೋಡಶ್ಯಾನಾ ।

ಕೂಡಪಲ್ಲ ಶರೀರದಲ್ಲಿ ಏಕಾಂತ ಯಂತ್ರ ಇಟ್ಟ ಇಟ್ಟಿದ್ದಾ ಭಗವಂತಾ ।
ರುಂಡ ದಡಾ ಮುಂಡಾ ಅಬುವದು ಮೂರು ಪುರಾಣ ।
ನಾನು ಸುಳ್ಳ ಅಂದ್ರೆ ಓದಿ ನೋಡ್ರಿ ಶಾಸ್ತ್ರ ಪುರಾಣಾ ॥ ॥ ಗೀ ಚೌ ೨ ॥

ಹಿಂಬಡದಲ್ಲಿ ಏಳು ಎಲವು ಅಂಗಾಲಿನಲ್ಲಿ ಹದಿನಾಲ್ಕು ಎಲುವು
ಇದರಂತೆ ಮತ್ತೊಂದು ಕಾಲೀನ ತಿಳಿಯ ಕೂನಾ ।
ಇದರಂತೆ ಬಾಯಿಯಲ್ಲಿ ಮೂವತ್ತೆರಡು ಎಲವು ಬೆಳಸ್ಯಾನಾ ।
ಮೇಲೆ ತೆಳಗ ಒಂದು ಎಲುವಿನ ಮುಖಾ ತಯ್ಯಾರ ಮಾಡ್ಯಾನಾ ।
ಒಂದೇ ಎಲುವಾ ಶರೀರದಲ್ಲಿ ಪರಮಾತ್ಮನು ಇಟ್ಟಿದ್ದರಲ್ಲಿ
ಕೂಡೂದಕ ಏಳೂದಕ ಬರತಿರಲಿಲ್ಲಾ ತಿಳಿಯ ಹೆಣ್ಣಾ ।
ಅದಕೆ ಬ್ಯಾರೆ ಬ್ಯಾರೆ ಎಲವ ಮಾಡಿ ಸಂದ ಇಟ್ಟಾನಾ ॥ ॥ ಗೀಗೀ ॥

ಬರೇ ಖಂಡ ಇದ್ದರೆ ನಿನಗೆ ಶಕ್ತಿ ಬರತ್ತಿದ್ದಿಲ್ಲ
ನಿನಗೆ ಸ್ನಾಯು ಎಂಬ ಹಗ್ಗ ಮಾಡಿ ಒಳಗ ಇಟ್ಟಾನಾ ।
ನಮ್ಮ ಎಲವಿನ ಸಂದ ಬಿಟ್ಟು ಎಲ್ಲಾ ಸುರಳಿ ಸುತ್ಯಾನಾ ।
ಆಲದ ಬೇರಿಂದ ಉದ್ದಾರಾದಂಗ ಆಧಿಶೇಷನ್ನಾ ।
ಎಲ್ಲಾ ಸ್ನಾಯು ಜೋಡಿ ಮಾಡಿ ದೇವರಕಟ್ಟಿ ನೋಡಿ
ಎಪ್ಪತ್ತೆರಡು ಸಾವಿರ ಗಜಾ ಉದ್ದ ಇಟ್ಟಾನಾ ।
ಹೀಂಗ ಆರೋಗ್ಯ ಶಾಸ್ತ್ರ ಓದಿ ನೋಡು ತಿಳಿಯುದು ರಮಣಾ ॥ ಗೀ ॥

ಮತ್ತೊಂದು ಮಾತವಿನ್ನ ಚಿತ್ತವಿಟ್ಟು ಕೇಳಿರೆಣ್ಣಾ ।
ಎರಡು ಪುಪ್ಪಸಗಳು ಜೊಂತ ಬಿಟ್ಟಾನಾ ।
ಅದರೊಳ ಸಣ್ಣ ಕರಳು ದೊಡ್ಡ ಕರಳು ಹನ್ನೆರಡು ಇಟ್ಟಾನಾ
ಈ ದೇಹ ನಡಿಸುವ ಆತ್ಮನನ್ನು ಬ್ಯಾರೆ ನಿಲ್ಲಸ್ಯಾನಾ ।
ಜ್ಞಾನದಿಂದ ರಕ್ತವು ಆಗುವುದು, ರಕ್ತದಿಂದ ಬಂದಿ ಆಗ
ಇದೇ ಶೋಧ ಮಾಡಿ ಹೌದ ಹೌದ ಅಂದ್ರು ಎಲ್ಲಾ ಜನಾ ॥ ಗೀಗೀ ॥

ದುಮಾಲಿ ಪರಮಾತ್ಮನ ಆಟ ತಿಳದಿಲ್ಲಾ । ಶರೀರದ ಕೀಲಾ ।
ಮಾಡೀದ ಕೇವಲಾ । ನಮಗ ತಿಳದಿಲ್ಲಾ ।
ತಿಳಿಲಾರೆ ತಿಂದಂಗ ಬೆಲ್ಲಾ ॥ ॥ ಗೀಗೀ ॥

ಹಾಡೂದಕ ನಿಂತಾರ ಎಲ್ಲಾ । ದೇಹದ ಶೋಧ ಇಲ್ಲಾ ।
ಮಾಡತಾರ ಡೌಲಾ । ಕೇಳಿದರ ತತ್ಕಾಲಾ ।
ಬಡಕೋಂತಾರ ತಮ್ಮ ಗಲ್ಲ ಗಲ್ಲಾ ॥ ॥ ಗೀಗೀ ॥

ಏರು ಕೂಸ ಹಣಮಂತ ಬಂದು ಸಭಾಕ್ಕೆ ದಾಸನಾಗಿ ಕೇಳಿದಾನು
ಆಸೂರಿಗೆ ತಿಳಿಯುವಂತೆ ದೇಹದ ಪುರಾಣಾ ।
ಹೀಂಗ ತೋಡಿಗಿ ತೋಡ ಹಾಡಬೇಕು ಜನಾ ।
ಖುದ್ದ ಚಡಚಣ ಗ್ರಾಮ ದಾವಲ ಮಲೀಕನ ದಯಪೂರ್ಣಾ ।

ಕೂಡಪಲ್ಲ ಶರೀರದಲ್ಲಿ ಏಕಾಂತ ಯಂತ್ರ ಇಟ್ಟ ಇಟ್ಟಿದ್ದಾ ಭಗವಂತಾ ।
ರುಂಡ ದಡಾ ಮುಂಡ । ತಿಂಬುವದು ಮೂರು ಪುರಾಣ ।
ನಾನು ಸುಳ್ಳ ಅಂದ್ರೆ ಓದಿ ನೋಡ್ರಿ ಶಾಸ್ತ್ರ ಪುರಾಣ ॥ ॥ ಗೀಗೀ ॥

॥ ಚೌಕ ೩ ॥

ಭಗೀರಥ

ಬಾಂಧವರೇs ಎಲ್ಲಾರು ಬಂದು ತಾವು ಕುಂತೀರಿ–
–ಭಗನಿಯರಿಗೆ ಮಾಡುವೆ ವಂದನಾ ।
ತಪ್ಪಾದರ ಎತ್ತಿ ಕೊಳ್ಳರಿ ಕಂದನಾ ।
ನಿಂದಾ ತಗಿ ಬ್ಯಾಡರಿ ಗುರು ಅಂದಾನಾ ।
ಚಂದದಿಂದ ಇನ್ನs ಚೊಕ್ಕಾsಗಿ ಹೇಳತೆನು ಹಿಂದಿಂದ ಕೇಳರಿ ಕತನಾ ॥ ಗೀ ॥

ನಮ್ಮ ದೇಶದೊಳಗ ಭಗೀರಥ ಅರಸ ಇದ್ದಾ–
–ಸಗರ ಎಂಬೊ ಅವನ ವರಣನ್ನಾ ।
ಗಂಗೀನ್ನ ಒಲಿಸಿದಾ ಶರಣನ್ನಾ ।
ಮೆಚ್ಚಿ ಬೆನ್ನ ಹತ್ಯಾಳೊ ಆತನ್ನಾ ।
ಅವರ ಹೊಟ್ಟಿಲೆ ಆರಸಾವಿರ ಆಗಿ ಇದ್ದು ಪುತ್ರ ಸಂತಾನಾ ॥ ॥ ಗೀಗೀ ॥

ಕಪಿಲ ಋಷಿಯು ಶಾಪಕೊಟ್ಟರೆ ಸುಟ್ಟು ಹೋಗುವರು ಇತ್ತರಿ ಅನ್ಮಾನಾ ।
ಅವನ ಜೋಡಿ ಯಾರ‍್ಯಾರು ಇಲ್ಲಾ ಸಮಾನಾ ।
ಅವಾ ರಾಜ್ಯನ ಬಲ್ಲಿ ಹೋದ ಒಂದು ದಿನಾ ।
ಮುನಿ ಬಂದಾನೆಂದು ಮಾನಕೊಡಲಿಲ್ಲ ಏನ ಹೇಳಲೆಣ್ಣಾ ಕೀರ್ತನಾ ॥
॥ ಗೀಗೀ ॥

ದುಮಾಲಿ ಶಾಪ ಕೊಟ್ಟ ಮೇಲೆ ಸುಟ್ಟು ಬೂದಿ ಆದರು ಎಲ್ಲಾರು ।
ಅವರ ಮೇಲೆ ಮುನಿದಾ ಈಶ್ವರಾ ॥ ॥ ಗೀಗೀ ॥

ಮಕ್ಕಳ ಸಲುವಾಗಿ ದುಃಖ ನಡಶ್ಯಾರ ಅನಿವಾರ‍್ಯ ।
ಇದ್ದು ಇರಲಾರದಂಗ ಎಲ್ಲಾರಾ ॥ ॥ ಗೀಗೀ ॥

ಏರು ರಾಜ್ಯಧಿ ರಾಜರು ಕೂಡಿಕುಂತಾರು ಏನ ಮಾಡಬೇಕು ಯೋಚನಾ ।
ಇಷ್ಟು ಕೇಳಿ ಇಳದ ಬಂದಾ ಭಗವಾನಾ ।
ಏನ ನಡಿಸಿದಿ ಬಗಿರಥಿ ಕಲ್ಪಣಾ ॥
ಕೂಡಪಲ್ಲ ಚಂದದಿಂದ ಇನ್ನ ಚೊಕ್ಕಾಗಿ ಹೇಳತೇನು ಹಿಂದಿಂದ ಕೇಳರಿ ಕತನಾ ॥
॥ ಗೀಗೀ ॥ ಚೌಕ ೧ ॥

ಮಹಾದೇವನ ಮಾತಕೇಳಿ ರಾಜಾ ಅಂತಾನ ಏನ ಹೇಳಲಿ ಸ್ವಾಮಿ ವಿಸ್ತಾರ ।
ಹಿಂದಿಂದೆಲ್ಲಾ ಹೇಳಿದಾ ತಾ ಕತಿಸಾರಾ ।
ಇಷ್ಟು ಹೇಳಿ ದುಃಖ ನಡೀತು ಅನೆವ್ಯಾವಾ ।
ಮಹಾದೇವ ಹೇಳತಾನ ಮಾತ ಕೇಳು ಬಂದು ಮಾಡ ಹೋಗೋ
ನೀ ತಪೇ ॥ ಗೀಗೀ ॥

ಇಷ್ಟು ಕೇಳಿ ರಾಜಾ ಹಿಮಾಲಯ ಪರ್ವತಕ್ಕೆ ಹೊಂಟಿದಾನೊ
ಮಾಡಿ ಅವಸರಾ ।
ಅಲ್ಲಿ ಯಾರ‍್ಯಾರದು ಸಿಗಲಿಲ್ಲಾ ಆಸರಾ ।
ಏಕ ನಿಷ್ಟಿಲಿಂದ ಕುಂತಾ ತಪೇಶ್ವರಾ ।
ಸತ್ತ ಮಕ್ಕಳ ಬೂದಿ ಮೇಲೆ ಗಂಗಾನ ಹಾಯಿಸಿದರ ಅಲ್ಲಿಂದ
ಆಗೂದು ಉದ್ಧಾರ ॥ ॥ ಗೀಗೀ ॥

ಅರವತ್ತು ಸಾವಿರ ವರುಷ ತಪಶ್ವರ ಮಾಡೀದಾ ಮೆಚ್ಚಿ ಬಂದಾಳ
ಗಂಗಾ ಅವಸರಾ ।
ನೋಡಿ ಕೈಯ್ಯ ಮುಗಿದು ನಿಂತರು ರಾಜರಾ ।
ತಾಯಿ ಏನ ಹೇಳಲೇ ಮಜಕೂರಾ ।
ಸತ್ತ ಮಕ್ಕಳ ಬೂದಿ ಮೇಲೆ ನೀ ಹಾಯ್ದು ಹೋದರ ಮೋಕ್ಷ
ಸಿಗುವುದು ಹೀಂಗ ಅಂತ ॥ ॥ ಗೀಗೀ ॥

ದುಮಾಲಿ ಆಗ ಬರತೇನೆಂದು ವಚನ ಕೊಟ್ಟಿದಾಳು ಬಾಲಿ ।
ಹೊಂಟಾಳೊ ಅವನ ಸಂಗತೀಲಿ ॥ ॥ ಗೀಗೀ ॥

ಮೂರು ಲೋಕಗಳೆಲ್ಲಾ ನಡಗತಿತ್ತು ಹುಚ್ಚಪ್ಯಾಲಿ ।
ಜಾನ್ನವಿ ಋಷಿ ಕುಂತಿದಾ ದಾರಿಯಲ್ಲಿ ॥ ॥ ಗೀಗೀ ॥

ಏರು ಹಿಂದ ಹಾಕಿ ತಾ ಮುಂದ ಹೊಂಟಿsದಾ ಸಪ್ಪಳ ನಡದಿತ್ತು ಒಂದೇ ಸತಿ
ಜಾಹ್ನವಿ ಅಂತಾನ ಹಿಂಗ ಬರುದು ಏನ ಕಾರಣಾ ।
ಸಿಟ್ಟಿಗೇರಿ ನುಂಗಿ ಬಿಟ್ಟಾ ಗಂಗನ್ನಾ ।
ಕೂಡಪಲ್ಲ ಚಂದದಿಂದ ಇನ್ನ ಚೊಕ್ಕಾಗಿ ಹೇಳತೇನು ಹಿಂದಿಂದ ಕೇಳರಿ ಕತನಾ
॥ ಗೀ ಗೀ ಚೌಕ ೨ ॥

ಹಿಂದಕ್ಹೊಳ್ಳಿ ರಾಜಾ ನೋಡಿ ಅಂತಾನ ಘಾಬರಿ ಆಗ್ಯಾನ ಮನದಾಗ ।
ಬಿಟ್ಟ ಬಿಡರಿ ಗುರುವೆ ನಮ್ಮ ಗಂಗಾsಗ ।
ದುಃಖ ಮಾಡತಾನ ಗಂಗಾನ ಕಾಲಾಗ ।
ಆರಸಾವಿರ ವರ್ಷ ತಪಶ್ಚರ ಮಾಡ್ಡೀದ್ದು ಹಾನಿ ಆಗೂದು ಬಂತು
ಈಗ ನನಗ ॥
ಜಾಹ್ನವಿ ಅಂತಾನ ಸಪ್ಪಳ ಮಾಡದಿದ್ದರ ಬಿಟ್ಟಬಿಡತೇನು ನಿನ್ನ ಗಂಗಾಗ ।
ದುಃಖ ಮಾಡಬ್ಯಾಡೊ ರಾಜಾ ಮನದಾಗ ।
ಗಂಗಾ ಕುಂತಿದಾಳ ಮಂಗ್ಯಾನಂಗ ।
ಶೂರವಿದ್ದರೆ ತಾನೇ ಬರುದಿತ್ತು ಹೋಗಿ ಯಾಕ ಸಿಕ್ಕಾಳ ಅವನ
ಕೈಯ್ಯಾಗ ॥ ॥ ಗೀಗೀ ॥

ಅಲ್ಪವರೆದು ಬಹಳ ಬಾಯಿಯ ತೆರೆದು ಕೈಯ್ಯ ಮುಗಿತಾನ ಜಾಹ್ನುವಿಗ ।
ಸಪ್ಪಳ ಮಾಡಿಸಿ ಕೊಡುವುದಿಲ್ಲಾ ಅವಳೀಗ ।

ಜಾಹ್ನು ಕಬೂಲ ಆದ ನಿರ್ವಾ ಇಲ್ಲದಂಗ ।
ಹಂಗೆ ಬಿಟ್ಟರ ಹವ್ವ ಹಾರಿದಂಗ ಮತ್ತ ನಡಸ್ತಾಳ ಮದಲಿನಂಗ ॥
ಸಪ್ಪಳ ಮಾಡಬಾರದೆಂದು ಕಿವಿಯೊಳಗಿಂದ ಬಿಟ್ಟಿದಾ ಅವತಾರ
ಕಡಿಸಿ ಆಯ್ತು ಬಾಲೀಗ ।

ಸೊಕ್ಕ ಮುರದ ಬಿಟ್ಟಾ ಜಾಹ್ನ ಫಳಗ್ಯಾಗ ।
ಕೂದಲೆಳಿಯ ನಮೂನಿ ಹೊಂಟಾಳ ಹೊರಗ ।
ಕೊಟ್ಟ ವಚನ ರಾಜ್ಯಾ ಮುಟ್ಟಿಸಿ ಬರುವೆನು ಹೋಗಿ ಹಾಯ್ದಾಳ
ಬೂದಿಯ ಮ್ಯಾಲ ॥

ದುಮಾಲಿ ತಪಶ್ಚರ್ಯ ಮಾಡಿ ತಾ ತಂದ ಹಾಯ್ಸಿದಾ ಗಂಗೀಗ ।
ಮೋಕ್ಷ ಕೊಡಿಸೀದಾ ತನ್ನ ಮಕ್ಕಳಿಗ ॥ ॥ ಗೀಗೀ ೧ ॥

ಮೂರನೇ ಇಯತ್ತ ಪುಸ್ತಕದೊಳಗ ಬರದಾರ ಹೀಂಗ ।
ಓದಿಕೊಂಡಬಾರs ಸಾಲ್ಯಾಗ ॥ ॥ ಗೀಗೀ ೨ ॥

ದೇವಲೋಕದ ಗಂಗಾ ಮೆಚ್ಚಿ ಬಂದಳ ಅವನೀಗ ।
ಹೆಚ್ಯಾಂಗ ಅನಬೇಕು ಗಂಗಾಗ ॥ ॥ ಗೀಗೀ ೩ ॥

ಏರು ಕೂಸ ಹಣಮಂತಾ ಸೋಸಿ ಹೇಳಿದಾ ದೋಷಿಲ್ದೆ ಕೇಳರಿ ಬೆಳಗಾನಾ
ಕವಿ ಕಟ್ಟಲಿಕ್ಕೆ ಬೇಕು ಶ್ಯಾಣೇತಾನಾ ।
ಇವು ಏನ ಹಾಡತಾವ ಹೈವಾನಾ ।

ಕೂಡಪಲ್ಲ ಚಂದದಿಂದ ಇನ್ನ ಚೊಕ್ಕಾಗಿ ಹೇಳ್ತೇನು ಹಿಂದಿಂದ ಕೇಳರಿ ಕತನಾ ॥
॥ ಗೀಗೀ ॥ ಚೌಕ ೩ ॥

ಖ್ಯಾಲಿ

ಗಿಳಿಯ ಕಳಕೊಂಡೆ ಬಂಗಾಲೀ । ಮಳ್ಳ ಹೆಂಗಸ ಪ್ಯಾಲಿ ॥ ಗೀಗೀ ॥
ಗಿಳಿಯ ಸಾಕುದು ನೀ ಏನು ಬಲ್ಲಿ । ಆಕಾಶದೊಳಗ ಬಂದೀತ ಪ್ಯಾಲಿ ।
ಸಾಕುದು ಸಲವುದು ಬ್ರಹ್ಮನs ನೋಡs ಕೀಲಿ ॥ ॥ ಗೀಗೀ ॥

ಪಂಚತತ್ವ ಪಿಂಜರದೊಳಗ ಇರುವಂಥಾ ಗಿಳಿಯು ।
ಕಲ್ಲ ಮಡಿ ಮಲ್ಲಿಗೆ ಮಜ್ಜಿಲೆ ಹೊಡೆದ ಗಿಳಿಯುನಾ ॥ ॥ ಗೀಗೀ ॥

ಚಡಚಣ ಗ್ರಾಮದಲ್ಲಿ ಇರುವಂಥ ಗಿಳಿಯು ।
ನಾಲ್ಕು ಮಂದಿಯ ಶ್ರೇಷ್ಟಾದ ಗಿಳಿಯು ।
ದಾವಲ ಮಲೀಕನ ದಯದಿಂದ ಬಂದ ನಿಂತಿರುವ ಗಿಳಿಯು ॥ ಗೀಗೀ ॥

ಮಾನುವ ಜನ್ಮಕ ಯಾಕ ಬರತಿ

ಸಖಿ

ಹುಡುಗ ನಿನ್ನ ರೂಪ ಬೆಂಕಿ ಕಿಡಿ ।
ಮನದಾಗ ಮರಗತೇನು ನೋಡಿ ॥ ॥ ಗೀಗೀ ॥

ನಾವು ನೀವು ಎಂದ ಕುಂತೇವಿ ಕೂಡಿ ।
ಎಡಕ ಬಲಕ ಸಮಯ ಜೋಡಿ ॥ ॥ ಗೀಗೀ ॥

ಹುಡುಗ ತಾ ಸಾಮ ಶಕ್ತಿ ಮಾಡಿ ।
ನಡದೆ ನೀ ಲೋಡಪಟೆ ತಿರುವ್ಯಾಡಿ ॥ ॥ ಗೀಗೀ ॥

ಚಡಚಾಣದಲ್ಲಿ ಹಾಡೂದು ನೋಡಿ ।
ನಾಗಿ ಬಂದಿದಾಳೋ ಓಡಿ ॥ ॥ ಗೀಗೀ ॥

ಪದಾ

ಮಾಯದೊಳಗೆ ಬಿದ್ದ ನೀನು ಮರವಿನೊಳ ಸಿಲಕಬ್ಯಾಡ
ಅರು ಇಟ್ಟು ಗುರುವಿನ ಮ್ಯಾಲಿಡು ಭಕ್ತಿ ।
ಭಕ್ತಿ ಪೂರ್ಣ ಆದಮ್ಯಾಗೆ ಕೈಲಾಸದಾಗ ಒಯ್ದು ನಿನಗ
ಜನನ ಮರಣ ಇಲ್ಲದಂಗ ದೊರೆಯುದು ಮುಕ್ತಿ ।
ನೀನು ತಿರಿತಿರಿಗಿ ಮಾನವಜಲ್ಮಕ ಯಾಕ ಬರತಿ ॥ ॥ ಗೀಗೀ ॥

ಆಸು ಎಲ್ಲಾ ಮಾಡಿ ಸುಳ್ಳೆ ವೇಶ ಹಾಕೊಂಡು ತಿರಗಬ್ಯಾಡಾ
ಅಗಸರ ನಾಯಿಯಂತೆ ನೀವು ನಡುವೇ ಕುಂತಿ ।
ಘೋರ ಬಿಟ್ಟು ನೋಡ ರಿನಕ್ಕ ಇದ್ದಿ ನೀನು
ಯಾರ ತಂದು ಹಾಕ್ಯಾರ ನಿನಗ ಏಕಾಂತಿ ।
ಈ ಮೂರು ದಿನ ಬಿಟ್ಟು ಹೋಗುದು ಯಾತರದ ಚಿಂತಿ ॥ ಗೀಗೀ ॥

ನೀ ಮಾಡಿದ ಕರ್ಮಕ್ಕಾಗಿ ನೀ ಹುಟ್ಟಿ ಬಂದಿದಿ ಇಲ್ಲಿ
ಬ್ರಹ್ಮ ಬರದಾನಂತ ಬಿಡ ವೈತಿ ಭ್ರಾಂತಿ ।
ಮಾಡಲಾರದೆ ಮುಕ್ತಿ ನಿನಗ ಬೇಡಿದರ ಹ್ಯಾಂಗ ಸಿಕ್ಕಿತವ್ವಾ
ದುಡಿಲಾರದೆ ಕುಂತಾರ ಇದಕೇನಂತಿ ।
ನಿನ್ನ ಸಡಗರ ಸಂಪತ್ತನಾಗಿ ಹೋಗು ಇದೇ ಸಂತಿ ॥ ॥ ಗೀಗೀ ॥

ದುಮಾಲಿ ಇರುತನಕ ಮಾಡಿಲ್ಲ ಧಾನ ಧರ್ಮ ।
ಸತ್ತಂಗ ಇರಲಿಲ್ಲಾ ಸುಮ್ಮಾ ।
ಮಾತಾಡತಿದ್ದ ಧಮ್ಮಾ ।
ಜೀವಾ ಇರುತನಕ । ಖಾತ್ರಿ ಮಾಡಿಕೊಳ ನಿನ್ನ ಮನಕ ॥ ಗೀಗೀ ॥

ಏರು ಕಾಲಜಾರಿ ಇಲ್ಲೇ ಬಿದ್ದಿ ಮ್ಯಾಲ ಹೋಗುದು ಹಂಚಿಕಿ ಹ್ಯಾಂಗ
ಮನಸ್ಸಿನೊಳಗ ಮದಲೇ ನೀನು ತಗಿಯುಕ್ತಿ ।

ಕೂಡಪಲ್ಲ ಭಕ್ತಿಪೂರ್ಣ ಆದಮ್ಯಾಗ ಕೈಲಾಸದಾಗ ಒಯ್ದು ನಿನಗ
ಜನನ ಮರಣ ಇಲ್ಲದಂಗ ದೊರೆಯುದು ಮುಕ್ತಿ ।
ನೀನು ತಿರಿಗಿ ಮಾನು ಜಲ್ಮಕ ಯಾಕ ಬರತಿ ॥ ॥ ಗೀಗೀ ॥ ಚೌಕ ೧ ॥

ಸರ್ವರೊಳು ಸಾಕ್ಷಾತ ಶಿವಾ ತಾನು ಇರಲಾಕ್ಕಾಗಿ
ಪೂಜಿಸಿನಂತಿ ಹೋಗಿ ಧರುಣಿ ಕಲ್ಲಿಗಿ ।
ಸಾವುತನಕ ಅದ್ರ ಇಕಿ ಭಾವ ಭಕ್ತಿ ಸುದ್ದ ಇಲ್ಲಾ
ಚೌಬಂದಾನ ದಾಟಿ ಇನ್ನು ಹೋಗುದು ಎಲ್ಲಿಗಿ ।
ಎಷ್ಟ ತಿಳಿಸಿ ಹೇಳಲೆಪ್ಪಾ ಇಂಥಾ ಹುಚ್ಚ ಮಲ್ಲಿಗಿ ॥ ॥ ಗೀಗೀ ॥
ಮದಲ ತಾನು ಬ್ರಹ್ಮನಾಗಿ ಬ್ರಹ್ಮಾಂಡ ಶೋಧ ಮಾಡಿದರೆ
ಬ್ರಹ್ಮ ಸ್ವರೂಪ ಕಾಣತೈತಿ ಎಲ್ಲಾ ಕಣ್ಣಿಗಿ ।
ಬಾಯಿಲೆ ನಾನು ಬ್ರಹ್ಮನಾಗಿ ಬ್ರಹ್ಮಾಂಡ ಶೋಧ ಮಾಡಿದರೆ
ಬ್ರಹ್ಮ ಸ್ವರೂಪ ಕಾಣತೈತಿ ಎಲ್ಲಾ ಕಣ್ಣಿಗಿ ।
ಸುಳ್ಳೆ ಎಚ್ಚರ ತಪ್ಪಿ ಹುಚ್ಚ ಆದ್ರು ಉಚ್ಚಿ ಡೊಣ್ಣಿಗಿ ॥ ॥ ಗೀಗೀ ॥
ಸಂಸಾರ ಮಾಡಂವಗ ಸತಿ ಬೇಕು ಸುಖಾ ಬೇಡಾಂವಗ ಶಕ್ತಿಬೇಕು
ಇರುತನಕ ತುಂಬುದು ಐತಿ ನಾವು ಬಾಡಗಿ ।
ಸುಖಾ ದುಖಾ ಶಿವನೇ ಎಂದು ಸಂಸಾರ ತ್ಯಾಗ ಮಾಡಿದಂವಗ
ಯಾರೂ ಬೇಕಾಗಿಲ್ಲಂದ ತನ್ನ ಜೋಡಿಗಿ ।
ಅವಾ ಯಾಕ ಕರಕೊಂಡು ತಿರಗ್ಯಾನಪ್ಪಾ ಹಿಂತಾ ಖೋಡಿಗಿ ॥ ಗೀಗೀ ॥

ದುಮಾಲಿ ಪಾರಮಾರ್ಥಕ್ಕಾಗಿ ನೀ ದುಡಿ ।
ದೇಹ ಮಾಡ ಪುಡಿ ।
ದುಡಿದಷ್ಟೇ ಪಡಿ । ನಿನ್ನ ಬಗಲಾಗ ।
ಎಡಿ ಮಾಡಿ ಉಣ್ಣ ಅಗಲಾಗ ॥ ॥ ಗೀಗೀ ॥

ದುಡಿಲಾರದಕ್ಕಾಗಿ ಮಾನಗೇಡಿ ।
ಬಂದಿಲ್ಲೆಂತಿ ಬೇಡಿ ।
ಏನ ಬೇಡತೆ ಖೋಡಿ ।
ಖಾಲೇ ಮುಗಲಾಗ ।
ಇಲ್ಲಿ ಶೋಧ ಮಾಡತೊಗಲಾಗ ॥ ॥ ಗೀಗೀ ॥

ಏರು ತಗಲ ಹೇಳುವ ತೊಗಲ ಇದು ತಗದೇ ಒಗಿ
ಭುಗಲ್ಯಾಕ ಹಗಲು ರಾತ್ರಿ ಒಂದೇ ಎಂದು ಇಡು ಭಕ್ತಿ ।
ಕೂಡಪಲ್ಲ ಭಕ್ತಿಪೂರ್ಣ ಆದ ಮ್ಯಾಗ ಕೈಲಾಸದಾಗ ಒಯ್ದು ನಿನಗ
ಜನನ ಮರಣ ಇಲ್ಲದಂಗ ದೊರೆಯುದು ಮುಕ್ತಿ ।
ನೀನು ತಿರಿಗಿ ತಿರಿಗಿ ಮಾನು ಜಲ್ಮಕ ಯಾರ ಬರತಿ ॥ ॥ ಗೀಗೀ ॥
॥ ಚೌಕ ೨ ॥

ಆಕಾರಾಗುದಕ್ಕಿಂತ ಮದಲೇ ನಿರಂಕಾರ ______ ಇತ್ತು
ಆಲದೆಲಿ ಮ್ಯಾಲ ಆದಿನಾರಾಯನಾ ಅದೇ ವ್ಯಾಳಕ್ಕ
ಹೇಸಿ ನಿನಗೇನ ಗೊತ್ತ ಕಾಸಿ ಕಾಂಡ ಓದಿ ಹೊಗಿತ್ತು
ಗಿಡದ ಬೇರ ಇಳದವಪ್ಪಾ ಸಪ್ತ ಪಾತಾಳಕ ।
ಅಲ್ಲಿ ಆದಿಕೇಶ ಸುರು ಜೋಡದಾನ ಆಧಾರಾಗುದಕ ॥ ಗೀಗೀ ॥
ದುಮಾಲಿ ನಿನಗ ತಿಳಿಸಿ ಹೇಳತೀನಿ ನಿಜವಾಗಿ ।
ಆಶಾ ಅಂಬುದು ತಗಿ । ಮಾಡಲಗುಬಗಿ ।
ಹೋಗತೈತಿ ಹೊತ್ತ । ಸನಿಬಂತ ನಿನ್ನ ಮುದ್ದತ್ತಾ ॥ ಗೀಗೀ ॥
ಎಮನರು ನಿಂತಾರ ದಾರೀಗಿ ।
ಹೇಳತಿ ಯಾರೀಗಿ । ನೆನಿಯ ಗುರುವಿಗಿ ।
ನೋಡಬ್ಯಾಡ ಮತ್ತಾ । ಕಣ್ಣಿ ಈಶಾನ್ಯ ಮ್ಯಾಗ ಇಡು ಚಿತ್ತಾ ॥ ಗೀಗೀ ॥
ಏರು ಕೂಸು ಕಲ್ಲಣ್ಣ ಹೇಳುದ ಕವಿಯು ದ್ಯಾಸವಿಟ್ಟು ಕೇಳಿರೆಣ್ಣಾ
ತ್ರಾಸ ಇಲ್ದೆ ಈಶಾನ ಮ್ಯಾಗ ಇಡು ಭಕ್ತಿ ।
ಕೂಡಪಲ್ಲ ಭಕ್ತಿಪೂರ್ಣ ಆದ ಮ್ಯಾಗ ಕೈಲಾಸದಾಗ ಒಯ್ದು ನಿನಗ
ಜನನ ಮರಣ ಇಲ್ಲದಂಗ ದೊರೆಯುದು ಮುಕ್ತಿ ।
ನೀನು ತಿರಿಗಿ ತಿರಿಗಿ ಮಾನ ಜನ್ಮಕ ಯಾಕ ಬರತಿ ॥ ॥ ಗೀಗೀ ॥
॥ ಚೌಕ ೩ ॥

ಸಖಿ

ಸಭಾದಾಗ ನಿಂತ ಹೇಳುವೆ ಬಾಲಾ ।
ವರವ ಆಗರಿ ಗೋಪಾಲಾ ॥ ॥ ಗೀಗೀ ॥
ನಾ ಏನು ದೊಡ್ಡ ಹಾಡುವನಲ್ಲಾ ।
ನೀವು ಮಾಡಬ್ಯಾಡ್ರಿ ಗಲ್ಬಾಲಾ ॥ ॥ ಗೀಗೀ ॥
ಡಪ್ಪ ಬಡಿದು ಮಾಡತಾಳು ಡೌಲಾ ।
ಇನ್ನ ಕುಣಿಸುವೆನಾ ಬಾಲಾ ॥ ॥ ಗೀಗೀ ॥
ಚಡ ಚಣ ಊರ್ಯೆತಿ ರಂಗಲಾಲಾ ।
ದಾವಲ ಮಲೀಕನ ದಯಾ ನಮ್ಮ ಮ್ಯಾಲಾ ॥ ॥ ಗೀಗೀ ॥

ಪದಾ

ಮಾನು ಮಂದಿದು ಮಾತ ಕೇಳಿರಿ ತಮದುತಮಗ ತಿಳಿಯುದಿಲ್ಲಾ ।
ಕಲ್ಲದೇವರ ಮುಂದ ಕೈ ಮುಗದರ ನಿಮ್ಮ ಗೂಡಾ ಮಾತಾಡುದಿಲ್ಲಾ॥
॥ ಗೀಗೀ ॥

ಕಾಶೀ ರಾಮೇಶ್ವರಕ ಹೋದೇನಂತೀರಿ ಹೇಸಿ ಗುಣಾ ನಿಮದು ನೀಗಿಲ್ಲಾ।
ಹೆಣ್ಣ ರಂಡೆರ ಮಾತ ಕೇಳಿ ನೀವು ತಾಯಿ ತಂದೀಗಿ ಸೇರುವದಿಲ್ಲಾ ॥ ಗೀಗೀ ॥

ದುಮಾಲಿ ಪಂಡರ ಪೂರಕ ಹೊಂಟ್ರು ಆ ಮ್ಯಾಲಾ ।
ಕೂಸೊಂದು ಇತ್ತು ಹಿಂಬಾಲಾ ॥ ॥ ಗೀಗೀ ॥

ಗಂಡ ಹೆಂಡತಿ ಎತ್ತಿನ ಮ್ಯಾಲಾ ।
ತಾಯಿ ತಂದಿ ನಡದರು ಬರಗಾಲಾ ॥ ॥ ಗೀಗೀ ॥

ಏರು ಮತ್ತು ಏಕಾದಶಿ ಮಾಡೇನಂತಿರಿ ಅನ್ನಿನ ಮ್ಯಾಲ ನಿಮ್ಮ ಹಂಬಲಾ ।
ಕೂಡಪಲ್ಲ ಮಾನು ಮಂದಿದು ಮಾತ ಕೇಳರಿ ತಮದು ತಮಗ ತಿಳಿಯುದಿಲ್ಲಾ॥
॥ ಗೀಗೀ ॥ ಚೌಕ ೧ ॥

ಬ್ರಾಹ್ಮಣರ ಮಂದಿದು ರೀತಿ ಕೇಳಿರಿ ಸ್ನಾನ ಮಾಡತಾರು ನೀರಾಗ।
ಜೈನರು ಮೋಸಗಾರು ಹೌಸ ಹಾಕತಾರ ಎದ್ದ ಅವರು ಸರವತನ್ಯಾಗ॥
॥ ಗೀಗೀ ॥

ಸಿಂಪಗ್ಯಾರು ಸೂಳ್ಯಾರು ಹೊಲೆಯರು ಮಾದರು ಮಾಡಬ್ಯಾಡ
ತಾರತಮ್ಮ ಹಿರಿಯರ ಹೆಸರಮ್ಯಾಗ ।
ಕಾಗಿನ ಕರದು ಅನ್ನ ಹಾಕತಾರ ಹಿರ್‍ಯಾರು ಕೂಡ್ಯಾರು ಉಪನಯನಕ್ಕಾಗಿ।
ಅಡವಿ ಚೆಂಚ್ಯಾರು ಸಿಕ್ಕಲಗ್ಯಾರು ಜಾತಗಾರು ಲಮಾಣಗ್ಯಾರ ಎಮ್ಮಿ
ಬೋಳಸ್ತಾರ ನಾಡಮ್ಯಾಗ ॥ ॥ ಗೀಗೀ ॥

ದುಮಾಲಿ ಮತ್ಯಾರ ಮನಿಗಿ ನೀ ಹೋದಿ ।
ಕಂಚಿನ ಮುಖಾ ಒಂದು ತಂದಿ॥ ॥ ಗೀಗೀ ॥

ತರತರದು ಅಡಗಿ ಮಾಡೇವಂತಿ ।
ಸುಳ್ಳೇ ಹೇಳತಿ ದೇವರ ಸಿಮಾ ಇಂತಿ

ಏರು ಕುರಬ ಸತ್ತರ ಬೀರ ಆಗತಾನ ಮುಸಲ್ಮಾನ ಸತ್ತರ ಪೀರ ಆಗತಾನ
ಕರೇ ಹೇಳು ಇದು ಸುಳ್ಳಲ್ಲಾ
ಕೂಡಪಲ್ಲ ಕಲ್ಲ ದೇವರ ಮುಂದ ಕೈಮುಗದರ ನಿಮ್ಮ ಗುಡಾ ಮಾತಾಡುದಿಲ್ಲಾ॥
॥ ಗೀಗೀ ॥ ಚೌಕ ೨ ॥

ಮುತ್ತ ಕಟ್ಟಿನೀ ಜೋಗತಿ ಆದಿ ಸತ್ಯುಳ್ಳ ಎಲ್ಲವ ಹಾಳಂತಿ ।
ಮಗಾ ಪರಸರಾಮ ಗಂಡಾಗ್ಯಾನಂತಿ ಯಾವ ಶಾಸ್ತ್ರದಲ್ಲಿ ಬರದೈತಿ॥
॥ ಗೀಗೀ ॥

ತಾಟ ಬೀಟ ಒಳೇ ಘಾಟ ಆಗಿ ನೀ ಎಲ್ಲಮ್ಮನ ಜಾತ್ರಿಗಿ ಹೋದೇನಂತಿ।
ವೇದ ಭೇದ ನಿನಗ ಎರಡು ತಿಳಿಯದೆ ಗಂಡಿಬಿಟ್ಟು ಗಂಡಾಗಿರತಿ ।
ಆರಂಬಿ ಬಿಟ್ಟ ನೀನು ಪಾರಂಬಿ ಅದೇನಂದ್ರ ಹ್ಯಾಂಗ ದೊರದೀತ
ನಿನಗ ಗುರು ಮುಕ್ತಿ॥ ॥ ಗೀಗೀ ॥

ದುಮಾಲಿ ಎಷ್ಟಂತ ಹೇಳಲಿ ಇಕೀಗಿ ।
ಹೇಳಿದ್ರ ತಿಳಿಯುವಲ್ಲದು ನಾಗೀಗಿ ॥ ॥ ಗೀಗೀ ॥

ಹುಡಕೂತ ಬಂದಿದಾಳು ನಾಗಿ ।
ಮುರಕೊಂಡು ಹೋಗತಾಳ ಕಲಿಗಿ ॥ ॥ ಗೀಗೀ ॥

ಏರು ಮೋಕ್ಷ ಪ್ರಾಣಕ ತೇರದಾಳ ಊರು ಜಾಗ ಐತಿ ಭರತಿ
ಮನದಂತೆ ಕವಿ ಮಾಡಿ ನಾಡ ಎಲ್ಲಾ ಸಾರತಾನ ತುಕಾರಾಮನ
ಅಕ್ಕರತಿ ॥

ಕೂಡಪಲ್ಲ ಕಲ್ಲ ದೇವರ ಮುಂದ ಕೈ ಮುರದರ ನಿಮ್ಮ ಗುಡಾ ಮಾತಾಡುದಿಲ್ಲಾ॥
॥ ಗೀಗೀ ॥ ಚೌಕ ೩ ॥

ಖ್ಯಾಲಿ

ತಿಳಿಸಿ ಹೇಳವನ ಸಂಗತಿ ಕಟ್ಟಿ ತಿಳಕೋ ಬಾರದೇ ।
ಮೈಲಿಗಿ ತೊಳಕೊ ಬಾರದೇ ।
ತೊಳಕೊಂಡು ಉಳಕೋ ಬಾರದೆ ॥ ॥ ಗೀಗೀ ॥

ಮನಸ್ಸಿನ ಮಡಿ ಉಟ್ಟು ಆಗ ನಿಸ್ಸಂಗ ।
ಕನಸಿನ ಯಸನವು ಬಡಿಯಲಿ ಗುಂಗ ।
ಯಸನ ಇಟ್ಟು ಮನಸ್ಸ ಹಸನವು ಇಟ್ಟು
ತಾಸಿನ ಕೆಲಸಕ ಆಗಬ್ಯಾಡ ಮಂಗ ॥ ತಿಳಿಸಿ ॥ ॥ ಗೀಗೀ ॥

ನಿನ್ನಲ್ಲಿ ನಿಜರೂಪಾ ಮಾಡಬ್ಯಾಡ ಸೋಂಗ ।
ನನ್ನಲ್ಲಿ ನಿಜರೂಪ ಆಗಿನ ಸಂಗ ।
ಗಳಿಗಿ ಕೆಲಸಿಗಿ ಮ್ಯಾಳಗಿ ಏರಿ ಓಡಿಬಂದ ಡೊಗ್ಗ ॥ ತಿಳಿಸಿ ॥ ॥ ಗೀಗೀ ॥

ಇಂಡಿ ತಾಲೂಕ ಪೈಕಿ ಚಡಚಣದಾಗ ।
ಖುದ್ದ ಇರುದು ಅದು ನಮ್ಮ ಜಾಗ ।
ದಾವಲ ಮಲೀಕನ ಪೌಳಿಯ ಒಳಗ ।
ಕಂದ ಕಲ್ಲಣ್ಣಾ ಹೇಳಿದ ನಿನಗ ॥ ತಿಳಿಸಿ ॥ ॥ ಗೀಗೀ ॥

ಖ್ಯಾಲಿ

ಅರುವೆಂಬ ಅರವಿ ನಾನು ವಗದೆ ।
ಮರುವೆಂಬ ಕಿಲ್ಮಿಶೆ ಎಲ್ಲಾ ತಗದೆ ॥ ॥ ಜೀಜೀ ॥

ತ್ರಿವೇಣ ಸಂಗಮದಲ್ಲಿ ಸ್ನಾನ ಮಾಡಿದೆ ।
ಗುರುಲಿಂಗ ಜಂಗಮ ನಿರಂಜನ ನೋಡದೆ ।
ದುರಿತದೋಷಂಗಳೆಲ್ಲಾ ದೂರ ಮಾಡಿದೆ ॥ ॥ ಜೀಜೀ ॥

ಶರೀರವೆಂಬ ಸೀರಿ ಉಟ್ಟು ಮೆರದೆ ।
ಚೌರ್‍ಯಾಂಶಿ ಬಟ್ಟ ತೊಟ್ಟು ಹರದೆ ।
ಮುಕ್ತಿಯೆಂಬ ಮುಕಾಂಗಿನ ಕರದೆ ।
ಭಕ್ತಿಯೆಂಬ ಬಾಕಿಲ ಬೀಗ ತೆರದೆ ॥ ॥ ಜೀಜೀ ॥

ವನ್ನೆನಂಬರ ಪಿತಾಂಬರ ಕೊಂಡಿದೆ ।
ಡಂಬಾಚಾರ ಕುಪ್ಪಸ ಕುಸಿದು ಹಿಂಡಿದೆ ।
ಅಂಬರಕೇಶನ ಸಂಭ್ರಮ ಸುಳು ಕಂಡಿದೆ ।
ಅಮರಾಗಿ ಉಳಿದು ಅಂಬ್ರುತುಂಡಿದೆ ॥ ॥ ಜೀಜೀ ॥

ಇಂಗಳೇಶ್ವರ ಈಶ್ಯಾನ ಅಂಗಳ ಬಳದೆ ।
ಸಿಕಂದರ ಬಾದಶಾನ ಪಾದ । ಮಡಿಲೆ ತೊಳದೆ ।
ಜನನ ಮರಣಗಳು ಜಗದೊಳು ಕಳದೆ ।
ಕಾಸೀಮ ಲಾಲಸಾನ ಕವಿ ಹಾಡಿ ಬೆಳದೆ ॥ ॥ ಜೀಜೀ ॥

ಪದಾ

ನುಡಿಸುವೆನೊ ವಾಧ್ಯೆ ನಮಸ್ಕಾರ ।

ಸಖಿ

ಜೋಜೋ ಜೋಜೋ ಬಸವೇಶಾ ।
ನಿರಾಕಾರದೊಳು ನಿಜವಸ್ತುಗಾದಿ ನಂದೇಶಾ ॥ ॥ ಜೀಜೀ ॥ ೧ ॥

ಕೃತಾಯುಗ ತ್ರೈತಾಯುಗ ವ್ರತಸುರೇಖಾ ।
ದ್ವಾಪಾರ ಕಲಿಯುಗ ಕಡಿಯೆಂದು ತೋರಿದಿ ನಿನ್ನ ಕ್ಲೇಶಾ ॥ ಜೀ ೨ ॥

ವೀರಶೈವರಿಗಿ ಹಾದಿ ಹಿಡಿಸಿದ ಹರುಷಾ ।
ಘೋರ ಬಂಧನ ದೂರ ಮಾಡಿದಿ ನಾಶಾ ॥ ॥ ಜೀಜೀ ೩ ॥

ಮಾದಲಾಂಬಿಕಿ ಮಗನಾಗಿ ಬಂದಿ ಬಸವೇಶ್ಯಾ ।
ಭಾರತ ದೇಶಕ ಬೆಳಗಿದಿ ಜ್ಯೋತಿ ಪ್ರಕಾಶ್ಯಾ ॥ ॥ ಜೀಜೀ ೪ ॥

ಇಂಗಳೇಶ್ವರ ಬಾಗೇವಾಡಿ ಪಡವಿಗಿ ಲೇಶಾ ।
ಹಿಂಗ ಹಾಡಿ ಹಾಡಿ ಶರಣೆಯರು ಕರದರೊ ಬಸವೇಶಾ ॥
॥ ಜೀಜೀ ೫ ॥

ಪದಾ

ಜಗನ್ಮೋಹ ಶಿವಾ ಶಂಕರ ಕಳಿವೆ ಅಹಂಕಾರಾ । ಮಾಡುವೆ
ಕಿಂಕರಾ ನಿಮಗನ ನಮಸ್ಕಾರ ॥ ॥ ಜೀಜೀ ॥ ಪಲ್ಲ ॥

ಗಜಮುಖ ಗಣಪತಿ ನಿನ್ನ ವಿದ್ಯೆ ಮಾಡು ಎನಗ ಸಾಧ್ಯ ।
ನುಡಿಸುವೆನು ವಾದ್ಯ ನಮಸ್ಕಾರ ॥ ॥ ಜೀಜೀ ॥

ಮಹಾದೇವಾ ಮಾಡಬೇಡ ಮರುವ ।
ನೀಡ ನಿನ್ನ ವರುವಕೊಡು ಈಗ ಅರುವ ।
ಮುಗುವೆ ನಾ ಕರವಾ । ಕಳಿಯೋ ನನ್ನ ಗರುವ
ನಿನ್ನ ಹೊರ್ತಿಲ್ಲ ನಿರವಸಾಂಬ ನಿನ್ನ ನೆರವು ನನಗಾಧಾರಾ ।
ಲಿಂಗಾಂಗದಲ್ಲಿ ವಾಂಗಲಾಂಗ ಕೂಡಲಸಂಗ ಅಡಗಿದಲೇ ಗಂಗಾ ।
ಆದಿ ನಿರಾಕಾರಾ ನೆಂಬಿದಂವಗ ಕರುಣ ಅಮೃತ ಕುಡಿಸು
ಅಜ್ಞಾನವೆಂಬ ದೆಪ್ಪಿಗಿ ಬಿಡಿಸೊ ।
ಕತ್ತಲೆ ಹೊಡಿದೋಡಿಸು ಮಾಡುವೆ ನಮಸ್ಕಾರ ॥ ಜೀಜೀ ॥

ತೆತ್ತೀಸ ಕೋಟಿ ದೇವತ್ಯಾರಗಿ ಶ್ರೇಷ್ಠ ನಡಿಸವರಿಗ
ಗುರು ಹಿರಿಯರಿಗೆ ಮತ್ತ ಶನಿಯ ರಾಯರಿಗ
ಬರುವ ವಿಘ್ನಗಳಿಗ ಭೂದೇವಿ ಬಸವಿಗಿ ನನ್ನ ನಮಸ್ಕಾರ
ವೈಶ್ಯ ವೃಷ್ಣವ ಕ್ಷತ್ರಿಯ ಶೂದ್ರರಿಗ ಮೊಗಲ ಪಠಾಣರಿಗ
ಶೇಕಸೈಉದರಿಗ ಮತ್ತ ಅದ ಹಿರಿಯರಿಗ ಮೊದಲ ನಮಸ್ಕಾರ ॥ ಜೀ ॥

ಅನಾಥ ಜನರನ ನೋಡುವವರಿಗ ಬೇಡಿದ್ದು ನೀಡಾವಿರಿಗಿ
ದಾನ ಮಾಡಾವರಿಗಿ ನನ್ನ ನಮಸ್ಕಾರ ॥ ಜೀಜೀ ॥

ಚ್ಯಾಲ ರಾಜಾದಿರಾಜ ಪ್ರಧಾನರಿಗ ನಾಡಗೌಡರಿಗ ದೇಶಾಯಿ
ದೇಶ ಪಾಂಡಾರಿಗ ನಮಸ್ಕಾರ ।
ಅಧಿಕಾರಸ್ಥ ಸರಕಾರದವರಿಗಿ ನಮಸ್ಕಾರ ।
ಸಾಹೇಬ ಸುಬೇದಾರಗ ನಮಸ್ಕಾರ ॥ ॥ ಜೀಜೀ ॥

ಸತ್ಯೆ ಅಸತ್ಯೆ ಮಾಡುಂವಂಗ ಸ್ವಾತ್ಯಕ ಮುನಸುಪದ
ಕಾಯ್ದೆ ವಕೀಲಗ ನಮಸ್ಕಾರ
ಮಾಮಲೇದಾರ ಪೌಜದಾರಗ ನಮಸ್ಕಾರ
ಹವಾಲ್ದಾರ ಜಮಾದಾರಗ ನಮಸ್ಕಾರ ॥ ಜೀಜೀ ॥

ಪೋಲಿಸ ಪಾಳೆಗಾರರಿಗ ಸಾಲಿ ಮಾಸ್ತರಗ
ಪಟೇಲ ಪಟವಾಡಿಗ ನೈಕೋಡಿ ನಾಡಿಕಾರಗ
ತರವಾಯಿ ತಳವಾರಗ ಗ್ರಾಮದ ಪಂಚರಿಗ
ಪಂಚಾಯಿತಿ ಮೆಂಬರಗ ಮುಂಚೆ ನಮಸ್ಕಾರ ॥ ಜೀಜೀ ॥
ಪಂಚಾಂಗಚ್ಯಾರಿಗ । ಸುಚಿರ ಸುವೆಚಾರಗ ।
ಸಹಾಸ ಹುಚ್ಚರಿಗ ಹೆಚ್ಚಿನ ನಮಸ್ಕಾರ ॥ ॥ ಜೀಜೀ ॥
ಕರ್ಮಣಿ ಕಟ್ಟಿದ್ದು ಹರಿಯಂವಗ । ಹುಟ್ಟಿದ್ದು ಹುರಿಯಂವಗ
ಸುಟ್ಟಿದ್ದು ಮಾರಾಂವಗ । ಬಿಟ್ಟಿದ್ದು ಕರಿಯಂವಗ
ಇದು ಮೆರೆಯಂವಗ । ಸಿಟ್ಟಿದ್ದು ಸಿರಿಯಂವಗ ಸಾಷ್ಟಾಂಗ
ನಮಸ್ಕಾರ ॥ ॥ ಜೀಜೀ ॥
ಕೇಳರಿ ಯೋಗಿ ತ್ಯಾಗಿಗ ಭೋಗಿ ಜನರೀಗ
ಭಾವಾ ಬೈರಾಗೀಗ ಬಾಗಿ ನಮಸ್ಕಾರ
ಗಂಧರವಗಾನಾ ಕಂಡಂತ ಓದಿಕೊಂಡಾತಗ
ಪುಂಡ ಪಾಂಡಿತ್ಯಗ ನನ್ನ ನಮಸ್ಕಾರ ॥ ॥ ಜೀಜೀ ॥
ಮಂದಿದ ಮಾಡಾಂವಗ ಕೊಂದು ನೋಡ ಅಂವಗಾ
ತಂದೊಂದು ತಿಳಿ ಅಂವಗ ಹನ್ನೊಂದು ನಮಸ್ಕಾರ
ಏಕನಿಷ್ಟ ನ್ಯಾಯದ್ಲೆ ನಡದಾಂವಗ
ಹಡದಿತ್ತ ನೋಡಿದಂವಗ ಮಡದಿನ ಕೂಡಿದಂವಗ
ಬಿಡದೆ ನಮಸ್ಕಾರ ।
ಹಾಡುವಾಗ ಗದ್ದಲ ಮಾಡವರಿಗ ಮಾತಾಡಿ ಕೆಡಸವರಿಗ
ಗಪ್ಪ ಕೂಡ ಸವರಿಗ ತಪ್ಪದೆ ನಮಸ್ಕಾರ ॥ ॥ ಜೀಜೀ ॥
ದುಡ್ಡು ತಿಂದು ಬಡ್ಡಿ ಬೆಳಸಂವಗ । ಒಂದಕ್ಯಾಡ್ಡ ಗಳಸಂವಗ
ದಡ್ಡರನ ಮುಣಗ ಸಂವಗ ನಮಸ್ಕಾರ ಕೊಳ್ಳಿ ಕಳ್ಳಗ ಕೋಡಿ ನಮಸ್ಕಾರ
ಸುಳ್ಳಗ ಸೋಳಾ ನಮಸ್ಕಾರ ಒಳ್ಳೆಯಂವದ ಒಂದೇ ನಮಸ್ಕಾರ ॥
॥ ಜೀಜೀ ॥
ಚಿತ್ತ ಇಟ್ಟ ಕೇಳವರಿಗ । ಕೇಳರಿ ಮ್ಯಾಗ ಮ್ಯಾಗ ಅಣ್ಣ ತಮ್ಮಗ ।
ಹಮ್ಮಗ ಗುಮ್ಮಗ ಒಮ್ಮೆ ನಮಸ್ಕಾರ । ಮೂರ್ಖಗ ಮೂರ ನಮಸ್ಕಾರ
ಒಳ್ಳೆ ಅಂವಗ ಒಂದೇ ನಮಸ್ಕಾರ ॥ ॥ ಜೀಜೀ ॥
ಸ್ವಾದ ಇಲ್ದ ಪದಾ ಹಾಡಾಂವಗ ನಾದ ಇಲ್ದ ಒದರಂವಗ
ಹದಗೇಡಿ ಹಗಮಾಲಿಗ ಹಜಾರ ನಮಸ್ಕಾರ
ಕಂಗೊಳಗಿಸು ಇಂಗಳೇಶ್ವರ ಈಶ್ಯಾಗ ಮಂಗಲ ಮೂರ್ತಿಗ
ಕಾಶಿಮಲಾಲಸಾಗ ಯಶಸ್ವಿ ಜನದಾಗ ಕೊಟ್ಟಂತ ಮಹನಿಯರಿಗ
ಮದಲ ನಮಸ್ಕಾರ ॥ ॥ ಜೀಜೀ ॥

ನಿನಗ ಆಗಬೇಕು ಡಂಬರ ಕತ್ತಿ

ಸಖಿ

ಪ್ರಾರ್ಥಿಸುವೆ ಪರಮೇಶ್ವರ ಪ್ರಥಮಾ ।
ಪಾವನಗೊಳಿಸು ಪ್ರಸನ್ನಾಗಿ ನೇಮಾ ।
ಓಂ ಸೊಂ ಸ್ಮರಿಸುವೆನೋ ಮರಿಯಾದೆ ನಿನ್ನ ನಾಮಾ ॥ ॥ ಜೀಜೀ ॥

ವರಣಿಸಲಾರೆ ಅಗಣಿತ ನಿನ್ನ ಮಹಿಮಾ ।
ಕರುಣಾ ಕರಣಿ ಸುಖಾಯಾಮಾ
ಶರಣು ಶರಣು ಶ್ರೀಗುರುವೇಶ್ಯ ತೋರುಚರಣಾ ಕುಸುಮಾ ॥

ಭವಹರನೆ ಪಾರು ಮಾಡೊ ಗುರುಗೂಮಾ ।
ವರವ ನೀಡ ಸುಡು ಅಹಂಕಾರ ಹೋಮಾ
ಆಗಮ ನಿಗಮಗಳಿಗೆ ಮಿಗಿಲಾದವನೆ ನಿಸ್ಸೀಮ ಸೊಯಮಾ ॥

ಇಂಗಳೇಶ್ವರ ಕಂಗೊಳಿಸುವ ಗ್ರಾಮಾ ।
ಸಿಕಂದರ ಬಾದಶ್ಯಾ ಭಕ್ತ ಜನಾ ಪ್ರೇಮಾ ।
ಭಕ್ತ ಲಾಲಸಾಬ ಬಂದು ನಿನ್ನ ಭಜಿಸಿದಾ ಜಯಾ ಕೊಡೊ ಜಗ ॥ ಜೀಜೀ ॥

ಪದಾ

ತಾಯಿಕಿನ್ನಽ ತಂದಿ ಕಮ್ಮ ಇದ್ದಾನಾ ?
ನಾಯ್ಯಾಕ ಆದೇನ ಕಮಜ್ಯಾತಿ ।
ಒಂಬತ್ತು ತಿಂಗಳ ನನಗ ಹೊತ್ತ್ಯೇನಂತಿದಿ
ನಿನಗ ಅನಬೇಕು ಡಂಬರ ಕತ್ತಿ ॥ ॥ ಜೀಜೀ ॥

ನಮ್ಮ ತಂದಿ ನಿನಗ ಕೊಂಡು ತಂದಾನಾ ।
ತಿಂದುಂಡು ಸುಮ್ಮನ ಹ್ಯಾಂಗ ಇರತಿ ।
ಸಲಿಗಿ ಕೊಟ್ಟ ನಾಯಿ ತೆಲಿಗೇರಿತಂತ
ಮನ್ಯಾಗ ಕುತ್ತು ನೀ ಗುರುಗುಡತಿ ॥ ॥ ಜೀಜೀ ॥

ಮೈ ನಾರದ ಮ್ಯಾಗ ನೀನು ಮನ್ಮಥಕ ಆಗಿ ।
ನಮ್ಮ ತಂದೀಗಿ ಮಾಡಿದಿ ಪ್ರೀತಿ
ನಮ್ಮ ತಂದಿ ನಿನ್ನ ಬಲ್ಲಿ ಬಂದರ ಭ್ರಾಂತಿ ತೀರಶ್ಯಾನ ಬಿಂದುಭೀ ಜಭಿತ್ತಿ ॥
॥ ಜೀಜೀ ॥

ಇಳುವು ನಮ್ಮ ತಂದಿ ನಿನ್ನ ಬಲ್ಲಿ ಇಟ್ಟಾ ತನ್ನ ರತನಾ ।
ನಿನಗ ಮಾಡಂತ ಹೇಳಿದಾ ಜತನಾ ॥ ॥ ಜೀಜೀ ॥

ಆ ರತ್ನದೊಳಗ ಗುಪ್ತ ನಾನು ಇದ್ದೇನಾ ।
ಪರಿಪರಿ ಬೆಳಿಯುತ ಅನುದಿನಾ ॥ ॥ ಜೀಜೀ ॥

ನಿನಗ ಭಂಕಿ ಕಾಡತಿದ್ದು ತಿನ್ನುದು ಬಿಟ್ಟಿಯೆನೇನಾ ।
ಬೂದಿ ಮಣ್ಣಾ ಸೈತ ತಿಂದಿಲ್ಲೇನಾ ॥ ॥ ಜೀಜೀ ॥

ಏರು ಹುಳಿ ಎಣ್ಣಿ ಹಣ್ಣಾ ಬದನಿಕಾಯಿ ಬಿಟ್ಟಿನಂತ ಹೇಳತಿದಿ
ಸುಳ್ಳ ಯ್ಯಾಕ ಹೇಳತಿದಿ ಕತ್ತಿs ಒಂಬತು ॥ ॥ ಜೀಜೀ ॥ ಚೌಕ ೧ ॥

ಕೂಡಪಲ್ಲ ನವಮಾಸ ತುಂಬಿ ಬ್ಯಾನಿ ತಿನ್ನುವಾಗ ।
ಬಾಳ ಸಂಕಟಾಗಿ ನೆಳ್ಳಿದಿ
ನಿನ್ನ ತಿಂಡಿಗಾಗಿ ಮಾಡಕೊಂಡಿದ್ದು ಇದು ಉಪಕಾರಾ
ಯ್ಯಾರಿಗಿ ಹೇಳತಿದಿ ॥ ॥ ಜೀಜೀ ॥

ನಾನು ಹುಟ್ಟಿದ ಮ್ಯಾಗ ಹೊರಸಲಕ ಏರಿ ನೀನು
ಖೊಬ್ಬರಿ ಬೆಲ್ಲಾ ತಿಂದೀದಿ ।
ಇದು ಅಲ್ಲದೆ ಸಕ್ರಿ ಶ್ಯಾವಿಗಿ ತುಪ್ಪಾ ಸಾಕಾಗುತನಾ ತಿಂದು ಬಿದ್ದೀರಿ ॥
॥ ಜೀಜೀ ॥

ಜಾಣ ತಾನಾಯೆಲ್ಲಾ ಚೊಕ್ಕ ಮುಗಿದಯುವುದರೊಳಗ
ತಿಂದು ತಿಂದು ಮನಿ ಹಾಳ ಮಾಡಿದಿ
ಜೀವಕ ಬೇಡಿದ್ದು ನಮ್ಮ ತಂದಿ ತಿನಶ್ಯಾನ
ಅವನ ಉಪಕಾರ ನೀನು ಮರತಿದಿ ॥ ॥ ಜೀಜೀ ॥

ಇಳುವು ನಮ್ಮ ತಂದಿದೆಂದ ನನಗ ಹಡದು ತಿಂದಿ ಇಷ್ಟೆಲ್ಲಾ ।
ತಂದಿಯಿರಲಿಕ ನೀ ಏನ ತಿಂತಿದಿ ಹೇಳು ಅಟಗೋಲಾ ।
ನನಗ ಮಲಿಡಿಸಿನೆಂತ ಹೇಳತೀದಿ ಹಗಲೆಲ್ಲಾ ।
ತಂದಿ ಬಿಂದುದಿಂದ ನಿನ್ನ ಮಲಿಯಾಗ ಬಿದ್ದಾವ ಹಾಲಾ ॥ ಜೀಜೀ ॥

ನಿಂದು ಏನು ಅದರಾಗ ಏನೂ ಪಾಲಿಲ್ಲಾ ॥ ॥ ಜೀಜೀ ॥

ಏರು ಮಲಿ ಬಿಗದು ನನಗ ಹಾಲ ಕುಡುಸೂತಾ
ಮನಿ ಕೆಲಸಾ ಮಾಡುದು ಮರತಿ
ಒಂಬತ ತಿಂಗಳ ತಂದಿಲಿಂಗಸರು ಶ್ರೀಂಗಾರ ಕಂಡಿದಿ
ಕೈತುಂಬ ಇಟಗೊಂಡಿದಿ ಕಾಜಿನಬಳಿ ।
ಮುತ್ತೈದಿತನಕ ಮೂಗುತಿ ಇಟ್ಟಿದಿ ಚಂದ ಕಾಣೋದ ಮೂಗಿನ ಸೊಳ್ಳಿ ॥
॥ ಜೀಜೀ ॥

ಗಂಡನಿಂದ ಕಂಡೀದಿ ಮುತ್ತೈತಾನಾ ।
ಕಟಗೊಂಡಿದಿ ಅವನ ಗುಳದಾಳಿ
ಗಂಡ ಇಲ್ಲದೇ ರಂಡ್ಯಾಗಿ ಇದ್ದರ ನಿನಗ ಅಂತಾರ ಗಯ್ಯಾಳಿ ॥ ಜೀಜೀ ॥

ತಾಯಿಕಿನ್ನ ತಂದಿ ಹೆಚ್ಚ ಇದ್ದಾನಂತ ।
ಲೋಕದೊಳಗ ಹಿಡದಿ ಕಾಳಿ ।
ತಂದಿ ಕಮ್ಮ ಅಂತ ಕದನ ಮಾಡತಿದಿ
ಚಲೋದಿಲ್ಲೇಳ ತಾಯಿ ನಿನ್ನ ಚ್ಯಾಳಿ ॥ ॥ ಜೀಜೀ ॥
ತಂದಿ ಸೇವೆ ಮಾಡಿದರ ಮುಂದ ಮುಕ್ತಿ ಸಾಧನಾ ।
ಏನೇನೂ ಇಲ್ಲಾ ಬಂಧನಾ ॥ ॥ ಜೀಜೀ ॥
ಹೆಣ್ಣಿನ ಸೇವೆ ಮಾಡಿ ಯಾಂವಾಮುಕ್ತಿ ಗೊಂದಾನಾ ।
ಹೇಳ ತಾಯಿ ಮಾಡುವೆ ವಂದನಾ ॥ ॥ ಜೀಜೀ ॥
ಇಂಗಳೇಶ್ವರ ಈಶಾನ ಸೇವೆ ಮಾಡುವೆ ದರದಿನಾ ।
ನುಡಿಯು ನೌಬತ್ತ ಶಬ್ದಗರ ಜನಾ ॥ ॥ ಜೀಜೀ ॥
ಏರು ತಂದಿಲಿಂದ ಬಂದಾನ ಹರಿಯುವದು
ನಿಂದಾ ಮಾಡತಿದಿ ಮುಂದ ಮತಿ ।
ಕೂಡಪಲ್ಲ ಒಂಬತ್ತ ತಿಂಗಳ ಹೊತ್ತೇನಂತಿದಿ
ನಿನಗ ಅನಬೇಕ ಡಂಬರಕತ್ತಿ ॥ ॥ ಜೀಜೀ ॥ ಚೌಕ ೨ ॥

ಖ್ಯಾಲಿ

ಮೂವತ್ತಾರು ಸಾವಿರ ಹಳ್ಳಿ। ಒಂದ ಮುಳ್ಳಿನ ತುದಿಯ ಮೇಲೆ
ಒಂದೊಂದು ಹಳ್ಯಾಗ ಒಂಬತ್ತು ಲಕ್ಷ ಜನಾ ಕಂಡೆ ॥ ॥ ಜೀಜೀ ॥

ಸುತ್ತ ನೀ ಕಂಡೆ
ನೀರಿನ ನಡುವ ಬೆಂಕಿ ಕಂಡೆ ॥ ॥ ಜೀಜೀ ॥

ಮೂರ ಆರಲೆ ಹದಿನೆಂಟು ।
ಗಂಟಿಗಿ ಬಡ್ಡಿ ತೊಂಬತಾರ
ಮೂರ ಮೋತಿನ ಹುಳಾ ಒಂದು ಮುತ್ತ್ಯಾನ ಮುಕಳಿವೊಳಗ ಕಂಡೆ ॥
॥ ಜೀಜೀ ॥

ಬೀಳುವ ಮರಗಳು ಬಾಳದು ಸಾಯುವ ಸಾಧುರು ।
ಏಳೂರ ಶೀಮಿದಾಟಿ ಖಳೆಯೊಳ ದೀವಿಗಿ ಕಂಡೆ ॥ ॥ ಜೀಜೀ ॥

ಮಾರುತಿ ಗುಡಿ ಹೊರಗ ಊರಿಗಿ ಊರೆಲ್ಲಾ ಸುಟ್ಟಾರ
ಅವರ್ಯಾರು ಇವರ್ಯಾರು ।
ಯಾರಿಗಿ ಯಾರ್ಯಾರು ಕಂಡೆ ॥ ॥ ಜೀಜೀ ॥

ಪೋಟೊ ಮಾಡಿದ ಗುರುವಾ ।
ಶ್ರೇಷ್ಠ ಮಲ್ಲಿನಾಥಾದಿರಾ
ಶ್ರೇಷ್ಠಾಗಿ ಇಂಗಳೇಶ್ವರ ಘಟ್ಟಿರಾಜಶೇನ ಕಂಡೆ ॥ ॥ ಜೀಜೀ ॥

ಗಡೆಗ್ಯಾನ ಅಡಿಗಿ ನೀ ಉಂಡಿ ಹೈವಾನಾ

ಖ್ಯಾಲಿ (ನಾಗೇಶಿ)

ಹುಡುಗಾ ಗಡಿಗಿ ತೊಳದಿನಿ ।
ಹುಡಗಾ ಗಡಿಗಿ ತೊಳದಿನಿ ।
ಗಡಗ್ಯಾನ ಅಡಿಗಿ ನೀ ಉಂಡಿ ಹೈವಾನಾ ॥ ॥ ಜೀಜೀ ॥ ಪಲ್ಲ ॥
ಪಂಚ ತತ್ವದ ಗಡಿಗಿ ತೊಳದಿನಿ ।
ಪಂಚ ಭೂತಗಳು ನಾಶ ಮಾಡಿನಿ ।
ಸಂಚಿತ ಭಾವ ಕಿಂಚಿತ ಮುಸರಿ ।
ಅಖಂಡೇಶ್ವರಗ ನಾ ನೀಡಿನಿ ।
ಗಡಗ್ಯಾನ ಅಡಿಗಿ ನೀ ಉಂಡಿ ಹೈವಾನಾ ॥ ॥ ಜೀಜೀ ॥ ೧ ॥
ಭಾವ ಅನುವ ಬೆಲ್ಲ ತಂದೀನಿ
ಭಕ್ತಿಗಿಭೂತಿ ಮಸರಾಗಿನಿ ।
ಸದ್ಧಭಾವಯೆಂಬುವ ಜೋಳಾ ಬೀಸಿನಿ ।
ಸಗುಣ ಸಾಣಿಗಿಲೆ ಹಿಟ್ಟ ಸೋಸಿ ನೀ
ಗಡಗ್ಯಾನ ಅಡಿಗಿ ನೀ ಉಂಡಿ ಹೈವಾನಾ ॥ ॥ ಜೀಜೀ ೨ ॥
ತ್ರಿ ತನುಯೆಂಬುವ ವಲಿ ಗುಂಡ ಹೂಡೀನಿ ।
ಕಷ್ಟ ಅನ್ನುವ ಕಟಗಿ ಸುಟ್ಟ ತಗದಿನಿ ।
ಪರಮ ಅನುಭಾವದ ಮೀಸಲ ಅಡಗಿ ಕಿಯಾಶಕ್ತಿಗಿ ನಾ ಕೊಟ್ಟೀನಿ ।
ಗಡಿಗ್ಯಾನ ಅಡಿಗಿ ನೀ ಉಂಡೆ ಹೈವಾನಾ ॥ ॥ ಜೀಜೀ ೩ ॥
ಬ್ರಹ್ಮಾಂಡ ಅನುವ ತಾಟಮುಚ್ಚಿನಿ ।
ಅವಿಚಾರ ನೊಣ್ಣಕ ಹೊಡದ ಓಡಿಸೀನಿ
ಮಾಡಿದ ಅಡಿಗಿ ನೆಲಪಾಲ ಮಾಡಿಲ್ಲಾ ।
ಗುದಸ್ಥಾನಕ ನಿನಗ ತೂತಿಡಸೀನಿ ।
ಗಡಗ್ಯಾನ ಅಡಿಗಿ ನೀ ಉಂಡಿ ಹೈವಾನಾ ॥ ॥ ಜೀಜೀ ೪ ॥
ಅಡಗಿ ಮಾಡಿ ಉಪಯೋಗ ಮಾಡಿನಿ ।
ಜೇಲದಾಗ ಹಾಕಿ ಸಜಾದಾಗ ಇಟ್ಟೀನಿ ।
ಇಂಗಳೇಶ್ವರ ಸಿಕಂದ್ರ ಬಾದಶ್ಯಾನ ನಿಶಿಯಾನಿ
ನಬಿಲಾಲ ಹೋಗಿ ಮೂಟ್ಯಾರ ಉನ್ಮನಿ ।
ಗಡಗ್ಯಾನ ಅಡಿಗಿ ನೀ ಉಂಡೆ ಹೈವಾನೇ ॥ ॥ ಜೀಜೀ ೫ ॥
ಹುಡಗಾ ಗಡಗಿ ತೊಳದೀನಿ ।
ಹುಡಗಾ ಗಡಿಗಿ ತೊಳದೀನಿ ।
ಗಡಗ್ಯಾನ ಅಡಿಗಿ ನೀ ಉಂಡಿ ಹೈವಾನಾ ॥ ॥ ಜೀಜೀ ೬ ॥